ಡಾ. ಎಂ.ಎಂ. ಕಲಬುರ್ಗಿ
ಸಮಗ್ರ ಸಾಹಿತ್ಯ

ಸಂಪುಟ
೨೨

ಕಾವ್ಯ ಸಾಹಿತ್ಯ : ಭಾಗ-೪



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ಡಾ. ಫ.ಗು. ಹಳಕಟ್ಟಿ ಅವರ ಸಮಗ್ರ ಸಾಹಿತ್ಯ

ಸಂಪುಟ–೨೨ : [illegible]

- [illegible]
- [illegible]

ಪ್ರಧಾನ ಸಂಪಾದಕ
ಡಾ. ವೀರಣ್ಣ ರಾಜೂರ
ಧಾರವಾಡ

ಸಂಪಾದಕರು
ಡಾ. ಎಫ್. ಟಿ. ಹಳ್ಳಿಕೇರಿ
ಹಂಪಿ

[illegible] ಡಾ.ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ
ವಿಜಾಪುರ
[illegible]

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ–೨೨ : ಕಾವ್ಯ ಸಾಹಿತ್ಯ : ಭಾಗ–೪

❖

- ಶಿವಯೋಗ ಪ್ರದೀಪಿಕಾ
- ಷಟ್ಸ್ಥಲ ಶಿವಾಯಣ

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಎಫ್. ಟಿ. ಹಳ್ಳಿಕೇರಿ

ಹಂಪಿ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

COMPLETE WORK OF DR. M.M.KALBURGI
VOLUME - 22 : KAVYA SAHITY : BHAGA : 4
Edited by : Dr. F.T. Hallikeri, Hampi

Published by : Dr. P.G. Halakatti Research Centre
B.L.D.E. Association, Vijayapur, Karnatak

First Edition : 2020
Pages : xxxvi + 532=568

Copies: 1000
Price Rs: 300/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Saraswatidevi Bhagawati, Dharwad.
Printer : **The Print Point,** No. 9/8 6th Cross, 4th Main, Rajajinagar, Industrial Town, Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರಕಾರ

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೨೨–ಕಾವ್ಯ ಸಾಹಿತ್ಯ : ಭಾಗ–೪

ಸಂಪಾದಕರು : ಡಾ. ಎಫ್.ಟಿ.ಹಳ್ಳಿಕೇರಿ, ಹಂಪಿ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೨೦
ಪುಟಗಳು: xxxvi + ೫೩೨=೫೬೮

ಪ್ರತಿಗಳು: ಒಂದು ಸಾವಿರ
ಬೆಲೆ ರೂ: ೩೦೦/–

❖❖

ಮುಖಪುಟ ವಿನ್ಯಾಸ: ಕೆ.ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ, ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ಫೋನೆ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟಿಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟಿಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ–ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ–ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು–ನುಡಿ–ಸಂಸ್ಕೃತಿ–ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ–ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ–ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ–ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ

ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ

ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ–೧, ೧೮. ಶಾಸನ ವ್ಯಾಸಂಗ–೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ–ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ–೧, ೩೧. ಮಾರ್ಗ–೨, ೩೨. ಮಾರ್ಗ–೩, ೩೩. ಮಾರ್ಗ–೪, ೩೪. ಮಾರ್ಗ–೫, ೩೫. ಮಾರ್ಗ–೬, ೩೬. ಮಾರ್ಗ–೭, ೩೭. ಮಾರ್ಗ–೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ–೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ–೨, ೫೦. ವಚನ ಸಂಕಲನ ಸಂಪುಟ–೪, ೫೧. ವಚನ ಸಂಕಲನ ಸಂಪುಟ–೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ–೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೊಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಚೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ

ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ-ಕರ್ನಾಟಕ ಸರ್ಕಾರದ ಧನ ಸಹಾಯದಿಂದ-ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪-೭-೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ-ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩-೯-೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ-ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ–ವರದಿಗಳು, ಆಡಿಯೋ–ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ
೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ
೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ

೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ **–ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ **–ಸಂ. ಡಾ. ವೀರಣ್ಣ ರಾಜೂರ**

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ **–ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ **–ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ

೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ **–ಸಂ. ಶಶಿಧರ ತೋಡ್ಕರ**

೧. ವಚನ ಸಂಕಲನ–೪

೨. ವಚನ ಸಂಕಲನ–೬

೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ **–ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ
೨. ಶಬ್ದಮಣಿದರ್ಪಣ ಸಂಗ್ರಹ
೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ
೪. ಆದಯ್ಯನ ಲಘುಕೃತಿಗಳು
೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ
೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ
೨. ಬಾಲರಾಮನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ
೨. ಸಿರುಮನ ಚರಿತೆ
೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ –ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ –ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬರೆಹ–ಬದುಕು

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ –ಸಂ. ಡಾ. ವಿ.ಎಸ್. ಮಾಳಿ

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ –ಸಂ. ಡಾ. ಕೆ. ರವೀಂದ್ರನಾಥ

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ –ಸಂ. ಡಾ. ಕೆ. ರವೀಂದ್ರನಾಥ

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ –ಸಂ. ಡಾ. ಕೆ. ರವೀಂದ್ರನಾಥ
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ –ಸಂ. ಡಾ. ಕೆ. ರವೀಂದ್ರನಾಥ
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ –ಸಂ. ಡಾ. ಕೆ. ರವೀಂದ್ರನಾಥ
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಚಿತ್ರ –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಪತ್ರ–ವರದಿಗಳು –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಆಡಿಯೋ–ವಿಡಿಯೋ –ಡಾ. ವಿ.ಡಿ. ಐಹೊಳ್ಳಿ

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ– ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ

ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು–ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ–ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು–ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು–ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ–ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ–ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ. ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು

ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ–ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು–ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ–ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ–ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

‘ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ’ ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ ‘ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ’ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ

ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ-ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಎಫ್.ಟಿ.ಹಳ್ಳಿಕೇರಿ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಎಫ್. ಟಿ. ಹಳ್ಳಿಕೇರಿ

ಕನ್ನಡದ ಹತ್ತುಹಲವು ಅಧ್ಯಯನ ಶಿಸ್ತುಗಳಲ್ಲಿ "ಗ್ರಂಥಸಂಪಾದನೆ"ಯೂ ಒಂದು. ಆಧುನಿಕವಾಗಿ ಹತ್ತೊಂಬತ್ತನೆಯ ಶತಮಾನದ ನಡುಗಾಲದಲ್ಲಿ ಜನ್ಮ ತಳೆದ ಇದು ಇಂದು ಶಾಸ್ತ್ರಶುದ್ಧವಾಗಿ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡು ಬೆಳೆದು ನಿಂತಿದೆ. ಮಿಷನರಿಗಳು ಬ್ರಿಟಿಷ ಅಧಿಕಾರಿಗಳು, ದೇಶಿ ಪಂಡಿತರು, ವಿದ್ವಾಂಸರು, ಸಂಶೋಧಕರ ಗ್ರಂಥಸಂಪಾದನೆಯ ಮೇಲಿನ ಆಸಕ್ತಿ, ವಿಸ್ತಾರವಾದ ಓದು ಕಾರಣವಾಗಿ ಭಾರತೀಯ ನೆಲೆಯಲ್ಲಿ ಕನ್ನಡ ಗ್ರಂಥಸಂಪಾದನೆಗೆ ವಿಶೇಷತೆ ಪ್ರಾಪ್ತವಾಗಿದೆ. ಹರ್ಮನ್ ಮೋಗ್ಲಿಂಗ್, ಬಿ.ಎಲ್.ರೈಸ್, ಎಫ್. ಕಿಟೆಲ್, ಎಸ್.ಜಿ. ನರಸಿಂಹಾಚಾರ್, ಫ.ಗು.ಹಳಕಟ್ಟಿ, ಡಿ.ಎಲ್. ನರಸಿಂಹಾಚಾರ್, ಎಂ.ಎಂ.ಕಲಬುರ್ಗಿ, ಬಿ.ಎಸ್. ಸಣ್ಣಯ್ಯ, ವೀರಣ್ಣ ರಾಜೂರ, ವೈ.ಸಿ.ಭಾನುಮತಿ ಮೊದಲಾದ ವಿದ್ವಾಂಸರು ಕನ್ನಡ ಗ್ರಂಥಸಂಪಾದನೆಯಲ್ಲಿ ಕೃಷಿ ಮಾಡಿದ್ದಾರೆ. ಆ ಮೂಲಕ ಕನ್ನಡ ಗ್ರಂಥಸಂಪಾದನೆ ಕ್ಷೇತ್ರದ ಕ್ಷಿತಿಜದ ವೈವಿಧ್ಯತೆಗೆ–ವಿಸ್ತಾರಕ್ಕೆ ಕಾರಣರಾಗಿದ್ದಾರೆ.

ಎಂ.ಎಂ.ಕಲಬುರ್ಗಿ, ಕನ್ನಡ ಗ್ರಂಥಸಂಪಾದನಶಾಸ್ತ್ರದಲ್ಲಿ ಬಹು ದೊಡ್ಡ ಹೆಸರು. ಕನ್ನಡ ಭಾಷೆ–ಸಾಹಿತ್ಯ–ಸಮಾಜ–ಸಂಸ್ಕೃತಿ–ಇತಿಹಾಸ ಮೊದಲಾದ ಕ್ಷೇತ್ರಗಳಲ್ಲಿ ಅಧ್ಯಯನ ಕೈಕೊಂಡು ಅನೇಕ ಹೊಸ ಹೊಸ ಸಂಗತಿಗಳನ್ನು ಶೋಧಿಸಿದವರು. ಆ ಮೂಲಕ ಕನ್ನಡ–ಕನ್ನಡಿಗ–ಕರ್ನಾಟಕತ್ವದ ಮಹತ್ವವನ್ನು ಜಗತ್ತಿಗೆ ತೋರಿಸಿಕೊಟ್ಟ ಮಹಾನ್ ಸಂಶೋಧಕ. ಕಳೆದ ಐವತ್ತು ವರ್ಷಗಳಲ್ಲಿ ಅವರು ಕೈಕೊಂಡ ಸಂಶೋಧನೆಯ ವ್ಯಾಪ್ತಿ ವಿಶಿಷ್ಟವಾದುದು. ಗ್ರಂಥಸಂಪಾದನೆ, ಕಲಬುರ್ಗಿಯವರಿಗೆ ಪ್ರಥಮ ಆದ್ಯತೆ. ಗ್ರಂಥಸಂಪಾದನ ವಿಧಾನಗಳನ್ವಯ ಪ್ರಾಚೀನ ಕಾವ್ಯ–ಪುರಾಣಗಳ ಪರಿಷ್ಕರಣೆ, ವಿಶೇಷವಾಗಿ ಸ್ಥಳೀಯ ಚರಿತ್ರೆಯನ್ನು ನಿರೂಪಿಸುವಂಥ ಕೃತಿ(ಕುಮಾರರಾಮನ ಸಾಂಗತ್ಯಗಳು, ಸಿರುಮನ ಚರಿತೆಗಳು)ಗಳನ್ನು ಶೋಧಿಸಿ ಪರಿಷ್ಕರಿಸಿರುವುದು, ಕನ್ನಡ ಗ್ರಂಥಸಂಪಾದನೆಯನ್ನು ಶಾಸ್ತ್ರೀಯ ನೆಲೆ(ಕನ್ನಡ ಗ್ರಂಥಸಂಪಾದನಶಾಸ್ತ್ರ)ಯಲ್ಲಿ ರಚನೆ ಮಾಡಿರುವುದು ಕಲಬುರ್ಗಿಯವರ ವಿಶೇಷತೆಯಾಗಿದೆ.

ಕಲಬುರ್ಗಿಯವರ ಒಟ್ಟು ಕೃತಿಗಳ ಸಂಖ್ಯೆ ನೂರನ್ನು ದಾಟಿದೆ. ಈ ನೂರರಲ್ಲಿ ನಾಲ್ವತ್ತು ಪ್ರಾಚೀನ ಕಾವ್ಯ–ಪುರಾಣಗಳು ಗ್ರಂಥಸಂಪಾದನೆಗೆ ಸಂಬಂಧಿಸಿವೆ. ಈ ಸಂಖ್ಯೆಯನ್ನು ಗಮನಿಸಿದರೆ

ಕಲಬುರ್ಗಿಯವರಿಗೆ ಗ್ರಂಥಸಂಪಾದನಶಾಸ್ತ್ರದತ್ತ ಹೆಚ್ಚು ಒಲವಿತ್ತು ಎಂಬುದು ಮೇಲ್ನೋಟಕ್ಕೆ ವೇದ್ಯವಾಗುತ್ತದೆ. ಇವು ಚಂಪೂ-ವಚನ-ದೇಶಿ-ಚಾರಿತ್ರಿಕ-ಕುರುಬ ಸಮುದಾಯ-ಸ್ಥಳೀಯ ಇತಿಹಾಸವನ್ನು ನಿರೂಪಿಸುವ ಕೃತಿಗಳಾಗಿವೆ.

ಈ ಎಲ್ಲ ಕೃತಿಗಳು ಒಂದೆಡೆ ಲಭ್ಯವಾಗಬೇಕೆನ್ನುವ ಉದ್ದೇಶದಿಂದ ವಿಜಯಪುರದ ಬಿ.ಎಲ್.ಡಿ.ಇ. ಸಂಸ್ಥೆಯ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನದಲ್ಲಿ ಡಾ.ವೀರಣ್ಣ ರಾಜೂರ ಅವರ ಪ್ರಧಾನ ಸಂಪಾದಕತ್ವದಲ್ಲಿ "ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ"ಯನ್ನು ಅನುಷ್ಠಾನಗೊಳಿಸಿದೆ. ಈ ಯೋಜನೆಯನ್ವಯ ಸಂಪುಟ-೧೦, ಕಾವ್ಯ ಸಾಹಿತ್ಯ : ಭಾಗ-೨ನ್ನು ಸಂಪಾದಿಸಿ ಸಿದ್ಧಪಡಿಸಿಕೊಡುವ ಜವಾಬ್ದಾರಿ ನನ್ನದಾಗಿದೆ. ಈ ಸಂಪುಟವು ಚನ್ನಸದಾಶಿವಯೋಗಿ ವಿರಚಿತ ಶಿವಯೋಗ ಪ್ರದೀಪಿಕೆ ಹಾಗೂ ಪುರಾಣದ ಸಿದ್ಧಲಿಂಗ ಕವಿಯ ಷಟ್ಸ್ಥಲ ಶಿವಾಯಣ -ಹೀಗೆ ಎರಡು ಕೃತಿಗಳನ್ನು ಒಳಗೊಂಡಿದೆ. ಉಪೇಕ್ಷಿತ ಮತ್ತು ಅಪ್ರಕಟಿತ ಕಾವ್ಯಪುರಾಣಗಳ ಶೋಧ, ಪರಿಷ್ಕರಣೆ ಮತ್ತು ಪ್ರಕಟಣೆಯಲ್ಲಿ ಕಲಬುರ್ಗಿಯವರಿಗೆ ತುಂಬ ಆಸಕ್ತಿ ಮತ್ತು ಕುತೂಹಲ. ಅದರಲ್ಲಿಯೂ ಸ್ಥಳೀಯ ಇತಿಹಾಸ, ಸಮುದಾಯ ಸಂಸ್ಕೃತಿಯನ್ನು ವಿವರಿಸುವಂಥ ಕೃತಿಗಳೆಂದರೆ ಕಲಬುರ್ಗಿಯವರಿಗೆ ಎಲ್ಲಿಲ್ಲದ ಉತ್ಸಾಹ. ಹೀಗಾಗಿ ಕುಮಾರರಾಮ, ಸಿರುಮನಾಯಕ, ಇಮ್ಮಡಿ ಚಿಕ್ಕಭೂಪಾಲ, ನಿಂಬಸಾಮಂತ, ಕೊಡೇಕಲ್ ಬಸವಣ್ಣ, ಸಿದ್ಧಮಂಕ ಚರಿತೆ, ತಗರ ಪವಾಡ, ಗುಂಡಬಸವಣ್ಣ, ಚೀಲಾಳಸ್ವಾಮಿ ಮೊದಲಾದ ಚಾರಿತ್ರಿಕ ವ್ಯಕ್ತಿಗಳ ಕುರಿತು ರಚನೆಗೊಂಡಿರುವ ಕಾವ್ಯಗಳು ಕಾಲನ ಗರ್ಭದಲ್ಲಿ ಅಡಗಿಕುಳಿತಿದ್ದವು. ಅಂಥ ಕೃತಿಗಳತ್ತ ಪಂಡಿತರಾಗಲಿ, ವಿದ್ವಾಂಸರಾಗಲಿ ಯಾರೊಬ್ಬರೂ ಗಮನಹರಿಸಿರಲಿಲ್ಲ. ಆದರೆ ಕಲಬುರ್ಗಿಯವರಿಗೆ ಮಾತ್ರ ಇಂಥ ಮಹತ್ವದ ಕೃತಿಗಳನ್ನು ಶೋಧಿಸಿ ಪರಿಷ್ಕರಿಸಲು ಸಾಧ್ಯವಾಗಿದೆ ಎಂಬುದು ಇಲ್ಲಿ ಬಹುಮುಖ್ಯವಾಗುತ್ತದೆ. ಈಗ ಈ ಎರಡು ಕೃತಿಗಳ ಕುರಿತು ಕೆಲವು ಸಂಗತಿಗಳನ್ನು ತಿಳಿದುಕೊಳ್ಳೋಣ.

೧. ಚನ್ನಸದಾಶಿವಯೋಗಿಯ ಶಿವಯೋಗ ಪ್ರದೀಪಿಕಾ :

ಭಾರತೀಯ ದರ್ಶನಗಳಲ್ಲಿ "ಯೋಗ ದರ್ಶನ"ವೂ ಒಂದು. ಈ ಯೋಗ ದರ್ಶನದ ಬಗ್ಗೆ ಪ್ರಾಚೀನ ಕಾಲದಿಂದಲೂ ಋಷಿಮುನಿಗಳು, ಕವಿಗಳು, ಚಿಂತಕರು ಅಧ್ಯಯನ ಮಾಡಿ ಕಾವ್ಯಗಳನ್ನು ರಚನೆ ಮಾಡುತ್ತ ಬಂದಿದ್ದಾರೆ. ವೇದ ಉಪನಿಷತ್ತು, ಮಹಾಭಾರತ-ರಾಮಾಯಣ-ಭಗವದ್ಗೀತೆ, ಶಾಕ್ತತಂತ್ರ ಮೊದಲಾದವುಗಳಲ್ಲಿ ಯೋಗ ಪದದ ನಿಷ್ಪತ್ತಿ, ಅರ್ಥ, ವ್ಯಾಖ್ಯಾನ, ಪ್ರಕಾರಗಳು ಹಾಗೂ ಮಹತ್ವವನ್ನು ತಿಳಿಸಲಾಗಿದೆ. ಪತಂಜಲಿ ಮುನಿಯ "ಯೋಗಸೂತ್ರ" ಗ್ರಂಥವು ಯೋಗವನ್ನು ಕುರಿತು ಬಂದ ಗ್ರಂಥಗಳಲ್ಲಿ ಮೊದಲನೆಯದು. ನಂತರದಲ್ಲಿ ಸ್ವಾತ್ಮಾರಾಮರ ಹಠಯೋಗ ಪ್ರದೀಪಿಕೆ, ಚನ್ನಸದಾಶಿವಯೋಗಿಯ ಶಿವಯೋಗ ಪ್ರದೀಪಿಕೆ ಮುಂತಾದ ಕೃತಿಗಳು ಸಂಸ್ಕೃತದಲ್ಲಿ ರಚನೆಗೊಂಡಿದೆ. ಈ ಕೃತಿ ರಚನೆಗಳ ಪ್ರಭಾವ-ಪ್ರೇರಣೆಯಾಗಿರಬಹುದು ಅಥವಾ ಯೋಗ ದರ್ಶನದ ಆಳವಾದ ಅಧ್ಯಯನದ ಹಿನ್ನೆಲೆಯಲ್ಲಿ ಭಾರತೀಯ ಭಾಷೆಗಳಲ್ಲಿ ಕೃತಿಗಳು ರಚನೆಗೊಳ್ಳುತ್ತ ಬಂದಿವೆ;ಬರುತ್ತಲಿವೆ. ಇನ್ನು ಕೆಲವು ಕೃತಿಗಳಿಗೆ ಆಯಾ ಭಾಷೆಯಲ್ಲಿ ಟೀಕು-ವ್ಯಾಖ್ಯಾನ ಗ್ರಂಥಗಳು ರಚನೆಗೊಂಡಿವೆ. ಅಂಥ ಟೀಕುಗಳಲ್ಲಿ ಚನ್ನಸದಾಶಿವಯೋಗಿಯ ಶಿವಯೋಗ ಪ್ರದೀಪಿಕೆ ಗ್ರಂಥವು ಒಂದು.

ಶಿವಯೋಗ ಪ್ರದೀಪಿಕೆಯ ಕರ್ತೃ ಚನ್ನಸದಾಶಿವಯೋಗಿ. ಈತನ ಕಾಲ ಅಂದಾಜು ಹದಿನೈದನೆಯ ಶತಮಾನ. ಗುರು ಸದಾಶಿವಯೋಗಿ. ಈತ ಶಿವಯೋಗ ಎಂಬ ಕೃತಿಯನ್ನು ರಚಿಸಿರಬಹುದೆಂದು ಅಭಿಪ್ರಾಯಡಲಾಗುತ್ತಿದೆ. ಆ ಶಿವಯೋಗ ಕೃತಿಗೆ ಟೀಕೆ ಅಥವಾ ವ್ಯಾಖ್ಯಾನ ಬರೆದವನು ಚನ್ನಸದಾಶಿವಯೋಗಿ. ಈತನಿಗೆ ನೂಕನಾ(ಬಸವಾ)ರಾಧ್ಯ ಎಂಬ ಹೆಸರು ಇದೆ ಎಂಬುದು ತೆಲುಗಿನ ಕೊಲನಿ ಗಣಪತಿದೇವನ ಶಿವಯೋಗಸಾರಮು ಗ್ರಂಥದಿಂದ ವ್ಯಕ್ತವಾಗುತ್ತದೆ. ಈ ಗಣಪತಿದೇವ ಚನ್ನಸದಾಶಿವಯೋಗಿಯ ಶಿಷ್ಯನೆಂದೂ ಹೇಳಲಾಗುತ್ತಿದೆ.

ಹೆಸರೇ ಹೇಳುವಂತೆ ಶಿವಯೋಗ ಪ್ರದೀಪಿಕೆಯು ಶಿವಯೋಗದ ಬಗ್ಗೆ ವಿವರಿಸುತ್ತದೆ;ವಿವೇಚನೆ ಮಾಡುತ್ತದೆ. ಇಪ್ಪತ್ತೆಂಟು ಶಿವಾಗಮಗಳು ಹಾಗೂ ಸಿದ್ಧಸಿದ್ಧಾಂತಪದ್ಧತಿ ಎಂಬ ಕೃತಿಯ ಸಾರವನ್ನು ನಿರೂಪಿಸುವ ಇದು ಐದು ಪಟಲ(ಅಧ್ಯಾಯ)ಗಳಲ್ಲಿ ಕ್ರಮವಾಗಿ ೨೮೭ ಶ್ಲೋಕಗಳನ್ನು ಒಳಗೊಂಡಿದೆ. ಮಂತ್ರಯೋಗ ಲಯಯೋಗ ಹಠಯೋಗ ರಾಜಯೋಗಗಳ ಲಕ್ಷಣಗಳನ್ನು ತಿಳಿಸುತ್ತ, ಇವುಗಳಿಗೆ ಶಿಖರಪ್ರಾಯವಾದ "ಶಿವಯೋಗ" ಕುರಿತು ಸವಿವರವಾಗಿ ಚಚಿಸಲಾಗಿದೆ. ಹೀಗೆ ಶಿವಯೋಗವನ್ನೇ ಬಹುಮುಖ್ಯವಾಗಿ ಪ್ರತಿಪಾದಿಸುವ ಈ ಕೃತಿ ಯೋಗ ಪ್ರಭೇದಗಳು, ಯೋಗದ ಅಷ್ಟಾಂಗಗಳನ್ನು, ಬಂಧ-ಮುದ್ರೆಗಳನ್ನು ಹಾಗೂ ಇನ್ನಿತರೆ ಯೋಗ ವಿಚಾರಗಳನ್ನೂ ನಿರೂಪಿಸುವಲ್ಲಿ ಯಶಸ್ವಿಯಾಗಿದೆ.

ಈ ಕೃತಿಯನ್ನು ಎಂ.ಎಂ.ಕಲಬುರ್ಗಿಯವರು ಪರಿಷ್ಕರಿಸಿ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ೧೯೭೭ರಲ್ಲಿ ಪ್ರಕಟಿಸಿದ್ದಾರೆ. ಸಹಸಂಪಾದಕರಾಗಿದ್ದವರು ಪಂಡಿತ ನಾಗಭೂಷಣಶಾಸ್ತ್ರಿಗಳು. ಪ್ರಸ್ತಾವನೆಯಲ್ಲಿ ಯೋಗ, ಯೋಗದ ಪ್ರಕಾರಗಳಾದ ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗ ಹಾಗೂ ಶಿವಯೋಗಗಳ ಕುರಿತು ಚರ್ಚಿಸಿದ್ದಾರೆ. ಅಲ್ಲದೇ ಯಮ-ನಿಯಮ-ಆಸನ-ಪ್ರಾಣಾಯಾಮ-ಪ್ರತ್ಯಾಹಾರ-ಧಾರಣ-ಧ್ಯಾನ-ಸಮಾಧಿ ಎಂಬ ಎಂಟು ಯೋಗಾಂಗಗಳ ಬಗ್ಗೆಯೂ ಸ್ಥೂಲವಾದ ವಿವರಗಳಿವೆ. ನಂತರ ಶಿವಯೋಗ ಪ್ರದೀಪಿಕೆಯ ಕರ್ತೃ, ಕೃತಿ-ಕೃತಿ ಟೀಕುವಿನ ವಿಶೇಷತೆ ಸಂಕ್ಷಿಪ್ತವಾಗಿ ಮೂಡಿಬಂದಿದೆ. ಶಿವಯೋಗ ಪ್ರದೀಪಿಕೆಗೆ ಕನ್ನಡದಲ್ಲಿಯೂ ಕೆಲವು ಟೀಕೆ, ವ್ಯಾಖ್ಯಾನ ಕೃತಿಗಳು ಹುಟ್ಟಿಕೊಂಡಿವೆ. ತೆಲುಗಿನ ಶಿವಯೋಗ ಸಾರಮು ಕೃತಿಯನ್ನು ಬಿಟ್ಟರೂ ಇದಕ್ಕೆ ನಿಜಗುಣ ಶಿವಯೋಗಿಗಳು ಮಾಲಾರೂಪದ ಕನ್ನಡ ಟೀಕೆಯನ್ನು, ಬಸವಾರಾಧ್ಯರು ಪ್ರತಿಪದಾರ್ಥ ಕನ್ನಡ ಟೀಕೆಯನ್ನು ಬರೆದಿದ್ದನ್ನು ಗುರುತಿಸಿ, ಅದರ ಮಹತ್ವವನ್ನು ಸಾಹಿತ್ಯಲೋಕಕ್ಕೆ ಸಂಪಾದಕದ್ವಯರು ತಿಳಿಸಿಕೊಟ್ಟಿದ್ದಾರೆ. ಅನುಬಂಧದಲ್ಲಿ ಶ್ಲೋಕಗಳ ವರ್ಣಾನುಕ್ರಮಣಿಕೆ ಕೃತಿಯ ಓದಿಗೆ ಸಹಾಯಕಾರಿಯಾಗಿದೆ. ಆದರೆ ಪರಿಷ್ಕರಣೆಗೆ ಬಳಸಿಕೊಂಡ ಹಸ್ತಪ್ರತಿಗಳ ಬಗ್ಗೆ ಇದರಲ್ಲಿ ಮಾಹಿತಿಯಿಲ್ಲ. ಒಟ್ಟಿನಲ್ಲಿ ಯೋಗ ದರ್ಶನಕ್ಕೆ ಸಂಬಂಧಿಸಿದ ಸಂಸ್ಕೃತ ಕೃತಿಯ ಕನ್ನಡ ಟೀಕಾ ಗ್ರಂಥ "ಶಿವಯೋಗ ಪ್ರದೀಪಕೆ"ಯನ್ನು ಪರಿಷ್ಕರಿಸಿ ಕೊಡುವುದರ ಮೂಲಕ ಯೋಗಾಭ್ಯಾಸಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ.

೨. ಪುರಾಣದ ಸಿದ್ಧಲಿಂಗ ಕವಿಯ ಷಟ್ಸ್ಥಲ ಶಿವಾಯಣ :

ಆಧುನಿಕಪೂರ್ವ ಕನ್ನಡ ಸಾಹಿತ್ಯದಲ್ಲಿ ಪುರಾಣವನ್ನು ಚರಿತ್ರೆಗೊಳಿಸಿ, ಚರಿತ್ರೆಯನ್ನು ಪುರಾಣಗೊಳಿಸಿ ರಚಿಸಿದ ಕಾವ್ಯಗಳಿವೆ. ಉದಾಹರಣೆಗೆ ಪಂಪಕವಿಯ ಪಂಪಭಾರತ, ರನ್ನನ

ಗದಾಯುದ್ಧಗಳಂಥ ಕೃತಿಗಳು ಪುರಾಣದ ಚರಿತ್ರೀಕರಣವಾದರೆ, ಹರಿಹರನ ಬಸವರಾಜದೇವರ ರಗಳೆ, ರಾಘವಾಂಕನ ಸಿದ್ಧರಾಮ ಚರಿತ್ರೆಗಳಂಥ ಕೃತಿಗಳು ಚರಿತ್ರೆಯ ಪುರಾಣೀಕರಣವಾಗಿವೆ. ಪ್ರಸ್ತುತ ಸಿದ್ಧಲಿಂಗ ಕವಿಯ "ಷಟ್ಸ್ಥಲ ಶಿವಾಯಣ"ವು ಚರಿತ್ರೆಯನ್ನು ಪುರಾಣಗೊಳಿಸಿದ ಕಾವ್ಯವಾಗಿದೆ. ೨೫ ಸ್ಕಂದ(ಸಂಧಿ), ೧೭೫೯ ಭಾಮಿನಿ ಷಟ್ಪದಿ ಪದ್ಯಗಳನ್ನು ಒಳಗೊಂಡ ಒಂದು ದೀರ್ಘ ಕಾವ್ಯ.

ಹನ್ನೆರಡನೆಯ ಶತಮಾನದಿಂದ ಅಸ್ತಿತ್ವಕ್ಕೆ ಬಂದ ವಿರಕ್ತ ಪರಂಪರೆಯ ಪ್ರಥಮ ವ್ಯಕ್ತಿ ಅಲ್ಲಮಪ್ರಭು. ಅಲ್ಲಿಂದ ಮುಂದೆ ಚನ್ನಬಸವಣ್ಣ, ಸಿದ್ಧರಾಮ, ತದನಂತರದಲ್ಲಿ ತೋಂಟದ ಸಿದ್ಧೇಶ್ವರ ಈ ಪರಂಪರೆಯ ವಾರಸುದಾರರೆಂಬುದು ಇತಿಹಾಸವು ತಿಳಿಸುತ್ತದೆ. ಈ ವಾರಸುದಾರಿಕೆಯನ್ನು ಮುನ್ನಡೆಸಿಕೊಂಡು ಬಂದವರಲ್ಲಿ ಚೀಲಾಳಸ್ವಾಮಿಯೂ ಒಬ್ಬ. ಆತನ ಪರ್ಯಟನವೇ ಈ ಕೃತಿಯ ಮುಖ್ಯ ವಿಷಯ. ಶಿವನು ಪಾರ್ವತಿಗೆ, ನಂದೀಶನು ಶಿವಗಣಂಗಳಿಗೆ, ಅಲ್ಲಮಪ್ರಭುವು ಬಸವಾದಿ ಪ್ರಮಥರಿಗೆ ಹೇಳಿದ ಈ ಕಥೆಯನ್ನು ಚೀಲಾಳಸ್ವಾಮಿಯು ತನ್ನ ಶಿಷ್ಯನಾದ ಕುಮಾರಪ್ರಭುವಿಗೆ ಹೇಳಿದಂತೆ ಇಲ್ಲಿ ಕಥಾಶಿಲ್ಪವನ್ನು ರೂಪಿಸಲಾಗಿದೆ. ಕೃತಿಯು ಇವರೆಲ್ಲರ ಸಂಭಾಷಣೆಗಳಿಂದ ಮುನ್ನಡೆದಿದೆ. ಚಿಲಾಳಸ್ವಾಮಿಯ ದೇಶ ಪರ್ಯಟನವನ್ನು ಈ ಕೃತಿ ಕ್ರಮಬದ್ಧವಾಗಿ ಹೇಳುತ್ತ ಹೋಗುತ್ತದೆ. ಕೂಡಲಸಂಗಮ, ರಾಚೋಟಿ, ಕೊಲ್ಲಿಪಾಕಿ, ದಿಲ್ಲಿ, ವಿಜಯಪುರ, ಮೈಲಾಪುರ, ಕಾಳಹಸ್ತಿ, ನೀಲಗಿರಿ, ಶಿವಗಂಗೆ, ಎಡೆಯೂರು, ಸೋದೆ, ಜರಿಮಲೆ, ಉಜ್ಜೈನಿ, ಕೊಟ್ಟೂರು ಮುಂತಾದ ಕ್ಷೇತ್ರಗಳನ್ನು ಸುತ್ತಾಡಿ ಕೊನೆಗೆ ಹರಪನಹಳ್ಳಿಗೆ ಬಂದು ಷಟ್ಸ್ಥಲಪೀಠಸ್ಥನಾಗಿ ಯೋಗಸಮಾಧಿ ಹೊಂದಿದನು ಎಂಬುದನ್ನು ಈ ಕೃತಿಯು ಸ್ಥೂಲವಾಗಿ ಚಿತ್ರಿಸುತ್ತದೆ. ಅನುಬಂಧದಲ್ಲಿರುವ ನಾಮಸೂಚಿ ಕಾವ್ಯದಲ್ಲಿ ಉಲ್ಲೇಖವಾದ ವ್ಯಕ್ತಿ ಮತ್ತು ಸ್ಥಳಗಳನ್ನು ತಿಳಿದುಕೊಳ್ಳಲು ಸಹಾಯವಾಗುತ್ತದೆ.

ಇಂಥ ಚಾರಿತ್ರಿಕ ಕಾವ್ಯಗಳ ಬಗ್ಗೆ ಎಂ.ಎಂ.ಕಲಬುರ್ಗಿಯವರಿಗೆ ತುಂಬ ಕುತೂಹಲ. ಹೀಗಾಗಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ ಲಭ್ಯವಾದ ಏಕೈಕ ಪ್ರತಿಯಿಂದ ಷಟ್ಸ್ಥಲ ಶಿವಾಯಣ ಕೃತಿಯನ್ನು ಸಿ.ಪಿ.ಕೃಷ್ಣಕುಮಾರ ಅವರೊಂದಿಗೆ ೧೯೫೯ರಲ್ಲಿ ಪರಿಷ್ಕರಿಸಿ, ಗದುಗಿನ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ವೀರಶೈವ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಪ್ರಸ್ತಾವನೆಯು ಅನೇಕ ಚಾರಿತ್ರಿಕ ಸಂಗತಿಗಳತ್ತ ನಮ್ಮ ಗಮನವನ್ನು ಸೆಳೆಯುತ್ತದೆ. ಕರ್ತೃವಿನ ವಿಚಾರ, ಕೃತಿಯ ಐತಿಹಾಸಿಕ ಮಹತ್ವ, ಚೀಲಾಳಸ್ವಾಮಿ–ಚೀಲಾಳ ಸಮಯ, ಆತನ ವ್ಯಕ್ತಿತ್ವ, ಕಾವ್ಯಶಿಲ್ಪ–ಕವಿತ್ವ, ಪ್ರಭಾವ, ಪರಿಷ್ಕರಣ ವಿಧಾನಗಳನ್ನು ಚರ್ಚಿಸಲಾಗಿದೆ. ವಿರಕ್ತ ಪರಂಪರೆಯಲ್ಲಿ ಮುರುಗಾ–ಚೀಲಾಳ–ಸಂಪಾದನ ಸಮಯಭೇದಗಳು ಹುಟ್ಟಿಕೊಂಡ ಬಗೆ, ಚೀಲಾಳ ಸ್ವಾಮಿಯ ಹೆಸರಿನಲ್ಲಿ ಚೀಲಾಳಸಮಯದ ಮಠಗಳು, ಮಠಾಧಿಪತಿಗಳ ಸಂಪ್ರದಾಯ ಇದ್ದ ಬಗ್ಗೆ ಸಂಪಾದಕರು ಕೂಲಂಕಷವಾಗಿ ಚರ್ಚೆ ಮಾಡಿದ್ದಾರೆ. ಅಷ್ಟೇ ಏಕೆ, ಚೀಲಾಳ ಸಮಯದ ಮುಂದುವರಿಕೆಯಾಗಿ ಹರಪನಹಳ್ಳಿ ಬಳ್ಳಾರಿ ಹೊಸಪೇಟೆ ಉರವಕೊಂಡ ಕೊಪ್ಪಳ ಮುಂತಾದೆಡೆ ಮಠಗಳಿರುವುದನ್ನು ಗುರುತಿಸಲಾಗಿದೆ. ಒಟ್ಟಿನಲ್ಲಿ ವಿರಕ್ತ ಪರಂಪರೆಯಲ್ಲಿ ಬರುವ ಚೀಲಾಳ ಸಮಯ, ಆ ಸಮಯದ ಸ್ಥಾಪಕ ಚೀಲಾಳಸ್ವಾಮಿಯ ಚರಿತ್ರೆಯನ್ನು ನಿರೂಪಿಸುವ ಈ ಕೃತಿಯು ಇನ್ನೂ ಹೆಚ್ಚಿನ ಸಂಶೋಧನೆಗೆ ಬಹುಮುಖ್ಯ ಆಕರಗ್ರಂಥವಾಗಿದೆ.

ಕೃತಜ್ಞತೆ :

ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂಶೊಧನೆಯನ್ನು ಮುಖ್ಯವಾಗಿಟ್ಟುಕೊಂಡು ವಿಜಯಪುರದ ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಸ್ಥಾಪನೆಯಾಗಿದೆ. ಈಗಾಗಲೇ 'ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣೆ' ಹಾಗೂ 'ಆದಿಲಶಾಹಿ ಸಾಹಿತ್ಯ ಪ್ರಕಟಣ ಯೋಜನೆ'ಗಳನ್ನು ಯಶಸ್ವಿಯಾಗಿ ಕೈಕೊಂಡ ಈ ಕೇಂದ್ರವು ಈಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನದಿಂದ "ಡಾ. ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ"ಯನ್ನು ರೂಪಿಸಿದೆ. ಈ ಯೋಜನೆಯಲ್ಲಿ ಇಪ್ಪತ್ತೆರಡನೆಯ ಸಂಪುಟ(ಕಾವ್ಯ ಸಾಹಿತ್ಯ–ಭಾಗ : ೪)ವಾಗಿ ಗುರುಗಳಾದ ಎಂ.ಎಂ. ಕಲಬುರ್ಗಿಯವರು ಪರಿಷ್ಕರಿಸಿದ ಚನ್ನಸದಾಶಿವಯೋಗಿಯ 'ಶಿವಯೋಗ ಪ್ರದೀಪಿಕೆ' ಹಾಗೂ 'ಪುರಾಣದ ಸಿದ್ಧಲಿಂಗ ಕವಿಯ ಷಟ್ಸ್ಥಲ ಶಿವಾಯಣ' ಕೃತಿಗಳನ್ನು ಇಲ್ಲಿ ಸಂಪಾದಿಸಿಕೊಟ್ಟಿದ್ದೇನೆ. ಈ ಯೋಜನೆಯಲ್ಲಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಟ್ಟ ನನ್ನ ಗುರುಗಳು ಹಾಗೂ ಈ ಯೋಜನೆಯ ಪ್ರಧಾನ ಸಂಪಾದಕರಾದ ಡಾ. ವೀರಣ್ಣ ರಾಜೂರ ಅವರಿಗೆ ಗೌರವಪೂರ್ವಕ ನಮನಗಳು. ಸಂಪಾದನೆಯ ಸಂದರ್ಭದಲ್ಲಿ ಸೂಕ್ತ ಸಲಹೆ–ಸಹಕಾರ ನೀಡಿದ ಮಾತೋಶ್ರೀ ಉಮಾದೇವಿ ಎಂ. ಕಲಬುರ್ಗಿ ಹಾಗೂ ಡಾ. ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರಿಗೆ, ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ.ಎಸ್.ಮದಭಾವಿ ಅವರಿಗೆ ಕೃತಜ್ಞತೆಗಳು.

❖❖

*

ಪರಿವಿಡಿ

ಚೆನ್ನಸದಾಶಿವಯೋಗಿ ವಿರಚಿತಾ

ಶಿವಯೋಗ ಪ್ರದೀಪಿಕಾ

[ಬಸವಾರಾಧ್ಯ ಟೀಕಾಸಮೇತಾ]

ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಪಂ. ನಾಗಭೂಷಣಶಾಸ್ತ್ರಿಗಳು

ಕನ್ನಡ ಅಧ್ಯಯನಪೀಠ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯೭೬

*

ಕೃತಜ್ಞತೆಗಳು

ಶಿವಯೋಗಸಂಪನ್ನರೂ ಶಾಸ್ತ್ರಸಮರ್ಥರೂ ಮಾತ್ರ ರಚಿಸಲು ಶಕ್ತರೆನಿಸುವ ಕಾರಣ 'ಶಿವಯೊಗ'ವನ್ನು ಕುರಿತು ನಮ್ಮಲ್ಲಿ ಹುಟ್ಟಿದ ಗ್ರಂಥಗಳ ಸಂಖ್ಯೆ ತೀರ ವಿರಳ. ಇವುಗಳಲ್ಲಿ 'ಶಿವಯೋಗ ಪ್ರದೀಪಿಕಾ' ಎಂಬ ಈ ಕೃತಿಯನ್ನು ಪ್ರಕಟಿಸುವುದರ ಮೂಲಕ ಲಿಂಗಾಯತ ವಿಶಿಷ್ಟವಾದ 'ಶಿವಯೋಗ'ಕ್ಕೆ ಸಂಬಂಧಿಸಿದ ಒಂದು ಪ್ರಮಾಣಭೂತ ಗ್ರಂಥವನ್ನು ಅಭ್ಯಾಸಿಗಳಿಗೆ ನೀಡುತ್ತಲಿದೆ, 'ಶ್ರೀ ಬಸವೇಶ್ವರಪೀಠ'.

ಈ ಕೃತಿಯನ್ನು ೧೯೧೩ರಲ್ಲಿ ಶ್ರೀ ಎನ್. ಆರ್. ಕರಿಬಸವಶಾಸ್ತ್ರಿಗಳು ಪ್ರಕಟಿಸಿದ್ದರು. ಆ ಪ್ರತಿಗಳು ಈಗ ಅಲಭ್ಯವಾಗಿರುವುದರಿಂದಲೂ ಹೊಸ ವಿನ್ಯಾಸದಲ್ಲಿ ಅದನ್ನು ಪ್ರಕಟಿಸುವುದು ಅವಶ್ಯವಿದ್ದುದರಿಂದಲೂ ಈ ಸಂಪಾದನೆ ಹೊರಬರುತ್ತಲಿದೆ. ಪ್ರಸ್ತುತ ಆವೃತ್ತಿಗೆ ಮೈಸೂರು ಪ್ರಾಚ್ಯವಿದ್ಯಾಸಂಸ್ಥೆಯ ಹಸ್ತಪ್ರತಿ (ನಂ. A 363 –ಸಂಕೇತ; ಮೈ) ಯನ್ನು ಆಧಾರಪ್ರತಿಯನ್ನಾಗಿ ಬಳಸಿಕೊಳ್ಳಲಾಗಿದೆ. ಪಾಠಾಂತರಕ್ಕೋಸುಗ ಶ್ರೀ ಕರಿಬಸವಶಾಸ್ತ್ರಿಗಳ ಆವೃತ್ತಿಯ (ಸಂಕೇತ:ಕ) ನೆರವನ್ನು ಪಡೆದಿದ್ದೇವೆ. ಇದು ಶಾಸ್ತ್ರಕೃತಿಯಾದುದರಿಂದ ಶುದ್ಧ ರೂಪದಿಂದ ಹೊರತರಲು ಪ್ರಯತ್ನಿಸಿರುವೆವಾದರೂ ಅನವಧಾನ, ಅನ್ಯಥಾಜ್ಞಾನಗಳ ಮೂಲಕ ಉಳಿದಿರಬಹುದಾದ ನ್ಯೂನತೆಗಳನ್ನು ವಿದ್ವಾಂಸರು ಮನ್ನಿಸುವರೆಂದು ನಂಬಿದ್ದೇವೆ.

"ಶ್ರೀ ಮುರಗೋಡ ಸಂಸ್ಥಾನ ಮಠಾಧೀಶರಾದ ಶ್ರೀ ಮ. ನಿ. ಪ್ರ. ಸ್ವ ಮಹಾಂತಶಿವಯೋಗೀಶ್ವರ ಶತಮಾನೋತ್ಸವಸ್ಮಾರಕ ಶ್ರೀ ಬಸವೇಶ್ವರಪೀಠ" ಕನ್ನಡ ಅಧ್ಯಯನಪೀಠದಲ್ಲಿ ಅಧಿಷ್ಠಾನಗೊಂಡುದು ಒಂದು ಪುಣ್ಯವಿಶೇಷ. ಮುರುಗೋಡ ಶ್ರೀಗಳ ಮಹಿಮೆ, ಬಸವಭಕ್ತರ ತ್ಯಾಗಗಳಲ್ಲಿ ಮೂಡಿಬಂದ ಈ ಪೀಠ, ಬಸವಬೆಳಕನ್ನು ಕರ್ನಾಟಕದಿಂದ ಭಾರತಕ್ಕೆ, ಭಾರತದಿಂದ ವಿಶ್ವಕ್ಕೆ ವಿಸ್ತರಿಸುವ ಧ್ಯೇಯಾದರ್ಶಗಳನ್ನು ಹೊಂದಿದೆ. ಈ ಆದರ್ಶ, ಅನುಷ್ಠಾನಕ್ಕೆ ಬರುವುದರ ಪೂರ್ವಭಾವಿಯಾಗಿ 'ಲಿಂಗಾಯತ'ಕ್ಕೆ ಸಂಬಂಧಿಸಿದ ತಾತ್ತ್ವಿಕಗ್ರಂಥಗಳು ಪ್ರಕಟವಾಗಬೇಕಾಗುತ್ತದೆ. ಈ ಧೋರಣೆಯ ಹಿನ್ನೆಲೆಯಲ್ಲಿ ಬೆಳಕು ಕಾಣುತ್ತಲಿದೆ 'ಶಿವಯೋಗ ಪ್ರದೀಪಿಕೆ'.

'ಶ್ರೀ ಬಸವೇಶ್ವರಪೀಠ'ದ ಪುಣ್ಯ ಚೈತನ್ಯವೆನಿಸಿದ ಮುರುಗೋಡದ ಲಿಂ. ಶ್ರೀ ನಿ. ಪ್ರ. ಸ್ವ ಮಹಾಂತಶಿವಯೋಗಿಗಳಲ್ಲಿ ಭಕ್ತಿಪೂರ್ವಕ ನಮಸ್ಕಾರಗಳು. ಈ ಪೀಠವನ್ನು ಅನುಷ್ಠಾನಕ್ಕೆ ತರುವ ಕನಸನ್ನು ಕಂಡು, ನನಸಾಗುವಂತೆ ಆಶೀರ್ವದಿಸಿದ ಧಾರವಾಡ ಶ್ರೀ ಮುರುಘಾಮಠದ ಶ್ರೀ ನಿ. ಪ್ರ ಸ್ವ. ಮಹಾಂತಸ್ವಾಮಿಗಳಲ್ಲಿ ತ್ರಿಕರಣಪೂರ್ವಕ ವಂದನೆಗಳು. ಅಂದಿನ ಕುಲಪತಿ ಡಾ. ಎ. ಎಸ್. ಅಡಕೆ,

ಇಂದಿನ ಕುಲಪತಿ ಡಾ. ಆರ್. ಸಿ. ಹಿರೇಮಠ, ಶ್ರೀ ಎಸ್. ಎಸ್. ಒಡೆಯರ, ಡಾ. ಎಂ. ಎಸ್. ಸುಂಕಾಪುರ, ಶ್ರೀ ಎಸ್. ಬಿ. ಶಾಪೇಟಿ ಮತ್ತು ಶ್ರೀ ಸಿದ್ಧರಾಮಪ್ಪ ಬೆಂಬಳಗಿ ಇವರು ಹಗಲಿರುಳೂ ದುಡಿದುದರ ಫಲ, ಈ ಪೀಠ. ಇವರಿಗೆ ನಮ್ಮ ವಂದನೆಗಳು ಸಲ್ಲಿಸಬೇಕು.

ಈ ಕೃತಿಯನ್ನು ಬೆಳಕಿಗೆ ತರಲು ಪ್ರೋತ್ಸಾಹಿಸಿದವರು ಕನ್ನಡ ಅಧ್ಯಯನಪೀಠದ ಮುಖ್ಯಸ್ಥರಾದ ಡಾ. ಎಂ. ಎಸ್. ಸುಂಕಾಪುರ ಅವರು. ಹಸ್ತಪ್ರತಿಯನ್ನು ಒದಗಿಸಿದವರು ಮೈಸೂರಿನ ಪ್ರಾಚ್ಯವಿದ್ಯಾಸಂಸ್ಥೆಯ ನಿರ್ದೇಶಕರು. ಪ್ರಕಟನೆಯ ಅನುಕೂಲತೆಯನ್ನು ಕಲ್ಪಿಸಿಕೊಟ್ಟವರು ವ್ಯಾಸಂಗ ವಿಸ್ತರಣ ಮತ್ತು ಪ್ರಕಟನ ವಿಭಾಗದ ಮುಖ್ಯಸ್ಥರಾದ ಶ್ರೀ ಚೆನ್ನವೀರ ಕಣವಿ ಅವರು. ಶುದ್ಧಪ್ರತಿಯನ್ನು ಸಿದ್ಧಗೊಳಿಸಿಕೊಡುವಲ್ಲಿ, ಅಚ್ಚಿನ ಕಾರ್ಯದ ನಿರ್ವಹಣೆಯಲ್ಲಿ ನೆರವಾದವರು 'ಶ್ರೀ ಬಸವೇಶ್ವರಪೀಠ'ದ ಸಿಬ್ಬಂದಿ ವರ್ಗದವರು. ಮುದ್ರಣಕಾರ್ಯವನ್ನು ಆಸ್ಥೆಯಿಂದ ಪೂರೈಸಿದವರು 'ಕ್ವಾಲಿಟಿ ಪ್ರಿಂಟರ್ಸ್' ಮುದ್ರಣಾಲಯದ ಒಡೆಯರಾದ ಶ್ರೀ ಎಂ. ಎಂ. ಹೊರಡಿ ಮತ್ತು ಅವರ ಸಿಬ್ಬಂದಿಗಳು. ಇವರೆಲ್ಲರಿಗೆ ನಮ್ಮ ಕೃತಜ್ಞತೆಗಳು.

ಶ್ರೀ ಬಸವೇಶ್ವರಪೀಠ — ಸಂಪಾದಕರು
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೨೩-೧೦-೧೯೭೬

❖❖

*

ಪ್ರಸ್ತಾವನೆ

೧. ಯೋಗ

ಭಾರತೀಯರಿಗೆ ಬಹುಕಾಲದಿಂದಲೂ ಯೋಗದ ಬಗೆಗೆ ನಿರತಿಶಯವಾದ ಗೌರವಾಭಿಮಾನ. ಇವರ ದೃಷ್ಟಿಯಲ್ಲಿ ಇದು ಜಡಸಂಪತ್ತಿನಂತೆ ಕ್ಷಣಿಕವೂ ಸೀಮಿತವೂ ಆದ ಸುಖವಸ್ತುವಾಗಿರದೆ ಅನಿರ್ವಚನೀಯ ಚಿನ್ಮಯಸಂಪತ್ತು ಎನಿಸಿದೆ. ಕಾರಣ, ಭಾರತದಲ್ಲಿ ಪ್ರಚಲಿತವಾಗಿರುವ ಎಲ್ಲ ಧಾರ್ಮಿಕ ಸಂಪ್ರದಾಯಗಳ ಕ್ರಿಯಾಕಲಾಪಗಳಲ್ಲಿಯೂ ಒಂದಿಲ್ಲೊಂದು ರೀತಿಯಿಂದ ಯೋಗಪದ್ಧತಿಯ ಅನುಸರಣ ನಡೆದುಬಂದಿದೆ.

'ಯೋಗ' ಶಬ್ದವು ಸಂಯೋಗಾರ್ಥಕ 'ಯುಜಿರ್' ಹಾಗೂ ಏಕಾಗ್ರಾರ್ಥಕ 'ಯುಜ್' ಎಂಬ ಎರಡು ಧಾತುಗಳಿಂದ ಸಿದ್ಧವಾಗಿದೆ. ಇವುಗಳಲ್ಲಿ ಮೊದಲನೆಯ ಧಾತ್ವರ್ಥವಾದ ಯೋಗವು ಸಾಧ್ಯರೂಪವು; ಎರಡನೆಯ ಧಾತ್ವರ್ಥವಾದ ಯೋಗವು ಸಾಧನರೂಪವು. ಯಾಜ್ಞವಲ್ಕ್ಯ ಋಷಿಗಳು ಸಾಧ್ಯಯೋಗದ ಬಗೆಗೆ "ಯೋಗಶ್ಚಿತ್ತವೃತ್ತಿನಿರೋಧಃ" ಅಂದರೆ ಚಿತ್ತವೃತ್ತಿ ನಿರೋಧವೇ ಯೋಗವೆಂದೂ ಹೇಳಿರುವರು.

ವ್ಯಕ್ತಿಗಳ ಶಾರೀರಿಕ, ಮಾನಸಿಕ, ಬೌದ್ಧಿಕ ಮೊದಲಾದ ಶಕ್ತಿಗಳನ್ನು ಅರಳಿಸುವುದರ ಮೂಲಕ ಆತ್ಮಶಕ್ತಿಯನ್ನು ವಿಕಾಸಗೊಳಿಸುವಲ್ಲಿ ಪ್ರಧಾನಪಾತ್ರ ವಹಿಸುವುದೇ ಯೋಗದ ಪರಮಗುರಿ.

ಆತ್ಮನು ವಾಸ್ತವಿಕವಾಗಿ ಶಿವರೂಪನೇ ಆಗಿದ್ದರೂ ಅವಿದ್ಯೆಯ ಆವರಣದ ಮೂಲಕ ಅವನ ನೈಜಸ್ವರೂಪವು ಮರೆಯಾಗುವುದು. ಈ ಸ್ವಸ್ವರೂಪಭೂತ ಶಿವನ ವಿಸ್ಮೃತಿರೂಪವಿಯೋಗವೇ ಮನುಷ್ಯನ ಸರ್ವದುಃಖಗಳ ಮೂಲ. ಆದರೆ ತಮ್ಮ ಈ ದುಃಖಕ್ಕೆ ವಿಷಯವಿಯೋಗವೇ ಮೂಲಕಾರಣವೆಂಬ ಭ್ರಾಂತಿಯಿಂದ ವಿಷಯ ಯೋಗಕ್ಕಾಗಿ ಹಂಬಲಿಸಿ, ಅದರಿಂದ ಲಭಿಸುವ ಕ್ಷಣಿಕಸುಖವನುಂಡು, ಕೊನೆಗೆ ತಾವು ಬಯಸುವ ಸುಖವಿದಲ್ಲವೆಂದು ತಿಳಿದು ಮತ್ತೆ ಬೇರೆಬೇರೆ ವಿಷಯಗಳ ಯೋಗಕ್ಕಾಗಿ ಧಾವಿಸಿ ದಣಿಯುವರು. ಹೀಗೆ ಜೀವಿಗಳಿಗೆ ಭ್ರಾಮಕವಿಚಾರ ಪರಿಣಾಮವಾದ ವಿಷಯಾನುಸರಣದಿಂದ ಜನ್ಮಜನ್ಮಾಂತರ ಚಕ್ರದಲ್ಲಿ ಸಿಕ್ಕಿಕೊಂಡು, ಅನವರತ ಬಳಲಬೇಕಾದ ಪ್ರಸಂಗ ಬಂದೊದಗುತ್ತದೆ. ಇಂತಹ ಶೋಚನೀಯ ಸ್ಥಿತಿಯಿಂದ ಪಾರಾಗುವ ಅವಕಾಶ ಒದಗುವುದು, ವಿವೇಕಪ್ರಧಾನವಾದ ಮಾನವ ಜನ್ಮದಲ್ಲಿ ಮಾತ್ರ. ಆದರೆ ಪುಣ್ಯಜೀವಿಗಳೆನಿಸಿದ ಕೆಲವರಲ್ಲಿ ಮಾತ್ರ ನಿಜವಾದ ಪ್ರಜ್ಞೆ ಜಾಗ್ರತವಾಗಿ, ಅವರು ತಮ್ಮ ಜೀವಿತದ ಚರಮ ಪರಮಗುರಿಯನ್ನು ಸಾಧಿಸುವ ಪ್ರಯತ್ನಮಾಡಿ,

ಕೊನೆಗೆ ತಮ್ಮಿಷ್ಟಸಿದ್ಧಿಯನ್ನು ಸಾಧಿಸುವರು. ಅದೇ ಜೀವಾತ್ಮ ಪರಮಾತ್ಮರ ಸಮರಸರೂಪವಾದ ಯೋಗ, ಅದನ್ನು ಸಾಧಿಸುವ ಸಾಧನಮಾರ್ಗಕ್ಕೂ ಗೌಣಾರ್ಥದಲ್ಲಿ 'ಯೋಗ' ಶಬ್ದ ಬಳಸಲ್ಪಡುತ್ತದೆ.

ಭಾರತೀಯದಾರ್ಶನಿಕ ಮತವಾದಗಳಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳು ಕಂಡುಬಂದರೂ ಯೋಗದ ಬಗೆಗೆ ಮಾತ್ರ ಯಾರದೂ ಭಿನ್ನಾಭಿಪ್ರಾಯ ಕಂಡುಬರುವದಿಲ್ಲವೆಂಬುದೇ ಯೋಗದ ಮಹತಿಯನ್ನೆತ್ತಿ ತೋರಿಸುತ್ತದೆ. ತಮ್ಮ ಜೀವಿತದಲ್ಲಿ ಭೋಗಸುಖವನ್ನು ಯಥೇಷ್ಟವಾಗಿ ಪಡೆಯಲು ನಾಸ್ತಿಕರು ಕೂಡ ಯೋಗಾಂಗಗಳೆನಿಸಿದ ಯಮನಿಯಮಾದಿಗಳನ್ನು ಅನುಸರಿಲೇಬೇಕಾಗವುದೆಂಬುದನ್ನು ಇಲ್ಲಿ ಗಮನಿಸಬೇಕು. ವಿಚಾರಿಸಿ ನೋಡಿದರೆ ಯೋಗವೆಂಬುದು ಪ್ರಾಚ್ಯಮನೋವಿಜ್ಞಾನಶಾಸ್ತ್ರವೇ ಆಗಿದೆ. ಮಾನವರು ಪ್ರಕೃತಿರಾಜ್ಯದಿಂದ ಪಾರಾಗಿ ಆತ್ಮರಾಜ್ಯದಲ್ಲಿ ಪ್ರವೇಶಿಸುವುದಕ್ಕೆ ಯೋಗಕ್ಕಿಂತ ಸುಲಭೋಪಾಯ ಮತ್ತಾವುದೂ ಇಲ್ಲ.

ಆದರೆ ಯೋಗದ ನಿಜವಾದ ಸ್ವರೂಪ, ಪ್ರಯೋಜನ ತಿಳಿಯದವರು ಅದೊಂದು ಆಶ್ಚರ್ಯಮಯಘಟನೆಗಳ ಪ್ರಕಟನಸಾಮರ್ಥ್ಯದ ಸಾಧನವೆಂದು ಭಾವಿಸುವರು. ಯೋಗಪಥದಲ್ಲಿ ನಡೆದವರಿಗೆ ಕೆಲವು ಹಂತಗಳನ್ನು ದಾಟಿದ ಮೇಲೆ ಇಂತಹ ಹಲವು ಅಲೌಕಿಕಸಿದ್ಧಿಗಳು ತಮ್ಮಿಂದ ತಾವೇ ಬರುತ್ತವೆ. ಯೋಗದಿಂದಷ್ಟೇ ಅಲ್ಲದೆ ಬೇರೆಬೇರೆ ಉಪಾಯಗಳಿಂದಲೂ, ಸಾಧ್ಯವಾಗುವ ಸಿದ್ಧಿಗಳನ್ನು ಪತಂಜಲಿ ಋಷಿಗಳು "ಜನ್ಮೌಷಧಿಮಂತ್ರತಪಃ ಸಮಾಧಿಜಾಃ ಸಿದ್ಧಯಃ" ಅಂದರೆ, ಜನ್ಮಜಾಸಿದ್ಧಿ, ಔಷಧಿಜಾಸಿದ್ಧಿ, ಮಂತ್ರಜಾಸಿದ್ಧಿ, ತಪೋಜಾಸಿದ್ಧಿ, ಸಮಾಧಿಜಾಸಿದ್ಧಿ ಎಂದು ಎಣಿಸಿ ಹೇಳಿರುವರು.

ಯಾವ ಸಿದ್ಧಿಗಳೇ ಇರಲಿ ಅವುಗಳಿಗೆ ಮನಸೋತು ನಿಂತು, ಜನರನ್ನು ಬೆರಗುಗೊಳಿಸುತ್ತ ಅವರಿಂದ ಮಾನಮರ್ಯಾದೆಗಳನ್ನು ಪಡೆಯಬಯಸುವವರು ನಿಜವಾದ ಧ್ಯೇಯವನ್ನು ಸಾಧಿಸಲು ಸಮರ್ಥರಾಗರು. ಈ ಸಿದ್ಧಿಗಳು ಸಮಾಧಿಯಲ್ಲಿ (ನೈಜಸ್ವರೂಪದಲ್ಲುಳಿಯುವಲ್ಲಿ) ವಿಘ್ನಗಳಾಗುವ ಕಾರಣ ಆತ್ಮೋದ್ಧಾರದ ಅವಶ್ಯಕತೆಯಿದ್ದ ವ್ಯಕ್ತಿಗಳು ಇವುಗಳಿಗೆ ಬೆಲೆಯನ್ನು ಕೊಡುವುದಿಲ್ಲ.

ನಿಜವಾಗಿಯೂ ಯೋಗಸಾಧಕರು ಯೋಗಬಲದಿಂದ ಅಂತರಂಗದ ಪ್ರಾಕೃತಿಕ ಗುಣಗಳನ್ನು ಹೋಗಲಾಡಿಸಿ, ಆತ್ಮತತ್ತ್ವಾನುಭೂತಿಯ ಮಾಧ್ಯಮದ ಮೂಲಕ ಸುಖದುಃಖಗಳ ತಿರುಗಣಿ ಮಡುವಿನಿಂದ ಪಾರಾಗಿ, ನಿಜಶಾಂತಿಸಮಾಧಾನಗಳನ್ನು ಪಡೆಯುವಲ್ಲಿಯೇ ತಮ್ಮ ಕೃತಕೃತ್ಯತೆಯನ್ನು ಕಂಡುಕೊಳ್ಳುವರು.

೨. ಯೋಗಪ್ರಕಾರಗಳು

ಆತ್ಮಸಾಕ್ಷಾತ್ಕಾರದ ಗುರಿಯನ್ನು ಸಾಧಿಸಿಕೊಡುವ ಯೋಗದಲ್ಲಿ ಅನೇಕ ಬಗೆಗಳಿವೆ. ಇವುಗಳಲ್ಲಿ ಪ್ರಮುಖವಾದುವು ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗ ಮತ್ತು ಇವುಗಳ ಮುಡಿಯ ಮಾಣಿಕ್ಯವಾದ ಶಿವಯೋಗ.

ಮಂತ್ರಯೋಗ :

ಶ್ವಾಸ-ಉಚ್ಛ್ವಾಸಗಳ ಮೂಲಕ ಸ್ವಾಭಾವಿಕವಾಗಿಯೇ ನಡೆಯುವ ಉಸಿರಿನ ಉಯ್ಯಾಲೆಗೆ 'ಅಜಪಾಜಪ' ಎಂದು ಹೆಸರು. ಉಸಿರನ್ನು ಒಳಗೆ ತೆಗೆದುಕೊಳ್ಳುವಾಗ 'ಸೋ' ಎಂಬ, ಹೊರಗೆ ಬಿಡುವಾಗ 'ಅಹಂ' ಎಂಬ ಶಬ್ದೋಚ್ಚಾರ ಆಗುತ್ತದೆ. ಇಲ್ಲಿ ಮಂತ್ರೋಚ್ಚಾರದ ಆವಶ್ಯಕತೆಯೇ ಇರುವುದಿಲ್ಲವಾದರೂ ಶ್ವಾಸದ ಪೂರಕ ಹಾಗೂ ರೇಚಕಗತಿಯ ಮೇಲೆ ಗಮನವಿಡಬೇಕಾಗುತ್ತದೆ. ಇವುಗಳಲ್ಲಿ 'ಸೋ' ಎಂಬುದು ಲಿಂಗವಾಚಕ, 'ಅಹಂ' ಎಂಬುದು ಅಂಗವಾಚಕ, ಇವೆರಡೂ ಕೂಡಿ 'ಸೋಽಹಂ' ಅಂದರೆ ಆ ಶಿವನೇ ನಾನು ಎಂಬ 'ಅಜಪಾಜಪ' ಸಹಜವಾಗಿ ನಡೆದಿರುತ್ತದೆ. ಮಂತ್ರಯೋಗಿಗಳು ಇದಕ್ಕೂ ಹೆಚ್ಚಿನದಾದ ಮಂತ್ರ ಜಪವನ್ನು ಆಚರಿಸುತ್ತ ಪರಮಾನಂದಸ್ವರೂಪಿ ಪರಮಾತ್ಮನಲ್ಲಿ ಒಂದಾಗುವರು.

ಭೂಮಿಯಲ್ಲಿ ಜಾರಿಬಿದ್ದವನು ಭೂಮಿಯ ಆಶ್ರಯಪಡೆದುಕೊಂಡೇ ಮೇಲೆದ್ದು ತನ್ನ ಗುರಿಯನ್ನು ಮುಟ್ಟಬೇಕಾಗುತ್ತದೆ. ಇದೇ ರೀತಿ ನಾಮರೂಪಾತ್ಮಕ ಸಂಸಾರದಲ್ಲಿ ಬಿದ್ದಿರುವವನು ಆ ದಿವ್ಯನಾಮರೂಪಗಳ ಆಶ್ರಯದಿಂದಲೇ ಮೇಲೆದ್ದು ತನ್ನ ಜೀವಿತದ ಚರಮಲಕ್ಷ್ಯವನ್ನು ಸಾಧಿಸಬೇಕಾಗುತ್ತದೆ. ಅಂತೆಯೇ ಮಂತ್ರ ಯೋಗಜ್ಞರು ಆಯಾ ಸಾಧಕರಿಗೆ ಇಷ್ಟವಾದ ಉಪಾಸ್ಯದೇವತೆಗಳನ್ನು ಅವುಗಳಿಗೆ ತಕ್ಕ ನಾಮರೂಪಗಳನ್ನೂ ಕಲ್ಪಿಸಿಕೊಟ್ಟಿರುವರು. ಚೆನ್ನಸದಾಶಿವಯೋಗಿಗಳು

ಏಕಾಕ್ಷರಂ ದ್ವ್ಯಕ್ಷರಂ ವಾ ಷಡಕ್ಷರಮಥಾಪಿ ವಾ ।
ಅಷ್ಟಾಕ್ಷರಂ ವಾ ಮೋಕ್ಷಾಯ ಮಂತ್ರಯೋಗೀ ಜಪೇತ್ ಸದಾ ॥

ಎಂದು ಹೇಳುವಂತೆ ಇವರು ಓಂ, ಹ್ರೀಂ, ಹಂ, ಹ್ರೌಂ ಎಂದು ಐದು ವಿಧವಾಗಿರುವ ಏಕಾಕ್ಷರ ಮಂತ್ರವನ್ನಾದರೂ, ಹಂಸ, ಸೋಽಹಂ, ಎಂದು ಎರಡು ವಿಧವಾಗಿರುವ ದ್ವ್ಯಕ್ಷರಮಂತ್ರವನ್ನಾದರೂ, 'ಓಂ ನಮಃ ಶಿವಾಯ' ಎಂಬ ಷಡಕ್ಷರಮಂತ್ರವನ್ನಾದರೂ, 'ಓಂ, ಹ್ರೀಂ, ಹ್ರೂಂ ನಮಃ ಶಿವಾಯ' ಎಂಬ ಅಷ್ಟಾಕ್ಷರ ಮಂತ್ರವನ್ನಾದರೂ ಜಪಿಸಬೇಕು. ಹೀಗೆ ತಮಗೆ ಇಷ್ಟವಾದ ಯಾವುದಾದರೊಂದು ಮಂತ್ರದ ಋಷಿದೇವತಾದಿಗಳನ್ನು ತಿಳಿದು ಜಪಿಸುವವರೇ ಮಂತ್ರ ಯೋಗಿಗಳು.

ವೈಖರೀಶಬ್ದರೂಪದ ಮಂತ್ರೋಚ್ಚಾರವು ಕ್ರಮಾಶಃ ಮಧ್ಯಮಾಶಬ್ದಾವಸ್ಥೆಯನ್ನು, [illegible] ಪಶ್ಯಂತೀಶಬ್ದಾವಸ್ಥೆಯಲ್ಲಿ ಪ್ರವೇಶಿಸುವುದು ಮಂತ್ರಯೋಗದ ಪರಮೋದ್ದೇಶವೆಂದು ಅನುಭಾವಿಗಳು ಹೇಳುತ್ತಾರೆ. ಸ್ವಪ್ರಕಾಶಮಾನ ಚಿದಾನಂದ ಮಯವಾಗಿರುವ ಈ ಪಶ್ಯಂತೀಸಾಕ್ಷಾತ್ಕಾರವನ್ನು ಪಡೆದವನು ಕೃತಕೃತ್ಯನಾಗುವನು.

ಲಯಯೋಗ :

ಬ್ರಹ್ಮಾಂಡದ ಸಂಕ್ಷಿಪ್ತರೂಪ ಪಿಂಡಾಂಡ, ಅಂತೆಯೇ ಬ್ರಹ್ಮಾಂಡದಲ್ಲಿರುವುದೆಲ್ಲ ಪಿಂಡಾಂಡದಲ್ಲಿದೆ. ಈ ವಿಜ್ಞಾನಕ್ಕನುಸರಿಸಿ ಮಾನವಪಿಂಡದ ಆಧಾರ ಪದ್ಮದಲ್ಲಿ ಮೂರುವರೆ ಸುತ್ತುಹಾಕಿಕೊಂಡು

ಸುಪ್ತಸ್ಥಿತಿಯಲ್ಲಿರುವ ಕುಲಕುಂಡಲಿನೀ ಎಂಬ ಹೆಸರಿನ ಶಿವಶಕ್ತಿಯು, ಅವಿದ್ಯೆಯ ಪ್ರಭಾವದಿಂದ ಸೃಷ್ಟಿಕ್ರಿಯೆಯನ್ನು ಮಾಡುತ್ತಲಿರುವುದು. ಅದನ್ನು ಮಸ್ತಕದಲ್ಲಿಯ ಸಪ್ತವಂಕ್ರವಾದ ಸಹಸ್ರದಳಕಮಲದ ಮಧ್ಯದಲ್ಲಿರುವ ಶಿವನೊಡನೆ ಒಂದುಗೂಡಿಸಲು ಸಾಧಕನು ಚಿತ್ತವನ್ನು ತನ್ನ ಧ್ಯಾನಮೂರ್ತಿಯಲ್ಲಾಗಲಿ ವೈಕೃಪ್ರಾಣಾಯಾಮದಿಂದಭಿವ್ಯಕ್ತವಾದ ನಾದದಲ್ಲಾಗಲಿ ಲಯಗೊಳಿಸುವುದೇ 'ಲಯಯೋಗ'. ಇದನ್ನು ಆಚರಿಸುವ ಲಯಯೋಗಿಯ ಲಕ್ಷಣವನ್ನು

> **ಯಸ್ಯ ಚಿತ್ತಂ ನಿಜಧ್ಯೇಯೇ ಮನಸಾ ಮರಂತಾ ಸಹ ।**
>
> **ಲೀನಂ ಭವತಿ ನಾದೇ ವಾ ಲಯಯೋಗೀ ಸ ಏವ ಹಿ ॥**

ಎಂದು ಶಿವಯೋಗ ಪ್ರದೀಪಿಕೆ ಸ್ಪಷ್ಟಪಡಿಸುತ್ತದೆ.

ಯೋಗಶಾಸ್ತ್ರದಲ್ಲಿ ಈ ಲಯಯೋಗದ ಧ್ಯಾನವನ್ನು 'ಬಿಂದುಧ್ಯಾನ' ವೆಂದೂ ಲಯಯೋಗದ ಸಮಾಧಿಯನ್ನು 'ಮಹಾಲಯಸಮಾಧಿ' ಯೆಂದೂ ಹೇಳಲಾಗಿದೆ.

ಹಠಯೋಗ :

ಸ್ಥೂಲಶರೀರ ಮತ್ತು ಸೂಕ್ಷ್ಮಶರೀರ ಇವೆರಡೂ ಒಂದೇ ಭಾವಸೂತ್ರದಲ್ಲಿ ಕಟ್ಟಲ್ಪಟ್ಟಿವೆ, ಅಂತೆಯೇ ಪರಸ್ಪರ ಒಂದರ ಪ್ರಭಾವ ಮತ್ತೊಂದರ ಮೇಲೆ ಆಗುತ್ತಿರುತ್ತದೆ. ಇವೆರಡನ್ನೂ ಸ್ವಾಧೀನದಲ್ಲಿಟ್ಟುಕೊಂಡು ಲಕ್ಷ್ಯದತ್ತ ಸಾಗುವುದೇ ಹಠಯೋಗದ ಉದ್ದೇಶ.

ದಕ್ಷಿಣನಾಸಿಕಾರಂಧ್ರದಿಂದ ಹೊರಡುವ ಸ್ವರದ ಹೆಸರು ಸೂರ್ಯ; ವಾಮ ನಾಸಿಕಾರಂಧ್ರದಿಂದ ಹೊರಡುವ ಸ್ವರದ ಹೆಸರು ಚಂದ್ರ. ಇವೆರಡರ ಸಮತ್ವದ ಹೆಸರು ಹಠಯೋಗ.

ಪ್ರಾಣವಾಯು ನಾಸಿಕದಿಂದ ೧೨ ಅಂಗುಲಪ್ರಮಾಣ ಹೊರಗೆ ಸೂಸಿ ಪುನಃ ಒಳಗೆ ಸೇರುತ್ತದೆ. ಈ ರೀತಿಯ ಸ್ವಾಭಾವಿಕಗತಿಯ ಪ್ರಮಾಣವನ್ನು ಪ್ರಾಣಾಯಾಮ ಬಲದಿಂದ ಕ್ರಮಶಃ ಒಂದು ಎರಡು ಅಂಗುಲದಷ್ಟು ಕಡಿಮೆ ಮಾಡುತ್ತ ಹೋಗಿ, ಕೊನೆಗೆ ಪೂರ್ಣ ನಿರೋಧಿಸಿದಾಗ ಕೇವಲ ನಾಸಿಕದೊಳಗೇ ಎರಡೂ ಸ್ವರ ಸಮವಾಗಿ ಸುಷುಮ್ನಾನಾಡಿಯಲ್ಲಿ ಚಲಿಸತೊಡಗುವವು; ಅದರ ಹೆಸರು 'ಹಠ' ಅದರ ಮೂಲಕ ಮನದ ನಿರೋಧ ಮಾಡುವುದು ಹಠಯೋಗ.

> **ಭವೇದಷ್ಟಾಂಗಮಾರ್ಗೇಣ ಮುದ್ರಾಕರಣಬಂಧನೈಃ ।**
>
> **ತಥಾ ಕೇವಲ ಕುಂಭೇ ವಾ ಹಠಯೋಗೀ ವಶಾನಿಲಃ ॥**

ಯಮನಿಯಮಾದ್ಯಷ್ಟಾಂಗಮಾರ್ಗದಿಂದಲಾದರೂ, ಮಹಾಮುದ್ರಾದಿ ದಶವಿಧಮುದ್ರಾಬಂಧಗಳಿಂದಲಾದರೂ, ಧೌತಿ, ವಸ್ತಿ ಮೊದಲಾದ ಷಟ್‌ಕರ್ಮ ಬಂಧಗಳಿಂದವಾದರೂ ರೇಚಕಪೂರಕಗಳಿಲ್ಲದೆ ಕುಂಭಿಸುವ ಕೇವಲ ಕುಂಭಕದಿಂದಾದರೂ ಪ್ರಾಣವಾಯುವನ್ನು ವಶಮಾಡಿಕೊಳ್ಳುವವನು ಹಠಯೋಗಿಯೆನಿಸುವನು ಎಂದು ಶಿವಯೋಗ ಪ್ರದೀಪಿಕೆ (೧-೭) ಹೇಳುತ್ತದೆ.

ರಾಜಯೋಗ :

ರಾಜಯೋಗದ ಇನ್ನೊಂದು ಹೆಸರು 'ರಾಜಾಧಿರಾಜಯೋಗ'. ನಿತ್ಯಾನಿತ್ಯ ವಸ್ತುವಿವೇಕ, ಇಹ-ಪರಫಲಭೋಗವಿರಾಗ, ಶಮದಮಾದಿ ಷಟ್‌ಸಂಪತ್ತು, ಮುಮುಕ್ಷುತ್ವ, ಶ್ರವಣ, ಮನನ, ನಿದಿಧ್ಯಾಸ, ತತ್ಪದಾರ್ಥ, ತ್ವಂಪದಾರ್ಥಶೋಧ – ಹೀಗೆ ಎಂಟು ಅಂಗಗಳುಳ್ಳ ನಿರ್ವಿಕಲ್ಪಸಮಾಧಿರೂಪದ ರಾಜಯೋಗವು ಹಿಂದೆ ಹೇಳಿದ ಮಂತ್ರ, ಲಯ, ಹಠಯೋಗಗಳಿಗಿಂತ ಶ್ರೇಷ್ಠವಾದುದು. ಈ ಅಂಶವನ್ನು ಚೆನ್ನಸದಾಶಿವಯೋಗಿಗಳು –

ಉತ್ತರೋತ್ತರ ವೈಶಿಷ್ಟ್ಯಾದ್ಯೋಗಾಶ್ಚತ್ವಾರ ಏವ ಹಿ ।
ತೇಷ್ವೇಕ ಏವ ಮುಖ್ಯೋಽಸೌ ರಾಜಯೋಗೋತ್ತಮೋತ್ತಮಃ ॥

ಎಂಬ ಶ್ಲೋಕದ ಮೂಲಕ ಸ್ಪಷ್ಟಪಡಿಸಿದ್ದಾರೆ, ಅಂದರೆ, ಶಬ್ದಾತ್ಮಕವಾದ ಮಂತ್ರಯೋಗಕ್ಕಿಂತ ನಿಶ್ಶಬ್ದಾತ್ಮಕವಾಗಿ ಮನೋಲಯವೆನಿಸಿಕೊಂಡ ಲಯಯೋಗವೇ ವಿಶೇಷವೆನಿಸುವದು. ಆ ಮನೋಲಯವನ್ನೇ ವಾಯುಜಯದಿಂದ ಸುಸ್ಥಿರವಾಗಿಸುವ ಕಾರಣದಿಂದ ಲಯಯೋಗಕ್ಕಿಂತ ಹಠಯೋಗವೇ ವಿಶೇಷವೆನಿಸುವದು. ಆ ಮನೋಮಾರುತಂಗಳನ್ನು ನಿರಾಯಾಸವಾಗಿ ನಿಲ್ಲಿಸಿ ನಿಜವಸ್ತು ಸಾಕ್ಷಾತ್ಕಾರ ಮಾಡುವುದರಿಂದ ಹಠಯೋಗಕ್ಕಿಂತ ರಾಜಯೋಗ ವಿಶೇಷವೆನಿಸಿದೆ. ಈ ರಾಜಯೋಗವು ಸಾಂಖ್ಯ, ತಾರಕ, ಅಮನಸ್ಕವೆಂದು ಮೂರು ವಿಧವಾಗಿರುವದು.

ಪಂಚಭೂತಗಳು ಪಂಚೀಕರಣದಿಂದಾದ ೨೫ ತತ್ತ್ವಗಳ ಜ್ಞಾನವು ಸಾಂಖ್ಯ ಯೋಗವಾಗಿದೆ.

ದೃಷ್ಟಿ, ಮನಸ್ಸು, ಮಾರುತ ಈ ಮೂರನ್ನೂ ಬಹಿರ್ಮುಖವಾಗದಂತೆ ಸ್ಥಿರಗೊಳಿಸುವುದೇ ಬಹಿರ್ಮುದ್ರೆ. ಈ ಮುದ್ರೆಯಿಂದ ಹಿಂದೆ ಹೇಳಿದ ಲಕ್ಷ್ಯತ್ರಯದಲ್ಲಿ ಇಷ್ಟವಸ್ತು ಸಾಕ್ಷಾತ್ಕಾರಮಾಡಿಕೊಳ್ಳುವದೇ ತಾರಕಯೋಗ.

ಅಂತರಂಗದ ಮನವನ್ನು ಸಂಕಲ್ಪವಿಕಲ್ಪಕ್ಕೊಳಗಾಗದಂತೆ ಸ್ಥಿರಗೊಳಿಸುವುದೇ ಅಂತರ್ಮುದ್ರೆ. ಈ ಮುದ್ರೆಯಿಂದ ನಿಜವಸ್ತುಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಅಮನಸ್ಕಯೋಗ.

ಈ ತ್ರಿವಿಧವಾದ ರಾಜಯೋಗಗಳಲ್ಲಿ ತತ್ತ್ವಜ್ಞಾನರೂಪವಾದ ಸಾಂಖ್ಯಯೋಗಕ್ಕಿಂತ ನಾದಬಿಂದುಸಾಕ್ಷಾತ್ಕಾರ ರೂಪವಾದ ತಾರಕಯೋಗ ಶ್ರೇಷ್ಠವಾದುದು, ಇದಕ್ಕಿಂತಲೂ ನಿಜವಸ್ತುಸಾಕ್ಷಾತ್ಕಾರ ರೂಪವಾದ ಅಮನಸ್ಕಯೋಗ ಶ್ರೇಷ್ಠವಾದುದು.

ಚೆನ್ನಸದಾಶಿವಯೋಗಿಗಳು "ನಭೇದಶ್ಶಿವಯೋಗಸ್ಯ ರಾಜಯೋಗಸ್ಯ ತತ್ತ್ವತಃ" ಅಂದರೆ ರಾಜಯೋಗ ಶಿವಯೋಗಗಳಲ್ಲಿ ತತ್ತ್ವತಃ ಭೇದವೇ ಇಲ್ಲವೆಂದು ಹೇಳಿ, ಆಮೇಲೆ ಶಿವಾರ್ಥಿಗಳ ಬುದ್ಧಿಪ್ರವೃದ್ಧಿಗಾಗಿ ಮತ್ತು ಶಿವತತ್ತ್ವಾಭಿವ್ಯಕ್ತಿಯಲ್ಲಿ ಪ್ರೀತರಾದವರಿಗಾಗಿ ಅವೆರಡರ ಭೇದವನ್ನು ಸ್ಪಷ್ಟಪಡಿಸುವುದಾಗಿ ತಿಳಿಸುತ್ತಾರೆ.[೧]

---

೧. ಶಿವಾರ್ಥಿನಾಂ ತಥಾಪ್ಯೇವಮುಕ್ತೋ ಬುದ್ಧೇಃ ಪ್ರವೃದ್ಧಯೇ ।
ಪ್ರತಿಪಾದ್ಯಸ್ತಯೋರ್ಭೇದಸ್ತಥಾ ಶಿವರತಾತ್ಮನಾಂ ।
ತಸ್ಮಾನ್ಮನೀಷಿಭಿರ್ಗ್ರಾಹ್ಯಶ್ಶಿವಯೋಗಸ್ತು ಕೇವಲಃ ॥ (ಶಿ.ಪ್ರ. ೧-೧೭)

ಶಿವಯೋಗ :

ಮಾನವಜೀವನದ ಪರಮಗುರಿಯೆನಿಸಿದ ಲಿಂಗಾಂಗಸಾಮರಸ್ಯವನ್ನು ಸಾಧಿಸಲು ಕಂಡುಹಿಡಿದ ಉಪಾಸನಕ್ರಮವೇ ಶಿವಯೋಗ, ಹಠ, ಲಯ, ಮಂತ್ರ, ರಾಜಯೋಗಗಳು ಕ್ರಮವಾಗಿ ಶರೀರ, ಪ್ರಾಣ, ಬುದ್ಧಿ ಇವುಗಳನ್ನು ಶುದ್ಧೀಕರಿಸಿ ಅವುಗಳ ವಿಕಾಸಕ್ಕೆ ಉಪಾಯವಾಗುತ್ತಿದ್ದರೆ, ಶಿವಯೋಗ ಅವೆಲ್ಲ ಶಕ್ತಿಗಳನ್ನು ವಿಕಾಸಗೊಳಿಸಿ ಲಿಂಗಾಂಗಸಾಮರಸ್ಯಕ್ಕೆ ಅನೂಕೂಲಮಾಡಿಕೊಡುವುದರಿಂದ, ಪೂರ್ಣಯೋಗವೆನಿಸಿಕೊಳ್ಳುತ್ತದೆ.

ನಿಜ ಅರ್ಥದಲ್ಲಿ ಹೇಳುವುದಾದರೆ ಯೋಗದ ಗುರಿ ಕೇವಲ ಸಾಂಸಾರಿಕ ದೇಹಾತ್ಮಭಾವದಿಂದ ಬಿಡುಗಡೆಹೊಂದಿ ಶಿವಭಾವದಲ್ಲುಳಿಯುವದಷ್ಟೇ ಆಗಿರದೆ ಶರೀರ, ಇಂದ್ರಿಯ, ಮನ, ಪ್ರಾಣ, ಬುದ್ಧಿ–ಇವುಗಳಲ್ಲಿ ಆ ಶಿವಭಾವವನ್ನು ಆಹ್ವಾನಿಸಿ ಅವುಗಳನ್ನು ಶಿವಾತ್ಮಕವಾಗಿ ರೂಪಾಂತರಗೊಳಿಸುವದೇ ಆಗಿದೆ. ಇದರಿಂದ ಅಲ್ಪವ್ಯಕ್ತಿತ್ವವು ಅನಲ್ಪವಾದ ಶಿವಸತ್ತೆಯಲ್ಲಿ ಒಂದಾಗಿ, ಭೂಮಾ ಸ್ಥಿತಿಯನ್ನು ಪಡೆದು ಕೃತಕೃತ್ಯವಾಗುತ್ತದೆ. ಅದಕ್ಕಾಗಿ ಶಿವಯೋಗವನ್ನು ಅನುಸರಿಸುವುದು ತೀರ ಸಮುಚಿತವಾಗಿರುತ್ತದೆ.

ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗಗಳನ್ನು ಸಾಧಿಸುವುದು ಸುಲಭವಲ್ಲ. ಒಮ್ಮೊಮ್ಮೆ ಅವು ಸಾಧಕರನ್ನು ಅಪಾಯದ ತಗ್ಗಿನಲ್ಲಿ ಚೆಲ್ಲಿಬಿಡುವ ಸಂಭವವೂ ಇದೆ. ಯೋಗಗಳ ಈ ಅಪಾಯವನ್ನು ಹೋಗಲಾಡಿಸಿ ಸುಲಭವಾಗಿ ಯಾವ ಆತಂಕವೂ ಇಲ್ಲದೆ ತಮ್ಮಿಷ್ಟವನ್ನು ಸಾಧಿಸಿಕೊಳ್ಳ ಬೇಕಾದ ಸುಯೋಗ್ಯಸಾಧನಮಾರ್ಗವೇ ಶಿವಯೋಗವೆಂದು ಅನುಭಾವಿಗಳ ಮತ.

ಯಮನಿಯಮಾದ್ಯಷ್ಟಾಂಗಗಳಲ್ಲಿ, ಯಮ, ನಿಯಮಗಳು ಸದ್ಗುಣ ಸಂಪತ್ತಿಗೆ ಸೇರಿದವುಗಳು, ಅಂತಹ ಗುಣಸಂಪತ್ತಿಯು ಲಿಂಗಾಯತ ಪರವಾದ ಲಿಂಗಾಚಾರ, ಸದಾಚಾರ, ಶಿವಾಚಾರ, ಭೃತ್ಯಾಚಾರ, ಗಣಾಚಾರ ಎಂಬ ಐದು ಆಚರಣೆಗಳಿಂದ ಸಂಭವಿಸುವ ನಿಮಿತ್ತ ಪ್ರತ್ಯೇಕವಾಗಿ ಯಮ–ನಿಯಮಗಳನ್ನು ಶಿವಯೋಗದಲ್ಲಿ ಮನ್ನಿಸುವ ಅವಶ್ಯಕತೆಯಿಲ್ಲ. ದೇಹಕ್ಕೆ ಸ್ಥಿರತೆಯನ್ನೊದಗಿಸುವ ಆಸನ. ವಾಯುವಿಗೆ ಸ್ಥಿರತೆಯನ್ನೊದಗಿಸುವ ಪ್ರಾಣಾಯಾಮ, ಇವು ಇಷ್ಟಲಿಂಗಕ್ಕೆ ಸಂಬಂಧಿಸಿದ ದೃಷ್ಟಿಯೋಗದಿಂದಲೇ ಸಂಭವಿಸುವುದರಿಂದ ಆಸನ–ಪ್ರಾಣಾಯಾಮಗಳನ್ನು ಪ್ರತ್ಯೇಕವಾಗಿ ಮನ್ನಿಸುವ ಅವಶ್ಯಕತೆ ಇಲ್ಲ. ಇದು ರೀತಿ ಇಂದ್ರಿಯಗಳನ್ನು ಹಿಂದಿರುಗಿಸುವ ಪ್ರತ್ಯಾಹಾರವು ಪ್ರಸಾದಿಸ್ಥಲದಲ್ಲಿ ಬೇಕಾಗದಿರುವುದರಿಂದ – ಅಂದರೆ ಇಂದ್ರಿಯಗಳು ವಿಷಯಗಳನ್ನು ಪದಾರ್ಥರೂಪದಿಂದ ಗ್ರಹಿಸದೆ, ಪ್ರಸಾದರೂಪದಿಂದ ಗ್ರಹಿಸುವ ಕಾರಣ– ಪ್ರತ್ಯಾಹಾರವನ್ನೂ ಪಾಲಿಸುವ ಅವಶ್ಯಕತೆಯಿಲ್ಲ. ಇನ್ನುಳಿದ ಧಾರಣಾ, ಧ್ಯಾನ, ಸಮಾಧಿಗಳು, ವೀರಶೈವದಲ್ಲಿ ಇಷ್ಟಲಿಂಗಧಾರಣ, ಪ್ರಾಣಲಿಂಗಧ್ಯಾನ, ಭಾವಲಿಂಗಸಮಾಧಿರೂಪದಲ್ಲಿ ಆಚರಿಸಲ್ಪಡುತ್ತವೆ. ಹೀಗೆ ಅಷ್ಟಾಂಗಯೋಗದ ಎಂಟೂ ಅಂಗಗಳು ಶಿವಯೋಗದಲ್ಲಿ ಪರ್ಯಾಯವಾಗಿ ಸಮಾವೇಶವಾಗುತ್ತವೆ. ಶಿವಯೋಗಸ್ವರೂಪವನ್ನು ಕುರಿತು ಚೆನ್ನಸದಾಶಿವಯೋಗಿಗಳು–

ಜ್ಞಾನಂ ಶಿವಮಯಂ ಭಕ್ತಿಶೈವೀ ಧ್ಯಾನಂ ಶಿವಾತ್ಮಕಂ।
ಶೈವವ್ರತಂ ಶಿವಾರ್ಚೇತಿ ಶಿವಯೋಗೋ ಹಿ ಪಂಚಧಾ॥

ಅಂದರೆ, ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ, ಶಿವಾರ್ಚನೆ–ಹೀಗೆ ಶಿವಯೋಗವು ಐದು ಪ್ರಕಾರವಾಗಿದೆಯೆಂದು ಹೇಳುತ್ತಾರೆ.

ಶಿವಜ್ಞಾನ : ಲಿಂಗಾಂಗಸಾಮರಸ್ಯ ಸಾಧಕವಾದ ಷಟ್‌ಸ್ಥಲಾಚರಣೆಯಲ್ಲಿದ್ದವರಿಗೆ ಜಗತ್ತು ಮಿಥ್ಯೆ, ದುಃಖಮಯವೆಂದು ತಿಳಿಯುವುದಾಗಲೀ ಭೋಗವನ್ನು ತ್ಯಜಿಸುವುದಾಗಲೀ ಸಲ್ಲದು. ಗುರುಕರುಣೆ ಪಡೆದು ಶಿವದೀಕ್ಷೆಯಿಂದ ದೈವಿಕ ಪುನರ್ಜನ್ಮ ತಾಳಿದ ತರುವಾಯ, ಲೌಕಿಕವೃತ್ತಿಗಳಿಗೆಲ್ಲ ಶುದ್ಧಕಾಯಕಸ್ವರೂಪ ಕೊಟ್ಟು, ಅದರಿಂದ ಲಬ್ಧವಾದುದನ್ನು ಲಿಂಗಕರ್ಪಿಸಿ, ಆ ಲಿಂಗಪ್ರಸಾದವನ್ನು ಭೋಗಿಸುವವರಿಗೆ ಬಂಧನವೆಂಬುದೇ ಇರುವುದಿಲ್ಲ. ಅವರ ಜೀವನ ಶಿವಮಯ ಪ್ರಸಾದಮಯವಾಗುವುದು. ಇದೇ ಶಿವಯೋಗಕ್ಕೆ ಸಂಬಂಧಿಸಿದ ಜ್ಞಾನ.

ಶಿವಭಕ್ತಿ : ಷಟ್‌ಸ್ಥಲಸಿದ್ಧಾಂತದ ಪ್ರಕಾರ ಸ್ಥಲಪದವಾಚ್ಯನಾದ ಪರಶಿವನು ಸ್ವವಿಮರ್ಶಾತ್ಮಕಶಕ್ತಿಯುತನಾಗಿರುವನು. ಅವನು ಸ್ವಲೀಲಾವಿನೋದದಿಂದ ಅಂಗ–ಲಿಂಗವೆಂಬ ದ್ವಿವಿಧರೂಪ ತಾಳುವನು. ಇವುಗಳಲ್ಲಿ ಲಿಂಗಗತ ಶಕ್ತಿಯು ಕಲೆ, ಅಂಗಗತ ಶಕ್ತಿಯು ಭಕ್ತಿ. ಇಲ್ಲಿ ಅಂಗನೆಂದರೆ ದೀಕ್ಷೆಯಿಂದ ಸುಸಂಸ್ಕೃತನಾದ ಜೀವನು. ಇಂಥ ಶುದ್ಧಾತ್ಮನ ಶಕ್ತಿಯೇ ಭಕ್ತಿ. ಲಿಂಗಗತ ಶಕ್ತಿಯು ಅಧೋಮುಖವಾಗಿ ಸೃಷ್ಟಿಯನ್ನು ನಿರ್ಮಿಸುವುದಾಗಿದ್ದರೆ, ಅಂಗಗತ ಭಕ್ತಿಯು ಊರ್ಧ್ವಮುಖವಾಗಿ ಸೃಷ್ಟಿಯನ್ನು ಲಯುಗೊಳಿಸುವುದಾಗಿದೆ. ನಿಜವಾಗಿಯೂ ಷಟ್ ಸ್ಥಲಾಚರಣೆಯಲ್ಲಿರುವ ಭಕ್ತಿಯ ಪುರುಷಾರ್ಥಸಾಧನ ಭಕ್ತಿಯಾಗಿರದೆ ಸ್ವಯಂಪುರುಷಾರ್ಥರೂಪವಾಗಿದೆ.

ಇದೇ ಮೊದಲು ಶಿವನಿಂದ ಆತ್ಮನನ್ನು ಬೇರ್ಪಡಿಸಿ, ಶಿವನನ್ನು ಉಪಾಸ್ಯನನ್ನಾಗಿಯೂ ಆತ್ಮನನ್ನು ಉಪಾಸಕನನ್ನಾಗಿಯೂ ಮಾಡಿ, ಕೊನೆಗೆ ಶಿವಜೀವನ ಐಕ್ಯವನ್ನುಂಟು ಮಾಡುತ್ತದೆ. ಇಂತಹ ಶಿವಾದ್ವೈತಭಕ್ತಿಯನ್ನೇ ಲಿಂಗಾಂಗ ಯೋಗಿಯು ಆಶ್ರಯಿಸಬೇಕಾಗುವುದು. ಈ ಭಕ್ತಿಯೇ ಷಟ್‌ಸ್ಥಲಗಳಲ್ಲಿ ಕ್ರಮೇಣ ಶ್ರದ್ಧಾ, ನಿಷ್ಠಾ, ಅವಧಾನ, ಅನುಧಾನ, ಅನುಭಾವ, ಆನಂದರೂಪವನ್ನು ತಾಳುತ್ತ ಕೊನೆಗೆ ಐಕ್ಯಸ್ಥಲದಲ್ಲಿ ಸಮರಸಭಕ್ತಿರೂಪವನ್ನು ಹೊಂದುತ್ತದೆ. ಇದೇ ಲಿಂಗಾಂಗಯೋಗಕ್ಕೆ ಸಂಬಂಧಿಸಿದ ಭಕ್ತಿಸ್ವರೂಪ.

ಶಿವಧ್ಯಾನ : ಶ್ರೀಗುರುವು ಅಂತರಂಗದಲ್ಲಿದ್ದ ಚಿತ್‌ಕಲೆಯನ್ನೇ ಹೊರದೆಗೆದು, ಅದಕ್ಕೆ ಶಿವಸ್ವರೂಪವನ್ನುಂಟುಮಾಡಿ ಕರಸ್ಥಲಕ್ಕೆ ತಂದುಕೊಡುವನು. ಅಂತಹ ಕರಸ್ಥಲದ ಲಿಂಗವನ್ನು ಆಧಾರಾದಿಸ್ಥಾನಗಳಲ್ಲಿ ಆಹ್ವಾನ ವಿಸರ್ಜನೆಗಳಿಲ್ಲದೆ ಚಿತ್ತೇಕಾಗ್ರತೆಯಿಂದ ಚಿಂತಿಸುವುದೇ ಧ್ಯಾನ. ಲಿಂಗಾಂಗಯೋಗಮಾರ್ಗದಲ್ಲಿ ಪ್ರಗತಿಯನ್ನು ಸಾಧಿಸಿ ಆತ್ಮಾರಾಮಸ್ಥಿತಿಗೇರಲು ಪರಮಕಾರಣವಾದುದು ಧ್ಯಾನವೇ. ಅಂತೆಯೇ "ಸ್ವಾತ್ಮಾರಾಮಸ್ಸಭವತಿ ಸಖೇ ಧ್ಯಾನಮಾರ್ಗೈಕನಿಷ್ಠಃ" ಎಂದು ಗ್ರಂಥಕಾರನು ಉದ್ಘೋಷಿಸಿರುವನು.

ಶಿವವ್ರತ: ಅಂಗನು ಲಿಂಗದಲ್ಲಿ ಸಮರಸಭಾವವನ್ನು ಪಡೆಯಲು ಅನುಸರಿಸಬೇಕಾದ ಲಿಂಗಾಂಗಯೋಗ ಮಾರ್ಗದಲ್ಲಿ ಅಂಗನ ಶಕ್ತಿಯಾಗಿರುವ ಭಕ್ತಿಯು ಬೀಜರೂಪವಾಗಿರುವುದು. ಅದು ಅಂಕುರಿಸಿ, ಪಲ್ಲವಿಸಿ, ಪುಷ್ಪಿಸಿ, ಫಲಿತವಾಗಲು ಶಿವವ್ರತ ಅತ್ಯವಶ್ಯವಾದುದು. ಈ ವ್ರತದ ಪ್ರಭಾವದಿಂದ ಬುದ್ಧಿಯು ಪರಿಶುದ್ಧವಾಗಿ ಸಾಧಕನ ಸಂಕಲ್ಪಶಕ್ತಿಯು ಪ್ರವೃದ್ಧವಾಗುವುದು. ನಿರುಕ್ತದಲ್ಲಿ 'ಅಭೀಷ್ಟ ಕಾರ್ಯಸಾಧನೆಯಲ್ಲಿ ಪ್ರವೃತ್ತವಾಗುವ ಸಂಕಲ್ಪವೇ ವ್ರತ" ಎಂದು ಹೇಳಲಾಗಿದೆ. ಸಾಮರಸ್ಯಕ್ಕಾಗಿ ಅಂಗನಿಗೆ ಲಿಂಗದ ಹೊರತು ಮತ್ತಾವುದೂ ಆರಾಧ್ಯವಾದುದಿಲ್ಲವೆಂಬ ದೃಢಭಾವವರ್ತನವೇ ವ್ರತವೆನಿಸುವದು.

ಶಿವಾರ್ಚನ : ಮೇಲೆ ಹೇಳಿದವುಗಳಿಂದ ಮುಖ್ಯವಾದುದು ಶಿವಾರ್ಚನೆ. ಈ ಶಿವಾರ್ಚನೆಯು ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತಗಳಿಂದ ಕೂಡಿಕೊಂಡಿರುತ್ತದೆ.

ಶಿವಾರ್ಚನೆಯು ಅಂತಃಪೂಜಾ, ಬಹಿಃಪೂಜಾ ಎಂದು ಎರಡು ವಿಧವಾಗಿರುವುದು. ಇವೆರಡರಲ್ಲಿ ಅಂತಃಪೂಜೆಯೇ ಮುಖ್ಯ. ಅದು ಬಾಹ್ಯಪೂಜೆಯ ಸಾಪೇಕ್ಷವುಳ್ಳದ್ದು. ಅದಕ್ಕಾಗಿ ಬಾಹ್ಯ ಇಷ್ಟಲಿಂಗಪೂಜೆಯನ್ನೇ ಆಂತರಿಕ ಲಿಂಗಪೂಜೆಗೆ ಆಧಾರವೆಂದು ಗಣಿಸಲಾಗಿದೆ. ಭಾವ, ಪ್ರಾಣಗಳಲ್ಲಿ ಲಿಂಗವಿರುವುದರಿಂದ ಹೊರಗೆ ಇಷ್ಟಲಿಂಗದ ಅವಶ್ಯಕತೆ ಏನೆಂದು ಕೆಲವರು ಎತ್ತುವ ಆಕ್ಷೇಪಕ್ಕೆ ಪ್ರಭುದೇವರು ಮತತು ಸಿದ್ಧಲಿಂಗ ಶಿವಯೋಗಿಗಳು–

"ಕಾಯದ ಕರಸ್ಥಲಕ್ಕೆ ಇಷ್ಟಲಿಂಗಸಾಹಿತ್ಯವಿಲ್ಲದಿದ್ದರೆ
ನಿರವಯವಾದ ಜ್ಞಾನಯೋಗದ ಕೂಟ ಸಾಧ್ಯವಾಗದು
ಇದು ಕಾರಣ ಕ್ರಿಯಾಲಿಂಗ ಸಂಬಂಧವೆ ಭಕ್ತರಿಗೆ ಮತವು
ಇದೇ ದೇಹ ಶೌಚವು ...."

"ಭಾವಮನಕ್ಕೆ ಲಿಂಗವ ಧರಿಸಿ ಕಾಯಕ್ಕೆ ಲಿಂಗವಿಲ್ಲದಿರಬಹುದೆ?
ಎರಡಂಗ ಭಕ್ತರಾಗಿ ಒಂದಂಗ ಭವಿಯಾಗಿದ್ದ ಭ್ರಾಂತರ ಮುಖವ ನೋಡಲಾಗದು.
ತನಮನ ಭಾವದಲ್ಲಿ ಲಿಂಗದ ಧರಿಸಿ
ಅಚಲಿತನಾಗಿರ್ದೆನಯ್ಯಾ ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೆ".

ಎಂದು ಇಷ್ಟಲಿಂಗದ ಮಹತಿಯುನ್ನು ಎತ್ತಿ ಹಿಡಿದಿರುವರು. ಅಷ್ಟವಿಧಾರ್ಚನೆ ಷೋಡಶೋಪಚಾರಗಳನ್ನೊಳಗೊಂಡ ಪೂಜೆಯೇ ಇಷ್ಟಲಿಂಗಪೂಜೆ, ಲಿಂಗವನ್ನು ಮನಸ್ಸಿನಲ್ಲಿ ಧ್ಯಾನಿಸುವುದೇ ಪ್ರಾಣಲಿಂಗ ಪೂಜೆ, ಧ್ಯಾನದಲ್ಲಿ ಮನಮಗ್ನವಾಗುವುದೇ ಭಾವಲಿಂಗ ಪೂಜೆ. ಇವುಗಳಲ್ಲಿ ಇಷ್ಟಲಿಂಗಪೂಜೆಯು ಭಕ್ತಸ್ಥಲ–ಮಹೇಶಸ್ಥಲಗಳಲ್ಲಿ, ಪ್ರಾಣಲಿಂಗಪೂಜೆಯು ಪ್ರಸಾದಿಸ್ಥಲ–ಪ್ರಾಣಲಿಂಗಿಸ್ಥಲಗಳಲ್ಲಿ, ಭಾವಲಿಂಗಪೂಜೆಯು ಶರಣಸ್ಥಲ–ಐಕ್ಯಸ್ಥಲಗಳಲ್ಲಿ ಸಮಾವೇಶವಾಗುವುದರಿಂದ ಷಟ್ಸ್ಥಲಾಚರಣೆಯೇ ಶಿವಯೋಗವೆನಿಸುತ್ತದೆ.

೩. ಯೋಗಾಂಗಗಳು

"ಯಮನಿಯಮಾಸನಪ್ರಾಣಾಯಾಮಪ್ರತ್ಯಾಹಾರಧಾರಣಾಧ್ಯಾನಸಮಾಧಿಯೋಽಷ್ಟಾಂಗಾನಿ" ಅಂದರೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ – ಇವು ಎಂಟು ಯೋಗದ ಅಂಗಗಳು, ಮಂತ್ರಾದಿ ಶಿವಯೋಗ ಪರ್ಯಂತವಾದ ಯೋಗಸಾಧಕನ ಈ ಎಂಟು ಪರಿಕರಗಳಲ್ಲಿ ಮೊದಲಿನ ಐದು ಬಹಿರಂಗಕ್ಕೆ, ಕೊನೆಯ ಮೂರು ಅಂತರಂಗಕ್ಕೆ ಸಂಬಂಧಿಸಿದುವು.

ಯಮ :

ಅನುಚಿತ ಕಾರ್ಯಗಳಿಂದ ದೂರಿರುವುದೇ 'ಯಮ'. ಸಾಮಾನ್ಯ ಮನುಷ್ಯನು ಕೂಡ ಹೊಲಸು ತುಂಬಿದ ಸ್ಥಾನದಲ್ಲಿ ಕುಳಿತುಕೊಳ್ಳಲಾರ. ಕುಳಿತುಕೊಳ್ಳುವ ಪ್ರಸಂಗಬಂದರೆ ಆ ಸ್ಥಾನವನ್ನು ಸ್ವಚ್ಛಗೊಳಿಸುವನು. ಹೀಗಿರುವಾಗ, ದೇಹ ದೇವಾಲಯದ ಗರ್ಭಗುಡಿಯೆನಿಸಿದ ಹೃದಯವು ನೆಲಸಲು ಯೋಗ್ಯವಾಗುವಂತೆ ಪರಿಶುದ್ಧವಾದರೆ ಮಾತ್ರ ಶಿವನು ನೆಲಸಬಲ್ಲನು. ಈ ಶುದ್ಧಿಗೆ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹಗಳೆಂಬ ಯಮಪಂಚಕದ ಅನುಸರಣೆ ಅವಶ್ಯವಾದುದು. ಇದನ್ನೇ ಪತಂಜಲಿಮಹರ್ಷಿಗಳು "ಅಹಿಂಸಾಸತ್ಯಾಸ್ಥೇಯ ಬ್ರಹ್ಮಚರ್ಯಾಪರಿಗ್ರಹಣ ಯಮಾಃ" ಎಂದು ಹೇಳಿದ್ದಾರೆ.

ನಿಯಮ :

ಅನುಚಿತಕಾರ್ಯಗಳಿಂದ ನಿವೃತ್ತನಾಗುವುದು 'ಯಮ'ವಾದರೆ, ಉಚಿತ ಕಾರ್ಯಗಳಲ್ಲಿ ಪ್ರವೃತ್ತನಾಗುವುದು 'ನಿಯಮ'. ಯೋಗಸಾಧಕನು 'ಯಮ'ವನ್ನು ಸಾಧಿಸಿದ ತರುವಾಯ ಈ 'ನಿಯಮ' ವನ್ನು ಪಾಲಿಸಬೇಕಾಗುತ್ತದೆ. ನಿಯಮವೆನ್ನವುದು ಶೌಚ, ಸಂತೋಷ, ತಪ, ಸ್ವಾಧ್ಯಾಯ ಹಾಗೂ ಈಶ್ವರಶರಣಾಗತಿ ಎಂಬ ಐದು ಅಂಗಗಳಿಂದ ಕೂಡಿದೆ. ಪತಂಜಲಿಮಹರ್ಷಿಗಳು ಇದನ್ನೇ "ಶೌಚ ಸಂತೋಷತಪಃಸ್ವಾಧ್ಯಾಯೇಶ್ವರಪ್ರಣಿಧಾನಾನಿ ನಿಯಮಾಃ" ಎಂದು ಹೇಳಿರುವರು.

ಆಸನ :

ಸ್ವಸ್ಥಶರೀರದಲ್ಲಿ ಸ್ವಸ್ಥ ಮನಸ್ಸು ಎಂಬ ಸಿದ್ಧಾಂತ ಸರ್ವಮಾನ್ಯವಾದುದು. ಅದನ್ನು ಸಾಧಿಸುವುದಕ್ಕಾಗಿಯೇ ಆಸನಗಳ ಆವಶ್ಯಕತೆಯುಂಟು. ಆ ಆ ಆಸನಗಳಿಂದ ಶರೀರದ ಅಂಗಪ್ರತ್ಯಂಗಗಳಲ್ಲಿ ಶಕ್ತಿಸಂಚಾರವಾಗಿ ಚಿರಕಾಲದವರೆಗೆ ನಿಶ್ಚಲಸ್ಥಿತಿಯಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶದೊರೆಯುತ್ತದೆ. "ಸ್ಥಿರಸುಖಮಾಸನಂ" ಅಂದರೆ ಸುಖಪೂರ್ವಕವಾಗಿ ಕುಳಿತುಕೊಳ್ಳುವುದೇ ಆಸನವೆನಿಸುವದು. ಯೋಗಶಾಸ್ತ್ರದಲ್ಲಿ ಈ ಆಸನಗಳ ಸಂಖ್ಯೆ ಜೀವಿಗಳ ಸಂಖ್ಯೆಯಷ್ಟು, ಅಂದರೆ ೮೪ ಲಕ್ಷ. ಅವುಗಳಲ್ಲಿ ೮೪ ಆಸನಗಳನ್ನು, ಅದರಲ್ಲಿಯೂ ೪ ಆಸನಗಳನ್ನು ಮುಖ್ಯವಾಗಿ ಮನ್ನಿಸಲಾಗಿದೆ. ಅವು ಸಿಂಹ, ಭದ್ರ, ಪದ್ಮ, ಸಿದ್ಧ. ಇವುಗಳಲ್ಲಿ ಸಿದ್ಧಾಸನಕ್ಕೆ ಬಹಳ ಮಹತ್ವವುಂಟು.

ಪ್ರಾಣಾಯಾಮ :

ಪ್ರಾಣವಾಯುವಿಗೂ ಮನಸ್ಸಿಗೂ ಅತ್ಯಂತ ನಿಕಟಸಂಬಂಧವಿದೆ. ಮನದ ಚಲನೆಯು ಶ್ವಾಸದ ಚಲನೆಯನ್ನೇ ಅವಲಂಬಿಸಿದ್ದು, ಶ್ವಾಸವನ್ನು ಬಂಧಿಸಿದರೆ ಚಿತ್ತವನ್ನು ಬಂಧಿಸಲು ಅನುಕೂಲವಾಗುವುದಲ್ಲದೆ ಅದರಲ್ಲಿರುವ ದೋಷಗಳನ್ನು ಹೊರಗೆ ಹಾಕಲು ಸಾಧ್ಯವಾಗುವುದು.

ಇಂದ್ರಿಯಗಳೆಲ್ಲವೂ ಪ್ರಾಣದ ಅಧೀನವಾಗಿರುವವು. ಪ್ರಾಣಾಯಾಮಾಭ್ಯಾಸದ ಪರಿಣಾಮವಾಗಿ ಎಲ್ಲ ಇಂದ್ರಿಯಗಳ ಮೇಲೆ ಪ್ರಭುತ್ವವನ್ನು ಸ್ಥಾಪಿಸಬಹುದು. ಪ್ರಾಣಾಯಾಮವು ಶರೀರದ ಒಳಗೆ ಪ್ರವೇಶವಾಗುವುದಕ್ಕೆ 'ಶ್ವಾಸ'ವೆಂದೂ, ಹೊರಗೆ ಬರುವುದಕ್ಕೆ 'ಪ್ರಶ್ವಾಸ'ವೆಂದೂ ಹೆಸರು. ಈ ಎರಡೂ ಗತಿಗಳನ್ನು ತಡೆಯುವುದೇ 'ಪ್ರಾಣಾಯಾಮ.' ಇದನ್ನೇ ಪತಂಜಲಿಮಹರ್ಷಿಗಳು "ತಸ್ಮಿನ್ ಸತಿ ಶ್ವಾಸಪ್ರಶ್ವಾಸಯೋರ್ಗತಿವಿಚ್ಛೇದಃ ಪ್ರಾಣಾಯಾಮಃ" ಎಂದು ಹೇಳಿರುವರು.

ಪ್ರಾಣಾಯಾಮದ ಅಭ್ಯಾಸ ಮಾಡುವಲ್ಲಿ ಅದರೊಡನೆ ಮಂತ್ರಸಂಬಂಧ ಮಾಡಬೇಕು. ಪ್ರಾಣಾಯಾಮಾಭ್ಯಾಸದಿಂದ ತನ್ನ ಆವರಣವನ್ನು ಕ್ಷೀಣಿಸಿಕೊಂಡು ಜ್ಞಾನವು ಸೂರ್ಯನಂತೆ ಪ್ರಕಾಶಿಸುತ್ತದೆ.

ಪ್ರತ್ಯಾಹಾರ : ಇಂದ್ರಿಯಗಳ ಬಾಹ್ಯಪ್ರವೃತ್ತಿಯನ್ನು ತಡೆದು ನಿಲ್ಲಿಸಿ, ಮನದಲ್ಲಿ ಲೀನಮಾಡುವ ಅಭ್ಯಾಸವೇ "ಪ್ರತ್ಯಾಹಾರ." ಇಂದ್ರಿಯಗಳು ಮನಸ್ಸನ್ನು ಬಿಟ್ಟುಕೊಟ್ಟು ಹೊರಗೆ ಹೋದಲ್ಲಿ ಅವುಗಳಿಗೆ ಯಾವ ಪ್ರಯೋಜನವೂ ಸಿದ್ಧಿಸುವದಿಲ್ಲ. ಅಂತೆಯೇ ಅವು ಸದಾ ಮನಸ್ಸನ್ನು ಕೂಡಿಕೊಂಡೇ ವಿಷಯದತ್ತ ಸಾಗಿ ತಮ್ಮ ಧ್ಯೇಯವನ್ನು ಸಾಧಿಸಿಕೊಳ್ಳುತ್ತವೆ. ಅಂತಹ ಮನಸ್ಸನ್ನೇ ಬಿಗಿಹಿಡಿದು ಬಿಟ್ಟರೆ ಇಂದ್ರಿಯಗಳಿಗೆ ಹೊರಗೆ ಹೋಗಲು ಅವಕಾಶವೇ ದೊರೆಯದೆ, ಅವು ಮನದಲ್ಲಿ ಲೀನವಾಗುವುದರಿಂದ ಕಾಯಾದಿವೈರಿಗಳ ಜಯವು ಸಾಧ್ಯವಾಗುತ್ತದೆ.

ಧಾರಣಾ : ಸಂಸಾರವೆಂದರೆ ಸದಾ ವಿಷಯಗಳಲ್ಲಿ ಚಲಿಸುವ ಚಿತ್ತರೂಪವೇ ಆಗಿದೆ. ಅಂತಹ ಚಪಲಚಿತ್ತಕ್ಕೆ ವಿಷಯಗಳ ಆಶ್ರಯ ತಪ್ಪಿಸಿ, ಅದಕ್ಕೊಂದು ಉತ್ತಮ ಆಶ್ರಯವನ್ನು ಕಲ್ಪಿಸಿಕೊಟ್ಟು, ಅದನ್ನು ಶುದ್ಧಗೊಳಿಸುವುದು ಸಾಧಕನ ಸಾಧನೆಗಳಲ್ಲಿ ಒಂದು. ಅದಕ್ಕಾಗಿ ಸಾಧಕನು ತನಗಿಷ್ಟವೆನಿಸಿದ ದೇವತೆಯಲ್ಲಿ ಮನಸ್ಸನ್ನು ಸ್ಥಾಪಿಸಬೇಕಾಗುವುದು. ಅದೇ 'ಧಾರಣಾ'. ಶಿವಯೋಗಸಾಧಕನು ಮಾತ್ರ ಸ್ವಸ್ವರೂಪಭೂತ ಇಷ್ಟಲಿಂಗತತ್ತ್ವದಲ್ಲಿ ಮನವನ್ನು ಸ್ಥಾಪಿಸಿ ತನ್ನ ಗುರಿಯನ್ನು ಮುಟ್ಟಬೇಕಾಗುವುದು. ಪತಂಜಲಿಮಹರ್ಷಿಗಳು "ದೇಶಬಂಧಶ್ಚಿತ್ತಸ್ಯ ಧಾರಣಾ" ಎಂದು ಈ ಅಂಗವನ್ನು ವ್ಯಾಖ್ಯಾನಿಸಿದ್ದಾರೆ.

ಧ್ಯಾನ : ಮನಸ್ಸು ಅನೇಕ ವಸ್ತುಗಳನ್ನು ಆಶ್ರಯಿಸಿ ಅವುಗಳ ಆಕೃತಿಯನ್ನು ಹೊಂದುವುದು 'ವೃತ್ತಿ' ಎನಿಸಿಕೊಳ್ಳುತ್ತದೆ. ಈ ಮೇರೆಗೆ ಮನಸ್ಸು ಆ ಆ ವಿಷಯಗಳಿಗನುಗುಣವಾಗಿ ಆ ಆ ವೃತ್ತಿಗಳನ್ನು ಪಡೆಯುತ್ತದೆ. ಸಂಸಾರದ ದುಃಖಗಳಿಗೆ ಮೂಲವಾದ ಈ ಬೇರೆ ಬೇರೆ 'ವೃತ್ತಿ'ಗಳನ್ನು ವಿರೋಧಿಸಿ, ಮನಸ್ಸು ತನ್ನ ಇಷ್ಟವಾದ ಧ್ಯೇಯದ 'ವೃತ್ತಿ'ಯನ್ನು ಪಡೆದು ಪ್ರವಹಿಸುವುದೇ ಧ್ಯಾನ. ಇದನ್ನೇ ಪತಂಜಲಿ ಋಷಿಗಳು "ತತ್ರ ಪ್ರತ್ಯಯೇಕತಾನತಾ ಧ್ಯಾನಮ್" ಎಂದು ಹೇಳಿದ್ದಾರೆ.

ಸಮಾಧಿ : ಚಿತ್ತವು ಧ್ಯೇಯವಸ್ತುವಿನ ಧ್ಯಾನಮಾಡುತ್ತ ಅದರಲ್ಲಿಯೇ ತನ್ಮಯವಾಗುವುದು, ಅಂದರೆ ನಿಜಸ್ವರೂಪದ ಅರಿವಿನಲ್ಲಿ ಉಳಿಯುವುದು 'ಸಮಾಧಿ' ಯೆನಿಸುತ್ತದೆ. ಯಾವುದಾದರೊಂದು ಧ್ಯೇಯದಲ್ಲಿ ಧಾರಣಾ, ಧ್ಯಾನ ಹಾಗೂ ಸಮಾಧಿ ಈ ಮೂರು ಇರುವುದಾದರೆ ಅದು 'ಸಂಯಮ' ಎನಿಸುತ್ತದೆ.

ಮನೆಯ ಭದ್ರತೆಯು ಅದರ ತಳಹದಿಯನ್ನು ಅಪೇಕ್ಷಿಸುವಂತೆ ಯೋಗ ಸಿದ್ಧಿಯು ಅಷ್ಟಾಂಗಗಳನ್ನು ಅಪೇಕ್ಷಿಸುತ್ತದೆ. ಈ ಎಂಟು ಅಂಗಗಳಲ್ಲಿ ಮೊದಲಿನ ಯಮ, ನಿಯಮಗಳ ಪಾಲನೆ ನಾಸ್ತಿಕರಿಗೂ ಕೂಡ ಅಗತ್ಯವಾಗಿದೆ. ಏಕೆಂದರೆ ದುರಾಚಾರ ದುರ್ಗುಣಗಳು ಅಳಿಯದ ಹೊರತು ಯಾವ ಸಾಧಕನೂ ತನ್ನ ಸಾಧನಪಥದಲ್ಲಿ ಪ್ರಗತಿಸಾಧಿಸಿ ಸಿದ್ಧಿಪಡೆಯಲಾರನು.

ಒಟ್ಟಿನಲ್ಲಿ ಅಷ್ಟಾಂಗಯೋಗಗಳ ಅಭ್ಯಾಸದಿಂದ ಶಾರೀರಿಕ, ಮಾನಸಿಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ಉನ್ನತಿ ಸಾಧ್ಯವಾಗಿ ಅವಿದ್ಯೆಯು ನಷ್ಟವಾದಂತೆ, ಆ ಅವಿದ್ಯಾಜನಿತ ಮೋಹವು ಪರಿಹಾರವಾಗಿ ನಿತ್ಯಾನಂದದ ಅನುಭವವುಂಟಾಗುತ್ತದೆ.

೪. ಶಿವಯೋಗಪ್ರದೀಪಿಕೆ

ಕರ್ತೃ :

ಲೋಕೋತ್ತರ ಕೃತಿಗಳು ನಿರ್ಮಿಸಿದರೂ ಅಲ್ಲಿ ತಮ್ಮ ಹೆಸರನ್ನು ಸಹ ಹೇಳದೆ ಸಮರ್ಪಣಭಾವದ ಕವಿಗಳು ಭಾರತೀಯ ಸಾಹಿತ್ಯದಲ್ಲಿ ಆಗಾಗ ಕಂಡುಬರುತ್ತಾರೆ. ಇವರಲ್ಲಿ ಶಿವಯೋಗಪ್ರದೀಪಿಕೆ ಕರ್ತೃವೂ ಒಬ್ಬ. ಶಿವಯೋಗದಂತಹ ಮಹತ್ವಪೂರ್ಣ ವಿಷಯವನ್ನೊಳಗೊಂಡ ಪ್ರಮಾಣಭೂತ ಕೃತಿಯನ್ನು ಬರೆದ ಈ ಕವಿ "ವಿವರಿಸುವೊಡೀ ಲೀಲೆಯನು ಹೇಳುವನು ದಿಟ ನಾನಲ್ಲ" ಎಂಬ ಚಾಮರಸನಂತೆ ಶಿವಯೋಗಪ್ರದೀಪಿಕೆಯ ಯಾವ ಮೂಲೆಯಲ್ಲಿಯೂ ತನ್ನ ಹೆಸರನ್ನು ಹೇಳಿಕೊಂಡಿಲ್ಲ. ಇಂಥ ಪರಿಸ್ಥಿತಿಯಲ್ಲಿ ಪ್ರಸ್ತುತ 'ಶಿವಯೋಗ ಪ್ರದೀಪಿಕೆ', ಕನ್ನಡ 'ಪಾರಮಾರ್ಥ ಪ್ರಕಾಶಿಕೆ', 'ಶಿವಯೋಗ ಪ್ರದೀಪಿಕೆಯ ಕನ್ನಡ ಟೀಕೆ' ಮತ್ತು ತೆಲಗು 'ಶಿವಯೋಗಸಾರಮು'–ಈ ನಾಲ್ಕು ಗ್ರಂಥಗಳ ಸಹಾಯದಿಂದ ಶಿವಯೋಗ ಪ್ರದೀಪಿಕೆಯ ಕರ್ತೃಚರಿತ್ರೆಯನ್ನು ನಿರೂಪಿಸಬಹುದಾಗಿದೆ.

ಶಿವಯೋಗಪ್ರದೀಪಿಕೆಯಲ್ಲಿ ಬರುವ "ಗುರುಸದಾಶಿವಲಿಂಗಮಹಂ ಭಜೇ." "ಗುರುಸದಾಶಿವಯೋಗನಾಥಂ ಲಿಂಗಸ್ವರೂಪಮಹಮನ್ವಹಮಾಶ್ರಯಾಮಿ" ಎಂಬ ಮಾತುಗಳಿಂದ ಶಿವಯೋಗಪ್ರದೀಪಿಕೆಯ ಕರ್ತೃವಿನ ಗುರು 'ಸದಾಶಿವಯೋಗಿ' ಯೆಂದು ಮಾತ್ರ ತಿಳಿದುಬರುತ್ತದೆ. ಇದನ್ನು ಬಿಟ್ಟರೆ ಈ ಕೃತಿಯಿಂದ ಒಂದೂ ಚಾರಿತ್ರಿಕ ಅಂಶವನ್ನು ಅಪೇಕ್ಷಿಸುವಂತಿಲ್ಲ.

ಶಿವಯೋಗಪ್ರದೀಪಿಕೆಯನ್ನು ಆಧಾರವಾಗಿಟ್ಟುಕೊಂಡು ನಿಜಗುಣಶಿವಯೋಗಗಳು ಬರೆದ ಯೋಗಕೃತಿ 'ಪಾರಮಾರ್ಥ ಪ್ರಕಾಶಿಕೆ.' ಈ ಕೃತಿಯ ಪ್ರಾರಂಭದಲ್ಲಿಯ "ತಾರಕ ಬ್ರಹ್ಮೋಪದೇಶಾದ್ಯಖಿಳರಹಸ್ಯೋಪದೇಶ ದೇಶಿಕನಾದ ಚೆನ್ನಸದಾಶಿವಯೋಗೀಶ್ವರನೆನಿಸುವಾಚಾರ್ಯನು ಮುಮುಕ್ಷುಗಳ ಗುಹಾಂತರಾಳಮಂ ಬೆಳಗಲೆಂದು ಶ್ರೀ 'ಶಿವಯೋಗ ಪ್ರದೀಪಿಕೆ'ಯೆಂಬ ಯೋಗಶಾಸ್ತ್ರವಂ ಮಾಡಲುದ್ಯೋಗಿಸಿ......" ಎಂಬ ವಾಕ್ಯ ಶಿವಯೋಗಪ್ರದೀಪಿಕೆಯ ಕರ್ತೃ "ಚೆನ್ನಸದಾಶಿವಯೋಗಿ" ಯೆಂದು ಹೇಳುವ ಪ್ರಾಚೀನತಮ ಮಹತ್ವಪೂರ್ಣ ಸಂಗತಿಯಾಗಿದೆ. ಈ ಮಾತನ್ನು "ತಾರಕಬ್ರಹ್ಮೋಪದೇಶಾದ್ಯನೇಕರಹಸ್ಯೋಪದೇಶ ದೇಶಿಕನಾದ ಚೆನ್ನಸದಾಶಿವಯೋಗೀಶ್ವರ ನೆಂಬಾಚಾರ್ಯನು ಮುಮುಕ್ಷುಗಳ ಗುಹಾಂತರಾಳಮಂ ಬೆಳಗಲೆಂದು ಶಿವಯೋಗಪ್ರದೀಪಿಕೆಯೆಂಬ ಶಾಸ್ತ್ರಮಂ ಮಾಡಲುದ್ಯುಕ್ತನಾಗಿ" ಎಂಬ ಶಿವಯೋಗ ಪ್ರದೀಪಿಕೆ ಕನ್ನಡ ಟೀಕಾಕಾರ ಬಸವಾರಾಧ್ಯನ ಮಾತೂ ಬೆಂಬಲಿಸುತ್ತದೆ.

ಹೀಗೆ ಸಂಸ್ಕೃತ, ಕನ್ನಡ ಕೃತಿಗಳಲ್ಲದೆ ತೆಲುಗಿನ "ಶಿವಯೋಗ ಸಾರಮು" ಹೆಸರಿನ ಕೃತಿಯೂ ಚೆನ್ನಸದಾಶಿವಯೋಗಿಯ ಜೀವನ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತದೆ. 'ಕೊಲನಿ' ಹೆಸರಿನ ಮನೆತನಕ್ಕೆ ಸೇರಿದವನೂ ಕೌಂಡಿಣ್ಯಗೋತ್ರದ ಆಪಸ್ತಂಭಸೂತ್ರದ ನಿಯೋಗಿಬ್ರಾಹ್ಮಣನೂ, ಆದಿಮೂಲನಾಮಾತ್ಮನ ಮಗನೂ ಆದ ಕೊಲನಿ ಗಣಪತಿದೇವ ಇದರ ಕರ್ತೃ. ಈತನು ಸರಸೀಪುರ (ಏಲೂರ)ದ ಮಾಂಡಲಿಕನಾಗಿದ್ದನು. ಈತನ "ಶಿವಯೋಗ ಸಾರಮು" ಕೃತಿಯಲ್ಲಿಯ

"ಶ್ರೀ ಗುರು ಚೆನ್ನಸದಾಶಿವ
ಯೋಗೀಂದ್ರ ಕುಲಾಬ್ಧಿಚಂದ್ರಯೋಗಿವಿನುತ ಶೈ
ವಾಗಮಸಾರಾರ್ಥ ಜ್ಞಾ
ನಾಗಾರ ಇಡೂರಿ ನೂಕನಾರಾಧ್ಯವರಾ"

ಎಂಬ ಪದಕ್ಕೆ "ಶ್ರೀ ಗುರುಚೆನ್ನಸದಾಶಿವಸ್ವರೂಪುಂಡವನು, ಯೋಗಿಜನಾನಂದಪ್ರದುಂಡವುನಂ, ಯೋಗಿಪೂಜಿತುಂಡವುನಂ, ಶಿವಾಗಮುಸಾರಮುಲಗು ವಾತುಲಕಾರಣಾದ್ಯುತ್ತರತಂತ್ರ ಮೂಲರ್ಥಮುನುಗುರ್ತೆಱಂಗಿನವಾಂಡವು 'ನಾಗಾರಯಿಡೂರಿ' ಯನು ಗೃಹನಾಮ ಮುಕೆಲವಾಡವುನಗುಯೋ ನೂಕನಾರಾಧ್ಯನ ಇನ್ನೊಂದು ಹೆಸರು "ಚೆನ್ನಸದಾಶಿವಯೋಗಿ"ಯೆಂದೂ, ಈತನೇ 'ಶಿವಯೋಗ ಪ್ರದೀಪಿಕೆ'ಯ ಕರ್ತೃವೆಂದೂ ಹೇಳುತ್ತಾರೆ.

ಈ ಚೆನ್ನಸದಾಶಿವಯೋಗಿಯ ಗುರು ಸದಾಶಿವಯೋಗಿಯೆಂದು, ಶಿವಯೋಗ ಪ್ರದೀಪಿಕೆಯ "ಗುರುಸದಾಶಿವ", "ಗುರುಸದಾಶಿವಯೋಗಿ" ಎಂಬ ಹೇಳಿಕೆಗಳಿಂದ ವ್ಯಕ್ತವಾಗುತ್ತದೆ. "ಪರಮಯೋಗಿಮನೋಂಬುಜಷಟ್ಪದಂ......." ಇತ್ಯಾದಿಯಾಗಿ ಸ್ತುತ್ಯನಾದ ಈತನೂ ಶಿವಯೋಗವನ್ನು ಕುರಿತು ಒಂದು ಕೃತಿ ಬರೆದಿರಬಹುದೆಂದೂ ಅದು ಗೋದಾವರಿಮಿಶ್ರಕೃತ "ಯೋಗಚಿಂತಾಮಣಿ"ಯ ೩೭ ಆಕರಗಳಲ್ಲಿ ಒಂದಾದ 'ಶಿವಯೋಗ' ಹೆಸರಿನ ಕೃತಿಯಾಗಿರಬಹುದೆಂದೂ, ವಿದ್ವಾಂಸರ ಊಹೆ. "ಈವರೆಗಿನ ವಿವೇಚನೆಯಿಂದ ವ್ಯಕ್ತವಾಗುವ ಸಂಗತಿ ಇಷ್ಟು.

ಸದಾಶಿವಯೋಗಿ (ಕೃತಿ : ಶಿವಯೋಗ)
|
ಚೆನ್ನಸದಾಶಿವಯೋಗಿ=ನೂಕನಾರಾಧ್ಯ (ಕೃತಿ : ಶಿವಯೋಗಪ್ರದೀಪಿಕೆ),
|
ಕೊನಲು ಗಣಪತಿದೇವ (ಕೃತಿ : ಶಿವಯೋಗಸಾರಮು).

ಚೆನ್ನಸದಾಶಿವಯೋಗಿಗಳ ಕಾಲ, ತೆಲಗು 'ಶಿವಯೋಗಸಾರಮು' ಕೃತಿಯ ಕರ್ತೃ ಕೊಲನಿ ಗಣಪತಿದೇವ ಮತ್ತು ಕನ್ನಡ ಪಾರಮಾರ್ಥ ಪ್ರಕಾಶಿಕೆಯ ಕರ್ತೃ ನಿಜಗುಣಶಿವಯೋಗಿಗಳ ಕಾಲವನ್ನು ಅವಲಂಬಿಸಿದೆ. ಇವರು ಸು. ೧೫ನೆಯ ಶತಮಾನದವರೆಂದು ವಿದ್ವಾಂಸರು ಅಭಿಪ್ರಾಯಪಡುವುದರಿಂದ ಚೆನ್ನಸದಾಶಿವಯೋಗಿಯ ಕಾಲವೂ ಇದೇ ಅವಧಿಗೆ ಸಂಬಂಧಿಸಿರಬೇಕಾಗುತ್ತದೆ.

ಚೆನ್ನಸದಾಶಿಯೋಗಿಗಳ ಗುರು-ಶಿಷ್ಯಪರಂಪರೆ ಶಿವಯೋಗ ಪರಂಪರೆಯೇ ಆಗಿದೆ. ಗುರು ಸದಾಶಿವಯೋಗಿ, ಶಿಷ್ಯ ಕೊಲನಿ ಗಣಪತಿದೇವರ ವಿಶೇಷಣಗಳೂ, ಕೃತಿಗಳೂ ಈ ಮಾತಿಗೆ ಸಾಕ್ಷಿ ಹೇಳುತ್ತವೆ. ಇಂಥ ಪರಿವ್ರಾಜ ಪರಿವಾರದ ಚೆನ್ನಸದಾಶಿವಯೋಗಿಗಳು ಬಹು ದೊಡ್ಡ ದಾರ್ಶನಿಕರು. ಇವರ ಘನತೆಯನ್ನು ತೆಲಗು ಕನ್ನಡ ಕೃತಿಗಳು ಹೀಗೆ ತಿಳಿಸುತ್ತವೆ.

೧. ಶ್ರೀನುತ ಸರ್ವಲಕ್ಷಣ ವಿಶಿಷ್ಟಗುಣಾಸ್ಪದನಿಸ್ಸದಾಶಿವ
ಧ್ಯಾನವಿಲೀನಮಾಸಂ ನಿರಂತರಯೋಗ ಸುಶಾಂತಿರಂಗುನ

ಜ್ಞಾನತಮೋದಿವಾಕರುನಜಸ್ರಮು ನೂಕಯದೇಶಿಕೋತ್ತಮುನ್
ಬೂನಿಮದೀಯ ವಾಕ್ ಪ್ರಸವಪೂಜಲನ್ನಮುದಿತಾತ್ಮುಜೆಂಸೆದನ್ ॥

– ಶಿವಯೋಗಸಾರಮು

೨. "ಶ್ರೀಮನ್ನಿಜಮೋಕ್ಷೈಕಸಾಧನಂಗಳಾದ ಕಾಮಿಕಾದಿವಾತುಲಾಂತಮಾದ ಶಿವಾಗಮಂಗಳಲ್ಲಿಯ ಜ್ಞಾನಕ್ರಿಯಾಚರ್ಯಯೋಗ ಪ್ರವೀಣನಾದ, ವೇದವೇದಾಂತಾವೇದನ ವಿಚಕ್ಷಣನಾದ, ಸಾಂಖ್ಯ ಪಾತಂಜಲಾದ್ಯನೇಕಯೋಗಶಾಸ್ತ್ರ ಸಂಭ್ರಮಕ್ಕೆ ಗೋಚರವಲ್ಲದ ನಿಜಯೋಗಸಿದ್ಧನಾದ, ಬಿಂದುನಾದಾದ್ಯನೇಕ ವಸ್ತುವಿಸ್ತಾರಮಂ ಪಿಂಡಮಧ್ಯದಲ್ಲಿ ಕಾಣಿಸುವ ಕುಶಲನಾದ, ಮಂತ್ರಾದಿಯೋಗ ಪರಿಚಿತನಾದ, ಸ್ವಾನುಭಾವ ಸಿದ್ಧನಾದ, ತಾರಕಬ್ರಹ್ಮೋಪದೇಶಾದ್ಯಖಿಳರಹಸ್ಯೋಪದೇಶ ದೇಶಿಕನಾದ ಚನ್ನಸದಾಶಿವಯೋಗೀಶ್ವರನೆನಿಸುವಾರಾಧ್ಯನು...."

– ಪಾರಮಾರ್ಥಪ್ರಕಾಶಿಕೆ

ಈ ಹೇಳಿಕೆಗಳಿಂದ ತೋರಿಬರುವ ಚನ್ನಸದಾಶಿವಯೋಗಿಗಳ ದಿವ್ಯವ್ಯಕ್ತಿತ್ವವನ್ನು ಅನುಭವಿಸಬಹುದು.

ಕೃತಿ :

ಹೆಸರೇ ಸೂಚಿಸುವಂತೆ ಶಿವಯೋಗಪ್ರದೀಕೆಯ ವಸ್ತು, ಶಿವಯೋಗದ ವಿವೇಚನೆಯಾಗಿದೆ.

ಶಿವಾಗಮರಹಸ್ಯಾರ್ಥಾನ್ ಸಿದ್ಧಸಿದ್ಧಾಂತಪದ್ಧತಿಂ ।
ಸಂಕ್ಷೇಪತಃ ಕೃತಾಲೋಡ್ಯ ಶಿವಯೋಗಪ್ರದೀಪಿಕಾ ॥

ಗ್ರಂಥದ ಕೊನೆಯ ಈ ಶ್ಲೋಕವೇ ಹೇಳುವಂತೆ ಕಾಮಿಕಾದಿ ವಾತುಲಾಂತವಾದ ಇಪ್ಪತ್ತೆಂಟು ಶಿವಾಗಮಗಳ ಮತ್ತು ಸಿದ್ಧಸಿದ್ಧಾಂತಪದ್ಧತಿ ಎಂಬ ಕೃತಿಯ ಸಾರಭೂತವಾಗಿದೆ, ಶಿವಯೋಗಪ್ರದೀಪಿಕೆ. ಇದರ ಐದು ಪಟಲಗಳಲ್ಲಿ ಕ್ರಮವಾಗಿ ಬೇರೆ ಬೇರೆ ಛಂದಸ್ಸಿನ ೫೩, ೫೯, ೬೪, ೫೨, ೫೯ ಹೀಗೆ ಒಟ್ಟು ೨೮೭ ಶ್ಲೋಕಗಳಿವೆ.

ಪಟಲ ೧ : ಮಂಗಲಾಚರಣ, ಮಂತ್ರಯೋಗಾದಿ ಪಂಚಯೋಗಗಳ ಲಕ್ಷಣ, ಶಿವತತ್ತ್ವ ನಿರೂಪಣ, ಶಿವತತ್ತ್ವಮೂಲ ಸೃಷ್ಟಿ ನಿರೂಪಣ, ಶಿವತತ್ತ್ವ ಧ್ಯಾನಸ್ವರೂಪ ನಿರೂಪಣ, ಗುರುದೇವಾವಶ್ಯಕತಾ ನಿರೂಪಣ, ಸಗುಣಮೂರ್ತಿಸ್ವರೂಪ ನಿರೂಪಣ, ನಿಷ್ಕಲಮೂರ್ತಿ ಪೂಜಾಲಕ್ಷಣ ನಿರೂಪಣ.

ಪಟಲ ೨ : ಯೋಗಮಾರ್ಗೈಕಗೋಚರವಾದ ಶಿವಪೂಜಾವಿಧಿ, ಹಠಯೋಗಾವಶ್ಯಕತಾ ನಿರೂಪಣ, ಯಮಾದಿ ಬಾಹ್ಯಚತುರಂಗ ಶಿವಪೂಜಾನಿರೂಪಣ, ಯಮ-ನಿಯಮಲಕ್ಷಣ, ಆಸನಭೇದ ನಿರೂಪಣ, ಪ್ರಾಣಾಯಾಮ ಲಕ್ಷಣ, ಪ್ರಾಣಾಯಾಮ ವಿಭೇದದಿಂದ ಯೋಗವಿಭೇದಗಳು, ಅಜಪಾಮಂತ್ರಯೋಗ ನಿರೂಪಣ, ಕೇವಲ ಕುಂಭಕ್ಷಣ, ಮೂಲಾದಿಬಂಧಲಕ್ಷಣ, ಪ್ರಾಣಾಯಾಮಜಲಾಭಿಏಕನಿರೂಪಣ.

ಪಟಲ ೩ : ಪ್ರತ್ಯಾಹಾರಾದ್ಯಂತರಂಗಚತುರಂಗ ಪೂಜಾವಿಧಾನ ನವವಿಧಾಧಾರ ನಿರೂಪಣ, ನವಚಕ್ರಲಕ್ಷಣ, ಷೋಡಶಾಧಾರನಿರೂಪಣ, ಧಾರಣಯೋಗನಿರೂಪಣ, ಪೃಥಿವ್ಯಾದಿತತ್ತ್ವಧಾರಣಲಕ್ಷಣ, ಸಮಾಧಿಯೋಗನಿರೂಪಣ, ಹಠಯೋಗಸಿದ್ಧಿನಿರೂಪಣ, ಅಷ್ಟಾಂಗಯೋಗಸಂಪನ್ನನೇ ಭಕ್ತಾದಿಷಟ್ ಸ್ಥಲ ಸಂಪನ್ನವಾದ ವೀರಶೈವನೆಂಬ ನಿರೂಪಣ, ರಾಜಯೋಗಾಂಗಜ್ಞಾನಾಷ್ಟಾಂಗಯೋಗ ಲಕ್ಷಣ ನಿರೂಪಣ.

ಪಟಲ ೪ : ಗುರುಸ್ತೋತ್ರ, ರಾಜಯೋಗಲಕ್ಷಣ, ಅಷ್ಟಾಂಗಗಳು, ಗುರುಕಟಾಕ್ಷದಿಂದ ರಾಜಯೋಗಸಿದ್ಧಿ, ಗುರುಲಕ್ಷಣ, ಭೂತಪಂಚೀಕರಣ, ಭೂತಪಂಚಕ, ತತ್ತ್ವಪಂಚಕ, ತಾರಕಯೋಗ ವೈಶಿಷ್ಟ್ಯ, ಲಕ್ಷ್ಯತ್ರಯ ನಿರೂಪಣ.

ಪಟಲ ೫ : ದಿವ್ಯಲಿಂಗಸ್ವರೂಪ, ದಿವ್ಯಲಿಂಗಮಾನಸಪೂಜಾನಿರೂಪಣ, ರಾಜಯೋಗಿಯ ಅಷ್ಟಾವಧಾನ, ಉನ್ಮನೀಸ್ವರೂಪ, ಜೀವನ್ಮುಕ್ತಲಕ್ಷಣ, ಯೋಗಾಧಿಕಾರಿ, ತುರ್ಯಾವಸ್ಥಾನಿರೂಪಣ, ಅಮನಸ್ಕ ಮುದ್ರಾಪ್ರಾಪ್ತಿ, ಚತುರ್ವಿಧಭೂಮಿಕಾ ನಿರೂಪಣ, ಯೋಗಾಭ್ಯಾಸಫಲನಿರೂಪಣ, ಯೋಗಾಭ್ಯಾಸ ಯೋಗ್ಯಸ್ಥಾನ, ಯೋಗಶಾಸ್ತ್ರ ಪ್ರಮಾಣ ಪೂರಕತ್ವ ನಿರೂಪಣ, ಶಿವಯೋಗ ಶಾಸ್ತ್ರೋಪದೇಶಯೋಗ್ಯತಾ ನಿರೂಪಣ, ಗ್ರಂಥಸಂಖ್ಯಾ ನಿರೂಪಣ.

ಶಿವಯೋಗಪ್ರದೀಪಿಕೆಯು ಮುಖ್ಯವಾಗಿ ಶಿವಯೋಗವನ್ನು ಪ್ರತಿಪಾದಿಸುತ್ತಿದ್ದರೂ ಅದಕ್ಕೆ ಸಹಾಯಕಾರಿಯಾಗಿರುವ ಅನ್ಯಯೋಗಗಳನ್ನು, ಯೋಗಪ್ರಭೇದಗಳನ್ನು, ಯೋಗದ ಅಷ್ಟಾಂಗಗಳನ್ನು, ಮುದ್ರೆ ಹಾಗೂ ಇತರ ಯೋಗವಿಷಯಗಳನ್ನು ನಿರೂಪಿಸುತ್ತದೆ.

ಟೀಕೆ :

ಕನ್ನಡದಲ್ಲಿ ಟೀಕಾಸಾಹಿತ್ಯ ಸ್ವತಂತ್ರಪ್ರಕಾರವೆಂದು ಪರಿಗಣಿಸುವಷ್ಟು ಪ್ರಮಾಣದಲ್ಲಿ ಬೆಳೆದು ಬಂದಿದೆ. ಈ ಮೊತ್ತದಲ್ಲಿ ವೀರಶೈವದ ಪಾಲು ಗಣನೀಯವಾದುದು. ಸಂಸ್ಕೃತ–ಕನ್ನಡ ಟೀಕು, ಕನ್ನಡ–ಕನ್ನಡ ಟೀಕು ಎಂಬ ಎರಡು ಮಾರ್ಗಗಳಲ್ಲಿ ಮುನ್ನಡೆದು ಬಂದ ವೀರಶೈವ ಟೀಕಾಸಾಹಿತ್ಯದಲ್ಲಿ "ಶಿವಯೋಗಪ್ರದೀಪಿಕೆ"ಯ ಸುತ್ತಲೂ ಕೆಲವು ಟೀಕೆ, ವ್ಯಾಖ್ಯಾನ ಕೃತಿಗಳು ಹುಟ್ಟಿಕೊಂಡಿವೆ. ತೆಲುಗಿನ "ಶಿವಯೋಗ ಸಾರಮು"........ ಕೃತಿಯನ್ನು ಬಿಟ್ಟರೂ ಇದಕ್ಕೆ ನಿಜಗುಣಶಿವಯೋಗಿಗಳು ಮಾಲಾರೂಪದ ಕನ್ನಡಟೀಕೆಯನ್ನು, ಬಸವಾರಾಧ್ಯರು ಪ್ರತಿ ಪದಾರ್ಥ ಕನ್ನಡ ಟೀಕೆಯನ್ನು ಬರೆದಿರುವರು.

ಶ್ರೀ ಬಸವಾರಾಧ್ಯರ ಜೀವನ ಕಾಲ, ದೇಶ ಇನ್ನೂ ಅಸ್ಪಷ್ಟವಾಗಿ ಉಳಿದಿವೆ. ಕವಿಚರಿತೆಕಾರರು ಹೇಳುವ ಕ್ರಿ. ಶ. ೧೫೦೦ ಕೇವಲ ಊಹಿತ ಮಿತಿ. ಶ್ರೀ ಬಸವಾರಾಧ್ಯರು ತಮ್ಮ ಟೀಕೆಯ ಪ್ರಾರಂಭದಲ್ಲಿ

> **"ವಿದ್ಯಾದಾನನಿಧಿಂ ವಿವೇಕಲತಿಕಾಧಾರೈಕಕಲ್ಪದ್ರುಮಂ**
> **ಪೀತಾಶೇಷವಿಶೇಷದೋಷವಿಬುಧೈಃ ಸಂಸೇವ್ಯಮಾನಂ ಸದಾ**
> **ವಿಶ್ವೇಶಾನನಜಾತತಾಂತ್ರಿಕಕಲಾದೀಕ್ಷೈಕದಕ್ಷಂ ಶಿವ**
> **ಜ್ಞಾನೋನ್ಮೀಲನಕಾಂ ಚೆನ್ನಬಸವೇಶಾಖ್ಯಂ ಗುರುಂ ಸಂಶ್ರಯೇ"**

ಎಂದು ಯೋಗಿಪ್ರವರನಾದ ತನ್ನ ಗುರುಚೆನ್ನಬಸವೇಶನನ್ನು ಸ್ಮರಿಸಿರುವನು. ತೋಂಟದ ಸಿದ್ಧಲಿಂಗಯತಿಯ ಗುರು ಗೋಸಲಚೆನ್ನಬಸವೇಶ್ವರನೇ ಈತನಾಗಿರಬಹುದೆಂದು ಭಾವಿಸಿ ಶ್ರೀ ಬಸವಾರಾಧ್ಯರ ಕಾಲ ಕ್ರಿ. ಶ. ೧೬ನೆಯ ಶತಮಾನವೆಂದು: ಹೇಳುವ ವಿದ್ವಾಂಸರ ಮಾತು

ಇನ್ನೂ ಆಧಾರಗಳನ್ನು ಅಪೇಕ್ಷಿಸುತ್ತದೆ. ಆದರೆ 'ಪಾರಮಾರ್ಥಪ್ರಕಾಶಿಕೆಯ' ಪ್ರಭಾವ ಈ ಟೀಕೆಯ ಮೇಲೆ ಸ್ಪಷ್ಟವಾಗಿರುವದರಿಂದ ಬಸವಾರಾಧ್ಯನು ನಿಜಗುಣರಿಗೆ ತರುವಾಯದವನೆಂದು ಹೇಳಬಹುದು.

ಶ್ರೀ ಬಸವಾರಾಧ್ಯರದು ಶಾಸ್ತ್ರ ಪ್ರವೀಣಾ ಮತ್ತು ಧರ್ಮಧುರೀಣರೆನಿಸಿದ ವ್ಯಕ್ತಿತ್ವ. "ಶ್ರೀಮದ್ವೇದವೇದಾಂತಾಗಮಪುರಾಣಸ್ಮೃತೇತಿಹಾಸ ಪ್ರತಿಪಾದಿತ ಶ್ರೀ ವೀರಶೈವಮಾರ್ಗ ಸ್ಥಾಪನಾಚಾರ್ಯ ಶ್ರೀ ಬಸವಾರಾಧ್ಯ" ಎಂಬ ಮಾತು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯೆನಿಸಿದೆ.

ಟೀಕಾಸಾಹಿತ್ಯನಿರ್ಮಾತೃವಿಗೆ ಉಭಯಭಾಷಾಪಾಂಡಿತ್ಯದೊಂದಿಗೆ, ವಿಷಯ ಪರಿಜ್ಞಾನವೂ ಬೇಕು. ಇದಕ್ಕೆ ಹೆಚ್ಚಿನದಾಗಿ ಟೀಕಾಶೈಲಿಯಲ್ಲಿ ಆತನು ಪಳಗಿರಬೇಕಾಗುತ್ತದೆ. ಶ್ರೀ ಬಸವಾರಾಧ್ಯರಲ್ಲಿ ಈ ಸಂಪತ್ತು ತುಂಬಿನಿಂತಿದೆ. ಕಾರಿಕಾಶೈಲಿಯ ಸೂತ್ರಗಳನ್ನು ಬಿಚ್ಚಿಕೊಳ್ಳುವ ಪಾಂಡಿತ್ಯ , ಸಮರ್ಪಕವಾಗಿ ಅರ್ಥ ಬರೆಯುವ ಸಾಮರ್ಥ್ಯ ಈ ಗ್ರಂಥದುದ್ದಕ್ಕೂ ಗೋಚರಿಸುತ್ತದೆ. ಮಧ್ಯ ಮಧ್ಯ ವಿಷಯಸಮರ್ಥನೆಗಾಗಿ ಬಳಸಿದ ಸಂಸ್ಕೃತ ಉದ್ಧರಣೆ. ವಿಷಯವಿವರಣೆಗಳು ಇವರ ಅಭ್ಯಾಸದ ಆಳ ವಿಸ್ತಾರಗಳನ್ನು ಬಿಂಬಿಸುತ್ತದೆ.

❖❖

*

ಪರಿವಿಡಿ

ಪ್ರಥಮ ಪಟಲಃ

ವಂದೇ ಶಿವಾಂ ಶಿವಾನನ್ಯಾಂ ಶಕ್ತಿಂ ವಾಗೀಶ್ವರೀಂ ತಥಾ।
ತತ್ತ್ವಸ್ಯೋದ್ಬೋಧನೇ ಶಕ್ತಮಾಚಾರ್ಯೋತ್ತಮಮನ್ವಹಂ॥ ॥೧॥

ವಿದ್ಯಾದಾನನಿಧಿಂ ವಿವೇಕಲತಿಕಾ ಧಾರೈಕಕಲ್ಪದ್ರುಮಂ
ಪೀತಾಶೇಷವಿಶೇಷದೋಷವಿಬಂಧೈಃ ಸಂಸೇವ್ಯಮಾನಂ ಸದಾ।
ವಿಶ್ವೇಶಾನನಜಾತತಾಂತ್ರಿಕಕಲಾದೀಕ್ಷೈಕದಕ್ಷಂ ಶಿವ
ಜ್ಞಾನೋನ್ಮೀಲನಕಾರಿ ಚನ್ನಬಸವೇಶಾಖ್ಯಂ ಗುರುಂ ಸಂಶ್ರಯೇ॥ ॥೨॥

[1]ಯೋಗೀಶ್ವರಪ್ರಾರ್ಥಿತೇನ ಬಸವಾರಾಧ್ಯಧೀಮತಾ।
ಸಟೀಕಾ ಕ್ರಿಯತೇ ಸೇಯಂ ಶಿವಯೋಗಪ್ರದೀಪಿಕಾ॥ ॥೩॥

ಆಗಮಾಮ್ನಾಹಸಂಮತ್ಯಾ ರಹಸ್ಯಾರ್ಥಪ್ರಕಾಶಿಕಾ।
ಶ್ರುತಿಮಾತ್ರಾದಿಯಂ ಬ್ರಹ್ಮಸಾಕ್ಷಾತ್ಕಾರವಿಧಾಯಿನೀ[1] ॥೪॥

●

ಸೂ : ಶ್ರೀಮನ್ನಿಜಮೋಕ್ಷೈಕಸಾಧನಂಗಳಾದ ಶಿವಾಗಮಂಗಳಲ್ಲಿ [2][ಯ][2] ಜ್ಞಾನಕ್ರಿಯಾ ಚರ್ಯಾಯೋಗಗಳಲ್ಲಿ ಕುಶಲನಾದ, ವೇದವೇದಾಂತವೇದನ ವಿವೇಕಿಯಾದ, ಸಾಂಖ್ಯ ಪಾತಂಜಲಾದ್ಯನೇಕ ಶಾಸ್ತ್ರಸಂಭ್ರಮಕ್ಕೆ ಗೋಚರನಾಗದ, ನಿತ್ಯನಿಜಯೋಗಸಿದ್ಧನಾದ, ಬಿಂದುನಾದಾದ್ಯನೇಕಪ್ರಪಂಚವನ್ನು ಪಿಂಡ ಮಧ್ಯದಲ್ಲಿ ಕಾಣಿಸಲ್ ಸಮರ್ಥನಾದ, ಮಂತ್ರದಲ್ಲಿ ಮಾಂತ್ರಿಕನಾದ, ಲಯದಲ್ಲಿ ಲೀನಮಾನಸನಾದ, ಹಠದಲ್ಲಿ ಚಟುಲನಾದ, ರಾಜಯೋಗದಲ್ಲಿ ಪೂಜ್ಯನಾದ, ಸ್ವಾನುಭವಸಿದ್ಧನಾದ, ತಾರಕಬ್ರಹ್ಮೋಪದೇಶಾದ್ಯನೇಕರಹಸ್ಯೋಪದೇಶ ದೇಶಿಕನಾದ

೧–೧ x (ಮೈ). ೨–೨ ಯೂ (ಮೈ)

ಚೆನ್ನಸದಾಶಿವಯೋಗೀಶ್ವರನೆಂಬಾಚಾರ್ಯನು ಮುಮುಕ್ಷುಗಳ ಹೃದಯ ಗುಹಾಂತರಾಳಮಂ ಬೆಳಗಲೆಂದು 'ಶಿವಯೋಗಪ್ರದೀಪಿಕೆ'ಯೆಂಬ ಯೋಗಶಾಸ್ತ್ರಮಂ ಮಾಡಲುದ್ಯುಕ್ತನಾಗಿ "ನ ಗುರೋರಧಿಕಂ" ಇತ್ಯಾಪ್ತವಚನಪ್ರಸಿದ್ಧನಾದ ಶಿವಾನನ್ಯಸ್ವರೂಪಿಣಿಯಾದ [೧]ಮಹಾ[೧] ಜ್ಞಾನಶಕ್ತಿಯೇ ಸಕಲಾಗ್ರಹಾರ್ಥಮಾಗಿ ಗುರುಸ್ವರೂಪಮಂ ತಾಳಿತ್ತಾಗಿ, ಆ ಗುರುವನು ಪ್ರಾರೀಪ್ಸಿತಗ್ರಂಥ ನಿರ್ವಿಘ್ನ ಪರಿಸಮಾಪ್ತ್ಯರ್ಥಮಾಗಿ ಸ್ತೋತ್ರಮಂ ಮಾಡುತಿರ್ದಪಂ–

ಪರಮಯೋಗಿಮನೋಂಬುಜಷಟ್ಪದಂ
ತ್ರಿವಿಧಕಾರಣಕಾರಣಮವ್ಯಯಮ್
ಸಗುಣನಿರ್ಗುಣತತ್ತ್ವಮನಾಮಯಂ
ಗುರುಸದಾಶಿವಲಿಂಗಮಹಂ ಭಜೇ ॥೧॥

ಪರಮಯೋಗಿಮನೋಂಬುಜಷಟ್ಪದಂ : ಪರಮ–ಅನನ್ಯಸಾಧಾರಣವಹುದರಿಂದ ಸಕಲಲೋಕಪೂಜ್ಯರಾದ, ಯೋಗಿ–ಷಡಧ್ವಾತೀತವಾದ ನವಚಕ್ರೋರ್ಧ್ವಭಾಗದ ಪರಿಗ್ರಹಶಕ್ತಿಯ ಮಸ್ತಕಾಗ್ರದಲ್ಲಿ ನಿತ್ಯನಿರ್ಮಲಪರಿಪೂರ್ಣಪ್ರಕಾಶಕ ಮಹಾಶಕ್ತ್ಯ ವಿನಾಭೂತನಿಜವಸ್ತುವಿನಲ್ಲಿ ಬೈಂದವಾನಂದಾದಿವಿಲಕ್ಷತೆಯಿಂದಾದ ನಿಜಶಿವತತ್ತ್ವಾಭಿವ್ಯಕ್ತಿಯಿಂದಾದ ಸಾಮರಸ್ಯವೆಂಬ ಶಿವಯೋಗವುಳ್ಳ ಜೀವನ್ಮುಕ್ತರ, ಮನೋಂಬುಜ–ಉತ್ಥಾನದಶೆಯ ಸಗುಣಯೋಗದ ತ್ರಿಕೂಟಸ್ಥಾನದ ಮಾನಸವೆಂಬ ಕಮಲದಲ್ಲಿ, ಷಟ್ಪದಂ–ಭ್ರಮರನಾಗಿರ್ಪಂಥ(ಖೇಚರ್ಯಾದಿ ಮುದ್ರೆಯಿಂದೆ ಉನ್ಮನ್ಯಾದ್ಯವಸ್ಥೆಯನೈದಿದ ಮನಸ್ಸಿನಲ್ಲಿ ಕೃಷ್ಣತಾರಾಧಿರೂಪದಿಂ ಕ್ರೀಡಿಸುವಾತನೆಂಬುದರ್ಥಂ). ತ್ರಿವಿಧಕಾರಣಕಾರಣಂ; ತ್ರಿವಿಧ–ನಾದಬಿಂದು ಕಲಾರೂಪದಿಂದೆ ಅಕಾರ ಉಕಾರ ಮಕಾರ ರೂಪದಿಂದೆ, ತಾರಕತ್ರಯರೂಪದಿಂದೆ ಸಕಲ ಸಕಲನಿಷ್ಕಲದ ರೂಪದಿಂದೆ ಮೂರುಮರು ಪ್ರಕಾರವಹುದದಕ್ಕೆ, ಕಾರಣ–ಉಪಾದಾನಕಾರಣವಾದ ಮಹಾಕುಂಟಲಿನೀ ಶಕ್ತಿಗೆ, ಕಾರಣಂ ಪ್ರೇರಕವಹುದರಿಂದ ನಿಮಿತ್ತ ಕಾರಣವಾಗಿರ್ಪಂಥ, ಅವ್ಯಯಂ–ದೇಹಾದ್ಯುಪಾಧಿವಶಂಗತನಲ್ಲವಾಗಿ ಕೇಡಿಲ್ಲದಿರ್ಪಂಥ, ಸಗುಣನಿರ್ಗುಣತತ್ತ್ವಂ–ಸಕಲನಿಷ್ಕಲತತ್ತ್ವಂಗಳೇ ಉಪಾಧಿಯಾಗುಳ್ಳಂಥ, ಅನಾಮಯಂ–ನಿತ್ಯನಿರ್ಮಲನಹ ತನದಿಂ ತನು ಕರಣ ಭುವನ ಭೋಗಂಗಳೆಂಬ ಸಂಸಾರರೋಗವಿಲ್ಲದಿರ್ಪಂಥ ಮುಮುಕ್ಷುಜನಾನುಗ್ರಹಾರ್ಥ ಸ್ವೀಕೃತಬೈಂದವತಾರ ಕಾದ್ಯ ಪಾಧಿಗಳುಂಟಾದೊಡಂ ಅನಾದಿ ಮುಕ್ತನಹುದರಿಂ ತನ್ಮಯನಲ್ಲವೆಂಬುದರ್ಥ. ಗುರುಸದಾಶಿವಲಿಂಗಂ–ಜ್ಞಾನಕ್ರಿಯಾ ಸಮಾನತೆಯಿಂ ಆಚಾರ್ಯರೂಪನಾಗಿ ಸದಾಶಿವಸ್ವರೂಪನಾದ ಲಿಂಗಮೂರ್ತಿಯನು, ಅಹಂ–ಶಾಸ್ತ್ರಪ್ರಾರಂಭಕರ್ತೃನಾದ ಔಪಚಾರಿಕಾಭಿಮಾನಿಯಾದ ನಾನು, ಭಜೇ–ಮನೋವಾಕ್ಕಾಯಂಗಳೆಂಬ ಕರಣತ್ರಯಂಗಳಿಂದೆ ಸೇವಿಪೆಂ.

●

೧–೧ x (ಮೈ)

ಸೂ : ಈ ಶಾಸ್ತ್ರಕರ್ತೃವಾದ ಚೆನ್ನಸದಾಶಿವಯೋಗೀಶ್ವರನು ಪೂರ್ವೋಕ್ತ ಸ್ವರೂಪವಾದ, ಅಂತರಂಗಕ್ಕೆ ಸ್ವಾನುಭವಸ್ವರೂಪನಾದ, ಬಹಿರಂಗಕ್ಕೆ ಆಚಾರ್ಯ ಸ್ವರೂಪನಾದ ಗುರುವಿನ ಉಪದೇಶದಿಂದೆ ಒದವಿದ ನಿಮಿತ್ತದಿಂ ಪ್ರಾಮಾಣಿಕಮಾದ ಶಿವಯೋಗಜ್ಞಾನವಂ ಶಿವಾಗಮಂಗಳಲ್ಲಿ ಅತಿವಿಸ್ತರಂ ಗಂಭೀರಮುಮಾದ ಯೋಗಪಾದಮಂ ಕೇಳುವಲ್ಲಿ ಆಸಕ್ತಿಯುಳ್ಳ ವೀರರಾಗರಾದ ಅಧಿಕಾರಿಗಳ್ಗೇ ನಿರಾಯಾಸದಿಂದೆ ಬೋಧಿಸುವುದೇ ಪ್ರಯೋಜನಮಾಗಿ ಈ ಶಾಸ್ತ್ರಮಂ ಪ್ರಾರಂಭಿಸುವೆನೆಂದು ಪೇಳುತ್ತಿರ್ದಪಂ–

ಶ್ರೀಮದ್ಗುರುಪ್ರಸಾದೇನ ಯೋಗಂ ಜ್ಞಾತ್ವಾಶಿವಾತ್ಮಕಂ
ವಕ್ಷ್ಯಾಮಿ ಸುಪ್ರಬೋಧಾಯ ಶಿವಯೋಗಪ್ರದೀಪಿಕಾಂ ॥೨॥

ಶ್ರೀಮದ್ಗುರುಪ್ರಸಾದೇನ : ಶ್ರೀಮತ್–ಶಿವಯೋಗೈಶ್ವರ್ಯಸಂಪನ್ನನಾದ, ಗುರು–ಗುರುವಿನ, ಪ್ರಸಾದೇನ, ಪ್ರಸಾದೇನ–ಪರಿಪಕ್ವತೆಯಿಂದ ಸೇವಾಶುಶ್ರೂಷೆಗಳಿಂದ ಜನಿಸಿದ ಅನುಗ್ರಹಾಭಿಮುಖವಾದ ಕೃಪಾಪ್ರಸಾದದಿಂದೆ, ಶಿವಾತ್ಮಕಂ–ಮತಾಂತರಂಗಗಳಲ್ಲಿ ಪೇಳ್ವ ಜಡಧರ್ಮವಾದ ಏಕರಸತ್ವಾದಿ ಭ್ರಾಂತಯೋಗವಲ್ಲದೇ ಇಹುದರಿಂ ಮಂಗಲರೂಪವಾಗಿರ್ಪಂಥ, ಮೇಣ್ [೧]ಶಿವಾತ್ಮಕಂ[೧]–ಬಿಂದು ನಾದ ವ್ಯೋಮಮಂತ್ರಭುವನ ವಿಗ್ರಹಾದಿಗಳಗ್ನಿಸಂಗದಿಂದೆ ಅಯಸ್ಸು ಅಗ್ನರೂಪವಾದಂತೆ ಶಿವಾಧಿಷ್ಠಾನಾತಿಶಯದಿಂ ಶಿವಸ್ವರೂಪಗಳಾದ ಧ್ಯೇಯವಸ್ತುಗಳ ಸಾಕ್ಷಾತ್ಕಾರದಿಂದ ಶಿವಾತ್ಮಕವಾಗಿರ್ಪಂಥ, ಮೇಣ್ [೧]ಶಿವಾತ್ಮಕಂ[೧]–ಅನಾದ್ಯವಿದ್ಯಾರೂಪವಾದ ಪಶುತ್ವನಿವೃತ್ತಿಯಿಂ ಶಿವಾತ್ಮಕವಾಗಿರ್ಪಂಥ, ಮೇಣ್ ಶಿವಾತ್ಮಕಂ : ಶಿವ–ದ್ವಾದಶಾಂತದ ಶಿಖಾಚಕ್ರದ ಉಪರಿಭಾಗದಲ್ಲಿ ಸ್ವಪರಪ್ರಕಾಶಾತ್ಮಕನಾದ ನಿರುಪಾಧಿಕ ಶಿವನ, ಆತ್ಮಕಂ–ಸಕಲತತ್ತ್ವತಾತ್ತ್ವಿಕವಿಲಕ್ಷತೆಯಿಂ ಸಮಾನವಾದ ತನ್ನ ಆಕಾಶ ಯೋಗಂ–ಸಂಬಂಧವಿಶೇಷವನು, ಜ್ಞಾತ್ವಾ–ಸಾಕ್ಷಾತ್ಕಾರದಿಂದರಿದು, ಶಿವಯೋಗ ಪ್ರದೀಪಿಕಾಂ–ಶಿವಯೋಗಪ್ರದೀಪಿಕೆಯೆಂಬ ಪ್ರಕರಣವನ್ನು, ವಕ್ಷ್ಯಾಮಿ–ಪೇಳ್ವೆನುಂ.

●

ಸೂ : ಆಚಾರ್ಯನು ಶಿವಯೋಗಸ್ವರೂಪಮಂ ಬೆಸಗೊಂಡ ಶಿಷ್ಯನಂ ಸಂತೋಷದಿಂ ಲಾಲಿಸುತ್ತೆ, ರಹಸ್ಯಾರ್ಥಬೋಧೆ ಗುರುಭಕ್ತಿಯಿಂದಪ್ಪುದೆಂದು ಪೇಳ್ದಪಂ–

ಶಿವತತ್ತ್ವವಿದಾಂ ಶ್ರೇಷ್ಠ ವಕ್ಷ್ಯಾಮಿ ಶೃಣು ತೇऽಧುನಾ।
ಶಿವಯೋಗಂ ಪರಂ ಗುಹ್ಯಮಪಿ ತ್ವದ್ಭಕ್ತಿಗೌರವಾತ್॥ ॥೩॥

ಶಿವತತ್ತ್ವವಿದಾಂ–ಭೂತಪಂಚಕ ತನ್ಮಾತ್ರಪಂಚಕ ಕರ್ಮೇಂದ್ರಿಯಪಂಚಕ ಜ್ಞಾನೇಂದ್ರಿಯಪಂಚಕ ಅಂತಃಕರಣತ್ರಯ ಗುಣಪ್ರಕೃತಿಪುರುಷತತ್ವ ಪಂಚಕಂಚುಕ ಅಧೋಮಾಯೆಂಬ ಆ ವಿದ್ಯೆ ಈಶ್ವರ ಸದಾಶಿವ ಶಕ್ತಿಗಳೆಂಬ ಮೂವತ್ತೈದು ತತ್ತ್ವಕ್ಕೆ ಉಪರಿಯಾದ ಶಬ್ದಾರ್ಥೋಭಯ ಕಾರಣವಾದ, ಷಡ ಧ್ವಾತ್ಮಕವಾದ, ಜಗಜ್ಜನ್ಮಭೂಮಿಯಾದ ಪರಿಪೂರ್ಣನಿಷ್ಕಲರೂಪವಾದ ಶಿವತತ್ತ್ವ ಬಲ್ಲವರ್ಗೆ, ಶ್ರೇಷ್ಠ–

೧–೧ x (ಮೈ)

ಮುಖ್ಯನಾದ ಎಲೆ ಶಿವಯೋಗೀಶ್ವರನೇ, ಶಿವಯೋಗಂ-ಶಿವಯೋಗವನ್ನು ಪರಂ-ಮುಖ್ಯವಾಗಿ, ಗುಹ್ಯಮಪಿ-ಗೋಪ್ಯವಾದರೂ (ಆವನೋರ್ವನು ಬಲ್ಲತನವಂ ಮೆರೆಯಲೆಂದು ಲೌಕಿಕ ಪ್ರಯೋಜನಮಂ ಪಡೆಯಲೆಂದು ಅಯೋಗ್ಯನು ಮೋಸದಿಂ ಯೋಗ್ಯನೆಂದು ತಿಳಿದು ಶಿವಜ್ಞಾನವಂ ಬೋಧಿಸುತಿರ್ದನಾದೊಡಾತಂಗೆ ಡಾಕಿನೀದೇವಿಯೆಂಬ ಮಂತ್ರಶಕ್ತಿಯ ಶಾಪಂ ಬಹುದು.

ಪಾಂಡಿತ್ಯಾದರ್ಥಲೋಭಾದ್ವಾ ಪ್ರಮಾದಾದ್ಯಃ ಪ್ರಯಚ್ಛತಿ।

ತಸ್ಯಾವಶ್ಯಂ ಮಹಾಘೋರೋ ಡಾಕಿನೀಶಾಪ ಆಪತೇತ್ ॥

ಎಂದುದಾಗಿ ಇದು ನಿಮಿತ್ತಂ ಗೋಪ್ಯವೆಂಬುದರ್ಥ), ತ್ವದ್ಭಕ್ತಿಗೌರವಾತ್-ನಿನ್ನ ಭಕ್ತಿಯ ಅತಿಶಯದ ದೆಶೆಯಿಂದೆ, ತೇ-ನಿನಗೆ, ಅಧುನಾ-ಈಗ, ವಕ್ಷ್ಯಾಮಿ-ಪೇಳ್ವೆನು, ಶೃಣು-ಕೇಳು.

●

ಶಿವಸಮಾನತೆಯಿಂದಪ್ಪ ಶಿವಯೋಗಕ್ಕೆ ಸಾಧನವಪ್ಪುದರಿಂ ಯೋಗವೆಂಬ ಪೆಸರಂ ತಾಳ್ದ ಮಂತ್ರಾದಿಯೋಗಂಗಳಂ ನಾಲ್ದೆರನೆಂದು ಪೇಳ್ದಪಂ-

ಮಂತ್ರೋ ಲಯೋ ಹಠೋ ರಾಜಯೋಗಶ್ಚೇತಿ ಚತುರ್ವಿಧಂ ।

ತಮಾಹುಃಪೂರ್ವಮುನಯಸ್ಸಿದ್ಧಾಶ್ಶಂಭುಪ್ರಬೋಧಿತಾಃ ॥ ॥೪॥

ಯೋಗಂ-ಆ ಶಿವಯೋಗವನ್ನು, ಮಂತ್ರಃ-ಮಂತ್ರಯೋಗವೆಂದು, ಲಯಃ-ಲಯಯೋಗವೆಂದು, ಹಠಃ-ಹಠಯೋಗವೆಂದು, ರಾಜಃ-ರಾಜಯೋಗವೆಂದು, ಚತುರ್ವಿಧಮಿತಿ-ನಾಲ್ಕು ಪ್ರಕಾರವೆಂದು, ತಂ-ಆ ಯೋಗವನ್ನು, ಶಂಭುಂ ಪ್ರಬೋಧಿತಾಃ-ಶ್ರೀಕಂಠೇಶ್ವರನಿಂದೆ ಉಪದೇಶಿಸಲ್ಪಟ್ಟಂಥ, ಸಿದ್ಧಾಃ-ಶಿವಯೋಗ ಸಿದ್ಧರಾಗಿರ್ದಂಥ, ಪೂರ್ವಮುನಯಃ-ಪ್ರಾಚೀನರಾದ ಶ್ವೇತಾದಿ ಮುನೀಶ್ವರರು, ಆಹುಃ-ಹೇಳಿದರು, ಆ ಮುನಿಗಳಾರಾರೆಂದೊಡೆ-ಶ್ವೇತ, ದಮನ(ಮದನ), ಯುವಾಲೋಕ, ಸುಹೋತ್ರ, ಕಂಕ (ಕಂಕಣ), ಲೋಕಾಕ್ಷಿ, ಜೈಗೀಷವ್ಯ, ದಧಿವಾಹ, ಋಷಭ, ಉಗ್ರ, ಅತ್ರಿ, ಸುಬಾಲಕ(ಸುಧಾರಕ), ಗೌತಮ, ವೇದಶಿರ(ವೇದಶಿಖಿ), ಮಹೋದರ, ಗೋಕರ್ಣ, ಗುಹಾವಾಸಿ, ಶಿಖಂಡಿ, ಜಟಾಮಾಲಿ, ಅಟ್ಟಹಾಸ (ಚಾರುಹಾಸ), ದಾರುಕ, ಲಾಂಗುಲಿ, ಮಹಾಕಾಯ, ಶೂಲಿ, ದಂಡಿ(ದಿಂಡಿ), ಮುಂಡಿ, ಸಹಿಷ್ಣು, ಸೋಮಶರ್ಮ(ಸರ್ವೇಶ್ವರ), ಲಕುಲೀಶ್ವರ ಈ ಇಪ್ಪತ್ತೆಂಟು ಯೋಗಾಚಾರ್ಯರು ಶಿವಾನುಗೃಹೀತರು, ಈ ಮುನಿಗಳೇ ಪ್ರತ್ಯೇಕ ಪ್ರತ್ಯೇಕವಾಗಿ ನಾಲ್ವರು ನಾಲ್ವರು ಶಿಷ್ಯರಾಗಲಾಗಿ, ಶ್ವೇತ ಶ್ವೇತಶಿಖಾದಿಯಾಗಿ ಗರ್ಗ ಮಿತ್ರ ಕರುಷ್ಯರೇ ಅಂತ್ಯವಾಗಿ ಒಂದುನೂರಾಹನ್ನೆರಡು ಶಿಷ್ಯವರ್ಗಂಗೂಡಿ ಇವರ್ ಮುನೀಶ್ವರರೆನಿಸಿಕೊಂಬರು. ಈ ಅರ್ಥದಲ್ಲಿ ವಾಯವೀಯ ಸಂಹಿತೆಯೊಳಗೆ

ಅಷ್ಟಾವಿಂಶತಿಸಂಖ್ಯಾಕಾ ಯೋಗಾಚಾರ್ಯಾ ಯುಗಕ್ರಮಾತ್ ।

ಶಿಷ್ಯಾಃ ಪ್ರತ್ಯೇಕಮೇತೇಷಾಂ ಚತ್ವಾರಶ್ಶಾಂತತೇಜಸಃ ।

ರುದ್ರಾಕ್ಷಮಾಲಾಭರಣಾಸ್ತ್ರಿಪುಂಡ್ರಾಂಕಿತಮಸ್ತಕಾಃ ।

ಶಿಖಾಜಟಾಸ್ಸರ್ವಜಟಾ ಹ್ಯಜಟಾ ಮುಂಡಶೀರ್ಷಕಾಃ ॥ ಇತಿ.

●

ಸೂ : ಇಂತೀಕ್ರಮದಿಂದೆ ಮೊದಲ್ ಪೇಳ್ದ ಮಂತ್ರಯೋಗದ ಲಕ್ಷಣಮಂ ಪೇಳ್ದಪಂ–

ಏಕಾಕ್ಷರಂ ದ್ವ್ಯಕ್ಷರಂ ವಾ ಷಡಕ್ಷರಮಥಾಪಿ ವಾ ।
ಅಷ್ಟಾಕ್ಷರಂ ವಾ ಮೋಕ್ಷಾಯ ಮಂತ್ರಯೋಗೀ ಜಪೇತ್ ಸದಾ ॥ ॥೫॥

ಏಕಾಕ್ಷರಂ–ಅಕಾರ ಉಕಾರ ಮಕಾರಂಗಳೊಡನೆ ಅವಿಭಾಗರೂಪದಿಂದೇಕಾಕ್ಷರವೆನಿಸಿಕೊಂಬ ಸಕಲಮಂತ್ರಶಿರೋಮಣಿಯೆನಿಸುವ ಓಂಕಾರವೆಂಬ ಮೂಲಮಂತ್ರವನಾದರೂ ಮೇಣ್ ನಾದ ಹುಹ್ಯ ಪರ ಜೀವ ದೇಹಿ ಭೂತಪಂಚಮಸಾಂತ ತತ್ವಾಂತ ಭೂತಾಂತ ಶಿವಾರ್ಣ ಶೂನ್ಯ ಅವ್ಯಯಂಗಳೆಂಬ ನಾಮಂಗಳಿಂದೊಪ್ಪುವ 'ಹ' ಎಂಬ ಶುದ್ಧಪ್ರಸಾದವನಾದರೂ. 'ಹ್ರೀ' ಎಂಬ ಮೂಲ ಪ್ರಸಾದವನಾದರೂ 'ಹಂ' ಎಂಬ ತತ್ತ್ವಪ್ರಸಾದವನಾದರೂ, 'ಹ್ರೀ' ಎಂಬ ಮೂಲ ಪ್ರಸಾದವನಾದರೂ 'ಹಂ' ಎಂಬ ತತ್ತ್ವ ಪ್ರಸಾದವನಾದರೂ, [೧]"ಹ್ರೌ"[೧] ಎಂಬ ಆದಿಪ್ರಸಾದವನಾದರೂ, ದ್ವ್ಯಕ್ಷರಂ ವಾ–ಎರಡು ಅಕ್ಷರರೂಪವಾದ 'ಹಂಸ' ಎಂಬ ಆತ್ಮಪ್ರಸಾದವನಾ, ಶಿವಾನುಗ್ರಹದಿಂದ ಅಭಿವ್ಯಕ್ತಮಾದ ತನ್ನ ಅನಾದಿ ಶಿವತತ್ತ್ವದ ಪರಾಮರ್ಶರೂಪವಾದ 'ಸೋಽಹಂ' ಜಪವನಾದರೂ, ಷಡಕ್ಷರಂವಾ–ಸಪ್ತಕೋಟಿಮಹಾಮಂತ್ರಗಳಿಗೆ ಮುಖ್ಯವಾದ ತಾಂತ್ರಿಕ ವೈದಿಕ ಸಿದ್ಧವಾದ ಷಡಕ್ಷರಮಂತ್ರವನಾದರೂ, ಅಷ್ಟಾಕ್ಷರಂ ವಾ–ಓಂ ಹ್ರೀಂ ಹ್ರೂಂ ನಮಶ್ಶಿವಾಯ ಎಂಬ ಅಷ್ಟಾಕ್ಷರಮಂತ್ರವನಾದರೂ, ಮಂತ್ರಯೋಗೀ–ಮಂತ್ರಯೋಗಾಭ್ಯಾಸವುಳ್ಳಾತನು, ಸದಾ–ಅನವರತವೂ, ಮೋಕ್ಷಾಯ–ಮೋಕ್ಷಮಂ ಪಡೆಯಲೋಸುಗ, ಜಪೇತ್ ಜಪಿಸುವದು(ತಾತ್ಪರ್ಯ : ಆ ಜಪಯಜ್ಞವೇ ಸಮಸ್ತಯಜ್ಞಂಗಳಿಗೆ ವಿಶೇಷಮಪ್ಪುದರಿಂದೀ ಜಪಯಜ್ಞಮಂ ಮಾಳ್ಪ ಪ್ರಕಾರವೆಂತೆಂದೊಡೆ–ಜಪೋಪದೇಶಮಂ ಪಡೆದ ಪುರುಷನು ಬ್ರಾಹ್ಮೀಮಹೂರ್ತದೊಳ್ ಶಿವಧ್ಯಾನಮಂ ಮಾಡುತ್ತಲೆದ್ದು ಶೌಚಾಚಮನ ದಂತಧಾವನಾದಿಗಳಂ ಮಾಡಿ, ಜಲಸ್ನಾನ ಭಸ್ಮಸ್ನಾನಾದಿಗಳನಾಚರಿಸಿ, ಆಗಮೋಕ್ತ ವಿಧಾನದಂದೀಶ್ವರಪೂಜೆಯಂ ಮಾಡಿ, ಶ್ರೀಗುರುವನಾರಾಧಿಸಿ ಏಕಾಂತಸ್ಥಳದೊಳ್ ದರ್ಭಾಸನ ಚರ್ಮಾಸನ ವಸ್ತ್ರಾಸನ ಕಂಬಲಾಸನಾದಿಗಳಲ್ಲಿ ಪೂರ್ವಮುಖವಾಗಲಿ ಮೇಣ್ ಉತ್ತರಮುಖವಾಗಲಿ ತನಗೆ ಇಷ್ಟಾಸನದೊಳ್ ಕುಳ್ಳಿರ್ದ, ಪ್ರಾಣಾಯಾಮತ್ರಯಮಂ ಮಾಡಿ ಆಯಾಯ ಮಂತ್ರೋದಿತಂಗಳಾದ ಋಷಿ ಛಂದಸ್ಸು ಅಧಿದೇವತೆ ಬೀಜಶಕ್ತಿಗ[೨]ಳಂ[೨] ಶಿರಸಾದಿಯಾಗಿ ಪಾದಾಂತ್ಯಮಾದ ಆಯಾ ಸ್ಥಳಂಗಳೊಳ್ ಮುಟ್ಟಿ ಮುಟ್ಟಿ ಸ್ಮರಿಸುತ್ತೆ, ಕ್ರಮದಿಂ ಮೊದಲೊಳ್ ಸೃಷ್ಟಿ ಸ್ಥಿತಿ ಸಂಹಾರಕ್ರಮಗಳನರಿದು, ಆಶ್ರಮಭೇದಾನುಸಾರದಿಂ ಕರನ್ಯಾಸ ದೇಹಾನ್ಯಾಸ ಷಡಂಗನ್ಯಾಸಂಗಳಂ ಮಾಡಿ, ಆಯಾ ಮಂತ್ರಕಲ್ಪೋಕ್ತವಿಧಾನದಿಂ ಮಂತ್ರಪುರಶ್ಚರಣಮಂ ನಿತ್ಯಾನುಷ್ಠಾನಮಂ ಮೋಕ್ಷಾರ್ಥಿಯಾದಾತನು ರುದ್ರಾಕ್ಷಿಗಳ ನೂರೆಂಟರಿಂದಾಗಲಿ ಇಪ್ಪತ್ತೈದರಿಂದಾಗಲಿ ಆಗಮೋಕ್ತ ಮಾರ್ಗದಿಂದಾದ ಜಪಮಾಲಿಕೆಯಿಂದಂಗುಷ್ಠ ಮಧ್ಯಮೆಗಳಿಂದುಪಾಂಶುರೂಪದಿಂ ಧ್ಯಾನಪೂರ್ವಕವಾಗಿ ಜಪಮಂ ಮಾಳ್ಪುದು. ಅದರೊಳ್ ಅಷ್ಟಾಕ್ಷರಮಂತ್ರಾನುಷ್ಠಾನ ಸ್ವರೂಪಮೆಂತೆಂದೊಡೆ–"ಓಂ ಅಸ್ಯ ಪ್ರಸಾದಪಂಚಾಕ್ಷರಮಂತ್ರಸ್ಯ

೧–೧ ಹೌಂ (ಕ). ೨–೨ x ಳಿಂ (ಕ).

ವಾಮದೇವಋಷಿಃ ತ್ರಿಷ್ಟುಪ್ ಛಂದಃ ಶ್ರೀ ಸದಾಶಿವೋ ದೇವತಾ ಓಂ ಬೀಜಂ ಹ್ರಾಂ ಶಕ್ತಿಃ ಚತುರ್ವಿಧ ಪುರಷಾ[೧]ರ್ಥೇ ಜಪೇ ವಿನಿಯೋಗಃ ಯಥಾಶಕ್ತಿಜಪಂ ಕರಿಷ್ಯೇ" ಇತಿ ಸಂಕಲ್ಪ್ಯ ಷಡಂಗನ್ಯಾಸಂ ಕುರ್ಯಾತ್ । ಓಂ ಹ್ರಾಂ ಓಂ ಸರ್ವಜ್ಞಶಕ್ತಿಧಾಮ್ನೇ ಗುಹ್ಯಾತಿ ಗುಹ್ಯಾಯ ಹೃದಯಾಯ ನಮಃ। ಓಂ ಹ್ರೀ ನಂ ನಂ ತೃಪ್ತಿಶಕ್ತಿಧಾಮ್ನೇ ಗೋಪ್ತ್ರೇಶಿರಸೇ ಸ್ವಾಹಾ, ಓಂ ಹ್ರೂಂ ಮಂ ಅನಾದಿಬೋಧಶಕ್ತಿಧಾಮ್ನೇ ನಿಧನಾಯ ತೇಜೋರೂಪಾಯ ಕವಚಾಯ ಹುಂ, ಓಂ ಹ್ರಾ ಮಂವಾಂ ಅಲುಪ್ರಶಕ್ತಿಧಾಮ್ನೇ ಪರಮೇಶ್ವರಾಯ ನೇತ್ರತ್ರಯಾಯ ವೌಷಟ್, ಓಂ ಹ್ರಃ ಯಂ ಅನಂತಶಕ್ತಿಧಾಮ್ನೇ ಜ್ಯೋತಿರೂಪಾಯ ಅಸ್ತ್ರಾಯ ಫಟ್ ಎಂಬೀ ಮಂತ್ರಗಳಿಂ ಷಡಂಗನ್ಯಾಸಮುಂ ಮಾಡುವುದು ಮೂರ್ತಿಧ್ಯಾನಂ–

ಶಾಂತಂ ಪದ್ಮಾಸನಸ್ಥಂ ಶಶಿಧರಮಕುಟಂ ಪಂಚವಕ್ತ್ರಂ ತ್ರಿಣೇತ್ರಂ
ಶೂಲಂ ವಜ್ರಂ ಚ ಖಡ್ಗ ಪರಶುವಭಯದಂ ದಕ್ಷಭಾಗೇ ವಹಂತಮ್ ।
ನಾಗಂ ಪಾಶಂ ಚ ಘಂಟಾಂ ಪ್ರಳಯಹುತವಹಂ ಸಾಂಕುಶಂ ವಾಮಭಾಗೇ
ನಾನಾಲಂಕಾರ ದೀಪ್ತಂ ಸ್ಫಟಿಕಮಣಿನಿಭಂ [೨]ಪಾರ್ವತೀಶಂ ನಮಾಮಿ॥[೨]

ಎಂದುದಾಗಿ ಈ ಅಷ್ಟಾಕ್ಷರಮಂತ್ರವನಾದರೂ ಜಪಿಸುವುದು. ಬಳಿಕೀ ಮಂತ್ರದಿಂದುತ್ತರವಾದ ಷಡಕ್ಷರಮಂತ್ರಾನುಷ್ಠಾನ ಸ್ವರೂಪಮೆಂತೆಂದೊಡೆ "ಓಂ ಅಸ್ಯ ಶ್ರೀ ಷಡಕ್ಷರ[೩]ಮಹಾ[೩] ಮಂತ್ರಸ್ಯ ವಾಮದೇಋಷಿಃ ಪಂಕ್ತಿಶ್ಛಂದಃ ಶ್ರೀ ಸದಾಶಿವೋ ದೇವತಾ [೪]ಓಂ[೪] ಬೀಜಂ ಉಮಾಶಕ್ತಿಃ ಉದಾತ್ತಃ ಸ್ವರಃ ಶ್ವೇತವರ್ಣೋಽಸೌ ಶ್ರೀ ಸದಾಶಿವಪ್ರೀತ್ಯರ್ಥೇ ಜಪೇ ವಿನಿಯೋಗಃ" ಎಂದು ಮೊದಲು ಸ್ಮರಿಸಿ [೫]ಮೇಲಾ[೫]ಮಾಂತ್ರಿಕನು ಮಂತ್ರರೂಪನಾಗಿಯೇ ಈ ಮಂತ್ರಮಂ ಜಪಿಸಲ್ಬೇಕಾಗಿ, ಆ ಮಂತ್ರವರ್ಣನ್ಯಾಸಂ ಕ್ರಮದಿಂದ ಕರನ್ಯಾಸವೆಂದು, ದೇಹನ್ಯಾಸವೆಂದು, ಷಡಂಗನ್ಯಾಸವೆಂದು ತ್ರಿವಿಧಮಪ್ಪುದಾಗಿ, ಬಳಿಕಂ ಅದು ಪ್ರತ್ಯೇಕಮಾಗಿ ಉತ್ಪತ್ತಿ ಸ್ಥಿತಿ ಸಂಹಾರವೆಂದು ಮೂರು ಪ್ರಕಾರಮಪ್ಪುದು. ಅದೆಂತೆಂದೊಡೆ–ಯಕಾರಾದಿ ಪಂಚವರ್ಣಂಗಳಂ ಹಸ್ತದ್ವಯಂ ಗಳೊಂಗುಷ್ಠಾದಿಕನಿಷ್ಠಾಂತಮಾಗಿ ನ್ಯಾಸಮಂ ಮಾಡಿ ಪ್ರಣವಮಂ ಕರತಲ ಕರಪೃಷ್ಠಂಗಳೊಳಂ ಗಯ್ಗಳಿಂದೂರ್ಧ್ವಮುಖವಾಗಿ ನ್ಯಾಸಮಂ ಮಾಡಲದು ಬ್ರಹ್ಮಚಾರಿಗೆ ಯೋಗ್ಯವಾದ ಸೃಷ್ಟಿನ್ಯಾಸಮೆನಿಪುದು. ತದ್ವಿಪರೀತದಿಂ ನಕಾರಾದ್ಯಕ್ಷರಂಗಳಂ ಕನಿಷ್ಠಾದ್ಯಂಗುಷ್ಠಾಂತಮಾಗಿ ನ್ಯಾಸಮಂ ಮಾಡಿ ಪ್ರಣವಮಂ ಕರತಲ ಕರಪೃಷ್ಠಂಗಳೊಳಂ ಗುಲಿಗಳಿಂದದೋಮುಖಮಾಗಿ ನ್ಯಾಸಮಂ ಮಾಡಲದೇ ಯತೀಶ್ವರರ್ಗೆ ಯೋಗ್ಯಮಾದ ಸಂಹಾರನ್ಯಾಸಮೆನಿಪುದು ಅಂಗುಲಿಗಳ ಮಧ್ಯಮಾದಿಯಾಗಿ ತರ್ಜನ್ಯಂತಮಾಗಿ ಶಿಕಾರಾದಿ ವಕಾರಾಂತಮಾದ ವರ್ಣಂಗಳಂ ನ್ಯಾಸಮಂ ಮಾಡಿ, ಪ್ರಣವಮಂ ಕರತಲ ಕರಪೃಷ್ಠಂಗಳೊಳ್ ಅಂಗುಲಿಗಳಂ ತಿರ್ಯಙ್ಮುಖಮಾಗಿ ನ್ಯಾಸಮಂ [೬]ಮಾಡಲದೆ[೬] ಗೃಹಸ್ಥರ್ಗೆ ಯೋಗಮಾದ ಸ್ಥಿತಿನ್ಯಾಸಮೆನಿಪುದು. ಇದು ಕರನ್ಯಾಸವಿಧಿ. ಆನಂತರಂ ಆ ದೇಹನ್ಯಾಸ, ಕ್ರಮವೆಂತೆಂದೊಡೆ–

---

೧ + ರ್ಥ ಸಿದ್ಧ (ಕ) ೨–೨ ಸೌಮಿ ಸಾದಾಖ್ಯತತ್ತ್ವಂ(ಕ) ೩–೩ x (ಕ) ೪–೪ ಪ್ರಣವಂ (ಕ) ೫–೫ ಬಳಿಕಾ (ಕ). ೬–೬ ಮಾಳ್ಪುದು (ಮೈ)

ಯಕಾರಾದಿ ಪಂಚವರ್ಣಗಳಂ ಮಸ್ತಕ ಮುಖ ಹೃದಯ ಗುಹ್ಯ ಪಾದಂಗಳೆಂಬ ಸ್ಥಾನಂಗಳೊಳ್ ಕ್ರಮದಿಂ ಚತುರಂಗುಲದಿಂ ನ್ಯಾಸಮಂ ಮಾಡಿ ಸರ್ವಾಂಗಮಂ ಕರತಲಂಗಳಿಂದ ಅಧೋಮುಖಮಾಗಿ ತಡವುತ್ತೆ ಪ್ರಣವ ನ್ಯಾಸಂಗಳಂ ಮಾಳ್ಪುದೇ ಬ್ರಹ್ಮಚಾರಿಗೆ ಯೋಗ್ಯಮಾದ ಸೃಷ್ಟಿನ್ಯಾಸಮೆನಿಪುದಂ. ತದ್ವಿಪರೀತದಿಂ ನಕಾರಾದಿಗಳಂ ಪಾದಾದಿಮಸ್ತಕಾಂತಮಾಗಿ ನ್ಯಾಸಮಂ ಮಾಡಿ ಪ್ರಣವಮಂ ಕರತಳಂಗಳಿಂ ಮೇಲಾಗಿ ತಡವುತ್ತೆ ನ್ಯಾಸಮಂ ಮಾಡಲಹು ಯಂತೀಶ್ವರರ್ಗೆ ಯೋಗ್ಯಮಾದ ಸಂಹಾರನ್ಯಾಸಮೆನಿಪುದು. ಹೃದಯಾದಿ ಮುಖಾಂತ್ಯ[೧] ಸ್ಥಾನಂಗಳಲ್ಲಿ ಶಿಕಾರಾದಿ ಮಕಾರಾಂತ್ಯಮಾದ ವರ್ಣಂಗಳಂ ನ್ಯಾಸಮಂ ಮಾಡಿ ಪ್ರಣವಮಂ ಸರ್ವಾಂಗದೊಳ್ ನ್ಯಾಸಮಂ ಮಾಡಲದೇ ಗೃಹಸ್ಥರ್ಗೆ ಯೋಗ್ಯಮಾದ ಸ್ಥಿತಿನ್ಯಾಸಮೆನಿಪುದು. ಅನಂತರದಲ್ಲಿ ಕ್ರಮಪ್ರಾಪ್ತಮಾದ ಷಡಂಗನ್ಯಾಸ [೨]ಮೆಂ[೨]ತೆಂದೊಡೆ ಹೃದಯಾದಿಯಾಗಿ ಅಸ್ತ್ರಾಂತಮಾದ ಷಡಂಗನ್ಯಾಸ ಬ್ರಹ್ಮಚಾರಿಗೆ ಯೋಗ್ಯಮಾದ ಸೃಷ್ಟಿನ್ಯಾಸ[೩]ಮೆ[೩]ನಿಪುದು. ಅಸ್ತ್ರಾದಿ ಹೃದಯಾಂತಮಾದ ನ್ಯಾಸ[೪]ದೇ[೪] ಯತೀಶ್ವರರ್ಗೆ ಯೋಗ್ಯಮಾದ ಸಂಹಾರನ್ಯಾಸ[೫]ಮೆ[೫]ನಿಪುದು. ಕವಚಾದಿ ಶಿಖಾಂತ್ಯಮಾದ ನ್ಯಾಸಮದು ಗೃಹಸ್ಥರ್ಗೆ ಯೋಗ್ಯಮಾದ ಸ್ಥಿತಿನ್ಯಾಸಮೆನಿಪುದು. ಅದಾಗಿ ಸೃಷ್ಟಿರೂಪಮಾದ ಷಡಂಗನ್ಯಾಸಮೆಂತೆದೊಡೆ–ಓಂ ಯಂ ಓಂ ಸರ್ವಜ್ಞಶಕ್ತಿಧಾಮ್ನೇ ಅಂಗುಷ್ಠಾಭ್ಯಾಂ ನಮಃ. ಓಂ ವಾಂ ಓಂ ತೃಪ್ತಿಶಕ್ತಿಧಾಮ್ನೇ ತರ್ಜನೀಭಾಂ ನಮಃ, ಓಂ ಶಿಂ ಓಂ ಅನಾದಿಬೋಧಶಕ್ತಿಧಾಮ್ನೇ ಮಧ್ಯ ಮಾಭ್ಯಾಂ ನಮಃ, ಓಂ ಮಂ ಓಂ ಸ್ವತಂತ್ರಶಕ್ತಿಧಾಮ್ನೇ ಅನಾಮಿಕಾಭ್ಯಾಂ ನಮಃ, ಓಂ ನಂ ಓಂ ಅಲುಪ್ತಶಕ್ತಿಧಾಮ್ನೇ ಕನಿಷ್ಠಿಕಾಭ್ಯಾಂ ನಮಃ, ಓಂ ಓಂ ಓಂ ಅನಂತಶಕ್ತಿಧಾಮ್ನೇ ಕರತಲಕರ ಪೃಷ್ಠಾಭ್ಯಾಂ ನಮಃ ಎಂದು ಕರನ್ಯಾಸಮಂ ಮಾಡುವುದು. ಓಂ ಯಂ ಓಂ ಈಶಾನಾಯ ನಮಃ ಶಿರಸಿ, ಓಂ ವಾಂ ಓಂ ತತ್ಪುರುಷಾಯ ನಮಃ ಮುಖೇ, ಓಂ ಶಿಂ ಓಂ ಅಘೋರಾಯ ನಮಃ ಹೃದಯೇ, ಓಂ ಮಂ ಓಂ ವಾಮದೇವಾಯ ನಮಃ ಗುಹ್ಯೇ, ಓಂ ನಂ ಓಂ ಸದ್ಯೋಜಾತಾಯ ನಮಃ ಪಾದದ್ವಯೇ, ಓಂ ಓಂ ಓಂ ಪ್ರಣವಾಯ ನಮಃ ಸರ್ವಾಂಗೇ ಎಂದು ದೇಹ ನ್ಯಾಸಮಂ ಮಾಡುವುದು, ಓಂ ಓಂ ಓಂ ಸರ್ವಜ್ಞಶಕ್ತಿಧಾಮ್ನೇ ಹೃದಯಾಯ ನಮಃ, ಓಂ ಮಂ ಓಂ ತೃಪ್ತಿಶಕ್ತಿಧಾಮ್ನೇ ಶಿರಸೇ ಸ್ವಾಹಾ, ಓಂ ಮಂ ಓಂ ಆನಾದಿಭೋಧಶಕ್ತಿಧಾಮ್ನೇ ಶಿಖಾಯೈ ವಷಟ್, ಓಂ ಶಿಂ ಓಂ ಸ್ವತಂತ್ರ ಶಕ್ತಿಧಾಮ್ನೇ ಕವಚಾಯ ಹುಂ, ಓಂ ವಾಂ ಓಂ ಅಲುಪ್ತಶಕ್ತಿಧಾಮ್ನೇ ನೇತ್ರತ್ರಯಾಯ ವೌಷಟ್, ಓಂ ಯಂ ಓಂ ಅನಂತಶಕ್ತಿಧಾಮ್ನೇ ಅಸ್ತ್ರಾಯ ಫಟ್ ಎಂದು ಷಡಂಗ ನ್ಯಾಸಮಂ ಮಾಡುವುದು. ಬಳಿಕ ಮೂರ್ತಿಧ್ಯಾನವು.

ಬಿಭ್ರದ್ದೋರ್ಭಿಃ ಕಂತಾರಂ ಮೃಗಮಭಯವರಸ್ಸುಪ್ರಸನ್ನೋಮಹೇಶಃ ।
ಸರ್ವಾಲಂಕಾರದೀಪ್ತಸ್ಸರಶಿಜನಿಲಯೋ ವ್ಯಾಘ್ರಚರ್ಮೋತ್ತರೀಯಃ ।
ಧ್ಯೇಯೋ ಮುಕ್ತಾಪರಾಗಾಮೃತರಸಕಲಿತಾದ್ರಃ ಪ್ರಭುಃ ಪಂಚವಕ್ತ್ರಃ ।
ತ್ರ್ಯಕ್ಷಃ ಕೋಟೀರಕೋಟೀಘಟಿತತುಹಿನರೋಚಿಷ್ಕಲೋತ್ತುಂಗಮೌಲಿ ಃ ॥

---

೧ + ಮಾದ(ಕ) ೨–೨ ವೆಂ(ಕ) ೩–೩ವೆ(ಕ) ೪–೪ ದು(ಕ)೫–೫ ವೆನಿಸು(ಕ)

ಎಂಬ ಮೂರ್ತಿಯನ್ನು ಧ್ಯಾನಿಸಿ ಮಾಳ್ಪ ಜಪಾನುಷ್ಠಾನವು ಪುರಶ್ಚರಣ ಜಪವೆಂದು, ನಿತ್ಯಜಪವೆಂದು, ಪರಶ್ಚರಣಪೂರ್ವಕ[೧]ಮಾದ[೧] ನಿತ್ಯಜಪವೆಂದು ಮೂರು ಪ್ರಕಾರವು. ಅದರೊಳ್ ಪುರಶ್ಚರಣಗೂಡಿದ ನಿತ್ಯಜಪವೇ ವಿಶಿಷ್ಟಮಪ್ಪದರಿಂದೆ ಪುರಶ್ಚರಣಜಾಪಕನು ಸುಸ್ಥಲದಲ್ಲಿ ಸುಮುಹೂರ್ತದಲ್ಲಿ ಸಂಕಲ್ಪ ಪೂರ್ವಕದಿಂದ ಆರು ಲಕ್ಷವನಾಗಲಿ, ಇಪ್ಪತ್ತುನಾಲ್ಕು ಲಕ್ಷವನ್ನಾಗಲಿ ಜಪಿಸಿ, ಆ ಜಪಾನಂತರದಲ್ಲಿ ಒಂದುಲಕ್ಷ ತರ್ಪಣವಂ ಮಾಡಿ, ಕ್ಷೀರದಿಂದಾಗಲಿ ಘೃತದಿಂದಾಗಲಿ ಸಹಸ್ರಾಹುತಿಯಂ ಕೊಟ್ಟು, ಈ ಪುರಶ್ಚರಣಪಾನಂತರದಲ್ಲಿ ಶರೀರಾಂತ್ಯಮಾಗಿ ಸಂಕಲ್ಪಪೂರ್ವಕದಿಂ ನಿತ್ಯ ಜಪಕ್ಕೆ ಹನ್ನೆರಡು ಸಾವಿರವನ್ನಾಗಲಿ ಸಾವಿರದೆಂಟನ್ನಾಗಲಿ ನಿಯಮವಾಗಿ ಮಾಳ್ಪುದು. ಜಪಾದಿಯಲ್ಲಿ[೨] ಜಪಾಂತ್ಯದಲ್ಲಿ[೩]ಜಪಮಾಲಿಕೆಗೆ ಅರ್ಘ್ಯಂ ಕೊಡುವುದು, ಪುರಶ್ಚರಣ[೪]ದಿಂದ ಸಿದ್ಧಮಾದೀ ಷಡಕ್ಷರಮಂತ್ರದಿಂದಪ್ಪ[೪] ಕಾಮ್ಯಫಲಪ್ರಕಾರಮೆಂತೆದೊಡೆ–ಪರ್ವತಾಗ್ರದಲೊಂದು ಲಕ್ಷಮಂ ಜಪಿಸಲು ಆಯುರ್ವರ್ಧನ, ಮಹಾನದಿತೀರದಲ್ಲಿ ಲಕ್ಷದವಯದಿಂದ ಆಯುರ್ವರ್ಧನವು. ದೂರ್ವೆಯನಾಗಲಿ, ಅಮರ್ದುವಳ್ಳಿಯ ರಸವನಾಗಲಿ ಪತ್ತುಸಾವಿರವೇಳೆ ಮಂತ್ರಿಸಿ ಸ್ವೀಕರಿಸಲು ಆಯುರ್ವರ್ಧನವು. ಅರಳಿಯ ಮರವನೇರಿ ಲಕ್ಷದ್ವವಯಮಂ ಜಪಿಸಲು ಮೃತ್ಯು [೫]ತೊಲಗುವುದು.[೫] ಪ್ರತಿದಿನವೂ ಅರಳಿಯ ಮರದ ಎರಡು ಕೈಗಳಿಂದ ಮುಟ್ಟಿ, ನೂರೆಂಟುವೇಳೆ ಜಪಿಸಲು ಮೃತ್ಯುಹರವು. ಆದಿತ್ಯಾಭಿಮುಖವಾಗಿ ಏಕಲಕ್ಷಮಂ ಜಪಿಸಲು ಸಕಲ ವ್ಯಾಧಿಹರವು. ಒಂದು ಮಾಸ ಪರ್ಯಂತವಾಗಿ [೬]ಪ್ರತಿದಿನ[೬] ಉದಕವಂ ನೂರೆಂಟುವೇಳೆ ಮಂತ್ರಿಸಿಕೊಳ್ಳಲಾಗಿ ಕು[೭]ಷ್ಠ[೭]ರೋಗಹರವು. [೬]ಪ್ರತಿದಿನವು[೬] ನೈವೇದ್ಯಮಂ ಹನ್ನೊಂದುವೇಳೆ ಮಂತ್ರಿಸಿಕೊಳ್ಳಲಾಗಿ, ವಿಷಂ ಬೆರೆದಿದ್ದರೂ ಅಮೃತವಪ್ಪುದು. ನದಿಯ [೮]ಜಲಮಂ[೮] ಕುಂಭದಲ್ಲಿ ತುಂಬಿ, ಹತ್ತು ಸಾವಿರವೇಳೆ ಜಪಿಸಿ, [೯]ಆ ಜಲ[೯]ದಿಂ ಸ್ನಾನವಂ ಮಾಡಲು [೧೦]ಸ್ವರ[೧೦] ರೋಗ ಹರವು. ಚಂದ್ರಸೂರ್ಯಗ್ರಹಣಂಗಳಲ್ಲಿ ಉಪವಾಸವಿರ್ದು ಸಮುದ್ರಗಾಮಿಯಾದ ನದಿಯಲ್ಲಿ ಕಂಠಾಂತ್ಯ ಮುಳುಗಿ, ಗ್ರಹಣಾದಿ ಮೋಕ್ಷಾಂತ್ಯವಾಗಿ ಜಪಿಸಿ, ಮೋಕ್ಷಂತ್ಯದಲ್ಲಿ ಬ್ರಾಹ್ಮೀರಸಮಂ ನೂರೆಂಟುವೇಳೆ ಜಪಿಸಿ, ಪಾನವಂ ಮಾಡಲು ವಿದ್ಯಾಭ್ಯಾಸಕ್ಕೆ ಮಹಾಮತಿ ಪ್ರಕಾಶವಪ್ಪುದು. ಬಳಿಕ ಪ್ರಾಯಶ್ಚಿತ್ತವಿಧಿ–ತ್ರಿಸಂಧ್ಯಾಕಾಲದ ಪೂಜೆಗಳೊಳಗೆ ಒಂದುಕಾಲದ ಪೂಜೆಯುಳಿದರೂ ನೂರೆಂಟು [೧೧]ವೇಳೆ[೧೧] ಜಪವಂ ಮಾಡುವುದು. ಅಪವಿತ್ರಾನ್ನ ಸ್ವೀಕಾರವಾದೊಡೆ ನೂರೆಂಟು ಜಪವಂ ಮಾಡುವುದು. ಪಾತಕಂಗಳಿಹೆ ತದರ್ದ(ಐವತ್ತೈದು ಸಾವಿರ ಜಪವಂ ಮಾಡುವುದು). ಉಪಪಾತಕಂಗಳಿಗೆ ತದರ್ಮ ಎಂದರೆ (ಇಪ್ಪತ್ತೇಳು ಸಾವಿರದ ಐದನೂರು) ಜಪಿಸುವುದು. ಉಳಿದ ಪಾತಕಂಗಳಿಗೆ ಐದುಸಾವಿರಂ ಜಪಿಸುವುದು. ಮೋಕ್ಷವಿಧಿಗೆಯೆಂತೆಂದೊಡೆ–ಪ್ರತ್ಯೇಕಮಾಗಿ ತತ್ವಕ್ಕೊಂದೊಂದು ಲಕ್ಷಮಾಗಿ ಇಪ್ಪತ್ತೈದುಲಕ್ಷಮಂ ಜಪಿಸಲು ಪ್ರಕೃತಿತತ್ತ್ವಮಂ ಹಯಿಸುವವನು. ನಿವಾತಸ್ಥಳದೊಳ್ ಮಧ್ಯರಾತ್ರಿಯಲ್ಲಿ ಹತ್ತು ಸಾವಿರಮಂ ಜಪಿಸಲು ನಾದಸಿದ್ಧಿಯಪ್ಪುದು. ನಿವಾತಸ್ಥಳದೊಳ್ ಮಧ್ಯರಾತ್ರಿಯೊಳ್ ಆಲಸ್ಯವಿಲ್ಲದೇ ಒಂದುಲಕ್ಷಮಂ ಜಪಿಸಲು ಜ್ಯೋತಿರ್ಮಯಬಿಂದು ಸಾಕ್ಷಾತ್ಕಾರಮಪ್ಪುದು. ನೂರು ಲಕ್ಷ ಜಪವಂ ಮಾಡಲಾಗಿ ಷಡಧ್ವಾತೀತವಾದ

೧–೧ x(ಕ) ೨ + ಯೂ (ಕ). ೩ + ಯೂ (ಕ) ೪–೪ ಜಪದಿಂದ ಸಿದ್ಧನಾದವನಿಗೆ ಈ ಷಡಕ್ಷರಮಂತ್ರ ಜಪದಿಂದ ಅಪ್ಪ(ಮೈ) ೫–೫ ಹರವು(ಕ) ೬–೬ x(ಕ) ೭–೭ ಕ್ಷಿ(ಕ) ೮–೮ ಉದಕವಂ (ಕಂ) ೯–೯ ಬಳಿಕಾ ಉದಕ (ಕ) ೧೦–೧೦ x(ಕ) ೧೧–೧೧ x(ಕ)

ಪರಶಿವಸಾಯುಜ್ಯಮಂ ಪಡೆವನು, ಅನಂತರದೊಳ್ ದ್ವ್ಯಕ್ಷರರೂಪಮಾದ "ಹಂಸ" ಮಂತ್ರವನಾ[೧]ಗಲಿ[೧] "ಸೋಽಹಂ" ಜಪವನಾ[೧]ಗಲಿ[೧] ಆ ಕಲ್ಪೋಕ್ತ ವಿಧಾನದಿಂದ ಒಂದು ಕೋಟಿಯಂ ಜಪಿಸುವುದು. ತದನಂತರದೊಳ್ ಏಕಾಕ್ಷರರೂಪಮಾದ ಪ್ರಣವಮಂತ್ರಸಿದ್ಧ್ಯರ್ಥಮಾಗಿ ಜಪಪ್ರಾರಂಭದಲ್ಲಿ ಸ್ನಾ[೨]ನಾದಿ[೨] ವಿಧಿಯುಕ್ತನಾಗಿ, ಬ್ರಹ್ಮಾರಣ್ಯದ ನದೀ ತೀರಾದಿ ಸುಸ್ಥಲದಲ್ಲಿರುವ ಬ್ರಹ್ಮವೃಕ್ಷವನಾಶ್ರಯಿಸಿ, ಪ್ರಾಙ್ಮುಖೋದಙ್ಮುಖನಾಗಿ ಸ್ವಸ್ಥಾಸನದಲ್ಲಿ ಕುಳ್ಳಿರ್ದು, ಪ್ರಾಣಾಯಾಮತ್ರಯಮಂ ಮಾಡಿ, ಬಳಿಕಾ ಪ್ರಣವಕ್ಕೆ ಬ್ರಹ್ಮನೇ ಋಷಿ, ದೇವಗಾಯತ್ರೀ ಛಂದಃ, ಪರಶಿವೋಧಿದೇವತಾ, ಅಂ ಬೀಜಂ, ಉಂ ಶಕ್ತಿಃ, ಮಂ ಕೀಲಕಂ, ಮೋಕ್ಷಾರ್ಥೇ ಜಪೇ ವಿನಿಯೋಗಃ ಎಂದು ಮೊದಲು ಸ್ಮರಿಸಿ, ಮೇಲಾ ಮಂತ್ರದಿಂದ ಕರನ್ಯಾಸಗೈವಲ್ಲಿ–ಕರದ್ವಯದಂಗುಷ್ಠಾದಿ ಕನಿಷ್ಠಾಂತಮಾದ ಅಂಗುಲಿಗಳ ಆದಿಮಧ್ಯಾಂತಪರ್ವಂಗಳಲ್ಲಿ ಪ್ರತ್ಯೇಕ ಬಿಂದುಯುಕ್ತವಾದ ಅಕಾರ, ಉಕಾರ, ಮಕಾರಂಗಳಂ ನ್ಯಾಸಮಂ ಮಾಡಿ, ಬಳಿಕ ಬಿಂದುಯುಕ್ತ ಪ್ರಣವವನು ಆ ಸರ್ವಾಂಗುಲಿಗಳಲ್ಲಿಯೂ ನ್ಯಾಸಂಗೈದು, ಮೇಲಾ ಪ್ರಣವದಿಂದವೆ ಕರತಲ ಕರಪೃಷ್ಠಂಗಳಂ ಸಮ್ಮಾರ್ಜನಂ ಮಾಡಿ, ಇಂತು ಕರನ್ಯಾಸಂಗೈದು ಅನಂತರದಲ್ಲಿ ನಾಭಿ ಹೃದಯ ಮೂರ್ಧಂಗಳಲ್ಲಿ ಕ್ರಮದಿಂ ಸೊನ್ನೆವೆರಸಿದ ಅಕಾರ, ಉಕಾರ, ಮಕಾರಂಗಳಂ ನ್ಯಾಸಂ ಮಾಡಿ, ಮೇಲೆ ಮೂರ್ಧಾದಿಪಾದಾಂತ್ಯಮಾಗಿ ಬಿಂದುಸಹಿತ ಪ್ರಣವನ್ಯಾಸಂಗೆಯ್ದು–ಇಂತು ದೇಹನ್ಯಾಸಮಂ ಮಾಡಿ [೩]ಮೇಲೆ[೩] "ಓಂ ಭೂಃ ಅಗ್ನ್ಯಾತ್ಮನೇ ಹೃದಯಾಯ ನಮಃ, ಓಂ ಭುವಃ ವಯ್ವಾತ್ಮನೇ ಶಿರಸೇ ಸ್ವಾಹಾ, ಓಂ ಸುವಃ ಸೂರ್ಯಾತ್ಮನೇ ಶಿಖಾಯೈ ವಷಟ್, ಓಂ ಮಹಃ ಬ್ರಹ್ಮಾತ್ಮನೇ ಕವಚಾಯ ಹುಂ, ಓಂ ಜನಃ ಜ್ಞಾನಾತ್ಮನೇ ನೇತ್ರತ್ರಯಾಯ ವೌಷಟ್, ಓಂ ತಪಃ ಸತ್ಯಾತ್ಮನೇ ಅಸ್ತ್ರಾಯ ಫಟ್" ಎಂದು ಷಡಂಗನ್ಯಾಸಂಗೈದು, ಬಳಿಕ ಈ ಕ್ರಮದಿಂ ಕರನ್ಯಾಸ ದೇಹನ್ಯಾಸ ಅಂಗನ್ಯಾಸಂಗೈದು. ಅನಂತರದಲ್ಲಿ ಜಗವೆಲ್ಲವಂ ತಪ್ತಾಯಃ ಪಿಂಡದಂತೆ ಪ್ರಣವಜ್ಯೋತಿರ್ವ್ಯಾಪ್ತವೆಂಬ ಅನುಸಂಧಾನದಿಂದಾದರೂ, ಅಲ್ಲವೇ ತನ್ನ ಮೂಲಾಧಾರಾದ್ಯಖಿಲ ಚಕ್ರಭೇದಿನಿಯಾದ ಸುಷುಮ್ನಾನಾಡೀಮಧ್ಯಗತ ವಿದ್ಯಲ್ಲೇಖಾತ್ಮಕಬಿಂದು ಚಿಂತನೆಯಿಂದಾದರೂ, ಅಲ್ಲವೆ ಹೃತ್ಕಮಲ ಕರ್ಣಿಕಾಗ್ರದ ಸೋಮಸೂರ್ಯಾಗ್ನಿ ಮಂಡಲತ್ರಯಮಧ್ಯದಲ್ಲಿ ಮಹೇಶ್ವರಧ್ಯಾನಯುಕ್ತಮಾಗಿಯಾದರೂ, ಹತ್ತುಲಕ್ಷ ಜಪದಿಂ ಪುರಶ್ಚರಣಂ ಮಾಡಿದ ಮೇಲೆ ಆ ಪ್ರಣವಮಂತ್ರ ಸಿದ್ಧಿಸಿದ ಬಳಿಕ ಸಕಲಪಾಪಕ್ಷಯಮಂ ಷಟ್ಕರ್ಮಸಿದ್ಧಿಯಂ ಅಷ್ಟಮಹದೈಶ್ವರ್ಯಂಗಳಂ

ಸರ್ವ ವಿದ್ಯೆಗಳಂ ಯಥೇಷ್ಟಫಲಂಗಳನೀವುದೇ ಸತ್ಯವೆಂದರಿವುದಾಗಿ [೪]ಇವೆ[೪] ಮಂತ್ರಯೋಗ[೫]ವೆಂದು ಅ[೫]ಭಿಪ್ರಾಯಂ.

●

ಸೂ : ಕ್ರಮಪ್ರಾಪ್ತಮಾದ ಲಯಯೋಗಲಕ್ಷಣವಂ ಪೇಳ್ದಪಂ–

ಯಸ್ಯ ಚಿತ್ತಂ ನಿಜಧ್ಯೇಯೇ ಮನಸಾ ಮರುತಾ ಸಹ ।
ಲೀನಂ ಭವತಿ ನಾದೇ ವಾ ಲಯಯೋಗೀ ಸ ಏವ ಹಿ ॥ ॥೬॥

೧–೧ ದರೂ (ಕ). ೨ ನ (ಕ). ೩–೩ x (ಕ) ೪–೪ ಇವೆಲ್ಲಂ (ಕ). ೫–೫ ವಿಧಾನವೆಂಬುದ (ಕ).

ಯಸ್ಯ–ಆವನಾನೋರ್ವಯೋಗೀಶ್ವರನ, ಚಿತ್ತಂ–ಪರಮಾಂತಃಕರಣವೆನಿಸುವ ಆತ್ಮಚೈತನ್ಯದಿಂ ಕೂಡಿದ ವಿದ್ಯಾಕರಣವು ನಿಜಧ್ಯೇಯೇಃ ನಿಜ–ತನ್ನ ಸಂಬಂಧವಾದ, ಧ್ಯೇಯೇ–ಮಂತ್ರಯೋಗದೊಳ್ ಪೇಳ್ದ ಧ್ಯಾನಮೂರ್ತಿಯಲ್ಲಿ, ವಾ–ಮೇಣ್, ನಾದೇ–ವೈಕೃತಪ್ರಾಣಾಯಾಮದಿಂದ ಅಭಿವ್ಯಕ್ತನಾದ ನಾದದಲ್ಲಿಯಾದರೂ, ಮನಸಾ, ಮರುತಾ ಸಹ–ಮನೋಮಾರುತಂಗಳೊಡನೆ ಕೂಡಿ, ಲೀನಂ ಭವತಿ–ಲಯವಾಗುತಿದ್ದಿತು, ಸ ಏವ–ಆತನೇ, ಲಯಯೋಗೀ–ಲಯಯೋಗಿಯೆಂದು, ಹಿ–ಪ್ರಸಿದ್ಧವ೧ಹನು.೧

●

ಸೂ : ಲಯಾನಂತರದಲ್ಲಿ ಹಠಯೋಗಲಕ್ಷಣಮಂ ಪೇಳ್ದಪಂ–

ಭವೇದಷ್ಟಾಂಗಮಾರ್ಗೇಣ ಮುದ್ರಾಕರಣಬಂಧನೈಃ ।

ತಥಾ ಕೇವಲಕುಂಭೇ ವಾ ಹಠಯೋಗೀ ವಶಾನಿಲಃ ॥೭॥

ಅಷ್ಟಾಂಗಮಾರ್ಗೇಣ–ಯಮ ನಿಯಮ ಆಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣಾ ಸಮಾಧಿ ಎಂಬ ನಿಜಯೋಗಕ್ಕೆ ಅಂಗಗಳಾದ ಎಂಟರ೨ ಆ೨ವರ್ತನದಿಂದವೂ, ಮುದ್ರಾಕರಣ ಬಂಧನೈಃ–ಮುದ್ರಾಬಂಧ ಕರಣ ಬಂಧಂಗಳಿಂದವೂ,

ಮಹಾಮುದ್ರಾ ಮಹಾಬಂಧೋ ಮಹಾವೇಧಶ್ಚಖೇಚರೀ ।

ಉಡ್ಡಿಯಾಣಂ ಮೂಲಬಂಧಸ್ತತೋ ಜಾಳಂಧರಾಭಿದಃ ॥

ಕರಣೀವಿಪರೀತಾ ಸಾ ವಜ್ರೋಲೀ ಶಕ್ತಿಚಾಲನಂ ।

ಇದಂ ಹಿ ಮುದ್ರಾದಶಕಂ ಜರಾಮರಣನಾಶಕಂ ॥

ಎಂಬುದಾಗಿ ಹತ್ತು ಪ್ರಕಾರವಾದ ಮುದ್ರಾಬಂಧಂಗಳ ಲಕ್ಷಣಮೆಂತೆಂದೊಡೆ–ವಾಮಪಾದದ ಮಡದಿಂದ ಯೋನಿಸ್ಥಾನಮಮೊತ್ತಿ, ಬಲದ ಪಾದವನು ನೀಡಿ, ಎರಡು ಹಸ್ತಗಳಿಂದ ಅಂಗುಷ್ಠಮಂ ಪಿಡಿದು, ವಾಯಃಧಾರಣಮಂ ಮಾಡಿ, ಜಾಲಂಧರಮಂ ಬಂಧಿಪುದು "ಮಹಾಮುದ್ರೆ" ಯೆನಿಸುವುದು. ವಾಮಪಾದದ ಮಡದಿಂದ ಯೋನಿಸ್ಥಾನಮನೊತ್ತಿ, ಎಡದತೊಡೆಯ ಮೇಲೆ ಬಲಪಾದದವನಿರಿಸಿ, ವಾಯುಪೂರಣಂ ಮಾಡಿ, ಜಾಲಧರಮಂ ಬಂಧಿಸೆ "ಮಹಾಬಂಧ' ವೆನಿಸುವುದು, ಈ ಮಹಾಬಂಧದಲ್ಲಿರ್ದ ಯೋಗೀಶ್ವರನು ಸಂಭೂಮಿಯಲ್ಲಿ ಸಮವಾದ ಹಸ್ತಛೇದನ ಜಾಲನ, ದೋಹನಾದಿ ಕ್ರಿಯೆಗಳಿಂದೆ ಪೆರ್ಚಿಸಿದ ಜಿಹ್ವೆಯ ಭ್ರೂಮಧ್ಯ ಸ್ಥಾನಕ್ಕೇರಿಸಿ, ಸ್ಥಿರದೃಷ್ಟಿಯಾಗಿಹುದು "ಬಾಹ್ಯಖೇಚರೀ" ಯೆನಿಸುವುದು, ಮಡದಿಂದ ಯೋನಿಸ್ಥಾನಮನೊತ್ತಿ, ಗುದವನಾಕುಂಚಿಸುವುದು "ಆಧಾರಬಂಧ" ವೆನಿಸುವುದು, ಉದಾರಸ್ಥಾನದಲ್ಲಿ ಆಕರ್ಷಣಮಂ ಮಾಳ್ಪುದು "ಉಡ್ಡಿಯಾಣ ಬಂಧ" ವೆನಿಸುವುದು, ಚುಬುಕವನು ಹೃದಯಸ್ಥಾನದಲ್ಲಿರಿಸಿ, ಕಂಠ ಸಂಕೋಚಮಂ ಮಾಡುವುದು "ಜಾಲಂಧರಬಂಧ" ವೆನಿಸುವುದು. ಅಧೋಗತವಾದ ಶಿರಸ್ಸಾಗಿ ಪಾದಂಗಳು ಊರ್ಧ್ವವಾಗಲಾಗಿ "ವಿಪರೀತಕರಣಿ"

೧–೧ ಲಾ (ಕ) ೨–೨ x (ಕ).

ಯೆನಿಸುವುದು, ಯೋನಿ ಮುಖದಲ್ಲಿ ಚಲಿಸುವ ಬಿಂದು. ವನೂರ್ಧ್ವಕ್ಕೆರಿಸುವುದು "ವಜ್ರೋಳಿ" ಯೆನಿಸುವುದು. ಇಡಾ ಪಿಂಗಳಾ ಮಧ್ಯದಲ್ಲಿ ವರ್ತಿಸುವ ಕುಂಡಲಿನೀಶಕ್ತಿಯನೆಬ್ಬಿಸುವುದು "ಶಕ್ತಿಚಾಲನ" ವೆನಿಸುವುದು. ಈ ಹತ್ತು ಪ್ರಕಾರವಾದ ಮುದ್ರಾಬಂಧಂಗಳಿಂದವೂ, [೧]ಕರಣಬಂಧನ್ಯೈ[೧]:

ಧೌತಿರ್ಬಸ್ತಿಸ್ತಥಾ ನೇಥಿಸ್ತ್ರೋಟಕಂ ನೌಳಿಕಂ ತಥಾ ।

ಕಪಾಲಭಾತಿಶ್ಚೈತಾನಿ ಷಟ್ಕರ್ಮಾಣಿ ಪ್ರಚಕ್ಷತೇ ॥

ಎಂಬುದಾಗಿ ಕರಣವೆನಿಸುವ ಷಟ್ಕರ್ಮಪ್ರಕಾರವೆಂತೆಂದೊಡೆ–ನಾಲ್ಕು ಅಂಗುಲದ ತೆರಪಿನ ಬಿಳಿಯ ಪಾವಡೆಯ ಒಂದು ತುದಿಯನ್ನ ಹಿಡಿದು, ಮತ್ತೊಂದು ತುದಿಯನ್ನ ಮೆಲ್ಲನೆ ಹೃದಯ ಪರ್ಯಂತಮಾಗಿ ನುಂಗಿ ತೆಗೆವುದು "ಧೌತಿ"ಯೆನಿಸುವುದು. ಕುಳಿತೊಡೆ ನಾಭಿಪ್ರಮಾಣವಾಗುವ ಜಲದಲ್ಲಿ ಕುಳಿತು ಆಧಾರ ಕುಂಚನದಿಂದ ಉದಕದ ಪೂರಿಸಿ ಬಿಡುವುದು "ಬಸ್ತಿ"ಯೆನಿಸುವುದು. ಹನ್ನೆರಡಂಗುಲ ಪ್ರಮಾಣದ ನೂಲನ್ನು ನಾಸಿಕಾದ್ವಾರದಲ್ಲೇರಿಸಿ, ಬಾಯಲ್ಲಿ ತೆಗೆವುದು "ನೇತಿ"ಯೆನಿಸುವುದು. ಅತಿ ಸೂಕ್ಷ್ಮಗಳಾದ ವಸ್ತುಗಳಂ ಸ್ಥಿರದೃಷ್ಟಿಯಿಂ ಕಂಬನಿ ಬರುವ ಪರ್ಯಂತ ನೋಡುವುದು "ತ್ರೋಟಕ' ವೆನಿಸುವುದು. ಕಂಭವ ನಿಲಿಸಿ, ಎಡಬಾರಿ ಬಲಬಾರಿಯಾಗಿ ಕುಕ್ಷಿಯ ತಿರುಗಿಸುವುದು. "ನೌಳಿ"ಯೆನಿಸುವುದು. ಇಡಾ ಪಿಂಗಳಂ ದ್ವಾರಗಳಲ್ಲಿ ಅತಿ ತೀವ್ರದಲ್ಲಿ ರೇಚಕ ಪೂರಕಂಗಳಂ ಮಾಡುವುದು "ಕಪಾಲಭಾತಿ"ಯೆನಿಸುವುದು. ಈ ಪ್ರಕಾರವಾದ ಷಟ್ಕರ್ಮ ಬಂಧಂಗಳಿಂದಲೂ, ಮೇಣ್ ಶೀತಳೀಕರಣಾದಿ ಕರಣಂಗಳಿಂದಲಾದರೂ, ತಥಾ–ಹಾಗೆ, ವಾ–ಮೇಣ್, ಕೇವಲಕುಂಭೇ– ರೇಚಕ ಪೂರಕಂಗಳಿಲ್ಲದೆ ತುಂಬಿಸುವ ಕೇವಲಕುಂಭಕದಲ್ಲಿಯಾದರೂ, ವಶನಿಲಃ–ವಶಗತವಾದ ವಾಯುವುಳ್ಳಾತನು, ಹಠಯೋಗೀ–ಹಠಯೋಗೀಶ್ವರನು, ಭವೇತ್–ಆಗವನು.

●

ಸೂ : ಅನಂತರದೊಳ್ [೨]ಇಷ್ಟವಾ[೨]ದ ರಾಜಯೋಗದ ಲಕ್ಷಣಮಂ ಪೇಳ್ದಪಂ–

ತ್ರಿಷು ಲಕ್ಷ್ಯೇಷು ಯೋ ಬ್ರಹ್ಮಸಾಕ್ಷಾತ್ಕಾರಂ ಗಮಿಷ್ಯತಿ ।

ಜ್ಞಾನೇ ವಾಥ ಮನೋವೃತ್ತಿರಹಿತೋ ರಾಜಯೋಗವಿತ್ ॥ ॥೮॥

ಯಃ–ಯಾವನೊರ್ವ ಪುರುಷನು, ತ್ರಿಷು–ಮೂರು ಪ್ರಕಾರವಾದ, ಲಕ್ಷ್ಯೇಷು–ಬಾಹ್ಯಲಕ್ಷ್ಯ ಮಧ್ಯಲಕ್ಷ್ಯ ಅಂತರ್ಲಕ್ಷ್ಯದಲ್ಲಿ, ವಾ–ಅಥವಾ ಹಾಂಗಲ್ಲದಿರ್ದೊಡೆ, ಜ್ಞಾನೇ–ಸಾಂಖ್ಯಯೋಗದಲ್ಲಿಯ ತತ್ತ್ವವಿಲಕ್ಷತ್ವಜ್ಞಾನದಲ್ಲಿಯಾದರೂ, [೩]ಬ್ರಹ್ಮ[೩] ನಿರ್ಲಕ್ಷ್ಯವಾದ ಅಮನಸ್ಕಜ್ಞಾನದಲ್ಲಿಯಾದರೂ, ಬ್ರಹ್ಮಸಾಕ್ಷಾತ್ಕಾರಂಃ ಬ್ರಹ್ಮ–ಷಡಧ್ವಕ್ಕುಪಾದಾನಕಾರಣವಾದ ಪರಮಶಿವಾಧಿಷ್ಠಿತಮಾದ ಬ್ರಹ್ಮವನು, ಸಾಕ್ಷಾತ್ಕಾರಂ–ಅಪರೋಕ್ಷಿಸಿ ಕಾಂಬುದನು, ಗಮಿಷ್ಯತಿ–ಎಯ್ದುವನು, ಮನೋ ವೃತ್ತಿರಹಿತಃ– ಮನೋವ್ಯಾಪಾರವಿಲ್ಲದಿರ್ದಂಥ, ಸಃ–ಆತನು, ರಾಜಯೋಗವಿತ್–ರಾಜಯೋಗಬಲ್ಲಾತನು ಆಗುವನೆಂದು ಅಧ್ಯಾಹರಿಸಿಕೊಂಬುದು.

●

೧–೧ x (ಕ) ೨–೨ ಶ್ರೇಷ್ಠಮಾ (ಕ) ೩–೩ x (ಕ)

ಸೂ : **ಮದುಕ್ತೇನೈವ ಮಾರ್ಗೇಣ ಮಯ್ಯವಸ್ಥಾಪ್ಯ ಚೇತಸಃ ।**

ವೃತ್ಯಂತರನಿರೋಧೋ ಯಸ್ಸಯೋಗ ಇತಿ ಗೀಯತೇ ॥

ಎಂಬ ಯೋಗದ ವಿಭಾಗೋದ್ದೇಶದ ಕ್ರಮಕ್ಕೆ ಕಾರಣಂ ಪೇಳುತ್ತೆ ರಾಜಯೋಗದ ವಿಶಿಷ್ಟತೆಯಂ ಪೇಳ್ದಪಂ–

ಉತ್ತರೋತ್ತರವೈಶೀಷ್ಟ್ಯಾದ್ಯೋಗಾತ್ವಾರ ಏವ ಹಿ ।

ತೇಷ್ವೇಕ ಏವ ಮುಖ್ಯೋಸೌ ರಾಜಯೋಗೋತ್ತಮೋತ್ತಮಃ ॥ ॥೯॥

ಯೋಗಾಃ–ಹಿಂದೆ ಹೇಳಿದ ಯೋಗಂಗಳು, ಉತ್ತರೋತ್ತರವೈಶಿಷ್ಟ್ಯಾತ್–ಶಬ್ದಾತ್ಮಕವಾದ ಮಂತ್ರಯೋಗದಿಂ ನಿಶ್ಶಬ್ದಾತ್ಮಕವಾಗಿ ಮನೋಲಯವೆನಿಸುವ ಲಯಯೋಗವೇ ವಿಶೇಷವೆನಿಸುವುದು; ಆ ಮನೋಲಯವನೇ ವಾಯುಜಯದಿಂದೆ ಮನಮಂ ಸ್ಥಿರ ಮಾಳ್ಪುದಾಗಿ ಲಯದಿಂ ಹಠಯೋಗ ವಿಶೇಷವೆನಿಸುವುದು; ಆ ಮನೋಮಾರುತಂಗಳನು ಉಪದೇಶಮಾತ್ರದಿಂದ ನಿರಾಯಾಸದಿಂದ ನಿಲ್ಲಿಸಿ, ನಿಜವಸ್ತುಸಾಕ್ಷಾತ್ಕಾರಮಂ ಮಾಳ್ಪುದಾಗಿ ರಾಜಯೋಗಂ ಆ ಹಠಯೋಗದಿಂ ವಿಶೇಷಮಪ್ಪುದರಿಂದ ಉತ್ತರೋತ್ತರವಿಶಿಷ್ಟವಾದ ಕಾರಣದಿಂ, ಚತ್ವಾರ ಏವ ಹಿ–ನಾಲ್ಕು ಪ್ರಕಾರವೆಂದು ಪ್ರಸಿದ್ಧವಲಾ, ತೇಷು–ಆ ನಾಲ್ತೆರದ ಯೋಗಂಗಳಲ್ಲಿ. ಅಸೌ–ಈ, ರಾಜಯೋಗಃ–ರಾಜಯೋಗವು, ಉತ್ತಮೋತ್ತಮಃ–ಉತ್ತಮೋತ್ತಮವು, ಏಕ ಏವ ಹಿ–ಒಂದೇ, ಮುಖ್ಯಃ–ಮುಖ್ಯವಾಗಿರ್ದಂಥಾದ್ವಾಗುವದು.

●

ಸೂ : ಈ ಪೂರ್ವೋಕ್ತಮಾದ ರಾಜಯೋಗದ ಅವಾಂತರಭೇದಂಗಳಿಗೆ ಲಕ್ಷಣಮಂ ಗ್ರಂಥದ್ವಯದಿಂ ಪೇಳ್ದಪಂ–

ಸೋಽಪಿ ತ್ರಿಧಾ ಭವೇತ್ಸಾಂಖ್ಯಸ್ತಾರಕಶ್ಚಾಮನಾ ಇತಿ ।

ಪಂಚವಿಂಶತಿತತ್ತ್ವಾನಂ ಜ್ಞಾನಂ ತತ್ಸಾಂಖ್ಯ ಉಚ್ಯತೇ ॥ ॥೧೦॥

ಸೋಽಪಿ–ಆ ರಾಜಯೋಗವಾಯಿತ್ತಾದೊಡೆ, ಸಾಂಖ್ಯಃ–ಸಾಂಖ್ಯಯೋಗವೆಂದೂ, ತಾರಕಶ್ಚ–ತಾರಕಯೋಗವೆಂದೂ, ಅಮನಾಃ–ಅಮನಸ್ಕಯೋಗವೆಂದೂ, ಇತಿ–ಈ ಪ್ರಕಾರ, ತ್ರಿಧಾ–ಮೂರು ಪ್ರಕಾರವಾಗಿದ್ದಂಥಾದ್ದು, ಭವೇತ್–ಅಹುದು, ಪಂಚಮಿಶತಿತತ್ತ್ವಾನಾಂ–ಪೃಥಿವ್ಯಾದಿ ಪ್ರಕೃತ್ಯಂತವಾದ ಇಪ್ಪತ್ತೈದು ತತ್ವಂಗಳ, ಯತ್–ಆವುದಾನೊಂದು, ಜ್ಞಾನಂ–ವಿವೇಕದಿಂ ಲಕ್ಷಿಸಿದ ಜ್ಞಾನವುಂಟೋ, ತತ್–ಅದು, ಸಾಂಖ್ಯಂ–ಸಾಂಖ್ಯಯೋಗಜ್ಞಾನವೆಂದು, ಉಚ್ಯತೇ–ಹೇಳಲ್ಪಡುತ್ತದೆ.

ಬಹಿರ್ಮುದ್ರಾಪರಿಜ್ಞಾನಾದ್ಯೋಗಸ್ತಾರಕ ಉಚ್ಯತೇ ।

ಅಂತರ್ಮುದ್ರಾಪರಿಜ್ಞಾನಾದಮನಸ್ಕ ಇತೀರಿತಃ ॥ ॥೧೧॥

ಬಹಿರ್ಮುದ್ರಾಪರಿಜ್ಞಾನಾತ್–ಮನೋದೃಷ್ಟಿಮಾರುತಂಗಳಂ ಬಹಿರ್ಮುಖವಾಗದಂತೆ ಮುದ್ರಿಸಿ ಲಕ್ಷ್ಯವನು ಅರಿವತ್ತಣಿಂದೆ, ತಾರಕಃ–ತಾರಕವೆಂಬ, ಯೋಗಃ–ಯೋಗವು, ಉಚ್ಯತೇ–ಹೇಳಲ್ಪಡುತ್ತದೆ,

ಅಂತರ್ಮುದ್ರಾಪರಿಜ್ಞಾನಾತ್–ಅಂತರಂಗದ ಮನಮಂ ನೆನೆಯದಂತೆ ಮುದ್ರಿಸುವ ಅಂತರ್ಮುದ್ರೆಯ ಜ್ಞಾನದ ದೆಶೆಯಿಂದ, ಅಮನಸ್ಕ ಇತಿ–ಅಮನಸ್ಕಯೋಗವೆಂದು, ಈರಿತಃ–ಹೇಳಲ್ಪಟ್ಟಂಥಾದ್ದು.

●

ಸೂ : ರಾಜಯೋಗದ ಭೇದವಾದ ಸಾಂಖ್ಯಾದಿಯೋಗಂಗಳಿಗೆ ಉತ್ತರೋತ್ತರ ವಿಶಿಷ್ಟತೆಯಂ ಪೇಳುತ್ತೆ ರಾಜಯೋಗ ಶಬ್ದದ ಅರ್ಥಮಂ ಪೇಳುತ್ತಿರ್ದಪಂ–

ಶ್ಲಾಘ್ಯಸ್ಸಾಂಖ್ಯಾತ್ತಾತರಕೋಽಯಮನಸ್ಕೋಽಪಿ ತಾರಕಾತ್ ।

ರಾಜತ್ವಾತ್ಸರ್ವಯೋಗಾನಾಂ ರಾಜಯೋಗ ಇತಿ ಸ್ಮೃತಃ ॥ ॥೧೨॥

ಸಾಂಖ್ಯಾತ್–ಪಂಚವಿಂಶತಿತತ್ವಜ್ಞಾನಮಾತ್ರವಾದ ಸಾಂಖ್ಯಯೋಗದ ದೆಶೆಯಿಂದೆ, ಅಯಂ ತಾರಕಃ–ನಾದಬಿಂದು ಸಾಕ್ಷಾತ್ಕಾರರೂಪವಾದ ಈ ತಾರಕಯೋಗವು, ಶ್ಲಾಘ್ಯಃ–ಶ್ರೇಷ್ಠವು, ತಾರಕಾತ್–ತಾರಕಯೋಗದ ದೆಸೆಯಿಂದ, ಅಮನಸ್ಕೋಽಪಿ–ನಿಜವಸ್ತು ಸಾಕ್ಷಾತ್ಕಾರದ ಅಮನಸ್ಕಯೋಗವು, ಶ್ಲಾಘ್ಯಃ–ಶ್ರೇಷ್ಠವು, ಈ ರಾಜಯೋಗವು, ಸರ್ವಯೋಗಾನಾಂ–ಸಮಸ್ತ ಯೋಗಗಳಿಗೆ, ರಾಜತ್ವಾತ್–ಶ್ರೇಷ್ಠವಾದ ಕಾರಣ, ರಾಜಯೋಗ ಇತಿ–ರಾಜಯೋಗವೆಂದು, ಸ್ಮೃತಃ–ಸ್ಮರಿಸಲ್ಪಟ್ಟಿತು.

ತಾತ್ಪರ್ಯ : ಮಂತ್ರಾದಿಯೋಗಂಗಳಂತೆ ಬಹುಪ್ರಯಾಸವಿಲ್ಲದೆ ನಿರಾಯಾಸದಿಂದ ಆತ್ಮಲಾಭಮಪ್ಪುದಾಗಿ ಇದೇ ರಾಜಯೋಗವೆಂದರ್ಥ.

●

ಸೂ: ಈ ರಾಜಯೋಗದಿಂದ ಉತ್ತರಮಾದ ಶಿವಯೋಗಮುಂಟೆಂಬ ಪ್ರಶ್ನೆಯನ್ನು ಉಪಾಯದಿಂದ ಪರಿಹರಿಸುತಿರ್ದಪಂ–

ನ ಭೇದಶ್ಶಿವಯೋಗಸ್ಯ ರಾಜಯೋಗಸ್ಯ ತತ್ತ್ವತ : ।

ಶಿವಾರ್ಥಿನಾಂ ತಥಾಪ್ಯೇವ ಮುಕ್ತೋ ಬುದ್ಧೇಃ ಪ್ರವೃದ್ಧಯೇ ॥ ॥೧೩॥

ಶಿವಯೋಗಸ್ಯ–ಶಿವಯೋಗಕ್ಕೂ, ರಾಜಯೋಗಸ್ಯ–ರಾಜಯೋಗಕ್ಕೂ, ತತ್ತ್ವತಃ–ಪರಮಾರ್ಥದ ದೆಶೆಯಿಂದ, ಭೇದಃ–ಭೇದವು, ನ–ಇಲ್ಲ, ತಥಾಪಿ–ಹಾಂಗಾಗಿತ್ತಾದರೂ, ಶಿವಾರ್ಥಿನಾಂ–ನಿಜಮೋಕ್ಷಮಂ ಬಯಸುವವರ್ಗಳ, ಬುದ್ಧೇಃ–ಬಂದಿಯೊಳುದ್ಬೋಧಿತವಾದ ಜ್ಞಾನಶಕ್ತಿಯ, ಪ್ರವೃದ್ಧಯೇ–ವೃದ್ಧಿಗೋಸ್ಕರ, ಭೇದಃ–ಭೇದವು, ಉಕ್ತ–ಹೇಳಲ್ಪಟ್ಟಿತು.

●

ಸೂ : ರಾಜಯೋಗ, ಶಿವಯೋಗಂಗಳಿಗೆ ಭೇದಮಂ ಸೂಚಿಸುತ್ತೆ ಮುಮುಕ್ಷುಗಳಿಂ ಶಿವಯೋಗವೇ ಸ್ವೀಕರಿಸಲು ಯೋಗ್ಯವೆಂದು ಪೇಳ್ದಪಂ–

ಪ್ರತಿಪಾದ್ಯಸ್ತಯೋರ್ಭೇದಸ್ತಥಾ ಶಿವರತಾತ್ಮನಾಂ ।

ತಸ್ಮಾನ್ಮನೀಷಿಭಿರ್ಗ್ರಾಹ್ಯಶ್ಶಿವಯೋಗಸ್ತು ಕೇವಲ : ॥ ॥೧೪॥

ಶಿವರತಾತ್ಮನಾಂ; ಶಿವ–ಶಿವತತ್ತ್ವಾಭಿವ್ಯಕ್ತಿಯಲ್ಲಿ, ರತ–ಪ್ರೀತವಾದ, ಆತ್ಮನಾಂ–ಸ್ವರೂಪವುಳ್ಳವರ್ಗೆ, ತಯೋಃ–ಆ ರಾಜಯೋಗ ಶಿವಯೋಗಂಗಳ್ಗೆ, ಭೇದಃ–ಭೇದವು, ತಥಾ–ಹಾಂಗೆ [೧]ಶಿವಾಗಮೋಕ್ತ[೧] ಮಾರ್ಗದಲ್ಲಿ, ಪ್ರತಿಪಾದ್ಯಃ–ಸಮರ್ಥಿಸಲು ಯೋಗ್ಯವು (ಆ ಭೇದವಾದ ಪ್ರಕಾರವೆಂತೆಂದೊಡೆ–ಪಾತಂಜಲಾದಿ ಶಾಸ್ತ್ರಂಗಳಲ್ಲಿ ಗುಣತ್ರಯಸಾಕ್ಷಾತ್ಕಾರವೇ ತಾರಕತ್ರಯವೆಂದು ತಿಳಿದು ಪ್ರಕೃತಿಯಲ್ಲಿ ಮನೋಲಯವೇ ಅಮನಸ್ಕವೆಂದು ತಿಳಿದು, ಪ್ರಕೃತ್ಯರ್ಥದ ಪುರುಷಸಾಕ್ಷಾತ್ಕಾರವೇ ರಾಜಯೋಗವೆಂದು ಪೇಳ್ವರಾಗಿ ಆ ರಾಜಯೋಗಂ ಶಿವಯೋಗವೆನಿಸಲರಿಯದು). ಆ ಶಿವಯೋಗವಾವುದೆಂದೊಡೆ–

ತದಾತ್ಮವತ್ತ್ವಂ ಯೋಗಿತ್ವಂ ಜಿತಾಕ್ಷಸ್ಯೋಪಪದ್ಯತೇ

ಎಂದುದಾಗಿ ಶಿವಶಕ್ತಿ ಸಂಪುಟಾಧಾರವಾದ ಮಹಾಕುಂಡಲಿನೀಜನಿತಂಗಳಾದ ತಾರಕತ್ರಯಸಾಕ್ಷಾತ್ಕಾರದ್ವಾರದಿಂದೆ, ಆ ಶಕ್ತಿಯಲ್ಲಿ ವೃತ್ತಿಜ್ಞಾನವಳಿದು, ಸರ್ವತೋಮುಖವಾಗಿ ನಿಂದ ಶಿವತತ್ತ್ವಾಭಿವ್ಯಕ್ತಿಯೇ ಶಿವಯೋಗವೆನಿಸುವುದಾಗಿ, ರಾಜಯೋಗಕ್ಕೂ ಶಿವಯೋಗಕ್ಕೂ ಈ ಪ್ರಕಾರ ಭೇದಮೆಂಬುದರ್ಥ, ತಸ್ಮಾತ್–ಆಕಾರಣಬಿಂದು, ಮನೀಷಿಭಿಃ–ವಿವೇಕಿಗಳಿಂದೆ, ಕೇವಲಃ–ಸಕಲತತ್ತ್ವತಾತ್ತ್ವಿಕ ವಿಲಕ್ಷತೆಯಿಂ ಕೈವಲ್ಯರೂಪವಾಗಿರ್ದಂಥ, ಶಿವಯೋಗಸ್ತು–ಶಿವಯೋಗವೇ, ಗ್ರಾಹ್ಯಃ–ಗ್ರಹಿಸಲು ಯೋಗ್ಯವು.

•

ಸೂ : ಆ ಶಿವಯೋಗಕ್ಕೆ ಸಾಧನಮಪ್ಪುದರಿಂ ಮುಂದೆ ಪೇಳ್ವ ಶಿವಜ್ಞಾನಾದಿಗಳೈದು ಶಿವಯೋಗವೆನಿಸಿಕೊಂಬುವೆಂದು ಪೇಳುತ್ತಿರ್ದಪಂ–

ಜ್ಞಾನಂ ಶಿವಮಯಂ ಭಕ್ತಿಶ್ಶೈವೀ ಧ್ಯಾನಂ ಶಿವಾತ್ಮಕಂ ।
ಶೈವವ್ರತಂ ಶಿವಾರ್ಚೇತಿ ಶಿವಯೋಗೋ ಹಿ ಪಂಚಧಾ ॥ ॥೧೫॥

ಶಿವಮಯಂ–ಪಶುಶಾಸ್ತ್ರಜನಿತ ಜ್ಞಾನವಲ್ಲದೆ ಇಹುದರಿಂ ಶಿವಾತ್ಮಕವಾಗಿರ್ದಂಥ. ಜ್ಞಾನಂ–ಜ್ಞಾನವು "ಜ್ಞಾನಂ ಶೈವಾರ್ಥಬೋಧನಂ" ಎಂದುದಾಗಿ, ಶೈವೀ–ಅನ್ಯ ದೇವತಾಪರಿತ್ಯಾಗದಿಂ ಶಿವಸಂಬಂಧವಾದಂಥ, ಭಕ್ತಿಃ–ಭಕ್ತಿಯು

ಶ್ರುತ್ಯುಕ್ತಕರ್ಮಾನುಷ್ಠಾನಾಚ್ಚಿತ್ತಶುದ್ಧಿರ್ಭವೇದ್ಧ್ರುವಂ ।
ಚಿತ್ತಶುದ್ಧ್ಯಾ ಶಿವೇ ಭಕ್ತಿರ್ಭವತ್ಯವ್ಯಭಿಚಾರಿಣೀ ॥

ಎಂದುದಾಗಿ, ಶಿವಾತ್ಮಕಂ–ಬಿಂದು ನಾದ ವ್ಯೋಮ ಮಂತ್ರ ಭುವನ ವಿಗ್ರಹಾದಿರೂಪದಿಂ ಶಿವಾತ್ಮಕವಾಗಿರ್ಪಂಥ, ಧ್ಯಾನಂ–ಧ್ಯಾನವು

ಬಿಂದುರ್ನಾದಸ್ತಥಾ ವ್ಯೋಮ ಮಂತ್ರೋ ಭುವನ ವಿಗ್ರಹ ।
ಷಡ್ವಸ್ತ್ವಾತ್ಮಾ ಶಿವೋ ಧ್ಯೇಯಃ ಫಲಭೇದೇನ ಸಾಧಕೈಃ ॥

ಎಂದುದಾಗಿ, ಶೈವಂ–ಶಿವಸಂಬಂಧವಾಗಿರ್ಪಂಥ, ವ್ರತಂ–ಭಸ್ಮವ್ರತವು

೧–೧ ಶಿವಯೋಗ(ಕ)

ಅಥವಾಽಥರ್ವಣೀಮಂತ್ರೇ ಗೃಹೀತ್ವಾ ಭಸ್ಮಪಾಂಡುರಂ ।

ಸರ್ವಾಂಗೋದ್ಧೂಳನಂ ಯತ್ತದ್ವ್ರತಂ ಪ್ರೋಕ್ತಂ ಮನೀಷಿಭಿಃ ॥

ಎಂದುದಾಗಿ, ಶಿವಾರ್ಚೇತಿ–ಶಿವನ ಮುಂದೆ ಪೇಳ್ವ ಬಾಹ್ಯಾಂತರಂಗ ಪೂಜಾ ವಿಧಾನವು, ಇತಿ–ಈ ಪ್ರಕಾರದಿಂದ, ಶಿವಯೋಗಃ–ಶಿವಯೋಗವು, ಪಂಚಧಾ–ಐದು ಪ್ರಕಾರವೆಂದು, ಹಿ–ಪ್ರಸಿದ್ಧವು.

●

ಸೂ : ಈ ಶಿವಜ್ಞಾನ ಶಿವಭಕ್ತಿ ಶಿವಧ್ಯಾನ ಶಿವವ್ರತವೆಂಬ ನಾಲ್ಕು ಪ್ರಕಾರಮಂ ಗರ್ಭೀಕರಿಸಿ ಕೊಂಡಿರ್ಪುದಾಗಿ, ಶಿವಪೂಜೆಯೇ ಮುಖ್ಯಶಿವಯೋಗವೆನಿಸುವುದಾಗಿ ಶಿವಪೂಜೆಯಿಂದಲ್ಲದೆ ಮೋಕ್ಷವಾಗದೆಂದು ಪೇಳುತಿರ್ದಪಂ–

ಶಿವಾರ್ಚನವಿಹೀನೋ ಯಃ ಪಶುರೇವ ನ ಸಂಶಯಃ ।

ಸ ತು ಸಂಸಾರಚಕ್ರೇಽಸ್ಮಿನ್ನಜಸ್ರಂ ಪರಿವರ್ತತೇ ॥ ॥೧೬॥

ಯಃ–ಯಾವಾತನು, ಶಿವಾರ್ಚನವಿಹೀನಃ–ಮುಂದೆ ಪೇಳ್ವ ಶಿವಪೂಜಾ ವಿಧಾನದಿಂ ತೊಲಗಿದಾತನಪ್ಪನೋ, ಸಃ–ಆತನು, ಪಶುರೇವ–ಪಶುವೇ.

ಯೇಷಾಂ ಶರೀರಣಾಂ ಶಕ್ತಿಃ ಪತತ್ಯವಿನಿವೃತ್ತಯೇ ।

ತೇಷುಂ ತಲ್ಲಿಂಗಮೌತ್ಸಂಕ್ಯಂ ಮುಕ್ತೌ ದ್ವೇಷೋ ಭವಸ್ಥಿತೌ ।

ಭಕ್ತಿಶ್ಚ ಶಿವಭಕ್ತೇಷು ಶ್ರದ್ಧಾ ತಚ್ಛಾಸಕೇ ವಿಧೌ ॥

ಎಂಬ ಶಕ್ತಿಪಾತಚಿಹ್ನವಿಲ್ಲದೇ ಇಹಂದರಿಂದೆ ಆಣವಾಂಧನೆಂಬುದರ್ಥವು, ಸಂಶಯಃ– ಸಂದೇಹವು, ನ–ಇಲ್ಲ, ಸ ತು–ಆ ಪಶುವಾದಾತನೇ, ಅಸ್ಮಿನ್–ಈ ದೃಶ್ಯಮಾನವಾದ, ಸಂಸಾರಚಕ್ರೇ–ತನುಕರಣಭುವನಭೋಗರೂಪದಿಂ ಪರಿಭ್ರಮಿಸುವ ಸಂಸಾರಚಕ್ರದಲ್ಲಿ, ಅಜಸ್ರಂ–ಅನವರತವೂ, ಪರಿವರ್ತನೆ–ತಿರುಗುತ್ತಿರ್ಪನು (ಶಿವಾರ್ಚನವಿಹೀನನಾದ ಪುರುಷಂಗೆ ಉಳಿದ ಮತಾಂತರಂಗಗಳಲ್ಲಿಯ ಸಿದ್ಧಿಯುಂಟಾದರೂ ಜನನಮರಣಾದಿಕಂಗಳ್ ಬಿಡವೆಂಬಭಿಪ್ರಾಯದಿಂ ತ್ರಿಪದಾರ್ಥವು ಸೂಚಿತವಾಯಿತ್ತೆಂಬರ್ಥ).

●

ಸೂ. : ಅರಿವಿಲ್ಲದಾತಂಗೆ ಅರ್ಚನೆಯಾಗದಾಗಿ ಆ ಶಿವತತ್ತ್ವಸ್ವರೂಪಮಂ ಪ್ರತಿಜ್ಞಾಪೂರ್ವಕದಿಂ ನಾಲ್ಕು ಗ್ರಂಥಂಗಳಿಂ ಪೇಳ್ದಪಂ–

ಸತ್ಯಂ ವದಾಮಿ ತತ್ತತ್ತ್ವಂ ನಿರ್ಣೀತಂ ಪೂರ್ವಸೂರಿಭಿಃ ।

ಸರ್ವದೇವಮಯಸ್ಸಾಕ್ಷಾತ್ ಸರ್ವಭೂತಮಯಸ್ತಥಾ ॥ ॥೧೭॥

ಪೂರ್ವ ಸೂರಿಭಿಃ–ಪೂರ್ವದಶಿವಯೋಗಸಿದ್ಧರಿಂ, ನಿರ್ಣೀತಂ–"ಶಿವಶಕ್ತ್ಯಾದಿಭಿಸ್ಸಾರ್ಧಂ ಪಶ್ಯತ್ಯಾತ್ಮಾಗತಾವೃತಿಃ" ಎಂಬ ಜ್ಞಾನಸಾಕ್ಷಾತ್ಕಾರರೂಪವಾದ ಪ್ರತ್ಯಕ್ಷ ರೂಪದಿಂ

ವಿವಾದಾಧ್ಯಾಸಿತಂ ವಿಶ್ವಂ ವಿಶ್ವವಿತ್ಕರ್ತೃಪೂರ್ವಕಂ ।

ಕಾರ್ಯತ್ವಾದಾವಯೋಸ್ಸಿದ್ಧಂ ಕಾರ್ಯಂ ಕುಂಭಾದಿಕಂ ಯಥಾ ॥

ಎಂಬುದು ಮುಂತಾದನುಮಾನಂಗಳಿಂ "ವಿಶ್ವತಶ್ಚಕ್ಷುರಂತ ವಿಶ್ವತೋ ಮುಖೋ ವಿಶ್ವತೋ ಬಾಹುರುತ ವಿಶ್ವತಃಪಾತ್ ಸ ಬಾಹುಭ್ಯಾಂ ಧಮತಿ ಸಂಪತತ್ರೈಃ ದ್ಯಾವಾಪೃಥ್ವೀ ಜನಯನ್‌ದೇವ ಏಕಃ ಬ್ರಹ್ಮವಿಷ್ಣುರುದ್ರೇಂದ್ರಾಸ್ತೇ ಸಂಪ್ರಸೂರ್ಯತೇ ನ ಕಾರಣಂ, ಕಾರಣಂ ತು ಧ್ಯೇಯಸ್ಸರ್ವೈಶ್ವರ್ಯ ಸಂಪನ್ನಃ ಶಂಭುರಾಕಾಶಮಧ್ಯಗಃ" ಎಂಬ ವೇದವಾಕ್ಯಂಗಳಿಂದೆ,

ಅಥಾನಾದಿಮಲೋಪೇತಸ್ಸರ್ವಕೃತ್ ಸರ್ವವಿಚ್ಛಿವಃ ।

ಪೂರ್ವವ್ಯತ್ಯಾಸಿತಸ್ಯಾಣೋಃ ಪಾಶಜಾಲಮಪೋಹತಿ ॥

ಎಂಬ ಆಗಮಪ್ರಮಾಣತಂಗಳಿಂ ನಿಶ್ಚಯಿಸಲ್ಪಟ್ಟಂಥ, ತತ್ತತ್ವಂ–ಆ ಶಿವತತ್ತ್ವವನ್ನು, ಸತ್ಯಂ–ಯಥಾರ್ಥವಾಗಿ, ವದಾಮಿ–ಪೇಳ್ದಪೆನು, ಸಾಕ್ಷಾತ್–ಪ್ರತ್ಯಕ್ಷಮಾಗಿ, ಸರ್ವದೇವಮಯಃ–ಬಿಂದು ನಾದ ವ್ಯೋಮ ಮಂತ್ರ ಭುವನ ವಿಗ್ರಹಾದಿ ಸಕಲ ದೇವತಾದಿಸ್ವರೂಪನಾಗಿರ್ದಂಥ (ಪಶುಭೂಮಿಯಾದ ಬ್ರಹ್ಮವಿಷ್ಣ್ವಾದಿದೇವತಾರೂಪನಲ್ಲವೆಂಬುದರ್ಥ), "ಸರ್ವವೇದಮಯಃ" ಎಂಬ ಪಾಠಾಂತರಕ್ಕರ್ಥ, ಸಕಲವೇದಕರ್ತನಹತನದಿಂದ ಸಕಲವೇದಸಿದ್ಧನಹತನದಿಂದ ಸಮಸ್ತವೇದಸ್ವರೂಪನಾಗಿರ್ದಂಥ, ತಥಾ–ಹಾಂಗೆ, ಸತ್ವ ಭೂತಮಯಃ–ನಾದಾದಿದ್ವಾರದಿಂ ಸಕಲ ಪ್ರಾಣಿಸ್ವರೂಪನಾಗಿರ್ದಂಥ, ಮೇಣ್ ನಿವೃತ್ಯಾದಿಕಲಾದ್ವಾರದಿಂದ ಪೃಥಿವ್ಯಾದಿ ಭೂತಾತ್ಮನಾಗಿರ್ದಂಥ.

ಸರ್ವಜ್ಞಾನಮಯಸ್ಸಮ್ಯಕ್ ಸರ್ವತತ್ತ್ವೋತ್ತರೋತ್ತರಃ ।

ಸರ್ವತೇಜೋಮಯಸ್ಸಾಕ್ಷಾತ್ ಸರ್ವಾನಂದಸ್ವರೂಪವಾನ್ ॥ ॥೧೮॥

ಸಮ್ಯಕ್–ಆಣವಾದಿದೋಷವಿಲ್ಲದಿಹುದರಿಂ ಸಮ್ಯಕ್ಕಾದ, ಸರ್ವಜ್ಞಾನಮಯಃ–ಸರ್ವಜ್ಞತಾಸ್ವರೂಪ ನಾಗಿರ್ಪಂಥ, ಸರ್ವತತ್ತ್ವೋತ್ತರೋತ್ತರಃ–ಪೃಥಿವ್ಯಾದಿಸಕಲ ತತ್ತ್ವಂಗಳಿಗುತ್ತರವಾದ ಶಕ್ತಿತತ್ತ್ವಕ್ಕುತ್ತರ ವಾಗಿರ್ಪಂಥ, ಸಾಕ್ಷಾತ್–ಪ್ರತ್ಯಕ್ಷವಾಗಿ, ಸರ್ವತೇಜೋಮಯಃ–ನಿರುಪಾಧಿಕಜ್ಯೋತಿಸ್ವರೂಪನಾಗಿರ್ಪಂಥ, ಸರ್ವಾನಂದ ಸ್ವರೂಪವಾನ್–ಸಮಸ್ತವಾದ ಆನಂದವೇ ಸ್ವರೂಪವಾಗುಳ್ಳಂಥ.

ಮಾಯಾಸಮೇತಸ್ಸಕಲೋ ನಿಷ್ಕಲಃ ಕೇವಲಃ ಪರಃ ।

ಅಸ್ತಿನಾಸ್ತಿದ್ವಯಾತೀತೋ ವಾಙ್ಮನೋऽಗೋಚರಾತ್ಮಕಃ ॥ ॥೧೯॥

ಮಾಯಾಸಮೇತಃ–ಕಾರ್ಯರೂಪವಾದ ಶುದ್ಧಮಾಯೆಯೊಡನೆ ಕೂಡಿದಾತನಾಗುತ್ತಲು, ಸಕಲಃ–ಸಕಲವೆನಿಸಿಕೊಂಬಂಥ, ಕೇವಲಃ–ಕಾರಣರೂಪದಿಂ ನಿಷ್ಕಲನಾದ ಮಯಾ ಸಮೇತನಾಗುತ್ತಲೂ, ನಿಷ್ಕಲಃ ನಿಷ್ಕಲನೆನಿಸಿಕೊಂಬಂಥ, ಪರಃ–ಸಕಲ ನಿಷ್ಕಲವೆಂಬ ಉಭಯಸ್ವರೂಪಮಂ ಮೀರಿದಂಥ, ಅಸ್ತಿನಾಸ್ತಿದ್ವಯಾತೀತಃ–ದೃಶ್ಯರೂಪದಿಂದ ಉಂಟೆಂಬ ಅದೃಶ್ಯ ರೂಪದಿಂದಿಲ್ಲವೆಂಬ ಉಭಯಮಂ ಮೀರಿದಂಥ, ವಾಙ್ಮನೋಗೋಚರಾತ್ಮಕಃ–ಬೈಂದವಾಕ್ಕುಗಳಿಗೆ ಪ್ರಕೃತಿಜನ್ಯವಾದ ಮನಸ್ಸಿಗೆ ಗೋಚರನಲ್ಲದಿರ್ಪಂಥ.

ಅವರ್ಣೋ ವರ್ಣಸಂಯುಕ್ತೋ ವಿರೂಪೀ ವಿಶ್ವರೂಪಭೃತ್ ।

ಪರಮಾತ್ಮಾ ಪರಬ್ರಹ್ಮ ಕಶ್ಚಿದ್ದೇವೋऽಸ್ತಿ ಚಿಚ್ಛಿವಃ ॥ ॥೨೦॥

ಅವರ್ಣಃ–ಅಕಾರಾದಿ ಕ್ಷಕಾರಾಂತಮಾದ ವರ್ಣಾತ್ಮಕವಲ್ಲದಿರ್ದಂಥ, ಮೇಣ್ ಶ್ವೇತಪೀತಾದಿ ವರ್ಣವಿಲ್ಲದಿರ್ಪಂಥ, ವರ್ಣಸಂಯುಕ್ತಃ– ಲೋಕಾನುಗ್ರಹಾರ್ಥವಾಗಿ ಮಂತ್ರ ಬೀಜವರ್ಣಂಗಳಿಂ ಕೂಡಲ್ಪಟ್ಟಂಥ, ಮೇಣ್ ಧ್ಯನಾರ್ಥಮಾಗಿ ಶ್ವೇತಪೀತಾದಿವರ್ಣಂಗಳಿಂ ಕೂಡಲ್ಪಟ್ಟಂಥ, ವಿರೂಪಿ– ನಿರಾಕಾರವಾಗಿರ್ಪಂಥ, ವಿಶ್ವರೂಪಭೃತ್–ಸಮಸ್ತ ಬ್ರಹ್ಮಾಂಡಭರಣ ಸಮರ್ಥನಾಗಿರ್ಪಂಥ, ಪರಮಾತ್ಮಾ ನಿತ್ಯನಿರ್ಮಲನಹುದರಿಂ ಪರಮಾತ್ಮ ಸ್ವರೂಪನಾಗಿರ್ದಂಥ, ಪರ ಬ್ರಹ್ಮ–ಪರ ಬ್ರಹ್ಮಶಬ್ದವಾಚ್ಯ ಮಹಾಮಾಯಾಧಿಷ್ಠಾತೃವಾಗಿಯುಂ ತದ್ಧರ್ಮ ವಾದಾನಂದಾದಿಗಳ ಧ್ಯಾನಮಿಲ್ಲದಿಹುದರಿಂ ಪರಬ್ರಹ್ಮವೆಂದೆನಿಸಿಕೊಂಬಂಥ, ಚಿಚ್ಛಿವಃ–ಪರಮ ಪ್ರಕಾಶಿಕೆಯಾದ ಮಹಾಜ್ಞಾನಶಕ್ತಿಯೊಡನೆ ಕೂಡಿ ನಿರ್ಮಲ ಸ್ವರೂಪನಾಗಿರ್ಪಂಥ, ಕಶ್ಚಿತ್–ಒಬ್ಬಾನೊಬ್ಬ, ದೇವಃ–ಸೃಷ್ಟಿಸ್ಥಿತ್ಯಾದಿ ಪಂಚಕೃತ್ಯ[೧]ಕ್ಕೆ ಆಶ್ರಯ[೧] ವಾಗಿರ್ಪಂಥ ದೇವನು, ಅಸ್ತಿ–ಉಂಟು.

●

ಸೂ : ಈ ಪ್ರಕಾರದಿಂ ಪರಮಶಿವಸ್ವರೂಪನಾದ ಪರಶಿವಂಗೆ ನಿತ್ಯಾಧಿಷ್ಠಾನರೂಪಿಯಾದ ಲಯಾಭಿಧಾನಮುಳ್ಳ ಶಿವತತ್ತ್ವ ಸ್ವರೂಪಮಂ ನಿರೂಪಿಸಿ ಬಳಿಕ, ಆ ಶಿವತತ್ತ್ವವೇ ಜಗತ್ತಿಗೆ ಉಪಾದಾನಕಾರಣಮಪ್ಪುದರಿಂ ಸಕಲ ಜಗತ್ತು ಶಿವತತ್ತ್ವಾತ್ಮಕವೆಂದು ಅರುಹಿಸಲು, ಶಿವತತ್ತ್ವದಿಂದಪ್ಪ ಸೃಷ್ಟಿಯಂ ಸೂಚನಾ ಮಾತ್ರದಿಂ ಒಂಬತ್ತು [೨]ಶ್ಲೋಕ[೨]ಗಳಿಂ ಪೇಳ್ದಪಂ–

ಶಿವಾದುತ್ಪದ್ಯತೇ ಶಕ್ತಿಶ್ಶಾಂತ್ಯತೀತಾ ಪರಾತ್ಮಿಕಾ ।

ಅಪ್ರಮೇಯಗುಣೋಪೇತಾ ಜೃಂಭತೇ ಸಾ ಶಿವಾಜ್ಞಯಾ ॥ ॥೨೧॥

ಶಿವಾತ್–ಘೃತಕಾಠಿನ್ಯನ್ಯಾಯದಿಂದ ಅಕ್ಷುಬ್ಧಭಾಗವಾದ ಶಿವತತ್ತ್ವದ ದೆಶೆಯಿಂದೆ, ಪರಾತ್ಮಿಕಾ– ಪರಸ್ವರೂಪಿಣಿಯಾಗಿರ್ಪಂಥ, ಶಾಂತ್ಯತೀತಾ–ಶಾಂತ್ಯತೀತಾ ಎನಿಸುವ, ಶಕ್ತಿಃ–ಶಕ್ತಿಯು, ಉತ್ಪದ್ಯತೇ– ಹುಟ್ಟುತ್ತಿಹುದು. ಅಪ್ರಮೇಯಗುಣೋಪೇತಾ–ಹವಣಿಸಬಾರದ ಗುಣಂಗಳಿಂ ಕೂಡಿರ್ಪಂಥ, ಸಾ– ಆ ಶಾಂತ್ಯತೀತೆಯು, ಶಿವಾಜ್ಞಯಾ–ಸೃಷ್ಟಿಕೃತ್ಯಕಾರಿಣಿಯಾದ ಶಿವಶಕ್ತಿಯಿಂದೆ, ಜೃಂಭತೇ– ಕಾರ್ಯೋನ್ಮುಖವಾಗುತ್ತಿಹುದು.

ಸಾ ಶಕ್ತಿಃ ಪಂಚಧಾ ಭಿನ್ನಾ ಭವತಿ ಬ್ರಹ್ಮರೂಪಿಣೀ ।

ಪಂಚಭೂತಾತ್ಮಿಕಾ ನಿತ್ಯಂ ತಸ್ಯಾ ಅಸೀದಿದಂ ಜಗತ್ ॥ ॥೨೨॥

ಬ್ರಹ್ಮರೂಪಿಣೀ–ಬ್ರಹ್ಮಶಬ್ದವಾಚ್ಯವಾದ ಮಹಾಮಾಯಾಸ್ವರೂಪಿಣಿಯಾಗಿರ್ಪಂಥ, (ಅಂಕುರೋತ್ಪತ್ತಿಗೆ ಬೀಜವುಬ್ಬುವಂತೆ ಷಡಧ್ವಾತ್ಮಕವಾದ ಜಗದುತ್ಪತ್ತಿಗೆ ಬ್ರಹ್ಮಣರೂಪವಹುದರಿಂ ಬ್ರಹ್ಮಶಬ್ದವಾಚ್ಯಮಾದ ಕುಂಡಲಿನೀಸ್ವರೂಪವುಳ್ಳಂಥ ಎಂಬುದರ್ಥ) ಸಾ ಶಕ್ತಿಃ–ಆ ಶಾಂತ್ಯತೀತೆಯೆಂಬ ಶಕ್ತಿಯು, ಪಂಚಧಾ–ತಾನೂ ಕೂಡಿ, ಶಾಂತಿ ವಿದ್ಯ ಪ್ರತಿಷ್ಠೆ ನಿವೃತ್ತಿ ಎಂದೈದು ಪ್ರಕಾರವಾಗಿ, ಭಿನ್ನಾ– ಭೇದವಾಗಲ್ಪಟ್ಟಂಥಾದ್ದಾಗುತ್ತಲು, ಪಂಚಭೂತಾತ್ಮಿಕಾ–ಕ್ರಮದಿಂದ ಆಕಾಶಾದಿಪಂಚಭೂತ

೧–೧ ಕಾರಿ (ಕ). ೨–೨ ಗ್ರಂಥ (ಕ).

ಸ್ವರೂಪಿಣಿಯಾಗಿರ್ದಂಥಾದ್ದು. ನಿತ್ಯಂ–ಎಲ್ಲಾಗಳೂ, ಭವತಿ–ಆಗುತ್ತಿದ್ದಿತು, ತಸ್ಯಾಃ–ಆ ಪಂಚಭೂತಾತ್ಮಿಕೆಯ ದೆಶೆಯಿಂದ, ಇದಂ–ಈ ತೋರುವಂಥ, ಜಗತ್–ಉರ್ವೀ ಪರ್ವ್ವತ ಸರಿತ್ಸಮುದ್ರಾದಿಕಜಗತ್ತು (ಸ್ಥೂಲ ಶರೀರಾತ್ಮಕವು) ಆಸೀತ್–ಆಯಿತು.

ಆದೌ ವ್ಯೋಮ್ನಿ ಸ್ಥಿತೋ ಭಾತಿ ಸಾಕ್ಷಾದ್ದೇವಸ್ಸದಾಶಿವ ः ।
ಸದಾಶಿವಾದೀಶ್ವರೋಽಪಿ ಸಂಭೂತಃ ಪವನೇ ಸ್ಥಿತಃ ॥ ॥೨೩॥

ಆದೌ–ಶಾಂತ್ಯತೀತಕಲಾವ್ಯಾಪ್ತಹುದರಿಂದ ಆದಿಯಾಗಿರ್ದಂಥ, ವ್ಯೋಮ್ನಿ–ಆಕಾಶತತ್ತ್ವದಲ್ಲಿ, ದೇವಃ–ದಿವ್ಯತೇಜೋರೂಪನಾಗಿರ್ಪಂಥ, ಸದಾಶಿವಃ–ಮನೋನ್ಮನೀಶಕ್ತಿಯೊಡಗೂಡಿದ ಸದಾಶಿವನು, ಸಾಕ್ಷಾತ್–ಪ್ರತ್ಯಕ್ಷವಾಗಿ, ಭಾತಿ–ಅನುಗ್ರಾಹಕನಾಗಿ ಪ್ರಕಾಶಿಸುತ್ತಿರ್ಪನು, ಸದಾಶಿವಾತ್–ಈ ಸದಾಶಿವ ದೆಸೆಯಿಂದ, ಸಂಭೂತಃ–ಸ್ವರೂಪಿಸಲ್ಪಟ್ಟಂಥ, ಈಶ್ವರೋಽಪಿ–ಮಾಯೆಯೆಂಬ ಶಕ್ತಿಯೊಡಗೂಡಿದ ಮಹೇಶ್ವರನು, ಪವನೇ–ವಾಯುತತ್ತ್ವದಲ್ಲಿ, ಸ್ಥಿತಃ–ತಿರೋಧಾಯಕನಾಗಿರಲ್ಪಟ್ಟವನು.

ಈಶ್ವರಾದಭವದ್ರುದ್ರೋ ವಹ್ನೌ ಸ್ಥಿತ್ವಾ ಪ್ರತಾಪವಾನ್ ।
ರುದ್ರಾದ್ವಿಷ್ಣುರ್ಮಹಾತೇಜಾ ವಾರಿತತ್ತ್ವೇ ವ್ಯವಸ್ಥಿತ ः ॥ ॥೨೪॥

ಈಶ್ವರಾತ್–ಅನಂತೇಶ್ವರನ ದೆಶೆಯಿಂದ, ರುದ್ರಃ–ಶ್ರೀಕಂಠೇಶ್ವರನು, ವಹ್ನೌ–ಅಗ್ನಿತತ್ತ್ವದಲ್ಲಿ, ಸ್ಥಿತ್ವಾ–ರುದ್ರಾಣಿಯೆಂಬ ಶಕ್ತಿಯೊಡಗೂಡಿರ್ದು, ಪ್ರತಾಪವಾನ್–ಸಂಹರಿಪ ಪ್ರತಾಪವುಳ್ಳಾತನು, ಅಭವತ್–ಆದನು. ರುದ್ರಾತ್–ಆ ಶ್ರೀಕಂಠೇಶ್ವರನ ದೆಶೆಯಿಂದಲಾದ, ವಿಷ್ಣುಃ–ಲಕ್ಷ್ಮೀಶಕ್ತಿಯೊಡಗೂಡಿದ ನಾರಾಯಣನು, ಮಹಾತೇಜಾಃ–ಬ್ರಹ್ಮಾಂಡರಕ್ಷಣಮಹಾಸಮರ್ಥನಾಗಿ, ವಾರಿತತ್ತ್ವೇ–ಅಪ್‌ತತ್ತ್ವದಲ್ಲಿ, ವ್ಯವಸ್ಥಿತಃ–ಇರಲ್ಪಟ್ಟನು.

ವಿಷ್ಣುತತ್ತ್ವೋದಿತೋ ಬ್ರಹ್ಮಾ ಪೃಥ್ವೀತತ್ತ್ವೇ ವ್ಯವಸ್ಥಿತಃ ।
ಏವಂ ಪರಾಯಾಶ್ಶಕ್ತೇರ್ವಿಶ್ವರಾಪಾಃ ಪಂಚಮೂರ್ತಯಃ ॥೨೫॥

ವಿಷ್ಣುತತ್ತ್ವೋದಿತ ಃ–ನಾರಾಯಣಸ್ವರೂಪದಿಂದ ಆಗಲ್ಪಟ್ಟಂಥ, ಬ್ರಹ್ಮಾ–ಸೃಷ್ಟಿಕರ್ತನಾದ ಬ್ರಹ್ಮನು, ಪೃಥ್ವೀತತ್ತ್ವೇ–ಪೃಥ್ವೀತತ್ತ್ವದಲ್ಲಿ, ವ್ಯವಸ್ಥಿತಃ–ಬ್ರಹ್ಮಾಣಿಯೆಂಬ ಶಕ್ತಿಗೂಡಿರಲ್ಪಟ್ಟನು, ಏವಂ–ಈ ಪ್ರಕಾರದಿಂದೆ, ಪರಾಯಾಃ– ಪರೇ ಎನಿಸಿಕೊಂಬಂಥ, ಶಕ್ತೇಃ–ಶಾಂತ್ಯತೀತೆಯ ದೆಸೆಯಿಂದ, ವಿಶ್ವರೂಪಾಃ–ಆಕಾಶಾದಿವಿಶ್ವರೂಪಂಗಳು, ಪಂಚಮೂರ್ತಯಃ–ಸದಾಶಿವಾದಿಪಂಚಮೂರ್ತಿಗಳಾದರೆಂಬರ್ಥ.

●

ಸೂ: ಸಕಲತತ್ತ್ವದ್ವಾರಂಗಳಾದ ನಿವೃತ್ತ್ಯಾದಿಕಲೆಗಳು ನಿವೃತ್ತಿಕ್ರಮದಿಂ ಬ್ರಹ್ಮಾದ್ಯಧಿಕಾರ ಮೂರ್ತಿಗಳನಧಿಷ್ಠಿಸಿರ್ಪುದರಿಂದ ಆ ಕಲಾಪ್ರೇರಿಕೆಯಾದ ಶಿವಶಕ್ತಿಯ ಸಾಮರ್ಥ್ಯ, ಈ ಮೂರ್ತಿಗಳಲ್ಲಿ ತೋರುತ್ತಿಹುದೆಂದು ಪೇಳ್ದಪಂ–

ನಿವೃತ್ತಿಶ್ಚ ಪ್ರತಿಷ್ಠಾ ಚ ವಿದ್ಯಾ ಶಾಂತಿಸ್ತಥೈವ ಚ ।
ಶಾಂತ್ಯತೀತಕಲೇತ್ಯೇತಾಸ್ಸ್ಥಿತಾ ಬ್ರಹ್ಮಾದಿಮೂರ್ತಿಷು ॥ ॥೨೬॥

ನಿವೃತ್ತಿಶ್ಚ–ನಿವೃತ್ತಿಕಲೆಯು, ಪ್ರತಿಷ್ಠಾ ಚ–ಪ್ರತಿಷ್ಠೆಯೆಂಬ ಕಲೆಯು, ವಿದ್ಯಾ–ವಿದ್ಯೆಯೆಂಬ ಕಲೆಯುಂ, ತಥೈವ ಚ–ಹಾಂಗೆಯೇ, ಶಾಂತಿಃ–ಶಾಂತಿಯೆಂಬ ಕಲೆಯು, ಶಾಂತ್ಯತೀತಕಲೇತಿ–ಶಾಂತ್ಯತೀತ ಕಲೆಯೆಂಬ, ಏತಾಃ–ಈ ಪಂಚಕಲೆಗಳು, ಬ್ರಹ್ಮಾದಿಮೂರ್ತಿಷು–ಬ್ರಹ್ಮ ಮುಂತಾದ ಐದು ಮೂರ್ತಿಗಳಲ್ಲಿ, ಸ್ಥಿತಾಃ–ಇರಲ್ಪಟ್ಟವು.

ತಯಾ ಶಿವಾಜ್ಞಯಾ ಹ್ಯೇತೇ ವರ್ತಂತೇ ಸುಮಹೋಜ್ಜ್ವಲಾಃ ।
ಬ್ರಹ್ಮಣೋ ದೇವತಾ ದೈತ್ಯಾ ಮುನಯೋ ಮನವಸ್ತಥಾ ॥ ॥೨೭॥

ತಯಾ–ಆ ಕಲೆಗಳು ಅಧಿಷ್ಠಿಸಿದಂಥ, ಶಿವಾಜ್ಞಯಾ–ಶಿವಶಕ್ತಿಯಿಂದೆ. ಏತೇ–ಈ ಬ್ರಹ್ಮಾದಿಮೂರ್ತಿಗಳು, ಸಮಹೋಜ್ಜ್ವಲಾಃ–ಸೃಷ್ಟ್ಯಾದಿಕೃತ್ಯಂಗಳಂ ಮಾಳ್ಪ ಮಹಾಸಾಮರ್ಥ್ಯ ಮುಳ್ಳವರ್ಗಳಾಗಿ, ವರ್ತಂತೇ–ವರ್ತಿಸುತ್ತಿಹರು, ಬ್ರಹ್ಮಣಃ–ಆ ಮಂತ್ರಸಿದ್ಧನಪ್ಪ ಬ್ರಹ್ಮನ ದೆಶೆಯಿಂದ, ದೇವತಾಃ–ಇಂದ್ರಾದಿಸಕಲದೇವತೆಗಳು, ದೈತ್ಯಾಃ–ದಿತಿಯ ಮಕ್ಕಳಾದ ಬಲೀಂದ್ರಾದಿ ರಾಕ್ಷಸರ್ಗಳು, ಮುನಯಃ–ಸನಕಾದಿಮುನಿಗಳು, ತಥಾ–ಹಾಗೆಯೇ, ಮನವಃ–ಸ್ವಾಯಂಭುವಾದಿ ಮನುಗಳು ಹುಟ್ಟುತ್ತಿಹರೆಂಬರ್ಥ,

ಸ್ವೇದಜಾಶ್ಚಾಂಡಜಾಸ್ಸರ್ವೇ ಪ್ರಾಣಿನಶ್ಚ ಜರಾಯುಜಾಃ ।
ತೃಣಗುಲ್ಮಲತಾವೃಕ್ಷಾದ್ಯನೇಕೋದ್ಭಿಜ್ಜ ಕೋಟಯಃ ॥ ॥೨೮॥

ಸ್ವೇದಜಾಃ – ಬೆವರಿನಿಂದ ಹುಟ್ಟುವ, ಪ್ರಾಣಿನಶ್ಚ – ಪ್ರಾಣಿಗಳು, ಅಂಡಜಾಃ–ತತ್ತಿಯನೊಡೆದು ಹುಟ್ಟುವಂಥ, ಸರ್ವೇ–ಸಮಸ್ತವಾಗಿರ್ಪಂಥ ಪ್ರಾಣಿಗಳು, ಜರಾಯುಜಾಃ–ಮಾಸಿನ ಬಳ್ಳಿಗೂಡಿ ಜನಿಸುವ ಪ್ರಾಣಿಗಳು, ತೃಣಗುಲ್ಮಲತಾ ವೃಕ್ಷಾದ್ಯನೇಕೋದ್ಭಿಜ್ಜಕೋಟಯಃ – ಪರಮಾಣುಪುಂಜವೇ ಬೀಜವಾಗುಳ್ಳ ತೃಣಗುಲ್ಮಲತಾವೃಕ್ಷ ಮುಂತಾದನೇಕುದ್ಭಿಜ್ಜಗಳು.

ಗಿರಯಸ್ಸರಿತಶ್ಚಾನ್ಯೇ ಸಮುದ್ರಾಶ್ಚ ಸರಾಂಸಿ ಚ ।
ಸಂಭವಂತಿ ಕ್ರಮೇಣೈವ ತಸ್ಮಾಚ್ಛಿವಮಯಂ ಜಗತ್ ॥ ॥೨೯॥

ಅನ್ಯೇ–ಈ ಪ್ರಾಣಿವರ್ಗಕ್ಕನ್ಯಂಗಳಾಗಿರ್ಪಂಥ, ಗಿರಯಃ–ಲೋಕಾಲೋಕಾದಿ ಪರ್ವತಂಗಳು, ಸರಿತಃ–ಗಂಗಾದಿನದಿಗಳು, ಸಮುದ್ರಾಶ್ಚ–ಲವಣಾದಿ [೧][ಜಲೋ][೧] ದ ಕಾಂತ್ಯವಾದ ಸಮುದ್ರಾದಿಗಳು, ಸರಾಂಸಿ ಚ–ಅರುಣೋದಯ ಮುಂತಾದ ಸರಸ್ಸುಗಳು, ಕ್ರಮೇಣೈವ–ಕ್ರಮದಿಂದವೇ, ಸಂಭವಂತಿ–ಹುಟ್ಟುತ್ತಿಹವು ತಸ್ಮಾತ್–ಆ ಕಾರಣವಾಗಿ, ಜಗತ್–ಹಿಂದೆ ಹೇಳಿದ ಚೇತನಚೇತನಾತ್ಮಕವಾದ ಜಗತ್ತು. ಶಿವಮಯಂ–ಷಡಧ್ವೋಪಾದಾನಕಾರಣವಾದ ಶಿವತತ್ತ್ವಸ್ವರೂಪವಾಗಿರ್ದಂಥಾದ್ದು.

●

೧–೧ ಗರ್ಭೋ (ಮೈ).

ಸೂ : ಈ ಪ್ರಕಾರದಿಂದ ಶಿವತತ್ತ್ವಪೂರ್ಣತೆಯಿಂದತಿಸಮೀಪತ್ವಮಂ ಸೃಷ್ಟಿ ದ್ವಾರದಿಂ ಪೇಳ್ದು, ಈ ಶಿವತತ್ತ್ವದವ್ಯಕ್ತಾವ್ಯಕ್ತರೂಪಾನುಸಂಧಾನ ಧ್ಯಾನದಿಂ, ಪರಮ[೧]ಶಿವಯೋಗಾತ್ಮಕವಾ[೧]ದ ಮೋಕ್ಷಮಪ್ಪದೆಂದು ಪೇಳ್ದಪಂ–

ಯಸ್ತಂ ಶಿವಂ ಕೇವಲಚಿತ್ಸ್ವರೂಪಂ

ಸೂರ್ಯೇಂದುವೈಶ್ವಾನರ ಮಂಡಲಸ್ಥಂ।

ಗುರುಪ್ರಸಾದಾತ್ತ್ರಿಮಲಕ್ಷಯತ್ವಾತ್

ಧ್ಯಾತ್ವಾ ಯಜೇನ್ಮೋಕ್ಷಸುಖಂ ಸ ಯಾತಿ ॥೩೦॥

ಯಃ–ಯಾವಪುರುಷನು, ತಂ–ಆ ಹಿಂದೆ ಪೇಳಿದ ಸ್ವರೂಪವುಳ್ಳಂಥ, ಮೇಣ್ ವೇದಶಾಸ್ತ್ರಾಗಮಾದಿ ಪ್ರಸಿದ್ಧನಾಗಿರ್ಪಂಥ, ಕೇವಲ–ನಿತ್ಯನಿರ್ಮಲವಾದ, ಚಿತ್–ಪರಪ್ರಕಾಶಿಕೆಯಾದ ಮಹಾಜ್ಞಾನಶಕ್ತಿಯೇ, ಸ್ವರೂಪಂ–ಸ್ವರೂಪವಾಗುಳ್ಳಂಥ, ಸೂರ್ಯೇಂದುವೈಶ್ವಾನರಮಂಡಲಸ್ಥಂ– ಚಕ್ರೋದ್ಧರಣರೂಪವಾದ ಮಹಾಮಂಡಲದಲ್ಲಿ ಸೂರ್ಯಚಂದ್ರಾಗ್ನಿಗಳೆಂಬ ಮಂಡಲತ್ರಯದಲ್ಲಿ ವರ್ತಿಸುತಿರ್ಪಂಥ ಮೇಣ್ ಷಡಾಧಾರಾತ್ಮಕವಾದ ಲಿಂಗಮಧ್ಯಬೀಜಾಕ್ಷರಂಗಳಲ್ಲಿ ಮಂಡಲತ್ರಯರೂಪಿನಲ್ಲಿ ವರ್ತಿಸುತ್ತಿರ್ಪಂಥ ಮೇಣ್ ನೇತ್ರಾಧಾರ ಮಂಡಲತ್ರಯದಲ್ಲಿ ವರ್ತಿಸುತ್ತಿರ್ದಂಥ. ಶುದ್ಧತಾಮಸ ಶುದ್ಧರಾಜಸ ಶುದ್ಧ ಸಾತ್ವಿಕ ರೂಪವಾದ, ಕೃಷ್ಣ ರಕ್ತ ಶ್ವೇತರೂಪವಾದ, ಮಂಡಲತ್ರಯಾತ್ಮಕವಾದ ಪ್ರಣವ ಮಧ್ಯದಲ್ಲಿ ವರ್ತಿಸುತ್ತಿರ್ಪಂಥ, ಶಿವಂ–ಪರಶಿವನನ್ನು, ಗುರುಪ್ರಸಾದಾತ್–ಶ್ರೀಗುರುಪ್ರಸಾದದ ದೆಸೆಯಿಂದ, ತ್ರಿಮಲಕ್ಷಯತ್ವಾತ್–ಆಣವ ಕಾರ್ಮಿಕ ಮಾಯೆಯೆಂಬ ಮಲತ್ರಯದ ನಾಶದ ದೆಸೆಯಿಂದ, ಧ್ಯಾತ್ವಾ–ಧ್ಯಾನವಂ ಮಾಡಿ, ಯಜೇತ್–ಪೂಜಿಸುವನೋ, ಸಃ–ಆ ಧ್ಯಾನಪೂಜಕನಂ, ಮೋಕ್ಷಸುಖಂ–ಮೋಕ್ಷಸುಖವನ್ನು, ಯಾತಿ–ಹೊಂದುತ್ತಾನೆ.

•

ಸೂ: ಈ ನಿಜಮೋಕ್ಷಸಾಧನವಾದ ಶಿವಧ್ಯಾನಮಂ ವಿಸ್ತರವಾಗಿ ಪೇಳಲು, ಮೋಕ್ಷದಲ್ಲಿ ಧ್ಯೇಯವಸ್ತುವಿನ ದ್ವೈವಿಧ್ಯದಿಂದ ಧ್ಯಾನವು ಎರಡು ಪ್ರಕಾರವೆಂದು ಪೇಳುತ್ತ, ಆ ಧ್ಯಾನಂಗಳ ಪೂರ್ವೋತ್ತರ ಭಾಗಮಂ ಪೇಳುತಿರ್ದಪಂ–

ಶಿವಧ್ಯಾನಂ ದ್ವಿಧಾ ಜ್ಞೇಯಂ ಸಗುಣಂ ನಿರ್ಗುಣಂ ತಥಾ ।

ಆದೌ ಸಗುಣಮಾಶ್ರಿತ್ಯ ಪಶ್ಚಾನ್ನಿರ್ಗುಣಮಾಶ್ರಯೇತ್ ॥ ॥೩೧॥

ಶಿವಧ್ಯಾನಂ–ಮುಂದೆ ಪೇಳ್ವ ಶಿವಧ್ಯಾನವು, ಸಗುಣಂ–ಸಗುಣಧ್ಯಾನವೆಂದು, ತಥಾ–ಹಾಗೆ, ನಿರ್ಗುಣಂ–ನಿರ್ಗುಣಧ್ಯಾನವೆಂದು, ದ್ವಿಧಾ–ಎರಡು ಪ್ರಕಾರವಾಗಿ, ಜ್ಞೇಯಂ–ಅರಿಯಲು ಯೋಗ್ಯವು, ಆದೌ–ಮೊದಲಲ್ಲಿ, ಸಗುಣಂ–ಸಾಲಂಬ ಧ್ಯಾನವನೆ, ಆಶ್ರಿತ್ಯ–ಆಶ್ರಯಿಸಿ, ಪಶ್ಚಾತ್–ಅನಂತರದಲ್ಲಿ, ನಿರ್ಗುಣಂ–ನಿರಾಲಂಬ ಧ್ಯಾನವನ್ನು, ಆಶ್ರಯೇತ್–ಆಶ್ರಯಸುವುದು.

೧–೧ ಶಿವಾತ್ಮಕ ಮಾ (ಕ).

ತಾತ್ಪರ್ಯ : ಅನಾದಿ ಜನ್ಮಾಂತರಗಳಲ್ಲಿ ಖಂಡಿತವಾದ ಮಾಯೆಯ ವಿಷಯರಾಶಿ ಪರಂಪರಾಗ್ರಹಣಂ ಮೈಯುಂಡ ಮನಸ್ಸು ಅನಾಸ್ವಾದಿತವಾದ ನಿರಾಲಂಬವಸ್ತು ಗ್ರಹಣವನರಿಯದಾಗಿ ಸಾಲಂಬಕ್ರಮದಿಂದಭ್ಯಾಸಮುಂ ಮಾಳ್ಪುದೆಂಬುದರ್ಥ.

●

ಸೂ : ಈ ಸಾಲಂಬ ನಿರಾಲಂಬ ಧ್ಯಾನಾನು[೧]ಸಂಧಾನದಿಂದ[೧] ಉಭಯ ವಿಧವಾದ ಧ್ಯೇಯಸ್ವರೂಪವನು ಪೇಳ್ದಪಂ–

ಸಗುಣಂ ಬಹುಧಾ ಪ್ರೋಕ್ತಂ ಬಾಹ್ಯಾ[೨]ಂತರ ಗೋಚರಂ ।
ಇಂದ್ರಿಯಾದಿಭಿರಗ್ರಾಹ್ಯಂ ನಿರ್ಗುಣಂ ತ್ವಂತರಿಕ್ಷವತ್ ॥ ॥೩೨॥

ಬಾಹ್ಯಾಂತರಗೋಚರಂ–ಬಾಹ್ಯಕರ್ಮೇಂದ್ರಿಯವಾದ ಪೂಜಾಜಪಸಾಧನಂಗಳಾದ [೩]ಪಾಣೀ[೩]ಂದ್ರಿಯ ವಾಗಿಂದ್ರಿಯಗಳಿಗೂ ಬಾಹ್ಯಜ್ಞಾನೇಂದ್ರಿಯಮಾದ ನೇತ್ರ ಶ್ರೋತ್ರೇಂದ್ರಿಯಂಗಳಿಗೂ, ಅಭ್ಯಂತರ ಮನೋಬುದ್ಧಿರೂಪವಾದ ಅಂತಃಕರಣಗಳಿಗೂ, ಗೋಚರಂ–ಇಷ್ಟಲಿಂಗಾದಿರೂಪದಿಂದಲೂ ಸ್ತೋತ್ರಮಂತ್ರಾದಿರೂಪದಿಂದಲೂ ವಿಚಿತ್ರಪ್ರಕಾಶಾದಿರೂಪದಿಂದಲೂ ವಿಚಿತ್ರನಾದಾದಿ ರೂಪದಿಂದಲೂ ಬಾಹ್ಯಕ್ಕೆ ಗೋಚರನಾಗಿರ್ಪಂಥ, ಸಗುಣಂ–ಸಗುಣತ್ವವು, ಬಹುಧಾ–ಹಲವು ಪ್ರಕಾರವೆಂದು, ಪ್ರೋಕ್ತಂ–ಹೇಳಲ್ಪಟ್ಟಿತು. ನಿರ್ಗುಣಂತು–ನಿಷ್ಕಲವಾದ ಪರನಾದಗಳಾಯಿತ್ತಾದೊಡೆ, ಅಂತರಿಕ್ಷತ್–ಪಂಚಭೂತವಾದ ಗಗನದೋಪಾದಿಯಲ್ಲಿ, ಇಂದ್ರಿಯಾದಿಭಿಃ–ಬಾಹ್ಯೇಂದ್ರಿಯಂಗಳಿಂದಲೂ ಮನೋಬುದ್ಧಿಗಳಿಂದಲೂ, ಅಗ್ರಾಹ್ಯಂ–ಗ್ರಹಿಸಲು ಯೋಗ್ಯವಲ್ಲದೆ ಇರ್ಪಂತಹದು(ಅನಂದದಂತೆ ಜ್ಞಾನ ಮಾತ್ರ ಗೋಚರವೆಂಬುದರ್ಥಂ–ಇವರಿಂದೆ ಸಕಲ, ಸಕಲ ನಿಷ್ಕಲ ನಿಷ್ಕಲವೆಂಬ ಮೂರು ತತ್ವಂ ಸೂಚಿಸಲ್ಪಟ್ಟಿತು).

●

ಸೂ: ಈ ಸಗುಣನಿರ್ಗುಣಾ[೪]ತ್ಮಕವಾದ[೪] ವಸ್ತುಸಾಕ್ಷಾತ್ಕಾರಂ ಗುರೂಪದೇಶದಿಂದಪ್ಪುದಾಗಿ ಆ ಶ್ರೀಗುರೂಪಾಸ್ತೆಯಂ ಮಾಳ್ಪುದೆಂದು ಪೇಳ್ದಪಂ–

ಏತದ್ದ್ವಯಪರಿಜ್ಞಾನಂ ಗುರುವಕ್ತ್ರೇ ವ್ಯವಸ್ಥಿತಂ ।
ಆತ ಏವ ಮುಮುಕ್ಷೂಣಾಂ ಪೂಜನೀಯಸ್ಸಸದ್ಗುರುಃ ॥ ॥೩೩॥

ಏತದ್ದ್ವಯಪರಿಜ್ಞಾನಂ–ಈ ಸಾಲಂಬನಿರಾಲಂಬವೆಂಬ ಧ್ಯೇಯವಸ್ತುದ್ವಯದ ಅಪರೋಕ್ಷಜ್ಞಾನವು, ಗುರುವಕ್ತ್ರೇ–ಆಚಾರ್ಯನ ಮುಖದಲ್ಲಿ, ವ್ಯವಸ್ಥಿತಂ–ಶಾಸ್ತ್ರದ್ವಾರದಿಂದಲೂ ಕೈದೋರಿಕೆಯಿಂದಲೂ ನಿಶ್ಚಯಿಸಲ್ಪಟ್ಟಿತು. ಅತ ಏವ–ಇದು ಕಾರಣವಾಗಿ, ಮುಮುಕ್ಷೂಣಾಂ–ಮೋಕ್ಷಾಪೇಕ್ಷೆಯುಳ್ಳವರ್ಗೆ ಸಃ–ಆ ಶಿವಯೋಗಜ್ಞಾನದಿಂದುಂಟಾದ ಸಂಪತ್ತಿಯಿಂದ ಪ್ರಸಿದ್ಧನಾಗಿರ್ಪಂಥ, ಗುರುಃ–ಆಚಾರ್ಯನು, ಪೂಜನೀಯಃ–ಪೂಜಿಸಲು ತಕ್ಕಾತನು.

●

೧–೧ ಸಾದದಿಂ (ಕ) ೨ + ಭ್ಯ (ಕ) ೩–೩ ಪ್ರಾಣೇ (ಮೈ) ೪–೪ x (ಕ).

ಸೂ: ಈ ಶಿವಯೋಗಾನುಭವಸಿದ್ಧನಾದ ಶ್ರೀಗುರುವಂ ಪಡೆಯದಾತಂಗೆ ಇಹಪರ ಪ್ರಯೋಜನಗಳು ಆಗವೆಂದು ಪೇಳ್ದಪಂ–

ಸದಾಯುರಾರೋಗ್ಯಮಪಾರಭೂತಿಂ
ವಿದ್ಯಾಂ ಯಶಸ್ಸ್ವರ್ಗ ಸುಖಂ ಚ ಮೋಕ್ಷಂ
ಫಲಾನಿ ಸರ್ವಾಣಿ ನರಸ್ಸಮಾಪ್ತುಂ
ಕಥಂ ಸಮರ್ಥೋರ್ ಗುರುಣಾ ವಿಹೀನಃ ॥೩೪॥

ಸದಾಯುಃ–ಯೋಗಬಲದಿಂದ ಬ್ರಹ್ಮಕಲ್ಪಿತವಾದ ಶತಾಯುವಂ ಮೀರಿದ ದೀರ್ಘಾಯುಷ್ಯವನು, ಆರೋಗ್ಯಂ–ಧೌತಿ ಮೊದಲಾದ ಷಟ್ಕರ್ಮದಿಂ ತ್ರಿದೋಷಶಮನದಿಂದೆ ನಿರೋಗತೆಯನು, ಅಪಾರಭೂತಿಂ–ಅಣಿಮಾದಿ ಮಹಾ ಸಂಪತ್ತುಗಳನ್ನು, ವಿದ್ಯಾಂ–ಲೌಕಿಕ, ವೈದಿಕ, ಆಧ್ಯಾತ್ಮಿಕ [1]ಅ[1]ತಿಮಾರ್ಗಿಕ, [2]ಮಂತ್ರ[2]ಂಗಳೆಂಬ ಮಹಾವಿದ್ಯೆಯನು, ಯಶಃ–ಕೀರ್ತಿಯನು, ಸ್ವರ್ಗಸುಖಂ ಚ–ಸ್ವರ್ಗಾದಿದೇವಲೋಕಂಗಳಲ್ಲಿಯ ಮಹಾಸುಖವನ್ನು, ಮೋಕ್ಷಂ–ಪರ ಶಿವತ್ವಾಭಿವ್ಯಕ್ತಿರೂಪವಾದ ಮೋಕ್ಷವನು, ಸರ್ವಾಣಿ–ಸಮಸ್ತವಾದಂಥ, ಫಲಾನಿ ಅವಾಂತರ ಫಲಂಗಳನು, ಸಮಾಪ್ತುಂ–ಚನ್ನಾಗಿ ಪಡೆಯಲು, ಗುರುಣಾವಿಹೀನಃ–ಗುರುವಿಲ್ಲದೆ ಇರ್ಪಂಥ, ನರಃ–ಪುರುಷನು, ಕಥಂ–ಹೇಗೆ, ಸಮರ್ಥಃ–ಸಮರ್ಥನು? (ಗುರೂಪದೇಶವಿಲ್ಲದಾತಂಗೆ ಆವ ಪ್ರಯೋಜನಂಗಳಂ ಇಲ್ಲವೆಂಬುದರ್ಥ).

●

ಸೂ: "ಶಿವ ಏವ ಗುರುಸ್ಸಾಕ್ಷಾತ್" ಎಂಬುದಾಗಿ ಪರಾಪರಜ್ಞಾನಸಂಪತ್ತಿಯಿಂದೆ ಆಚಾರ್ಯಪಟ್ಟಾಭಿಷಿಕ್ತನಾದ ಶ್ರೀಗುರುವನು ಶಿವನಂ ಪೂಜಿಸುವಂತೆ ಪೂಜಿಪುದೆಂದು ಪೇಳ್ದಪಂ–

ಉಕ್ತಲಕ್ಷಣಸಂಯುಕ್ತಮಾರ್ಯಂ ಸರ್ವಾರ್ಥವೇದಿನಂ ।
ಕರ್ಮಣಾ ಮನಸಾ ವಾಚಾ ಶಿವವತ್ಪೂಜಯೇದ್ಗುರುಂ ॥ ॥೩೫॥

ಉತ್ತಲಕ್ಷಣಸಂಯುಕ್ತಂ–ಶಿವಾಗಮೋಕ್ತವಾದ ಗುರುಲಕ್ಷಣದಿಂ ಸಂಪನ್ನನಾಗಿರ್ಪಂಥ, ಆರ್ಯಂ–ಲೋಕಪೂಜ್ಯನಾಗಿರ್ಪಂಥ, ಸರ್ವಾರ್ಥವೇದಿನಂ–ಸಕಲಶಾಸ್ತ್ರ ಜ್ಞಾನಿಯಾಗಿರ್ಪಂಥ ("ಸಿದ್ಧಾಂತ ಏವ ಸಿದ್ಧಾಂತಃ ಪೂರ್ವಪಕ್ಷಸ್ತಥಾಪರೇ" ಎಂಬುದಾಗಿ ಸಿದ್ಧಾಂತಜ್ಞಾನಬಲದಿಂದನ್ಯಶಾಸ್ತ್ರಂಗಳಂ ಪೂರ್ವಪಕ್ಷಮಾಗಿ ತಿಳಿದಾತನೆಂಬುದರ್ಥ), ಗುರುಂ–ಆ ಶ್ರೀಗುರುವನು, ಶಿವವತ್–ಶಿವನಂತೆ ಕರ್ಮಣಾ–ಕ್ರಿಯೆಯಿಂದ, ಮನಸಾ–ಮನಸ್ಸಿನಿಂದ, ವಾಚಾ–ವಾಕ್ಯದಿಂದ, ಪೂಜ್ಯಯೇತ್–ಪೂಜಾಧ್ಯಾನಸ್ತೋತ್ರಂಗಳಿಂದ ಭಜಿಸವುದು.

●

ಸೂ : ಆ ಶ್ರೀಗುರುವಿನತ್ತಣಿಂ ಶಿವದೀಕ್ಷೆಯಿಂ ಪಡೆದಾತಂಗೆ ಸಂದೇಹವಿಲ್ಲದೆ[1] ಸಿದ್ಧಿಯುಮಪ್ಪದೆಂದು ಪೇಳ್ದಪಂ–

೧–೧ ಆ (ಕ). ೨–೨ ಮಾತ್ರಿಂಕ (ಕ).

ತಸ್ಮಾದ್ಗುರುಮು¹ಖಾದೇ¹ವ ದೀಕ್ಷಿತೋಯಶ್ಶಿವಾಶ್ರಿತಃ ।

ಚತುರ್ವರ್ಗಫಲಾವಾಪ್ತೇಸ್ಸುಖಂ ತಸ್ಯಕರೇ ಸ್ಥಿತಂ ॥ ॥೩೬॥

ಯಃ–ಯಾವನೊರ್ವನು, ತಸ್ಮಾತ್–ಆ ಪೂರ್ವೋಕ್ತವಾಗಿರ್ದಂಥ, ಗುರುಮುಖಾದೇವ ಗುರುಶ್ರೇಷ್ಠನತ್ತಣಿಂದವೇ, ದೀಕ್ಷಿತಃ–ಶಿವದೀಕ್ಷೆಯಂ ಪಡೆದಾತನಾಗಿಯೂ (ಆ ಶಿವದೀಕ್ಷೆಯು, ಸದ್ಯೋನಿರ್ವಾಣದೀಕ್ಷೆ, ಅಸದ್ಯೋನಿರ್ವಾಣದೀಕ್ಷೆ ಶಿವಧರ್ಮಿಣಿ ಲೋಕಧರ್ಮಿಣಿ ಭೌತಿಕಿ ನೈಷ್ಠಿಕೆ ಮುಂತಾಗಿ ಮಂತ್ರಕ್ರಿಯಾರೂಪದಿಂ ಪಲವು ತೆರನಾದರೂ, ಸಮಯದೀಕ್ಷೆ ಸಾಧಕದೀಕ್ಷೆ ಆಚಾರ್ಯಾಭಿಷೇಕವೆಂದು ಮೂರು ಕಟ್ಟಾಗಿರ್ಪುದು. ಅಲ್ಲಿ ಅಸಮರ್ಥರ್ಗೆ ಮಾಳ್ಪುದೇ ಸಾಧಕಶಿಕ್ಷೆ. ಸಾಧಕರೊಳಗೆ ವಿಶಿಷ್ಟವಾದ ಉಪದೇಶಕರ್ತೃವಿಂಗೆ ಮಾಳ್ಪುದೇ ಆಚಾರ್ಯಾಭೀಷೇಕವಾದ ಕಾರಣ ಆಚಾರ್ಯನಿಂದಲೇ ಉಪದೇಶಮಂ ಪಡೆವುದು ಅನ್ಯರಿಂ ಪಡೆಯಲಾಗದೆಂದರ್ಥ), ಶಿವಾಶ್ರಿತಃ–ನಿರ್ಮಲತ್ವವನಾಶ್ರಯಿಸಿ ದಾತನುಂಟೋ, ತಸ್ಯ–ಆ ಶಿವದೀಕ್ಷಿತನ, ಕರೇ–ಹಸ್ತದಲ್ಲಿ ಚತುರ್ವರ್ಗಫಲಾವಾಪ್ತಿ ಸುಖಂ–ಧರ್ಮಾರ್ಥಕಾಮಮೋಕ್ಷವೆಂಬ ನಾಲ್ಕು ಪ್ರಕಾರವಾದ ಫಲಪ್ರಾಪ್ತಿಯಿಂದಾಗುವ ಸುಖವು, ಸ್ಥಿತಂ–ಇರಲ್ಪಟ್ಟಿತು.

●

ಸೂ : ಶಿವನಾಗ್ರಹಮಂ ಪಡೆದಾತನು ದೀಕ್ಷಾಪೂರ್ಣತೆಗೋಸಂಗ ಶರೀರಾಂತ್ಯಮಾಗಿ ದೀಕ್ಷೋತ್ತರದಲ್ಲಿ ವಿಹಿತವಾದ ಪೂಜಾಧ್ಯಾನಂಗಳಂ ಮಾಳುದೆಂದು ಪೇಳ್ದಪಂ–

ತ್ರಿಕಾಲಂ ವಾ ದ್ವಿಕಾಲಂ ವಾಪ್ಯೇಕಕಾಲಮಥಾಪಿ ವಾ ।

ಭಕ್ತ್ಯಾ ಗುರೂಕ್ತಮಾರ್ಗೇಣ ಪೂಜಯೇಚ್ಚಿನ್ಮಯಂ ಶಿವಂ ॥ ॥೩೭॥

ತ್ರಿಕಾಲಂ ವಾ–ಉದಯ ಮಧ್ಯಾಹ್ನ ಸಾಯಂಗಳೆಂಬ ತ್ರಿಕಾಲದಲ್ಲಿಯಾದರೂ, ದ್ವಿಕಾಲಂ ವಾ–ಉದಯಾಸ್ತಗಳೆಂಬೆರಡು ಕಾಲದಲ್ಲಿಯಾದರೂ, ಏಕಕಾಲಮಥಾಪಿ ವಾ–ಪೂರ್ವೋಕ್ತಕಾಲಗಳಲ್ಲೊಂದು ಕಾಲವಾದರೂ, ಭಕ್ತ್ಯಾ–ವಿಷಯವೈರಾಗ್ಯದಿಂ ಪೂಜ್ಯಪ್ರತಿರೂಪವಾದ ²ಭಕ್ತಿಯಿಂ, ಗುರೂಕ್ತ ಮಾರ್ಗೇಣ–ಶಾಸ್ತ್ರಾನುಭವ ಸಮ್ಮತವಾಗಿ ಶ್ರೀಗುರು ನಿರೂಪಿಸಿದ ಮಾರ್ಗದಿಂದೆ, ಚಿನ್ಮಯ–ಜ್ಞಾನ ಕ್ರಿಯಾ ಶಕ್ತಿ ರೂಪನಾದ, ಶಿವಂ–ಶಿವನನ್ನು, ಪೂಜಯೇತ್–ಪೂಜಿಸುವುದು.

●

ಸೂ : ಈ ಪೂರ್ವೋಕ್ತವಾದ ಶಿವಪೂಜೆ, ಎರಡು ಪ್ರಕಾರಂ, ಅದರೊಳೊಂದಕ್ಕೆ ಮುಖ್ಯತ್ವಮಂ ಪೇಳ್ದಪಂ–

ಅಂತರ್ಯಾಗೋ ಬಹಿರ್ಯಾಗೋ ದ್ವಿವಿಧಂ ತಚ್ಛಿವಾರ್ಚನಂ ।

ಮುಖ್ಯಾ ಚಾಭ್ಯಂತರೀ ಪೂಜಾ ಸಾ ಚ ಬಾಹ್ಯಾರ್ಚನೋದಿತಾ ॥ ॥೩೮॥

ತಚ್ಛಿವಾರ್ಚನಂ–ಆ ಪೂರ್ವೋಕ್ತ ಶಿವಪೂಜೆಯುಂ, ಅಂತರ್ಯಾಗಃ–ಅಂತಃಪೂಜೆಯೆಂದೂ, ಬಹಿರ್ಯಾಗಃ–ಬಾಹ್ಯ ಪೂಜೆಯೆಂದೂ, ದ್ವಿವಿಧಂ–ಎರಡು ಪ್ರಕಾರವು, ತತ್ರ–ಆ ಎರಡು ಪ್ರಕಾರದಲ್ಲಿ,

---

೧–೧ ಖೇನೈವ (ಕ) ೨ + ನಿಜ (ಕ)

ಅಭ್ಯಂತರೀಪೂಜಾ–ಅಂತರಂಗವಾದ ಜ್ಞಾನ ಬಾಹ್ಯಾರ್ಚನೋದಿತಾ–ಬಾಹ್ಯರ್ಚನೋದಿತಾ–ಬಾಹ್ಯಪೂಜೆಯಿಂ ಜನಿಸಲ್ಪಟ್ಟಂಥಾದ್ದು. (ಬಾಹ್ಯಪೂಜಾ ವಿಹೀನಂಗೆ ಅಂತಃಪೂಜೆಯಾಗದೆಂಬರ್ಥ).

●

ಸೂ : ಅಂತಃಪೂಜಾವಿಧಾನವನರಿಯದೆ ಬಾಹ್ಯಪ್ರತಿಮಾದಿಕಂಗಳಲ್ಲಿ ಪೀಠಾರ್ಚನೆಯನೆ ಮಾಳ್ಪವರ್ ಅಜ್ಞರೆಂದು ಪೇಳ್ದಪಂ–

ಆತ್ಮಸ್ಥಮತ್ಯಂತರುಚಿಂ ಪ್ರಶಾಂತ
ಮಶ್ರಾಂತಮೀಶಂ ಹಿ ಯಜಂತಿ ಸಂತಃ ।
ತಂ ಬಾಹ್ಯನಾನಾಪ್ರತಿಮಾಸು ಬಾಹ್ಯ
ಕ್ರಿಯಾಭಿರೇವಾಲ್ಪಧಿಯೋ ಯಜಂತಿ ॥೩೯॥

ಸಂತಃ–ಸತ್ಪುರುಷರುಗಳು, ಅತ್ಯಂತರುಚಿಂ–"ಜ್ವಲತ್ಕಾಲಾನಲಾ ಭಾಸಾ [೧]ತಟತ್ಕೋಟಿ[೧] ಸಮಪ್ರಭಾ" ಎಂದುದಾಗಿ ವಿಶಿಷ್ಟ ಜ್ಯೋತಿಮಯನಾಗಿರ್ಪಂಥ, ಪ್ರಶಾಂತಂ–ಪರಮಶಾಂತನಾಗಿರ್ಪಂಥ, ಈಶಂ–ಅನುಗ್ರಹಕರ್ತೃವಾದ ಪರಶಿವನನ್ನು, ಅಶ್ರಾಂತಂ–ಅನವರತವೂ (ಜಾತ, ಪ್ರೇತ, ಸೂತಕಾದಿ ಸಂಕಲ್ಪವಿಲ್ಲವಾಗಿ ಉದಯಾದಿಕಾಲನಿಯಮವಿಲ್ಲದೆ ಜಾಗ್ರದಾದ್ಯವಸ್ಥಾನಿಯಮವಿಲ್ಲದೆ ಆವಾಗವೂ ಎಂಬುದರ್ಥಂ), ಆತ್ಮಸ್ಥಂ–ಆತ್ಮೀಯವಾದ ತನುತ್ರಯದಲ್ಲಿ ತೊಲಗದೆ ಇರ್ಪಂಥಾತನನ್ನಾಗಿ, ಯಜಂತಿ–ಪೂಜಿಸುತಿರ್ಪರು, ತಂ–ಆ ಪರಶಿವನನ್ನು, ಬಾಹ್ಯ ನಾನಾಪ್ರತಿಮಾಸು–ಅಂಗತ್ರಯದಿಂದ ಬಾಹ್ಯಮಾದ ನಾನಾ ಪೀಠಸ್ಥಮಾದ ಪ್ರತಿಮೆಗಳಲ್ಲಿ, ಬಾಹ್ಯಕ್ರಿಯಾದಿರೇವ–ಆಹ್ವಾನ ವಿಸರ್ಜನಾದಿಯಾದ ಬಾಹ್ಯ ಕ್ರಿಯೆಗಳಿಂದವೇ, ಮೇಣ್ ಜ್ಞಾನಬಾಹ್ಯವಾದ ಕ್ರಿಯಾಮಾತ್ರೆಗಳಿಂದವೇ, ಅಲ್ಪಧಿಯಃ–ಮಂದಬುದ್ಧಿಗಳು, ಯಜಂತಿ ಹಿ–ಪೂಜಿಸುತಿರ್ಪರಲಾ!

●

ಸೂ: ಅನಂತರದೊಳ್ ಈ ಅಭ್ಯಂತರ ಪೂಜಾವಿಧಾನಕ್ಕೆ ವಿಮಲವಾದ ಹೃದಯಕಮಲವೇ ಆಶ್ರಯಮಪ್ಪುದರಿಂದೆ ಪೂರ್ವಮಧ್ಯೋರ್ಧ್ವವೆಂಬ ಹೃದಯಂಗಳೊಳ್ ಪೂರ್ವಹೃದಯಮಂ ಕಮಲರೂಪದಿಂ ಪೇಳುತ್ತದರೊಳ್ ದಿವ್ಯಮೂರ್ತಿಯಂ ಚಿಂತಿಪುದೆಂದು ಪೇಳುತ್ತಿರ್ದಪಂ–

ಹೃತ್ಪದ್ಮಂ ಶಿವಧರ್ಮಕಂದಸಹಿತಂ, ಸುಜ್ಞಾನನಾಳಂ ತಥಾ
ನಿತ್ಯೈಶ್ವರ್ಯದಳಾಷ್ಟಕಂ ಶಶಿನಿಭಂ ವೈರಾಗ್ಯಸತ್ಕರ್ಣಿಕಂ
ಶ್ರೀರುದ್ರೇಶ್ವರಕೇಸರಾಂಚಿತಮಿದಂ ಸಂಚಿಂತ್ಯ ತನ್ಮಧ್ಯಮೇ
ಸೂರ್ಯೇಂದೂಜ್ವಲವಹ್ನಿಮಂಡಲಗತಂ ಧ್ಯಾಯೇಚ್ಛಿವಂ ಚಿನ್ಮಯಂ ॥೪೦॥

ಶಿವಧರ್ಮಕಂದಸಹಿತಂ–ಆಗಮೋದಿತಂಗಳಾದ ಶಿವಾರ್ಚನಾದಿ ಸತ್ಕೃತ್ಯಂಗಳಿಂ ಜನಿತಮಾದ ಪುಣ್ಯಪುಂಜವೆಂಬ ಕಂದದೊಡನೆ ಕೂಡಿರ್ದಂಥ, ಸುಜ್ಞಾನನಾಳಂ ಆ ಪುಣ್ಯಕಂದದಿಂ ಜನಿಸಿದ

೧–೧ ವಿದ್ಯುತ್ಕೋಟಿ (ಕ)

ನಿತ್ಯಾನಿತ್ಯವಿವೇಕವೆಂಬ ನಾಳವುಳ್ಳಂಥ, ತಥಾ–ಹಾಂಗೆ, ನಿತ್ಯೈಶ್ವರ್ಯದಳಾಷ್ಟಕಂ–ಜ್ಞಾನಪ್ರಭಾಷದಿಂ ಜನಿತಮಾದ, ಅಣಿಮಾ^೧ದ್ಯೈ^೧ಶ್ವರ್ಯಂಗಳೇ ಎಂಟೆಸಳಾಗಿಯುಳ್ಳಂಥ, ಶಶಿನಿಭಂ–ಶುದ್ಧಸಾತ್ವಿಕವಪ್ಪುದರಿಂ ಚಂದ್ರಂಗೆ ಸಮಾನವಾದಂಥ ವೈರಾಗ್ಯಸತ್ಕರ್ಣಿಕಂ–ಇಹಪರವೈರಾಗ್ಯವೆಂಬ ಪರಮ ಕರ್ಣಿಕೆಯುಳ್ಳಂಥ, ಶ್ರೀರುದ್ರೇಶ್ವರಕೇಸರಾಂಚಿತಂ–ಅಷ್ಟದಿಕ್ಪತಿಗಳಾದ ರುದ್ರರೆಂಬ ಅಷ್ಟ ವಿದ್ಯೇಶ್ವರರೆಂಬ ಕೇಸರಂಗಳಿಂದೊಪ್ಪುವಂಥ, ಇದಂ ಹೃತ್ಪದ್ಮಂ–ಈ ಹೃದಯಕಮಲವನು, ಸಂಚಿಂತ್ಯ–ಚೆನ್ನಾಗಿ ನೆನೆದು, ತನ್ಮಧ್ಯಮೇ–ಆ ವೈರಾಗ್ಯಕರ್ಣಿಕಾಮಧ್ಯದಲ್ಲಿ, ಸೂರ್ಯೇಂದೂಜ್ವಲವಹ್ನಿಮಂಡಲಗತಂ–ಅಕಾರ ಉಕಾರ ಮಕಾರವೆಂಬ ಸೂರ್ಯಚಂದ್ರಾಗ್ನಿಮಂಡಲತ್ರಯ ಮಧ್ಯವರ್ತಿಯಾದಂಥ, ಚಿನ್ಮಯಂ–ಜ್ಞಾನರೂಪನಾದಂಥ, ಶಿವಂ–ಪರಶಿವನನ್ನು, ಧ್ಯಾಯೇತ್–ಧ್ಯಾನಿಪುದು.

ತಾತ್ಪರ್ಯ : **ಅಧೋ ನಿಷ್ಟ್ಯಾವಿತಸ್ತ್ಯಾಂ ತು ನಾಭೇರುಪರಿತಿಷ್ಠತಿ ।**
ಹೃದಯಂತದ್ವಿಜಾನೀಯಾತ್ ವಿಶ್ವಸ್ಯಾಯತನಂ ಮಹತ್ ॥
ಹೃದಯಸ್ಯಾಸ್ಯ ಮಧ್ಯೇ ಪುಂಡರೀಕಮಿವಸ್ಥಿತಂ ।
ಧರ್ಮಕಂದಸಮುದ್ಭೂತಂ ಜ್ಞಾನನಾಳಸುಶೋಭಿತಂ॥
ಐಶ್ವರ್ಯಾಷ್ಟದಳೋಪೇತಂ ಪರವೈರಾಗ್ಯಕರ್ಣಿಕಂ

ಎಂದುದಾಗಿ, ನಾಭಿಯಿಂ ಮೇಲೆ ದ್ವಾದಶಾಂಗುಲದಲ್ಲಿರ್ಪ ಮಹದ್ರೂಪಮಾದ ಹೃದಯದ ಮಧ್ಯದಲ್ಲಿ ತಮೋಗುಣಾತ್ಮಕವಾದ, ಅಧರ್ಮ ಅಜ್ಞಾನ ಅನೈಶ್ವರ್ಯಂಗಳೂ, ರಜೋಗುಣಾತ್ಮಕವಾದ ಅ ವೈರಾಗ್ಯವೂ, ದೀಕ್ಷಾಸಾಮರ್ಥ್ಯದಿಂದ ನಾಶಮಾಗಲು, ಉಳಿದ ಸತ್ವಗುಣಾತ್ಮಕವಾದ ಧರ್ಮಕಂದದಿಂ, ಸುಜ್ಞಾನನಾಳದಿಂದೆ ಶ್ವರ್ಯಾದ್ಯಷ್ಟದಳದಿಂ, ಪರವೈರಾಗ್ಯಕರ್ಣಿಕೆಯಿಂ, ರುದ್ರೇಶ್ವರಾದಿ ಕೇಸರಂಗಳಿಂ ಕೂಡಿದ ದಿವ್ಯಕಮಲದ ಕರ್ಣಿಕಾಮಧ್ಯದ ಮಂಡಲತ್ರಯದ ಪ್ರಣವಪೀಠದೊಳ್ ಪರಮಾತ್ಮನಂ ಧ್ಯಾನಿಪುದೆಂಬುದಭಿಪ್ರಾಯ.

ಜ್ಞಾನಂ ಧರ್ಮೋದ್ಭವಂ ಸಾಕ್ಷಾತ್ ಜ್ಞಾನಾದ್ವೈರಾಗ್ಯ ಸಂಭವಃ ।
ವೈರಾಗ್ಯಾತ್ ಪರವೈರಾಗ್ಯಂ ಪರಮಾರ್ಥ ಪ್ರಕಾಶಕಂ ॥

●

ಸೂ : ಈ ಪ್ರಕಾರವಾದ ಹೃದಯಕಮಲಕರ್ಣಿಕಾಮಧ್ಯದಲ್ಲಿ ಧ್ಯಾನಕ್ಕೆಯೋಗ್ಯವಾದ ಶಿವನ ಸಗುಣ–ನಿರ್ಗುಣ ಮೂರ್ತಿಗಳು ಕ್ರಮದಿಂದ ಸಪ್ತಶ್ಲೋಕಂಗಳಿಂ ಪೇಳ್ದಪಂ–

ಪ್ರಸನ್ನವದನಂ ಶಾಂತಂ ದ್ವ್ಯಷ್ಟವರ್ಷೀಯಮುಜ್ಜ್ವಲಂ ।
ಅನೇಕಕೋಟಿಕಂದರ್ಪಲಾವಣ್ಯಸಮವಿಗ್ರಹಂ ॥ ॥೪೧॥

೧–೧ ದಷ್ಟೈ (ಕ)

ಪ್ರಸನ್ನವದನಂ–ಪ್ರಸನ್ನ ಮುಖವುಳ್ಳಂಥ, ಶಾಂತಂ–ರಾಗದ್ವೇಷ ರಹಿತನಾಗಿರ್ಪಂಥ, ದ್ವಷ್ಟವರ್ಷೀಯಂ–ಹದಿನಾರು ವರ್ಷದವನಾಗಿರ್ಪಂಥ, ಉಜ್ಜಲಂ–ಶೃಂಗಾರಮೂರ್ತಿಯಾಗಿರ್ಪಂಥ, ಅನೇಕಕೋಟಿಕಂದರ್ಪಲಾವಣ್ಯಸಮವಿಗ್ರಹಂ–ಅನೇಕಕೋಟಿ ಮನ್ಮಥರಂಗಳಲಾವಣ್ಯಕ್ಕೆ ಸಮಾನವಾದ ಶರೀರವುಳ್ಳಂಥ.

ಚತುರ್ಭುಜಂ ಮೃಗೀಟಂಕ ವರದಾಭಯಧಾರಿಣಂ ।

ಚಂದ್ರಲೇಖಾಶಿರೋತ್ತಂಸಂ ಶರಚ್ಚಂದ್ರಾಯುತದ್ಯುತಿಂ ॥ ॥೪೨॥

ಚತುರ್ಭುಜಂ–ನಾಲ್ಕು ಭುಜಗಳುಳ್ಳಂಥ, ಮೃಗೀಟಂಕವರದಾಭಯ ಧಾರಿಣಂ–ಮೃಗಿ–ಹಲ್ಲೇ, ಟಂಕ–ಇಮ್ಮೊನೆಯಕೈದು, ವರದ–ವರದಹಸ್ತ, ಅಭಯ–ಅಭಯ ಹಸ್ತ ಇವುಗಳನ್ನು ಧಾರಿಣಂ–ಧರಿಸಿರ್ಪಂಥ; ಚಂದ್ರಲೇಖಾಶಿರೋತ್ತಂಸಂ–ಚಂದ್ರಕಲೆಯೇ ಶಿರೋಭೂಷಣವಾಗುಳ್ಳಂಥ, ಶರಚ್ಚಂದ್ರಾಯುತದ್ಯುತಿಂ–ಶರತ್ಕಾಲದ ಹತ್ತು ಸಾವಿರ ಚಂದ್ರರ ಕಾಂತಿಯುಳ್ಳಂಥ.

ದಿವ್ಯಾಂಬರಧರಂ ದೇವಂ ದಿವ್ಯಗಂಧಾನುಲೇಪನಮ್ ।

ದಿವ್ಯಾಭರಣಶೋಭಾಢ್ಯಂ ದಿವ್ಯಪುಷ್ಪೈರಲಂಕೃತಂ ॥ ॥೪೩॥

ದಿವ್ಯಾಂಬರಧರಂ–ದಿವ್ಯಾಂಬರಧಾರಿಯಾಗಿರ್ಪಂಥ, ದೇವಂ–ಪ್ರಕಾಶರೂಪನಾಗಿರ್ಪಥ, ದಿವ್ಯ ಗಂಧಾನುಲೇಪನಂ–ದಿವ್ಯಗಂಧಾನುಲೇಪನವುಳ್ಳಂಥ, ದಿವ್ಯಾಭರಣಂ, ಶೋಭಾಢ್ಯಂ–ದಿವ್ಯಾಭರಣಂಗಳ ಕಾಂತಿಯಿಂ ಪೂಜ್ಯನಾಗಿರ್ಪಂಥ, ದಿವ್ಯಪುಷ್ಪೈಃ–ದಿವ್ಯಕುಸುಮಗಳಿಂದ, ಅಲಂಕೃತಂ–ಅಲಂಕರಿಸಲ್ಪಟ್ಟಂಥ.

ತ್ರಿಣೇತ್ರಂ ತ್ರಿಗುಣಾಧಾರಂ ತ್ರಿಮಲಕ್ಷಯಕಾರಣಮ್ ।

ಸರ್ವಮಂಗಲಯಾ ದೇವ್ಯಾ ನಿಜವಾಮಾಂಗಶೋಭಿತಂ ॥೪೪॥

ತ್ರಿಣೇತ್ರಂ–ತ್ರಿಲೋಚನನಾಗಿರ್ಪಂಥ, ತ್ರಿಗುಣಾಧಾರಂ–ಶುದ್ಧ ಸತ್ವ ರಜೋಸ್ತಮೋಗುಣಂಗಳೇ ಆಧಾರವಾಗುಳ್ಳಂಥ, ತ್ರಿಮಲಕ್ಷಯಕಾರಣಂ–ಆಣವ ಕಾರ್ಮಿಕ ಮಾಯಿಕವೆಂಬ ಮಲತ್ರಯದ ನಾಶಕ್ಕೆ ಕರ್ತೃವಾಗಿರ್ಪಂಥ, ಸರ್ವಮಂಗಲಯಾ–ಅನುಗ್ರಹಕಾರಿಣಿಯಪ್ಪುದರಿಂ ಸಕಲಮಂಗಲಾತ್ಮಕರ್ಪಂಥ, ದೇವ್ಯಾ–ಉಮಾದೇವಿಯಿಂದ, ನಿಜವಾಮಾಂಗ ಶೋಭಿತಂ–ವಾಮಭಾಗ ಶರೀರದ ಚೆಲುವಿಕೆಯುಳ್ಳಂಥ

ಭಾಸ್ವತ್ಕಲ್ಪತರೋರ್ಮೂಲೇ ಫಲಪುಷ್ಪಸಮನ್ವಿತೇ ।

ವೇದಿಕಾಯಾಂ ಸುಖಾಸೀನಂ ನವರತ್ನಮಯಾಸನೇ ॥ ॥೪೫॥

ಫಲಪುಷ್ಪಸಮನ್ವಿತೇ–ವಿಚಿತ್ರವಾದ ಫಲಪುಷ್ಪಂಗಳಿಂ ಕೂಡಲ್ಪಟ್ಟಂಥ, ಭಾಸ್ವತ್ಕಲ್ಪತರೋರ್ಮೂಲೇ –ಒಪ್ಪುತ್ತಿರ್ಪ ಕಲ್ಪವೃಕ್ಷದಡಿಯಲ್ಲಿಯ, ವೇದಿಕಾಯಾಂ–ವೇದಿಕೆಯಲ್ಲಿಯ, ನವರತ್ನಮಯಾಸನೇ–ವಜ್ರವೈಢೂರ್ಯಾದಿನವರತ್ನಮಯವಾದ ಸಿಂಹಾಸನದಲ್ಲಿ, ಸುಖಾಸೀನಂ–ಆನಂದರೂಪನಾಗಿರ್ಪಂಥ, (ಸಗುಣರೂಪನಾದ ಪಂಚಬ್ರಹ್ಮಮಂತ್ರಾತ್ಮಕನಾದ ಶಿವನಂ ತನ್ನ ಹೃತ್ಕಮಲದಲ್ಲಿ ಪೂಜಿಪುದೆಂದು ಮುಂದಣ ಕ್ರಿಯೆಯೊಡನೆ ಸಂಬಂಧಂ)[೧] ಶಿವನ ನಿರ್ಗುಣತ್ವಮಂ ಪೇಳ್ದಪಂ[೧]

೧–೧ x (ಕ)

ಅದ್ವೈತಮಚ್ಯುತಂ ವಿಷ್ಣುಂ ನಿತ್ಯಂ ನಿರ್ವಾಣಗೋಚರಂ ।

ಅಚಿಂತ್ಯಮಜನವ್ಯಕ್ತಮಾದಿಮಧ್ಯಾಂತವರ್ಜಿತಂ ॥೪೬॥

ಅದ್ವೈತ–ದ್ವೈತವಚಿಲ್ಲದಿರ್ಪಂಥ(ಅನಾದಿ ಮುಕ್ತವಹತನದಿಂದೆ ಏಕಾತ್ಮವಾದಿಗಳ್ಪೇಳ್ವಂತೆ,[೧] ಆತ್ಮನ[೧]ಲ್ಲಿಯೇ ಜೀವಪರಮಾದಿದ್ವೈತಭ್ರಾಂತಿ ಇಲ್ಲದಿರ್ಪಂಥಾತನೆಂಬುದರ್ಥ), ಅಚ್ಯುತಂ–ನಿತ್ಯನಿರ್ಮಲನಪ್ಪುದರಿಂ ಜನನಮರಣಾದಿಯಾದ ಕೇಡಿಲ್ಲದೆ ಇರ್ಪಂಥ, ವಿಷ್ಣುಂ–ವ್ಯಾಪಕನಾಗಿರ್ಪಂಥ(ಮಾಯಾರೂಪನಲ್ಲವೆಂಬುದರ್ಥ), ನಿತ್ಯ–ಸತತೋದಿನಾಗಿರ್ಪಂಥ (ಬುದ್ಧರು ಪೇಳ್ವಂತೆ ಕ್ಷಣಿಕ)ನಲ್ಲವೆಂಬುದರ್ಥ, ನಿರ್ವಾಣಗೋಚರಂ–ಸಕಲತತ್ತ್ವವಿಲಕ್ಷತಾರೂಪಮಾದ ಮುಕ್ತಿಗೆಗೋಚರಿಸುವಂಥ, ಅಚಿಂತ್ಯಂ–ಸಗುಣಧ್ಯಾನಕ್ಕ ಗೋಚರನಲ್ಲದೆ ಇರ್ಪಂಥ, ಅಜಂ–ಜನ್ಮರಹಿತನಾಗಿರ್ಪಂಥ, ಅವ್ಯಕ್ತಂ–ನಿಷ್ಕಲರೂಪನಾಗಿರ್ಪಂಥ, ಆದಿ ಮಧ್ಯಾಂತವರ್ಜಿತಂ–ಸೃಷ್ಟಿ ಸ್ಥಿತಿ ಸಂಹಾಗಳಿಲ್ಲದೆ ಇರ್ಪಂಥ.

ಪರಂ ಶಿವಂ ಹೃದಿ ಧ್ಯಾತ್ವಾ ನಿಶ್ಚಲೀಬೂತಮಾನಸಃ ।

ಯಜೇದಾಭ್ಯಂತರದ್ರವ್ಯೈರವಧಾನೇನ ತದ್ಯಥಾ ॥ ॥೪೭॥

ಪರಂ–ನಿರಾಲಂಬನಹತನದಿಂ ಶ್ರೇಷ್ಠನಾಗಿರ್ಪಂಥ, ಶಿವಂ–ಶಿವನನ್ನು, ಹೃದಿ–ಪೂರ್ವೋಕ್ತನಾದ ಹೃದಯದಲ್ಲಿ, ನಿಶ್ಚಲೀಭೂತಮಾನಸಃ–ಮುದ್ರೆಗಳಿಂ ನಿಶ್ಚಲವಾದ ಮನಸ್ಸುಳ್ಳಾತನಾಗಿ, ಧ್ಯಾತ್ವಾ–ಧ್ಯಾನಿಸಿ, ಅಭ್ಯಂತರದ್ರವ್ಯೈ–ಮುಂದೆ ಪೇಳ್ವ ಶಮೆಮೊದಲಾದಂತರಂಗ ದ್ರವ್ಯಗಳಿಂ, ಅವಧಾನೇನ–ಏಕಾಗ್ರತೆಯಿಂದ, ಯಜೇತ್–ಪೂಜಿಪುದು. ತತ್–ಆ ಧ್ಯಾನ ಪೂಜಾವಿಧಾನವು, ಯಥಾ–ಹೇಂಗ (ಇದು ಮುಂದಿನ ಪೂಜಾವಿಧಾನದ ಪ್ರಶ್ನೆ).

●

ಸೂ : "ಘೃತಕಾಠಿನ್ಯವನ್ಮೂರ್ತೇಸ್ಸಚ್ಚಿದಾನಂದ ಲಕ್ಷಣಂ" ಎಂದುದಾಗಿ ಈ ಪ್ರಕಾರದಿಂ ಬುದ್ಧಿದ್ವಾರದ ಆತ್ಮಶಕ್ತಿಯ ಬಿಂದುದ್ವಾರದ ಶಿವಶಕ್ತಿಯ ಸಂಪುಟದಿಂ ಹೃದಯಮಧ್ಯದೊಳ್ ಮಂತ್ರಮುರ್ತಿಯಾದ ಶಿವಂಗೆ ಸ್ನಾನಾದಿ ಪೂಜಾವಿಧಾನಮಂ ಶ್ಲೋಕತ್ರಯದಿಂದ ಪೇಳ್ದಪಂ–

ಶಮಾಂಬುಪರಿಷೇಚನಂ ಸಕಲಪೂರ್ಣಭಾವಾಂಬರಂ

ತ್ರಿಶಕ್ತಿಗುಣಸಂಯುತಂ ವಿಹಿತಯಜ್ಞಸೂತ್ರಂ ತಥಾ

ಸ್ವಸಂವಿದನುಲೇಪನಂ ಸಮಧಿಕನುಕಂಪಾಕ್ಷತಾನ್

ಶಿವಾಯ ವಿನಿವೇದಯೇತ್ಪ್ರಕಟಭಕ್ತಿಪುಷ್ಪಾಣಿ ಚ ॥೪೮॥

ಶಮಾಂಬುಪರೀಷೇಚನಂ–ಶಾಂತಿಜಲದಿಂ ಸ್ನಾನಮಂ, ಸಕಲಪೂರ್ಣಭಾವಾಂಬರಂ ಆವರಣವಿಲ್ಲದಿಹುದರಿಂ ನಿರ್ಮಲವಾದ ವಿಶ್ವವ್ಯಾಪಕವೆಂಬ ದುಕೂಲಮಂ, ತ್ರಿಶಕ್ತಿ ಗುಣಸಂಯುತಂ[೨]ವಿಹಿತಯಜ್ಞಸೂತ್ರಂ–ಇಚ್ಛಾ, ಜ್ಞಾನ ಕ್ರಿಯಾಶಕ್ತಿಗಳೆಂಬ ಸೂತ್ರಂಗಳಿಂದೆ ಎಲ್ಲಾ

೧–೧ ತನ್ನ (ಮೈ) ೨–೨ ಮಾಯೆ ಅವಿದ್ಯೆ ಅಜ್ಞಾನವೆಂಬ ಗುಣಂಗಳಲ್ಲಿ ಕೂಡದೆ ಲೇಸಾಗಿರ್ದಂಥ(ಮೈ)

ಆಗಮಂಗಳಲ್ಲಿ ವಿಧಿಸಲ್ಪಟ್ಟ ಯಜ್ಞಸೂತ್ರವನು, ತಥಾ ಹಾಂಗೆ, ಸ್ವಸಂವಿದನುಲೇಪನಂ-ತನ್ನ ಸಮ್ಯಕ್ ಜ್ಞಾನವೆಂಬ ಗಂಧಾನುಲೇಪನಂ, ಸಮಧಿಕಾನುಕಂಪಾಕ್ಷತಾನ್-ಅತಿ ವಿಶೇಷವಾದ ಭೂತದಯೆಯೆಂಬ ಅಕ್ಷತೆಗಳನ್ನು, ಪ್ರಕಟಭಕ್ತಿಪುಷ್ಪಾಣಿ ಚ-ವ್ಯಕ್ತವಾದ ಭಕ್ತಿ ಕುಸುಮಂಗಳನು, ಶಿವಾಯ-ಶಿವಂಗೋಸ್ಕರ, ವಿನಿವೇದಯೇತ್-ಸಮರ್ಪಿಸುವುದು.

ಧೂಪಮಾಂತರಚತುಷ್ಟಯೇನ
ತದ್ದೀಪಮಿಂದ್ರಿಯಗುಣೋತ್ಕರೇಣ ತು
ಕಲ್ಪಯೇಚ್ಚ ಸುಖದುಃಖವರ್ಜಿತಂ
ಜೀವರೂಪಮುಪಹಾರಮಾಂತರೇ ॥೪೯॥

ಅಂತರಚತುಷ್ಟಯೇನ-ಮನಸ್ಸು ಬುದ್ಧಿ ಅಹಂಕಾರ ಪರಮಾಂತಃಕರಣವಾದ ವಿದ್ಯೆಯೆಂಬ ನಾಲ್ಕು ಅಂತಃಕರಣಂಗಳಿಂದೆ, ಧೂಪಂ-ಧೂಪವನ್ನು, ಇಂದ್ರಿಯ ಗುಣೋತ್ಕರೇಣ ತುಃ ಇಂದ್ರಿಯ-ಸರ್ವೇಂದ್ರಿಯಗಳಿಗೆ ಮುಖ್ಯವಾದ ನೇತ್ರೇಂದ್ರಿಯದ, ಗುಣ-ಮುದ್ರಾಭೇದದಿಂ ತೋರುವ ಸತ್ವರಜಸ್ತಮೋಗುಣಾತ್ಮಕಗಳಾದ ವಿಚಿತ್ರ ಪ್ರತ್ಯಯಂಗಳ, ಉತ್ಕರೇಣ-ಅತಿಶಯದಿಂದ, ತದ್ದೀಪಂ-ಆ ದೀಪವನ್ನು, ಸುಖದುಃಖವರ್ಜಿತಂ-ಸುಖದುಃಖರಹಿತವಾಗಿರ್ಪಂಥ, ಜೀವರೂಪಂ-ಆತ್ಮ ಸ್ವರೂಪವನ್ನು, ಉಪಹಾರಂ-ನೈವೇದ್ಯವನಾಗಿ, ಅಂತರೇ-ಅಂತರಂಗದಲ್ಲಿ, ಕಲ್ಪಯೇಚ್ಚ-ಕಲ್ಪಿಸುವುದು.

ರಜಸ್ತಮಸ್ಸತ್ವಗುಣತ್ರಯಾಖ್ಯತಾಂಬೂಲಕಂ ಪ್ರಾಣನಮಸ್ಕೃತಿಂ ಚ ।
ಇತ್ಯೇವಮಾಭ್ಯಂತರಮುಖ್ಯಪೂಜಾದ್ರವ್ಯಾಣಿ ಸಂಪಾದಯ ಸಂಕರಾಯ॥೫೦॥

ರಜಸ್ತಮಸ್ಸತ್ವಗುಣತ್ರಯಾಖ್ಯತಾಂಬೂಲಕಂ-ಗುಣತ್ರಯವೆಂಬ ತಾಂಬೂಲವನು, ಪ್ರಾಣನಮಸ್ಕೃತಿಂ ಚ-ಹಂಸರೂಪದಲ್ಲಿ ಚರಿಸುವ ಪ್ರಾಣಮಂ ಸೋಹಂಭಾವದಿಂ ಲಯಿಸುವ ನಮಸ್ಕಾರವನು, ಇತಿ-ಈ ಪ್ರಕಾರದಿಂದಾದ, ಅಭ್ಯಂತರಮುಖ್ಯ ಪೂಜಾದ್ರವ್ಯಾಣಿ-ಅಂತರಂಗಗಳಾದ ಮುಖ್ಯಪೂಜಾ ದ್ರವ್ಯಂಗಳನ್ನು, ಏವಂ-ಈ ಪ್ರಕಾರದಿಂದೆ, ಶಂಕರಾಯ-ಶಂಕರಂಗೋಸ್ಕರ, ಸಂಪಾದಯ-ಸಂಪಾದಿಸು.

●

ಸೂ: ಈ ಪ್ರಕಾರವಾದಂತಃ ಪೂಜಾವಿಧಾನಕ್ಕೆ ಅಸಮರ್ಥನಾದ ಶಿಷ್ಯಂಗೆ ಪ್ರತ್ಯಕ್ಷವಾದ ರಾಜನ ದೃಷ್ಟಾಂತದಿಂ ಪೂಜಿಸೆಂದು ಪೇಳ್ದಪಂ-

ಅಥವಾ ವಾಹನಾದ್ಯೈಸ್ತಮುಪಚಾರೈಶ್ಚರಾಜವತ್ ।
ಪೂಜ[೧]ಯಸ್ವ[೧] ಶಿವಂ ಭಕ್ತ್ಯಾ ಪರಮಾತ್ಮಾನಮಂತರೇ ॥ ॥೫೧॥

ಅಥವಾ-ಹಾಗಲ್ಲದಿರ್ದೊಡೆ, ಪರಮಾತ್ಮಾನಂ-ಅನಾದಿಮುಕ್ತನಹತನದಿಂದ ಪರಮಾತ್ಮರೂಪ ವಾಗಿರ್ಪಂಥ, ತಂ-ಆ ಪೂರ್ವೋಕ್ತವಾದ ಸ್ವರೂಪವುಳ್ಳಂಥ, ಶಿವಂ-ಶಿವನನ್ನು, ರಾಜವತ್-

---

೧-೧ ಯೇಚ್ಚ (ಮೈ)

ಪ್ರತ್ಯಕ್ಷವಾದ ರಾಜನೋಪಾದಿಯಲ್ಲಿ, ವಹನಾದ್ಯೈಃ–ವಾಹನ ಛತ್ರಚಾಮರಂಗಳ್ಮೊದಲಾಗುಳ್ಳಂಥ, ಉಪಚಾರೈಶ್ಚ–ಉಪಚಾರಂಗಳಿಂದೆ, ಅಂತರೇ–ಹೃದಯಮಧ್ಯದಲ್ಲಿ, ಭಕ್ತ್ಯಾ–ಭಕ್ತಿಯಿಂದೆ ಪೂಜಯಸ್ವ–ಪೂಜಿಸು.

●

ಸೂ : ಈ ಪ್ರಕಾರವಾದಂತಃಪೂಜಾವಿಧಾನದಿಂ ಮಹಾಫಲಂಗಳಪ್ಪ ಈ ಪೂಜಯನೇ ಮಾಳ್ಪುದೆಂದು ಶ್ಲೋಕದ್ವಯದಿಂ ಪೇಳ್ದಪಂ–

ಅತ ಏವ ಸದಾ ಪೂಜಾಮಿಮಾಮಾಭ್ಯಂತರಾಂ ಕುರು ।
ಸಮಸ್ತಪಾಪದಳನೀಂ ಸರ್ವ್ವದುಃಖವಿನಾಶಿನೀಂ ॥ ॥೫೨॥

ಅತ ಏವ–ಇದು ಕಾರಣಮಾಗಿ ಸಮಸ್ತಪಾಪದಳನೀಂ–ಸಕಲಪಾಪಮಂ ಕ್ಷಯಿಸುವಂಥ, ಸರ್ವ್ವದುಃಖವಿನಾಶಿನೀಂ–ಸಮಸ್ತದುಃಖಮಂ ಕೆಡಿಸುವಂಥ.

ಶಿವಭಕ್ತಿಪ್ರದಾಂ ಸಾಕ್ಷಾನ್ಮನೋನೈರ್ಮ್ಮಲ್ಯಕಾರಿಣೀಂ ।
ಸರ್ವೈಶ್ವರ್ಯಕರೀಂ ಸಮ್ಯಗ್ಯೋಗಜ್ಞಾನಪ್ರದಾಯಿನೀಂ ॥ ॥೫೩॥

ಶಿವಭಕ್ತಿಪ್ರದಾಂ–ಶಿವಭಕ್ತಿಯಂ ವಿಶೇಷದಿಂ ಕೊಡುವಂಥ, ಸಾಕ್ಷಾತ್–ಪ್ರತ್ಯಕ್ಷವಾಗಿ, ಮನೋನೈರ್ಮ್ಮಲ್ಯಕಾರಿಣೀಂ–ಮನಸ್ಸಿನ ನಿರ್ಮಲತೆಗೆ ಕಾರಣವಾಗಿರ್ಪಂಥ, ಸರ್ವೈಶ್ವರ್ಯಕರೀಂ–ಸಮಸ್ತ ಐಶ್ವರ್ಯಮಮಂ ಮಾಳ್ಪಂಥ, ಸಮ್ಯಕ್–ಚನ್ನಾಗಿ, ಯೋಗ ಜ್ಞಾನ ಪ್ರದಾಯಿನೀಂ–ಶಿವಯೋಗಜ್ಞಾನಮಂ ಕೊಡುವಂಥ, ಇಮಾಂ–ಈ ಪೂರ್ವ್ವೋಕ್ತವಾಗಿರ್ಪಂಥ, ಅಭ್ಯಂತರಾಂ–ಅಭ್ಯಂತರ[1]ಮಾದ[1] ಹೃದಯ ಸಂಬಂಧಿನಿಯಾಗಿರ್ದಂಥ, ಪೂಜಾಂ–ಪೂಜೆಯನ್ನು, ಸದಾ–ಅನವರತವೂ, ಕುರು–ಮಾಡು.

ಇತಿ ಶ್ರೀಮದ್ವೇದವೇದಾಂತಾಗಮಪುರಾಣಸ್ಮೃತೀತಿಹಾಸಪ್ರತಿಪಾದಿತ
ಶ್ರೀ ವೀರಶೈವಮಾರ್ಗ ಸ್ಥಾಪನಾಚಾರ್ಯ ಶ್ರೀಬಸವಾರಾಧ್ಯ ವಿರಚಿತಾಯಾಂ
ಕರ್ನಾಟಕಟೀಕಾ ವಿರಾಜಿತಾಯಾಂ ಶಿವಯೋಗಪ್ರದೀಪಿಕಾಯಾಂ

ಪ್ರಥಮಪಟಲಃ ಸಂಪೂರ್ಣಃ

❖❖

೧–೧ x (ಮೈ)

ದ್ವಿತೀಯ ಪಟಲಃ

ಸೂ : ಈ ಪ್ರಕಾರದಿಂ ಹಠಯೋಗಾಭ್ಯಾಸದಿಂ ಮುನ್ನವೆ ಮಾಳ್ಪ ಅಂತಃಪೂಜಾವಿಧಾನದೊಳ್ ಮನಕ್ಕೆ ಚಂಚಲತೆಯುಂಟಾಗದ ಹಾಂಗೆ ಮನದ ಚಂಚಲತ್ವಮಂ ನಿಲ್ಲಿಸುವ ಯೋಗಸಾಧನವಾದ ಬೇರೊಂದು ಪೂಜಾವಿಧಾನಮಂ ಪೇಳ್ದನೆಂದು ದ್ವಿತೀಯ ಪಟಲಾದಿಯಲ್ಲಿ ಆಚಾರ್ಯನು ಶಿಷ್ಯಂಗೆ ಪೇಳ್ದಪಂ–

ಅಥ ತೇ ಸಂಪ್ರವಕ್ಷ್ಯಾಮಿ ಶಿವಪೂಜಾವಿಧಿಂ ಬುಧೈಃ ।
ಪುನಃಪ್ರಕಾರಮಾಖ್ಯಾತಂ ಯೋಗಮಾರ್ಗೈಕಗೋಚರಂ ॥ ॥೧॥

ಅಥ–ಪೂರ್ವಪಟಲಾನಂತರದಲ್ಲಿ, ಬುಧೈಃ–ಹಠಯೋಗ ಸಿದ್ಧರಾದ ವಿವೇಕಿಗಳಿಂದ, ಪುನಃಪ್ರಕಾರಂ–ಮರಳಿ ಭಿನ್ನ ಪ್ರಕಾರವಾಗಿ, ಆಖ್ಯಾತಂ–ಪೇಳಲ್ಪಟ್ಟಂಥ, ಯೋಗ ಮಾರ್ಗೈಕಗೋಚರಂ–ಹಠಯೋಗ ಮಾರ್ಗವೊಂದಕ್ಕೆ ಗೋಚರಿಸುವಂಥ, ಶಿವಪೂಜಾ ವಿಧಿಂ–ಶಿವಪೂಜಾವಿಧಾನವನ್ನು, ತೇ–ನಿನಗೆ, ಸಂಪ್ರವಕ್ಷ್ಯಾಮಿ–ಚೆನ್ನಾಗಿ ಪೇಳ್ದಪೆಂ.

●

ಸೂ : "ಶರೀರಮಾದ್ಯಂ ಖಲುಧರ್ಮಸಾಧನಂ" ಎಂದುದಾಗಿ ಮುಂದೆ ಪೇಳ್ದ ಜ್ಞಾನಯೋಗಂಗಳ ಸಿದ್ಧ್ಯರ್ಥಮಾಗಿ ಯಮಾದ್ಯಷ್ಟಾಂಗ [೧]ಯೋಗ[೧]ದಿಂ ಶರೀರ ರಕ್ಷಣಮಂ ಮಾಳ್ಪುದೆಂದು ಪೇಳ್ದಪಂ–

ಯೋಗಾತ್ ಸಂಜಾಯತೇ ಜ್ಞಾನಂ ಜ್ಞಾನಾದ್ಯೋಗಃಪ್ರವರ್ತತೇ ।
ದ್ವಯೋಸ್ಸಂಸಿದ್ಧಯೇ ಭೂಮೌ ಶರೀರಂ ರಕ್ಷಯೇದ್ಬುಧಃ ॥ ॥೨॥

ಯೋಗಾತ್–ಹಠಯೋಗದದೆಸೆಯಿಂದ, ಜ್ಞಾನಂ–ಅರಿವು, ಸಂಜಾಯತೇ–ತಮೋಗುಣಾದಿರೂಪಂಗಳಾದ ಶ್ಲೇಷ್ಮದೋಷಗಳನಾಶದಿಂ ಚನ್ನಾಗಿ ಅಭಿವ್ಯಕ್ತಿಯನ್ನೈದುತ್ತಿಹುದು, ಜ್ಞಾನಾತ್–ಆ ಜ್ಞಾನದ ದೆಶೆಯಿಂದ, ಯೋಗಃ–ಶಿವತ್ವಾಭಿವ್ಯಕ್ತಿರೂಪವಾದ ಯೋಗವು, ಪ್ರವರ್ತತೇ–ಪ್ರವರ್ತಿಸುತ್ತಿರ್ಪುದು, ದ್ವಯೋಃ–ಆ ಜ್ಞಾನಯೋಗಂಗಳ, ಸಂಸಿದ್ಧಯೇ–ಸಮ್ಯಕ್ಕಾದ ಸಿದ್ಧಿಗೋಸ್ಕರ,

---

೧–೧ x (ಕ).

ಭೂಮೌ–ಭೂಲೋಕದಲ್ಲಿ, ಶರೀರಂ–ದೇಹವನ್ನು, ಬುಧಃ–ವಿವೇಕಿಯಾದ ಪುರುಷನು, ರಕ್ಷಯೇತ್ –ರಕ್ಷಿಪುದು.

●

ಸೂ : ಆ ಶರೀರರಕ್ಷಣಂ ಶ್ಲೇಷ್ಮಾದಿದೋಷನಾಶದಿಂದಪ್ಪುದು. ಆ ದೋಷ ನಾಶವು ಹಠಯೋಗದಿಂದಪ್ಪುದಾಗಿ ಮೊದಲಲ್ಲಿ ಹಠಯೋಗಮಂ ಸಾಧಿಪುದೆಂದು ಪೇಳ್ದಪಂ–

ಶರೀರಂ ಕಫನಾಶೇನ ಸುಸ್ಥಿರಂ ಯಾತಿ ನಿಶ್ಚಿತಂ ।

ತತ್ಕಫಂ ಹಠಯೋಗೇನ ವಿನಶ್ಯತಿ ಶರೀರಿಣಾಂ ॥ ॥೩॥

ಶರೀರಂ–ದೇಹವು, ಕಫನಾಶೇನ–ಶ್ಲೇಷ್ಮನಾಶದಿಂ, ಸುಸ್ಥಿರಂ–ಚನ್ನಾಗಿ ಸುಸ್ಥಿರತೆಯಂ, ಯಾತಿ –ಎಯ್ದುತ್ತಿಹುದೆಂದು, ನಿಶ್ಚಿತಂ–ನಿಶ್ಚಯಿಸಲ್ಪಟ್ಟಿತು, ಶರೀರಿಣಾಂ–ದೇಹಿಗಳ, ತತ್ಕಫಂ–ಆ ಶ್ಲೇಷ್ಮದೋಷವು, ಹಠಯೋಗೇನ–ಧೌತಿ ವಸ್ತಿ ನೇತಿ ತ್ರೋಟಕ ನೌಳಿ ಕಪಾಲಭಾತಿ ಎಂಬ ಷಟ್ಕರ್ಮ ಮುಂತಾದ ವೈಕೃತಪ್ರಾಣಾಯಾಮದಿಂದೆ, ವಿನಶ್ಯತಿ–ಕೆಡುತ್ತಿರ್ಪುದು.

●

ಸೂ : ಮುಮುಕ್ಷುಜನಕ್ಕೆ ದೇಹಾಪೇಕ್ಷೆಯಿಂದೆ ರಕ್ಷಣಾರ್ಥವಾಗಿ ಹಠಯೋಗಾಪೇಕ್ಷೆಯುವಿಲ್ಲದೊಡಂ ಪರಂಪರೆಯಿಂ ಶಿವತ್ತ್ವಾಭಿವ್ಯಕ್ತಿಸಾಧನಮಪ್ಪುದರಿಂ ಪ್ರಥಮದಲ್ಲಿ ಹಠಯೋಗಾಭ್ಯಾಸಮಂ ಮಾಳ್ಪುದೆಂದು ಪೇಳ್ದಪಂ–

ಶಿವಯೋಗಸ್ಸಾಧಕಾನಾಂ ಸಾಧ್ಯಸ್ತತ್ಸಾಧನಂ ಹಠಃ ।

ತಸ್ಮಾದಾದೌ ಪ್ರಯೋಕ್ತವ್ಯಂ ಹಠಯೋಗಮಿಮಂ ಶೃಣು ॥ ॥೪॥

ಸಾಧಕಾನಾಂ–ಮುಕ್ತಿಸಾಧಕರಿರ್ಗೆ, ಶಿವಯೋಗಃ–ಶಿವಯೋಗವೇ, ಸಾಧ್ಯಃ–ಸಾಧಿಸಲ್ತಕ್ಕುದು, ತತ್ಸಾಧನಂ–ಆ ಶಿವಯೋಗಕ್ಕೆ ಸಾಧನವಾಗಿರ್ದಂಥಾದ್ದು, ಹಠಃ–ಹಠಯೋಗವು, ತಸ್ಮಾತ್–ಅದು ಕಾರಣದಿಂ, ಆದೌ–ಮೊದಲಲ್ಲಿ, ಪ್ರಯೋಕ್ತ್ಯವಂ–ಸಾಧಿಸಲು ಯೋಗ್ಯವಾದ, ಇಮಂ–ಈ ಮುಂದೆ ಪೇಳ್ವ, ಹಠಯೋಗಂ–ಹಠಯೋಗವನ್ನು, ಶೃಣು–ಕೇಳು.

●

ಸೂ : ಈ ಮುಂದೆ ಪೇಳ್ವ ಹಠಯೋಗದಿಂ ಬಾಹ್ಯಭ್ಯಂತರದೊಳೀಶ್ವರ ಪೂಜೆಯಂ ಮಾಳ್ಪುದೆಂದು ಪೇಳ್ದಪಂ–

ಅಂಗಾನ್ಯ[೧]ಷ್ಟ[೧] ಹಠಸ್ಯಾಪಿ ಬಾಹ್ಯಾನ್ಯಭ್ಯಂತರಾಣಿ ಚ ।

ಯಮಾದಿಭಿರತೋಽಷ್ಟಾಂಗೈರ್ದೇವ ಪೂಜಾಂ ಸಮಾಚರೇತ್ ॥ ॥೫॥

೧–೧ ಷ್ಟೌ (ಕ)

ಹಠಸ್ಯಾಪಿ–ಹಠಯೋಗಕ್ಕೆ, ಬಾಹ್ಯನ್ಯಪಿ–ಯಮ ನಿಯಮ ಆಸನ, ಪ್ರಾಣಾಯಾಮವೆಂಬ ಬಾಹ್ಯಗಳಾಗಿರ್ಪಂಥ, ಅಭ್ಯಂತರಾಣಿ ಚ–ಪ್ರತ್ಯಾಹಾರ ಧ್ಯಾನ ಧಾರಣಾ ಸಮಾಧಿಯೆಂಬ ಅಂತರಂಗಗಳಾಗಿರ್ಪಂಥ, ಅಂಗಾನಿ–ಅಂಗಗಳು, ಅಷ್ಟ–ಎಂಟು, ಅತಃ–ಅದು ಕಾರಣವಾಗಿ, ಯಮಾದಿಭಿಃ–ಯಮಮೊದಲಾಗಿರ್ಪಂಥ, ಅಷ್ಟಾಂಗೈಃ–ಎಂಟು ಯೋಗಗಳಿಂದೆ, ದೇವಪೂಜಾಂ –ಶಿವಪೂಜೆಯನ್ನು ಸಮಾಚರೇತ್–ಆಚರಿಸುವುದು.

•

ಸೂ : ಶುದ್ಧನಲ್ಲದಾತಂಗೆ ಶಿವಪೂಜೆ ಘಟಿಸದಾಗಿ, ಆತ್ಮಶುದ್ಧಿ ಮುಂತಾದ ಪೂಜಾ ವಿಧಾನಮಂ ಪೇಳ್ದಪಂ–

ಯಮನಿಯಮಗುಣ್ಯೈಶ್ಚಸ್ವಾತ್ಮಶುದ್ಧಿಂ ವಿಧಾಯ
ಸ್ವವಶವಿವಿಧಪೀಠೈರೇವ ಭೂತ್ವಾ ಸ್ಥಿರಾತ್ಮಾ
ಅಸುನಿಯಮಜಲೇನ ಸ್ನಾಪಯೇದ್ದಿವ್ಯಲಿಂಗಂ
ಪ್ರಕಟಿತಚತುರಂಗಂ ಬಾಹ್ಯಮೇತದ್ವಿಧಾನಂ ॥೬॥

ಯಮನಿಯಮಗುಣ್ಯೈಶ್ಚ–ಮುಂದೆಪೇಳ್ವ ಯಮನಿಯಮಂಗಳೆಂಬ ವಿಂಶತಿ ಗುಣಂಗಳಿಂದೆ, ಸ್ವಾತ್ಮಶುದ್ಧಿಂ–ನಿಜಸ್ವರೂಪಶುದ್ಧಿಯನ್ನು ವಿಧಾಯ–ಮಾಡಿ, ಸ್ವವಶವಿವಿಧಪೀಠೈರೇವ–ತನಗೆ ವಶವಾದ ನಾನಾ ಪ್ರಕಾರವಾದ ಪದ್ಮಾಸನಾದಿ ಪೀಠಂಗಳಿಂದವೆ, ಸ್ಥಿರಾತ್ಮಾ–ಸ್ಥಿರವಾದ ದೇಹಸ್ವರೂಪವುಳ್ಳಾತನು ಭೂತ್ವಾ–ಆಗಿ, ಅಸುನಿಯಮಜಲೇನ–ಮುಂದೆ ಪೇಳ್ವ ಪ್ರಾಣಾಯಾಮವೆಂಬ ಉದಕದಿಂದೆ, ದಿವ್ಯಲಿಂಗಂ –ಜ್ಯೋತಿರ್ಲಿಂಗಮಂ, ಸ್ನಾಪಯೇತ್–ಸ್ನಾನಂ ಮಾಡಿಪುದು, ಏತತ್ಪ್ರಕಟಿತಚತುರಂಗಂ–ಈ ವ್ಯಕ್ತವಾದ ನಾಲ್ಕು ಯೋಗಾಂಗವು, ಬಾಹ್ಯಂ–ಬಾಹ್ಯವಾಗಿರ್ಪಂಥ, ವಿಧಾನಂ–ಪೂಜಾ ವಿಧಾನವೆಂಬುದರ್ಥ.

•

ಸೂ : ಸ್ನಾನಂತರದಲ್ಲಿ ಶಿವಂಗೆ ಪ್ರತ್ಯಾಹಾರಾದಿಗಳಿಂ, ಗಂಧಾದಿಗಳಂ ಸಂಕಲ್ಪಿಸುವುದೇ ಅಂತಃಪೂಜಾವಿಧಾನಮೆಂದು ಪೇಳ್ದಪಂ–

ಶಂಭೋರರ್ಥೇಂದ್ರಿಯನಿವರ್ತನಮೇವ ಗಂಧೋ
ಧ್ಯಾನಂ ಪ್ರಸೂನನಿಚಯೋ ದೃಢಧಾರಣಾ ಸಾ
ಧೂಪಸ್ಸಮಾಧಿರಥಶುದ್ಧಮಹೋಪಹಾರ
ಮಭ್ಯಂತರಾಖ್ಯಚತುರಂಗವಿಧಾನಮೇತತ್ ॥೭॥

ಅಥ–ಅನಂತರದಲ್ಲಿ, ಶಂಭೋ–ಶಿವಂಗೆ, ಇಂದ್ರಿಯನಿವರ್ತಮೇವ–ನೇತ್ರಶ್ರೋತ್ರಾದಿಂದ್ರಿಯಂಗಳ ವಿಷಯವೈಮುಖ್ಯಮಂ ಮಾ[1]ಳ್ಪ[1]. ಗಂಧಃ–ಗಂಧಾನುಲೇಪನವು, ಧ್ಯಾನಂ–ಇಂದ್ರಿಯನಿರ್ವನದಿಂದ

೧–೧ ಳ್ವ ಪ್ರತ್ಯಾಹಾರವೇ (ಕ).

ಅಂತರ್ಮುಖವಾದ ಮನದಿಂದೆ, ಶಿವಧ್ಯಾನವೇ, ಪ್ರಸೂನನಿಚಯಃ–ಪುಷ್ಪಸಮೂಹವು, ಸಾ ದೃಢಧಾರಣಾ –ಆ ಮುಂದೆ ಪೇಳ್ವದೃಢವಾದ ಧಾರಣೆಯೇ, ಧೂಪಃ–ಧೂಪವು, ಅಥ–ಅನಂತರದಲ್ಲಿ, ಸಮಾಧಿಃ– ಜ್ಞಾತಾಜ್ಞಾತರೂಪವಾದ ಸಮಾಧಿಯೇ, ಶುದ್ಧಮಹೋಪಹಾರಃ–ಶುದ್ಧವಾದ ಮಹಾನೈವೇದ್ಯವು, ಏತತ್– ಇದು, ಅಭ್ಯಂತರಾಖ್ಯಚತುರಂಗವಿಧಾನಂ–ಅಭ್ಯಂತರವೆಂಬ ಚತುರಂಗ[೧] ವಿಧಾನವು.

●

ಸೂ : ಈ ಪ್ರಕಾರವಾದ ಪೂಜೆಯೇ ಮುಖ್ಯವೆಂದು ಪೇಳ್ದಪಂ–

ಏವಮಷ್ಟಾಂಗಯೋಗೇನ ಸದಾಂತಃ ಪದ್ಮಸದ್ಮನಿ ।

ಪೂಜಯೇತ್ಪರಮಂ ದೇವಂ ಕಿಂ ಬಾಹ್ಯೈರ್ದೇವಪೂಜನೈಃ ॥ ॥೮॥

ಏವಂ–ಈ ಪ್ರಕಾರವಾದ, ಅಷ್ಟಾಂಗಯೋಗೇನ–ಯಮಾದಿಯಾದಷ್ಟಾಂಗ ಯೋಗದಿಂ, ಸದಾ– ಅನವರತವೂ, ಅಂತಃಪದ್ಮಸದ್ಮನಿ–ಹೃದಯಕಮಲವೆಂಬ ಮನೆಯಲ್ಲಿ, ಪರಂ–ಸರ್ವೋತ್ಕರ್ಷನಾಗಿರ್ಪಂಥ, ದೇವಂ–ಮಹಾದೇವನಂ, ಪೂಜಯೇತ್–ಪೂಜಿಪುದು, ಬಾಹ್ಯೈಃ–ಯೋಗಬಾಹ್ಯಗಳಾಗಿರ್ಪಂಥ, ದೇವಪೂಜನೈಃ–ದೇವಪೂಜೆಗಳಿಂದ, ಕಿಂ–ಪ್ರಯೋಜನವೇನು?

●

ಸೂ : ಈ ಯೋಗಮಾರ್ಗದಿಂದೀಶ್ವರಪೂಜಕನೇ ವಿಶಿಷ್ಟನೆಂದು ಪೇಳ್ವಪಂ–

ಸ್ವಾತ್ಮನ್ಯೇವ ಸದಾಷ್ಟಾಂಗೈಃ ಪೂಜಯೇಚ್ಛಿವಮವ್ಯಯಂ ।

ಶೈವಸ್ಸ ಏವ ವಿದ್ವಾನ್ಸಸ್ಸ ಚ ಯೋಗವಿದಾಂ ವರಃ ॥ ॥೯॥

ಸ್ವಾತ್ಮನ್ಯೇವ–ಯೋಗೀಶ್ವರನು ತನ್ನ ಹೃದಯದಲ್ಲಿಯೇ, ಸದಾ–ಸರ್ವಕಾಲದಲ್ಲಿ ಅಷ್ಟಾಂಗೈಃ– ಯಮಾದ್ಯಷ್ಟಾಂಗಗಳಿಂದೆ, ಅವ್ಯಯಂ–ಕೇಡಿಲ್ಲದಿರ್ಪಂಥ, ಶಿವಂ–ಶಿವನನ್ನು, ಪೂಜಯೇತ್– ಪೂಜಿಪುದು, ಸ ಏವ–ಆತನೇ, ಶೈವಃ–ಶಿವಸಂಬಂಧಿಯಾದಾತನಂ, ಸಃ–ಆತನೇ, ವಿದ್ವಾನ್– ವಿವೇಕವುಳ್ಳಾತನು, ಸಃ ಚ–ಆತನು, ಯೋಗ ವಿದಾಂ–ಶಿವಯೋಗ ಬಲ್ಲವರ್ಗೆ, ವರಃ–ಶ್ರೇಷ್ಠನುಂ.

●

ಸೂ : "ಚಿತ್ತಸ್ಯ[೨]ಸಂಯಮ[೨]ಸ್ತತ್ರ ಸ ಯಮಃ ಪರಿಪಠ್ಯತೇ" ಎಂದು

ಸುಬ್ರಹ್ಮಚರ್ಯಂ ನಿಯತಾಶನಂ ಚ

ಧೃತಿರ್ದಯಾ ಸೂನೃತಮಾರ್ಜವಂ ಚ

ಶುಚಿತ್ವಮಸ್ತೇಯಮದೈನ್ಯಹಿಂಸೇ

ಯಮಾ ದಶೈತೇ ಮುನಿಭಿಃಪ್ರಣೀತಾಃ ॥೧೦॥

---

೧ + ಪೂಜಾ (ಕ). ೨–೨ ನಿಯಮ(ಕ)

ಸುಬ್ರಹ್ಮಚರ್ಯಂ–ಸ್ತ್ರೀಸಂಗರಾಹಿತ್ಯಸ್ವದಾರಪರಿಶುಷ್ಟತೇ ಎಂಬ ಎರಡು ಪ್ರಕಾರವಾದ ಲೇಸಾದ ಬ್ರಹ್ಮಚರ್ಯವು, ನಿಯತಾಶನಂ ಚ–ಅಲ್ಪಾಹಾರವು, ಧೃತಿಃ–ಶೋಕಭೀತ್ಯಾದಿಗಳಿಂ ಮನಕ್ಕೆ ಕಂಪನವಿಲ್ಲದಿಹುದು, ದಯಾ–ದುಃಖಿತರ್ಗೆ ಹಿತವ ಚಿಂತಿಪುದಂ, ಸೂನೃತಂ–ಸತ್ಯವಚನವು, ಅರ್ಜವಂ ಚ–ಕುಟಿಲತೆಯಿಲ್ಲದಿಹುದು, ಶುಚಿತ್ವಂ–ಜಲಸ್ನಾನ ಭಸ್ಮಸ್ನಾನಾದಿಗಳಿಂ ಬಾಹ್ಯದಲ್ಲಿ ದೋಷ ಕೃತ್ಯಚಿಂತನೆಯಿಲ್ಲದಿಹುದರಿಂದಂತರಂಗದಲ್ಲಿಯ ಶುಚಿತ್ವವು. ಅಸ್ತೇಯಂ–ಪರದ್ರವ್ಯವನಪಹರಿಸದಿಹುದು, ಅದೈನ್ಯಹಿಂಸೆ–ಆಕಾರ್ಪಣ್ಯ ಅಹಿಂಸೆಯು, ಏತೇ ದಶ–ಈ ಹತ್ತು, ಯಮಾಃ–ಯಮಂಗಳೆಂದು, ಮುನಿಭಿಃ–ಮುನೀಶ್ವರರಿಂದೆ, ಪ್ರಣೀತಾಃ–ಪೇಳಲ್ಪಟ್ಟವು.

●

ಸೂ : "ಅಶಾಸ್ತ್ರೀಯಕ್ರಿಯಾತ್ಯಾಗಾಚ್ಛಾಸ್ತ್ರೀಯೇಷ್ವಪಿ ಕರ್ಮಸು । ನಿಯಮಃ ಪಠ್ಯತೇ ಶಾಸ್ತ್ರೇ ...." ಎಂದುದಾಗಿ ದ್ವಿತೀಯಯೋಗವೆನಿಸುವ ನಿಯಮಂಗಳಂ ಪೇಳ್ದಪಂ–

ಸಂತೋಷ ಆಸ್ತಿಕ್ಯಗುಣೋಮತಿಶ್ಚ
ತಪೋವ್ರತಂ ಶಂಕರಪೂಜನಂ ಜಪಃ ।
ಹ್ರೀರ್ಯೋಗಶಾಸ್ತ್ರಶ್ರವಣಂ ಚ ಪಾತ್ರೇ
ಪ್ರದಾನಮೇತೇ ನಿಯಮಾ ದಶ ಸ್ಮೃತಾಃ ॥೧೧॥

ಸಂತೋಷಂ–"ಸಂತೋಷ ಉದತಸ್ತಂತ್ರೇ ಲಾಭಾಲಾಭೇ ಸಮಾ ಮತಿಃ" ಎಂದುದಾಗಿ ಭೋಗ್ಯವಸ್ತುಗಳ ಲಬ್ಧನಾಶಂಗಳಲ್ಲಿ ಸಮಾನಬುದ್ಧಿಯೆನಿಸುವ ಸಂತೋಷವು, ಆಸ್ತಿಕ್ಯಗುಣಃ–ಶಿವಾಗಮೋಕ್ತಗಳಾದ ವಿಧಿನಿಷೇದಂಗಳಿಂ ಪುಣ್ಯ ಪಾಪಂಗಳಹವೆಂಬ ಈ ವಿಶ್ವಾಸವು, ಮತಿಶ್ಚ–ತನಗಾಚಾರ್ಯೋಪದೇಶದಿಂದಾದ ಸತ್ಕೃತ್ಯದರಿಕೆಯು, ತಪಃ–ಯೋಗಾರ್ಥಮಾಗಿ ದೇಹಶೋಷಣವು, ನಾಹಂಕೋಽಹಮಿತ್ಯಾದಿಯಾದ ಆಲೋಚನೆಯು. ವ್ರತಂ–ಭಸ್ಮನಿಷ್ಠತ್ವಾದಿವ್ರತವು ಶಂಕರಪೂಜನಂ –ಧ್ಯಾನಸ್ತೋತ್ರಾಭಿಷೇಕಂಗಳಿಂದೆ ಶಿವಾರ್ಚನೆಯು, ಜಪಃ–ಮಾನಸೋಪಾಂಶುವಾಚಕಂಗಳಿಂದೆ ಪ್ರಣವಪಂಚಾಕ್ಷರಾದಿಮಂತ್ರಜಪವು, ಹ್ರೀಃ–ಲೋಕವಿರುದ್ಧ ವೇದವಿರುದ್ಧವಾದ ಮಾರ್ಗಂಗಗಳಲ್ಲಿ ಮನವೆರಗದಿಹುದು, ಯೋಗಶಾಸ್ತ್ರಶ್ರವಣಂ–ಯೋಗಶಾಸ್ತ್ರಂಗಳಂ ಕೇಳುವುದು, ಪಾತ್ರೇಪ್ರದಾನಂ–ಸತ್ಪಾತ್ರದಾನವು, ಏತೇ ದಶ–ಈ ಹತ್ತು, ನಿಯಮಾಃ–ನಿಯಮಂಗಳೆಂದು, ಸ್ಮೃತಾಃ–ನೆನೆಯಲ್ಪಟ್ಟವು.

●

ಸೂ : ಈ ನಿಯಮಂಗಳ್ಗೆ ಆತ್ಮಶುದ್ಧಿಯೇ ಫಲವೆಂದು ಪೇಳ್ದಪಂ–

ಯಮಾಶ್ಚನಿಯಮಾಸ್ಸಮ್ಯಗೇವಂ ವಿಂಶತಿಸಂಖ್ಯಯಾ ।
ಸ್ಥಿರಧೀರ್ನಿಯತೋ ಭೂತ್ವಾ ಸ್ವಾತ್ಮಶುದ್ಧಿಂ ಸಮಾಚರೇತ್ ॥ ॥೧೨॥

ಯಮಾಃ–ಯಮಯೋಗಂಗಳು, ನಿಯಾಮಾಃ–ನಿಯಮಯೋಗಂಗಳು, ಸಮ್ಯಕ್–ಚನ್ನಾಗಿರ್ದಂಥಾವು, ಏವಂ–ಈ ಪೂರ್ವೋಕ್ತಪ್ರಕಾರವಾದ, ವಿಂಶತಿಸಂಖ್ಯಯಾ–ಇಪ್ಪತ್ತು ಗುಣಗಳಿಂದೆ, ಸ್ಥಿರಧೀಃ–ಸ್ಥಿರಬುದ್ಧಿಯುಳ್ಳಾತನಾಗಿ, ನಿಯತಃ–ಜಿತೇಂದ್ರಿಯನು, ಭೂತ್ವಾ–ಆಗಿ, ಸ್ವಾತ್ಮಶುದ್ಧಿಂ–ಬುದ್ಧಿ

ಶುದ್ಧಿದ್ವಾರದಿಂ ತನ್ನಾತ್ಮಶುದ್ಧಿಯನು, ಸಮಾಚರೇತ್-ಚನ್ನಾಗಿ ಆಚರಿಸುವುದು (ಯಮನಿಯಮಂಗಳಿಂ ಶುದ್ಧವಾದಾತಂಗಲ್ಲದೆ ಮುಂದಣ ಯೋಗಸಿದ್ಧಿಯಾಗದೆಂಬುದರ್ಥ)

●

ಸೂ : ಯಮನಿಯಮಂಗಳಿಂ ಆತ್ಮಶುದ್ಧಿಯಂ ಪಡೆದಾತಂಗೆ ಆನಂತರದಲ್ಲಿ ಸಾಧಿಸಲ್ತಕ್ಕ ಮುಖ್ಯಾಂಗಗಳಾದ ಆಸನಂಗಳಂ ಪೇಳ್ದಪಂ–

ಸಿದ್ಧಾಂಬುಜಸ್ವಸ್ತಿಕಮುಕ್ತವೀರ
ಭದ್ರಾಹಿಭುಕ್ಸಿಂಹಗವಾಂ ಮುಖಾನಿ ।
ಸುಖಾಸನಂ ಚೈವ ಸಮಂಕಿತಾನಿ
ತತೋ ದಶೇಮಾನಿ ವರಾಸನಾನಿ ॥೧೩॥

ಸಿದ್ಧಾಂಬುಜ .... ಗವಾಂ ಮುಖಾನಿ–ಸಿದ್ಧಾಸನ ಪದ್ಮಾಸನ ಸ್ವಸ್ತಿಕಾಸನ ವೀರಾಸನ ಭದ್ರಾಸನ ಮಯೂರಾಸನ ಸಿಂಹಾಸನ ಗೋಮುಖಾಸನಂಗಳು, ತತಃ–ಅನಂತರದಲ್ಲಿ, ಸುಖಾಸನಂ ಚೈವ–ಸುಖಾಸನವೆಂಬ, ಇಮಾನಿ ದಶ–ಈ ಹತ್ತು, ವರಾಸನಾನಿ–ಶ್ರೇಷ್ಠವಾದ ಆಸನಂಗಳೆಂದು, ಸಮಂಕಿತಾನಿ–ಚನ್ನಾಗಿ ಕುರುಹಿಡಲ್ಪಟ್ಟವು.

ತಾತ್ಪರ್ಯ–ಒಂದು ಮಡದಿಂ ಯೋನಿಸ್ಥಾನನಮನೊತ್ತಿ ಮತ್ತೊಂದು ಮಡಮಂ ಮೇಢ್ರದ ಮೇಲಿರಿಸಿ, ಏಕಚಿತ್ತವುಳ್ಳಾತನಾಗಿ ಋಜುಕಾಯವಾಗಿ, ಭ್ರೂಮಧ್ಯ ಸ್ಥಾನದಲ್ಲಿ ಸ್ಥಿರದೃಷ್ಟಿಯುಳ್ಳಾತನತನವು ಸಿದ್ಧಾಸನವೆನಿಪುದು, ಎರಡು ತೊಡೆಗಳ ಮೇಲೆ ಎರಡು ಪದತಳಂಗಳಂ ಮೇಲಂ ಮುಖವಾಗಿರಿಸಿ, ರಾಜದಂತಕವೆನಿಸುವ ದಂತ ಮೂಲಸ್ಥಾನದಲ್ಲಿ ಜಿಹ್ವಾಗ್ರಮನಿರಿಸಿ ನಾಸಿಕಾಗ್ರದೃಷ್ಟಿಯಿಂದಹುದೇ ಪದ್ಮಾಸನವೆನಿಪುದು. ಎರಡು ತೊಡೆಗಳ ಸಂಧಿಗಳಲ್ಲಿ ಎರಡು ಪದತಳಂಗನಿರಿಸಿ, ಋಜುಕಾಯನಾಗಿಹುದು ಸ್ವಸ್ತಿಕಾಸನವೆನಿಪುದು. ಮೇಢ್ರದ ಮೇಲೆ ಎಡದ ಮಡವನಿರಿಸಿ, ಆ ಮಡದ ಮೇಲೆ ಬಲದ ಮಡವನಿರಿಸಿ ಋಜುಕಾಯನಾಗಿಹುದು ಮುಕ್ತಾಸನವೆನಿಪುದು. ಒಂದು ಪಾದಮಂ ಮತ್ತೊಂದು ತೊಡೆಯ ಮೇಲಿಸಿರಿ ಋಜುಕಾಯನಾಗಿಹುದು ವೀರಾಸನವೆನಿಸುವುದು. ವೃಷಣದಿಂ ಕೆಳಗೆ ಎರಡು ಮಡಂಗಳಂ ಶಿವನಿಸ್ಥಾನದ ಎಡಬಲದಲ್ಲಿರಿಸಿ, ಎರಡು ತೊಡೆಗಳನ್ನು ಎರಡು ತೋಳ್ಗಳಿಂ ದೃಢಮಾಗಿ ಬಳಸುವುದು ಭದ್ರಾಸನವೆನಿಸುವುದು, ಎರಡು ಕರತಳಂಗಳಂ ಭೂಮಿಯ ಮೇಲಿಟ್ಟು, ಎರಡು ಮೊಳಕೈಯಂ ಕುಕ್ಷಿಯೊಳಿಟ್ಟು, ನಖಶಿಖಾಂತ್ಯಮಾದ ಶರೀರಮಂ ಭೂಮಿಯಂ ಸೋಂಕದೆ, ಆಕಾಶದಲ್ಲಿ ದಂಡಾಕೃತಿಯಾಗಿ ನೀಡುವುದು ಮಯೂರಾಸನವೆನಿಪುದು, ವೃಷಣದಿಂ ಕೆಳಗೆ ಎರಡು ಮಡಂಗಳಂ ಶಿವನಿಸ್ಥಾನದ ಕೆಲಬಲಂಗಳಲ್ಲಿರಿಸಿ, ಎರಡು ಮಡಂಗಳಂ ಎಡಬಲನಾಗಿರಿಸಿ, ಎರಡು ಜಾನುಗಳಲ್ಲಿ ಎರಡು ಹಸ್ತಂಗಳಂ ಬೆರಳ್ಗಳಂ ಪಸರಿಸಿ, ಇರಿಸಿ, ಮುಖಮಂ ತೆರೆದು ನಾಸಿಕಾಗ್ರದೃಷ್ಟಿಯಾಗಿಹುದು ಸಿಂಹಾಸನವೆನಿಸುವುದು. ಬಲದ ಮಡವಂ ಎಡದ ಪೊರವಾರಿನೊಳಿಟ್ಟು ಎಡದ ಮಡಮಂ ಬಲದ ಪೊರವಾರಿನೊಳಿಟ್ಟು ಪಾದಂಗಳಂ ಗೋಮುಖಾಕಾರಮಂ ಮಾಳ್ಪುದೇ ಗೋಮುಖಾಸನವೆನಿಪುದು. ತನಗಾವ ಪ್ರಕಾರದಿಂ ಸುಖವೂ ಧೈರ್ಯವೂ ಅಪ್ಪುದೋ ಅಂತೆ ಕುಳ್ಳಿರ್ಪುದೇ ಸುಖಾಸನವೆಂಬುದಭಿಪ್ರಾಯಂ, ಪ್ರಮಾಣಂ–

ಅಥ ಸಿದ್ಧಾಸನಂ ವಕ್ಷ್ಯೇ ಶೃಣುಧ್ವಂ ಸುಸಮಾಹಿತಾಃ ।
ಸಂಪೀಡ್ಯ ಶಿವನಿಂ ಸೂಕ್ಷ್ಮೇ ಗುಲ್ಫೇನೈವ ತು ಸವ್ಯತಃ ॥

ಸವ್ಯಂ ದಕ್ಷಿಣಗುಲ್ಫೇನ ಸಿದ್ಧಾಸನಮಿತೀರಿತಂ ।
ಅಂಗುಷ್ಠೌ ಚ ನಿಬಧ್ನೀಯಾದ್ಧಸ್ತಾಭ್ಯಾಂ ವ್ಯುತ್ಕ್ರಮೇಣ ತು ॥

ಊರ್ವೋರುಪರಿ ವಿಪ್ರೇಂದ್ರಾಃ ಕೃತ್ವಾ ಪದತಲೇ ಶುಭೇ ।
ಪದ್ಮಾಸನಂ ಭವೇದೇತತ್ಸರ್ವೇಷಾಮಪಿ ಪೂಜಿತಂ ॥

ಜಾನೂರ್ವೋರಂತರೇ ಸಮ್ಯಕ್ಕೃತ್ವಾ ಪಾದತಲೇ ಶುಭೇ ।
ಋಜುಕಾಯಸ್ಸುಖಾಸೀನಸ್ಸ್ವಸ್ತಿಕಂ ತತ್ಪ್ರಚಕ್ಷತೇ ॥

ಮೇಢ್ರಾದುಪರಿ ನಿಕ್ಷಿಪ್ಯ ಸವ್ಯಂ ಗುಲ್ಫಂ ತಥೋಪರಿ ।
ಗುಲ್ಫಾಂತರಂ ಚ ನಿಕ್ಷಿಪ್ಯ ಮುಕ್ತಾಸನಮಿತೀರಿತಂ ॥

ಅಥ ವೀರಾಸನಂ ವಕ್ಷ್ಯೇ ಶೃಣುಧ್ವಂ ಸುಸಮಾಹಿತಾಃ ।
ಏಕಪಾದಮಥೈಕಸ್ಮಿನ್ವಿನ್ಯಸ್ಯೋರುಣಿ ಸಂಸ್ಥಿತಂ ॥

ಇತರಸ್ಮಿನ್ನಥಶ್ಯೋರುಂ ವೀರಾಸನಮುದಾಹೃತಂ ।
ಅಥ ಭದ್ರಾಸನಂ ವಕ್ಷೇ ಶೃಣುಧ್ವಮೃಷಯೋಽಧುನಾ ॥

ಗುಲ್ಫೇ ಚ ವೃಷಣಸ್ಯಾಧಶ್ಶಿವನ್ಯಃ ಪಾರ್ಶ್ವಯೋಃ ಕ್ಷಿಪತ್ ।
ಪಾಶ್ವರ್ಯಪಾದೌ ಚ ಪಾಣಿಭ್ಯಾಂ ದೃಢಂ ಬಧ್ವಾಸುನಿಶ್ಚಲ ॥

ಭದ್ರಾಸನಂ ಭವೇದೇತತ್ ಸರ್ವವ್ಯಾಧಿವಿಷಾಪಹಂ ।
ಅವಷ್ಟಭ್ಯ ಧರಾಂ ಸಮ್ಯತ್ಕರಾಭ್ಯಾಂ ಸುಸಮಾಹಿತಃ ॥

ಹಸ್ತಯೋಃ ಕೂರ್ಪರೌ ವಾಪಿ ಸ್ಥಾಪಯೋನ್ನಾಭಿಪಾರ್ಶ್ವಯೋಃ ।
ಸಮುನ್ನತಶಿರಃಪಾದೋದಂಡವದ್ವ್ಯೋಮ್ನಿ ಸುಸ್ಥಿತಃ ॥

ಮಯೂರಾಸನಮೇವೈತತ್ ಸರ್ವಪಾಪಪ್ರಣಾಶನಂ ।
ಗುಲ್ಫೌ ಚ ವೃಷಣಸ್ಯಾಧಶ್ಶಿವನ್ಯಾಃ ಪಾರ್ಶ್ವಯೋಃ ಕ್ಷಿಪೇತ್ ॥

ದಕ್ಷಿಣಂ ಸಮಗಲ್ಫೇನ ದಕ್ಷಿಣೇನ ತಥೋತ್ತರಂ ।
ಹಸ್ತೌ ಜಾನ್ವೋಸ್ಸುಸಂಸ್ಥಾಪ್ಯ ಚಾಂಗುಳೀಶ್ಚಪ್ರಸಾರ್ಯ ಚ ॥

ವ್ಯಾತ್ತವಕ್ತ್ರೋ ನಿರೀಕ್ಷೇತ ನಾಸಾಗ್ರಂ ಸುಸಮಾಹಿತಃ ।
ಸಿಂಹಾಸನಂ ಭವೇದೇತತ್ ಪೂಜಿತಂ ಯೋಗಿಭಿಸ್ಸದಾ ॥

ಸವ್ಯೇ ದಕ್ಷಿಣಗುಲ್ಫಂತು ಪೃಷ್ಠಪಾರ್ಶ್ವೇ ನಿವೇಶಯೇತ್ ।
ದಕ್ಷಿಣೇಽಪಿ ತಥಾ ಸಮ್ಯಕ್ ಗೋಮುಖಂ ಗೋಮುಖಾಕೃತಿ ॥

●

ಸೂ : ಆಶ್ರಮವಿಭಾಗದಿಂ ಆಸನ ವಿಭಾಗಮಂ ಪೇಳ್ದಪಂ–

ಗೃಹಿಣಾಮಂಬುಜ ಸಿದ್ಧಂ ಗೃಹಸ್ಥೇತರವರ್ತಮನಾಂ ।
ಸುಖಾಸನಂ ಚ ಸರ್ವೇಷಾಮಿತ್ಯೇತತ್ತ್ರಿವಿಧಂ ಪರಂ ॥ ॥೧೪॥

ಗೃಹಿಣಾಂ–ಗೃಹಸ್ಥರ್ಗೆ, ಅಂಬುಜಂ–ಪದ್ಮಾಸನವೇ, ವರಂ–ಶ್ರೇಷ್ಠವು (ಪರಮೇಶ್ವರನ ಸೃಷ್ಟಿಕೃತ್ಯಾನುಕೂಲರಹತನದಿಂ ಗೃಹಸ್ಥರ್ಗೆ ಕಾಮನಾಶಕವಲ್ಲದ ಪದ್ಮಾಸನವೇ ಮುಖ್ಯವೆಂಬುದರ್ಥಂ). ಗೃಹಸ್ಥೇತರವರ್ತ್ಮನಾಂ–ಗೃಹಸ್ಥರಿಂದನ್ಯ ಮಾರ್ಗದಲ್ಲಿ ವರ್ತಿಸುವ ಬ್ರಹ್ಮಚಾರಿ ಭಿಕ್ಷು ವಾನಪ್ರಸ್ಥರ್ಗೆ, ಸಿದ್ಧಂ–ಕಾಮನಾಶಕವಪ್ಪುದರಿಂ ಸಿದ್ಧಾಸನವೇ, ಪರಂ–ಶ್ರೇಷ್ಠವು, ಸರ್ವೇಷಾಂ–ಸಮಸ್ತರ್ಗೆ, ಸುಖಾಸನಂ ಚ–ಸುಖಾಸನವೇ, ಪರಂ–ಶ್ರೇಷ್ಠವು, ಏತತ್ತ್ರಿವಿಧಂ–ಈ ಮೂರು ಪ್ರಕಾರವು ಇತಿ–ಈ ಮರ್ಯಾದೆಯಲ್ಲಿ ವರ್ತಿಸುತ್ತಿಹುದು.

●

ಸೂ : ಈ ಪ್ರಕಾರದಿಂದ ಆಸನಾಭ್ಯಾಸಂಪನ್ನನಾದ ಯೋಗೀಶ್ವರಂ ಮುಂದೆ ಪ್ರಾಣಾಯಾಮಾಭ್ಯಾಸಮಂ ಮಾಡಲು ಏಕಾಂತಸ್ಥಳಮಂ ಆಶ್ರಯಿಸಬೇಕೆಂದು ಪೇಳ್ದಪಂ–

---

೧ + ಇಮಾನಿದಶ = ಈ ಹತ್ತು, ತತಃ – ಅನಂತರದಲ್ಲಿ, ವರಾಸನಾನಿ – ಮುಖ್ಯವಾದ ಅಸನಂಗಳೆಂದು, ಸಮಂಕಿತಾನಿ – ಚನ್ನಾಗಿ ಕುರುಹಿಡಲ್ಪಟ್ಟವು (ಮೈ)

ಯಾನಿ ಕಾನಿ ಪ್ರಶಸ್ತಾನಿ ಹ್ಯಾಸನಾನಿ ಸಮಾನಿ ಚ ।

ತೇಷ್ವಭೀಷ್ಟಾಸನಾಸೀನೋ ವಿವಿಕ್ತಸ್ಥಾನಮಾಶ್ರಯೇತ್ ॥ ॥೧೫॥

ಹಿ–ಪ್ರಸಿದ್ಧಮಾಗಿ, ಯಾನಿ ಕಾನಿ–ಆವವು ಕೆಲವು, ಪ್ರಶಸ್ತಾನಿ–ಪೂಜ್ಯಂಗಳಾಗಿರ್ಪಂಥ, ಸಮಾನಿ –ಶಾಸ್ತ್ರೋಕ್ತಿಗಳಿಗೆ ಸದೃಶಂಗಳಾಗಿರ್ಪಂಥ, ಆಸನಾನಿ–ಆಸನಂಗಳುಂಟೋ, ತೇಷು–ಅವುಗಳೊಳಗೆ, ಅಭೀಷ್ಟಾಸನಾಸೀನಃ–ಇಷ್ಟವಾದ ಆಸನದಲ್ಲಿರ್ಪಂಥವನಾಗುತ್ತಲು, ವಿವಿಕ್ತಸ್ಥಾನಂ–ಏಕಾಂತ ಸ್ಥಲವನ್ನು, ಆಶ್ರಯೇತ್–ಆಶ್ರಯಿಸುವುದು.

●

ಸೂ : ಏಕಾಂತಸ್ಥಲದಲ್ಲಿಮಾಳ್ಪ ಯೋಗಸಾಧನದ್ರವ್ಯಸಮೇತವಾದ ಯೋಗಮಂಟಪಮಂ ನಾಲ್ಕು ಶ್ಲೋಕಂಗಳಂ ಪೇಳ್ದಪಂ–

ತತ್ರ ರಮ್ಯಂ ಮಠಂ ಕುರ್ಯಾತ್ ಸೂಕ್ಷ್ಮದ್ವಾರಂ ಚ ನಿರ್ವ್ರಣಂ ।

ಪ್ರಾಕಾರವೇಷ್ಟಿತಂ ಶುದ್ಧಂ ಬಹಿಶ್ಯಾಲಾಸಮನ್ವಿತಂ ॥ ॥೧೬॥

ತತ್ರ –ಏಕಾಂತಸ್ಥಲದಲ್ಲಿ, ರಮ್ಯಂ–ಮನೋಹರವಾಗಿರ್ಪಂಥ, ಸೂಕ್ಷ್ಮದ್ವಾರಂ– ಚಿಕ್ಕಬಾಗಿಲುಳ್ಳಂಥ, ನಿರ್ವ್ರಣಂ–ರಂಧ್ರಾದಿದೋಷವಿಲ್ಲದಂಥ, ಪ್ರಾಕಾರವೇಷ್ಟಿತಂ–ಕೋಟೆಯಿಂ ಬಳಸಲ್ಪಟ್ಟಂಥ, ಶುದ್ಧಂ–ನಿರ್ಮಲವಾಗಿರ್ಪಂಥ, ಬಹಿಶ್ಯಾಲಾಸಮನ್ವಿತಂ–ಬಳಸಿ ಕೈಸಾಲೆಯಿಂ ಕೂಡಿದಂಥ, ಮಠಂ–ಯೋಗ ಗೃಹವನ್ನು, ಕುರ್ಯಾತ್–ಮಾಡುವುದು.

ಸುಗಂಧಕುಸುಮಾಕೀರ್ಣಂ ವಿತಾನಪರಿಶೋಭಿತಂ ।

ಮೃದೂಪಧಾನಶಯ್ಯಾದ್ಯೈರಾಸನಾದ್ಯೈಸ್ಸಮಾಕುಲಂ ॥ ॥೧೭॥

ಸುಗಂಧಕುಸುಮಾಕೀರ್ಣಂ–ಪರಿಮಳಕುಸುಮಂಗಳಿಂದ ತುಂಬಲ್ಪಟ್ಟಂಥ, ವಿತಾನ ಪರಿಶೋಭಿತಂ –ಮೇಲುಕಟ್ಟಿನಿಂದ ಒಪ್ಪಲ್ಪಟ್ಟಂಥ, ಮೃದೂಪಧಾನನಶಯ್ಯಾದ್ಯೈಃ–ಮೃದವಾದ ತಲೆಮೆತ್ತೆ ಹಾಳು ಮೊದಲಾದವುಗಳಿಂದವೂ, ಆಸನಾದ್ಯೈಃ–ಮೃದುವಾದ ತಲೆಮೆತ್ತೆ ಹಾಸು ಮೊದಲಾದವುಗಳಿಂದವೂ, ಆಸನಾದ್ಯೈಃ–ಗದ್ದುಗೆ ಮೊದಲಾದವುಗಳಿಂದಲೂ, ಸಮಾಕುಲಂ–ತುಂಬಿರ್ದಂಥ.

ಸುಧೂಪವಾಸಿತಂ ನಿತ್ಯಂ ಗೋಮಯೇನಾನುಲೇ[1]ಪಿತಂ[1] ।

ಸಮಿತ್ಪುಷ್ಪದಳೋಪೇತಂ ಕಂದಮೂಲಫಲಾನ್ವಿತಂ ॥ ॥೧೮॥

ನಿತ್ಯಂ–ಅನವರತವು, ಸುಧೂಪವಾಸಿತಂ–ಒಳ್ಳಿತ್ತಾದ ಧೂಪದಿಂ ಪೊರೆಯಲ್ಪಟ್ಟಂಥ, ಗೋಮಯೇನ–ಶುದ್ಧಗೋಮಯದಿಂ, ಅನುಲೇಪಿತಂ–ಸಾರಿಸಲ್ಪಟ್ಟಂಥ, ಸಮಿತ್ಪುಷ್ಪದಳೋಪೇತಂ –ಕಟ್ಟಿಗೆಗಳಿಂದಲೂ ಪುಷ್ಪಗಳಿಂದಲೂ ಪತ್ರಗಳಿಂದಲೂ ಕೂಡಲ್ಪಟ್ಟಂಥ, ಕಂದಮೂಲಫಲಾನ್ವಿತಂ–ಗೆಣಸು, ಬೇರು ಫಲಂಗಳೊಡನೆ ಕೂಡಲ್ಪಟ್ಟಂಥ.

೧–೧ ಪನಂ (ಮೈ)

ಸಮಗ್ರಭಸ್ಮರುದ್ರಾಕ್ಷಕುಶಾಜಿನವಿಭೂಷಿತಂ ।

ಶುದ್ಧಾನ್ನಪಾನಸಂಪನ್ನಂ ಸರ್ವೌಷಧಸಮಾಶ್ರಯಂ ॥ ॥೧೯॥

ಸಮಗ್ರಭಸ್ಮರುದ್ರಾಕ್ಷಕುಶಾಜಿನವಿಭೂಷಿತಂ–ಅಧಿಕವಾದ ವಿಭೂತಿ ರುದ್ರಾಕ್ಷಿ ದರ್ಭೆ ಕೃಷ್ಣಾಜಿನ ವ್ಯಾಘ್ರಾಜಿನವೆಂಬಿವುಗಳಿಂದಲಂಕೃತಮಾದಂಥ, ಶುದ್ಧಾನ್ನಪಾನ ಸಂಪನ್ನಂ–ಪವಿತ್ರವಾದ ಅನ್ನಪಾನಂಗಳ ಸಮೃದ್ಧಿಯುಳ್ಳಂಥ, ಸರ್ವೌಷಧ ಸಮಾಶ್ರಯಂ–ಸಮಸ್ತೌಷಧಿಗಳಿಗಾಶ್ರಯವಾದಂಥ, ರಮ್ಯಂ–ಮನೋಹರವಾದಂಥ, ಮಠಂ–ಮಠವನ್ನು, ಕುರ್ಯಾತ್–ಮಾಡುವುದೆಂದು ಪೂರ್ವಕ್ರಿಯಾ ಸಂಬಂಧವು.

●

ಸೂ : ಈ ಪ್ರಕಾರವಾದ ಯೋಗಮಂಟಪವು ವಾನಪ್ರಸ್ಥಾದಿಗಳ್ಗೆ ಘಟಿಸದಾಗಿ ಅವರ್ಗೆ ಯೋಗ್ಯವಾದ ಯೋಗಾಭ್ಯಾಸಸ್ಥಾನಮಂ ಪೇಳ್ದಪಂ–

ಸದಾ ಮನೋಹರಾಸ್ಪದಂ ವನೇ ನಿವಾಸಮೇತ್ಯ ವಾ ।

ಸದಾಶಿವಂ ಪ್ರಪೂಜಯೇದ್ಧೃದಿ ಸ್ಥಿತಂ ಸಮಾಹಿತ : ॥ ॥೨೦॥

ಸದಾ–ಅನವರತವೂ, ಮನನೋಹರಾಸ್ಪದಂ–ಚಿತ್ತವಿಶ್ರಮಣಭೂಮಿಯಾಗಿರ್ಪಂಥ, ವನೇ–ವನದಲ್ಲಿಯ, ನಿವಾಸಂ ವಾ–ಗುಹೇ ಮುಂತಾದ ಸ್ಥಳವಾದರೂ, ಏತ್ಯ–ಎಯ್ದಿ, ಹೃದಿ–ಹೃತ್ಕಮಲದಲ್ಲಿ, ಸ್ಥಿತಂ–ಇರಲ್ಪಟ್ಟಂಥ, ಸದಾಶಿವಂ–ಸಕಲನಿಷ್ಕಲಾತ್ಮಕನಾದ ಶಿವನನ್ನು, ಸಮಾಹಿತಃ–ಏಕಾಗ್ರಚಿತ್ತನಾಗಿ, ಪ್ರಪೂಜಯೇತ್–ಪ್ರಕರ್ಷದಿಂ ಪೂಜಿಪುದು.

●

ಸೂ : ಪೂಜೆಗೆ ಅಭಿಷೇಕವೇ ಮುಂದಾದ ಕಾರಣ ಆ ಧ್ಯಾನಪೂಜೆಗೆ ಸ್ನಾನ ವಿಧಿಯಂ ಪೇಳ್ದಪಂ–

ತದ್ಯಥಾ ಶೃಣು ಹೇ ವಿದ್ವನ್ನಾದೌ ಕೇವಲಕುಂಭಕೇ ।

ಪ್ರಾಣಾಯಾಮಜಲೇನೈವ ಸ್ನಾಪಯೇಚ್ಚಿನ್ಮಯಂ ಶಿವಂ ॥೨೧॥

ಹೇ ವಿದ್ವನ್–ಎಲೈ ವಿವೇಕಿಯಾದ ಶಿಷ್ಯನೇ, ತತ್–ಆ ಪೂಜಾ ವಿಧಾನವು, ಯಥಾ–ಆವ ಪ್ರಕಾರವೆನಲು, ಶೃಣು–ಕೇಳು, ಆದೌ ಮೊದಲಲ್ಲಿ, ಕೇವಲ ಕುಂಭಕೇ–ಕೇವಲಕುಂಭಕವೆಂಬ ಪೂರ್ಣಕುಂಭದಲ್ಲಿಯೇ, ಪ್ರಾಣಾಯಾಮಜಲೇನೈವ–ಮುಂದೆ ಪೇಳ್ವ ಪ್ರಾಣಾಯಾಮವೆಂಬ ಮಂತ್ರೋದಕದಿಂದ, ಚಿನ್ಮಯಂ–ಜ್ಞಾನರೂಪನಾದ, ಶಿವಂ–ಶಿವನನ್ನು, ಸ್ನಾಪಯೇತ್– ಸ್ನಾನಮಾಡಿಪುದು.

●

ಸೂ : ಆ ಪ್ರಾಣಾಯಾಮವು ಉತ್ತರೋತ್ತರ ವಿಶಿಷ್ಟತೆಯಿಂದ ಮೂರು ಪ್ರಕಾರವೆಂದು ಪೇಳ್ದಪಂ –

ಪ್ರಾಣಾಯಾಮಸ್ತ್ರಿಧಾ ಪ್ರೋಕ್ತಃ ಪ್ರಾಕೃತೋ ವೈಕೃತಸ್ಥಥಾ ।

ತಾಭ್ಯಾಂ ವಿನಾ ಜೃಂಭತೇಽ ಸೌ ಕೇವಲಃ ಕುಂಭಕಸ್ತ್ವಯಂ ॥ ॥೨೨॥

ಪ್ರಾಣಾಯಾಮಃ–ಪ್ರಾಣವಾಯುವಿನ ನಿರೋಧವು, ತ್ರಿಧಾ–ಮೂರು ಪ್ರಕಾರವೆಂದು, ಪ್ರೋಕ್ತಃ–ಹೇಳಲ್ಪಟ್ಟಿತು. ಪ್ರಾಕೃತಃ–ಪ್ರಾಕೃತಪ್ರಾಣಾಯಾಮವೆಂದು, ತಥಾ–ಹಾಗೆಯೇ, ವೈಕೃತಃ–ವೈಕೃತಪ್ರಾಣಾಯಾಮವೆಂದು, ತಾಭ್ಯಾಂ ವಿನಾ–ಆ ಎರಡು ಪ್ರಕಾರದಿಂ ಹೊರಗಾಗಿ, ಅಸೌ–ಈ ಪೂರ್ವೋಕ್ತವಾದ, ಕೇವಲಃ ಕುಂಭಕಃ–ಕೇವಲಕುಂಭಕವೇ, ಸ್ವಯಂ–ತಾನೇ, ಜೃಂಭತೇ–ಪ್ರಕಾಶಿಸುತ್ತಿದ್ದಿತು. (ಈ ಪ್ರಾಣವಾಯುವಿನ ವ್ಯಾಪಾರಾತ್ಮಕವಾದ ಪ್ರಾಣಾಯಾಮಕ್ಕೆ ವಾಮದಕ್ಷಿಣ ಭಾಗಂಗಳಲ್ಲಿ ಚಂದ್ರ ಸೂರ್ಯನಾಡಿಗಳೇ ಆಧಾರಮಪ್ಪುದರಿಂದ ಆ ನಾಡಿಗಳ ಸ್ವರೂಪಂಗಳೆಂತೆಂದೊಡೆ; ತೊಂಬತ್ತಾರಂಗುಲಪ್ರಮಾಣದ ದೇಹದೊಳ್ವಾಯುಸ್ಥಾನದಿಂದ ಅಂಗುಲಿದ್ವಯದಿಂ ಮೇಲೆ ಲಿಂಗಸ್ಥಾನದ ಅಂಗುಲಿದ್ವಯದಿಂ ಕೆಳಗೆ ಮಧ್ಯಮಾದ ಏಕಾಂಗುಲಿ ಪ್ರಮಾಣವೇ ದೇಹಮಧ್ಯವೆನಿಪುದು. ಆ ದೇಹಮಧ್ಯದಿಂ ಚತುರಂಗುಲಪ್ರಮಾಣದ ಅಸ್ಥಿ ಚರ್ಮಂಗಳಂ ಕೂಡಿದ ತತ್ತಿಯಾಕಾರವಾದ ಕಂದಮಿರ್ಪುದು. ಆ ಕಂದಮಧ್ಯವೇ ನಾಭಿಯೆನಿಪುದು, ಆ ಕಂದದಿಂ ಹನ್ನೆರಡು ಎಸಳಿಂ ಕೂಡಿದ ಚಕ್ರಾಕಾರಮಾದ ಕಮಲಂ ಪುಟ್ಟಲು, ಆ ಕಮಲದ ಬಳಸಿದ ಎಂಟೆಸಳಿನಲ್ಲಿ ಜೀವಂ ತನ್ನಯ ಪ್ರಾರಬ್ಧಕರ್ಮ ಪರಿಪಾಕಾನುಸಾರದಿಂ, ಲೂತಿಕಂ ತಂತುಮಯವಾದ ತನ್ನ ಚಕ್ರದೊಳ್ತಿರುಗುವಂತೆ ಚರಿಸುತ್ತಿರ್ಪನಾಗಿ, ಆ ಕಂದಮಂ ಬಳಸಿ ಸುಪ್ತಸರ್ಪಾಕಾರವಾದ ಕುಂಡಲಿನೀ ಶಕ್ತಿಯುಂ, ಆ ನಾಭಿಕಂದದ ಅಧೋರಂಧ್ರದೊಳ್ ತನ್ನ ಹೆಡೆಯನ್ನಿಟ್ಟು, ದೃಢಮಾಗಿ ಬಂಧಿಸಿ, ಪಶ್ಚಿಮದ್ವಾರದ ವಾಯುಮಾರ್ಗಮಂ ನಿಲ್ಲಿಸಿ, ತನ್ ಪುಚ್ಛದಿಂ ಬ್ರಹ್ಮರಂಧ್ರಪರ್ಯಂತಂ ಪೊಕ್ಕು ಪ್ರಕಾಶರೂಪದಿಂದಿರ್ಪುದಾಗಿ, ಆ ಕಂದದ ಪಲವು ತಾಣಂಗಳಲ್ಲಿ ವರ್ತಿಸುವ ಮೂವತ್ತೆರಡು ನಾಡಿಗಳೊಡನೆ ಮಧ್ಯಸ್ಥಾನದ ಸುಷುಮ್ನಾನಾಡಿಯು ಬೆನ್ನೆಲುವಿನ ಮಧ್ಯದೊಳ್ ಬ್ರಹ್ಮರಂಧ್ರಾಂತಮಾಗಿರ್ಪುದು. ಅದರ ಬಲದಲ್ಲಿ ದಕ್ಷಿಣನಾಸಾಪುಟಪರಿಯಂತಮಾಗಿರ್ಪುದು ಪಿಂಗಳೆ, ಅದರ ಎಡದಲ್ಲಿ ವಾಮನಾಸಾಪುಟಾಂತಮಾಗಿರ್ಪುದು ಇಡೆಯೆನಿಪುದಾಗಿ, ಇದರೊಳ್‌ಚರಿಸುವ ಪ್ರಾಣವಾಯುವಿನ ಭೇದದಿಂ ಪ್ರಾಣಾಯಾಮಂ ಮೂರು ಪ್ರಕಾರವೆಂದಭಿಪ್ರಾಯಂ).

●

ಸೂ : ಅನಂತರದಲ್ಲಿ ಮೊದಲು ಪೇಳ್ದ ಪ್ರಾಕೃತಪ್ರಾಣಾಯಾಮದ ಲಕ್ಷಣಮಂ ಪೇಳ್ದಪಂ–

ನಿಶ್ವಾಸೋಚ್ಛ್ವಾಸರೂಪೇಣ ರೇಚಪೂರಕಸ್ವಭಾವತಃ ।
ಪ್ರಾಣಾನಿಲೇ ವರ್ತಮಾನೇ ಪ್ರಾಕೃತಸ್ಸ ಉದೀರಿತಃ ॥ ॥೨೩॥

ನಿಶ್ವಾಸೋಚ್ಛ್ವಾಸರೂಪೇಣ–ನಿಶ್ವಾಸ ಉಚ್ಛ್ವಾಸರೂಪದಿಂದ, ರೇಚಪೂರಸ್ವಭಾವತಃ–ರೇಚಕಪೂರಕಸ್ವಭಾವದ ದೆಸೆಯಿಂದ, ಪ್ರಾಣಾನಿಲೇ–ಹೃದಯ ಸ್ಥಾನದ ಪ್ರಾಣವಾಯುವು, ವರ್ತಮಾನೇ ಸತಿ–ಪರಿವರ್ತಿಸುತ್ತಿರಲಾಗಿ, ಸಃ–ಅದು, ಪ್ರಾಕೃತಃ–ಪ್ರಾಕೃತಪ್ರಾಣಾಯಾಮವೆಂದು, ಉದೀರಿತಃ–ಹೇಳಲ್ಪಟ್ಟಿತು.

●

ಸೂ : ಅನಂತರದಲ್ಲಿ ವೈಕೃತಪ್ರಾಣಾಯಾಮಲಕ್ಷಣಮಂ ಪೇಳ್ದಪಂ–

ಆಗಮೋಕ್ತವಿಧಾನೇನ ರೇಚಪೂರಕಕುಂಭಕೈಃ ।

ಯದಿ ಪ್ರಾಣನಿರೋಧಶ್ಚೇದ್ವೈಕೃತಸ್ಸ ಉದೀರಿತಃ ॥ ॥೨೪॥

ಆಗಮೋಕ್ತವಿಧಾನೇನ–ಶಿವಾಗಮಂಗಳಲ್ಲಿ ಪೇಳಲ್ಪಟ್ಟ ವಿಧಾನದಿಂದೆ, ರೇಚಪೂರಕ ಕುಂಭಕೈಃ –ರೇಚಕ ಪೂರಕ ಕುಂಭಕಂಗಳಿಂದೆ, ಯದಿ–ಎತ್ತಲಾನು, ಪ್ರಾಣನಿರೋಧಶ್ಚೇತ್–ಪ್ರಾಣನಿರೋಧವಹಂತೇ, ಸಃ–ಅದು, ವೈಕೃತಃ–ವೈಕೃತ ಪ್ರಾಣಾಯಾಮವೆಂದು, ಉದೀರಿತಃ– ಹೇಳಲ್ಪಟ್ಟಿತು. ಅದೆಂತೆಂದೊಡೆ: ದೇಹಾಂತರ್ಗತವಾದ ವಾಯುಮಂ ನಾಸಿಕದ್ವಾರದಿಂ ಬಾಹ್ಯಕ್ಕೆ ಸೂಸುಪುದೇ ರೇಚಕ, ದೇಹಬಾಹ್ಯಗತವಾದ ವಾಯುವನುದರಕ್ಕೆ ಪೂರಿಪುದೇ ಪೂರಕ, [೧]ಶ್ವಾಸೋಚ್ಛ್ವಾ[೧] ಸಂಗಳಿಲ್ಲದೆ ವಾಯುಂ ನಿಶ್ಚಲಮಾಗಿ ಪೂರ್ಣಕುಂಭದಂತಿರ್ಪುದು ಕುಂಭಕ, ಈ ಮೂರು ಪ್ರಕಾರಮಂ ಮಾಡಬೇಕಾದ ಯೋಗೀಶ್ವರನಂ ಶುಚಿರ್ಭೂತನಾಗಿ ಮೂಡಮುಖವಾಗಲಿ, ಬಡಗಮುಖವಾಗಲಿ ಸ್ವಸ್ಥಾನದಲ್ಲಿ ನೇರಿತ್ತಾಗಿ ಕುಳಿತು, ದಂತಂಗಳಿಂ ದಂತಂಗಳಂ ಮುಟ್ಟದೆ ಜಿಹ್ವೆಯಂ ಚರಿಸದೆ, ನಾಸಿಕಾಗ್ರದೃಷ್ಟಿಯಾಗಿ ಮಂತ್ರಮಂ ಸ್ಮರಿಸುತ್ತೆ ಗುರುನಮಸ್ಕಾರಮಂ ಮಾಡಿ, ಶಿವಧ್ಯಾನಮಂ ಮಾಡುತ್ತೆ ಮೊದಲಲ್ಲಿ ಅಂಗುಳಿಯಿಂ ಇಡಾನಾಡಿಯಂ ಬಲಿದು, ಪಿಂಗಳನಾಡಿಯಿಂದೆ ದೇಹ ಗತಮಾದ ವಾಯುಮಂ ಹನ್ನೆರಡು ಮಾತ್ರೆ ರೇಚಿಸಿ, ಬಳಿಕ ಪಿಂಗಳನಾಡಿಯಂ ಬಲಿದು ಇಡಾನಾಡಿಯಂ ಹನ್ನೆರಡು ಮಾತ್ರೆ ಪೂರಿಸಿ, ಹನ್ನೆರಡು ಮಾತ್ರೆ ಕುಂಭಿಸುವುದು ಕನಿಷ್ಠಪ್ರಾಣಾಯಾಮವೆನಿಸುವುದು. ಹನ್ನೆರಡು ಮಾತ್ರೆಯಿಂ ಕೂಡಿ ಒಂದು ಉದ್ಘಾತವೆನಿಸುವದು. ಈ ಪ್ರಕಾರದಿಂ ಎರಡು ಉದ್ಘಾತ, ಮಧ್ಯಮ ಪ್ರಾಣಾಯಾಮ, ಇದು ಇಪ್ಪತ್ತುನಾಲ್ಕು ಮಾತ್ರೆ. ಈ ಪ್ರಕಾರದಿಂ ಮೂರು ಉದ್ಘಾತವು ಉತ್ತಮ ಪ್ರಾಣಾಯಾಮ ಇದು ಮೂವತ್ತಾರು ಮಾತ್ರೆ, ಶೀಘ್ರವಲ್ಲದೆ ವಿಳಂಬವಿಲ್ಲದೆ ಜಾನುಪ್ರದಕ್ಷಿಣಮಂ ಮಾಡಿ, ಅಂಗುಲಿಸ್ಫೋಟಕಮಂ ಮಾಳ್ಪದು ಮಾತ್ರೆ ಎನಿವುದು. ಉದ್ಘಾತಕ್ರಮದಿಂ ಸೂರ್ಯನಾಡಿಯಿಂ ಪೂರಿಸಿ, ಅನಂತರದಲ್ಲಿ ಕುಂಭಿಸಿ, ಚಂದ್ರನಾಡಿಯಿಂ ಮೆಲ್ಲನೆ ರೇಚಿಪುದು, ಧ್ಯಾನರಹಿತಮಾಗಿ ಮಾಡುವ ಪ್ರಾಣಾಯಾಮ ಮಧ್ಯಮ, ಧ್ಯಾನಸಹಿತವಾಗಿ ಮಾಳ್ಪದು ಉತ್ತಮವೆನಿಪುದು, ಪ್ರಾಣಾಯಾಮಭ್ಯಾಸದಿಂ ಸ್ವೇದಂ ಪುಟ್ಟಲಧಮವೆನಿಪುದು. ಕಂಪನಂ ಪುಟ್ಟಲ್ ಮಧ್ಯಮವೆನಿಪುದು. ದೇಹಮುನ್ನತಕ್ಕೇಳಲುತ್ತಮವೆನಿಪುದು. ಈ ಪ್ರಕಾರದಿಂ ಚತುರ್ಮಾಸಪರ್ಯಂತಂ ತ್ರಿಕಾಲದಲ್ಲಿಯು ಪ್ರಾಣಾಯಾಮಭ್ಯಾಸಮಂ ಮಾಳ್ಪುದು. ಅಜೀರ್ಣ ಉದ್ಗಾರ ಮೂತ್ರದೋಷ ಛರ್ದಿ ಅತಿಸಾರ ಅತಿಭೋಜನ ಅತಿಕ್ಷುತ್ಪಿಪಾಸೆ, ಗುರುಸೇವಾಸಮಯಂ ಮುಂತಾದಕಾಲದಲ್ಲಿ ಪ್ರಾಣಾಯಾಮಮಂ ಮಾಡಲಾಗದು. ಈ ಕಾಲಂಗಳಲ್ಲಿ ಸ್ವೇಚ್ಛೆಯಿಂ ಪ್ರಾಣಾಯಾಮಮಂ ಮಾಡಲ್ ಶ್ವಾಸಕಾಸಾದಿದೋಷಂಗಳ್ ಪುಟ್ಟುಗುಂ, ಈ ಪ್ರಕಾರದಿಂ ಪ್ರಾಣಾಯಾಮಭ್ಯಾಸಮಂ ಮಾಳ್ಪುದು ವೈಕೃತಪ್ರಾಣಾಮವೆಂಬುದಭಿಪ್ರಾಯಂ.

೧–೧ ನಿಶ್ವಾಸ ವಿಶ್ವಾ(ಮೈ).

ಸೂ : ಅನಂತರದಲ್ಲಿ ಕೇವಲಕುಂಭಕದ ಲಕ್ಷಣಂ ಪೇೞ್ದಪಂ–

ಪ್ರಾಕೃತಂ ವೈಕೃತಂ ಚೇತಿ ದ್ವಯಮೇತನ್ಮಮಹಾತ್ಮನಃ ।

ಕ್ಷಣಾತ್ಸಂಸ್ತಂಭಯೇದ್ಯಸ್ತು ಸ ಹಿ ಕೇವಲಕುಂಭಕಃ ॥ ॥೨೫॥

ಯಃ–ಆವುದಾದನೊಂದು ಪ್ರಾಣಾಯಾಮವು, ಪ್ರಾಕೃತಂ ವೈಕೃತಂಚೇತಿ–ಪ್ರಾಕೃತ ವೈಕೃತವೆಂಬ ಏತದ್ವಯಂ–ಈ ಎರಡು ಪ್ರಾಣಾಯಾಮವನ್ನು, ಮಹಾತ್ಮನಃ–ಉಪದೇಶ ಸಿದ್ಧನಾದ ಮಹಾಪುರುಷಂಗೆ, ಕ್ಷಣಾತ್–ಒಂದು ಕ್ಷಣಮಾತ್ರದ ದೆಶೆಯಿಂದ, ಸಂಸ್ತಂಭಯೇತ್–ತಡೆವುದೋ, ಸಃ–ಆ ಪ್ರಾಣಾಯಾಮವು, ಕೇವಲಕುಂಭಕಃ–ಕೇವಲಕುಂಭಕವೆಂದು, ಹಿ–ಪ್ರಸಿದ್ಧವಲಾ.

●

ಸೂ : ಈ ಪ್ರಾಣಾಯಾಮ ಭೇದದಿಂದ ಯೋಗವು ನಾಲ್ಕು ಪ್ರಕಾರವಾಯಿತ್ತೆಂದು ಪೇೞ್ದಪಂ–

ಪ್ರಾಕೃತೋ ಮಂತ್ರಯೋಗಸ್ಸ್ಯಾದ್ವೈಕೃತೋ ಲಯ ಏವ ಹಿ ।

ಹಠಃ ಕೇವಲಕುಂಭಾಖ್ಯೋರಾಜಯೋಗೋಽಮನಾಸ್ಸ್ಮೃತಃ ॥ ॥೨೬॥

ಪ್ರಾಕೃತಃ–ಹಂಸರೂಪದಿಂದ ಚರಿಸುವ ಪ್ರಾಕೃತಪ್ರಾಣಾಯಾಮವೇ, ಮಂತ್ರಯೋಗಃ–ಮಂತ್ರಯೋಗವು. ಸ್ಯಾತ್–ಆಹುದು, ವೈಕೃತ ಏವ ಸೋಹಂ ಎಂದು ಚರಿಸುವ ವೈಕೃತಪ್ರಾಣಾಯಾಮವೇ, ಲಯಃ–ಲಯಯೋಗಮಪ್ಪುದು, ಹಿ–ಪ್ರಸಿದ್ಧವಲಾ, ಕೇವಲಕುಂಭಾಖ್ಯಃ–ಕೇವಲ ಕುಂಭಕವೆಂಬ ಪ್ರಾಣಾಯಾಮವು, ಹಠ–ಹಠಯೋಗಮಪ್ಪುದು, ಅಮನಾಃ–ಅಮನಸ್ಕವು, ರಾಜಯೋಗಃ–ರಾಜಯೋಗವೆಂದು, ಸ್ಮೃತಃ–ನೆನೆಯಲ್ಪಟ್ಟಿತು.

●

ಸೂ : ಪ್ರಾಕೃತಾದಿ ಪ್ರಾಣಾಯಾಮಂಗಳ ಉತ್ತರೋತ್ತರವಿಶಿಷ್ಟತೆಯಿಂ ಮಂತ್ರಾದಿಯೋಗಂಗಳಾದುದಕ್ಕೆ ಕಾರಣಂಗಳಂ ಪೇೞ್ದಪಂ–

ಪ್ರಥಮಸ್ತ್ವಜಪಾಯೋಗೇ ನಾದೇ ವಾಯೋರ್ಲಯಸ್ತತಃ ।

ಮನಃಸ್ಥಿರಸ್ತತಃಪಶ್ಚಾದ್ವೃತ್ತಿಶೂನ್ಯಶ್ಚತುರ್ಥಕಃ ॥ ॥೨೭॥

ಪ್ರಥಮಸ್ತು–ಮೊದಲು ಪ್ರಾಣಯಾಮವಾಯಿತ್ತಾದೊಡೆ, ಅಜಪಾಯೋಗೇಃ–ಗುರುಪದೇಶದಿಂ ಹಂಸವರ್ಣದ್ವಯಾತ್ಮಕವಾದ ಅಜಪಾಮಂತ್ರಯೋಗಮಪ್ಪುದು, ತತಃ–ಆ ಅಜಪಾಮಂತ್ರಯೋಗದ ದೆಶೆಯಿಂದ, ನಾದೇ–ಆ ವರ್ಣದ್ವಯಾತ್ಮಕವಳಿದುಳಿದ ನಾದದಲ್ಲಿ, ವಾಯೋಃ–ಪ್ರಾಣವಾಯುವಿನ, ಲಯಃ–ಲಯವಪ್ಪುದು, ತತಃ–ಆ ಲಯಯೋಗದದೆಶೆಯಿಂದ, ಮನಃಸ್ಥಿರಃ–ಕೇವಲ ಕುಂಭಕದಿಂ ಮನಸ್ಸಿಗೆ ಸ್ಥಿರತ್ವವಪ್ಪುದು, ಪಶ್ಚಾತ್–ನಾಲ್ಕನೆಯದಾದಂಥ ಅಮನಸ್ಕವಪ್ಪುದು.

●

ಸೂ : ಅದು ನಿಮಿತ್ತದಿಂ ಯೋಗೀಶ್ವರಂಗೆ ಪ್ರಾಣಾಯಾಮಾಭ್ಯಾಸವೇ ಮುಖ್ಯವೆಂದು ಪೇಳ್ದಪಂ–

ಪ್ರಾಣವಾಯೋರ್ನಿರೋಧೇನ ಲಭತೇ ತಚ್ಚತುಷ್ಟಯಂ ।

ತಸ್ಮಾದಭ್ಯಾಸತೂರಸ್ತ್ವಂ ಪ್ರಾಣಾಯಾಮಪರೋ ಭವ ॥ ॥೨೮॥

ಪ್ರಾಣವಾಯೋಃ–ಪ್ರಾಣವಾಯುವಿನ, ನಿರೋಧೇನ–ತಡೆವುದರಿಂದೆ, ತಚ್ಚತುಷ್ಟಯಂ–ಆ ನಾಲ್ಕು ತೆರೆದ ಯೋಗವನು, ಲಭತೇ–ಪಡೆವುತ್ತಿರ್ಪನು, ತಸ್ಮಾತ್–ಅದು ನಿಮಿತ್ತವಾಗಿ, ಅಭ್ಯಾಸಶೂರಃ – ಯೋಗಾಭ್ಯಾಸದಲ್ಲಿ ಸಮರ್ಥನಾಗಿರ್ದಂಥ, ತ್ವಂ–ನೀನು, ಪ್ರಾಣಾಯಾಮಪರಃ–ಪ್ರಾಣಾಯಾಮದಲ್ಲಿ ತಾತ್ಪರ್ಯವುಳ್ಳಾತನು, ಭವ–ಆಗು.

●

ಸೂ : ಅನಂತರದಲ್ಲಿ ಪ್ರಾಕೃತಪ್ರಾಣಾಯಾಮದಲ್ಲಿಯ ಅಜಪಾಮಂತ್ರ ಯೋಗಸ್ವರೂಪಮಂ ವ್ಯಕ್ತಮಾಗಿ ಪೇಳ್ದಪಂ–

ಸಕಾರಾಂತಮಿದಂ ಬೀಜಂ ಬಹಿರ್ಯಾತಿ ಸಬಿಂದುಕಂ ।

ಸವಿಸರ್ಗಂ ಷಕಾರಾಂತಂ ತದ್ಬೀಜಂ ಪ್ರವಿಶತ್ಯಧಃ ॥ ॥೨೯॥

ಸಕಾರಾಂತಂ–ಸಕಾರಕ್ಕೆ ಕಡೆಯಾಗಿರ್ಪಂಥ, ಇದಂ ಬೀಜಂ–ಈ ಹಕಾರವೆಂಬ ಬೀಜಮಂತ್ರವು, ಸಬಿಂದುಕಂ–ಬಿಂದುಸಮೇತವಾಗಿ, ಬಹಿಃ–ಹೊರಗನಂ, ಯಾತಿ–ಪ್ರಾಣವಾಯುವಿನ ರೇಚಕದೊಡನೆ ಕೂಡಿಯೈದುತಿದ್ದಿತು. ಸವಿಸರ್ಗಂ–ವಿಸರ್ಗದೊಡನೆ ಕೂಡಿದಂಥ, ಷಕಾರವೆಂಬ ಮಂತ್ರಬೀಜವು, ಅಧಃ–ಆ ಪ್ರಾಣವಾಯುವಿನ ಪೂರಕದೊಡನೆ ಕೂಡಿ, ಒಳಗನು, ಪ್ರವಿಶತಿ–ಪ್ರವೇಶಿಸುತ್ತಿದ್ದಿತು.

●

ಸೂ : ಈ ಮಂತ್ರವರ್ಣದ್ವಯವು ಸಕಲಪ್ರಾಣಿಗಳ ಪ್ರಾಣದೊಡನೆ ಸದಾ ಸಂಬಂಧವಾಗಿರ್ಪುದೆಂದು ಪೇಳ್ದಪಂ–

ಪ್ರಾಣಾನಿಲಶ್ಚ ಸರ್ವೇಷಾಂ ಪ್ರವರ್ತಕನಿರ್ತಕಃ ।

ಏವಂ ಜೀವಜಪೋನಾಮ ಗಾಯತ್ರಿ ಜಪತೇಽನ್ವಹಂ ॥ ॥೩೦॥

ಸರ್ವೇಷಾಂ–ಸಕಲ ಪ್ರಾಣಿಗಳಿಗೆ, ಪ್ರವರ್ತಕ ನಿವರ್ತಕಃ–ಇಷ್ಟದಲ್ಲಿಯ ಪ್ರವೃತ್ತಿ ಅನಿಷ್ಟದಲ್ಲಿಯ ನಿವೃತ್ತಿಯಂ ಮಾಡುವಂಥ, ಪ್ರಾಣಾನಿಲಶ್ಚ–ಜೀವನಹಂಕಾರದಿಂದೆ ಆತ್ಮಚೈತನ್ಯಗಳೊಡನೆ ಕೂಡಿದ ಪ್ರಾಣವಾಯುವು, ಜೀವಜಪೋನಾಮ–ಜೀವಜಪವೆನಿಸುವ, ಗಾಯತ್ರಿಯೂ ಕೂಡಿ, ಏವಂ–ಈ ಪೂರ್ವೋಕ್ತ ಪ್ರಕಾರದಿಂದ, ಅನ್ವಹಂ–ಜಾಗ್ರತ್ ಸ್ವಪ್ನಾದ್ಯವಸ್ಥೆಗಳಲ್ಲಿ ಅನವರತವು, ಜಪತೇ–ಹಂಸ ಹಂಸ ಎಂದು ಜಪಿಸುತ್ತಿರ್ಪುದು.

●

ಸೂ : ಅನಂತರದಲ್ಲಿ ಈ ಅಜಪಾಗಾಯತ್ರೀಜಪದ ಸಂಖ್ಯಾಪ್ರಮಾಣಮಂ ಪೇಳ್ದಪಂ–

ಏಕವಿಂಶತಿಸಹಸ್ರಸಂಖ್ಯಯಾ ಷಟ್ಶತಾಧಿಕಮಹರ್ನಿಶಂ ನರಃ ।
ಶ್ರೀಗುರೂಕ್ತವಿಧಿನಾಽರುಣೋದಯೇ ಸಂಸ್ಮರನ್ವಹತಿ ತಜ್ಜಪೇ ಫಲಂ ॥೩೧॥

ನರಃ–ಮಂತ್ರಯೋಗೋಪದೇಶಮಂ ಪಡೆದ ಪುರುಷನಂ, ಅಹರ್ನಿಶಂ–ದಿವಾ ರಾತ್ರಿಯು, ಷಟ್ಶತಾಧಿಕಂ–ಆರುನೂರಧಿಕವಾಗಿ, ಏಕವಿಂಶತಿ ಸಹಸ್ರಸಂಖ್ಯಯಾ–ಇಪ್ಪತ್ತೊಂದು ಸಾವಿರದ ಆರುನೂರು, ಶ್ರೀಗುರೂಕ್ತವಿಧಿನಾ–ಗುರೂಪದೇಶ ವಿಧಿಯಿಂದೆ, ಅರುಣೋದಯೇ–ಸೂರ್ಯೋದಯದಲ್ಲಿ, ಸಂಸ್ಮರನ್–ಅನುಸಂಧಾನದಿಂ ಸ್ಮರಿಸುವಾತನಾಗುತ್ತಲು, ತಜ್ಜಪೇ–ಆ ಅಜಪಾಮಂತ್ರದಲ್ಲಿಯ, ಫಲಂ–ಆನಂದ ಸಿದ್ಧಿ ಮುಂತಾದ ಫಲವನ್ನು, ವಹತಿ–ಎಯ್ದುತಿರ್ಪನು.

ಸೂ : ಅನಂತರದಲ್ಲಿ ಈ ಮಹಾಯೋಗದಿಂದಪ್ಪ ಫಲಮಂ ಪೇಳ್ದಪಂ–

ಅಜಪಾನಾಮ ಸಂಕಲ್ಪ್ಯ ನರಃಪಾಪೈಃಪ್ರಮುಚ್ಯತೇ ।
ಶಿವಯೋಗಮವಾಪ್ನೋತಿ ಶೀಘ್ರಮೇವ ನ ಸಂಶಯಃ ॥ ॥೩೨॥

ನರಃ–ಯೋಗಿಯಾದ ಪುರುಷನಂ, ಅಜಪಾನಾಮ–[1]ಹಂಸ[1]ವೆಂಬ ಅಜಪಾನಾಮವನ್ನು, ಸಂಕಲ್ಪ್ಯ–ಸ್ಮರಿಸಿ, ಪಾಪೈಃ–ಸಕಲಪಾಪಂಗಳಿಂದ, ಪ್ರಮುಚ್ಯತೇ–ವಿಶೇಷವಾಗಿ ಬಿಡಲ್ಪಡುತ್ತಿರ್ಪನು, ಶಿವಯೋಗಂ–ಶಿವಯೋಗವನ್ನು, ಶೀಘ್ರಮೇವ–ಶೀಘ್ರದಲ್ಲಿಯೇ, ಅವಾಪ್ನೋತಿ–ಪಡೆವುತ್ತಿರ್ಪನು, ಸಂಶಯಃ–ಸಂದೇಹವು, ನ–ಇಲ್ಲ.

●

ಸೂ : ಮಂತ್ರಯೋಗಾನಂತರದಲ್ಲಿಯ ಲಯಯೋಗದ ಸ್ವರೂಪಂ ಪೇಳ್ದಪಂ–

ಅಜಪಾನಾಮಗಾಯತ್ರೀಮಂತ್ರವರ್ಣದ್ವಯಂ ಯದಾ ।
ತ್ರಿವೇಣೀಸಂಗಮೇ ಲೀನಂ ಸ ಶಬ್ದಃ ಪ್ರಣವೋ ಭವೇತ್ ॥ ॥೩೩॥

ಅಜಪಾನಾಮಗಾಯತ್ರೀಮಂತ್ರವರ್ಣದ್ವಯಂ–ಅಜಪೆಯೆಂದು ಪ್ರಸಿದ್ಧವಾದ ಗಾಯತ್ರೀಮಂತ್ರದ "ಹಂಸ" ವೆಂಬ ಅಕ್ಷರಗಳೆರಡು, ಯದಾ–ಆವಕಾಲದಲ್ಲಿ, ತ್ರಿವೇಣೀಸಂಗಮೇ–ತ್ರಿವೇಣೀಸಂಗಮವೆನಿಸುವ ಭ್ರೂಮಧ್ಯಸ್ಥಾನದಲ್ಲಿ, ಲೀನಂ–ವರ್ಣಾಕಾರವಳಿದಿರ್ಪುದೋ, ತದಾ–ಆ ಕಾಲದಲ್ಲಿ, ಸಶಬ್ದಃ–ಆ ಮಂತ್ರ ಶಬ್ದವೇ ಪ್ರವಣಃ–ನಾದಾತ್ಮಕವಾದ ಓಂಕಾರವು, ಭವೇತ್–ಅಹುದು. (ನಿವೃತ್ತಿ ಮುಖದಿಂ ಕಾರ್ಯರೂಪವಳಿದು ಕಾರಣರೂಪವಪ್ಪುದಾಗಿ "ಸೋಹಂ" ಎಂಬ ವರ್ಣದ್ವಯದಲ್ಲಿ "ಸ್, ಹ್" ಎಂಬೆರಡೂ ಅಳಿಯಲಾಗಿ ಓಂಕಾರವೇ ಉಳಿವುದೆಂಬುದರ್ಥ.)

ಸೋಽಹಂ ಕೃತ್ವಾತ್ಮಮಂತ್ರಂ ಸ್ವಪದಪರಪದಂ ವ್ಯಕ್ತವರ್ಣದ್ವಯಂತ
ದ್ವ್ಯಾಲಂಪ್ಯೇದ್ವ್ಯಂಜನೇದ್ವೇಪುನರಪಿ ರಚಯೇದ್ದಿವ್ಯ ಮೋಂಕಾರಮಂತ್ರಂ ।

೧–೧ ಜೀವ (ಮೈ).

ಕೃತ್ವಾಽನುಸ್ವಾರಯುಕ್ತಂ ಸಕಲಮನುವರಂ ಬ್ರಹ್ಮನಾಡೀಂ ನಯೇದ್ಯಃ ।

ಪೂರ್ಣಾನಂದಸ್ಸಕುಂಡಲ್ಯನುಭವವಿಕಲಃ ಕರ್ಮಣೋ ಮುಕ್ತಿಮೇತಿ ॥ ॥೩೪॥

ಯಃ–ಮುಮುಕ್ಷುವಾದ ಯೋಗೀಶ್ವರನಾದ ಆವನೋರ್ವನು, ಸ್ವಪದಪ ರಪದಂ; ಸ್ವಪದ–ಪ್ರಾಕೃತಪ್ರಾಣಾಯಾಮರೂಪದಿಂದ ಆತ್ಮವಾಚಕವಾಗಿ ರೇಚಕದಲ್ಲಿ ಚರಿಸುವ ಸಕಾರಮುಳ್ಳಂಥ; ಪರಪದಂ–ಪರಮಾತ್ಮವಾಚಕಮಾಗಿ ಪೂರಕದಲ್ಲಿ ಚರಿಸುವ ಹಕಾರಮುಳ್ಳಂಥ, ವ್ಯಕ್ತವರ್ಣದ್ವಯಂ–ಸಕಲ ಜೀವರುಗಳಲ್ಲಿ ಪ್ರಾಣವಾಯುವಿನಲ್ಲಿ ವ್ಯಕ್ತವಾದ ಅಕ್ಷರದ್ವಯಮುಳ್ಳಂಥ, ತತ್–ಆ ಪ್ರಸಿದ್ಧವಾದಂಥ, ಆತ್ಮಮಂತ್ರಂ–ಹಂಸಮಂತ್ರವನ್ನು, ಸೋಽಹಂ ಕೃತ್ವಾ–ಗುರೂಪದೇಶದಿಂ ಸೋಽಹಂ ಎಂದು ವೈಕೃತಪ್ರಾಣಾಯಾಮರೂಪಮಂ ಮಾಡಿ, ದ್ವೇ–ಎರಡಾಗಿರ್ದಂಥ, ವ್ಯಂಜನೇ–ಸಕಾರ, ಹಕಾರಂಗಳೆಂಬ ವ್ಯಂಜನಗಳನ್ನು, ವ್ಯಾಲುಂಪೇತ್–ಲೋಪಮಂಮಾಡುವುದು; ಪುನರಪಿ–ಮರಳಿ, ಅನ್ನುಸಾರಯುಕ್ತಂ–ಬಿಂದುವಿನೊಡನೆ ಕೂಡಿದಂತವುದನ್ನಾಗಿ, ಕೃತ್ವಾ–ಮಾಡಿ, ದಿವ್ಯಂ–ಜ್ಯೋತಿರ್ಮಯವಾಗಿರ್ಪಂಥ, ಓಂಕಾರಮಂತ್ರಂ–ಓಂಕಾರವೆಂಬ ಮಂತ್ರವನ್ನು, ರಚಯೇತ್–ಮಾಡುವುದು, ಸಕಲಮನುವರಂ–ಸಕಲಮಂತ್ರಗಳಿಗೆ ಶಿರೋರತ್ನವಾದ ಆ ಪ್ರಣವವನ್ನು, ಬ್ರಹ್ಮನಾಡೀಂ–ಭ್ರೂಮಧ್ಯಸ್ಥಾನದ ಸುಷುಮ್ನೆಯೆಂಬ ನಾಡಿಯನ್ನು, ನಯೇತ್–ಎಯ್ದಿಸುವನೋ, ಸಃ–ಆತನು, ಪೂರ್ಣಾನಂದಃ–ಅಖಂಡಾನಂದ ಸ್ವರೂಪನಾಗಿ, ಕುಂಡಲ್ಯನುಭವವಿಕಲಃ–ಬೈಂದವಾನಂದಕ್ಕೆ ವಿಲಕ್ಷಣನಾಗಿ, ಕರ್ಮಣಃ–ಕರ್ಮಾದಿಪಾಶದ ದೆಶೆಯಿಂದ, ಮುಕ್ತಿಂ–ಬಿಡುಗಡೆಯೆನಿಸುವ ಮೋಕ್ಷವನ್ನು, ಏತಿ–ಎಯ್ದುತ್ತಿಹನು.

●

ಸೂ : ಅನಂತರದಲ್ಲಿ ಹಂಸವರ್ಣದ್ವಯವಳಿದು ಪ್ರಣವರೂಪಮಾಗುವ ಮಧ್ಯಹೃದಯಕ್ಕೆ ತ್ರಿವೇಣೀನಾಮವಾದ ಪ್ರಕಾರಮಂ ಪೇಳ್ದಪಂ–

ಇಡಾಸ್ಮ ೃತೇಂದುರಿತಿ ಸೂರ್ಯಸುತೇತಿ ಯೋಗಾತ್

ಸಾ ಪಿಂಗಲೇನ ಇತಿ ವಿಷ್ಣುಪದೀತಿ ತಾಸಾಂ ।

ಸಾ ಮಧ್ಯಮಾಗ್ನಿರಿತಿ, ಯೋನಿರಿತಿ ತ್ರಿವೇಣಿ

ಯೋಗಸ್ಥಲಂ ತದಿದಮೇವ ಭವೇತ್ತ್ರಿಕೂಟಂ ॥೩೫॥

ಇಡಾ–ವಾಮಭಾಗದ ಇಡಾನಾಡಿಯೇ, ಇಂದುರಿತಿ–ಚಂದ್ರನಾಡಿಯೆಂದೂ, ಸೂರ್ಯಸುತೇತಿ–ಯಮುನಾನದಿಯೆಂದು, ಸ್ಮೃತಾ–ನೆನೆಯಲ್ಪಟ್ಟಿತು. ಸಾ ಪಿಂಗಲಾ–ಆ ದಕ್ಷಿಣಭಾಗದ ಪಿಂಗಲನಾಡಿಯು, ಇತಿ–ಸೂರ್ಯನಾಡಿಯೆಂದು, ವಿಷ್ಣುಪದೀತಿ–ಗಂಗಾನದಿಯೆಂದೂ, ಸ್ಮೃತಾ–ನೆನೆಯಲ್ಪಟ್ಟಿತು, ಸಾ ಮಧ್ಯಮಾ–ಆ ಸುಷುಮ್ನೆ ಎಂಬ ಮಧ್ಯನಾಡಿಯು, ಅಗ್ನಿರತಿ–ಅಗ್ನಿಯೆಂದೂ, ಯೋನಿರಿತಿ–ಉತ್ಪತ್ತಿಕಾರಿಣಿಯಾದ ಸರಸ್ವತೀನದಿಯೆಂದೂ, ಸ್ಮ ೃತಾ–ನೆನೆಯಲ್ಪಟ್ಟಿತು. ತಾಸಾಂ–ಆ ನಾಡಿಗಳ, ಯೋಗಾತ್–ಸಮ್ಮಂಧದ ದೆಶೆಯಿಂದ ತ್ರಿವೇಣೀಯೋಗಸ್ಥಲಂ–ತ್ರೀವೇಣೀಯೋಗವೆಂಬ ಯೋಗವೆಂಬ ಯೋಗಸ್ಥಲವೆಂದು, ತದಿದಮೇವ,–ಆ ಸ್ಥಲವೇ, ತ್ರಿಕೂಟಂ–ತ್ರಿಕೂಟ ಸಂಜ್ಞೆಯುಳ್ಳಂಥಾದ್ದು, ಭವೇತ್–ಅಹುದು.

●

ಸೂ : ಶಿವಧ್ಯಾನಕ್ಕೆ ರಹಸ್ಯವಾದ ಈ ತ್ರಿಕೂಟಸ್ಥಾನಕ್ಕೆ ಅನ್ವರ್ಥದಿಂ ಸಲ್ವ ನಾಮಾಂತರಂಗಳಂ ಪೇಳ್ದಪಂ–

ಶಬ್ದದ್ವಾರೇ ಗತೇ ಯತ್ರ ಗಂಧದ್ವಾರೇ ತಥೈವ ಚ ।
ಸಮಾಯೋಗೇ ಚತುಃಪೀಠಂ ಶೃಂಗಾಟಕಸುಸಂಜ್ಞಿತಂ ॥ ॥೩೬॥

ಯತ್ರ–ಯಾವ ತ್ರಿಕೂಟಸ್ಥಾನದಲ್ಲಿ, ಶಬ್ದದ್ವಾರೇ–ಶಬ್ದಗ್ರಾಹಕಂಗಳಾದ ಶ್ರೋತ್ರದ್ವಾರಂಗಳೆರಡು, ಗತೇ–ಎಯ್ದಲ್ಪಟ್ಟವೋ, ತಥೈವಚ–ಹಾಗೆಯೇ, ಗಂಧದ್ವಾರೇ–ಗಂಧಗ್ರಾಹಕಂಗಳಾದ ನಾಶಿಕಾದ್ವಾರಂಗಳೆರಡು, ಗತೇ–ಎಯ್ದಲ್ಪಟ್ಟವೋ, ಸಮಾಯೋಗೇ–ಸಮಾನಸ್ಕಂದವಾಗಿ ಈ ನಾಲ್ಕು ದ್ವಾರಗಳು ಕೂಡಿದ ಭ್ರೂಮಧ್ಯ ಸ್ಥಾನದಲ್ಲಿಯೇ, ಚತುಃಪೀಠಂ–ಚತುಃಪೀಠವು, ಶೃಂಗಾಟಕ ಸಂಸಂಜ್ಞಿತಂ–ಶೃಂಗಾಟಕವೆಂದು ಲೇಸಾಗಿ ಹೆಸರಿಡಲ್ಪಟ್ಟಂಥಾದ್ದು.

●

ಸೂ : ಯೋಗೀಶ್ವರರಿಂ ಪೇಳ್ದ ನಾಮಂಗಳ್ ಭಿನ್ನವಾದರೂ ಸ್ಥಾನ ಒಂದೇ ಎಂದು ಪೇಳ್ದಪಂ–

ತಸ್ಮಾತ್ರಿಕೂಟನಾಮಾಪಿ ತ್ರಿವೇಣೀಸಂಗಮಸ್ಥಲಂ ।
ಶೃಂಗಾಟಕಚತುಃಪೀಠನಾಮಾನ್ಯೇಕಸ್ಥಲಸ್ಯ ಹಿ ॥ ॥೩೭॥

ತಸ್ಮಾತ್–ಹಿಂದೆ ಹೇಳಿದ ಕಾರಣಗಳಿಂದೆ, ತ್ರಿಕೂಟನಾಮಾಪಿ–ತ್ರಿಕೂಟವೆಂಬ ಹೆಸರು, ತ್ರಿವೇಣೀಸಂಗಮಸ್ಥಲಂ–ತ್ರೀವೇಣಿಸಂಗಮವೆಂಬ ಹೆಸರು, ಶೃಂಗಾಟಕಚತುಃಪೀಠನಾಮಾನಿ–ಶೃಂಗಾಟಕಚತುಃಪೀಠವೆಂಬ ಹೆಸರುಗಳಂ, ಏಕಸ್ಥಲಸ್ಯ ಭ್ರೂಮಧ್ಯವೆಂಬ ಒಂದಕ್ಕೆ ವರ್ತಿಸುತ್ತಿಹುದು, ಹಿ–ಪ್ರಸಿದ್ಧವಲಾ.

●

ಸೂ : ವಾಯುವಿಂಗಾಕಾಶವೇ ಲಯಸ್ಥಾನಪ್ಪುದರಿಂ, ಶಬ್ದಕ್ಕೆ ಸುಷುಮ್ನೆಯೇ ಲಯಭೂಮಿಯಪ್ಪುದರಿಂ ಈ ತ್ರಿಕೂಟಸ್ಥಾನದಲ್ಲಿ ಮನೋಮಾರುತಂಗಳನ್ನು ಎಯ್ದಿಸಿ ಯೋಗಮಂ ಸಾಧಿಸೆಂದು ಪೇಳ್ದಪಂ–

ಉಚ್ಛ್ವಾಸನಿಶ್ವಾಸಕೃತಾ ಸುವಾಯುನಾ
ತ್ರಿಕೂಟದೇಶೇ ಮನಸಾ ಸಹಾಂಗ ।
ಸ್ಥಿತ್ವಾ ಸುಷುಮ್ನಾಖ್ಯತದೂರ್ಧ್ವನಾಶಿಕಾ
ತ್ರಿಕೋಣಮಾರ್ಗೇ ಗಮನಂ ಕುರುಷ್ವ ॥೩೮॥

ಅಂಗ–ಎಲೈ ಶಿಷ್ಯನೇ, ಉಚ್ಛ್ವಾಸನಿಶ್ವಾಸಕೃತಾ–ರೇಚಕಪೂರಕಂಗಳಂ ಮಾಡುತ್ತಿರ್ದಂಥ, ಅಸುವಾಯುನಾ–ಮಂತ್ರಸಂಸ್ಕಾರವಾದ ಪ್ರಾಣವಾಯುವಿನಿಂದ, ಮನಸಾ ಸಹ–ವಿಷಯವಿಮುಖವಾದ ಮನಸ್ಸಿನೊಡನೆ ಕೂಡಿ, ತ್ರಿಕೂಟದೇಶೇ–ತ್ರಿಕೂಟಸ್ಥಾನದಲ್ಲಿ, ಸ್ಥಿತ್ವಾ–ಇದ್ದು, ಸುಷುಮ್ನಾಖ್ಯೇ–ಸುಷುಮ್ನೆ ಎಂಬ ಹೆಸರುಳ್ಳ, ತದೂರ್ಧ್ವನಾಸಿಕಾತ್ರಿಕೋಣಮಾರ್ಗೇ–ನಾಸಿಕಕೋರ್ಧ್ವದ ತ್ರಿಕೋಣ ಮಾರ್ಗದಲ್ಲಿ, ಗಮನಂ–ಎಯ್ದುವದನ್ನು, ಕುರುಷ್ವ–ಮಾಡು.

●

ಸೂ : ಆ ಮನೋಮಾರುತಂಗಳು ತ್ರಿಕೋಣಮಾರ್ಗವನ್ನೈದುವದಕ್ಕುಪಾಯಮಮಂ ಪೇಳ್ದಪಂ-

ಪ್ರಾಣಾನಿಲಸ್ಯೋದ್ಗಮನೇ ನಿರೋಧನೇ
ನಿಪಾತಿತಾ ಚೋರ್ಧ್ವಸುಸೂಕ್ಷ್ಮಶಕ್ತಿಃ ।
ಪ್ರತ್ಯಾಹತೇ ಮಧ್ಯಗತಾ ಪ್ರಭೋಧಿನೀ
ಹ್ಯಧೋಗತೇ ಮೂಲನಿಕುಂಚನೀ ಸ್ಯಾತ್ ॥೩೯॥

ಪ್ರಾಣಾನಿಲಸ್ಯ-ಪ್ರಾಣವಾಯುವಿನ, ಉದ್ಗಮನೇ-ರೇಚಕದಿಂ ಹೊರಗೆ ಸೂಸುವತನವು, ನಿರೋಧನೇ-ಮುಂದೆ ಪೇಳ್ವ ಜಾಳಂಧರಬಂಧದಿಂದ ತಡೆಲಾಗಿ, ಊರ್ಧ್ವಸುಸೂಕ್ಷ್ಮಶಕ್ತಿಃ- ಅತಿಸೂಕ್ಷ್ಮವಾದ ಕುಂಡಲಿನಿಯು, ನಿಪಾತಿ ತಾ ಚ-ಅಧೋಮುಖವಹುದರಿಂ ಧ್ಯಾನಕ್ಕೆ ಅಭಿಮುಖವಾಗಲ್ಪಟ್ಟಂತಹದು. ಪ್ರತ್ಯಾಹತೇ-ಪ್ರಾಣವಾಯು ತಿರಿಗಿ ತನ್ನ ಸ್ಥಾನವನ್ನೈದಲಾಗಿ, ಮಧ್ಯಗತಾ-ಮಧ್ಯಕುಂಡಲಿನಿಯಂ, ಪ್ರಭೋಧಿತಾ-ಕುಟಿಲತೆಯಂ ಬಿಟ್ಟು ನೇರಿತ್ತಹುದು. ಅಧೋಗತೇ-ಪ್ರಾಣವಾಯು ಮೂಲಾಧಾರಾಭಿಮುಖ ವಾಗಲಾಗಿ, ಮೂಲ ನಿಕುಂಚನೀ-ಮೂಲಾಧಾರಶಕ್ತಿಯ ನಾಕುಂಚನವ ಮಾಡುವಂಥಾದ್ದು, ಸ್ಯಾತ್-ಅಹುದು.

●

ಸೂ : ಈ ಪ್ರಕಾರದಿಂ ತ್ರಿಸ್ಥಾನದಲ್ಲಿಯ ತ್ರಿವಿಧಶಕ್ತಿವ್ಯಾಪಾರದಿಂ ಪರಪದ ಪ್ರಾಪ್ತಿಯಹುದೆಂದು ಪೇಳ್ದಪಂ -

ತಸ್ಮಾತ್ತ್ರಿವಿಧಶಕ್ತೀನಾಂ ಪಾತೇನ ಪ್ರವಿಬೋಧನಾತ್ ।
ಆಕುಂಚನೇನ, ಯೋಗೀಂದ್ರಾಃ ಯಾಂತ್ಯಮೀ ಪರಮಂ ಪದಂ ॥ ॥೪೦॥

ತಸ್ಮಾತ್-ಅದುಕಾರಣಮಾಗಿ, ಅಮೀಯೋಗೀಂದ್ರಾಃ-ಈ ಯೋಗೀಶ್ವರಂಗಳ್, ತ್ರಿವಿಧಶಕ್ತೀನಾಂ -ಊರ್ಧ್ವಕುಂಡಲಿನೀ, ಮಧ್ಯಕುಂಡಲಿನೀ ಅಧಃಕುಂಡಲಿನೀಯೆಂಬ ಮೂರು ಪ್ರಕಾರವಾದ ಶಕ್ತಿಗಳ, ಪಾತೇನ-ಅಭಿಮುಖವಹುದರಿಂ, ಪ್ರವಿಬೋಧನಾತ್-ಋಜುವಹುದರಿಂ, ಆಕುಂಚನೇನ-ಸಂಕೋಚನದಿಂ, ಪರಮಂ-ಶ್ರೇಷ್ಠವಾದಂಥ, ಪದಂ-ತ್ರಿಕೂಟಸ್ಥಾನವನ್ನು, ಯಾಂತಿ-ಎಯ್ದುತ್ತಿರ್ಪರು.

●

ಸೂ : ಈ ಪರಮಪದಪ್ರಾಪ್ತಿಸಾಧನವಾದ ತ್ರಿವಿಧಶಕ್ತಿವ್ಯಾಪಾರಾರ್ಥವಾಗಿ ಬಂಧುತ್ರಯಂಗಳಂ ಮಾಳ್ಪುದೆಂದು ಪೇಳ್ದಪಂ -

ಅತ ಏವ ಮಹಾಶ್ಚರ್ಯಂ ಚಂದ್ರಸೂರ್ಯಾಗ್ನಿಸದ್ಮನಿ ।
ಬಂಧನಂ ಕುರು ತದ್ ಜ್ಞಾತ್ವಾ ಪ್ರಣವಧ್ವನಿನಾ ಸಹ ॥ ॥೪೧॥

ಅತ ಏವ-ಪರಪದಪ್ರಾಪ್ತಿಗೆ ತ್ರಿವಿಧಶಕ್ತಿವ್ಯಾಪಾರವೇ ಕಾರಣವಹುದಾಗಿ, ಮಹಾಶ್ಚರ್ಯಂ-ಅತ್ಯಾಶ್ಚರ್ಯವಾಗಿರ್ದಂಥ, ತತ್-ಆ ತ್ರಿವಿಧಶಕ್ತಿವ್ಯಾಪಾರಮಂ, ಜ್ಞಾತ್ವಾ-ಅರಿದಂ, ಪ್ರಣವಧ್ವನಿನಾ-ನಾದದೊಡನೆ, ಸಹ-ಕೂಡಿ, ಚಂದ್ರ ಸೂರ್ಯಾಗ್ನಿಸದ್ಮನಿ-ಕ್ರಮದಿಂದ ವಿಶುದ್ಧಿ ಮಣಿಪೂರಕ ಆಧಾರವೆಂಬ

ಚಂದ್ರ ಸೂರ್ಯಾಗ್ನಿಗಳಾಶ್ರಯದಲ್ಲಿ, ಬಂಧನಂ–ಜಾಳಂಧರಬಂಧ ಉಡ್ಯಾಣಬಂಧ ಆಧಾರ ಬಂಧವೆಂಬ ಬಂಧತ್ರಯವನು, ಕುರುಂ–ಮಾಡು.

●

ಸೂ : ಆ ಬಂಧನತ್ರಯಾನಂತರದಲ್ಲಿ ತ್ರಿಕೂಟಸ್ಥಾನದೊಳ್ ತೋರುವ ಪ್ರಣವದ ಸ್ವರೂಪಮಂ ಪೇಳ್ದಪಂ–

ತ್ರಯೋ ವೇದಾಸ್ತ್ರಯೋ ದೇವಾಸ್ತ್ರಯೋ ಲೋಕಾಸ್ತ್ರಯೋ ಗುಣಾಃ ।
ಓಮಿತ್ಯೇಕಾಕ್ಷರೇ ಮಂತ್ರೇ ಪರೇ ಬ್ರಹ್ಮಣಿ ಸಂತಿ ವೈ ॥ ॥೪೨॥

ತ್ರಯಃ–ಮೂರಾಗಿರ್ಪಂಥ, ವೇದಾಃ – ಋಗ್ಯಜುಸಾಮಂಗಳೆಂಬ ವೇದಗಳು, ತ್ರಯಃ–ಮೂರಾಗಿರ್ಪಂಥ, ದೇವಾಃ–ಭವ ಹರ ಮೃಡರೆಂಬ ದೇವತೆಗಳು, ತ್ರಯಃ–ಮೂರಾಗಿರ್ಪಂಥ, ಲೋಕಾ–ಸ್ವರ್ಗ ಮರ್ತ್ಯ ಪಾತಾಳವೆಂಬ ಲೋಕಂಗಳು, ತ್ರಯಃ–ಮೂರಾಗಿರ್ಪಂಥ, ಗುಣಾಃ–ಶುದ್ಧಂಗಳಾದ ಸತ್ವ ರಜಸ್ತಮೋಗುಣಂಗಳು ಪರೇ–ಸರ್ವೋತ್ಕೃಷ್ಟವಾಗಿರ್ದಂಥ, ಬ್ರಹ್ಮಣಿ–ಬ್ರಹ್ಮರೂಪದಿಂ ಷಡಧ್ವೋಪಧಾನವಾಗಿರ್ಪಂಥ, ಓಮಿತಿ–"ಓಂ" ಎಂಬ ಏಕಾಕ್ಷರೇ–ಏಕಾಕ್ಷರ ರೂಪವಾಗಿರ್ಪಂಥ, ಮಂತ್ರೇ–ಮಂತ್ರದಲ್ಲಿ, ಸಂತಿ ವೈ–ಉಂಟಲಾ.

●

ಸೂ : ಅನಂತರದಲ್ಲಿ ಹಠಯೋಗವೆನಿಸುವ ಕೇವಲಕುಂಭಕದ ಸ್ವರೂಪಮಂ ಪೇಳ್ದಪಂ –

ಇತಿ ಸರ್ವೇ ಚ ತಂ ಸಿದ್ಧಾವಿದುಃ ಕೇವಲಕುಂಭಕಂ ।
ಹಠೇಷ್ವೇಕಮಿದಂ ಶ್ರೇಷ್ಠಂ ಗೋಪಿತಂ ಪರಮಾದ್ಭುತಂ ॥ ॥೪೩॥

ಇತಿ–ಈ ಪ್ರಕಾರದಿಂದ, ಸರ್ವೇ–ಸಮಸ್ತರಾಗಿರ್ಪಂಥ, ಸಿದ್ಧಾಃ–ಯೋಗಸಿದ್ಧರುಗಳು, ತಂ–ಆ ಲಯಯೋಗದಿಂದಾದ ಪ್ರಣವದಲ್ಲಿಯ ವಾಯುಲಯವನೇ, ಕೇವಲಕುಂಭಕಂ–ಕೇವಲಕುಂಭಕವನ್ನಾಗಿ, ವಿದುಃ–ಅರಿವುತ್ತಿಹರು, ಹಠೇಷು–ಹಠಯೋಗಂಗಳಲ್ಲಿ, ಶ್ರೇಷ್ಠಂ– ವಿಶಿಷ್ಟವಾಗಿರ್ಪಂಥ, ಪರಮಾದ್ಭುತಂ–ಅತ್ಯಂತ ಆಶ್ಚರ್ಯವಾಗಿರ್ಪಂಥ, ಇದಮೇಕಂ–ಈ ಕೇವಲಕುಂಭಕವೊಂದೇ, ಗೋಪಿತಂ–ಮರೆಸಲ್ಪಟ್ಟುದು.

●

ಸೂ : ಈ ಕೇವಲಕುಂಭಕಾಭ್ಯಾಸದಿಂ ಪ್ರಾಣವಾಯುವಂ ನಿಲ್ಲಿಸಿದಾತಂಗೆ ಜನನ–ಮರಣಾದಿಗಳ್ ಬಿಡುವುವೆಂದು ಪೇಳ್ದಪಂ–

ಗಮಾಗಮೌ ಪ್ರಾಣವಾಯೋರ್ವಿಧಾನೇನ ನ ಗಚ್ಛತಃ ।
ಯಥಾ ತಸ್ಯ ಶರೀರಸ್ಯ ಗಮಾಗಮವಿಧಿಸ್ತಥಾ ॥ ॥೪೪॥

ಪ್ರಾಣವಾಯೋಃ–ಪ್ರಾಣವಾಯುವಿನ, ಗಮಾಗಮೌ ರೇಚಕಪೂರಕಂಗಳಂ, ವಿಧಾನೇನ–ಪೂರ್ವೋಕ್ತವಾದ ಲಯಯೋಗದ ವಿಧಾನದಿಂದ, ಯಥಾ–ಹ್ಯಾಗೆ, ನಗಚ್ಛತಃ–ಎಯ್ದುತ್ತಿರವೋ,

ತಸ್ಯ–ಆತನ, ಶರೀರಸ್ಯ–ದೇಹಕ್ಕೆ, ಗಮಾಗಮಂ ವಿಧಃ–ಮರಣೋತ್ಪತ್ತಿಗಳು ತಥಾ–ಹಾಂಗೆ ತೊಲಗುತ್ತಿರ್ಪುದೆಂಬುದರ್ಥ.

●

ಸೂ : ಯೋಗಶಾಸ್ತ್ರದಲ್ಲಿ ಕೇವಲಕುಂಭಕವತಿರಹಸ್ಯವಪ್ಪುವದರಿಂ ಜಡ ಬುದ್ಧಿಗಳಿಗೆ ಗೋಚರಿಸದೆಂದು ಪೇಳ್ದಪಂ–

ಸಿದ್ಧಸಮ್ಮತತಾಸ್ತ್ರೇಷು ಸ್ಥಿತಃ ಕೇವಲಕುಂಭಕಃ ।

ತಥಾಽ ಪ್ಯತಿರಹಸ್ಯತ್ವಾನ್ನವಿಜಾನಾತಿ ಮೂಢಧೀಃ ॥ ॥೪೫॥

ಸಿದ್ಧಸಮ್ಮತಶಾಸ್ತ್ರೇಷು–ಯೋಗಸಿದ್ಧರ್ಗೆ ಸಮ್ಮತವಾದ ಯೋಗಶಾಸ್ತ್ರಂಗಳಲ್ಲಿ, ಕೇವಲ ಕುಂಭಕಃ – ಕೇವಲ ಕುಂಭಕವು, ಸ್ಥಿತಃ–ಇರಲ್ಪಟ್ಟಿತು, ತಥಾಽ ಪಿ–ಹಾಗಾಯಿತ್ತಾದರೂ, ಅತಿರಹಸ್ಯತ್ವಾತ್–ಅತಿಗೌಪ್ಯವಾದಕಾರಣದಿಂ, ಮೂಢಧೀಃ–ಮಂದಬುದ್ಧಿಯುಳ್ಳಾತನು, ನ ವಿಜಾನಾತಿ–ಅರಿವುತ್ತಿರನು.

●

ಸೂ : ಗುರುಪ್ರಸಾದದಿಂ ಕೇವಲಕುಂಭಕಸಿದ್ಧನಾದಾತಂಗೆ ಪೂರ್ವಯೋಗಾಭ್ಯಾಸದಿಂ ಪ್ರಯೋಜನಮಿಲ್ಲೆಂದು ಪೇಳ್ದಪಂ–

ಗುರೋರ್ಯಸ್ಯ ಪ್ರಸಾದಾಚ್ಚ ಸಿದ್ಧ್ಯೇತ್ಕೇವಲಕುಂಭಕಃ ।

ಯದಿ ಕಿಂ ಕರಣೈರ್ಮುದ್ರಾಬಂಧನೈರೇವಮಾದಿಭಿಃ ॥ ॥೪೬॥

ಯಸ್ಯ–ಆವನೋರ್ವ ಯೋಗೀಶ್ವರಂಗೆ, ಗುರೋಃ–ಆಚಾರ್ಯನ, ಪ್ರಸಾದಾಚ್ಚ–ಪ್ರಸನ್ನತೆಯ ದೆಸೆಯಿಂದ, ಕೇವಲಕುಂಭಕಃ–ಕೇವಲಕುಂಭಕವು; ಯದಿ–ಎತ್ತಲಾನು, ಸಿದ್ಧ್ಯೇತ್–ಸಿದ್ಧಿಸುವದೋ, ತಸ್ಯ–ಆತನಿಗೆ, ಕರಣೈಃ–ಭುಜಂಗೀ ಶೀತಳೀ ಮುಂತಾದ ಕರಣಂಗಳಿಂದಲೂ, ಮುದ್ರಾಬಂಧನೈಃ–ಮಹಾಮುದ್ರೆ ಜಾಳಂಧರ ಮೊದಲಾದ ಮುದ್ರಾಬಂಧಂಗಳಿಂದಲೂ, ಏವಮಾದಿಭಿಃ–ಇವು ಮೊದಲಾದ ಪೂರ್ವಯೋಗಂಗಳಿಂದೆ, ಕಿಂ–ಏನು?

●

ಸೂ : ಈ ಕೇವಲಕುಂಭಕವೇ ಮೋಕ್ಷಸಾಧನವೆಂದು ಪೇಳ್ದಪಂ–

ನಿಶ್ಯಬ್ದೇ ಕೇವಲೇಕುಂಭೇ ಪ್ರಾಪ್ತೋ ವಿಷ್ಣುಪದಂ ಮರುತ್ ।

ತಥಾ ಖಲು ತಯೋರೈಕ್ಯಂ ಜೀವಾತ್ಮಪರಮಾತ್ಮನೋಃ ॥ ॥೪೭॥

ಯದಾ–ಯಾವಾಗ, ನಿಶ್ಶಬ್ದೇ–ವೈಖರ್ಯಾದಿಶಬ್ದಗಳಿಲ್ಲದೆಯಿರ್ದಂಥ, ಕೇವಲಕುಂಭೇ–ಕೇವಲಕುಂಭಕದಲ್ಲಿ, ಮರುತ್–ಪ್ರಾಣವಾಯುವು, ವಿಷ್ಣುಪದಂ–ಬಿಂದ್ವಾಕಾಶಸ್ಥಾನವನ್ನು, ಪ್ರಾಪ್ತಃ–ಎಯ್ದಲ್ಪಟ್ಟಿತೊ, ತದಾ–ಆಕಾಲದಲ್ಲಿ, ತಯೋಃ–ಆ ಪ್ರಸಿದ್ಧವಾಗಿರ್ಪಂಥ, ಜೀವಾತ್ಮ ಪರಮಾತ್ಮನೋ –ಹಂಸರೂಪರಾದ ಜೀವಾತ್ಮಪರಮಾತ್ಮರ್ಗೆ, ಐಕ್ಯಂಖಲಂ–ಸಾಮರಸ್ಯವಲಾ.

●

ಸೂ : ಈ ಕೇವಲಕುಂಭಕದಲ್ಲಿಯ ನಿಶ್ಶಬ್ದಾತ್ಮಕವಾದ ಪರನಾದವೆ ಶಿವತತ್ತ್ವವೆಂದು ಪೇಳ್ದಪಂ–

ನಿಶ್ಶಬ್ದಂ ತತ್ತ್ವಮಿತ್ಯಾಹುರನಿರ್ವಾಚ್ಯಂ ಪರಂ ಪದಂ ।
ಭೂತೇಂದ್ರಿಯಾದಿಪ್ರಕೃತೇಸ್ತತ್ತ್ವಾನಾಂಚ ಲಯಾತ್ಮಕಂ ॥ ॥೪೮॥

ನಿಶ್ಶಬ್ದಂ–ಶಬ್ದಾತ್ಮಕವಲ್ಲದ ನಾದಬ್ರಹ್ಮವನೆ, ಅನಿರ್ವಾಚ್ಯಂ–ನುಡಿಯಿಂ ಪೇಳಲ್ ಶಕ್ಯವಿಲ್ಲದಿರ್ಪಂಥ, ಪರಂಪದಂ–ಮುಖ್ಯಸ್ಥಾನವಾಗಿರ್ಪಂಥ, ಭೂತೇಂದ್ರಿಯಾದಿ ಪ್ರಕೃತೇಃ ಭೂತ–ಪಂಚಮಹಾಭೂಂಗಳಿಗೆ, ಇಂದ್ರಿಯ–ಕರ್ಮೇಂದ್ರಿಯ ಜ್ಞಾನೇಂದ್ರಿಯಗಳಿಗೆ, ಆದಿಶಬ್ದದಿಂ ಮನೋಬುಧ್ಯಾದಿಗಳಿಗೆ, ಪ್ರಕೃತೇಃ –ಕಾರಣರೂಪವಾದ ಪ್ರಕೃತಿಗೂ, ತತ್ತ್ವಾನಾಂಚ–ಪಂಚಕಂಚುಕ ಶುದ್ಧವಿದ್ಯಾ ಮೊದಲಾದ ತತ್ತ್ವಂಗಳಿಗೆಯೂ, ಲಯಾತ್ಮಕಂ–ಲಯಸ್ಥಾನರೂಪವಾಗಿರ್ಪಂಥ, ತತ್ತ್ವಮಿತಿ–ಶಿವತತ್ತ್ವವನಾಗಿ, ಆಹುಃ–ಹೇಳುತ್ತಾರೆ.

●

ಸೂ : ಅನಂತರದಲ್ಲಿ ಕೇವಲಕುಂಭಕಾಭ್ಯಾಸಕ್ಕುಪಾಯಮಮಂ ಪೇಳ್ದಪಂ–

ಮೂಲೋಡ್ಡೀಯಣಜಾಲಬಂಧನವಿಧಾನಭ್ಯಾಸತೋ ಯೋಗಿನೋ
ವಾಯೋರುದ್ಗಮನಂ ನಿರಂಕುಶವಿಧೇಸ್ತದ್ವ್ಯೋಮ್ನಿ ಸಂರೋಧನಾತ್ ।
ಭೂತಾನೀಂದ್ರಿಯವರ್ಗತದ್ಗುಣಮನೋಽಹಂಚಿತ್ತಬುದ್ಧ್ಯಾದಯ
ಸ್ಸರ್ವಂ ಲೀನಮುಪೈತಿ ವೃತ್ತಿರಹಿತಂ ಸೌಖ್ಯಂ ತದಾ ಕಸ್ಯನ ॥ ॥೪೯॥

ಮೂಲೋಡ್ಡೀಯಣಜಾಲಬಂಧನವಿಧೌ–ಆಧಾರಬಂಧ ಉಡ್ಯಾಣಬಂಧ ಜಾಲಂಧರಬಂಧವೆಂಬ ಬಂಧತ್ರಯಂಗಳ ವಿಧಾನದಲ್ಲಿಯ, ಅಭ್ಯಾಸತಃ–ಅಭ್ಯಾಸದ ದೆಶೆಯಿಂದ, ಯೋಗಿನಃ–ಯೋಗೀಶ್ವರಂಗೆ, ನಿರಂಕುಶವಿಧೇಃ, ವಾಯೋಃ–ಹೃದಯಸ್ಥಾನದ ಪ್ರಾಣವಾಯುವಿನ, ಉದ್ಗಮನಂ–ಹೃದಯಸ್ಥಾನದಿಂದ ಊರ್ಧ್ವಗತಿಯನು, ತದ್ವ್ಯೋಮ್ನಿ–ಆ ಪ್ರಸಿದ್ಧವಾದ ಆಕಾಶವೆಂಬ ಸುಷುಮ್ನಸ್ಥಾನದ, ಸಂರೋಧನಾತ್ –ನಾಸಿಕಾದ್ವಾರದಲ್ಲಿ ರೇಚಿಸದೆ ತಡೆವುದರ ದೆಶೆಯಿಂದೆ, ಭೂತಾನಿ–ಪೃಥಿವ್ಯಾಧಿಭೂತಂಗಳು, ಇಂದ್ರಿಯವರ್ಗತದ್ಗುಣ ಮನೋಹಂಚಿತ್ತಬುದ್ಧ್ಯಾದಯಃ ಇಂದ್ರಿಯವರ್ಗ–ಕರ್ಮೇಂದ್ರಿಯ ಜ್ಞಾನೇಂದ್ರಿಯಂಗಳ ಸಮೂಹವು, ತದ್ಗುಣ–ಆ ಇಂದ್ರಿಯಂಗಳ ವಚನಾದಿಕ್ರಿಯೆಗಳು ಶಬ್ದಗ್ರಹಣಾದಿಜ್ಞಾನಂಗಳು, ಮನೋಹಂಕಾರಚಿತ್ತಬುದ್ಧ್ಯಾದಯಃ–ಮನ ಅಹಂಕಾರ ಚಿತ್ತ ಬುದ್ಧ್ಯಾದಿಗಳು ಆದಿಶಬ್ದದಿಂ ಸತ್ವಾದಿಗುಣಂಗಳು ಎಂಬ, ಸರ್ವಂ–ಸಮಸ್ತವೂ, ವೃತ್ತಿರಹಿತಂ–ತಮ್ಮ ತಮ್ಮ ವ್ಯಾಪಾರದಿಂ ತೊಲಗಲ್ಪಟ್ಟವಾಗಿ, ಲೀನಂ–ಲಯವನ್ನು, ಉಪೈತಿ–ಎಯ್ದುತ್ತಿಹುದೋ, ತದಾ–ಆ ಕಾಲದಲ್ಲಿ, ಕಸ್ಯ–ಆವಾತಂಗೆ, ಸೌಖ್ಯಂ–ಆನಂದವು, ನ–ಇಲ್ಲ? (ಕೇವಲ ಕುಂಭಕದಿಂದ ಬಾಹ್ಯಂತಃಕರಣಲಯದಿಂದೆ ಸಕಲರ್ಗೆ ಆನಂದವೆಂಬುದರ್ಥ).

●

ಸೂ : ಅನಂತರದಲ್ಲಿ ಕೇವಲಕುಂಭಕಕ್ಕೆ ಬಂಧತ್ರಯವೇ ಕಾರಣತ್ರಯಮಪ್ಪುದರಿಂದೆ ಮೊದಲಲ್ಲಿ ಆಧಾರಬಂಧ ಸ್ವರೂಪಮಮಂ ಪೇಳ್ದಪಂ–

ಯೋಽಪಾನಸೂರ್ಯಮಥ ವಾಯುನಿರೋಧನೇನ

ಪ್ರಾಣೇಂದುನಾ ಸಹ ತದೂರ್ಧ್ವಗತಂ ಪ್ರಕೃತ್ಯ ।

ಯೋಗೈಕಸಿದ್ಧಿಮನಿಶಂ ಕುರುತೇ ಸಮಸ್ತ

ಪ್ರಜ್ಞಾವತಾಂ ಭುವಿ ಸ ಏವ ಹಿ ಮೂಲಬಂಧಃ ॥ ॥೫೦॥

ಯಃ–ಯಾವ ಬಂಧವು, ವಾಯುನಿರೋಧನೇನ–ಆಕುಂಚನದಿಂ ವಾಯುವಂ ತಡೆವುದರಿಂದೆ, ಅಥ–ಅನಂತರದಲ್ಲಿ, ಅಪಾನಸೂರ್ಯಂ–ಅಪಾನವಾಯುವೆಂಬ ಸೂರ್ಯನನ್ನು, ಪ್ರಾಣೇಂದುನಾ–ಹೃದಯಸ್ಥಾನದ ಪ್ರಾಣವಾಯುವೆಂಬ ಚಂದ್ರನೊಡನೆ, ಸಹ–ಕೂಡಿ, ತದೂರ್ಧ್ವಗತಂ–ಆ ಊರ್ಧ್ವವಾದ ಸಂಪುಮ್ನಸ್ಥಾನವನೆಯ್ದಲ್ಪಟ್ಟಂ[೧]ತಹದನ್ನಾಗಿ[೧], ಪ್ರಕೃತ್ಯ–ಚನ್ನಾಗಿ ಮಾಡಿ, ಯೋಗೈಕ ಸಿದ್ಧಿಂ–ಯೋಗವೆಂಬ ಮುಖ್ಯಸಿದ್ಧಿಯನ್ನು, ಅನಿಶಂ–ಆವಾಗಲು, ಕುರುತೇ–ಮಾಡುತ್ತಿದ್ದಿತೋ, ಸಏವ–ಆ ಬಂಧವೇ, ಭುವಿ–ಭೂಲೋಕದಲ್ಲಿ, ಸಮಸ್ತಪ್ರಜ್ಞಾವತಾಂ–ಸಕಲಬುದ್ಧಿವಂತರ್ಗೆ, ಮೂಲಬಂಧೋಹಿ–ಮೂಲ ಬಂಧವಲಾ.

●

ಸೂ : ಅನಂತರದಲ್ಲಿ [೨]ಉಡ್ಡೀಯಣ[೨] ಬಂಧಮಮಂ ಪೇಳ್ದಪಂ–

ಅಧಶ್ಚೋರ್ಧ್ವಂ ನಾಭೇರ್ಯೋಬಂಧನಂ ಕುರುತೇ ಬಲಾತ್ ।

ಉಡ್ಡೀಯಣಮಸೌ ಬಂಧೋ ರುಗ್ಜರಾಮೃತ್ಯುನಾಶನಂ ॥ ॥೫೧॥

ಯಃ–ಆವುದಾನೊಂದು ಬಂಧವು, ನಾಭೇಃ–ನಾಭಿಯ, ಅಧಶ್ಚ–ಅಧೋಭಾಗವನ್ನು, ಊರ್ಧ್ವಂಚ–ಮೇಲಣದೇಶವನ್ನು, ಬಲಾತ್–ಬಲಾತ್ಕಾರದ ದೆಶೆಯಿಂದ, ಬಂಧನಂ–ಬಂಧನವನು, ಕುರುತೇ–ಮಾಡುತ್ತಿದ್ದಿತೋ, ಅಸೌಬಂಧಃ–ಈ ಬಂಧವು, ಉಡ್ಡೀಯಣಂ–ಉಡ್ಡೀಯಣಬಂಧವೆನಿಪುದು, ರುಗ್ಜರಾಮೃತ್ಯುನಾಶನಂ–ವ್ಯಾಧಿಜರಾ ಮರಣಂಗಳಂ ಕೆಡಿಸುವಂಥಾದ್ದು.

●

ಸೂ : ಅನಂತರದಲ್ಲಿ ಜಾಳಂಧರಬಂಧಮಂ ಪೇಳ್ದಪಂ–

ಕಂಠಮಾಕುಂಚ್ಯ ಹೃದಯೇ ಸ್ಥಾಪಯೇಚ್ಚುಬುಕಂ ದೃಢಂ ।

ಏಷ ಜಾಲಂಧರೋ ಬಂಧ ಊರ್ಧ್ವಮೃತನಿಬಂಧಕಃ ॥ ॥೫೨॥

ಕಂಠಂ–ಕೊರಲನು, ಆಕುಂಚ್ಯ–ಸಂಕೋಚಮಮ್ ಮಾಡಿ, ಹೃದಯೇ–ಹೃದಯ ಸ್ಥಾನದಲ್ಲಿ, ಚುಬಕಂ–ಚುಬಕವನ್ನು, ದೃಢಂ–ದೃಢವಾಗಿ, ಸ್ಥಾಪಯೇತ್–ಇರಿಸುವುದು, ಏಷಃ–ಇದು, ಜಾಲಂಧರಃ–ಜಾಲಂದರವೆಂಬ, ಬಂಧಃ–ಬಂಧವು, ಊರ್ಧ್ವಾಮೃತನಿಬಂಧಕಃ–ಊರ್ಧ್ವಭಾಗದ ಅಮೃತಸ್ರವಿಸುವುದಕ್ಕೆ ಕಾರಣವಾಗಿರ್ದಂಥಹದು. ದೃಢಂ–ಇರಿಸುವುದು, ಏಷಃ–ಇದು, ಜಾಲಂಧರಃ–ಜಾಲಂಧರವೆಂಬ, ಬಂಧಃ–ಬಂಧವು, ಊರ್ಧ್ವಮೃತನಿಬಂಧಕಃ–ಊರ್ಧ್ವಭಾಗದ ಅಮೃತ ಸ್ರವಿಸುವುದಕ್ಕೆ ಕಾರಣವಾಗಿರ್ದಂತಹದು.

●

೧–೧ ಥಾತನಾಗಿ (ಮೈ). ೨–೨ ಡ್ಡಿಯಾಣ (ಕ).

ಸೂ : ಈ ಬಂಧತ್ರಯಾಭ್ಯಾಸದಿಂದ ಕೇವಲಕುಂಭಕಸಿದ್ಧಿಯಪ್ಪುದೆಂದು ಪೇಳ್ದಪಂ–

ಅಥೋರ್ಧ್ವಮಧ್ಯಸ್ಥಿರಬಂಧನಾಭ್ಯಾಮಾಕುಂಚನಾದೂರ್ಧ್ವಮಪಾನವಾಯೋಃ ।
ಘ್ರಾಣೈಕರಂಧ್ರೇ ಮರುತಃಪ್ರವೇಶಾಚ್ಚೀಘ್ರಂ ಭವೇತ್ಕೇವಲ ಕುಂಭಸಿದ್ಧಿಃ ॥ ॥೫೩॥

ಅಥ–ಅನಂತರದಲ್ಲಿ, ಊರ್ಧ್ವಮಧ್ಯಸ್ಥಿರಬಂಧನಾಭ್ಯಾಂ, ಊರ್ಧ್ವ–ಕಂಠಸ್ಥಾನದಲ್ಲಿಯ, ಮಧ್ಯ–ನಾಭಿಸ್ಥಾನಂಗಳಲ್ಲಿಯ, ಸ್ಥಿರ–ಸ್ಥಿರಂಗಳಾದ, ಬಂಧನಾಭ್ಯಾಂ–ಜಾಲಂಧರಬಂಧ, ಉಡ್ಯಾಣಬಂಧಗಳಿಂದ; ಊರ್ಧ್ವಂ–ಊರ್ಧ್ವಮಾಗಿ, ಅಪಾನವಾಯೋಃ–ಅಪಾನವಾಯುವಿನ, ಆಕುಂಚನಾತ್–ಆಕುಂಚನದ ದೆಶೆಯಿಂದ, ಘ್ರಾಣೈಕರಂಧ್ರೇ–ನಾಸಿಕದೊಂದು ರಂಧ್ರದಲ್ಲಿ, ಮರುತಃ–ಪ್ರಾಣವಾಯುವಿನ, ಪ್ರವೇಶಾತ್–ಪೂರಕದೆಶೆಯಿಂದೆ, ಕೇವಲಕುಂಭಸಿದ್ಧಿಃ–ಕೇವಲಕುಂಭಕಸಿದ್ಧಿಯು, ಶೀಘ್ರಂ–ಶೀಘ್ರವಾಗಿ, ಭವೇತ್–ಆಗುವುದು.

●

ಸೂ : ಅನಂತರದಲ್ಲಿ ಈ ಕೇವಲಕುಂಭಕಸಿದ್ಧನೇ ಸಕಲಲೋಕಪ್ರಸಿದ್ಧನೆಂದು ಪೇಳ್ದಪಂ–

ಅಯಂ ಕೇವಲಕುಂಭಾಖ್ಯೋಯಸ್ಯಾವಶ್ಯಂ ವಶೋ ಭವೇತ್ ।
ಸದಾ ಭವತಿ ವಿಖ್ಯಾತಸ್ಸ ಏವ ಪ್ರಾಣಸಂಯಮೀ ॥ ॥೫೪॥

ಯಸ್ಯ–ಯಾವನಿಗೆ, ಕೇವಲಕುಂಭಾಖ್ಯಃ–ಕೇವಲಕುಂಭಕವೆಂಬ ಹೆಸರನುಳ್ಳಂಥ, ಅಯಂ–ಈ ಯೋಗವು, ಅವಶ್ಯಂ–ಅವಶ್ಯಕವಾಗಿ, ವಶಃ–ಅಧೀನವು, ಭವೇತ್–ಆಗುವುದೋ, ಸ ಏವ–ಆತನೇ, ಸದಾ–ಅನವರತವು, ವಿಖ್ಯಾತಃ–ಪ್ರಸಿದ್ಧನಾಗಿರ್ದಂಥ, ಪ್ರಾಣಸಂಯಮೀ–ಪ್ರಾಣಾಯಾಮವುಳ್ಳಂಥ ಯೋಗೀಶ್ವರನು, ಭವತಿ–ಆಗುವನು.

●

ಸೂ : ಈ ಪ್ರಕಾರದಿಂ ಪ್ರಾಣಾಯಾಮಾಭ್ಯಾಸಮಂ ಮಾಡಿದಾತಂಗೆ ಮಾಸಂಗಳ ನಿಯಮದಿಂ ಫಲಮಂ ಪೇಳ್ದಪಂ–

ಪ್ರಾಣಾಯಾಮವಿಧಾನಂ ಮಾಸತ್ರಯಮಪಿ ಸಮಾಚರೇನ್ನಿಯತಃ ।
ತನುಲಘುತಾ ದೀಪನತಾ ನಾಡೀಶುದ್ಧಿರ್ಧ್ವನಿಶ್ಚ ಭವೇತ್ ॥ ॥೫೫॥

ನಿಯತಃ–ನಿಯಮಗುಣಸಂಪನ್ನನಾದ ಯೋಗೀಶ್ವರನಂ, ಪ್ರಾಣಾಯಾಮವಿಧಾನಂ–ಪೂರ್ವೋಕ್ತವಾದ ಪ್ರಾಣಾಯಾಮವಿಧಿಯನ್ನು, ಮಾಸತ್ರಯಮಪಿ–ಮೂರು ತಿಂಗಳಾದರೂ, ಸಮಾಚರೇತ್–ಲೇಸಾಗಾಚರಿಸುವದು, ಆದರಿಂದ, ತನುಲಘುತಾ–ದೇಹಕ್ಕೆ ಲಘುತ್ವವು, ದೀಪನತಾ–ಉದರಾಗ್ನಿಪಟುತ್ವವು, ನಾಡೀಶುದ್ಧಿಃ–ಸಕಲನಾಡಿಗಳ ಶುದ್ಧತೆಯು, ಧ್ವನಿಶ್ಚ–ನಾದೋತ್ಪತ್ತಿಯೂ, ಭವೇತ್–ಆಗಬಹುದು.

●

ಸೂ : ಈ ಪ್ರಕಾರದಿಂ ಸಾಮಾನ್ಯಪ್ರಾಣಾಯಾಮಫಲವಂ ಪೇಳ್ದು, ಆ ಪ್ರಾಣಾಯಾಮದಿಂ ಮುಖ್ಯವಪ್ಪ ಕೇವಲಕುಂಭಕಾಭ್ಯಾಸಕ್ಕೆ ಅವಧಿಯ ಫಲವಂ ಪೇಳ್ದಪಂ–

ಗಗನೇ ಪವನೇ ಪ್ರಾಪ್ತೇ ತಕ್ಷಣಾದುನ್ಮನೀ ಭವೇತ್ ।

ಕೇವಲೇ ಕುಂಭಕೇ ಪ್ರಾಜ್ಞಸ್ತಾವದೇವ ಸಮಭ್ಯಸೇತ್ ॥ ॥೫೬॥

ಗಗನೇ–ಗಗನಸ್ಥಾನವೆನಿಸುವ ಸುಷುಮ್ನಸ್ಥಾನದಲ್ಲಿ, ಪವನೇ–ಪ್ರಾಣವಾಯುವು, ಪ್ರಾಪ್ತೇ–ಬಂಧತ್ರಯದಿಂದೈದಲಾಗಿ, ತಕ್ಷಣಾತ್–ಆ ಕ್ಷಣದತ್ತಣಿಂದೆ, ಉನ್ಮನೀ–ಉನ್ಮನೀ ಜ್ಯೋತಿಸ್ಸಿದ್ಧಿಯಂ, ಭವೇತ್–ಅಹುದು, ಕೇವಲವಾದ, ಕುಂಭಕೇ–ಕುಂಭಕದಲ್ಲಿ, ಪ್ರಾಜ್ಞಃ–ಬಲ್ಲಾತನು, ತಾವದೇವ–ಆ ಉನ್ಮನ್ಯವಸ್ಥಾಸಿದ್ಧಿಪರ್ಯಂತವೇ, ಸಮಭ್ಯಸೇತ್–ಕೇವಲಕುಂಭಕಾಭ್ಯಾಸಮಂ ಮಾಳ್ಪುದು.

●

ಸೂ : ಮುಮುಕ್ಷುವಾದ ಯೋಗೀಶ್ವರಂಗೆ ಮುಖ್ಯಮಪ್ಪುದರಿಂದೆ ಕೇವಲ ಕುಂಭಕಾಭ್ಯಾಸಸ್ವರೂಪಮಂ ವಿಸ್ತರದಿಂ ಪೇಳ್ದು, ಮರೆಯದಂತೆ ಮರಳಿ ಸೂತ್ರಾಭಿಪ್ರಾಯದಿಂ ಶ್ಲೋಕತ್ರಯದಿಂ ಕ್ರಮವಿಟ್ಟು ಪೇಳ್ದಪಂ–

ನತ್ವಾ ಗುರುಂ ಬ್ರಹ್ಮವಿದಾಂ ವರೇಣ್ಯಂ

ಜಿತ್ವಾಂತರಸ್ಥಂ ಷಡುಮಿತ್ರವರ್ಗಂ ।

ಸ್ಥಿತ್ವಾ ಸದೈಕಾಂತವಿಶುದ್ಧದೇಶೇ

ಧ್ಯಾತ್ವಾ ಶಿವಂ ಭ್ರೂಯುಗಮಧ್ಯಪದ್ಮೇ ॥ ॥೫೭॥

ಬ್ರಹ್ಮವಿದಾಂ–ಬ್ರಹ್ಮಸ್ವರೂಪ ಸಾಕ್ಷಾತ್ಕಾರವುಳ್ಳವರಿಗೆ, ವರೇಣ್ಯಂ–ಮುಖ್ಯವಾಗಿರ್ಪಂಥ, ಗುರುಂ–ಆಚಾರ್ಯನನ್ನು, ನತ್ವಾ–ನಮಿಸಿ, ಅಂತರಸ್ಥಂ–ಸೂಕ್ಷ್ಮದೇಹಮಧ್ಯಸ್ಥಿತವಾಗಿರ್ಪಂಥ, ಷಡುಮಿತ್ರವರ್ಗಂ–ಕಾಮಕ್ರೋಧಾದ್ಯರಿಷಡ್ವರ್ಗವನ್ನು, ಜಿತ್ವಾ–ಗೆದ್ದು, ಸದಾ–ಅನವರತವು, ಏಕಾಂತವಿಶುದ್ಧದೇಶೇ–ಸಂಚಾರವಿಲ್ಲದೆ ಮನೋರಮ್ಯವಾದ ಸ್ಥಲದಲ್ಲಿ, ಸ್ಥಿತ್ವಾ–ಇದ್ದು, ಭ್ರೂಯುಗಮಧ್ಯಪದ್ಮೇ–ಪಶ್ಚಿಮಹೃದಯಪದ್ಮದಲ್ಲಿ, ಶಿವಂ–ನಿರ್ಮಲವಾದ ಶಿವನನ್ನು ನಿತ್ಯವಾದ ಶಿವನನ್ನು, ಧ್ಯಾತ್ವಾ–ಚಿಂತಿಸಿ.

ಶ್ರುತ್ವಾ ತದಾನಾಹತದಿವ್ಯನಾದಂ

ಧೃತ್ವಾ ವಿಭಿನ್ನಾಮಲಬಿಂದುರತ್ನಂ ।

ಪೀತ್ವಾ ಸುಧಾಂ ಚಂದ್ರಮಸಃ ಪತಂತೀಂ

ಭಿತ್ವಾ ಚ ಸಂಕಲ್ಪವಿಕಲ್ಪಜಾಲಂ ॥ ॥೫೮॥

ತದಾ–ಆ ಶಿವಧ್ಯಾನಾನಂತರಕಾಲದಲ್ಲಿ, ಅನಾಹತದಿವ್ಯನಾದಂ–ಅಜಪೆಯಳಿವಿನಿಂ ತಾನೇ ಘೋಷಿಸುವ ದಿವ್ಯನಾದವನ್ನು, ಶ್ರುತ್ವಾ–ಕೇಳಿ, ವಿಭಿನ್ನಾಮಲಬಿಂದುರತ್ನಂ–ಶ್ವೇತರಕ್ತಾದಿರೂಪದಿಂದೆ ವಿಚಿತ್ರವಾದ ನಿರ್ಮಲಕರವಾದ ಬಿಂದುವೆಂಬ ರತ್ನವನ್ನು, ಧೃತ್ವಾ–ಧರಿಸಿ, ಚಂದ್ರಮಸಃ–ಚಂದ್ರನದೆಶೆಯಿಂದ ಪತಂತೀಂ–ಸ್ರವಿಸುತ್ತಿರ್ಪಂಥ, ಸುಧಾಂ–ಅಮೃತವನ್ನು, ಪೀತ್ವಾ–ಪಾನಮಂ ಮಾಡಿ, ಸಂಕಲ್ಪವಿಕಲ್ಪಜಾಲಂ ಚ–"ಅಭಾವೇ ಭಾವಮಾಸಾದ್ಯ ಹ್ಯಸ್ಥಾನೇ ಸ್ಥಾನಮಾದಿಶೇತ್" ಎಂಬಂತೆ ಭಾವದಿಂ ಸ್ವರೂಪಿಸುವ ಸಂಕಲ್ಪಸಮೂಹವನ್ನು ಆ ಸ್ವರೂಪವನರಿವ ಸವಿಕಲ್ಪಕಜ್ಞಾನವನ್ನು, ಭಿತ್ವಾ–ಭೇದಿಸಿ.

ಕೃತ್ವಾ ತ್ರಿಕೂಟೇ ದೃಢಬಂಧನಂ ತಥಾ
ಗತ್ವಾ ತ್ರಿಕೋಣೇ ಮನಸಾऽನಿಲೈಸ್ಸಹ ।
ಭಿತ್ವಾ ತಥೈವೋಪರಿ ಸೂಕ್ಷ್ಮಕುಂಡಲೀಂ
ನೀತ್ವಾ ಸಖೇ ವಿಷ್ಣುಪದೇ ಸುಖೀ ಭವ ॥ ॥೫೯॥

ತ್ರಿಕೂಟೇ–ತ್ರಿಕೂಟಸ್ಥಾನದಲ್ಲಿ, ದೃಢಬಂಧನಂ–ದೃಢವಾದ ಬಂಧನವನ್ನು, ಕೃತ್ವಾ–ಮಾಡಿ, ತಥಾ–ಹಾಗೆಯೇ, ತ್ರಿಕೋಣೇ–ತ್ರಿಕೋಣಸ್ಥಾನದಲ್ಲಿ, ಮನಸಾ–ಮನಸ್ಸಿನಿಂದ, ಅನಿಲೈಸ್ಸಹ–ಪ್ರಾಣವಾಯುಗಳೊಡನೆ ಕೂಡಿ, ಗತ್ವಾ–ಎಯ್ದಿ, ತಥೈವ–ಹಾಗೆಯೇ, ಉಪರಿ–ನಾಸಿಕಾಗ್ರದಲ್ಲಿಯ, ಸೂಕ್ಷ್ಮಕುಂಡಲೀಂ–ಆ ನಾದಬ್ರಹ್ಮಾತ್ಮಕವಾದ ಕುಂಡಲಿಯನು, ಭಿತ್ವಾ–ಭೇದಿಸಿ, ವಿಷ್ಣುಪದೇ–ಸುಷುಮ್ನಸ್ಥಾನದಲ್ಲಿ, ಸಖೇ–ಎಲೈ ಸ್ನೇಹಿತನಾದ ಶಿಷ್ಯನೇ, ಸುಖೀ–ಆನಂದವುಳ್ಳಾತನು, ಭವ–ಆಗು.

●

ಸೂ : ಈ ಪ್ರಕಾರದಿಂದ ಪ್ರಾಣಾಯಾಮಜಲದಿಂದೀಶ್ವರಂಗೆ ಅಭಿಷೇಕಮಂ ಮಾಳ್ಪುದೆಂದು ಪೇಳುತ್ತ, ಬಾಹ್ಯಾಂತರಂಗಪೂಜಾವಿಧಿಯಂ ಮುಗಿಸುತ್ತಿರ್ದಪಂ –

ಇತ್ಥಂ ಶಿವಂ ವಿಷ್ಣು ಪದಸ್ವರೂಪಂ
ವಿಷ್ಣುಂ ಸದಾ ಭಾವಿತವಿಷ್ಣುಮೂರ್ತಿಂ ।
ವಿಷ್ಣೋಃ ಪರಂ ಕೇವಲಕುಂಭಶುದ್ಧ
ಪ್ರಾಣಾಂಬುನಾ ಸ್ನಾನವಿಧೌ ಭಜಸ್ವ ॥ ॥೬೦॥

ಇತ್ಥಂ–ಈ ಪೂರ್ವೋಕ್ತವಾದ ಪ್ರಕಾರದಿಂದೆ, ವಿಷ್ಣುಪದಸ್ವರೂಪಂ಼ ವಿಷ್ಣು–ವ್ಯಾಪಕವಾದ ನಾದಕ್ಕೆ, ಪದ–ಆಶ್ರಯವಾದ ಹಂಸವರ್ಣದ್ವಯನೇ, ಸ್ವರೂಪಂ–ಸ್ವರೂಪವಾಗುಳ್ಳಂಥ; ವಿಷ್ಣುಂ–ವ್ಯಾಪಕವಾದ ದಿವ್ಯನಾದದ ಸ್ವರೂಪವಾಗಿರ್ಪಂಥ, ಸದಾ–ಅನವರತವು, ಭಾವಿತವಿಷ್ಣುಮೂರ್ತಿಂ–ಭಾವಿಸಲ್ಪಟ್ಟ ನಿತ್ಯಾಧಿಷ್ಠಾನವಾದ ಕುಂಡಲಿನಿಯೇ ಸ್ವರೂಪವಾಗಿವುಳ್ಳಂಥ, ವಿಷ್ಣೋಃ–ಆ ಮೂಲಪ್ರಕೃತಿಯಾದ ಮಹಾಮಾಯೆಗೆ, ಪರಂ–ಉತ್ತರವಾಗಿರ್ಪಂಥ, ಶಿವಂ–ನಿತ್ಯನಿರ್ಮಲನಾದಂಥ ಶಿವನನ್ನು, ಸ್ನಾನವಿಧೌ –ಅಭಿಷೇಕವಿಧಿಯಲ್ಲಿ, ಕೇವಲ ಕುಂಭಶುದ್ಧಪ್ರಾಣಾಂಭುತಾ–ಕೇವಲಕುಂಭಕದಿಂ ನಿರ್ಮಲವಾದ ಪ್ರಾಣವೆಂಬ ಜಲದಿಂದ, ಭಜಸ್ವ–ಭಜಿಸುವಂಥವನಾಗು.

ಇತಿ ಶ್ರೀಮದ್ವೇದವೇದಾಂತಾಗಮಪುರಾಣಸ್ಮೃತಿಹಾಸಪ್ರತಿಪಾದಿತ
ಶ್ರೀ ವೀರಶೈವಮಾರ್ಗಸ್ಥಾಪನಾಚಾರ್ಯ ಶ್ರೀ ಬಸವಾರಾಧ್ಯವಿರಚಿತಾಯಾಂ
ಕರ್ನಾಟಕಟೀಕಾ ವಿರಾಜಿತಾಯಾಂ ಶಿವಯೋಗಪ್ರದೀಪಿಕಾಯಾಂ

ದ್ವಿತೀಯಪಟಲಃ ಸಂಪೂರ್ಣಃ

❖❖

ತೃತೀಯ ಪಟಲಃ

ಸೂ : ಈ ಪ್ರಕಾರದಿಂ ಯಮಾದಿಪ್ರಾಣಾಯಾಮಾಂತ್ಯವಾದ ಬಾಹ್ಯಚತುರಂಗವಿಧಾನಮಂ ಪೇಳ್ದು, ಅನಂತರದಲ್ಲಿ ಪ್ರತ್ಯಾಹಾರಾದಿಯಾದಂತರಂಗ ಚತುರಂಗವಿಧಾನಮಂ ಪೇಳ್ವೆನೆಂದು ಪ್ರತಿಜ್ಞೆಯಂ ಮಾಡಿದಂ–

ಇತಿ ಯಮಾದಿಚತುರಂಗವಿಧಾನಂ ಬಾಹ್ಯಮುಕ್ತಮಭಿರಂಜಿತವಾಕ್ಯೈಃ ।

ಅಥ ಶಿವಾರ್ಪಿತಮನಾಶ್ಶೃಣು ವಕ್ಷೇ ಚಾಂತರಂಗ ಚತುರಂಗವಿಧಾನಂ ॥೧॥

ಇತಿ–ಈ ಪ್ರಕಾರದಿಂದ, ಬಾಹ್ಯಂ–ಬಹಿರಂಗವಾಗಿರ್ಪಂಥ, ಯಮಾದಿಚತುರಂಗವಿಧಾನಂ–ಯಮಾದಿಪ್ರಾಣಾಯಾಮಾಂತ್ಯವಾದ ಚತುರಂಗವಿಧಾನವು, ಅಭಿರಂಜಿತವಾಕ್ಯೈಃ–ಯುಕ್ತಿಪೂರ್ವಕದಿಂದೊಪ್ಪುವ ವಾಕ್ಯಂಗಳಿಂದ, ಉಕ್ತಂ–ಹೇಳಲ್ಪಟ್ಟಿತು. ಅಥ–ಅನಂತರದಲ್ಲಿ, ಅಂತರಂಗಚತುರಂಗವಿಧಾನಂ–ಮಾನಸಗತವ್ಯಾಪಾರದಂತರಂಗವಾದ ಪ್ರತ್ಯಾಹಾರಾದಿಚತುರಂಗ ವಿಧಾನವನ್ನು, ವಕ್ಷೇ–ಪೇಳ್ವೆನು, ಶಿವಾರ್ಪಿತಮನಾಃ–ಶಿವನಲ್ಲಿರಿಸಲ್ಪಟ್ಟ ಮನವುಳ್ಳಾತನಾಗಿ, ಶೃಣು–ಕೇಳು.

●

ಸೂ : ಶಿವಯೋಗೀಶ್ವರನ ತ್ರಿಕೂಟಸ್ಥಾನದ ಶಿವಲಿಂಗಕ್ಕೆ ಪ್ರಾಣಾಯಾಮ ಜಲದಿಂದಭಿಷೇಕವ ಮಾಡಿದನಂತರದಲ್ಲಿ ಪ್ರತ್ಯಾಹಾರದಿಂದೊಗೆದ ಸದ್ವಾಸನೆಯೆಂಬ ಗಂಧಾನುಲೇಪನಮಂ ಮಾಳ್ಪುದೆಂದು ಪೇಳ್ದಪಂ–

ಸನ್ಮನೋವಿಹಿತಶಾಣತಲೇಽಸ್ಮಿನ್ ಶ್ರೋತ್ರಮುಖ್ಯವಿಜಿತೇಂದ್ರಿಯವರ್ಗಾತ್ ।

ಜಾತಘೃಷ್ಟವಿಷಯಾಮಲಗಂಧೈರ್ಲೇಪನಂ ಕುರು ಸದಾ ಶಿವಲಿಂಗೇ ॥ ॥೨॥

ಅಸ್ಮಿನ್–ಈ ಕೇವಲಕುಂಭಕದಿಂದೆ ತ್ರಿಕೂಟಸ್ಥಾನಮನ್ಯೈದಿದಂಥ, ಸನ್ಮನೋವಿಹಿತಶಾಣತಲೇ–ಉನ್ಮನ್ಯವಸ್ಥೆಯಿಂ ದೃಢವಾದ ಲೇಸೆನಿಸುವ ಮನಸ್ಸೆಂಬ ವಿಧಿಸಲ್ಪಟ್ಟ ಸಾಣೆಕಲ್ಲಿನಲ್ಲಿ, ಶ್ರೋತ್ರಮುಖ್ಯವಿಜಿತೇಂದ್ರಿಯವರ್ಗಾತ್–ಶ್ರೋತ್ರ ಮುಂತಾದ ಗೆಲ್ಲಲ್ಪಟ್ಟ ಇಂದ್ರಿಯಸಮೂಹದತ್ತಣಿಂ, ಜಾತಘೃಷ್ಟವಿಷಯಾ ಮಲಗಂಧೈಃ; ಜಾತ–ಹುಟ್ಟಿದ, ಘೃಷ್ಟವಿಷಯ–ನಿವೃತ್ತಿಮುಖದ ವೈರಾಗ್ಯದಿಂದೊರೆಸಿ ಕಳೆದ ವಿಷಯಂಗಳ ವಾಸನೆಯಿಲ್ಲದಿಹುದರಿಂದೆ, ಅಮಲ–ನಿರ್ಮಲವಾದ, ಗಂಧೈಃ–ಸದ್ವಾಸನೆಗಳೆಂಬ

ಗಂಧಂಗಳಿಂದ; ಸದಾಶಿವಲಿಂಗೇ–ಸಕಲನಿಷ್ಕಲಾತ್ಮಕವಾದ ಶಿವಲಿಂಗದಲ್ಲಿ, ಲೇಪನಂ–ಗಂಧಾನುಲೇಪನವನ್ನು, ಕುರು–ಮಾಡು.

●

ಸೂ : ಇಂದ್ರಿಯದ್ವಾರದಿಂ ಪ್ರವೃತ್ತಿಮುಖವಾದ ಮನದ ವಿಶಾಲವ್ಯಾಪಾರವೇ ಸಂಸಾರಬೀಜಮಪ್ಪುದರಿಂದೆ, ನಿವೃತ್ತಿಮುಖದಿಂ ಜ್ಞಾನವೈರಾಗ್ಯ ಮುದ್ರಾ ಬಂಧಂಗಳಿಂದೆ ಇಂದ್ರಿಯಂಗಳ ವಿಷಯವಿಮುಕ್ತತೆಯಿಂ ಮನದೊಡನೆ ಸಂಕೋಚಿಸುವ ಪ್ರತ್ಯಾಹಾರಯೋಗಮುಳ್ಳಾತನೆ ವಿಶಿಷ್ಟನೆಂಬುದನ್ನು ಲೌಕಿಕ ದೃಷ್ಟಾಂತ ಪೂರ್ವಕದಿಂ ಪೇಳ್ದಪಂ–

ಸಂಕೋಚಮಾಚರತಿ ತತ್ಕಮಠೋಂಗಕಾನಾಮಂಗೇ ಯಥಾ ಭುವಿ ತಥಾ ನಿಖಿಲೇಂದ್ರಿಯಾಣಿ।

ಪ್ರತ್ಯಾಹರತ್ಯನಿಶಮಾತ್ಮನಿ ಸಂಯತಾತ್ಮ ಮನ್ಯಾಮಹೇ ಪರಮತತ್ತ್ವವಿದಂ ತಮೇವ ॥೩॥

ಭುವಿ–ಭೂಲೋಕದಲ್ಲಿ, ತತ್ಕಮಠಃ–ಆ ಪ್ರಸಿದ್ಧವಾದ ಕೂರ್ಮನು, ಅಂಗಕಾನಾಂ–ತನ್ನ ಶಿರಃಕಂಠಪಾದಾದ್ಯವಯವಂಗಳ, ಸಂಕೋಚನಂ–ಅಡಗಿಸುವುದನ್ನು, ಅಂಗೇ–ತನ್ನ ಶರೀರದಲ್ಲಿ, ಯಥಾ –ಹೇಗೆ ಆಚರತಿ–ಅಚರಿಸುತ್ತಿದ್ದಿತೋ, ತಥಾ–ಹಾಂಗೆ, ಸಂಯತಾತ್ಮಾ–ನಿಯತಾತ್ಮನಾದ ಯೋಗೀಶ್ವರನು. ನಿಖಿಲೇಂದ್ರಿಂಯಾಣಿ–ಸಕಲೇಂದ್ರಿಯುಂಗಳನ್ನು, ಅನಿಶಂ–ಆವಾಗಲು, ಆತ್ಮನಿ–ತನ್ನ ಹೃದಯಕಮಲಕರ್ಣಿಕಾಮಧ್ಯದಲ್ಲಿ, ಪ್ರತ್ಯಾಹರತಿ–ಸಂಕೋಚಿಸುತ್ತಿದ್ದಾನೋ, ತಂ ಏವ–ಆ ಯೋಗೀಶ್ವರನನ್ನೇ, ಪರಮತತ್ತ್ವವಿದಂ–ವಿಶಿಷ್ಟತತ್ತ್ವ ಜ್ಞಾನಿಯನ್ನಾಗಿ, ಮನ್ಯಾಮಹೇ–ತಿಳಿಯುತ್ತಿದ್ದೇವು.

ತಾತ್ಪರ್ಯ : ಮತ್ತೆ ಕೆಲವು ಶಾಸ್ತ್ರಾಂತರಂಗಗಳಲ್ಲಿ ಪೇಳ್ದ ಪ್ರತ್ಯಾಹಾರವೆಂತೆಂದೊಡೆ–ಬಾಹ್ಯಾರ್ಥಂಗಳಲ್ಲೆರಗುವ ಚಿತ್ತವನ್ನು ಹೃದಯಾಕಾಶಾದಲ್ಲಿ ನಿಲಿಸುವುದು ಪ್ರತ್ಯಾಹಾರ, ಹೃದಯಸ್ಥಾನದಿಂ ಚಲಿಸುವ ಚಿತ್ತವನ್ನು ಮರಳಿ ಹೃದಯಸ್ಥಾನದಲ್ಲಿ ನಿಲ್ಲಿಸುವುದು ಪ್ರತ್ಯಾಹಾರ, ಅನಾತ್ಮರೂಪವಾದ ದೇಹೇಂದ್ರಿಯಾದಿಕದಲ್ಲಿಯ ಆತ್ಮಾಭಿಮಾನವಂ ಬಿಡಿಸಿ, ಸ್ವಸ್ವರೂಪಸಾಕ್ಷಾತ್ಕಾರಮಂ ಮಾಳ್ಪುದು ಪ್ರತ್ಯಾಹಾರ ಎಂದು ಪೇಳ್ವ ಪ್ರತ್ಯಾಹಾರಂಗಳೀ ಪ್ರತ್ಯಾಹಾರದೊಳು ಅಂತರ್ಭಾವಮೆಂದು ತಿಳಿವುದು.

●

ಸೂ : ಈ ಪ್ರಕಾರವಾದ ಪ್ರತ್ಯಾಹಾರದಿಂದೊದಗಿದ ಸದ್ವಾಸನಾಗಂಧ ಲೇಪನಾನಂತರದಲ್ಲಿ ಲಿಂಗಮಂ ಧ್ಯಾನಕುಸುಮಂಗಳಿಂ ಪೂಜಿಪುದೆಂದು ಪೇಳ್ದಪಂ–

ಆಧಾರಮುಖ್ಯನಳಿನೈರ್ವಿವಿಧೈಸ್ಸುವರ್ಣೈ

ಸ್ತನ್ಮಧ್ಯಭಾಸುರತರೈಸ್ಸುಮನೋಭಿರಂಗ ।

ನಾನಾವಿಧೈಸ್ಸಗುಣನಿರ್ಗುಣಭಾವಪುಷ್ಪೈ

ಶ್ರೀಲಿಂಗಮೂರ್ತಿಮನಿಶಂ ಹೃದಿ ಪೂಜಯಸ್ವ ॥ ॥೪॥

ಅಂಗ–ಎಲೈ ಶಿಷ್ಯನೇ, ವಿವಿಧೈಃ–ಚತುರ್ದಳಾದಿಭೇದದಿಂ ಹಲವು ಪ್ರಕಾರವಾಗಿರ್ದಂಥ, ಆಧಾರಮುಖ್ಯನಳಿನೈಃ–ಆಧಾರಸ್ಥಾನದ ಕಮಲ ಮುಂತಾದ ಕಮಲಂಗಳಿಂದಲು, ತನ್ಮಧ್ಯಭಾಸುರತರೈಃ –ಆ ಕಮಲಂಗಳ ಮಧ್ಯಂಗಳಲ್ಲಿ ಅತಿ ಪ್ರಕಾಶರೂಪವಾಗಿರ್ಪಂಥ, ಸುವರ್ಣೈಃ–ಲೇಸಾದ ನಕಾರ ಮಕಾರ ಶಿಕಾರ ವಾಕಾರ ಯಕಾರ ಉಕಾರ ಬಿಂದುಗಳೆಂಬ ವರ್ಣಂಗಳಾಗಿರ್ಪಂಥ, ಸುಮನೋಭಿಃ

–ಪುಷ್ಪಂಗಳಿಂದಲೂ, ನಾನಾವಿಧೈಃ–ನಾನಾಪ್ರಕಾರವಾಗಿರ್ಪಂಥ, ಸಗುಣನಿರ್ಗುಣಭಾವಪುಷ್ಪೈಃ–ಸಾಲಂಬನಿರಾಲಂಬವಿಷಯಗಳಾದ ಭಾವ ಕುಸುಮಂಗಳಿಂದಲೂ, ಶ್ರೀಲಿಂಗಮೂರ್ತಿಂ–ಒಪ್ಪುವ ಲಿಂಗಮೂರ್ತಿಯನು, ಹೃದಿ–ಹೃದಿಯಕಮಲದಲ್ಲಿ, ಅನಿಶಂ–ಅನವರತವು, ಅನವರತವು, ಪೂಜಯಸ್ವ –ಪೂಜಿಸು.

ಆಧಾರೇ ಲಿಂಗನಭೌ ಹೃದಯಸರಸಿಜೇ ತಾಲುಮೂಲೇ ಲಲಾಟೇ

ದ್ವೇ ಪತ್ರೇ ಷೊಡಶಾರೇ ದ್ವಿದಶದಳೇ ದ್ವಾದಶಾರ್ಧೇ ಚತುಷ್ಕೇ ।

ವಾಸಾಂತೇ ಬಾದಿಲಾಂತೇ ಢಪಕಠಸಹಿತೇ ಕಂಠದೇಶೇ ಸ್ವರಾಣಾಂ

ಹಂ ಕ್ಷಂ ತತ್ತ್ವಾರ್ಥಯುಕ್ತಂ ಸಕಲದಲಿಗತಂ ವರ್ಣರೂಪಂ ನಮಾಮಿ ॥

ಎಂಬ ಕಮಲಂಗಳಿಂದಲೂ ಪೂಜಿಪುದೆಂಬರ್ಥ.

●

ಸೂ : ಯೋಗೀಶ್ವರರ ಧ್ಯಾನಯೋಗಕ್ಕೆ ಸ್ಥಾನಂಗಳಾದ ಆ ನವವಿಧಾಧಾರಂಗಳಂ ಪೇಳ್ದಪಂ–

ಆಧಾರಲಿಂಗಮಣಿಪೂರಕಹೃದ್ವಿಶುದ್ಧಿ

ಭ್ರೂಮಧ್ಯಮಸ್ತಕನಭೋಬಿಲಸಂಜ್ಞಕಾನಿ ।

ಏತಾನಿ ತಾನಿ ಯಮಿನಾಂ ಸುಖದಾಯಕಾನಿ

ಧ್ಯಾನಸ್ಥಲಾನಿ ಸುವಿಚಿತ್ರತರಾಣಿ ನೂನಂ ॥೫॥

ಆಧಾರ–ಆಧಾರಸ್ಥಾನ, ಲಿಂಗ–ಸ್ವಾಧಿಷ್ಠಾನಸ್ಥಾನ, ಮಣಿಪೂರಕ–ನಾಭಿಸ್ಥಾನ, ಹೃತ್–ಹೃದಯಸ್ಥಾನ, ವಿಶುದ್ಧಿ–ಕಂಠಸ್ಥಾನ, ಭ್ರೂಮಧ್ಯ–ಕೂರ್ಚಸ್ಥಾನ ಮಸ್ತಕ–ಶೀರ್ಷಸ್ಥಾನ, ನಭಃ–ಬ್ರಹ್ಮರಂಧ್ರಸ್ಥಾನ, ಬಿಲಂ –ಚಿದಾಕಾಶಸ್ಥಾನವೆಂಬ, ಸಂಜ್ಞಕಾನಿ–ಹೆಸರುಳ್ಳಂಥ, ಏತಾನಿ–ಈ ಪ್ರತ್ಯಕ್ಷರೂಪಂಗಳಾಗಿರ್ದಂಥ, ತಾನಿ –ಲೋಕಪ್ರಸಿದ್ಧಂಗಳಾಗಿರ್ದಂಥ, ಸುವಿಚಿತ್ರತರಾಣಿ–ಅತ್ಯಾಶ್ಚರ್ಯರೂಪಂಗಳಾಗಿರ್ದಂಥ, ಧ್ಯಾನಸ್ಥಲಾನಿ –ಧ್ಯಾನಸ್ಥಲಂಗಳು, ಯಮಿನಾಂ–ಯತೀಶ್ವರರ್ಗೆ, ಸುಖದಾಯಕಾನಿ–ಆನಂದಮಂ ಕೊಡುವಂತಹವು, ನೂನಂ–ಸತ್ಯವು.

●

ಸೂ : ಈ ಸ್ಥಲಂಗಳಲ್ಲಿ ಧ್ಯಾನಮಂ ಮಾಳ್ಪುದಕ್ಕೆ ಧ್ಯಾನಮುದ್ರೆಯಂ ಪೇಳ್ದಪಂ–

ಅಂತಶ್ಚೇತೋ ನಿಯಮಿತಬಹಿಶ್ಚಕ್ಷುರಿಷ್ಟಾಸನಂ ಯತ್

ಕಾಯಾವಕ್ರತ್ವಮನಿಶಮಹೋ ಧ್ಯಾನಮದ್ರೇಯಮಸ್ಯಾಂ ।

ಸ್ವಾತ್ಮಾಂತಸ್ಥಂ ಧ್ರುವಮವಿಚಲಂ ಶಾಂತಮುದ್ವೈತರೂಪಂ

ಶೈವಂ ಧ್ಯಾನಂ ಕುರು ನನು ಸಖೇ ಹೃದ್ಯಮುಕ್ತಸ್ತ್ವಮೇವ ॥ ॥೬॥

ಅಂತಶ್ಚೇತಃ–ಲಕ್ಷ್ಯದ ಅಂತರ್ಮುಖವಾದ ಚಿತ್ತವು, ನಿಯಮಿತಬಹಿಚಕ್ಷುಃ–ನಿಯಮದಿಂದ ಸ್ಥಿರಮಾಡಲ್ಪಟ್ಟ ಬಾಹ್ಯದೃಷ್ಟಿಯು, ಇಷ್ಟಾಸನಂ–ಪದ್ಮಾಸನಾದಿಕದೊಳಗೆ ಇಷ್ಟವಾದ ಆಸನವು, ಯತ್

–ಯಾವ, ಕಾಯಾವಕ್ರತ್ವಂ–ಶರೀರದ ಋಜುತ್ವವು. ಅನಿಶಂ–ಅನವತರವು, ಅಹೋ–ಆಶ್ಚರ್ಯಮಾದಂಥ ಇಯಂ–ಇದು, ಧ್ಯಾನಮುದ್ರಾ–ಧ್ಯಾನಮುದ್ರೆಯು, ನನು ಸಖೇ–ಎಲೈ ಸ್ನೇಹಿತನೇ, ಅಸ್ಯಾಂ–ಈ ಧ್ಯಾನಮುದ್ರೆಯಲ್ಲಿ, ಸ್ವಾತ್ಮಾಂತಸ್ಥಂ–ತನ್ನಹೃತ್ಕಮಲಯವಾಸಿಯಾಗಿರ್ಪಂಥ, ಧ್ರುವಂ–ನಿತ್ಯಮಾಗಿರ್ಪಂಥ, ಅವಿಚಲಂ–ಪೂರ್ಣಮಪ್ಪುದರಿಂ ಚಂಚಲವಲ್ಲದಿರ್ದಂಥ, ಶಾಂತಂ–ನಿಷ್ಕಲಮಪ್ಪುದರಿಂ ಶಾಂತ ಸಂಜ್ಞೆಯುಳ್ಳಂಥ ಅದ್ವೈತರೂಪಂ–ಏಕಾತ್ಮವಾದಿಗಳ್ ಪೇಳ್ವಂತೆ ತಾನೇ ಜೀವಪರಮಾದಿ ದ್ವೈತರೂಪಮಂ ತಾಳದೆ ಇರ್ಪಂಥ, ಶೈವಂ–ಶಿವಸಂಬಂಧವಾದಂಥ ಧ್ಯಾನಂ–ಧ್ಯಾನವನ್ನು, ಕುರು–ಮಾಡು, ಅದ್ಯೈವ –ಈಗಲೇ, ತ್ವಂ–ನೀನು, ಮುಕ್ತೋಹಿ–ಮುಕ್ತನಾಗು.

●

ಸೂ : ಈ ಧ್ಯಾನಮುದ್ರಾಪೂರ್ವಕದಿಂ ಧ್ಯಾನಿಸುವ ಧ್ಯಾನಸ್ಥಳಂಗಳಲ್ಲಿ ಯೋಗೀಶ್ವರಂ ನವಚಕ್ರಮಂ ಪೇಳ್ವರೆಂದು ಪೇಳ್ದಪಂ–

ಧ್ಯಾನಸ್ಥಲೇಷು ಸರ್ವೇಷು ನವಚಕ್ರಾಣಿ ಯೋಗಿಭಿಃ ।
ಶ್ರೇಷ್ಠಾನಿ ತಾನಿ ಕಥ್ಯಂತೇ ವಕ್ಷ್ಯಾಮಶ್ಶೃಣು ತೇ ವಯಂ ॥ ॥೭॥

ಸರ್ವೇಷು–ಸಮಸ್ತವಾಗಿರ್ಪಂಥ, ಧ್ಯಾನಸ್ಥಲೇಷು–ಆಧಾರಾದಿ ಧ್ಯಾನಸ್ಥಲಂಗಳಲ್ಲಿ, ಯೋಗಿಭಿಃ –ಯೋಗೀಶ್ವರರಿಂದೆ, ಶ್ರೇಷ್ಠಾನಿ–ವಿಶಿಷ್ಟಂಗಳಾಗಿರ್ಪಂಥ, ನವಚಕ್ರಾಣಿ–ನವಚಕ್ರಂಗಳು, ಕಥ್ಯಂತೇ–ಪೇಳಲ್ಪಡುತ್ತಿಹವು. ತಾನಿ–ಆ ನವಚಕ್ರಗಳನ್ನು, ತೇ–ನಿನಗೆ, ವಯಂ–ನಾವು, ವಕ್ಷ್ಯಾಮಃ–ಪೇಳ್ವೆವು, ಶೃಣು–ಕೇಳು.

●

ಸೂ : ಈ ನವಚಕ್ರಂಗಳೊಳ್ ಸಕಲಾಧಾರವಪ್ಪುದರಿಂ ಮೂಲಾಧಾರ ಸಂಜ್ಞೆಯುಳ್ಳ ಆಧಾರದ ಸ್ಥಾನದ ಚಕ್ರಮಂ ಪೇಳ್ದಪಂ –

ಮೂಲಾಧಾರೇ ತ್ರಿಧಾವರ್ತಂ ಬ್ರಹ್ಮಚಕ್ರಂ ಭಗೋಪಮಂ ।
ತತ್ರ ಹೇಮನಿಭಾಂ ಧ್ಯಾಯೇದಧಶಕ್ತಿಮಭೀಷ್ಟಾದಾಂ ॥ ॥೮॥

ಮೂಲಾಧಾರೇ–ಮೂಲಾಧಾರಸ್ಥಾನದಲ್ಲಿ, ತ್ರಿಧಾವರ್ತಂ–ಮೂರು ಬಳಸನುಳ್ಳಂಥ, ಭಗೋಪಮಂ–ತ್ರಿಕೋಣಾಕಾರವಾಗಿರ್ಪಂಥ, ಬ್ರಹ್ಮಚಕ್ರಂ–ಬ್ರಹ್ಮಚಕ್ರವಿರ್ಪುದು, ತತ್ರ–ಆ ಬ್ರಹ್ಮಚಕ್ರಮಧ್ಯದಲ್ಲಿ, ಹೇಮನಿಭಾಂ–ಸುವರ್ಣಕಾಂತಿಗೆ ಸಮಾನವಾಗಿರ್ಪಂಥ, ಅಭೀಷ್ಟದಾಂ–ಇಷ್ಟಾರ್ಥಮಂ ಕೊಡುವಂಥ, ಅಧಶ್ಯಕ್ತಿಂ–ಆಧಾರಶಕ್ತಿಯನ್ನು, ಧ್ಯಾಯೇತ್ ಧ್ಯಾನಿಪುದು.

ದ್ವ್ಯಂಗುಲಾದೂರ್ಧ್ವಕಂ ಪಾಯೋಶ್ಶೇಫಸ್ಯ ದ್ವ್ಯಂಗುಲಾದಧಃ ।
ಸ್ಥಾನಮಾಧಾರಚಕ್ರಂ ಸ್ಯಾತ್ಕೀರ್ತಿತಂ ಶಿವಶಾಸನೇ ॥

ಎಂದುದಾಗಿ,

●

ಸೂ : ಲಿಂಗಸ್ಥಾನದಲ್ಲಿಯ ಸ್ವಾಧಿಷ್ಠಾನಚಕ್ರಮಂ ಪೇಳ್ದಪಂ–

ಸ್ವಾಧಿಷ್ಠಾನಂ ತತಶ್ಚಕ್ರಂ ತತ್ರ ಚಾತುರ್ದಳಾಂಬುಜಂ ।

ತದೇವೋಡ್ಡಿಯಣಂ ಧ್ಯಾಯೇತ್ಪಶ್ಚಿಮಾಭಿಮುಖಂ ಶಿವಂ ॥೯॥

ತತಃ–ಅನಂತರದ ಲಿಂಗಸ್ಥಾನದಲ್ಲಿ, ಸ್ವಾಧಿಷ್ಠಾನಂ–ಆತ್ಮಂಗಾಶ್ರಯವಹತನದಿಂ ಸ್ವಾಧಿಷ್ಠಾನ ಸಂಜ್ಞೆಯುಳ್ಳ, ಚಕ್ರಂ–ಚಕ್ರವು, ತತ್ರ–ಆ ಚಕ್ರದಲ್ಲಿ, ಚಾತುರ್ದಳಾಂಬುಜಂ–ನಾಲ್ಕೆಸಳಕಮಲವು, ತದೇವ–ಆ ಸ್ವಾಧಿಷ್ಠಾನಚಕ್ರವೇ, ಉಡ್ಡೀಯಣಂ–ಉಡ್ಯಾಣಪೀಠವು.

ಉಡ್ಯಾಣಂ ಕುರುತೇ ಯಸ್ಮಾದವಿಶ್ರಾಂತಂ ಮಹಾಖಗಃ ।

ಉಡ್ಯಾಣಂ ಚ ತದೇವಸ್ಯಾದಥಬಂಧೋ ವಿಧೀಯತೇ ॥

ಎಂದುದಾಗಿ, ಪ್ರಣವರೂಪಿನಿಂ ಪರಮಹಂಸಾತ್ಮಕನಾದ ಶಿವನು, ಪಶ್ಚಿಮದ್ವಾರದಿಂದರ್ಧ್ವಕ್ಕೈದುವ ಕಾರಣವೆಂಬುದರ್ಥ, ತತ್ರ –ಆ ಪೀಠದಲ್ಲಿ, ಪಶ್ಚಿಮಾಭಿಮುಖಂ–ಪಶ್ಚಿಮಾದ್ವಾರದತ್ತಭಿಮುಖನಾಗಿರ್ಪಂಥ, ಶಿವಂ–ಸಕಲವರ್ಣಾಧಾರದಿಂ ಲಿಂಗರೂಪನಾದ ಶಿವನನ್ನು, ಧ್ಯಾಯೇತ್–ಧ್ಯಾನಿಪುದಂ.

●

ಸೂ : ಅನಂತರದಲ್ಲಿ ವರ್ಣಗಳೆಂಬ ಮಣಿಗಳ ಕಾಂತಿಪ್ರವಾಹಕ್ಕೂ ರತ್ನಶಾಂತಿಯ ಪ್ರವಾಹಕ್ಕೂ ಕಾರಣವಪ್ಪುದರಿಂ ಮಣಿಪೂರಕಸಂಜ್ಞೆಯುಳ್ಳ ನಾಭಿಸ್ಥಾನದ ಚಕ್ರಮಂ ಪೇಳ್ದಪಂ–

ಪಂಚಾವರ್ತಂ ನಾಭಿಚಕ್ರಂ ಸರ್ಪಾಕಾರಾಂ ತಟನ್ನಿಭಾಂ ।

ತತ್ರ ಕುಂಡಲಿನೀಶಕ್ತಿಂ ಸರ್ವಸಿದ್ಧಿಪ್ರದಾಂ ಸ್ಮರೇತ್ ॥ ॥೧೦॥

ನಾಭಿಚಕ್ರಂ–ನಾಭಿಸ್ಥಾನದ ಮಣಿಪೂರಕಚಕ್ರವು, ಪಂಚಾವರ್ತಂ–ಐದು ವಲಯವುಳ್ಳಂಥಾದ್ದು, ತತ್ವ–ಆ ಚಕ್ರದಲ್ಲಿ, ಸರ್ವಾಕಾರಾಂ–ಸುಪ್ತಸರ್ಪನಾಕಾರವುಳ್ಳಂಥ, ತಟನ್ನಿಭಾಂ–ಮಿಂಚಿಗೆ ಸಮಾನವಾದ ಕಾಂತಿಯುಳ್ಳಂಥ, ಸರ್ವಸಿದ್ಧಿಪ್ರದಾಂ–ಸಕಲಸಿದ್ಧಿಗಳಂ ಕೊಡುವಂಥ, ಕುಂಡಲಿನೀಶಕ್ತಿಂ–ಸರ್ಪನಾಕಾರಮಪ್ಪುದರಿಂ ಕುಂಡಲಿನಿಯೆಂಬ ಹೆಸರುಳ್ಳ ಶಕ್ತಿಯನ್ನು, ಸ್ಮರೇತ್–ಧ್ಯಾನಿಪುದು.

●

ಸೂ : ಅನಂತರದಲ್ಲಿ ಅನಾಹತನಾದಕ್ಕೆ ಕಾರಣವಹುದರಿಂದನಾಹತವೆನಿಸುವ ಹೃದಯಸ್ಥಾನದ ಚಕ್ರಮಂ ಪೇಳ್ದಪಂ–

ಅಧೋಮುಖಾಷ್ಟಪತ್ರಾಬ್ಜಯುಕ್ತಂ ಹೃಚ್ಚಕ್ರಮಿಷ್ಟದಂ ।

ತನ್ಮಧ್ಯಕರ್ಣಿಕಾಂ ಜ್ಯೋತಿರ್ಲಿಂಗಾಕಾರಮಿಮಾಂ ಸ್ಮರೇತ್ ॥ ॥೧೧॥

ಹೃಚ್ಚಕ್ರಂ–ಹೃದಯಚಕ್ರವು, ಅಧೋಮುಖಾಷ್ಟಪತ್ರಾಬ್ಜಯುಕ್ತಂ–ಕದಳೀ ಕುಸುಮದಂತೆ ಅಧೋಮುಖವಾದ ಎಂಟೆಸಳಕಮಲದಿಂದ ಕೂಡಲ್ಪಟ್ಟಂಥಾದ್ದು (ವಿಕಾಸವಾದ ಬಾಹ್ಯದಳಗಳೆಂಟು, ತನ್ಮಧ್ಯದಲ್ಲಿ ಗೋಪ್ಯವಾದ ದಳಗಳ್ನಾಲ್ಕೆಂಬುದರ್ಥಂ) ಇಷ್ಟದಂ–ಇಷ್ಟಾರ್ಥಮಂ ಕೊಡುವಂಥಾದ್ದು, ಇಮಾಂ–ಈ ಪ್ರತ್ಯಕ್ಷರೂಪವಾಗಿರ್ದಂಥ, ತನ್ಮಧ್ಯಕರ್ಣಿಕಾಂ–ಆ ಕಮಲಮಧ್ಯದ ಕರ್ಣಿಕೆಯನ್ನು, ಜೋತಿರ್ಲಿಂಗಾಕಾರಂ–ಜ್ಯೋತಿರ್ಮಯವಾದ ಲಿಂಗಾಕಾರವನ್ನಾಗಿ, ಸ್ಮರೇತ್–ಧ್ಯಾನಿಪುದು.

●

ಸೂ : ವಿಮಲರೂಪಮಪ್ಪುದರಿಂ ವಿಶುದ್ಧಿಸಂಜ್ಞೆಯುಳ್ಳ ಕಂಠಸ್ಥಾನದ ಚಕ್ರಮಂ ಪೇಳ್ದಪಂ–

ಪಂಚಮಂ ಕಂಠಚಕ್ರಂ ಚ ತತ್ರಾಂಗುಲ ಚತುರ್ಥಕೇ ।

ಇಡಾಪಿಂಗಳಯೋರ್ಮಧ್ಯೇ ಸುಷುಮ್ನಾಂ ಸುಸ್ಥಿರಾಂ ಸ್ಮರೇತ್ ॥ ॥೧೨॥

ಕಂಠಚಕ್ರಂ ಚ–ಕಂಠಚಕ್ರವು, ಪಂಚಮಂ–ಐದನೆಯದು, ತತ್ರ–ಆ ಚಕ್ರದಲ್ಲಿ, ಅಂಗುಲಚತುರ್ಥಕೇ –ನಾಲ್ಕು ಅಂಗುಲಪ್ರಮಾಣದಲ್ಲಿ, ಇಡಾಪಿಂಗಳ ನಾಡಿಗಳ, ಮಧ್ಯೇ–ಮಧ್ಯದಲ್ಲಿ, ಸುಸ್ಥಿರಾಂ–ಅತ್ಯಂತ ಸ್ಥಿರಮಾಗಿರ್ಪಂಥ, ಸುಷುಮ್ನಾಂ–ಸುಷುಮ್ನೆಯನ್ನು, ಸ್ಮರೇತ್–ಧ್ಯಾನಿಪುದು

ಇಡಾ ವಹತಿ ವಾಮೇ ಚ ಪಿಂಗಳಾ ಯಾತಿ ದಕ್ಷಿಣೇ ।

ಇಡಾಪಿಂಗಳಯೋರ್ಮಧ್ಯೇ ಸುಷುಮ್ನಾ ಸುಖರೂಪಿಣೇ ॥

ಎಂದುದಾಗಿ. ಆನಂದಸ್ವರೂಪಿಣಿಯಾದ ಸುಷುಮ್ನೆಯಂ ಧ್ಯಾನಿಪುದೆಂಬುದರ್ಥ.

●

ಸೂ : ಅನಂತರದಲ್ಲಿ ಆರನೆಯ ಚಕ್ರಮಂ ಪೇಳ್ದಪಂ–

ಷಷ್ಠಂ ಚ ಘಂಟಿಕಾಲಿಂಗಮೂಲಂ ತದ್ರಾಜದಂತಕಂ ।

ಧ್ಯಾಯೇತ್ತದ್ದಶನಾದ್ವಾರಂ ತತ್ರ ಶೂನ್ಯಂ ಸುಸಿದ್ಧಯೇ ॥ ॥೧೩॥

ಘಂಟಿಕಾಲಿಂಗಮೂಲಂ ಚ–ಜಿಹ್ವೆಯ ಅಧೋಭಾಗವಾದ ಘಂಟಿಕಾಲಿಂಗದ ಮೂಲವು. ತದ್ರಾಜದಂತಕಂ–ಪ್ರಸಿದ್ಧಮಾದ ದಂತಂಗಳ ಊರ್ಧ್ವಭಾಗವಾದ ರಾಜದಂತಕವು, ತದ್ದಶನಾದ್ವಾರಂ–ಪ್ರಸಿದ್ಧವಾದ ದಂತಪಂಕ್ತಿಗಳ ಮಧ್ಯದ್ವಾರವುಷಷ್ಠಂ–ಆರನೆಯ ಚಕ್ರವೆನಿಪುದು. ತತ್ರ–ಆ ಚಕ್ರದಲ್ಲಿ, ಸುಸಿದ್ಧಯೇ–ಅಮೃತ ಸಿದ್ಧಿಗೋಸ್ಕರ, ಶೂನ್ಯಂ–ಬಿಂದುಸ್ವರೂಪವನ್ನು, ಧ್ಯಾಯೇತ್–ಧ್ಯಾನಿಪುದು.

●

ಸೂ : ಅನಂತರದಲ್ಲಿ ಏಳನೆಯ ಚಕ್ರಮಂ ಪೇಳ್ದಪಂ–

ಭ್ರೂಚಕ್ರಂ ಸಪ್ತಮಂ ತ್ವೇಕನಾಳಕಂದಂ ಸುವಾಕ್ಪ್ರದಂ ।

ಧ್ಯಾಯೇದ್ದೀಪಶಿಖಾಕಾರಂ ತನ್ಮಧ್ಯೇ ಜ್ಞಾನಲೋಚನಮ್ ॥ ॥೧೪॥

ಭ್ರೂಚಕ್ರಂ–ಭ್ರೂಚಕ್ರಮಾಯಿತ್ತಾದೊಡೆ, ಸಪ್ತಮಂ–ಏಳನೆಯದು, ಏಕನಾಳ, ಕಂದಂ–ಏಕನಾಳವಾದ ಸುಷುಮ್ನೆಗೆ ಮೂಲ ಸ್ಥಾನ ವಾದಂತಹದು, ಸಂವಾಕ್ಪ್ರದಂ–ಲೇಸಾದ ವಾಕ್ಸಿದ್ಧಿಯಂ ಕೊಡುವಂಥಾದ್ದು, ತನ್ಮಧ್ಯೇ–ಆ ಚಕ್ರಮಧ್ಯದಲ್ಲಿ, ದೀಪ್ರಶಿಖಾಕಾರಂ–ದೀಪಜ್ವಾಲೆಗೆ ಸಮಾನವಾದ, ಜ್ಞಾನಲೋಚನಂ–ಜ್ಞಾನನೇತವೆನಿಸುವ ಪ್ರಸಾದಜ್ಯೋತಿಯನು, ಧ್ಯಾಯೇತ್–ಧ್ಯಾನಿಪುದು.

ಸೂ : ಅನಂತದಲ್ಲೆಂಟನೆಯ ಚಕ್ರಮಂ ಪೇಳ್ದಪಂ –

ಬ್ರಹ್ಮರಂಧ್ರೇಽಷ್ಟಮಂ ಚಕ್ರಂ ನಿರ್ವಾಣಾಖ್ಯಂ ಸುಷುಮ್ನಕಂ ।

ತತ್ರ ಜಾಳಂಧರಂ ಧೂಮಶಿಖಾಭಂ ಮೋಕ್ಷದಂ ಭವೇತ್ ॥ ॥೧೫॥

ಬ್ರಹ್ಮರಂಧ್ರೇ–ಪರಮನಾದ ಬ್ರಹ್ಮದ್ವಾರಮೆನಿಪ ಬ್ರಹ್ಮರಂಧ್ರಸ್ಥಾನದಲ್ಲಿ, ಸುಷುಮ್ನಕಂ–ಲೇಸಾದ ಸುಖಸ್ವರೂಪವಾಗಿರ್ಪಂಥ (ಸುಷುಮ್ನಕವೆಂದರೆ ಪರಮಾನಂದರೂಪವೆಂಬುದರ್ಥಂ ಮೇಣ್[೧] ಸುಷುಮ್ನಕವೆಂದರೆ ಸಕಲಕಾಂತಿಗಳ್ಗೆ ಬೀಜರೂಪವಾದ ತರಣೀಯ ಪ್ರಥಮಕಿರಣಪ್ರಭೆಯುಳ್ಳವೆಂಬುದರ್ಥ), ನಿರ್ವಾಣಾಖ್ಯಂ–ನಿರ್ವಾಣವೆಂಬ ಹೆಸರನುಳ್ಳಂಥ, ಚಕ್ರಂ–ಚಕ್ರವು, ಅಷ್ಟಮಂ–ಎಂಟನೆಯದು, ತತ್ರ–ಆ ಚಕ್ರದಲ್ಲಿ, ಧೂಮಶಿಖಾಭಂ–ವಹ್ನಿ ಸಮಾನವಾಗಿರ್ಪಂಥ, ಜಾಳಂಧರಂ–ಜಾಳಂಧರವೆಂಬ ಪೀಠವು, ಮೋಕ್ಷದಂ–ಮೋಕ್ಷವನ್ನು ಕೊಡುವಂಥಾದ್ದು, ಭವೇತ್–ಆಗುವುದು.

●

ಸೂ : ಅನಂತರದೊಳ್ ಒಂಬತ್ತನೆಯ ಚಕ್ರಮಂ ಪೇಳ್ದಪಂ–

ಆಕಾಶಚಕ್ರಂ ನವಮಂ ಪ್ರಶಸ್ತಂ
ತ್ರಿಕೂಟಕಂ ಪೂರ್ಣಗಿರೇಶ್ಚಪೀಠಂ ।
ತತ್ರೋರ್ಧ್ವಶಕ್ತಿಂ ಸುಖದಾಂ [೨]ಸುಶೂನ್ಯಾಂ[೨]
ಧ್ಯಾಯೇದ್ವಯಾಷ್ಟಾರಸರೋಜಮಧ್ಯೇ ॥ ॥೧೬॥

ನವಮಂ–ಒಂಬತ್ತನೆಯದು, ಆಕಾಶಚಕ್ರಂ–ಬೈಂದವಾಕಾಶ ಚಕ್ರವೆನಿಪುದು, ಪ್ರಶಸ್ತಂ–ಪೂಜ್ಯವಾಗಿರ್ಪಂಥ, ತ್ರಿಕೂಟಕಂ–ಮಂಡಲತ್ರಯಂಗಳೆಂಬ ನಾದಬಿಂದುಕಲೆಗಳೆಂಬ ವರ್ಣತ್ರಯಂಗಳ ಕೂಟದಿಂದೇಕರೂಪವಾದಂಥಾದ್ದು, ಪೂರ್ಣಗಿರೇಃ–ಚಂದ್ರಸೂರ್ಯಸಂಚಾರದಿಂ ಮಹಾಮೇರುವೆನಿಸುವ ಪೂರ್ಣಗಿರಿಯ "ಪೂರ್ಣಾದ್ರಿಸ್ಸುರಶೈಲೋಭ್ರಮಧ್ಯೋ ದೇವಸದ್ಮ ಹೇಮನಗಃ" ಎಂದುದಾಗಿ ಆ ಗಿರಿಯ ಮೇಲಣ, ಪೀಠಂ–ದಿವ್ಯಲಿಂಗಪೀಠವಾಗಿರ್ದಂಥಾದ್ದು, ತತ್ರ–ಆ ಚಕ್ರದಲ್ಲಿಯ, ದ್ವಯಾಷ್ಟಾರಸರೋಜಮಧ್ಯೇ–ಷೋಡಶ[೩]ದಳಾತ್ಮಕ[೩] ಕಮಲ ಮಧ್ಯದಲ್ಲಿ, ಸುಖದಾಂ–ನಿರ್ವಿಕಲ್ಪಕಾನಂದವಂ ಕೊಡುವಂಥ, ಸುಶೂನ್ಯಾಂ–ಸಕಲ ವ್ಯಾಪಾರ ವಿಮುಖತೆಯಿಂ ಪರಮಶೂನ್ಯವಾಗಿರ್ಪಂಥ, ಊರ್ಧ್ವಶಕ್ತಿಂ–ಊರ್ಧ್ವಗೆಯೆಂಬ ಮಹಾಶಕ್ತಿಯನ್ನು, ಧ್ಯಾಯೇತ್–ಧ್ಯಾನಿಪುದು,

ನಿರಾಲಂಬಂ ಮಹಾಶೂನ್ಯಂ ವ್ಯೋಮಚಕ್ರೇ ವ್ಯವಸ್ಥಿತಂ ।
ನಿರಾಲಂಬಂ ಮನಃ ಕೃತ್ವಾ ನ ಕಿಂಚಿದಪಿ ಚಿಂತಯೇತ್ ॥

ಎಂದುದಾಗಿ,

●

ಸೂ : ಇಂತು ನವಚಕ್ರಮಂ ಪೇಳ್ದು, ಬಳಿಕ ಷೋಡಶಾಧಾರಮಂ ಷೋಡಶಗ್ರಂಥಂಗಳಿಂ ಪೇಳಲು ಪ್ರತಿಜ್ಞೆಯಂ ಮಾಡುತ್ತಿರ್ದಪಂ–

ಅಥ ತೇ ಷೋಡಶಾಧಾರಾನ್ ಕಥಯಾಮಿ ವಿಶೇಷತಃ

---

೧ + (ಕ) ೨–೨ ಸುಷುಮ್ನಾಂ (ಮೈ). ೩–೩ ಸ್ವರಾತ್ಮಕ (ಮೈ)

ಅಥ–ನವಚಕ್ರ ಸ್ವರೂಪಮಂ ನಿರೂಪಿಸಿದ ಅನಂತರದಲ್ಲಿ, ತೇ–ನಿನಗೆ, ಷೋಡಶಾಧಾರಾನ್ –ಹದಿನಾರು ಪ್ರಕಾರವಾದ ಆಧಾರಗಳನ್ನು, ವಿಶೇಷತಃ–ನವಚಕ್ರದಿಂ ವಿಶೇಷವಾದ ದೆಶೆಯಿಂದ, ಕಥಯಾಮಿ–ಪೇಳ್ದಪನು.

●

ಸೂ : ಪಾದಮೂಲೇನ ವಾಮೇನ ಯೋನಿಂ ಸಂಪೀಡ್ಯ ದಕ್ಷಿಣಂ ।

ಪಾದಂ ಪ್ರಸಾರಿತಂ ಕೃತ್ವಾ ಕರಾಭ್ಯಾಂ ಪೂರಕಯೇನ್ಮುಖಂ ॥

ಎಂಬ ಮುದ್ರೆಯಲ್ಲಿ ಪ್ರಸಾರಿತವಾದ ದಕ್ಷಿಣಪಾದಂಗುಷ್ಠದಲ್ಲಿ ತೇಜೋಮೂರ್ತಿ ಧ್ಯಾನವೇ ಪ್ರಥಮಾಧಾರವೆಂದು ಪೇಳ್ದಪಂ–

ತೇಜೋಧ್ಯಾನಂ ಪದಾಂಗುಷ್ಠೇ ಕುರ್ಯಾದ್ದೃಷ್ಟಿಸ್ಥಿರಾ ಭವೇತ್ ॥ ॥೧೭॥

ಪದಾಂಗುಷ್ಠೇ–ಪ್ರಸಾರಿತವಾದ ದಕ್ಷಿಣಾಪಾದಂಗುಷ್ಠದಲ್ಲಿ, ತೇಜೋಧ್ಯಾನಂ–ನಿವೃತ್ತಿಕಲಾತ್ಮಕವಾದ ತೇಜಸ್ಸಿನ ಧ್ಯಾನವನ್ನು, ಕುರ್ಯಾತ್–ಮಾಡುವುದು, (ಆ ಧ್ಯಾನದಿಂ) ದೃಷ್ಟಿಃ–ಧ್ಯಾನಿಸುವಾತನ ದೃಷ್ಟಿಯಂ, ಸ್ಥಿರಾ–ಚಲಿಸದೆ ಇರ್ದಂಥಾದ್ದು, ಭವೇತ್–ಅಹುದು, ಇದು ಪ್ರಥಮಾಧಾರವೆನಿಸುವುದು.

ಪದಸ್ಯ ಪಾರ್ಷ್ಣಿನಾ ಮೂಲಂ ದ್ವಿತೀಯಾಧಾರಸಂಜ್ಞಕಂ ।

ಸಂಪೀಡ್ಯ ಸ್ಥಾಪಯೇದಗ್ನಿದೀಪನಂ ಭವತಿ ಕ್ಷಣಾತ್ ॥ ॥೧೮॥

ಪದಸ್ಯ–ವಾಮಪಾದದ, ಪಾರ್ಷ್ಣಿನಾ–ಮಡದಿಂದ, ದ್ವಿತೀಯಾಧಾರ ಸಂಜ್ಞಕಂ–ದ್ವಿತೀಯಾಧಾರವೆನಿಸುವ, ಮೂಲಂ–ಮೂಲಾಧಾರವನ್ನು, ಸಂಪೀಡ್ಯ–ಒತ್ತಿ, ಸ್ಥಾಪಯೇತ್–ಇರಿಸುವುದು, ಕ್ಷಣಾತ್–ಇರಿಸಿದ ಕ್ಷಣದ ದೆಸೆಯಿಂದ, ಅಗ್ನಿದೀಪನಂ–ಮೂಲಾಗ್ನಿಯ ವಿಶೇಷ ಸ್ಫುರಣವು, ಭವತಿ–ಆಗುತ್ತದೆ.

ಆಕುಂಚಯೇದ್ಗುದಾಧಾರಂ ಸದಾ ಸಂಕೋಚನೇನ ಚ ।

ಅಪಾನಮರುತಸ್ಥೈರ್ಯಂ ಜಾಯತೇ ತತ್ತೃತೀಯಕಂ ॥ ॥೧೯॥

ಗುದಾಧಾರಂ–ಗುದಾಧಾರವನ್ನು, ಸದಾ–ಅನವರತವು, ಸಂಕೋಚನೇನ ಚ–ಸಂಕೋಚಿಸುವುದರಿಂದಲೂ, ಆಕುಂಚಯೇತ್–ಆಕುಂಚನವ ಮಾಡುವುದು, ತತ್–ಆ ಆಕುಂಚನದಿಂದ, ಅಪಾನಮರುತಃ–ಅಪಾನವಾಯುವಿಗೆ, ಸ್ಥೈರ್ಯಂ–ಸ್ಥಿರತೆಯು, ಜಾಯತೇ–ಹುಟ್ಟುತ್ತಿಹುದು, ತತ್–ಅದು, ತೃತೀಯಕಂ–ಮೂರನೆಯಾಧಾರವೆನಿಸುವುದು.

ಮೇಢ್ರಾಧಾರೇ ದಂಡಸಂಕೋಚನೇನ

ಬ್ರಹ್ಮಗ್ರಂಥೀನ್ ತ್ರೀನ್ ಸಮುತ್ಪಾಟ್ಯ ಪಶ್ಚಾತ್

ಚೇತೋವಾಯ್ವೋರ್ವಜ್ರನಾಡ್ಯಾನಾಡ್ಯಾಂ ಪ್ರವೇಶಾತ್

ಬಿಂದುಸ್ತಂಭಸ್ಸಂಭವತ್ಯೇವ ಸಿದ್ಧಃ ॥ ॥೨೦॥

ಮೇಢ್ರಾಧಾರೇ–ಮೇಢ್ರವೆಂಬ ಆಧಾರದಲ್ಲಿ, ದಂಡಸಂಕೋಚನೇನ–ವೀರ್ಯಾದಿಕವನ ಧ್ಯೋಮುಖವಂ ಮಾಡುವ ಅಪಾನವಾಯುವನೂರ್ಧ್ವಮುಖಮಂ ಮಾಡುವ ಲಿಂಗಸ್ಥಾನದ ಸಂಕೋಚನದಿಂದ, ತ್ರೀನ್–ಮೂರಾಗಿರ್ಪ‍ಂಥ, ಬ್ರಹ್ಮಗ್ರಂಥೀನ್–ಬ್ರಹ್ಮಗ್ರಂಥಿಗಳನ್ನು, ಸಮುತ್ಪಾಟ್ಯ–ಹೊಡೆದು, ಪಶ್ಚಾತ್–ಅನಂತರದಲ್ಲಿ, ಚೇತೋವಾಯ್ವೋಃ–ಮನೋಮರುತಂಗಳ, ವಜ್ರನಾಡ್ಯಾಂ–ಪಶ್ಚಿಮನಾಡಿಯಲ್ಲಿ, ಪ್ರವೇಶಾತ್–ಪ್ರವೇಶಿಸುವುದರ ದೆಸೆಯಿಂದ ಬಿಂದುಸ್ತಂಭಃ–ಬಿಂದುವಿನ ನಿಶ್ಚಲತ್ವವು, ಸಂಭವತ್ಯೇವ–ಸಂಭವಿಸುವುದೇ, ಇತಿ–ಹೀಗೆಂಬುದು, ಸಿದ್ಧಃ–ಸಿದ್ಧವು.

ಮರಣಂ ಬಿಂದುಪಾತೇನ ಜೀವಿತಂ ಬಿಂದುಧಾರಣಾತ್ ।

ತಸ್ಮಾಚ್ಛುಕ್ಲಂ ಮನಶ್ಚೈವ ರಕ್ಷಣೀಯಂ ಪ್ರಯತ್ನತ ಃ ॥

ಎಂದುದಾಗಿ.

ಪಂಚಮಾಧಾರಮುಡ್ಯಾಣಂ ನೌಲಿಂ ದದ್ಯಾನ್ಮುಹುರ್ಮುಹುಃ ।

ಮಲಮೂತ್ರಕ್ರಿಮೀಣಾಂ ಚ ಚಾರಣಂ ಭವತಿ ಧ್ರುವಂ ॥ ॥೨೧॥

ಉಡ್ಯಾಣಂ–ಉಡ್ಯಾಣವು, ಪಂಚಮಾಧಾರಂ–ಐದನೆಯ ಆಧಾರವು, ಮುಹುರ್ಮುಹುಃ–ಅಡಿಗಡಿಗೆ, ನೌಲಿಂ–ಸವ್ಯಾಪಸವ್ಯಗಳಿಂದುದರಮಂ ಕ್ಷೋಭಿಸುವ ನೌಳಿಯನು, ದದ್ಯಾತ್–ಕೊಡುವುದು.

ಅಮಂದಾವರ್ತವೇಗೇನ ತುಂದಂ ।

ನತಾಂಗೋ ಭ್ರಾಮಯೇದೇಷಾ ನೌಳಿರೇವ ಪ್ರಶಸ್ಯತೇ ॥

ಎಂದುದಾಗಿ, ಮಲಮೂತ್ರಕ್ರಿಮೀಣಾಂ ಚ–ಉದರಸ್ಥಾನದ ಮಲಮೂಲತ್ರದ ಕ್ರಿಮಿಗಳ, ಚಾರಣಂ ಚ–ವಿಮೋಚನವು, ಭವತಿ–ಆಗುವುದು, ಧ್ರುವಂ–ನಿಶ್ಚಯವು.

ನಾಭ್ಯಾಂಧಾರಂ ತತಸ್ತತ್ರ ಪ್ರಣವಂ ಯೋ ವದೇದ್ಬುಧಃ ।

ಸಮಾಧಿನೈಕಚಿತ್ತೇನ ತಸ್ಯ ನಾದೋದಯೋ ಭವೇತ್ ॥ ॥೨೨॥

ತತಃ–ಆ ಉಡ್ಯಾಣಾಧಾರಾನಂತರದಲ್ಲಿ ಆರನೆಯದು, ನಾಭ್ಯಾಧಾರಂ–ನಾಭ್ಯಧಾರವೆನಿಪುದು. ತತ್ರ–ಸಕಲ ವರ್ಣೋತ್ಪತ್ತಿಗೆ ಮೂಲಕಾರಣವಾದ ಮಧ್ಯಕುಂಡಲಿಸ್ಥಾನವೆನಿಸುವ ಆ ಆಧಾರದಲ್ಲಿ, ಯಃ–ಆವನಾನೋರ್ವನು, ಬುಧಃ–ಬಲ್ಲಾತನಂ, ಪ್ರಣವಂ–ಪ್ರಣವಾಕ್ಷರವನ್ನು, ವದೇತ್–ನುಡಿವುತಿಹನೋ, ತಸ್ಯ–ಆತನಿಗೆ, ಸಮಾಧಿನಾ–ವ್ಯಾಪಾರರಹಿತವಾಗಿರ್ಪ‍ಂಥ, ಏಕಾಗ್ರಚಿತ್ತೇನ–ಏಕಾಗ್ರಚಿತ್ತದಿಂದ, ನಾದೋದಯಃ–ಅನಾಹತವಾದ ನಾದದ ಪ್ರಾದುರ್ಭಾವವು, ಭವೇತ್–ಅಹುದು.

ಸಪ್ತಮಂ ತು ಹೃದಾಧಾರಂ ತತ್ರ ಪ್ರಾಣಾನ್ನಿರೋಧಯೇತ್ ।

ತದಾ ತನ್ಮಧ್ಯಕಮಲವಿಕಾಸೋ ಭವತಿ ಕ್ಷಣಾತ್ ॥ ॥೨೩॥

ಹೃದಾಧಾರಂ ತು–ಹೃದಯಾಧಾರವಾಯಿತ್ತಾದೊಡೆ, ಸಪ್ತಮಂ–ಏಳನೆಯದು, ತತ್ರ–ಅಲ್ಲಿ, ಪ್ರಾಣಾನ್–ಪೂರಿಸಿದ ಪ್ರಾಣವಾಯುವನ್ನು, ನಿರೋಧಯೇತ್–ತಡೆವುದು, ತದಾ–ಆಗ, ಕ್ಷಣಾತ್–ಕ್ಷಣಮಾತ್ರದಿಂದ, ತನ್ಮಧ್ಯಕಮಲವಿಕಾಸಃ; ತನ್ಮಧ್ಯ–ಆ ಹೃದಯಕಮಲ ಮಧ್ಯದಲ್ಲಿಯ, ಕಮಲ–ಪ್ರಣವಪೀಠಮಾದ ನಾಲ್ಕೆಸಳ ಕಮಲದ, ವಿಕಾಸಃ–ವಿಕಸನವು; ಭವತಿ–ಆಗುತ್ತಿಹುದು.

ಕಂಠಾಧಾರಂ ಕಂಠಮೂಲಂ ಪೀಡಯೇಚ್ಚುಬುಕೇ ನ ತು ।

ಇಡಾಪಿಂಗಳಯೋರ್ವಾಯುಪ್ರವಾಹಸ್ಸುಸ್ಥಿರೋ ಭವೇತ್ ॥ ॥೨೪॥

ಕಂಠಾಧಾರಂ–ಕಂಠಾಧಾರವು ಎಂಟನೆಯದು, ಕಂಠಮೂಲಂ–ಕಂಠಮೂಲವಾಯಿತ್ತಾದರೆ, ಚುಬುಕೇನ–ಚುಬುಕದಿಂದ, ಪೀಡಯೇತ್–ಒತ್ತುವುದು, ಅದರಿಂದೆ, ಇಡಾಪಿಂಗಳಯೋಃ–ಇಡಾಪಿಂಗಳಗಳಲ್ಲಿಯ, ವಾಯುಪ್ರವಾಹಃ–ರೇಚಕಪೂರಕವಾದ ವಾಯುಪ್ರವಾಹವು, ಸುಸ್ಥಿರಃ–ಅತ್ಯಂತ ಸ್ಥಿರವು, ಭವೇತ್–ಅಹುದು, ಇದು ಜಾಲಂಧರಬಂಧವೆನಿಸುವುದು.

ನವಮಂ ಘಂಟಿಕಾಧಾರಂ ಜಿಹ್ವಾಗ್ರಂ ತತ್ರ ದಾಪಯೇತ್ ।

ಸುಧಾಕಲಾ ಸ್ರವತ್ಯೇವ ಸಾ ಚ ಸಂತೃಪ್ತಿಕಾರಣಂ ॥ ॥೨೫॥

ಘಂಟಿಕಾಧಾರಂ–ಘಂಟಿಕೆಯೆಂಬಾಧಾರವು, ನವಮಂ–ಒಂಬತ್ತನೆಯದು, ತತ್ರ–ಅಲ್ಲಿ, ಜಿಹ್ವಾಗ್ರಂ–ಜಿಹ್ವೆಯ ತುದಿಯನ್ನು, ದಾಪಯೇತ್–ಇರಿಸುವುದು, (ಅದರಿಂದ), ಸುಧಾಕಲಾ–ಅಮೃತಕಲೆಯು, ಸ್ರವತ್ಯೇವ–ಸ್ರವಿಸುವುದೇ, ಸಾ ಚ–ಆ ಅಮೃತಕಲೆಯ, ಸಂತೃಪ್ತಿಕಾರಣಂ–ಸಮ್ಯಕ್ಕಾದ ತೃಪ್ತಿಗೆ ಕಾರಣವಾಗಿರ್ಪಂತಹದು.

ಚಿತ್ತಂ ಚರತಿ ಖೇ ಯಸ್ಯ ಜಿಹ್ವಾ ಚರತಿ ಖೇಗತಾ ।

ತೇನೈಷಾ ಖೇಚರೀ ನಾಮ ಮುದ್ರಾ ಸಿದ್ಧೈರ್ನಮಸ್ಕೃತಾ ॥

ಎಂದುದಾಗಿ,

●

ಸೂ : ಆ ಘಂಟಿಕಾಧಾರದಲ್ಲಿ ಜಿಹ್ವಾಗ್ರಪ್ರವೃತ್ತಿಯೇ ಲಂಬಿಕಾಯೋಗವೆಂದು ಪೇಳುತ್ತಿರ್ದಪಂ–

ಯಾ ಲಂಬಿಕಾಚಾಲನದೋಹನಾಭ್ಯಾಂ

ದೀರ್ಘೀಕೃತಾ ತಾಂ ವಿಪರೀತಮಾರ್ಗಾತ್ ।

ಯಸ್ತಾಲುಮೂಲಾಂತರಗರ್ಭದೇಶೇ

ಪ್ರವೇಶಯೇತ್ಸೋನ್ಮನತಾಂ ಪ್ರಯಾತಿ ॥ ॥೨೬॥

ಯಾ–ಆವುದಾನೊಂದು, ಲಂಬಿಕಾ–ಯೋಗಸಾಧನವಾದ ಜಿಹ್ವೆಯು, ಚಾಲನ ದೋಹನಾಭ್ಯಾಂ; ಚಾಲನ–ಚಲಿಸುವುದು, ದೋಹನಾಭ್ಯಾಂ–[೧]ಕರೆ[೧]ವುದು ಎಂಬ ಕರ್ಮದ್ವಯದಿಂ; ದೀರ್ಘೀಕೃತಾ–ದೀರ್ಘವಾಗಿ ಮಾಡಲ್ಪಟ್ಟಿತೋ, ತಾಂ–ಆ ಜಿಹ್ವೆಯನ್ನು, ವಿಪರೀತಮಾರ್ಗತ್–ವಿಪರೀತವಾದ ಊರ್ಧ್ವಮಾರ್ಗದ ದೆಸೆಯಿಂದ, ಯಃ–ಯಾವನು, ತಾಲುಮೂಲಾಂತರಗರ್ಭದೇಶೇ–ಗರ್ಭ ಸ್ಥಾನದಲ್ಲಿ; ಪ್ರವೇಶಯೇತ್–ಪ್ರವೇಶಮಾಡಿಸುವುನೋ, ಸಃ–ಆತನು, ಉನ್ಮನತಾಂ–ಉನ್ಮನ್ಯವಸ್ಥೆಯನ್ನು, ಪ್ರಯಾತಿ–ಹೊಂದುವನು.

೧–೧ ಕಡೆ (ಕ)

ಜಿಹ್ವಾತೋ ರಸನಾಧಾರಂ ಕುರ್ಯಾದ್ಯೋ ಮಂಥನಂ ಯದಿ ।

ಸಿದ್ಧ್ಯೇತ್ತಸ್ಯಾಮೃತಾಸ್ವಾದಃ ಕವಿತಾ ಚ ಸ್ಫುಟಾ ಭವೇತ್ ॥ ॥೨೭॥

ಯಃ–ಆವನೋರ್ವನು, ರಸನಾಧಾರಂ–ರಸನವೆಂಬಾಧಾರವನ್ನೂ, ಜಿಹ್ವಾತಃ–ಜಿಹ್ವೆಯ ದೆಸೆಯಿಂದ, ಮಂಥನಂ–ಘರ್ಷಣವನು, ಯದಿ–ಎತ್ತಲಾನು, ಕುರ್ಯಾತ್–ಮಾಡುವನೋ, ತೇನ–ಅದರಿಂದ, ತಸ್ಯ–ಆತಂಗೆ, ಅಮೃತಾಸ್ವಾದಃ–ಅಮೃತಸೇವನೆಯು, ಸಿದ್ದೇತ್–ಸಿದ್ಧಿಸುವುದು. ಕವಿತಾ ಚ–ಕವಿತ್ವವು, ಸ್ಫುಟಾ–ವ್ಯಕವಾಗಿರ್ಪಂತಹದು, ಭವೇತ್–ಅಹುದು, ಇದು ಏಕಾದಶಾಧಾರವೆನಿಸುವುದು.

ದ್ವಾದಶಂ ದಶನಾಧಾರಮೂರ್ಧ್ವಂ ತದ್ರಾಜದಂತಕಂ ।

ಷಣ್ಮಾಸಾದ್ದೃಶ್ಯತೇ ಜ್ಯೋತಿಸ್ತತ್ರ ಜಿಹ್ವಾಗ್ರಘಟ್ಟನಾತ್ ॥ ॥೨೮॥

ದಶನಾಧಾರಂ–ದಂತಾಧಾರವು, ದ್ವಾದಶಂ–ಹನ್ನೆರಡನೆಯದು, ತತ್–ಅದು, ಊರ್ಧ್ವಂ–ಮೇಲಾಗಿರ್ದಂಥಾದ್ದು, ರಾಜದಂತಕಂ–ರಾಜದಂತಕವೆನಿಸಿಕೊಂಬುವಂತಹದು, ತತ್ರ–ಅಲ್ಲಿ, ಜಿಹ್ವಾಗ್ರಘಟ್ಟನಾತ್; ಜಿಹ್ವಾಗ್ರ–ಜಿಹ್ವೆಯ ತುದಿಯನು, ಘಟ್ಟನಾತ್–ಘಟಿಸುವುದರ ದೆಸೆಯಿಂದ; ಷಣ್ಮಾಸಾತ್–ಆರುತಿಂಗಳತ್ತಣಿಂ, ಜ್ಯೋತಿಃ–ತೇಜಸ್ಸು, ದೃಶ್ಯತೇ–ಕಾಣಲ್ಪಡುತ್ತದೆ.

ತ್ರಯೋದಶಂ ಘ್ರಾಣಮೂಲಂ ತತ್ರ ದೃಷ್ಟಿಸ್ಥಿರೀಕೃತಾ ।

ಯದಿ ಚೇನ್ಮನಸಾ ನಿತ್ಯಂ ವಾಯುಸ್ತತ್ರ ಸ್ಥಿರೋ ಭವೇತ್ ॥ ॥೨೯॥

ಘ್ರಾಣಮೂಲಂ–ನಾಸಿಕಮೂಲವು, ತ್ರಯೋದಶಂ–ಹದಿಮೂರನೆಯ ಆಧಾರವು, ತತ್ರ–ಅಲ್ಲಿ, ದೃಷ್ಟಿಃ–ದೃಷ್ಟಿಯು, ಯದಿ–ಎತ್ತಲಾನು, ಸ್ಥಿರೀಕೃತಾಚೇತ್–ಸ್ಥಿರವಾಗಿ ಮಾಡಲ್ಪಟ್ಟುದಾದೊಡೆ, ತತ್ರ–ಅಲ್ಲಿ, ಮನಸಾ–ಮನಸ್ಸಿನೊಡನೆ, ವಾಯುಃ–ಪವನವು, ನಿತ್ಯಂ–ಆವಾಗಲು, ಸ್ಥಿರಃ–ರೇಚಕಪೂರಕವ್ಯಾಪಾರವನುಳಿದು ಚಲನೆಯಿಲ್ಲದಂಥಾದ್ದು, ಭವೇತ್–ಆಗುವುದು.

ಚತುರ್ದಶಂ ಲಲಾಟಾಖ್ಯಮಾಧಾರಂ ತತ್ರ ಯೋಗವಿತ್ ।

ಮನಸಾ ವಾಯುಮಾರೋಪ್ಯ ಸರ್ವಸಿದ್ಧಿಮವಾಪ್ನುಯಾತ್ ॥ ॥೩೦॥

ಲಲಾಟಾಖ್ಯಂ–ಲಲಾಟವೆಂಬ ಹೆಸರನುಳ್ಳಂಥ, ಆಧಾರಂ–ಆಧಾರವು, ಚತುರ್ದಶಂ–ಹದಿನಾಲ್ಕನೆಯದು, ತತ್ರ–ಅಲ್ಲಿ, ಯೋಗವಿತ್–ಧ್ಯಾನಯೋಗವನು ಬಲ್ಲಾತನು, ಮನಸಾ– ಮನಸ್ಸಿನೊಡನೆ, ವಾಯುಂ–ಪ್ರಾಣವಾಯುವನು, ಆರೋಪ್ಯ–ಎಯ್ದಿಸಿ, ಸರ್ವಸಿದ್ಧಿಂ–ಸಕಲಸಿದ್ಧಿಯನು, ಅವಾಪ್ನುಯಾತ್–ಎಯ್ದುವನು.

ಭ್ರೂಕಾಧಾರಂ ಪಂಚದಶಂ ತದೂರ್ಧ್ವಂ ಚಕ್ಷುಷಾ ಬುಧಃ ।

ಪ್ರಶ್ಯೇತ್ಸಕಿರಣಾಕಾರಂ ಶೀಘ್ರಮೇವ ಹಿ ಪಶ್ಯತಿ ॥ ॥೩೧॥

ಭ್ರೂಕಾಧಾರಂ–ಭ್ರೂಕವೆಂಬ ಆಧಾರವು, ಪಂಚದಶಂ–ಹದಿನೈದನೆಯದು, ಊರ್ಧ್ವಂ–ಮೇಲಾಗಿರ್ದಂಥಾದ್ದು, ತತ್–ಅದನ್ನು, ಬುಧಃ–ಬಲ್ಲಾತನು, ಚಕ್ಷುಷಾ–ನೇತ್ರದಿಂದ, ಪಶ್ಯೇತ್–ನೋಡುವನು, ಸಃ–ಆ ನೋಡುವಾತನು, ಕಿರಣಾಕಾರಂ–ಮಂಡಲಂಗಳ ಕಿರಣಾಕೃತಿಯಾದ ಪ್ರಕಾಶವನ್ನು, ಶೀಘ್ರಮೇವ–ಶೀಘ್ರದಲ್ಲಿಯೇ, ಪಶ್ಯತಿ ಹಿ–ಕಾಣುತ್ತಿಹನಲಾ.

ನೇತ್ರಾಧಾರಂ ಷೋಡಶಂ ತು ತದೂರ್ಧ್ವಂ ಚಾಲಯೇದ್ಬುಧಃ ।

ಜ್ಯೋತಿಃಪುಂಜಮಪಾಂಗೇತತ್ಪಶ್ಯತಿ ಕ್ಷಿಪ್ರಮೇವ ಹಿ ॥ ॥೩೨॥

ನೇತ್ರಾಧಾರಂ ತು–ನೇತ್ರವೆಂಬ ಆಧಾರವಾಯಿತ್ತಾದೊಡೆ, ಷೋಡಶಂ–ಹದಿನಾರನೆಯದು, ತತ್ –ಆ ನೇತ್ರಾಧಾರವನು, ಬುಧಃ–ಬಲ್ಲಾತನು, ಊರ್ಧ್ವಂ–ಮೇಲಾದ ತ್ರಿಕೂಟಸ್ಥಾನವಂ ಕುರಿತು, ಚಾಲಯೇತ್ –ಚಾಲನೆಯನ್ನೈದಿಸುವನು. ತತ್–ಆಧಾರವೆನಿಸುವ ನೇತ್ರವೇ, ಅಪಾಂಗೇ–ಕಡೆಗಣ್ಣಿನಲ್ಲಿ, ಜ್ಯೋತಿಃಪುಂಜಂ –ಬಿಂದುಕಾಂತಿಸಮೂಹವನು, ಕ್ಷಿಪ್ರಮೇವ–ಶೀಘ್ರದಲ್ಲಿಯೇ, ಪಶ್ಯತಿ ಹಿ–ಕಾಣುತ್ತಿಹುದಲಾ.

ತಾತ್ಪರ್ಯ : ಈ ಊರ್ಧ್ವಮುಖಮಾದ ನೇತ್ರಾಧಾರಮಧ್ಯದ ಮಹಾಸಂಷಿರವೇ ಬ್ರಹ್ಮರಂಧ್ರವೆನಿಪುದಾಗಿ, ಇದೇ ಮುಂದೆ ಪೇಳ್ವ ರಾಜಯೋಗಾಭ್ಯಾಸಕ್ಕೆ ಮುಖ್ಯ ಸಾಧನವೆನಿಸುವುದು.

●

ಸೂ : ಈ ಪ್ರಕಾರದಿಂ ಧ್ಯಾನಯೋಗಾಭ್ಯಾಸದಲ್ಲಿ ಪ್ರೀತನಾದಾತನ ಅಷ್ಟಾವಧಾನಸಂಪತ್ತಿಯೇ ಕ್ರಮದಿಂ, ಪೂರ್ವೋದಿತಮಾದ ಮಂತ್ರಾದಿಯಾದ ನಾಲ್ಕು ಯೋಗಂಗಳ ಕ್ರಮಾಭ್ಯಾಸಮಪ್ಪುದಾಗಿ, ಅನವರತವೂ ಮೋಸವಿಲ್ಲದೆ ಧ್ಯಾನಾಷ್ಟಾವಧಾನಸಂಪನ್ನನಾಗಿರಬೇಕೆಂದು ಪೇಳುತ್ತೆ ಧ್ಯಾನಯೋಗ ಪರಿಸಮಾಪ್ತಿಯಂ ಮಾಡುತಿರ್ದಪಂ–

ಬಂಧತ್ರಯೇಣಾಸನಬಂಧನೇನ ಮಂತ್ರೇಣ ನಾದಶ್ರವಣೇನ ಯೋಗೀ ।

ಭವೇತ್ತಥಾ ಕೇವಲಕುಂಬಕೇನ ಧ್ಯಾನೇನ ಚಿತ್ತಷ್ಟವಿಧಾವಧಾನೀ ॥ ॥೩೩॥

ಬಂಧತ್ರಯೇಣ–ಅಧಶ್ಶಕ್ತಿ ಮಧ್ಯಶಕ್ತಿ ಊರ್ಧ್ವಶಕ್ತಿಗಳ ಕ್ರಮದಿಂದುದಿಸುವಾಧಾರ ಊಡ್ಯಾಣ ಜಾಲಂಧರಗಳೆಂಬ ಬಂಧತ್ರಯದಿಂದ, ಆಸನಬಂಧನೇನ–ಪದ್ಮಾಸನ ಮೊದಲಾದ ಆಸನಂಗಳಂ ಕಟ್ಟುವುದರಿಂದ, ಮಂತ್ರೇಣ–ಪ್ರಾಕೃತ ಪ್ರಾಣಾಯಾಮದ ಹಂಸಮಂತ್ರಾನುಸಂಧಾನದಿಂದ, ನಾದಶ್ರವಣೇನ –ವೈಕೃತ ಪ್ರಾಣಾಯಾಮದ ಸೋಹಂಭಾವಫಲಮಾದ ನಾದಶ್ರವೆಂಬ ಲಯಯೋಗಾನಂ ಸಂಧಾನದಿಂದ, ತಥಾ–ಹಾಂಗೆ, ಕೇವಲಕುಂಭಕೇನ–ರೇಚಕಪೂರಕವ್ಯಾಪಾರಂಗಳನುಳಿದ ಕೇವಲಕುಂಭಕವೆಂಬ ಹಠಯೋಗಾನುಸಂಧಾನದಿಂದ, ಧ್ಯಾನೇನ–ಸಾಲಂಬ ನಿರಾಲಂಬವೆಂಬ ವಸ್ತುಧ್ಯಾನದಿಂದ, ಚಿತ್ತಾಷ್ಟವಿಧಾನಧಾನೀ–ಚಿತ್ತದಲ್ಲೆಂಟು ಪ್ರಕಾರವಾದ ಅವಧಾನವುಳ್ಳಾತನು, ಭವೇತ್–ಆಗುವುದು (ಮೋಕ್ಷಮಂ ಸಾಧಿಸುವ ಯೋಗೀಶ್ವರಂಗೆ ಈ ಅಷ್ಟಾವಧಾನವೇ ಮಹಾಸಾಧವೆಂಬುದರ್ಥಂ).

●

ಸೂ : ಈ ಮರ್ಯಾದೆಯಿಂ ಪೇಳ್ದ ಧ್ಯಾನಯೋಗಾನಂತರದಲ್ಲಿಯ ಧಾರಣಯೋಗವೇ ಲಿಂಗಕ್ಕೆ ಧೂಪಾರ್ಪಣಮೆಂದು ಪೇಳ್ದಪಂ–

ದೇಹಪಾತ್ರೇ ಜ್ವಲದ್ಜ್ಞಾನವಹ್ನೌ ಭೂತಗುಣಾದಿಕಂ ।

ಕ್ಷಿಪ್ತ್ವಾ ದಶಾಂಗವಲ್ಲಿಂಗಂ ಧೂಪಯೇದ್ಧಾರಣಾದ್ಬುಧಃ ॥ ॥೩೪॥

ದೇಹಪಾತ್ರೇ-ಯಮನಿಯಮಂಗಳಂ ಶುದ್ಧಮಾದ ದೇಹವೆಂಬ ಪಾತ್ರೆಯಲ್ಲಿ, ಜ್ವಲಜ್ಜ್ಞಾನವಹ್ನೌ, ಜ್ವಲತ್-ಪ್ರಾಣಾಯಾಮಪ್ರತ್ಯಾಹಾರಂಗಳಿಂ ಶುಷ್ಕವಾದ ಮನೋವಾರುತಂಗಳೆಂಬ ಕಾಷ್ಠಾಧಾರದಿಂದುರಿಯುತ್ತಿಹ, ಜ್ಞಾನವಹ್ನೌ-ಧ್ಯಾನರೂಪವಾದ ಜ್ಞಾನಾಗ್ನಿಯಲ್ಲಿ, ಭೂತಗುಣಾದಿಕಂ; ಗುಣಾದಿಕಂ-ಧಾರಣ ಸಂಗ್ರಹಣ ಪಾಕ ವಿವಹನ ಅವಕಾಶ ಮೊದಲಾದ ಗುಣಾದಿಗಳನು; ದಶಾಂಗವತ್ -ದಶಾಂಗಧೂಪದೋಪಾದಿಯಲ್ಲಿ, ಕ್ಷಿಪ್ತ್ವಾ-ಹಾಕಿ, ಬುಧಃ-ವಿವೇಕಿಯಾದಾತನು, ಲಿಂಗಂ-ಲಿಂಗವನ್ನು, ಧಾರಣಾತ್-ಧರಿಸುವುದರ ದೆಸೆಯಿಂದ, ಧೂಪ ಏತ್-ಸದ್ವಾಸನೆಯಿಂ ಪೊರೆಯಲ್ಪಟ್ಟಂತಹುದಂ ಮಾಳ್ಪುದು.

ತಾತ್ಪರ್ಯ : ಈ ಧಾರಣಯೋಗದಿಂ ಭೂತಶುದ್ಧಿಯಪ್ಪುದಾಗಿ, ಜಾತಿಕುಲಾದ್ಯಭಿಮಾನಾಸ್ಪದಮಾದ ಈ ಸ್ಥೂಲಶರೀರಕ್ಕೆ ಪುನರಾವೃತ್ತಿಯಿಲ್ಲದಾಗಿ ಚರಮದೇಹಿಯಪ್ಪುದೆಂಬುದಭಿಪ್ರಾಯ.

●

ಸೂ : ಈ ಧಾರಣೆಗೆ ಲಕ್ಷಣಮಂ ಪೇಳುತ್ತೆ ಅದರ ಭೇದಮಂ ಪೇಳಲ್ ಪ್ರತಿಜ್ಞೆಯಂ ಮಾಡುತ್ತಿರ್ದಪಂ-

ಧ್ಯಾನೈಕಗೋಚರಮನಸ್ಸ್ಥಿರತಾ ಭವೇದ್ಯಾ
ಸಾಧಾರಣೇತಿ ಶಿವಯೋಗವಿದೋ ವದಂತಿ ।
ಸೈವ ಕ್ರಮೇಣ ರಚಿತೇಹ ಪುನಃಪ್ರಕಾರಾ
ದ್ಭೂಮ್ಯಾದಿಭೂತಧರಣೇನ ಪೃಥಕ್ಪೃಥಕ್ಚ ॥ ॥೩೫॥

ಯಾ-ಆವುದಾನೊಂದು, ಧ್ಯಾನೈಕಗೋಚರಮನಸ್ಥಿರತಾಃ ಧ್ಯಾನೈಕ-ಪೂರ್ವೋಕ್ತವಾದ ಧ್ಯಾನಮೊಂದೇ, ಗೋಚರ-ವಿಷಯವಾಗುಳ್ಳ, ಮನಃ-ಮನಸ್ಸಿನ, ಸ್ಥಿರತಾ-ಸ್ಥಿರತ್ವವು; ಭವೇತ್-ಆಗುತ್ತಿಹುದೋ, ಸಾ-ಆ ಸ್ಥಿರತೆಯೇ, ಧಾರಣೇತಿ-ಧಾರಣೆಯೆಂದು, ಶಿವಯೋಗವಿದಃ-ಶಿವಯೋಗವಂ ಬಲ್ಲವರ್ಗಳು, ವದಂತಿ-ಹೇಳುತ್ತಿಹರು.

ತಾತ್ಪರ್ಯ : ಸಂಕಲ್ಪರೂಪಮಾದ ಮನಸ್ಸು, ಕಾಕಾಕ್ಷಿಯೋಪಾದಿಯಲ್ಲಿ ಬಾಹ್ಯಾಭ್ಯಂತರ ವ್ಯಾಪಾರಗಳಿಗೆ ತಾನೇ ಕಾರಣಮಪ್ಪುದರಿಂದಾ ಮನಮಂ ಮುದ್ರಾಕರಣಬಂಧನಂಗಳಿಂದೆ ಅಂತರ್ಮುಖ ಮಾಡಿ, ಅನವಚ್ಛಿನ್ನತೈಲಧಾರೆಯಂತೆ ಶಿವಧ್ಯಾನಮಂ ಮಾಡುತ್ತಿರಲು, ಧ್ಯಾನಾನಂದದಿಂ ಕರಿಗೊಂಡ ಮೂರ್ತಿಯೊಳಾ ಮನಂ ನಿಶ್ಚಲಮಾಗಲದೇಧಾರಣ[೧]ಯೋಗ[೧] ವೆಂಬುದಭಿಪ್ರಾಯಂ.

ಧಾರಣಾ ನಾಮ ಚಿತ್ತಸ್ಯ ಸ್ಥಾನಬಂಧಸ್ಸಮಾಸತಃ ।
ಸ್ಥಾನಂ ಚ ಶಿವಯೋರೈಕ್ಯೋಹ್ಯನ್ಯದ್ದೋಷಾಶ್ರಯಂ ಯತಃ ॥

೧-೧ x (ಮೈ).

ಎಂದುದಾಗಿ, ಸೈವ–ಆ ಧಾರಣಯೋಗವೇ, ಇಹ–ಈ ಯೋಗಪ್ರಕರಣದಲ್ಲಿ, ಪುನಃ–ಮರಳಿ, ಪ್ರಕಾರಾತ್–ಪ್ರಕಾರಾಂತರದಿಂದ, ಕ್ರಮೇಣ–ಕ್ರಮದಿಂದ, ಭೂಮ್ಯಾದಿಭೂತಧರಣೇನ–ಭೂಮಿ ಮೊದಲಾದ ಭೂತಂಗಳ ಧರಿಸುವುದರಿಂದ ಪೃಥಕ್ ಪೃಥಕ್–ಬೇರೆಬೇರೆಯೂ, ರಚಿತಾ–ಹೇಳಲ್ಪಟ್ಟಿತು (ಶಿವಧ್ಯಾನದಲ್ಲಿಯ ಮನಸ್ಥಿರತೆಯೇ ಧಾರಣೆಯಾಯಿತ್ತಾದರೂ ಸ್ಥೂಲಮೂರ್ತಿಧ್ಯಾನಮಂ ಪೇಳ್ವ, ಯೋಗಮಾರ್ಗಾನುಸಾರದಿಂ ಪೃಥಿವ್ಯಾದಿ ತತ್ತ್ವಾಶ್ರಯವಾದ ದೇವತಾಂತರ ಧ್ಯಾನವಂ ಪೇಳ್ವನೆಂಬುದು "ಪುನಃಪ್ರಕಾರಾತ್" ಎಂಬ ಶಬ್ದಕ್ಕರ್ಥ).

ಕ್ಷಿತ್ಯಾದಿತತ್ತ್ವವಿಷಯಂ ಧ್ಯಾತ್ವಾ ಯದ್ಯಭಿವಾಂಛಿತಂ ।

ತತ್ತತ್ತತ್ತ್ವಾಪಾನೇನ ಮೂರ್ತಿಂ ಸ್ಥೂಲಾಂ ವಿಚಿಂತೇತ್ ॥

ಎಂದುದಾಗಿ.

●

ಸೂ : ಸ್ಥಿತ್ಯರ್ಥಂ ಮನಸಃ ಕೇಚಿತ್ ಸ್ಥೂಲಧ್ಯಾನಂ ಪ್ರಕುರ್ವತೇ ।

ಸ್ಥೂಲೇಽಪಿ ನಿಶ್ಚಲಂ ಚೇತೋ ಭವೇತ್ಸೂಕ್ಷ್ಮೇಽಪಿ ನಿಶ್ಚಲಂ ॥

ಎಂದುದಾಗಿ, ಮಂದಾಧಿಕಾರಿಗಳ್ಗೆ ಸ್ಥೂಲಮೂರ್ತಿಧ್ಯಾನದಿಂದಲ್ಲದೆ ಸೂಕ್ಷ್ಮಮೂರ್ತಿ ಧ್ಯಾನಮಾರ್ಗವಾಗಿ, ಸ್ಥೂಲಧಾರಣಾವಿಶೇಷಮಂ ತತ್ತ್ವಕ್ರಮದಿಂ ಪೇಳ್ದಪಂ–

ಧಾರಣೀ ವಾರಿಣೀ ಚೈವಮಾಗ್ನೇಯೀ ಮಾರುತೀ ತಥಾ ।

ನಭೋಮಯೀತಿ ಗದ್ಯಂತೇ ಸೂರಿಭಿಃ ಪಂಚ ಧಾರಣಾಃ ॥ ॥೩೬॥

ಧಾರಣೀ–ಧರಣಿ ಸಂಬಂಧವಾದ ಧರಿಣಿಯೆಂದೂ, ವಾರಿಣೀ ಚ–ವಾರಿ ಸಂಬಂಧವಾದ ವಾರಿಣಿ ಎಂದೂ, ಏವಂ–ಈ ಪ್ರಕಾರದಿಂದ, ಅಗ್ನೇಯೀ–ಅಗ್ನಿ ಸಂಬಂಧವಾದ ಆಗ್ನೇಯಿಯೆಂದೂ, ತಥಾ–ಹಾಗೆ, ಮಾರುತಿ–ಮಾರುತ ಸಂಬಂಧವಾದ ಮಾರುತಿಯೆಂದೂ, ನಭೋಮಯೀತಿ–ಆಕಾಶ ಸಂಬಂಧವಾದ ನಭೋಮಯಿಯೆಂದು, ಪಂಚ–ಐದು ಪ್ರಕಾರವಾದ, ಧಾರಣಾಃ–ಧಾರಣೆಗಳು, ಸೂರಿಭಿಃ–ಯೋಗಮಂ ಬಲ್ಲವರಿಂದ, ಗದ್ಯಂತೇ–ಹೇಳಲ್ಪಡುತ್ತಿಹವು.

●

ಸೂ : ಈ ಧಾರಣಯೋಗದಿಂ ಮಹಾಪ್ರಯೋಜನಂಗಳಪ್ಪುವಾಗಿ ಅದರ ಅಭ್ಯಾಸಮಂ ಮಾಳ್ಪುದೆಂದು ಪೇಳುತ್ತಿರ್ದಪಂ–

ಅತ ಏವ ತಥಾ ಪ್ರೋಕ್ತಾ ಧಾರಣಾಯೋಗವಿತ್ತಮೈಃ ।

ಸರ್ವಸಿದ್ಧಿಪ್ರದಾನಾಚ್ಚ ಸದಾಭ್ಯಾಸರತಾತ್ಮನಾಂ ॥ ॥೩೭॥

ಅತ ಏವ–ಈ ಪಂಚಭೂತಾತ್ಮಕವಾದ ಕಾರಣಮಾಗಿ, ಯೋಗವಿತ್ತಮೈಃ–ನೆರೆಬಲ್ಲ ಯೋಗೀಶ್ವರರಿಂದೇ, ತಥಾ–ಆ ಪ್ರಕಾರದಿಂ, ಪ್ರೋಕ್ತಾಃ–ಹೇಳಲ್ಪಟ್ಟ, ತಾಃ ಧಾರಣಾಃ–ಆ ಪಂಚಧಾರಣೆಗಳು, ಸದಾ–ಅನವರತವು, ಅಭ್ಯಾಸರತಾತ್ಮನಾಂ–ಅಭ್ಯಾಸದಲ್ಲಿ ಪ್ರೀತಿರಾದವರಿಗೆ,

ಸರ್ವಸಿದ್ಧಿಪ್ರದಾಶ್ಚ-ಸಕಲಸಿದ್ಧಿಗಳಂ ಕೊಡುವಂಥವಾಗುತ್ತಿಹವು (ಆ ಸಿದ್ಧಿಗಳೊಂದೊಂದಕ್ಕೆಂಟಾದ ಪಂಚಭೂತದ ನಾಲ್ವತ್ತು ಸಿದ್ಧಿಗಳಂ ದೇವೀಕಾಲೋತ್ತರದ ಟೀಕಿನೊಳ್ವಿಚಾರಿಸಿ ಕೊಳ್ವುದು).

●

ಸೂ : ಈ [1]ಪ್ರಕಾರದಿಂ[1] ಧಾರಣೆಗಳ ಸ್ಥಾನಮಂ ಬೀಜಾಕ್ಷರಮಂ ಧ್ಯಾನಮೂರ್ತಿಯಂ ಪೇಳ್ದಪಂ-

ಪಾದಾದಿಜಾನ್ವಂತಮಹೀತಲೇಸ್ಮಿನ್ವಯಂ ಲಕಾರೇಣ ಸಮಾಧಿರೋಪ್ಯ ।
ಸ್ಮರೇಚ್ಚತುರ್ಬಾಹುಧನರಂ ಚತುರ್ಮುಖಂ ತಂಧಾರ ಯೇದ್ಭೂಮಿ
ಜಯಂ ಸಮಾಪ್ನುಯಾತ್॥ ॥೩೮॥

ಅಸ್ಮಿನ್-ಈ, ಪಾದಾದಿಜಾನ್ವಂತಮಹೀತಲೇ-ಪಾದಾದಿಜಾನ್ವಂತವಾದ ದೇಹಭಾಗವೇ ನಿಯತಸ್ಥಾನಮಾಗುಳ್ಳ, ಚತುರಸ್ರಮಾದ ಗಂಧಾದಿ ಪಂಚಗುಣಾನ್ವಿತವಾದ ನಿವೃತ್ತಿಕಲಾವ್ಯಾಪ್ತವಾದ ಸುವರ್ಣವರ್ಣವಾದ ಹದಿನಾರು ಸ್ವರಂಗಳಿಂ ಕೂಡಿದ ಕಕಾರವೆಂಬ ಷೋಡಶದಳಕಮಲ ಮಧ್ಯವರ್ತಿಯಾದ ಏಕ ಮುಖದ್ವಿನೇತ್ರವರದಾಭಯಕಲಶೋತ್ಪಲ ಹಸ್ತೆಯಾದ ಭೂದೇವತಾ ಸ್ವರೂಪಿಯಾದ ಮಹೀತಳದಲ್ಲಿ.

ಷೋಡಶಸ್ವರಸಂಯುಕ್ತಾ ಕಕಾರಾಂಬುಜಮಧ್ಯಗಾ ಏಕವಕ್ತ್ರಾದ್ವಿನೇತ್ರಾ ಚ ।
ವರಾಭಯಕರಾನ್ವಿತಾ ಕಲಶೋತ್ಪಲಹಸ್ತಾ ಚ ಜಗದಾಧಾರರೂಪಿಣೀ ॥

ಎಂದುದಾಗಿ, ವಾಯುಂ-ಪ್ರಾಣವಾಯುವನ್ನು, ಲಕಾರೇಣ-ಲಕಾರೆಂಬ ಬೀಜಾಕ್ಷರದಿಂದ, ಸಮಾಧಿರೋಪ್ಯ-ಪೂರಕದಿಂ ಕುಂಭಿಸಿ, ಚತುರ್ಬಾಹುಧರಂ-ವರದಾಭಯಕಲಶಾಕ್ಷಮಾಲೆಗಳಿಂ ಕೂಡಿದ ಚತುರ್ಭುಜಗಳಂ ಧರಿಸಿರ್ಪಂಥ, ತು ಚತುರ್ಮುಖಂ-ಆ ಬ್ರಹ್ಮನನು, ಸ್ಮರೇತ್-ಧ್ಯಾನಿಸಬೇಕು, ಧಾರಯೇತ್-ಧರಿಪುದು, ಈ ಧಾರಣೆಯಿಂ, ಭೂಮಿಜಯಂ-ಪೃಥ್ವೀತತ್ತ್ವ ಜಯವನ್ನು, ಸಮಾಪ್ನುಯಾತ್-ಎಯ್ದುವುದು.

●

ಸೂ : ಅನಂತರದಲ್ಲಿ ಜಲತತ್ತ್ವಧಾರಣೆಯಂ ಪೇಳ್ದಪಂ-

ವಕಾರೇಣೋಪೇತಂ ಸಲಿಲನಿಲಯೇ ಜಾನುನಾಭ್ಯಂತದೇಶೇ
ಸ್ಥಿರಂ ಕೃತ್ವಾ ವಾಯುಂ ಹರಿಮಥಸದಾ ಸಂಸ್ಮರನ್ವೀತಚೇಲಂ ।
ಪ್ರಸನ್ನಾಸ್ಯಂ ಶುದ್ಧಸ್ಪಟಿಕಮಣಿನಿಭಂ ಶಂಖಚಕ್ರಾಂಕಬಾಹುಂ
ಜಲಾದುತ್ಪನ್ನೋದ್ಯದ್ಭಯಜಯಮಹಸ್ಸಂಭವೇದ್ಧಾರಯೇದ್ಯ ॥ ॥೩೯॥

ಜಾನುನಾಭ್ಯಂತದೇಶೇ-ಜಾನುವೇ ಆದಿಯಾಗಿ ನಾಭಿಯೇ ಕಡೆಯಾದ ನಿಯತ ಸ್ಥಾನವುಳ್ಳಂಥ, ಸಲಿಲನಿಲಯೇ-ಪ್ರತಿಷ್ಠಾಕಲಾವ್ಯಾಪ್ತಮಾದ ಸ್ಫಟಿಕವರ್ಣಮಾದ ಷೋಡಶಸ್ವರಂಗೂಡಿದ ಖಕಾರವೆಂಬ ಕಮಲ ಮಧ್ಯವರ್ತಿಯಾದ "ಷೋಡಶಸ್ವರ ಸಂಯುಕ್ತ ಖಕಾರಾಂಬುಜ ಮಧ್ಯಗಂ" ಎಂದುದಾಗಿ,

---

೧-೧ ಕ್ರಮದಿಂ (ಕ).

ಧನುಷ್ಕೋಣವಾದ ರಸಾದಿ ಚತುರ್ಗುಣಾನ್ವಿತಮಾದ ಜಲತತ್ತ್ವಸ್ಥಾನದಲ್ಲಿ, ವಕಾರೇಣ-ವಕಾರವೆಂಬ ಬೀಜಾಕ್ಷರದೊಡನೆ, ಉಪೇತಂ-ಕೂಡಿ ಪೂರಿಸಿದಂಥ, ವಾಯುಂ-ಪ್ರಾಣ ವಾಯುಮಂ, ಸ್ಥಿರಂ-ಕುಂಭಕದಿಂ ಸ್ಥಿರವಾಗಿ, ಕೃತ್ವಾ-ಮಾಡಿ, ಅಥ-ಅನಂತರದಲ್ಲಿ, ಪೀತಚೇಲಂ-ಪೀತಾಂಬರನಾದಂಥ, ಪ್ರಸನ್ನಾಸ್ಯಂ-ಪ್ರಸನ್ನ ಮುಖನಾದಂಥ, ಶುದ್ಧಸ್ಫಟಿಕಮಣಿನಿಭಂ-ನಿರ್ಮಲವಾದ ಸ್ಫಟಿಕರತ್ನಕ್ಕೆ ಸಮಾನವಾದ ಕಾಂತಿಯನುಳ್ಳಂಥ (ಅಂತರಂಗದ ತಮದಿಂ ಬಾಹ್ಯದ ಸತ್ವಗುಣದಿಂ ಕೂಡಿದವನೆಂಬುದರ್ಥ), ಶಂಖಚಕ್ರಾಂಕಬಾಹುಂ-ಶಂಖಚಕ್ರಂಗಳಂ ಕುರುಹಾದ ತೋಳ್ಗಳುಳ್ಳಂಥ, ಹರಿಂ-ಪುರುಷೋತ್ತಮನನ್ನು, ಸದಾ-ಆವಾಗಲೂ, ಸಂಸ್ಮರನ್ -ನೆನೆವುತ್ತಿರ್ದಂಥ, ಯಃ-ಆವಾತನು, ಧಾರಯೇತ್-ಧರಿಸುವನೊ, ತಸ್ಯ-ಆತಂಗೆ, ಜಲಾತ್-ಉದಕದತ್ತಣಿಂದ, ಉತ್ಪನ್ನೋದ್ಯದ್ಭಯಜಯಮಹಃ-ಹುಟ್ಟಿದ ವಿಶೇಷಮಾಗುತ್ತಿರ್ದ ಭೀತಿಯಂ ಗೆಲ್ವ ಸಾಮರ್ಥ್ಯವು, ಸಂಭವೇತ್-ಉಂಟಾಗುವುದು.

●

ಸೂ : ಅಗ್ನಿ ತತ್ತ್ವಧಾರಣಮಂ ಪೇಳ್ದಪಂ-

ನಾಭೇ ಕಂಠಾಂತದೇಶೇ ವರಶಿಖಿನಿಲಯೇ ವಾಯುಮಾರೋಪ್ಯರೇಫಾತ್
ತ್ರ್ಯಕ್ಷಂ[೧]ವಾ ರುದ್ರರೂಪಂ[೧] ತರುಣರವಿನಿಭಂ ಭಸ್ಮನೋದ್ಧೂಳಿತಾಂಗಂ ।
ಶಾಂತಂ ಶೀಘ್ರಪ್ರಸನ್ನಂ ವರದಮಭಯದಂ ಸಂಸ್ಮರನ್ ಧಾರಯೇತ್ತಂ
ಯಸ್ತಸ್ಯಾಭ್ಯಾಸಿನೋಽಗ್ನೇರ್ಭಯಹರಣಮಹಸ್ಸಂಭವೇದ್ಧಾರಣಾತ್ಸಃ ॥ ॥೪೦॥

ನಾಭೇ-ನಾಭಿಯತ್ತಣಿಂ ಮೇಲಾದ, ಕಂಠಾಂತದೇಶೇ-ಕಂಠವೇ ಕಡೆಯಾದ ನಿಯತಸ್ಥಾನಮುಳ್ಳಂಥ, ವರಶಿಖಿನಿಲಯೇ-ಶ್ರೇಷ್ಠಮಾದ ವಿದ್ಯಾಕಲಾವ್ಯಾಪ್ತಮಾದ ಷೋಡಶಸ್ವರಂಗೂಡಿದ ಗಕಾರಾಂಬುಜ ಮಧ್ಯವರ್ತಿಯಾದ "ಷೋಡಶಸ್ವರ ಸಂಯುಕ್ತಗಕಾರಾಂಬುಜಮಧ್ಯಗಂ" ಎಂದುದಾಗಿ ತ್ರಿಕೋಣಾಕಾರಮಾದಂಥ ರೂಪಾದಿ [೨]ತ್ರಿಗುಣಾತ್ಮಕ[೨]ವಾದ ಅಗ್ನಿತತ್ವಸ್ಥಾನದಲ್ಲಿ, ರೇಫಾತ್-ರಕಾರವೆಂಬ ಬೀಜಾಕ್ಷರದಿಂದ, ವಾಯುಂ-ಪ್ರಾಣವಾಯುವನ್ನು, ಆರೋಪ್ಯ-ಪೂರಕದಿಂ ಕುಂಭಿಸಿ, ತತ್ರ-ಅಲ್ಲಿ, ತ್ರಕ್ಷಂ-ಮೂರುನೇತ್ರವುಳ್ಳಂಥ, ತರುಣರವಿನಿಭಂ-ಬಾಲಾರ್ಕಸಮಾನನಾದಂಥ, ಭಸ್ಮನಾ-ಶ್ರೀ ವಿಭೂತಿಯಿಂದ, ಉದ್ಧೂಳಿತಾಂಗಂ-ಲೇಪಿಸಿದ ಶರೀರಮುಳ್ಳಂಥ, ಶಾಂತಂ-ರಾಗದ್ವೇಷರಹಿತನಾದಂಥ, ಶೀಘ್ರ ಪ್ರಸನ್ನಂ-ಧ್ಯಾನಿಸುವಂಗೆ ಶೀಘ್ರದಿಂ ಪ್ರಸನ್ನನಪ್ಪಂಥ, ವರದಂ-ವರವ ಕೊಡುವಂಥ, ಅಭಯದಂ-ಅಭಯವಂ ಕೊಡುವಂಥ, ತಂ-ಆ, ರುದ್ರಸ್ವರೂಪಂ-ಅಭಯದಂ-ಅಭಯವಂ ಕೊಡುವಂಥ, ತಂ-ಆ, ರುದ್ರಸ್ವರೂಪಂ-ರುದ್ರಮೂರ್ತಿಯನ್ನು, ಯಃ-ಯಾವನ, ಸಂಸ್ಮರನ್-ಧ್ಯಾನಿಸುತ್ತಲು, ಧಾರಯೇತ್-ಧರಿಸುತ್ತಿಹನೋ, ತಸ್ಯ-ಆ, ಅಭ್ಯಾಸಿನಃ-ಧಾರಣಾಭ್ಯಾಸವುಳ್ಳಾತಂಗೆ, ಧಾರಣಾತ್-ಧಾರಣೆಯತ್ತಣಿಂದಾಗುವ, ಭಯಹರಣಮಹಃ-ಭೀತಿಯಂ ಕೆಡಿಸುವ ಸಾಮರ್ಥ್ಯವು, ಸಂಭವೇತ್-ಉಂಟಾಗುವುದು.

●

೧-೧ ರುದ್ರ ಸ್ವರೂಪಂ(ಕ) ೨-೨ ತ್ರಿಗುಣಾನ್ವಿತ (ಕ).

ಸೂ : ಅನಂತರದಲ್ಲಿ ವಾಯುತತ್ತ್ವಧಾರಣೆಯಂ ಪೇಳ್ದಪಂ

ಗಳಾಧೇರ್ಭ್ರುವೋರ್ಮಧ್ಯದೇಶೇ ಸಮೀರ
ಸ್ಥಲೇ ಮಾಂತವರ್ಣೇನ ದೇದೀಪ್ಯಮಾನಂ
ಪ್ರಕಾಶಸ್ವರೂಪಂ ಸ್ಮರನ್ನೀಶ್ವರಂ ಯ
ಸ್ಸಖೇ ವಾಯುವತ್ಕ್ರಿಡತೀಶಪ್ರಭಾವಾತ್ ॥ ॥೪೧॥

ಗಳಾದೇಃ–ಕಂಠಾದಿಯತ್ತಣಿಂ ಮೇಲಾದ, ಭ್ರುವೋಃ–ಪುರ್ಬುಗಳ, ಮಧ್ಯದೇಶೇ–ಮಧ್ಯವೇ ನಿಯತಸ್ಥಾನಮಾಗುಳ್ಳಂಥ, ಸಮೀರಸ್ಥಲೇ–ಶಾಂತಿ ಕಲಾವ್ಯಾಪ್ತಮಾದ ಷೋಡಶಸ್ವರಂಗೂಡಿದ ಫಕಾರಾಂಬುಜಮಧ್ಯವರ್ತಿಯಾದ "ಷೋಡಶಸ್ವರಸಂಯುಕ್ತ ಫಕಾರಾಂಬುಜಮಧ್ಯಗಂ" ಎಂದುದಾಗಿ ಷಟ್ಕೋಣಾಕಾರಮಾದ ಸ್ಪರ್ಶಾದಿ ದ್ವಿಗುಣಾನ್ವಿತಮಾದ ವಾಯುತತ್ವಸ್ಥಾನದಲ್ಲಿ, ಮಾಂತವರ್ಣೇನ–ಮಕಾರಕ್ಕೆ ಕಡೆಯೆನಿಸುವ ಯಕಾರವೆಂಬಕ್ಷರದಿಂದೆ ಪ್ರಾಣವಾಯುಮಂ ಪೂರಕದಿಂ ಕುಂಭಿಸಿ, (ಆ ಮಧ್ಯದಲ್ಲಿ), ದೇದೀಪ್ಯಮಾನಂ–ದೀಪಿಸುತ್ತಿರ್ದಂಥ, ಪ್ರಕಾಶಸ್ವರೂಪಂ–ಬೈಂದವಪ್ರಕಾಶ ಸ್ವರೂಪನಾದಂಥ, ಈಶ್ವರಂ–ವರಾಭಯಂ ಮೃಗಟಂಕಂಗಳಿಂ ಕೂಡಿದ ಚತುರ್ಭುಜವುಳ್ಳ ಈಶ್ವರನನ್ನು, ಯಃ–ಯಾವಾತನು, ಸ್ಮರನ್–ಧ್ಯಾನಿಸುವನೋ, ಸಖೇ–ಎಲೈ ಸ್ನೇಹಿತನೇ, ಸಃ–ಅವನು, ಈಶಪ್ರಭಾವಾತ್–ಈಶ್ವರನ ಸಾಮರ್ಥ್ಯದತ್ತಣಿಂ, ವಾಯುವತ್–ವಾಯುವಿನಂತೆ ನಿರ್ಲೇಪಕನಾಗಿ, ಕ್ರೀಡತಿ–ವಿನೋದಿಸುತ್ತಿಹನು.

ಸೂ : ಅನಂತರದಲ್ಲಿ ಆಕಾಶತತ್ತ್ವಧಾರಣೆಯಂ ಪೇಳ್ದಪಂ –

ಆಭ್ರೂಮಧ್ಯಾಳಿಕಾಂತೇ ಪವನಮತಿದೃಢಂ ವ್ಯೋಮದೇಶೇ ಪ್ರಕುರ್ವನ್ ।
ಸೋಮಂ ಸೋಮಾರ್ಧಮೌಲಿಂ ದಶಕರಕಮಲಂ ಪಂಚ ವಕ್ತ್ರಂ ತ್ರಿಣೇತ್ರಂ
ಶ್ರೀಕಂಠಂ ಸಾಯುಧಂ ತಂ ಸಮಧಿಕವರದಂ ಸರ್ವತತ್ತ್ವಾದಿತತ್ತ್ವಂ ।
ಬಿಂದುವ್ಯೋಮಸ್ವರೂಪಂ ಶಿವಮಥ ಹಯುತಂ ಚಿಂತಯೇದ್ಯಸ್ಸಮುಕ್ತಃ ॥ ॥೪೨॥

ಅಥ–ಅನಂತರದಲ್ಲಿ, ಯಃ–ಯಾವನು, ಆಭ್ರೂಮಧ್ಯಾಳಿಕಾಂತೇ–ಭ್ರೂಮಧ್ಯಾದಿಯಾಗಿ ಲಲಾಟವೇ ಕಡೆಯಾದ ನಿಯತಸ್ಥಾನವಾಗುಳ್ಳಂಥ, ವ್ಯೋಮದೇಶೇ–ಶಾಂತ್ಯತೀತಕಲಾವ್ಯಾಪ್ತವಾದ ಷೋಡಶಸ್ವರಂಗೂಡಿದ ಓಂಕಾರಾಂಬುಜಮಧ್ಯವರ್ತಿಯಾದ "ಷೋಡಶಸ್ವರಸಂಯುಕ್ತ ಓಂಕಾರಂಬುಜಮಧ್ಯಗಂ" ಎಂದುದಾಗಿ ವರ್ತುಳಾಕಾರದಮಾದ ಶಬ್ದೈಕಗುಣಾನ್ವಿತಮಾದ ಆಕಾಶ ಸ್ಥಾನದಲ್ಲಿ, ಹಯುತಂ–ಹಕಾರವೆಂಬ ಬೀಜಾಕ್ಷರದಿಂ ಕೂಡಿರ್ದಂಥ, ಪವನಂ–ಪ್ರಾಣವಾಯುವನ್ನು, ಅತಿದೃಢಂ–ಗಾಢಕುಂಭಕವನ್ನಾಗಿ, ಪ್ರಕುರ್ವನ್–ಮಾಡುತ್ತಿರ್ದಂತಾತನಾಗಲು, ಸೋಮಂ–ಉಮಾಸಮೇತನಾದಂಥ, ಸೋಮಾರ್ಧಮೌಲಿಂ–ಅರ್ಧಚಂದ್ರನೇ ಮಸ್ತಕದಲ್ಲುಳ್ಳಂಥ, ದಶಕರಕಮಲಂ –ಕೆಂದಾವರೆಯಂತಿರ್ಪ ಹತ್ತು ಹಸ್ತಂಗಳುಳ್ಳಂಥ, ಪಂಚವಕ್ತ್ರಂ–ಐದು ಮುಖಂಗಳುಳ್ಳಂಥ, ತ್ರಿಣೇತ್ರಂ –ಮೂರು ನೇತ್ರಂಗಳುಳ್ಳಂಥ, ಶ್ರೀಕಂಠಂ–ವಿಷದಿಂದೊಪ್ಪುವ ಕೊರಳುಳ್ಳಂಥ, ಸಾಯುಧಂ–ಆಯುಧಂಗಳಿಂ ಕೂಡಿರ್ದಂಥ, ಸಮಧಿಕವರದಂ–ಅತಿ ವಿಶಿಷ್ಟವಾದ ವರಂಗಳಂ ಕೊಡುವಂಥ,

ಸರ್ವತತ್ತ್ವಾದಿತ್ತ್ವಂ-ಸಕಲತತ್ತ್ವಂಗಳಿಗೆ ಮೊದಲತತ್ತ್ವವಾಗಿರ್ಪಂಥ, ತಂ-ಆ ಪ್ರಸಿದ್ಧನಾದಂಥ, ಶಿವಂ-ಸದಾಶಿವನನ್ನು, ಯಃ-ಆವಾತನು, ಚಿಂತಯೇತ್-ಧ್ಯಾನಿಸುವನೋ, ಸಃ-ಆತನು, ಮುಕ್ತಃ-ಜೀವನ್ಮುಕ್ತನು.

●

ಸೂ : ಈ ಪ್ರಕಾರವಾದ ಧಾರಣಯೋಗಕ್ಕೆ ಕಾಲಭೇದಮಂ ಪೇಳುತ್ತ ಆ ಯೋಗಸಿದ್ಧಿಯಂ ಪೇಳ್ದಪಂ –

ಇತ್ಯೇವಂ ಧಾರಣಾಃ ಪಂಚ ಘಟಿಕಾಪಂಚಕಾನ್ವಿತಾಃ ।
ಏಕೈಕಾಂ ಧಾರಯೇದಾಭಿರ್ದೇಹಸಿದ್ಧೋ ಭವೇನ್ನರಃ ॥ ॥೪೩॥

ಇತಿ-ಈ ಪ್ರಕಾರದಿಂದ, ಪಂಚ-ಐದಾಗಿರ್ಪಂಥ, ಧಾರಣಾಃ-ಧಾರಣೆಗಳು, ಏವಂ-ಈ ಮಾರ್ಯದೆಯಲ್ಲಿ, ಕ್ರಮದಿಂದ, ಘಟಿಕಾಪಂಚಕಾನ್ವಿತಾಃ-ಗಳಿಗೆಗಳೈದರಿಂದ ಕೂಡಲ್ಪಟ್ಟಂಥ (ರೇಚಕಪೂರಕದಿಂ ಚರಿಸುವ ಪ್ರಾಣ ವಾಯುವು ಚಂದ್ರಸೂರ್ಯನಾಡಿಗಳಲ್ಲಿ ಐದೈದುಗಳಿಗೆ ಚರಿಸುವುದಾಗಿ ಕ್ರಮದಿಂದೈದು ಭೂತಂಗಳನ್ನು ಅವರವರಧಿದೇವತೆಗಳಂ ಆಯಾಯ ಸ್ಥಾನಗಳಲ್ಲಿ ಧ್ಯಾನಿಸಿ ಧರಿಸುವುದೆಂಬುದರ್ಥ), ಆಭಿಃ-ಈ ಧಾರಣೆಗಳಿಂದ ಯಾವನು, ಏಕೈಕಾಂ-ಒಂದೊಂದು ಭೂತಕ್ಕೆ ಒಂದೊಂದು ಗಳಿಗೆಯನ್ನು, ಧಾರಯೇತ್-ಧರಿಸುವನೋ ನರಃ-ಆ ಮನುಷ್ಯನು, ದೇಹಸಿದ್ಧಃ - ದೇಹಸಿದ್ಧಿಯುಳ್ಳಾತನು, ಭವೇತ್-ಆಗುವನು.

ಸೂ : ಪೂರ್ವಾಭ್ಯಾಸಯೋಗಿಗೆ ಈ ಧಾರಣಯೋಗದಿಂದ ಶೀಘ್ರದಿಂದಪ್ಪ ಫಲಮಂ ಪೇಳ್ದಪಂ-

ಏತಾಸು ಭೂಮ್ಯಾದಿಕಧಾರಣಾಸು
ನೃಣಾಂ ಸದಾ ಪ್ರಾಣನಿರೋಧನೇನ ।
ತ್ರಿದೋಷಜಾಸ್ಸರ್ವಪುರಾಣರೋಗಾಃ
ನಶ್ಯಂತಿ ಶೀಘ್ರಂ ನ ಚ ಸಂಶಯೋತ್ರ ॥ ॥೪೪॥

ನೃಣಾಂ-ಪುರುಷರ್ಗೆ, ಏತಾಸು-ಈ ಪೂರ್ವೋಕ್ತಂಗಳಾಗಿರ್ಪಂಥ, ಭೂಮ್ಯಾದಿಕಧಾರಣಾಸು-ಭೂಮಿ ಮೊದಲಾದ ಧಾರಣೆಗಳಲ್ಲಿ, ಸದಾ-ಅನವರತವು, ಪ್ರಾಣನಿರೋಧನೇನ-ಪ್ರಾಣವಾಯುವಂ ತಡೆವುದರಿಂದೆ, ತ್ರಿದೋಷಜಾಃ-ವಾತ ಪಿತ್ತ ಶ್ಲೇಷ್ಮವೆಂಬ ದೋಷತ್ರಯದಿಂ ಹುಟ್ಟಿದಂಥ, ಸರ್ವಪುರಾಣರೋಗಾಃ-ಸಮಸ್ತವಾದ ಚಿರಕಾಲ ವ್ಯಾಧಿಗಳು, ಶೀಘ್ರಂ-ಶೀಘ್ರದಲ್ಲಿ, ನಶ್ಯಂತಿ-ನಶಿಸುತ್ತವೆ. ಅತ್ರ-ಈ ವ್ಯಾಧಿನಾಶದಲ್ಲಿಯೂ, ಸಂಶಯಃ-ಸಂದೇಹವು, ನ-ಇಲ್ಲ.

●

ಸೂ : "ಅಜ್ಞಾತಸ್ಯ ಕರಣಾಸಂಭವಾತ್" ಎಂಬ ನ್ಯಾಯದಿಂದ ಅರಿಯದಾತಂಗೆ ಆ ಯೋಗಾಭ್ಯಾಸಮಂ ಫಲಿಸದಾಗಿ ಜ್ಞಾನಕ್ರಿಯಾಸಮ್ಮೇಳನದಿಂದ ಅಭ್ಯಾಸಮಂ ಮಾಳ್ಪರಿಗೆ ಮೋಕ್ಷಸಿದ್ಧಿಯಪ್ಪುದೆಂದು ಪೇಳ್ದಪಂ-

ಜ್ಞಾನೇನ ಕರ್ಮಣಾ ಪಂಚಧಾರಣಾ ಯೋಗಿಭಿರ್ಧೃತಾಃ ।

ಸದಾಭ್ಯಾಸರತಾ ಯೈಸ್ತೇ ತರಂತಿ ಭವಸಾಗರಂ ॥ ॥೪೫॥

ಯೈಃಯೋಗಿಭಿಃ–ಆರು ಕೆಲಯೋಗೀಶ್ವರರಿಂದೆ, ಜ್ಞಾನೇನ–ಅರಿವಿನಿಂದಲೂ, ಕರ್ಮಣಾ–ಅಭ್ಯಾಸಕ್ರಿಯೆಯಿಂದಲೂ, ಪಂಚ–ಐದು ಪ್ರಕಾರವಾದ, ಧಾರಣಾಃ–ಧಾರಣೆಗಳು, ಧೃತಾಃ–ಧರಿಸಲ್ಪಟ್ಟವು. ಸದಾಭ್ಯಾಸರತಾಃ–ಲೇಸಾದ ಧಾರಣಾಭ್ಯಾಸದಲ್ಲಿ ಪ್ರೀತರಾಗಿರ್ಪಂಥ, ತೇ–ಆ ಯೋಗಿಗಳು, ಭವಸಾಗರಂ –ಸಂಸಾರ ಶರಧಿಯನ್ನು, ತರಂತಿ–ದಾಟುತ್ತಿಹರು, ಇತಿ ಧಾರಣಯೋಗಃ.

●

ಸೂ : ಈ ಧಾರಣಯೋಗಾನಂತರದಲ್ಲಿ ನಿರಾಲಂಬವಾದ ಪರವಸ್ತುವಿನಲ್ಲಿ ಅಹಂಭಾವವಳಿದ ಆತ್ಮಾರ್ಪಣವಾದ ಸಮಾಧಿಯೇ ನೈವೇದ್ಯ[೧]ರೂಪ[೧]ವೆಂದು ಪೇಳುತ್ತಿರ್ದಪಂ–

ಸುಜ್ಞಾನದೀಪೈಸ್ಸುಧಿಯಾಽವಲಂಬ

ಹೃದಾಲಯೇ ತ್ವಂ ಮನಸಾವಲೋಕ್ಯ ।

ಸ್ವಾತ್ಮೋಪಹಾರಂ ಪರಮಾತ್ಮಲಿಂಗಂ

ಸಮಾಧಿನಾಽಸ್ಮೈ ವಿನಿವೇದಯಸ್ವ ॥ ॥೪೬॥

(ಎಲೈ ಮುಮುಕ್ಷುವಾದಾತನೇ), ತ್ವಂ–ನೀನು, ಹೃದಾಲಯೇ–ಬಿಂದುವೆಂಬ ಹೃದಯಸ್ಥಾನದಲ್ಲಿ, ಪರಮಾತ್ಮಲಿಂಗಂ–ಕ್ರಿಯಾಶಕ್ತಿಯೇ ಪೀಠವಾಗುಳ್ಳ ಜ್ಞಾನಶಕ್ತಿರೂಪವಾದ ಲಿಂಗವನ್ನು, ಸುಧಿಯಾ–ಅಧರ್ಮ ಅಜ್ಞಾನಾದಿ ವಾಸನೆಯಿಂ ತೊಲಗಿದ ಸುಬುದ್ಧಿಯಿಂದೆ, ಅವಲಂಬ್ಯ–ನಿಶ್ಚೈಸಿ, ಸುಜ್ಞಾನದೀಪೈಃ –ಸವಿಕಲ್ಪರೂಪದಿಂ ಮರಳಿಮರಳಿ ಅರಿವ ಸುಜ್ಞಾನಂಗಳೆಂಬ ದೀಪಂಗಳೊಡನೆ, ಮನಸಾ–ಮನರೂಪವಾದ ಆತ್ಮಚೈತನ್ಯದಿಂದ, ಅವಲೋಕ್ಯ–ಕಂಡು, ಅಸ್ಮೈ–ಈ ಪರಮಾತ್ಮಲಿಂಗಕ್ಕೋಸ್ಕರ, ಸಮಾಧಿನಾ–ಕ್ಷೀರ ಕ್ಷೀರದಂತೆ ಸಮರಸಭಾವದಿಂದೆ ಬೆರಸುವ ಸಮಾಧಿಯೋಗದಿಂದೆ, ಸ್ವಾತ್ಮೋಪಹಾರಂ –ಆತ್ಮನೈವೇದ್ಯವನ್ನು ನಿವೇದಯಸ್ವ–ಮರಳಿ ಜೀವಭಾವವಾಗದ ವಿಶೇಷದಿಂ ಸಮರ್ಪಿಸುವುದು.

ತಾತ್ಪರ್ಯ : ಪರಮ ವಿವೇಕಿಯಾದನು ಪಾಕಾದಿಕದಿಂ ಶುದ್ಧವಾದ ಪವಿತ್ರಾನ್ನಮಂ ಮರಳಿ ಭಸ್ಮಮಂತ್ರಾದಿಕದಿಂ ಶುದ್ಧಮಂ ಮಾಡಿ ಸ್ವೀಕರಿಸುವಂತೆ, ಪರಶಿವ ದೀಕ್ಷೆಯಿಂ ಶುದ್ಧನಾದಾತನಂ ಮರಳಿ ದೀಕ್ಷೋತ್ತರಮಾದ ಚರ್ಯಾಯೋಗಂಗಳಿಂ ಶುದ್ಧನಂ ಮಾಡಿ ಸ್ವೀಕರಿಸುವಾತನಾಗಿ,

ಹೃದಯಂ ಬಿಂದುಪೀಠಂ ಸ್ಯಾತ್ಪಶ್ಯಂತ್ಯಾಖ್ಯಂ ವರಾನನೇ ।

ಜೀವಾತ್ಮ ಪರಮಾತ್ಮಾ ಚ ವರ್ತತೇ ತತ್ರ ಸಂತತಂ ॥

ಎಂಬ ಆಗಮಪ್ರಮಾಣದಿಂ ಬಿಂದುವೆಂಬ ಹೃದಯಪೀಠದ ಲಿಂಗಕ್ಕೆ ಆತ್ಮ ನೈವೇದ್ಯಮಂ ಮಾಳ್ಪುದೇ ಸಮಾಧಿಯೋಗಮೆಂಬುದಭಿಪ್ರಾಯಂ.

●

೧–೧ x (ಕ).

ಸೂ : ಈ ಶಿವಾತ್ಮರಂಗಳ ಸಾಮರಸ್ಯರೂಪಮಾದ ಸಮಾಧಿಯೋಗವನೇ ದೃಷ್ಟಾಂತಪೂರ್ವಕದಿಂ ಪೇಳುತ್ತಿರ್ದಪಂ–

ಜಲಸೈಂಧವಯೋರ್ಯಥೈಕ್ಯಯೋಗಾ
ದ್ಭವತೀಹಾಪಿ ತಥಾಹಿ ಸಾಮರಸ್ಯಂ ।
ಮನಸಶ್ಚ ಸದಾತ್ಮನಶ್ಚ ಯೋಗಾತ್
ಸಸಮಾಧೀರಿತಿ ಕಥ್ಯತೇ ಯಮೀಂದ್ರೈಃ ॥ ॥೪೭॥

ಜಲಸೈಂಧವಯೋಃ–ಸಲಿಲ ಲವಣಂಗಳಿಗೆ, ಐಕ್ಯಯೋಗಾತ್–ಕೇವಲಮಾದ ಯೋಗದ ದೆಸೆಯಿಂದೆ, ಯಥಾ–ಹೇಂಗೆ, ಸಾಮರಸ್ಯಂ–ಸಾಮರಸ್ಯವು, ಭವತಿ–ಆಗುತ್ತಿದ್ದಿತು. ಇಹಾಪಿ–ಈ ಯೋಗಮಾರ್ಗದಲ್ಲಿಯೂ, ಮನಸಶ್ಚ–ಆತ್ಮ ಚೈತನ್ಯಕ್ಕೂ, ಸದಾತ್ಮನಶ್ಚ–ಪರಮಾತ್ಮನಿಗೂ, ಯೋಗಾತ್ –ಯೋಗದ ದೆಸೆಯಿಂದೆ, ಸಾಮರಸ್ಯಂ–ಸಮರಸಭಾವವು, ತಥಾಹಿ–ಹಾಗೆ[೧]ಯೇ[೧], ಸ ತು–ಆ ಸಮರಸಯೋಗವಾಯಿತ್ತಾದರೆ, ಯಮೀಂದ್ರೈಃ–ಯೋಗೀಶ್ವರರಿಂದೆ, ಸಮಾಧಿರಿತಿ–ಸಮಾಧಿಯೆಂದು, ಕಥ್ಯತೇ–ಹೇಳಲ್ಪಡುತ್ತಿದ್ದಿತು.

ತಾತ್ಪರ್ಯ : ಪ್ರಕೃತಿಜನ್ಯಮಾದ ಮನಸ್ಸು ಅಚೇತನಮಪ್ಪುದರಿಂ ಪರಮಾತ್ಮನೊಡನೆ ಸಾಮರಸ್ಯವಾಗದಾಗಿ ಮನಶ್ಯಬ್ದಕ್ಕೆ ಆತ್ಮಚೈತನ್ಯವೇ ಅರ್ಥವೆಂಬುದಭಿಪ್ರಾಯ.

●

ಸೂ : ಪರಮುಕ್ತಿಜೀವನ್ಮುಕ್ತಿಗಳೊಳಗೆ ಆವ ಅವಸ್ಥೆಯಲ್ಲಾದರೂ ಆಕಾಶ ಪ್ರಕಾಶಯೋಗದಂತೆ ಜೀವಪರಮರ ಸಾಮರಸ್ಯವೇ ಸಮಾಧ್ಯವಸ್ಥೆಯೆಂದು ಪೇಳ್ದಪಂ–

ಯದಾ ಭವತಿ ಚೈಕತ್ವಂ ಜೀವಾತ್ಮಪರಮಾತ್ಮನೋಃ ।
ತದಾ ಸಮಾಧ್ಯವಸ್ಥಾಂ ತಾಂ ಗಮಿಷ್ಯಂತಿ ಯಮೀಶ್ವರಾಃ ॥ ॥೪೮॥

ಯದಾ–ಆವ ಕಾಲದಲ್ಲಿ, ಜೀವಾತ್ಮಪರಮಾತ್ಮನೋಃ–ಧ್ಯಾತೃ ಧ್ಯೇಯ ರೂಪಮಾದ ಜೀವಪರಮರುಗಳಿಗೆ, ಏಕತ್ವಂ–ನಿರುಪಾಧಿಕಮಾದ ಕೈವಲ್ಯವು, ಭವತಿ–ಆಗುತ್ತಿದ್ದಿತು. ತದಾ–ಆ ಕಾಲದಲ್ಲಿ, ಯಮೀಶ್ವರಾಃ–ಯೋಗೀಶ್ವರರು, ತಾಂ–ಆ ಪೂರ್ವೋದಿತಮಾಗಿರ್ಪಂಥ, ಸಮಾಧ್ಯವಸ್ಥಾಂ–ಸಮಾಧಿಯೋಗದವಸ್ಥೆಯನು, ಗಮಿಷ್ಯಂತಿ–ಎಯ್ದುವರು.

ತಾತ್ಪರ್ಯ : ಇಲ್ಲಿಯ ಏಕಶಬ್ದಕ್ಕೆ ಏಕರಸತ್ವಮಂ ಪೇಳಲು ಅಚೇತನಮಪ್ಪುದಾಗಿ ಕೈವಲ್ಯವೇ ಅರ್ಥವೆಂಬುದಭಿಪ್ರಾಯಂ.

●

೧–೧ ಅಹುದು (ಕ).

ಸೂ : "ದ್ವಿಧಾ ಸಮಾಧಿರಾಖ್ಯಾತೋ ಜ್ಞಾತಾಜ್ಞಾತಪ್ರಭೇದತಃ" ಎಂದುದಾಗಿ ಈ ಸಮಾಧಿಯೇ ಜ್ಞಾತಸಮಾಧಿಯೆಂದು ಅಜ್ಞಾತಸಮಾಧಿಯೆಂದು ಎರಡು ಪ್ರಕಾರಮಪ್ಪುದಾಗಿ ಮೊದಲಲ್ಲಿ ಅಜ್ಞಾತಸಮಾಧಿಯ ಸ್ವರೂಪಮಂ ಪೇಳ್ದಪಂ-

ಶ್ರೋತ್ರಾದೀನಿ ನ ಚೇಂದ್ರಿಯಾಣಿ ವಿಷಯಾಶ್ಶಬ್ದಾದಯೋಹಂಮನೋ
ವೃತ್ತಿರ್ಲೇಶಸಖಾಸುಖಾನಿ ಚ ತಥಾ ಮನಾವಮಾನಾವಪಿ ।
ಶೀತೋಷ್ಣಾನಿ ನ ಪುಣ್ಯಪಾಪಸುಮಹಾಸಂಕಲ್ಪಜಾಲಾನ್ಯಹೋ
ನೈವಾನೇನ ಸಮಾಧಿನಾ ಸಹ ಮುನೌ ಲೀನೇ ಪರಬ್ರಹ್ಮಣಿ ॥ ॥೪೯॥

ಪ್ರರಬ್ರಹ್ಮಣಿ-ಪರಮಾತ್ಮನಲ್ಲಿ, ಮುನೌ-ಯೋಗೀಶ್ವರನು, ಅತೇನ-ಈ, ಸಮಾಧಿನಾ-ಸಮಾಧಿಯೋಗದಿಂದ, ಸಹ-ಕೂಡಿ, ಲೀನೇ-ಸಾಮರಸ್ಯವನೈದಲಾಗಿ, ಶ್ರೋತ್ರಾದೀನಿ-ಶ್ರೋತ್ರ ಮೊದಲಾಗಿರ್ದಂಥ, ಇಂದ್ರಿಯಾಣಿ-ದಶವಿಧಮಾದಿಂದ್ರಿಯಂಗಳು, ನ-ಇಲ್ಲ, ಶಬ್ದಾದಯಃ-ಶಬ್ದ ಮೊದಲಾದಂಥ, ವಿಷಯಾಃ-ವಿಷಯಗಳು, ನ-ಇಲ್ಲ, ಅಹಂಮನೋವೃತ್ತಿಃ-ಅಹಂಕಾರ, ಮನೋವರ್ತನೆಗಳು, ನ-ಇಲ್ಲ, ಲೇಶಸುಖಾಸುಖಾನಿ ಚ-ಬುದ್ಧಿಭೇದದಿಂ ಕ್ಷಣಿಕಂಗಳಾದ ಸುಖದುಃಖಂಗಳು, ನ-ಇಲ್ಲ, ತಥಾ-ಹಾಂಗೆ, ಮಾನಾವಮಾನಾವಪಿ-ಪೂಜ್ಯತ್ವಾಪೂಜ್ಯತ್ವಂಗಳು, ನ -ಇಲ್ಲ, ಶೀತೋಷ್ಣಾನಿ-ಶೀತೋಷ್ಣಾದಿಗಳು ನ-ಇಲ್ಲ, ಪುಣ್ಯಪಾಪಸುಮಹಾಸಂಕಲ್ಪಜಾಲಾಡಿ-ಪುಣ್ಯಕರ್ಮಂಗಳಂ ಮಾಡಬೇಕೆಂಬ ಪಾಪಕರ್ಮಂಗಳಂ ಕಳೆಯಬೇಕೆಂಬ ಮಹಾಸಂಕಲ್ಪ ಸಮೂಹಂಗಳು,

ತಾತ್ಪರ್ಯ : **ನ ಶೃಣೋತಿ ನ ಚಾಘ್ರಾತಿ ನ ರಸ್ಯತಿ ನ ಪಶ್ಯತಿ**
ನ ಚ ಸ್ಪೃಶ್ಯಂ ವಿಜಾನಾತಿ ನ ಚ ಸಂಕಲ್ಪತೇ ಮನಃ ।
ನ ಚಾಭಿಮನ್ಯತೇ ಕಿಂಚಿನ್ನ ಚ ಬುಧ್ಯತಿ ಕಾಷ್ಠವತ್
ಧ್ಯೇಯೇ ಶಿವೇ ಯಥಾ ಲೀನೋ ಧ್ಯಾತಾ ತಿಷ್ಠತ್ಯಭೇದತಃ ॥

ಎಂದುದಾಗಿ,

●

ಸೂ : ಅನಂತರದಲ್ಲಿ ಜ್ಞಾತಸಮಾಧಿಸ್ಥನಾದ ಯೋಗೀಶ್ವರನು ಬಾಹ್ಯಾಂತಃಕರಣಗಳ ಚೇಷ್ಟಾಚೇಷ್ಟೆಗಳಲ್ಲಿ ಸಾಕ್ಷಿಕತ್ವದಿಂ ನಿರ್ಲೇಪನೆಂಬುದಂ ಪೇಳ್ದಪಂ-

ಯುಕ್ತಾಹಾರೋ ಯಮೀಂದ್ರೋ ನಿರಶನಪರೋ ವಾಥವಾ ಯುಕ್ತನಿದ್ರೋ
ನಿದ್ರಾತ್ಯಕ್ತೋ ಗುಹಾಯಾಂ ವಸತಿ ವಿಚರತಿ ಕ್ಷ್ಮಾತಲೇ ನಿಸ್ಪೃಹಾತ್ಮಾ ।
ನಾನಾಕರ್ಮಕ್ರಿಯಾಸು ಪ್ರಥಿತಕುಶಲಯುಕ್ತೋಽಪಿ ವಾ ನಿಷ್ಕ್ರಿಯೋ ವಾ
ನಾನಾಚೇಷ್ಟಾಸ್ವಜಸ್ರಂ ವಿಹರತಿ ಚ ಸಮಾಧೌ ಸಮಾಸಕ್ತ ಚೇತಾಃ ॥ ॥೫೦॥

ಯಮೀಂದ್ರ–ಯೋಗೀಶ್ವರನು, ಯುಕ್ತಾಹಾರಃ–ಸಮುಚಿತ ಆಹಾರವುಳ್ಳಾತನಾದರೂ ಅಥವಾ ಹಾಂಗಲ್ಲದಿರ್ದೊಡೆ, ನಿರಶನಪರೋ ವಾ–ನಿರಾಹಾರದಲ್ಲಿ ತತ್ಪರನಾದರೂ, ಯುಕ್ತನಿದ್ರಃ–ಕೊಡಲ್ಪಟ್ಟ ನಿದ್ರೆಯುಳ್ಳಾತನಾದರೂ, ನಿದ್ರಾತ್ಯಕ್ತ–ನಿದ್ರೆಯಂ ಬಿಟ್ಟವನಾದರೂ, ನಿಸ್ಪೃಹಾತ್ಮಾ–ವೀತರಾಗನನಾಗಿ, ಗುಹಾಯಾಂ–ಗುಹೆಯಲ್ಲಿಯಾದರೂ, ವಸತಿ–ಇರುತ್ತಿಹನು, ಕ್ಷ್ಮಾತಲೇ–ಭೂತಳದಲ್ಲಾದರೂ, ವಿಚರತಿ –ಚರಿಸುತ್ತಿಹನು, ನಾನಾಕರ್ಮಕ್ರಿಯಾಸು–ನಾನಾಪ್ರಕಾರವಾದ ಕರ್ಷಣ ವಶೀಕರಣಾದಿ ಕರ್ಮಂಗಳ ವ್ಯಾಪರಂಗಳಲ್ಲಿ, ಪ್ರಥಿತಕುಶಲಯುಕ್ತೋಽಪಿ ವಾ–ಪ್ರಸಿದ್ಧವಾದ ಕೌಶಲ್ಯದಿಂ ಕೂಡಿದಾತನಾದರೂ. ನಿಷ್ಕ್ರಿಯೋವಾ–ಆ ವ್ಯಾಪಾರಂಗಳು ಬಿಟ್ಟವನಾದರು, ನಾನಾಚೇಷ್ಟಾಸು–ನಾನಾವ್ಯಾಪಾರಂಗಳಲ್ಲಿ, ಅಜಸ್ರಂ –ಅನವರತವು, ಸಮಾಧೌ–ಶಿವಸಾಮರಸ್ಯದಲ್ಲಿ, ಸಮಾಸಕ್ತಚೇತಾಃ–ಮುಳಗಿದ ಚಿತ್ತವುಳ್ಳಾತನಾಗಿ, ವಿಹರತಿ –ಕ್ರೀಡಿಸುತ್ತಿಹನು.

ತಾತ್ಪರ್ಯ : **ಚಿದಾನಂದರಸೋಲ್ಲಾಸಪರಿಪೂರ್ಣದಿಗಂತರಃ**

ಚಿದಾನಂದರಸಜ್ಞಶ್ಚ ಯಥಾಸ್ತೇ ರುದ್ಧಮಾರುತಃ ॥

ಸಪ್ರಜ್ಞಾತ್ತಸಸಮಾಧಿಸ್ಸ್ಯಾದ್ಧ್ಯಾನದ್ವಾದಶಕಾವಧಿ ।

ಎಂದುದಾಗಿ,

ಪುಂಖಾನುಪುಂಖವಿಷಯೇಕ್ಷಣತತ್ಪರೋಽಪಿ ।

ಬ್ರಹ್ಮಾವಲೋಕನನಿರೂಢಮನಾಶ್ಚಯೋಗೀ ॥

ಎಂಬ ಯೋಗಶಾಸ್ತ್ರಪ್ರಮಾಣದಿಂ ಪರಾನುಗ್ರಹಾರ್ಥಮಾಗಿ ಭೋಗಿಯಾದರೂ, ಜೀವನ್ಮುಕ್ತನಪ್ಪುದರಿಂ ನಿರ್ಲೇಪನೆಂಬುದಭಿಪ್ರಾಯಂ.

●

ಸೂ : ಈ ಪ್ರಕಾರದಿಂದೆ ಅಷ್ಟಾಂಗಯೋಗಾಭ್ಯಾಸಸಂಪನ್ನನಾದ ಯೋಗೀಶ್ವರಂಗೆ ಆಗುವ ಸಿದ್ಧಿಗಳಂ ಪೇಳ್ದೆನೆಂದು ಪೇಳ್ದಪಂ –

ಏವಮಷ್ಟಾಂಗಯೋಗೇನ ಹಠೇನಾನೇನ ನೈಷ್ಠಿಕಃ ।

ಅನಾಲಸ್ಯಕೃತಾಭ್ಯಾಸಸ್ಸಿದ್ಧೀರ್‍ಯಶ್ಶೃಣು ತಸ್ಯತಾಃ ॥ ॥೫೧॥

ಯಃ–ಆವನೋರ್ವ ಯೋಗಿಯು, ನೈಷ್ಠಿಕಃ–[೧]ದೇಹಾಂತವಾಗಿ[೧] ಯೋಗಾಭ್ಯಾಸ ನಿಷ್ಠನಾದಾತನು (ಭೌತಿಕನೋಪಾದಿಯಲ್ಲಿ ಕಾಮಿತಫಲಮಂ ಪಡೆದು, ಮಧ್ಯದಲ್ಲಿ ಯೋಗಾಭ್ಯಾಸಮಂ ಬಿಡುವಾತನಲ್ಲವೆಂಬುದಭಿಪ್ರಾಯಂ), ಏವಂ–ಈ ಪ್ರಕಾರವಾದ, ಹಠೇನ–ಹಠರೂಪವಾಗಿರುವ, ಅನೇನ –ಈ, ಅಷ್ಟಾಂಗಯೋಗೇನ–ಅಷ್ಟಾಂಗಯೋಗದಿಂದ, ಅನಾಲಸ್ಯಕೃತಾಭ್ಯಾಸಃ–ನಿರಾಲಸ್ಯದಿಂ ಕೂಡಿದ ಅಭ್ಯಾಸವುಳ್ಳಾತನಾಗುವನೋ, ತಸ್ಯ–ಅವನಿಗೆ, ತಾಃ–ಆ ಲೋಕಪ್ರಸಿದ್ಧಗಳಾದಂಥ, ಸಿದ್ಧೀಃ–ಸಿದ್ಧಿಗಳನ್ನು, ಶೃಣು–ಕೇಳು.

೧–೧ x (ಮೈ).

ಸೂ : ಆ ಸಿದ್ಧಿಗಳಂ ಐದು ಶ್ಲೋಕಂಗಳಿಂ ಪೇಳ್ದಪಂ–

ಪ್ರಥಮೇ ಹತರುಕ್ಷ ಸರ್ವಲೋಕಪ್ರಿಯ ಏವಾಥ ಸವತ್ಸರೇ ದ್ವಿತೀಯೇ ।

ಕವಿತಾಂ ಕುರುತೇ ಸುಪರ್ವವಾಣ್ಯಾ ಭುಜಗಾದ್ಯೈರ್ನ ಚ ಬಾಧ್ಯತೇ ತೃತೀಯೇ॥ ॥೫೨॥

ಸಃ–ಆ ಯೋಗಾಭ್ಯಾಸಮಂ ಮಾಡುವಾತನು, ಪ್ರಥಮೇ–ಮೊದಲಾದ, ವತ್ಸರೇ–ವರ್ಷದಲ್ಲಿ, ಹತರುಕ್ಷ–ರೋಗವಿಲ್ಲದಾತನಾಗಿ, ಸರ್ವಲೋಕಪ್ರಿಯ ಏವ–ಸಕಲಜನಕ್ಕೆ ಪ್ರೀತನೇ ಆಗುವನು, ಅಥ–ಅನಂತರದಲ್ಲಿ, ದ್ವಿತೀಯೇ–ಎರಡನೆಯ ವರ್ಷದಲ್ಲಿ, ಸಂಪರ್ವವಾಣ್ಯಾ–ಸಂಸ್ಕೃತಭಾಷೆಯಿಂ, ಕವಿತಾಂ–ಕವಿತ್ವವನ್ನು ಕುರುತೇ–ಮಾಡುತ್ತಿಹನು, ತೃತೀಯೇ–ಮೂರನೆಯ ವರ್ಷದಲ್ಲಿ, ಭುಜಗಾದ್ಯೈಃ– ಸರ್ಪ ಮೊದಲಾದ ದುಷ್ಟಪ್ರಾಣಿಗಳಿಂದೆ, ನ ಚ ಬಾಧ್ಯತೇ–ಬಾಧಿಸಲ್ಪಡದಿಹನು.

ಚತುರ್ಥಕೇನಾತುರಹಾ ಪಿಪಾಸಾನಿದ್ರಾದಿಶೀತಾತಾವರ್ಜಿ ತಸ್ಸ್ಯಾತ್ ।

ದೂರಶ್ರವಃ ಪಂಚಮವತ್ಸರೇ ವಾಕ್ಸಿದ್ಧಿಃ ಪರೇಷಾಂ ತನುಷು ಪ್ರವೇಶಃ॥ ॥೫೩॥

ಚತುರ್ಥಕೇನ–ನಾಲ್ಕನೆಯ ವತ್ಸರದಲ್ಲಿ, ಆತುರಹಾ–ವ್ಯಾಕುಲಮಂ ಕೆಡಿಸುವನಾಗಿ, ಪಿಪಾಸಾನಿದ್ರಾದಿಶೀತಾತಪವರ್ಜಿತಃ–ತೃಷೆ ನಿದ್ರೆ (ಆದಿಶಬ್ದದಿಂ ಪಸಿವು, ಶೋಕಾದಿಕವು) ಶೀತಾತಪಂಗಳೆಂಬವರಿಂದ ತೊಲಗಲ್ಪಟ್ಟಾತನು, ಸ್ಯಾತ್–ಆಗುವನು. ಪಂಚವತ್ಸರೇ–ಐದನೆಯ ವರ್ಷದಲ್ಲಿ, ದೂರಶ್ರವಃ–ದೂರಶ್ರವಣವು, ವಾಕ್ಸಿದ್ಧಿಃ–ವಾಕ್ಸಿದ್ಧಿಯು, ಪರೇಷಾಂ ತನುಷು ಪ್ರವೇಶಃ– ಪರಕಾಯ ಪ್ರವೇಶವಹುದು.

ಷಷ್ಠೇ ಸ ವಜ್ರೈರಪಿ ನೈವ ಭಿದ್ಯತೇ ತತೋಽತಿವೇಗೀ ಚ ಸುದೂರದರ್ಶನಃ ।

ತ್ಯಜೇದ್ಭುವಂ ಸಪ್ತಮವತ್ಸರೇಽಷ್ಟಧಾ ವಿಭೂತಯಶ್ಚಾಥ ಭವೇಯು ರಷ್ಟಮೇ॥ ॥೫೪॥

ಸಃ–ಆ ಯೋಗೀಶ್ವರನು, ಷಷ್ಠೇ–ಆರನೆಯ ಸಂವತ್ಸರದಲ್ಲಿ, ವಜ್ರೈರಪಿ–ವಜ್ರಮಂಗಳಿಂದೆಯೂ, ನ ಭಿದ್ಯತಏವ–ಭೇದಿಸಲ್ಪಡದಿಹನು, ತತಃ–ಅನಂತರದಲ್ಲಿ, ಅತಿವೇಗೀ ಚ–ಅತ್ಯಂತ ವೇಗವುಳ್ಳಾತನಾಗಿ, ಸುದೂರದರ್ಶನಃ–ಲೋಕಾಂತರಗಳಲ್ಲಿಯ ವಸ್ತುಗಳಂ ಕಾಣುವ ದೂರದೃಷ್ಟಿಯುಳ್ಳಾತನಾಗುವನು, ಸಪ್ತಮವತ್ಸರೇ–ಏಳನೆಯ ವರ್ಷದಲ್ಲಿ, ಭುವಂ–ಭೂಮಿಯನ್ನು, ತ್ಯಜೇತ್–ಬಿಡುವನು (ಖೇಚರತ್ವಸಿದ್ಧಿಯಹುದೆಂಬುದರ್ಥ). ಅಥ–ಅನಂತರದಲ್ಲಿ, ಅಷ್ಟಮೇ–ಎಂಟನೆಯ ವರ್ಷದಲ್ಲಿ, ಅಷ್ಟಧಾ –ಅಣಿಮಾದಿ ರೂಪದಿಂದೆಂಟು ಪ್ರಕಾರಮಾದ, ವಿಭೂತಯಶ್ಚ–ಐಶ್ವರ್ಯಗಳು, ಭವೇಯುಃ– ಆಗುವವು.

ಗಗನಚರೋ ದಿಗ್ವಿಚರೋ ನವಮೇಽಬ್ದೇ ವಜ್ರಕಾಯಸ್ಸ್ಯಾತ್ ।

ಸ ಮನೋವೇಗೀ ದಶಮೇ ಯತ್ರೇಚ್ಛಾ ತತ್ರ ಗಚ್ಛತಿ ಹಿ॥ ॥೫೫॥

ನವಮೇ–ಒಂಬತ್ತನೆಯ, ಅಬ್ದೇ–ವರ್ಷದಲ್ಲಿ, ಯಸ್ತು–ಯಾವ ಯೋಗೀಶ್ವರನು, ಗಗನಚರಃ –ಆಕಾಶದಲ್ಲಿ ಚರಿಸುವಾತನಾಗಿ, ದಿಗ್ವಿಚರಃ–ದಿಕ್ಕುಗಳಲ್ಲಿ ಚರಿಸುವಾತನಾಗಿ, ವಜ್ರಕಾಯಃ– ವಜ್ರಶರೀರಿಯು, ಸ್ಯಾತ್–ಆಗುವನೋ, ಸಃ–ಆತನು, ದಶಮೇ–ಹತ್ತನೆಯ ವರ್ಷದಲ್ಲಿ, ಮನೋವೇಗೀ–ಮನೋವೇಗವುಳ್ಳಾತನಾಗಿ, ಯತ್ರ–ಯಾವ ಸ್ಥಲದಲ್ಲಿ, ಇಚ್ಛಾ–ಎಯ್ದುವ ಇಚ್ಛೆಯುಂಟೋ, ತತ್ರ–ಅಲ್ಲಿ, ಗಚ್ಛತಿಹಿ–ಎಯ್ದುತ್ತಿಹನು.

ಏಕಾದಶಕೇ ವರ್ಷೇ ಸರ್ವಾಜ್ಞಾಸಿದ್ಧಿಮಾನ್ಭವೇದ್ಯೋಗೀ ।

ದ್ವಾದಶಕೇ ಶಿವತುಲ್ಯೋ ಹರ್ತಾ ಕರ್ತಾ ಸ್ವಯಂ ಭವತಿ ॥ ॥೫೬॥

ಏಕಾದಶಕೇ-ಹನ್ನೊಂದನೆಯದಾದ, ವರ್ಷೇ-ವರ್ಷದಲ್ಲಿ, ಯೋಗೀ-ಯೋಗೀಶ್ವರನು, ಸರ್ವಾಜ್ಞಾಸಿದ್ಧಿಮಾನ್-ಸರ್ವಲೋಕಂಗಳಲ್ಲಿ, ಆಜ್ಞಾಸಿದ್ಧಿಮಾನ್-ಆಜ್ಞಾಸಿದ್ಧಿಯುಳ್ಳಾತನು, ಭವೇತ್-ಆಗುವನು, ದ್ವಾದಶಕೇ-ಹನ್ನೆರಡನೆಯ ವರ್ಷದಲ್ಲಿ, ಶಿವತುಲ್ಯಃ-ಶಿವಸಮಾನನಾಗಿ, ಸ್ವಯಂ-ತಾನೇ, ಹರ್ತಾ-ಸಂಹರಿಸುವಾತನು, ಕರ್ತಾ-ಸೃಷ್ಟಿ ಮಾಡುವಾತನು, ಭವತಿ-ಆಗುತ್ತಿಹನು.

●

ಸೂ : ಗುರುಭಕ್ತಿಯಿಂ ನಿರ್ವಿಘ್ನವಾದ ಅಭ್ಯಾಸದಿಂ ಯೋಗಸಿದ್ಧನಪ್ಪನೆಂದು ಪೇಳ್ದಪಂ-

ದ್ವಾದಶವರ್ಷೈರೇವಂ ಸದ್ಗುರುನಾಥಸ್ಯ ಪಾದಯೋರ್ಭಕ್ತ್ಯಾ ।

ನಿರ್ವಿಘ್ನೇನ ದೃಢಾತ್ಮ ಸಿದ್ಧೋ ಭವತೀತಿ ಸಂಸಿದ್ಧಂ ॥ ॥೫೭॥

ಏವಂ-ಈ ಪೂರ್ವೋಕ್ತಪ್ರಕಾರದಿಂದ, ಸದ್ಗುರುನಾಥಸ್ಯ-ಶ್ರೀಗುರುಸ್ವಾಮಿಯ, ಪಾದಯೋಃ-ಪಾದಂಗಳಲ್ಲಿಯ, ಭಕ್ತ್ಯಾ-ಭಕ್ತಿಯಿಂದ, ದ್ವಾದಶವರ್ಷೈಃ-ಹನ್ನೆರಡು ವರ್ಷಗಳಿಂದ, ನಿರ್ವಿಘ್ನೇನ-ವಿಘ್ನವಿಲ್ಲದೆ ಇಹುದರಿಂದ (ವಿಘ್ನಗಳಾವಾವೆಂದೊಡೆ-ಅತ್ಯುಷ್ಣಂ ಅತಿಲವಣಂ ಅತ್ಯಾಮ್ಲಂ ಅತಿಕಟು [1]ಅಪವಿತ್ರಾತ್ಯಾಹಾರದಿಂ[1] ತಿಲತೈಲಪಿಣ್ಯಾಕ ಸರ್ಷಪ ಲಶುನ ಮೂಲಕಂದ ಬದರೀಫಲಾದಿಗಳಿ ದುರ್ಜನಸಂಗ ಸ್ತ್ರೀಸಂಗ ವಹ್ನಿಸಂಗ ದೇಶಪರ್ಯಟನಾದಿಕಂಗಳಿಂ ಸ್ನಾನೋಪವಾಸ ಲೋಕಾನುಸರಣ ಬಹುಭಾಷಣ ಬಹ್ವಾಹಾರ ಬಹುನಿದ್ರಾದಿಕಂಗಳಿಂ ಯೋಗಕ್ಕೆ ವಿಘ್ನವಪ್ಪುದಾಗಿ ಇವಂ ಬಿಡಬೇಕೆಂಬುದರ್ಥ), ದೃಢಾತ್ಮಾ-ನಿಶ್ಚಯ ಬುದ್ಧಿಯುಳ್ಳಾತನು, ಸಿದ್ಧಃ-ಯೋಗಸಿದ್ಧನು, ಭವತಿ-ಆಗುತ್ತಿಹನು. ಇತಿ-ಹೀಗೆಂಬುದು, ಸಂಸಿದ್ಧಂ-ಚೆನ್ನಾಗಿ ಸಿದ್ಧವು.

ಸೂ : ಈ ಅಷ್ಟಾಂಗಯೋಗವೇ ಅಷ್ಟವಿಧಾರ್ಚನಾರೂಪಮಪ್ಪುದರಿಂದ ಈ ಯೋಗಂಗಳಂ ಅಭ್ಯಾಸಿಸಬೇಕೆಂದು ಪೇಳ್ದಪಂ

ಅತ ಏವ ಮಹಾಶ್ಚರ್ಯಂ ಯೋಗಮಷ್ಟಾಂಗಮಾದರಾತ್ ।

ಶಿವಪೂಜಾಂಗಮೇತದ್ಧಿ ತ್ವಮೇವಾಭ್ಯಾಸನಂ ಕುರು ॥ ॥೫೮॥

ಅತ ಏವ-ಈ ಕಾರಣದಿಂದ, ಮಹಾಶ್ಚರ್ಯಂ-ಖೇಚರತ್ವಾದಿಸಿದ್ಧಿಗಳಪ್ಪುದರಿಂದ ತ್ಯಾಶ್ಚರ್ಯಮಾದ, ಅಷ್ಟಾಂಗಂ-ಯಮನಿಯಮಾದಿರೂಪದಿಂದಷ್ಟಾಂಗವಾಗಿರ್ಪಂಥ, ಯೋಗಂ-ಶಿವಯೋಗವನ್ನು, ಅದರಾತ್-ಪ್ರೀತಿಯತ್ತಣಿಂ ತ್ವಮೇವ-ನೀನೇ, ಅಭ್ಯಾಸಂ-ಅಭ್ಯಾಸವನ್ನು, ಕುರು-ಮಾಡು, ಏತತ್-ಈ ಅಷ್ಟಾಂಗಯೋಗವು, ಹಿ-ಪ್ರಸಿದ್ಧವಾಗಿ, ಶಿವಪೂಜಾಂಗಂ-ಶಿವಾರ್ಚನೆಗೆ ಅಂಗವು.

●

೧-೧ ಪಿತ್ತದ್ರವ್ಯಹಾರದಿಂ (ಮೈ).

ಸೂ : ಈ ಹಠಯೋಗೀಶ್ವರಂಗೆ ಭೋಗಮೋಕ್ಷಂಗಳು ಸ್ವೇಚ್ಛಾಧೀನಂಗಳೆಂದು ಪೇಳ್ದಪಂ–

ನಿರಂತರಕೃತಾಭ್ಯಾಸಾಜ್ಜರಾಮರಣವರ್ಜಿತಃ ।

ಸ ಜೀವೇದಿಚ್ಛಯಾ ಲೋಕೇ ತತೋ ಮುಕ್ತಿಮವಾಪ್ನುಯಾತ್ ॥ ॥೫೯॥

ನಿರಂತರಕೃತಾಭ್ಯಾಸಾತ್–ಎಡವರಿತವಿಲ್ಲದೇ ಮಾಡಲ್ಪಟ್ಟ ಯೋಗಾಭ್ಯಾಸದ ದೆಸೆಯಿಂದೆ, ಜರಾಮರಣವರ್ಜಿತಃ–ಜರಾಮರಣಗಳಿಲ್ಲದಂಥ, ಸಃ–ಆ ಯೋಗೀಶ್ವರನು, ಇಚ್ಛಯಾ–ಸ್ವೇಚ್ಛೆಯಿಂದ, ಲೋಕೇ–ಲೋಕದಲ್ಲಿ, ಸಃ–ಆತನು, ಜೀವೇತ್–ಬದುಕುವನು, ತತಃ–ಅನಂತರದಲ್ಲಿ, ಮುಕ್ತಿಂ–ಮೋಕ್ಷವನ್ನು, ಅವಾಪ್ನುಯಾತ್–ಪಡೆಯುವನು.

•

ಸೂ : ಈ ಅಷ್ಟಾಂಗಯೋಗವೇ ಅಂಗಸ್ಥಲವೆನಿಸುವ ಭಕ್ತಾದ್ಯೈಕ್ಯಾಂತಮಾದ ಷಡುಸ್ಥಲವಪ್ಪುದೆಂದು ಪೇಳ್ದಪಂ–

ಯಮೇನ ನಿಯಮೇನೈವ ಮನ್ಯೇ ಭಕ್ತ ಇತಿ ಸ್ವಯಂ ।

ಸ್ಥಿರಾಸನಮಾಯುಕ್ತೋ ಮಹೇಶ್ವರಪದಾನ್ವಿತಃ ॥ ॥೬೦॥

ಯಮೇನ ನಿಯಮೇನೈವ–ಯಮನಿಯಮವೆಂಬ ಯೋಗದ್ವಯದಿಂದವೆ, ಸ್ವಯಂ–ತಾನು, ಭಕ್ತ ಇತಿ–ಭಕ್ತನೆಂದು, ಮನ್ಯೇ–ತಿಳಿವುತ್ತಿದ್ದೇನೆ. ಸ್ಥಿರಾಸನಸಮಾಯುಕ್ತ–ಸ್ಥಿರವಾದಾಸನದಿಂ ಕೂಡಿದಾತನು, ಮಹೇಶ್ವರಪದಾನ್ವಿತಃ–ಮಹೇಶ್ವರಸ್ಥಲದಿಂದೆ ಕೂಡಿದಾತನು(ಯಮನಿಯಮಂಗಳೇ ಶ್ರದ್ಧಾರೂಪಮಪ್ಪುದರಿಂದಾತನೇ ಭಕ್ತನೆನಿಸುವನು, ಸ್ಥಿರಾಸನವೇ ನಿಷ್ಠಾರೂಪವಪ್ಪುದರಿಂದಾತನೇ ಮಹೇಶ್ವರನೆನಿಸುವನೆಂಬುದರ್ಥ).

ಚರಾಚರಲಯಸ್ಥಾನಂ ಲಿಂಗಮಾಕಾಶಸಂಜ್ಞಕಂ ।

ಪ್ರಾಣೇ ತದ್ವ್ಯೋಮ್ನಿ ಸಂಲೀನೇ ಪ್ರಾಣಲಿಂಗೀ ಭವೇತ್ಪುಮಾನ್ ॥ ॥೬೧॥

ಚರಾಚರಲಯಸ್ಥಾನಂ: ಚರ–ಚೇತನವೆನಿಸುವ ಸವಿಕಲ್ಪನಿರ್ವಿಕಲ್ಪಾತ್ಮಕವಾದ ಜ್ಞಾನ ಸಂತಾನಕ್ಕೂ, ಅಚರ–ಅಚೇತನವೆನಿಸುವ ತತ್ವತಾತ್ವಿಕಂಗಳಿಗೂ, ಲಯಸ್ಥಾನಂ–ಬೀಜರೂಪದಿಂ ಗರ್ಭೀಕರಿಸುವ ಲಯಸ್ಥಾನಮಾದಂಥ; ಲಿಂಗಂ–ನಾದಾತ್ಮಕವಾದ ಶುದ್ಧಪ್ರಸಾದಲಿಂಗವು, ಆಕಾಶಸಂಜ್ಞಕಂ–ಆಕಾಶವೆಂಬ ಹೆಸರುಳ್ಳದ್ದು. ತದ್ವ್ಯೋಮ್ನಿ–ಆ ಪರಮಾಕಾಶವೆನಿಸುವ ಶಿವಬೀಜದಲ್ಲಿ, ಪ್ರಾಣೇ–ಪ್ರಾಣ ಕಲಾತ್ಮಕವಾದ ಆತ್ಮಬೀಜವು, ಸಂಲೀನೇ–ಮನೋಮಾರುತಂಗಳೊಡನೆ ಕೂಡಿ ವಿಲಯಮನ್ಯೆದಲಾಗಿ, ಪುಮಾನ್ –ಪ್ರಾಣಾಯಾಮಸಂಪನ್ನನಾದ ಪುರುಷನು, ಯಪ್ಪುದರಿಂ ಪ್ರಾಣಲಿಂಗಿಯೆಂಬುದರ್ಥ).

ಪ್ರತ್ಯಾಹಾರೇಣ ಸಂಯುಕ್ತಃ ಪ್ರಸಾದೀತಿ ನ ಸಂಶಯಃ ।

ಧ್ಯಾನಧಾರಣಸಂಪನ್ನಶ್ಶರಣಸ್ಥಲವಾನ್ ಸುಧೀಃ ॥ ॥೬೨॥

ಪ್ರತ್ಯಾಹಾರೇಣ–ಆ ಪ್ರಾಣಲಿಂಗದಲ್ಲಿ ಲಯಿಸುವ ಮನೋಮಾರುತಂಗಳನಂ ಕೆದರಲೀಸದಿಹಂದರಿಂದೆ, ಸಂಯುಕ್ತಃ–ಕೂಡಿದಂಥಾತನಂ, ಪ್ರಸಾದೀತಿ–ಪ್ರಸಾದಿಯೆಂದೆನಿಸುವನು, ಸಂಶಯಃ–ಸಂದೇಹವು, ನ–ಇಲ್ಲ (ಆತಂಗೆ–ಅವಧಾನಭಕ್ತಿಯಪ್ಪುದರಿಂ ಪ್ರಸಾದಿಯೆನಿಸುವನೆಂಬುದರ್ಥ).

ಧ್ಯಾನಧಾರಣಸಂಪನ್ನಃ–ಆ ಮಹಾಲಿಂಗಧ್ಯಾನದಿಂ ಧಾರಣದಿಂ ಸಂಪನ್ನನಾದಂಥ, ಸುಧೀಃ–ಬಲ್ಲಾತನು, ಶರಣ ಭಕ್ತಿಯಪ್ಪುದಾಗಿ ಆತನೇ ಶರಣನೆಂಬುದರ್ಥ).

ಲಿಂಗೈಕ್ಯೋಽದ್ವೈತಭಾವಾತ್ಮಾ ನಿಶ್ಚಲೈಕಸಮಾಧಿನಾ ।

ಏವಮಷ್ಟಾಂಗಯೋಗೇನ ವೀರಶೈವೋ ಭವೇನ್ನರಃ ॥ ॥೬೩॥

ನಿಶ್ಚಲೈಕಸಮಾಧಿನಾ–ಸಂಪೂರ್ಣ ಕುಂಭದಂತೆ [1]ನಿವಾತದೀಪದಂತೆ[1] ನಿಸ್ತರಂಗಾಂಬುಧಿಯಂತೆ ನಿಶ್ಚಲತ್ವವೇ ಮುಖ್ಯವಾದ ಸಮಾಧಿಯೋಗದಿಂದ, ಅದ್ವೈತಭಾವಾತ್ಮಾ–ಜ್ಞಾತೃಜ್ಞೇಯವೆಂಬ ದ್ವೈತಭಾವವಿಲ್ಲದಾತನು, ಲಿಂಗೈಕ್ಯಃ–ಲಿಂಗೈಕ್ಯನೆನಿಸುವನು. (ಆತಂಗೆ ಸಮರಸಭಕ್ತಿಯಪ್ಪುದರಿಂದೆ ಐಕ್ಯನೆಂಬುದಭಿಪ್ರಾಯ). ಏವಂ–ಈ ಪ್ರಕಾರವಾದ, ಅಷ್ಟಾಂಗಯೋಗೇನ–ಯುವಾ ದ್ಯಷ್ಟಾಂಗಯೋಗದಿಂದ, ನರಃ–ಮನುಷ್ಯನು, ವೀರಶೈವಃ–ಷಡುಸ್ಥಲಮುಳ್ಳ ವೀರಶೈವನು, ಭವೇತ್–ಆಗುವವನು.

ಸೂ : ಈ ಮರ್ಯಾದೆಯಲ್ಲಿ ಹಿಂದೆ ಪೇಳ್ದ ಕರ್ಮಾಷ್ಟಾಂಗಯೋಗದಿಂದಲೂ ಮುಂದೆ ಪೇಳ್ದ ಜ್ಞಾನಾಷ್ಟಾಂಗಯೋಗದಿಂದಲೂ ಶಿವಯೋಗವನು ಅಭ್ಯಾಸವಂ ಮಾಳ್ಪುದೆಂದು ಪೇಳ್ದಪಂ–

ತಸ್ಮಾತ್ಸರ್ವಪ್ರಯತ್ನೇನ ಕರ್ಮಣಾ ಜ್ಞಾನತೋಽಪಿ ವಾ ।

ತ್ವಮಪ್ಯಷ್ಟಾಂಗಮಾರ್ಗೇಣ ಶಿವಯೋಗೀ ಭವಾನಘ ॥ ॥೬೪॥

ಅನಘ–ಎಲೈ ಪಾಪರಹಿತವಾದ ಶಿಷ್ಯನೇ (ಇಲ್ಲಿ ಯಮನಿಯಮಾದಿಗಳಿಂ ಸಂಚಿತ ಪ್ರಾರಬ್ಧರೂಪಮಾದ ಪಾಪನಾಶಮಪ್ಪುದಾಗಿ, ಅದೇ ಶಾಂತಿ ಎನಿಸುವದಕ್ಕೆ ಸಮ್ಮತಿ,

ಪ್ರಾಣಾಯಾಮೇನ ಸಿದ್ಧ್ಯಂತಿ ಸರ್ವಶಾಂತ್ಯಾದಯಃ ಕ್ರಮಾತ್ ।

ಶಾಂತಿಃ ಪ್ರಶಾಂತಿರ್ದೀಪ್ತಿಶ್ಚ ಪ್ರಸಾದಶ್ಚ ತತಃ ಪರಂ ॥

ನಾಶಸ್ಸರ್ವಸ್ಯ ಪಾಪಸ್ಯ ಶಾಂತಿರಿತ್ಯಭಿಧೀಯತೇ ।

ತಮಸ್ತೋಂತರ್ಬಹಿರ್ನಾಶಃ ಪ್ರಶಾಂತಿರಭಿಧೀಯತೇ ॥

ಬಹಿರಂತಃ ಪ್ರಕಾಶೋ ಯಸ್ಸಾದೀಪ್ತಿರಿಹ ಕಥ್ಯತೇ ।

ಸ್ವಚ್ಛತಾ ಯಾ ತಂ ಸಾ ಬುದ್ಧಿಃ ಪ್ರಸಾದಃ ಪರಿಕೀರ್ತಿತಃ ॥

ಎಂಬುದಾಗಿ ಪಾಪರಹಿತನಪ್ಪುದರಿಂ ಶಾಂತಿಸಂಪನ್ನನೆಂಬುದಭಿಪ್ರಾಯಂ), ತಸ್ಮಾತ್–ಅಷ್ಟಾಂಗಯೋಗವೇ ವೀರಶೈವಮಾರ್ಗಮಪ್ಪುದರಿಂದ, ಸರ್ವಪ್ರಯತ್ನೇನ–ಹಿಂದೆ ಹೇಳಿದ ಅನೇಕ

೧–೧ x (ಕ)

ಪ್ರಯತ್ನಮಾಗಿರ್ದಂಥ, ಕರ್ಮಣಾ–ಬಹಿರಂಗಕರ್ಮಾಷ್ಟಾಂಗಯೋಗದಿಂದಲಾದರೂ, ಜ್ಞಾನತಃ–ಜ್ಞಾನರೂಪದಿಂದಲಾದರೂ, ಅಷ್ಟಾಂಗ ಮಾರ್ಗೇಣ ವಾ–ಅಷ್ಟಾಂಗಯೋಗಮಾರ್ಗದಿಂದಲಾದರೂ, ತ್ವಮಪಿ–ನೀನು, ಶಿವಯೋಗೀ–ಶಿವಯೋಗವುಳ್ಳಾತನು, ಭವ–ಆಗು.

ತಾತ್ಪರ್ಯ : ಯಮನಿಯಮಾದಿಕಂಗಳಿಂ ಪಾಪನಾಶವೇ ಶಾಂತಿಯೆನಿಸುವದು, ಆ ಪಾಪನಾಶದಿಂ ಬಾಹ್ಯಾಭ್ಯಂತರದಲ್ಲಿಯ ಅಂಧಕಾರ ನಾಶವೇ ಪ್ರಶಾಂತಿ ಎನಿಸುವುದು, ಅದರಿಂದ ಒಳ ಹೊರಗೆ ಬೆಳಗನೆ ಕಾಣ್ಬುದು ದೀಪ್ತಿ ಎನಿಸುವುದು, ಅದರಿಂದ ಬುದ್ಧಿನಿರ್ಮಲತೆಯ ಪ್ರಸಾದವೆನಿಸುವುದು, ಆ ಪ್ರಸಾದಬುದ್ಧಿಯಿಂ ಮುಂದೆ ಪೇಳ್ವ ರಾಜಯೋಗಾಭ್ಯಾಸಮಂ ಮಾಳ್ಪುದೆಂಬುದಭಿಪ್ರಾಯಂ.

ಇತಿ ಶ್ರೀ ಮದ್ವೇದವೇದಾಂತಾಗಮಪುರಾಣಸ್ಮ ೃತೀತಿಹಾಸಪ್ರತಿಪಾದಿತ
ಶ್ರೀವೀರಶೈವಮಾರ್ಗಸ್ಥಾಪನಾಚಾರ್ಯ ಶ್ರೀಬಸವಾರಾಧ್ಯವಿರಚಿತಾಯಾಂ
ಕರ್ನಾಟಕಟೀಕಾವಿರಾಜಿತಾಯಾಂ ಶಿವಯೋಗಪ್ರದೀಪಿಕಾಯಾಂ

ತೃತೀಯಪಟಲಃ ಸಂಪೂರ್ಣಃ

❖❖

ಚತುರ್ಥ ಪಟಲಃ

ಸೂ : ಆಚಾರ್ಯನುದ್ದೇಶಾನುಸಾರದಿಂ ಮಂತ್ರಯೋಗ ಲಯಯೋಗ ಹಠಯೋಗಂಗಳ ಸ್ವರೂಪಮಂ ಪೇಳ್ದು ಕ್ರಮಪ್ರಾಪ್ತಮಾದ ರಾಜಯೋಗ ಲಕ್ಷಣಮಂ ಪೇಳಲುದ್ಯುಕ್ತನಾಗಿ ಅದಕ್ಕನುಗುಣಮಾದ ಗುರುಸ್ತೋತ್ರಂ ಮಾಡುತ್ತಿರ್ದಪಂ–

ಯತ್ಸರ್ವಗಂ ಶೃತಿಶಿರಃ ಪರಮೇಕಮಾದ್ಯಂ
ಜ್ಯೋತಿರ್ಮಯಂ ದೃಢವಿರಕ್ತಜನಾಭಿಗಮ್ಯಂ ।
ಗೋಸಂಸ್ಥಿತಂ ಗುರುಸದಾಶಿವಯೋಗಿನಾಥಂ
ಲಿಂಗಸ್ವರೂಪಮಹಮನ್ವಹಮಾಶ್ರಯಾಮಿ ॥ ॥೧॥

ಯತ್–ಅಜ್ಞಾನಾಂಧಕಾರನಾಶದಿಂ ದಿವ್ಯಪ್ರಕಾಶೋದ್ಬೋಧಕತ್ವದಿಂ ತಾನೇ ಗುರುವೆನಿಸಿದ ಆವುದಾನೊಂದು ಶಿವಲಿಂಗವು, ಸರ್ವಗಂ–ಸರ್ವಗತವಾಗಿರ್ಪಂಥ "ನಾದಾಖ್ಯಂ ಯತ್ಪರಂ ಬೀಜಂ ಸರ್ವಭೂತೇವ್ಯವಸ್ಥಿತಂ" ಎಂದುದಾಗಿ, ಶೃತಿಶಿರಃ ಪರಂ–ವೇದವೇದಾಂತಂಗಳ ಶಿರೋರತ್ನವಾಗಿರ್ಪಂಥ

ಆಮ್ನಾಯಶಿರ ಇತ್ಯುಕ್ತಃ ಪ್ರಣವೋ ಮುನಿಸತ್ತಮಾಃ ।
ತೇನ ಗಮ್ಯೋ ಮಹೇಶಾನಸ್ತದಂತ ಇತಿ ಕೀರ್ತಿತಃ ॥

ಎಂದುದಾಗಿ

"ಯೋ ವೇದಾದೌ ಸ್ವರಃ ಪ್ರೋಕ್ತೋ ವೇದಾಂತೇ ಚ ಪ್ರತಿಷ್ಠಿತಃ" ಎಂದುದಾಗಿ, ಏಕಂ–ವರ್ಣಪದಮಂತ್ರಾದಿಷಡಧ್ವಕ್ಕೆ ಮುಖ್ಯಮಪ್ಪುದರಿಂದೆ ಅದ್ವಿತೀಯಮಾಗಿರ್ಪಂಥ, ಆದ್ಯಂ–ಮೂಲಕಾರಣವಾಗಿರ್ಪಂಥ, ಜ್ಯೋತಿರ್ಮಯಂ–ನಿರುಪಾಧಿಕಮಾದ ಪರಮಪ್ರಕಾಶರೂಪಮಾಗಿರ್ಪಂಥ, (ಜಿಹ್ವೆಯಲ್ಲಿ ವೈಖಾರೀ ರೂಪದಿಂ ವಿದ್ಯಾತತ್ವವಾಗಿ, ನಾಸಾಪುಟದಲ್ಲಿ ಮಧ್ಯಮಾರೂಪದಿಂ ಈಶ್ವರತತ್ವಮಾಗಿ ತಾರಕಾಮಧ್ಯದಲ್ಲಿ ಪಶ್ಯಂತೀರೂಪದಿಂ ಸದಾಶಿವತತ್ವಮಾಗಿ, ಭ್ರೂಮಧ್ಯದಲ್ಲಿ ಸೂಕ್ಷ್ಮರೂಪದಿಂ [೧]ಪರಾ[೧] ಶಕ್ತಿತತ್ತ್ವವೆನಿಸಿ, ದಿವ್ಯಪ್ರಕಾಶರೂಪವೆಂಬುದಭಿಪ್ರಾಯ). ದೃಢವಿರಕ್ತ ಜನಾಭಿಗಮ್ಯಂ–ಶಿವಯೋಗನಿಷ್ಠರಾದ ಮುಮುಕ್ಷುಜನರಿಂದೆ ಅಭಿಮುಖವಾಗಿ ಕಾಣಲು ಯೋಗ್ಯಮಾದಂಥ, ಗೋಸಂಸ್ಥಿತಂ–

೧–೧ x (ಕ).

ಆಪೋಜ್ಯೋತಿಯೆನಿಸುತ್ತೆ ಜಲಪಿಂಡ ಮಧ್ಯವರ್ತಿಯಾದಂಥ, (ಮೇಣ್, "ಚಕ್ಷುರಗ್ರೇಸ್ಥಿತಂ" ಎಂದುದಾಗಿ ತಾರಕಮಧ್ಯವರ್ತಿಯಾದಂಥ, ಮೇಣ್ ಅಕ್ಷರತ್ರಯಾತ್ಮಕ ಪ್ರಣವರೂಪಮಾದಂಥ, ಮೇಣ್ ಲಕ್ಷ್ಯತ್ರಯೋಪಲಕ್ಷಿತಮಾದಂಥ, ಗುರುಸದಾಶಿವಯೋಗಿ ನಾಥಲಿಂಗಸ್ವರೂಪಂ-ಆಚಾರ್ಯನಾದ ಸದಾಶಿವಯೋಗೀಶ್ವರನೆಂಬ ದಿವ್ಯಲಿಂಗವನ್ನು, ಅಹಂ-ನಾನು, ಅನ್ವಹಂ-ಅನವರತವೂ, ಆಶ್ರಯಾಮಿ-ಧ್ಯಾನಾನುಸಂಧಾನದಿಂದೆ ಆಶ್ರಯಿಸಿಹೆನು.

●

ಸೂ : ಪೂರ್ವೋದಿತವಾದ ಯೋಗತ್ರಯದಿಂ ರಾಜಯೋಗವೇ ವಿಶಿಷ್ಟವಪ್ಪುದಾಗಿ ಅದಕ್ಕನುಗುಣವಾದ ವಿಶೇಷಾಷ್ಟಾಂಗಮಮಂ ಪೇಳ್ದೆನೆನ್ನುತಿರ್ದಪಂ-

ರಾಜಯೋಗಃ ಪರಿಗ್ರಾಹ್ಯೋ ವಿದ್ವದ್ಭಿಸ್ತೇನ ಹೇತುನಾ ।
ಅಸ್ಯ ಸಾಧನಮಷ್ಟಾಂಗಹಠಯೋಗ ಇಹೋಚ್ಯತೇ ॥ ॥೨॥

ವಿದ್ವದ್ಭಿಃ-ವಿವೇಕಿಗಳಿಂದ, ರಾಜಯೋಗಃ-ರಾಜಯೋಗವು, ಪರಿಗ್ರಾಹ್ಯಃ-ಅಂಗೀಕರಿಸಿ ಅನುಷ್ಠಿಸಲು ಯೋಗ್ಯವು, ತೇನ ಹೇತುನಾ-ಆ ವಿಶಿಷ್ಟವಾದ ನಿಮಿತ್ತದಿಂದ, ಅಸ್ಯ-ಈ ರಾಜಯೋಗಕ್ಕೆ, ಸಾಧನಂ-ಭಿನ್ನಪ್ರಕಾರಮಾಗಿ ಸಾಧನವಾದಂಥ, ಅಷ್ಟಾಂಗಹಠಯೋಗಃ-ಅಷ್ಟಾಂಗಮಾದ ಈ ಹಠಯೋಗವು, ಇಹ-ಈ ಪಟಲಾದಿಯಲ್ಲಿ, ಉಚ್ಯತೇ-ಹೇಳಲ್ಪಡುತ್ತಿಹುದು.

●

ಸೂ : ಈ ಅರ್ಥವನ್ನೇ ಮುಂದಣ ಗ್ರಂಥಾಂತರದಲ್ಲಿ ಸಮರ್ಥಿಸುತ್ತಿದ್ದಾನಂ –

ಪೂರ್ವೋಕ್ತಾಷ್ಟವಿಧಾಂಗಾನಿ ಹಠೇ ತಾನಿ ಸ್ಥಿತಾನಿ ಚ
ಏಕೈಕಶ್ಲೋಕರೂಪೇಣ ಕೃತಾನಿ ಚ ಮಯಾ ಶೃಣು ॥ ॥೩॥

ಹಠೇ-ಹಠಯೋಗದಲ್ಲಿ, ಪೂರ್ವೋಕ್ತಾಷ್ಟಾಂಗವಿಧಾಂಗಾನಿಃ ಪೂರ್ವೋಕ್ತ-ಪೂರ್ವೋದಿತವಾದ, ಅಷ್ಟವಿಧ-ಎಂಟುಪ್ರಕಾರಮಾದ, ಅಂಗಾನಿ ಚ-ಯಮಾದ್ಯಾಂಗಗಳು, ಸ್ಥಿತಾನಿ-ಇರಿಸಲ್ಪಟ್ಟವು, ಮಯಾ-ನನ್ನಿಂದ, ಏಕೈಕಶ್ಲೋಕ ರೂಪೇಣ-ಒಂದೊಂದು ಶ್ಲೋಕರೂಪದಿಂದ, ಕೃತಾನಿ-ಮಾಡಲ್ಪಟ್ಟಂಥ, ತಾನಿ ಚ-ಆ ಅಷ್ಟಾಂಗಗಳನ್ನು, ಶೃಣು-ಕೇಳು.

●

ಸೂ : ಅನಂತರದಲ್ಲಿ ಮೊದಲೊಳು ಯಮಾಂಗಮಂ ಪೇಳ್ದಪಂ-

ಆಹಾರನಿದ್ರೇಂದ್ರಿಯದೇಹಸರ್ವವ್ಯಾಪಾರಶೀತಾತಪಸಂಜ್ಞಕಾನಾಂ ।
ಜಯಶ್ಚಶಾಂತಿಶ್ಚ ಭವೇದ್ಯಮಾಂಗಶ್ಚನ್ಯೈಸ್ಸಾಧಯಿತುಂ ಸ ಯೋಗ್ಯಃ ॥ ॥೪॥

ಆಹಾರ ....ಸಂಜ್ಞಕಾನಾಂ: ಆಹಾರ-ಭಕ್ಷ್ಯ ಭೋಜ್ಯಾದಿಷಡ್ವಿಧಾಹಾರದ, ನಿದ್ರಾ-ತಮೋಗುಣಾತ್ಮಕವಾದ ನಿದ್ರೆಯ, ಇಂದ್ರಿಯ-ಶ್ರೋತ್ರಾದಿ ಜ್ಞಾನೇಂದ್ರಿಯಂಗಳ, ದೇಹ-ಶಬ್ದೋಪಲಕ್ಷಿತಮಾದ ವಾಗಾದಿಕರ್ಮೇಂದ್ರಿಯಂಗಳ, ಸರ್ವ-ಸಮಸ್ತವಾದ, ವ್ಯಾಪಾರ-ಅರಿವು ಮಾಡುವ

ವ್ಯಾಪರಂಗಳ, ಶೀತಾತಪಸಂಜ್ಞಾಕಾನಾಂ–ಶೀತೋಷ್ಣವೆಂಬಂಥವರ, ಜಯಶ್ಚ–ವಶಗತನಾಗದೆ ಇಹುದರಿಂದವರ ಜಯವು, ಶಾಂತಿಶ್ಚ –ರಾಗದ್ವೇಷಂಗಳೆಂಬ ಕಾಲುಷ್ಯವಿಲ್ಲದೆ ಇಹತವನವು, ಯಮಾಂಗಃ –ಯಮವೆಂಬಯೋಗಾಂಗವು, ಭವೇತ್–ಅಹುದು, ಸಃ–ಅದು, ಶನೈಶ್ಯನೈಃ–ಮೆಲ್ಲಮೆಲ್ಲನೆ, ಸಾಧಯಿತುಂ –ಸಾಧಿಸಲು, ಯೋಗ್ಯಃ–ಯೋಗ್ಯವು.

●

ಸೂ : ಅನಂತರದಲ್ಲಿ ನಿಯಮಯೋಗಮಂ ಪೇಳ್ದಪಂ–

ಭಕ್ತಿರ್ಗುರೌ ಪರಮತತ್ತ್ವ ಪದೇऽನುರಕ್ತಿಃ
ನಿಸ್ಸಂಗತಾ ಸ್ವಯಮುಪಾಗತಲಾಭತುಷ್ಟಿಃ ।
ಏಕಾಂತವಾಸಪರತಾ ಚ ಮನೋನಿವೃತ್ತಿಃ
ವೈರಾಗ್ಯಭಾವ ಇತಿ ಯೇ ನಿಯಾಮಾಸ್ತ ಏವ ॥ ॥೫॥

ಗುರೌ–ಶ್ರೀಗುರುಮೂರ್ತಿಯಲ್ಲಿ, ಭಕ್ತಿಃ–ಭಕ್ತಿಯು, ಪರಮತತ್ತ್ವಪದೇ–ಷಡಧ್ವಾತೀತವಾಗಿ ಸ್ವಪರಪ್ರಕಾಶರೂಪದಿಂ ನಿಜಮುಕ್ತಿಗೆ ಸ್ಥಾನಮಾದ ಪರಮ ಪದದಲ್ಲಿ, ಅನುರಕ್ತಿಃ–ಪ್ರೀತಿಯು, ನಿಸ್ಸಂಗತಾ –ಜನಸಂಗಕ್ಕೆ ದೂರವಾಗಿ ಹತನವು (ಜನಸಂಗವೇ ಯೋಗೀಶ್ವರಂಗೆ ಸಂಸಾರವೆಂಬುದರ್ಥ), ಸ್ವಯಂಮುಪಾಗತಲಾಭತುಷ್ಟಿಃ–ಅಪ್ರಯತ್ನದಿಂದ ಅನಿಚ್ಛಾಪ್ರಾರಬ್ಧದಿಂ ಬಂದ ಯಥಾ ಲಾಭದಲ್ಲಿ ಸಂತೋಷವು, ಏಕಾಂತವಾಸಪರತಾಚ–ಬಾಧಾರಹಿತವಾಗಿ, ಮನೋರಮ್ಯಮಾದ ಏಕಾಂತಾಶ್ರಯದಲ್ಲಿಯ ತಾತ್ಪರ್ಯವು, ಮನೋನಿವೃತ್ತಿಃ–ಮನಮಂ ಬಹಿರ್ಮುಖವಾಗಲೀಯದೆ ಅಂತರ್ಮುಖವಾಗಿ ಮಾಳ್ಪುದು, ವೈರಾಗ್ಯ ಭಾವಃ–ಮೋಹಕವಾದ ವಿಚಿತ್ರ ಭೋಗ್ಯವಸ್ತುವಿನಲ್ಲಿಯ ವಿರತಿಯು, ಇತಿ–ಹೀಗೆಂಬ, ಯೇ–ಆವು ಕೆಲವು ಗುಣಂಗಳುಂಟೋ, ತ ಏವ–ಅವೇ ನಿಯಮಾಃ– ರಾಜಯೋಗಾನುಸಾರಿಗಳಾದ ನಿಯಮಂಗಳು.

●

ಸೂ : ಅನಂತರದಲ್ಲಿ ಆಸನಯೋಗಮಂ ಪೇಳ್ದಪಂ–

ಸ್ವಸ್ವರೂಪೇ ಸದಾಕಾಲಮಾಸನ್ನತ್ವಂ ಸುಖಾಸನಂ ।
ಸರ್ವವಸ್ತುನ್ಯುದಾಸೀನಭಾವಮಾನಸಮುಚ್ಯತೇ ॥ ॥೬॥

ಸ್ವಸ್ವರೂಪೇ: ಸ್ವ–ತನ್ನ, ಸ್ವರೂಪೇ–ಸಕಲತತ್ವವಿಲಕ್ಷಣಮಾದ ಸ್ವಪರಪ್ರಕಾಶರೂಪದಲ್ಲಿ, ಸದಾಕಾಲಂ–ಅನವರತವು, ಆಸನ್ನತ್ವಂ–ಚಲಿಸದೆ ಆತ್ಮರಾಮನಾಗಿಹತನವು. ಸುಖಾಸನಂ: ಸುಖ–ಆತ್ಮರಾಮಸುಖಕ್ಕೆ, ಆಸನಂ–ಆಶ್ರಯವಾಗಿಹತನವು, ಸರ್ವವಸ್ತುನಿ–ಸಕಲಭೋಗ್ಯ ವಸ್ತುವಿನಲ್ಲಿ, ಉದಾಸೀನ ಭಾವಃ–ವೀಧಿತೃಣಮಂ ಕಂಡಂತೆ ಹೇಯೋಪಾದೇಯಬುದ್ಧಿಯಿಲ್ಲದೆ ಉದಾಸೀನವಾಗಿಹತನವು, ಆಸನಂ–ಆಸನಯೋಗವೆಂದು, ಉಚ್ಯತೇ–ಹೇಳಲ್ಪಡುತ್ತಿದ್ದಿತು.

●

ಸೂ : ಅನಂತರದಲ್ಲಿ ಪ್ರಾಣಾಯಾಮಸ್ವರೂಪಮಂ ಪೇಳ್ದಪಂ-

ವಿದುರ್ಬುಧಾರೇಚಕಪೂರಕುಂಭಸಂಘಟ್ಟನಿಶ್ವಾಸತಯಾಽ ಪ್ರಯತ್ನಾತ್ ।

ಪ್ರಾಣಸ್ಥಿರತ್ವಂ ಜಗತಾಂ ಚ ಮಿಥ್ಯಾ ಚಿಂತೇತಿ ಸಃ ಪ್ರಾಣನಿರೋಧ ಭಾವಃ॥ ॥೭॥

ರೇಚಕ ಪೂರಕಕುಂಭಸಂಘಟ್ಟನಿಶ್ವಾಸತಯಾ-ರೇಚಕ ಪೂರಕ ಕುಂಭಕಂಗಳಿಂದ ಕೂಡಿದ ಪ್ರಾಣಾವಾಯುಂ ಸಂಚಾರವಿಲ್ಲದೆ ಇಹುದರಿಂದೆ, ಅಪ್ರಯತ್ನಾತ್-ಪ್ರಯತ್ನವಿಲ್ಲದೆ ಇಹುದರ ದೆಸೆಯಿಂದ, ಪ್ರಾಣಸ್ಥಿರತ್ವಂ-ಪ್ರಾಣವಾಯುವಿನ ಸ್ಥಿರತ್ವವು, ಜಗತಾಂ-ತನುಕರಣಭುವನ ಭೋಗ್ಯಂಗಳಾದ ತತ್ವಶಾತ್ವಿಕಂಗಳೇ ನಾನು ನನ್ನದೆಂದು ಆರೋಪಿತವಾದ ಬುದ್ಧಿಗಳ, ಮಿಥ್ಯಾಚಿಂತಾ ಚ-ಭ್ರಾಂತಿಯೆಂದು ತಿಳಿವುದು, ಇತಿ-ಹೀಗೆಂಬುದಾವುದಾನೊಂದುಂಟೋ, ಸಃ-ಅದು, ಪ್ರಾಣನಿರೋಧಭಾವಃ-ಪ್ರಾಣಾಯಾಮವೆಂಬಯೋಗವೆಂದು, ಬುಧಾಃ-ವಿವೇಕಿಗಳು, ವಿದುಃ-ತಿಳಿವುತ್ತಿಹರು (ವೈಕೃತಪ್ರಾಣಾಯಾಮದಿಂದಾದ ಕೇವಲಕುಂಭಕದಿಂ ಮೇಲೆ ಅಹಂಕಾರ ಮಮಕಾರಂಗಳ ತೊಲಗುವಿಕೆಯೇ ಪ್ರಾಣಾಯಾಮವೆಂಬುದರ್ಥ).

ಸೂ : ಅನಂತರದಲ್ಲಿ ಪ್ರತ್ಯಾಹಾರಮಂ ಪೇಳ್ದಪಂ-

ಚಿತ್ತಸ್ಯಾಂತರ್ಮುಖೇನ ಪ್ರತಿಹತಬಹುಚೈತನ್ಯಕಲ್ಲೋಲಜಾಲ
ಸ್ಯೋತ್ಪನ್ನಸ್ಯಾಸ್ಯ ನಾನಾವಿಪುಲಮತಿವಿಕಾರಸ್ಯ ಸಂವಿತ್ತಿರೇವ ।
ತತ್ತನ್ನಾನಾವಿಕಾರಗ್ರಸನಮಿತಿ ತಥಾ ಕಥ್ಯತೇ ಯೋಗವಿದ್ಭಿಃ
ಪ್ರತ್ಯಾಹಾರಸ್ಸ ಏವಾವಿಚಲಿತಸುಮನಾಸ್ತಂ ಸದಾಽಹಂ ಭಜಾಮಿ ॥ ॥೮॥

ಚಿತ್ತಸ್ಯ-ಮನವ, ಅಂತರ್ಮುಖೇನ-ಅಂತರ್ಮುಖನ ಮಾಡುವುದರಿಂದ (ಕಾಕಾಕ್ಷಿಯೋಪಾದಿಯಲ್ಲಿ ಬಾಹ್ಯೇಂದ್ರಿಯದ್ವಾರಂಗಳಿಂ ಗ್ರಹಿಸಿದ ವಿಷಯಂಗಳಂ ತಂದು ಬುದ್ಧಿಯನ್ನು ಅನಂತವಿಷಯಾಕಾರಮಂ ಮಾಡುವ ಮನಮಂ ಬಹಿರ್ಮುಖವ ಮಾಡದೆ ಇಹುದರಿಂದೆಯೆಂಬುದರ್ಥ), ಪ್ರತಿಹತಬಹುಚೈತನ್ಯಕಲ್ಲೋಲಜಾಲಸ್ಯ; ಪ್ರತಿಹತ-ನಿಲ್ಲಿಸಲ್ಪಟ್ಟ, ಬಹು-ಅನಂತಪ್ರಕಾರವಾದ, ಚೈತನ್ಯಕಲ್ಲೋಲ -ಚೈತನ್ಯಾಂಬುಧಿಯ ಸವಿಕಲ್ಪಜ್ಞಾನಂಗಳೆಂಬ ತೆರೆಗಳ, ಜಾಲಸ್ಯ-ಸಮೂಹವುಳ್ಳಂಥ (ಬುದ್ಧಿಶುದ್ಧವಪ್ಪುದರಿಂದಾತ್ಮಶಕ್ತಿಯು ನಿಸ್ತರಂಗಾಂಬುಧಿಯಂತೆ ವಿಶ್ರಮಿಸುವದೆಂಬುದರ್ಥ); ಉತ್ಪನ್ನಸ್ಯ -ಹುಟ್ಟಿದಂಥ, ಅಸ್ಯ-ಈ ನಾನಾವಿಪುಲಮತಿವಿಕಾರಸ್ಯ-ಅಪರಿಮಿತರೂಪವಾದ ಅತಿವಿಶಾಲರೂಪಮಾದ ಮಹತ್ವವೆನಿಸುವ ಬುದ್ಧಿಯ ಸಿದ್ಧಿತುಷ್ಟಿಭಾವಪ್ರತ್ಯಯಾದಿವಿಕಾರದ, ಸಂವಿತ್ತಿರೇವ-ವಿವೇಕದಿಂ ವಿಲಕ್ಷಿಸುವುದೇ, ತತ್ತನ್ನಾನಾವಿಕಾರಗ್ರಸನಮಿತಿ-ಆಯಾವಿಕಾರಂಗಳ ಗ್ರಾಸವೆಂದು, ತಥಾ-ಹಾಂಗೆ, ಯೋಗವಿದ್ಭಿಃ-ಶಿವಯೋಗಮಂ ಬಲ್ಲವರಿಂದೆ, ಕಥ್ಯತೇ-ಹೇಳಲ್ಪಡುತ್ತಿದ್ದಿತೋ, ಸ ಏವ-ಅದೇ, ಪ್ರತ್ಯಾಹಾರಃ-ಪ್ರತ್ಯಾಹಾರಯೋಗವೆನಿಸುವುದು, ತಂ-ಅದನ್ನು, ಅವಿಚಲಿತಸುಮನಾಃ-ಚಲಿಸದೆ ಇರ್ದಂಥ ಲೇಸಾದ ಮನಸ್ಸುಳ್ಳವನಾಗಿ, ಅಹಂ-ನಾನು, ಸದಾ-ಆವಾಗವೂ, ಭಜಾಮಿ-ಸೇವಿಸುತ್ತಿಹೆನು.

●

ಸೂ : ಅನಂತರದಲ್ಲಿ ಧ್ಯಾನಸ್ವರೂಪಮಂ ಪೇಳ್ದಪಂ–

ಸೋऽಹಂಭಾವಾತ್ಪ್ರಕಟಪರಮಾದ್ವೈತಮುಖ್ಯಸ್ವಭಾವಂ
ಯಲ್ಲೋಕೇ ವಿಸ್ಫುರತಿ ಖಲು ತತ್ತತ್ತ್ವರೂಪಂ ಸ್ವಭಾವಂ ।
ಸಮ್ಯಗ್ದೃಷ್ಟಿರ್ಗುರುಕರುಣಯಾ ಸರ್ವಭೂತಾನುಯಾತೇ
ಸ್ವಾತ್ಮರಾಮಸ್ಸಭವತಿ ಸಖೇ ಧ್ಯಾನಮಾರ್ಗೈಕನಿಷ್ಠಃ ॥ ॥೯॥

ಹೇ ಸಖೇ–ಎಲೈ ಸ್ನೇಹಿತನಾದ ಶಿಷ್ಯನೇ, ಸೋऽಹಂಭಾವಾತ್–ಪ್ರಾಕೃತಪ್ರಾಣಾಯಾಮದ ಹಂಸಮಂತ್ರವನೆ ವೈಕೃತಪ್ರಾಣಾಯಾಮದಿಂದ ಸೋಹಂ ಎಂದು ಭಾವಿಸುವದರ ದೆಸೆಯಿಂದೆ "ಸೋऽಹಂ ಕೃತ್ವಾತ್ಮಮಂತ್ರಂ" ಎಂದುದಾಗಿ, ಯತ್–ಆವುದಾನೊಂದು, ಪ್ರಕಟಪರಮಾದ್ವೈತಮುಖ್ಯಸ್ವಭಾವಂ: ಪ್ರಕಟ–ವ್ಯಕ್ತವಾದ, ಪರಮ–ಶ್ರೇಷ್ಠಮಾದ, ಅದ್ವೈತ–ಪ್ರಣವಸ್ವರೂಪದಿಂದೇ ಕತ್ವವೇ, ಮುಖ್ಯ–ಮುಖ್ಯಮಾದ, ಸ್ವಭಾವಂ–ಸ್ವರೂಪವು, ಲೋಕೇ–ತಿಳಿವಿನಲ್ಲಿ, ವಿಸ್ಫುರತಿ–ಪ್ರಕಾಶಿಸುತ್ತಿದ್ದಿತೋ, ತತ್–ಆ, ತತ್ತ್ವರೂಪಂ –ನಾದಬಿಂದು ಕಲಾತ್ಮಕವಾದ ತತ್ವಸ್ವರೂಪವೇ, ಸ್ವಭಾವಂ ಖಲು–ನಿಜವಾಗಿರ್ಪಂತಹುದಲಾ ("ವ್ಯಾಲುಂಪೇದ್ವ್ಯಂಜನೇ ದ್ವೇ" ಎಂದುದಾಗಿ, ಜ್ಞಾತೃಜ್ಞೇಯರೂಪಂಗಳಾದ ಸಕಾರ ಹಕಾರವೆಂಬ ವ್ಯಂಜನಾಕ್ಷರಗಳ ಲೋಪದಿಂದುಳಿದ ಪ್ರಣವವೇ ತತ್ವರೂಪವೆಂಬುದಭಿಪ್ರಾಯಂ), ಸರ್ವಭೂತಾನುಯಾತೇ –ಸರ್ವಚೈತನ್ಯಾಂತರ್ಯಾಮಿಯಾದ ಆ ಪ್ರಣವಬೀಜದಲ್ಲಿ, ಗುರುಕರುಣಯಾ–ಗುರುಕಾರುಣ್ಯದಿಂದ, ಸಮ್ಯಗ್ದೃಷ್ಟಿಃ ಸಮ್ಯಕ್–ಲೇಸಾದ, ದೃಷ್ಟಿಃ–ನೋಟವು, ಆವಾತಂಗುಂಟೋ: ಸ್ವಾತ್ಮರಾಮಃ–ಆತ್ಮಾರಾಮನಾಗಿರ್ಪಂಥ, ಸಃ–ಆತನೇ, ಧ್ಯಾನಮಾರ್ಗೈಃ ಕನಿಷ್ಠಃ–ಧ್ಯಾನಮಾರ್ಗವೊಂದರಲ್ಲಿಯೇ ನಿಷ್ಠನಾಗಿರ್ಪಂತಹನು, ಭವತಿ –ಆಗುತ್ತಿಹನು.

ತಾತ್ಪರ್ಯ : ಯೋಗೀಶ್ವರನು ಹಂಸಮಂತ್ರವನೇ ಸೋऽಹಂ ಎಂದೆನಿಸಿ, ಸೋऽಹಂ ಎಂಬ ಮಂತ್ರದ ಆದ್ಯಂತವರ್ಣಂಗಳ ಲೋಪದಿಂದ ಓಂಕಾರಮಂ ಮಾಡಿ, ಆ ಓಂಕಾರ ವಿಭಾಗವಾದ ಅಕಾರವನೇ ಉಕಾರದಲ್ಲಡಗಿಸಿ, ಆ ಉಕಾರಮಂ ಬಿಂದುವಿನಲ್ಲಡಗಿಸಿ ಆ ಬಿಂದುವೇ ಶೂನ್ಯವಾಗಲು, ಆ ಪರಮಶೂನ್ಯದಲ್ಲಿ ಜೀವನಪರಮೈಕ್ಯಾನುಭವರೂಪವಾದ ಪರಮಸಾಯುಜ್ಯಮಂ ಪಡೆಯುತ್ತಿಹನೆಂಬುದಭಿಪ್ರಾಯ, ಇದಕ್ಕೆ ಸಮ್ಮತಿ–

ವಿಲೋಪ್ಯಾಕಾರಮದ್ವಂದ್ವಮುಕಾರಾಖ್ಯೇ ವಿಲೋಪಯೇತ್ ।
ಉಕಾರಂ ಚ ಮಕಾರಾಖ್ಯೇ ಮಹಾನಾದೇ ಮಕಾರಕಂ ॥

ಎಂಬುದಾಗಿ,

•

ಸೂ : ಅನಂತರದಲ್ಲಿ ಧಾರಣಯೋಗಲಕ್ಷಣಮಂ ಪೇಳ್ದಪಂ–

ಸ್ಫುರತಿ ಪರಮತತ್ತ್ವಂ ಸ್ವಸ್ಯ ಬಾಹ್ಯಾಂತರೇ ಯತ್ ।
ಸತತಮತುಳಮತ್ಯಾಧಾರಣಂ ನಿಶ್ಚಲೇನ ॥

ಪುನರಪಿ ಚ ವದಾಮಸ್ತೇ ಪ್ರಕಾರೋಽಯಮಾಸ್ತೇ

ಚಲನರಹಿತಚಿತ್ತಂ ಕೇವಲಂ ಧಾರಣಾ ಸಾ ॥ ॥೧೦॥

ಯತ್-ಯಾವ, ಪರಮತತ್ತ್ವಂ-ಪ್ರಣವಾತ್ಮಕವಾದ ಪ್ರಣವತತ್ವವು, ಸ್ವಸ್ಯ-ತನ್ನ, ಬಾಹ್ಯಾಂತರೇ -ಹೊರಗೊಳಗೆ, ಸತತಂ-ಅನವರತವು, ಸ್ಫುರತಿ-ಬೆಳಗುತ್ತಿದ್ದಿತ್ತೋ, ತತ್-ಅದು, ಅತುಲಮತ್ಯಾ-ಸಮಾನವಿಲ್ಲದೆ ಇರ್ಪ-ಬುದ್ಧಿಯಿಂದ (ಧರ್ಮಾಧರ್ಮಾದಿವಾಸನಾರಹಿತವಾದ ಶುದ್ಧಬುದ್ಧಿಯೆಂಬುದರ್ಥಂ), ನಿಶ್ಚಲೇನ-ಚಲಿಸದೆ ಇಹುದರಿಂದೆ, ಧಾರಣಂ-ಧರಿಸುವುದೇ ಧಾರಣಯೋಗವೆಂಬ, ಅಯಂ ಪ್ರಕಾರಃ-ಈ ಸಾಲಂಬವಾದ ಧಾರಣಪ್ರಕಾರವು, ಆಸ್ತೇ-ಇರುತ್ತಿದ್ದಿತು. ಪುನರಪಿ ಚ-ಮತ್ತೆಯೂ, ತೇ-ನಿನಗೆ, ವದಾಮಃ-ಹೇಳುವೆವು. ಕೇವಲಂ-ನಾದಬಿಂದುಕಲಾಧಾರಾವಲಂಬನವಿಲ್ಲದೆಯಿರ್ದಂಥ, ಚಲನರಹಿತಚಿತ್ತಂ-ಚಲಿಸದೇ ಇರುವ ಚಿತ್ತವುಂಟೋ, ಸಾ-ಅದು, ಧಾರಣಾ-ಧಾರಣಯೋಗವೆನಿಸುವುದು. "ಚಿತ್ತೇ ಚಲತಿ ಸಂಸಾರೋ ನಿಶ್ಚಲೇ ಮೋಕ್ಷ ಏವ ಚ" ಎಂದುದಾಗಿ.

●

ಸೂ : ಅನಂತರದಲ್ಲಿ ಸಮಾಧಿಯೋಗಮಂ ಪೇಳ್ದಪಂ-

ನಿಜಾನುಭವಶೀಲತಾ ನಿಖಿಲತತ್ತ್ವಸಾಮ್ಯಸ್ಮೃತಿಃ

ಸ್ಮೃತೇರವಿಚಲಾಸ್ಥಿತಿಸ್ಸ್ಥಿರತಯಾ ನಿಧಿಧ್ಯಾಸತಾ ।

ಸದೇಕಪರಿಭಾವನಾ ಸಹಜತಾ ಹ್ಯನಾಯಾಸತಾ

ಸಮಾಧಿರತಿ ಕೀರ್ತಿತಸ್ಸತತನಿರ್ವಿಕಲ್ಪಾತ್ಮಕಃ ॥ ॥೧೧॥

ನಿಜಾನುಭವಶೀಲತಾ : ನಿಜ-ನಿಜವಸ್ತುವಿನ, ಅನುಭವಶೀಲತಾ-ಸಾಕ್ಷಾತ್ಕಾರವೇ ಸ್ವಭಾವವಾಗಿವುಳ್ಳತನವು, ನಿಖಿಲತತ್ತ್ವಸಾಮ್ಯಸ್ಮೃತಿಃ-ಅನುಭವದಿಂ ಮೇಲೆ ಸಕಲತತ್ವಂಗಳ ಸಮಾನತೆಯ ಸ್ಮರಣವು (ಪಿಂಡಾಂಡರೂಪವಾದ ಸಕಲ ತತ್ವಂಗಳಿಗೆ ತನ್ನನ್ನು ಸಾಕ್ಷಿಕನಾಗಿ ತಿಳಿವಾತನೆಂಬುದಭಿಪ್ರಾಯ), ಸ್ಮೃತೇಃ-ಆ ತಿಳಿವಿನ, ಅವಿಚಲಾ-ಚಲಿಸದೆ ಇರ್ಪಂಥ, ಸ್ಥಿತಿಃ-ನಿಲುಗಡೆಯು (ಆ ತಿಳಿವನ್ನು ಮರಳಿ ವಿಕಲ್ಪಕ್ಕೆ ತಾರದೆ ಇಹುದೆಂಬುದರ್ಥ), ಸ್ಥಿರತಯಾ-ಆ ಅಖಂಡಿತ ವಸ್ತುವಿನ ವಿಷಯಸಾಮರಸ್ಯದಸ್ಥಿರತ್ವದಿಂದ, ನಿಧಿಧ್ಯಾಸತಾ-ಇದಿರಿಟ್ಟು ಧ್ಯಾನವಂ ಮಾಡಲಿಚ್ಛೈಸದಿಹತನವು, ಸದೇಕಪರಿಭಾವನಾ-ಸನ್ಮಾತ್ರವೇ ಉಳುಮೇಯಾದ ಪೂರ್ಣಭಾವವು, ಸಹಜತಾ-ನಿರುಪಾಧಿಕತ್ವವು, ಅನಾಯಾಸತಾ-ತ್ರಿಪುಟಿರೂಪವಾದ ಆಯಾಸವಿಲ್ಲದಿಹತನವು, ಸತತನಿರ್ವಿಕಲ್ಪಾತ್ಮಕಃ-ಅನವರತವೂ ನಿರ್ವಿಕಲ್ಪರೂಪಮಾಗಿರ್ಪಂಥ, ಸಮಾಧಿರತಿ-ಸಮಾಧಿಯೋಗವೆಂದು, ಕೀರ್ತಿತೋ ಹಿ-ಹೇಳಲ್ಪಟ್ಟಿತಲಾ.

●

ಸೂ : ಈ ಪ್ರಕಾರದಿಂ ಜ್ಞಾನಾಷ್ಟಾಂಗಯೋಗಮಂ ಪೇಳ್ದು ಮುಂದೆ ಪೇಳ್ವ ರಾಜಯೋಗವು ಗುರುಕೃಪಾಸಾಧ್ಯವಲ್ಲದೆ ಕ್ರಿಯಾಸಾಧ್ಯವಲ್ಲವೆಂದು ಪೇಳ್ದಪಂ-

ಅಥ ಶೃಣು ಮಹಾಶ್ಚರ್ಯಂ ರಾಜಯೋಗಾಭಿಧಾನಾಕಂ ।

ಇಮಂ ಸದ್ಗುರುಣಾ ಯಾತಿ ಸಜ್ಜನೋ ನಾನ್ಯಕರ್ಮಭಿಃ ॥ ॥೧೨॥

ಅಥ–ಅನಂತರದಲ್ಲಿ, ಮಹಾಶ್ಚರ್ಯಂ–ಮುಂದೆ ಪೇಳ್ದ ಮಹಾಶ್ಚರ್ಯ ರೂಪವಾಗಿರ್ಪಂಥ, ರಾಜಯೋಗಾಭಿಧಾನಕಂ–ರಾಜಯೋಗವೆಂಬ ಹೆಸರುಳ್ಳಹುದನು, ಶೃಣು–ಕೇಳು, ಇಮಂ–ಈ ರಾಜಯೋಗವನ್ನು, ಸಜ್ಜನಃ–ಶಕ್ತಿಪಾತ ಪವಿತ್ರಿತಾಂತಃಕರಣನಾದ ಸಜ್ಜನನಂ, ಸದ್ಗುರುಣಾ–ಶ್ರೀಗುರುವಿನಿಂದ, ಯಾತಿ–ಹೊಂದುತ್ತಾನೆ. ಅನ್ಯಕರ್ಮಭಿಃ–ಅನ್ಯವಾದ ಹಠಕರ್ಮಂಗಳಿಂದ, ನ ಯಾತಿ – ಹೊಂದುವದಿಲ್ಲ.

●

ಸೂ : ಗುರುಕಟಾಕ್ಷದಿಂದವೇ ರಾಜಯೋಗಸಿದ್ಧಿಯಾಗಿಪ್ಪುದೆಂದು ಪೇಳ್ದಪಂ–

ದುಷ್ಕರಾಭ್ಯಾಸಯೋಗೇನ ಮಹಾಯಾಸೇನ ಕಿಂ ಫಲಂ ।

ಕ್ಷಣೇನ ಲಭ್ಯತೇ ಬ್ರಹ್ಮ ಸದ್ಗುರೋರವಲೋಕನಾತ್ ॥ ॥೧೩॥

ಮಹಾಯಾಸೇನ–ಬಹುಪ್ರಯಾಸವಾದಂಥ, ದುಷ್ಕರಾಭ್ಯಾಸಯೋಗೇನ–ಅಸಕ್ಯವಾದ ಅಭ್ಯಾಸಯೋಗವೆನಿಸಿದ ಹಠದಿಂದ, ಕಿಂ ಫಲಂ–ಏನು ಪ್ರಯೋಜನವು ? ಸದ್ಗುರೋಃ–ಆಚಾರ್ಯನ, ಅವಲೋಕನಾತ್–ಕಟಾಕ್ಷವೀಕ್ಷಣದಿಂದೆ, ಬ್ರಹ್ಮ–ಬ್ರಹ್ಮವು, ಕ್ಷಣೇನ–ಕ್ಷಣಮಾತ್ರದಿಂದ, ಲಭ್ಯತೇ–ಸಾಕ್ಷಾತ್ಕಾರೂಪವಾಗಿ ಪಡೆಯಲ್ಪಡುತ್ತಿದ್ದಿತು.

ಗುರೋರಾಲೋಕಮಾತ್ರೇಣ ಸ್ಪರ್ಶಾತ್ಸಂಭಾಷಣಾದಪಿ ।

ಸದ್ಯಸ್ಸಂಜಾಯತೇ ಪ್ರಜ್ಞಾ ಪಾಶಾಘಕ್ಷಯಕಾರಿಣೀ ।

ತಯಾ ಸಂಜಯಾತೇ ತತ್ತ್ವವಿಚಾರಃ ಪುರುಷಸ್ಯ ತಂ ॥

ಎಂದುದಾಗಿ

●

ಸೂ : ಆ ಬ್ರಹ್ಮವು ಒಳ–ಹೊರಗೆ ಪೂರ್ಣವಾಗಿದ್ದರೂ ಗುರೂಪದೇಶದಿಂದಲ್ಲದೆ ಕಾಣಿಸದೆಂದು ಪೇಳ್ದಪಂ–

ಬಾಹ್ಯೇ ಚಾಭ್ಯಂತರೇ ಬ್ರಹ್ಮ ಸರ್ವಜಂತುಷು ಭಾಸತೇ ।

ತಥಾಽಪಿ ಗುರುಮಜ್ಞಾತ್ವಾ ತೇನ ಪಶ್ಯಂತಿ ತತ್ಪದಂ ॥ ॥೧೪॥

ಸರ್ವಜಂತುಷು–ಸಕಲಪ್ರಾಣಿಗಳಲ್ಲಿ, ಬ್ರಹ್ಮ–ಬ್ರಹ್ಮರೂಪದಿಂ ಸಕಲಕ್ಕೆ ಲಯಂ ಗಮನಸ್ಥಾನಮಾಗಿ ಮಹಾಲಿಂಗಮೆನಿಸುವ ತಾರಕಬ್ರಹ್ಮವು, ಬಾಹ್ಯೇ ಚ–ಪಿಂಡಾಂಡದ ಹೊರಗೂ, ಅಭ್ಯಂತರೇ ಚ–ಒಳಗೂ, ಭಾಸತೇ–ಪ್ರಕಾಶಿಸುತ್ತಿದ್ದಿತು. ತಥಾಽಪಿ–ಹಾಗಾಯಿತ್ತಾದರೂ, ಗುರುಂ–ಆಚಾರ್ಯನನ್ನು, ಅಜ್ಞಾತ್ವಾ –ಅರಿಯದೆ, ತತ್ಪದಂ–ಆ ವಸ್ತುವನ್ನು, ತೇ–ಆವ ಪ್ರಾಣಿಗಳು, ನ ಪಶ್ಯಂತಿ–ಕಾಣಲಾರವು.

ತಾತ್ಪರ್ಯ : ಮುಂದೆ ಗುರುಕಾರುಣ್ಯದಿಂದಾದ ರಾಜಯೋಗೋಪದೇಶದಿಂದ ಬ್ರಹ್ಮವು ಕಾಣಲ್ತಕ್ಕುದೆಂದು ಅಭಿಪ್ರಾಯಂ.

•

ಸೂ : ಈ ಬ್ರಹ್ಮಸಾಕ್ಷಾತ್ಕಾರವು ಗುರೂಪದೇಶವಿಲ್ಲದೆ ಆವ ಸಮರ್ಥರಿಗೂ ಆಗದೆಂದು ಪೇಳ್ದಪಂ–

ಖಂಡಜ್ಞಾನವತಾಂ ಚ ಷಟ್ಸಮಯಸಂಮೋಹಾಂಧಕಾರಾತ್ಮನಾಂ
ನಾನಾವೇದಪುರಾಣಶಾಸ್ತ್ರಕವಿತಾವಾಗ್ವೈಖರೀಶಾಲಿನಾಂ ।
ಮೂಢನಾಂ ಚತುರಾಶ್ರಮೈಕನಿಯಮಾದ್ಗರ್ವಾತ್ಮಕಾನಾಂ ಕಥಂ
ಯೋಗಜ್ಞಾನಮಿದಂ ಭವೇದ್ಗುರುಮುಖಾಭಾವೇಽಪರೋಕ್ಷಾತ್ಮಕಂ ॥ ॥೧೫॥

ಖಂಡಜ್ಞಾನವತಾಂ–ಸ್ರಕ್ಚಂದನಾದಿ¹ಭೋಗ್ಯ¹ವಸ್ತುಬಾಧೆಗಳಿಂದ ಖಂಡಿತಜ್ಞಾನವುಳ್ಳವರಿಗೂ, ಷಟ್ಸಮಯಸಂಮೋಹಾಂಧಕಾರಾತ್ಮನಾಂ–ನ್ಯಾಯ ವೈಶೇಷಿಕಸಾಂಖ್ಯ, ಪಾತಂಜಲಿ ಮಾಯಾವಾದ ಮೀಮಾಂಸವೆಂಬ ಷಡ್ದರ್ಶನ ಭ್ರಾಂತಿಯೆಂಬ ಅಂಧಕಾರದಿಂ ಮುಸುಕಿದ ಸ್ವಸ್ವರೂಪವುಳ್ಳಂಥವರಿಗೂ, ನಾನಾ ವೇದ ಪುರಾಣಶಾಸ್ತ್ರಕವಿತಾವಾಗ್ವೈಖರೀಶಾಲಿನಾಂ–ವಿಚಿತ್ರರೂಪಗಳಾದ ವೇದಶಾಸ್ತ್ರ ಪುರಾಣಕವಿತೆಗಳೆಂಬ ನುಡಿಗಳ ವೈಖರಿ ಮಾತ್ರದಿಂದೊಪ್ಪುತಿರ್ಪವರಿಗೂ, ಚತುರಾಶ್ರಮೈಕನಿಯಮಾತ್–ಬ್ರಹ್ಮಚಾರಿ ಗೃಹಸ್ಥ ವಾನಪ್ರಸ್ಥ ಭಿಕ್ಷು ಎಂಬ ನಾಲ್ಕಾಶ್ರಮಂಗಳಲ್ಲಿಯೂ ಮುಖ್ಯವಾದ ನಿಯಮದ ದೆಸೆಯಿಂದ, ಗರ್ವಾತ್ಮಕಾನಾಂ–ಅಹಂಕಾರಿಗಳಾಗಿರ್ಪಂಥ, ಮೂಢಾನಾಂ ಚ–ವಿವೇಕವಿಲ್ಲದವರಿಗೂ, ಅಪರೋಕ್ಷಾತ್ಮಕಂ–ಬ್ರಹ್ಮಸಾಕ್ಷಾತ್ಕರರೂಪಮಾಗಿರ್ಪಂಥ, ಇದಂ–ಈ ಮುಂದೆ ಪೇಳ್ವ, ಯೋಗಜ್ಞಾನಂ–ರಾಜಯೋಗಜ್ಞಾನವು, ಗುರುಮುಖಾಭಾವೇ–ಗುರೂಪದೇಶವಿಲ್ಲದಿರಲಾಗಿ, ಕಥಂ–ಹೇಗೆ, ಭವೇತ್–ಆಗುವುದು?

•

ಸೂ : ಈ ರಾಜಯೋಗ ಸಾಧನಮಾದ ಗುರುಪ್ರಸಾದವು ಬಹುವಿಧ ವ್ಯಾಪಾರಂಗಳು ತೊಲಗಿ²ದ ಧರ್ಮಾತ್ಮನಿ²ಗಲ್ಲದೆ ಆಗದೆಂದು ಪೇಳ್ದಪಂ–

ಕ್ಷೇತ್ರಾರ್ಥರಮ್ಯಗೃಹಪುತ್ರಕಳತ್ರಮಿತ್ರೈಃ
ಖಿನ್ನೈರ್ಮಹಾರಸಗಸಾಯನಧಾತುವಾದೈಃ ।
ತೈಃ ಕಾಮ್ಯಮಂತ್ರಲಯಯೋಗಹಠಾದಿ ಭೇದೈ
ರ್ಬದ್ಧಾತ್ಮನಾಂ ಕಥಮಿಹಾಸ್ತಿಗುರೋಃ ಪ್ರಸಾದಃ ॥ ॥೧೬॥

ಕ್ಷೇತ್ರಾರ್ಥರಮ್ಯಗೃಹಪುತ್ರಕಳತ್ರಮಿತ್ರೈಃ, ಕ್ಷೇತ್ರ–ಉದ್ಯೋಗದಿಂದ ಫಲಿತಮಪ್ಪ ಕ್ಷೇತ್ರಗಳಿಂದ, ಅರ್ಥ–ದ್ರವ್ಯಂಗಳಿಂದ, ರಮ್ಯಗೃಹ–ಮನೋಹರಂಗಳಾದ ಭವನಂಗಳಿಂದ, ಪುತ್ರ–ಸುತರಿಂದ, ಕಳತ್ರ–

೧–೧ x (ಮೈ) ೨–೨ ದಾತಂ (ಕ)

ಸ್ತ್ರೀಯರಿಂದ, ಮಿತ್ರೈಃ–ಸ್ನೇಹಿತರಿಂದ; ಖಿನ್ನೈಃ–ದುಃಖರೂಪಂಗಳಾಗಿರ್ಪಂಥ, ಮಹಾರಸ ರಸಾಯನಧಾತುವಾದ್ಯೈಃ–ಮಹತ್ತಾದ ರಸರಸಾಯನಧಾತುವಾದಂಗಳಿಂದವೂ, ತೈಃ–ಆ ಪೂರ್ವೋದಿತಂಗಳಾಗಿರ್ಪಂಥ, ಕಾಮ್ಯಮಂತ್ರಲಯಯೋಗಹಠಾದಿಭೇದೈಃ, ಕಾಮ್ಯ–ಕಾಮಿಸಿ ಮಾಡುವ ಕರ್ಮಾನುಷ್ಠಾನಂಗಳಿಂದವೂ, ಮಂತ್ರ–ಅಕ್ಷರಾತ್ಮಕವಾದ ಮಂತ್ರಚಿಂತನೆಗಳಿಂದಲೂ, ಲಯಯೋಗ –ವೈಕೃತಪ್ರಾಣಾಯಾಮರೂಪವಾದ ಲಯಯೋಗದಿಂದಲೂ, ಹಠಾದಿಭೇದೈಃ–ಹಠಾದಿಕದಿಂ ಭಿನ್ನವಾದ ವ್ಯಾಪಾರಂಗಳಿಂದವೂ, ಬದ್ಧಾತ್ಮನಾಂ–ಬಂಧಿಸಲ್ಪಟ್ಟ ಸ್ವರೂಪವುಳ್ಳವರ್ಗೆ, ಇಹ–ಈ ರಾಜಯೋಗದಲ್ಲಿ, ಗುರೋಃ–ಆಚಾರ್ಯನ, ಪ್ರಸಾದಃ–ಕೃಪಾಪ್ರಸಾದವು, ಕಥಂ–ಆವ ಪ್ರಕಾರದಿಂದಲೂ, ಅಸ್ತಿ–ಉಂಟಾಗುತ್ತಿದ್ದಿತು.

ತಾತ್ಪರ್ಯ : "ಆಚಾರ್ಯದೇವೋ ಭವ, ಅತಿಥಿದೇವೋ ಭವ" (ಆಚಾರ್ಯನೇ ಇಷ್ಟದೇವವುಳ್ಳಾತನಾಗು) ಎಂಬ ಶ್ರುತಿಪ್ರಮಾಣದಿಂದ ಆಚಾರ್ಯನೇ ಶಿವನೆಂದು ತಿಳಿದಾತಂಗೆ ಯೋಗಸಿದ್ಧಿಯಪ್ಪುದೆಂದಭಿಪ್ರಾಯ.

●

ಸೂ : ರಾಜಯೋಗೋಪದೇಶಕ್ಕೆ ಯೋಗ್ಯನಾದ ಶಿಷ್ಯನು ಆ ಬ್ರಹ್ಮಜ್ಞಾನಿಯಾದ ಗುರುವನ್ನೇ ಆಶ್ರಯಿಸಬೇಕೆಂದು ಪೇಳ್ದಪಂ–

ಅದೌ ವರ್ಣಾಶ್ರಮಾಚಾರೋ ಗುರೌ ಬ್ರಹ್ಮಜ್ಞತಾಸ್ತಿಚೇತ್ ।
ಭಜೇತ್ತಮೇವ ಯತ್ನೇನ ನೋಚೇದನ್ಯಗುರುಂ ವ್ರಜೇತ್ ॥ ॥೧೭॥

ಗುರೌ–ಶ್ರೀಗುರುವಿನಲ್ಲಿ, ವರ್ಣಾಶ್ರಮಾಚಾರಃ–ಬ್ರಾಹ್ಮಣಾದಿವರ್ಣಕ್ಕೆ ತಕ್ಕ ಸದಾಚಾರವು ಬ್ರಹ್ಮಚರ್ಯಾಶ್ರಮಕ್ಕೆ ತಕ್ಕ ಆಚಾರವು, ಬ್ರಹ್ಮಜ್ಞತಾ–ಬ್ರಹ್ಮವನರಿತನವು, ಅಸ್ತಿಚೇತ್–ಇದ್ದದ್ದಾದರೆ, ಆದೌ –ಮೊದಲಲ್ಲಿ, ತಮೇವ–ಆ ಗುರುವನ್ನೇ, ಯತ್ನೇನ–ಯತ್ನದಿಂದ, ಭಜೇತ್–ಸೇವಿಸುವುದು, ನೋಚೇತ್ –ಆತನಲ್ಲಿ ಜ್ಞಾನಾಚಾರಗಳಲ್ಲದಿರ್ದೊಡೆ, ಅನ್ಯಗುರುಂ–ಮತ್ತೊಬ್ಬ ವಿಶಿಷ್ಟನಾದ ಗುರುವನ್ನು, ವ್ರಜೇತ್ –ಎಯ್ದುವುದು.

●

ಸೂ : ಅನಂತರದಲ್ಲಿ ಈ ರಾಜಯೋಗದಿಂ ಸಾಧ್ಯವಪ್ಪ ಬ್ರಹ್ಮ ಸ್ವರೂಪಮಂ ಪೇಳ್ದು ಆ ಬ್ರಹ್ಮವನರಿದಾತನೇ ಶ್ರೀಗುರುವೆಂದು ಪೇಳುತ್ತಿರ್ದಪಂ–

ಆತ್ಮಾನಮದ್ವಂದ್ವಮನಂತಮಾದ್ಯಂ ನಿರಂಜನಂ ನಿಶ್ಚಲನಿತ್ಯತೃಪ್ತಂ ।
ಸಚ್ಚಿನ್ಮಯಾನಂದಪರಾಮೃತಂ ಯೋ ವೇತ್ತಿ ಸ್ವಭಾವೇನೇ ಗುರುಸ್ಸ ಏವ ॥ ॥೧೮॥

ಅದ್ವಂದ್ವಂ–ಅನಾದಿ ಮುಕ್ತನಪ್ಪುದರಿಂ ತನಗೆ ಜೋಡಿಲ್ಲದಿರ್ಪಂಥ, ಅನಂತಂ–ದೇಶಕಾಲಂಗಳಿಂದನವಚ್ಛಿನ್ನನಾಗಿರ್ಪಂಥ, ಆದ್ಯಂ–ಷಡಧ್ವಕ್ಕೆ ತಾನೇ ಮೊದಲಿಗನಾಗಿರ್ಪಂಥ, ನಿರಂಜನಂ–ಅನಾದಿನಿರ್ಮಲನಪ್ಪುದರಿಂದ ನಿರಾವರಣನಾಗಿರ್ಪಂಥ, ನಿಶ್ಚಲನಿತ್ಯತೃಪ್ತಂ–ಚಲಿಸದೇ ಇರ್ದ ನಿತ್ಯತೃಪ್ತಿಯೇ ಸ್ವರೂಪವಾಗಿರ್ಪಂಥ (ಶುದ್ಧಾಶುದ್ಧ ಭೋಗಭೋಕ್ತೃತ್ವವಿಲ್ಲವಾಗಿ ಸಂಪೂರ್ಣ

[1]ಕಾಮ[1]ನೆಂಬುದಭಿಪ್ರಾಯಂ), ಸಚ್ಚಿನ್ಮಯಾನಂದಪರಾಮೃತಂ–ಸದ್ರೂಪ ಚಿದ್ರೂಪ ಆನಂದರೂಪಮಾದ ಕುಂಡಲಿನಿಗೆ ಮೇಲಾದ ಮೋಕ್ಷಸ್ಥಾನವಾದಂಥ.

ಸಾ ಚ ಕುಂಡಲಿನೀಶಂಭೋರ್ನಿತ್ಯಾಧಿಷ್ಠೀಯರೂಪಿಣೀ

ಎಂದುದಾಗಿ, ಆತ್ಮಾನಂ–ಪರಮಾತ್ಮನನ್ನು ಯಃ–ಅವತಾನು, ಸ್ವಭಾವೇನ–ಸ್ವಪ್ರಕಾಶರೂಪಮಾದ ತನ್ನ, ಭಾವೇನ–ಪರಪ್ರಕಾಶ ರೂಪಮಾದ ವಿಮಲಚೈತನ್ಯದಿಂದ, ವೇತ್ತಿ–ಅಪರೋಕ್ಷದಿಂ ಕಾಣುತ್ತಿದ್ದಾನೋ, ಸ ಏವ–ಆತನೇ, ಗುರುಃ–ಆಚಾರ್ಯನು (ಸಗುಣನಿರ್ಗುಣವಾದ ಪರಬ್ರಹ್ಮಸಾಕ್ಷಾತ್ಕಾರಮುಳ್ಳಾತನೇ ಗುರುವೆಂಬುದಭಿಪ್ರಾಯಂ).

●

ಸೂ : ಅನಂತರದಲ್ಲಿ ಪ್ರಥಮೋದಿಷ್ಟವಾದ ಸಾಂಖ್ಯಯೋಗವೇ ತತ್ತ್ವಜ್ಞಾನರೂಪಮಪ್ಪುದರಿಂದೆ, ಆ ತತ್ತ್ವಜ್ಞಾನಮಂ ತತ್ತ್ವಂಗಳಂ ವಿಲಕ್ಷಿಸಿದ ಶ್ರೀಗುರುವಿನಿಂದ ಅಭ್ಯಾಸಮಂ ಮಾಳ್ಪುದೆಂದು ಪೇಳ್ದಪಂ–

ಜ್ಞಾನವೈರಾಗ್ಯಭಾವೇನ ತೃಣೀಕೃತಜಗತ್ತ್ರಯಂ
ಆದೌ ಸದ್ಗುರುಮಾಶ್ರೀತ್ಯ ತತ್ತ್ವಜ್ಞಾನಂ ಸಮಭ್ಯಸೇತ್ ॥ ॥೧೯॥

ಜ್ಞಾನವೈರಾಗ್ಯಭಾವೇನ : [2](ಮಯಾಜನಿತ ವಸ್ತುಗಳ)[2] ಜ್ಞಾನ–ಮುಂದೆ ಪೇಳ್ದ ಪಂಚವಿಂಶತಿತತ್ವಂಗಳ್ ತಾನಲ್ಲ ತನ್ನವಲ್ಲವೆಂಬ ವಿವೇಕರೂಪಮಾದ ತಿಳಿವಿನಿಂದಲೂ, ವೈರಾಗ್ಯಭಾವೇನ–ಆ ಮಾಯಾಜನಿತವಸ್ತುಗಳಲ್ಲಿ ಬೇಕುಬೇಡೆಂಬುದಳಿದು ನಿಂದ ನಿರ್ಮಲವಿರಕ್ತಿಯಿಂದಲೂ; ತೃಣೀಕೃತಜಗತ್ತ್ರಯಂ–ತೃಣೀಕರಿಸಲ್ಪಟ ಮೂರುಲೋಕಂಗಳುಳ್ಳಂಥ, ಸದ್ಗುರುಂ–ಆ ಶ್ರೀ ಗುರುವನ್ನು, ಆಶ್ರಿತ್ಯ–ಆಶ್ರಯಿಸಿ, ಆದೌ–ಮೊದಲಲ್ಲಿ, ತತ್ತ್ವಜ್ಞಾನಂ–ಮುಂದೆ ಪೇಳ್ವ ಪಂಚೀಕರಣ ರೂಪಮಾದ ಪಂಚವಿಂಶತಿತತ್ತ್ವಂಗಳನ್ನು ವಿಲಕ್ಷಿಸುವ ಅರಿವನ್ನು, ಸಮಭ್ಯಸೇತ್–ಅನ್ಯೋನ್ಯಾಧ್ಯಾಸವಾಗದಂತೆ ಚನ್ನಾಗಿ ಅಭ್ಯಾಸಮಂ ಮಾಡುವದು ಎಂಬರ್ಥ.

ಅಯೋ ದುಃಖೋದಧೌ ಮಗ್ನೋ ನ ಪಶ್ಯಾಮಿ ಪ್ರತಿಕ್ರಿಯಾಂ ।
ಯದಿ ಯೋನ್ಯಾಃ ಪ್ರಮುಂಚಾಮಿ ಸಾಂಖ್ಯಯೋಗಂ ಸಮಾಶ್ರಯೇ ॥

ದುಃಖಾರ್ಣವದೊಳ್ಮುಳುಂಗಿದಾತನು ಯೋನಿಯಂ ಪೊರಮಡುತ್ತವೆ ಮೋಕ್ಷಾರ್ಥಮಾಗಿ ಸಾಂಖ್ಯಯೋಗವನಾಶ್ರಯಿಸುವೆನೆಂದು ಗರ್ಭದ ಶಿಶುವು ಚಿಂತಿಪುದೆಂಬ ಶ್ರುತಿಪ್ರಮಾಣದಿಂ ಸಾಂಖ್ಯಯೋಗಮಂ ಸಾಧಿಪುದೆಂಬುದಭಿಪ್ರಾಯಂ.

●

ಸೂ : ಅನಂತರದಲ್ಲಿ ಸಾಂಖ್ಯಯೋಗದ ರೂಪವಾದ ತತ್ತ್ವಜ್ಞಾನಮಂ ಪೇಳಲ್ ಸೃಷ್ಟಿಕ್ರಮದಿಂದ ಆಕಾಶಪಂಚೀಕರಣಮಂ ಪೇಳುತ್ತಿರ್ದಪಂ–

೧–೧ x (ಮೈ) ೨ x (ಕ).

ಜ್ಞಾತೃತ್ವಮಂತರಿಕ್ಷಂ ಚ ಸಮಾನೋ ವಾಯುರೇವ ಚ ।
ಶ್ರೋತ್ರಮಗ್ನಿರ್ಧ್ವನಿರ್ವಾರಿ ವಾಗ್ಭೂಃ ಖೇ ತತ್ತ್ವಪಂಚಕಂ ॥ ॥೨೦॥

ಜ್ಞಾತೃತ್ವಂ-ಆತ್ಮನು ಜಾಗ್ರದವಸ್ಥೆಯಲ್ಲಿ ಭ್ರೂಮಧ್ಯದಲ್ಲಿರ್ಪನಾಗಿ ಅದೇ ಆಕಾಶ ಸ್ಥಾನಮಪ್ಪುದರಿಂದ ಅಲ್ಲಿ ಕಲೋದ್ವಲಿತಚೈತನ್ಯಮಾದ ಆತ್ಮನ ಜ್ಞಾತೃತ್ವವೇ, ಅಂತರಿಕ್ಷಂ-ಆಕಾಶದೊಳಗಣ ಆಕಾಶವು (ಪೃಥ್ವಿಯನೊಳಗೊಂಡುದಪ್ಪು, ಅಪ್ಪುವನೊಳಗೊಂಡುದಗ್ನಿ, ಅಗ್ನಿಯನೊಳಕೊಂಡುದು ವಾಯು, ವಾಯುವನೊಳಕೊಂಡುದಾಕಾಶ, ಆಕಾಶವನೊಳಕೊಂಡುದು ಆತ್ಮ, ಆ ಆತ್ಮನೇ ಪಂಚಕುಂಚುಕಯುಕ್ತವಾಗಿ ಪ್ರ[೧]ವೃತ್ತಿ[೧]ಮುಖದಿಂದ ಆಕಾಶಸ್ಥಾನದಲ್ಲಿ ನಿಂದು ವಿಷಯಂಗಳನರಿಯಲ್ ಉನ್ಮುಖತ್ವವೇ ಜ್ಞಾತೃತ್ವ, ಆ ಜ್ಞಾತೃತ್ವವೇ ಆಕಾಶವೆಂಬುದಭಿಪ್ರಾಯಂ). ಸಮಾನಃ-ಅನ್ನರಸಮಂ ಸಕಲರೋಮಕೂಪಂಗಳಿಗೆ ವಿಭಾಗಿಸಲ್ ದೇಹವ್ಯಾಪಾರವಾದ ಸಮಾನವಾಯುವೇ, ವಾಯುಃ-ಆಕಾಶತತ್ವದಲ್ಲಿ ಈ ವಾಯುವು, ಶ್ರೋತ್ರಮೇವ ಚ-ಶಬ್ದಪ್ರಕಾಶಮಾದ ಶ್ರೋತ್ರೇಂದ್ರಿಯವೇ, ಅಗ್ನಿಃ-ಅಗ್ನಿತತ್ವವು [೨](ವಾಕ್ಯವರ್ಣಂಗಳ ಉತ್ಪತ್ತಿಗೆ ಆಧಾರವಾದ)[೨] ಧ್ವನಿಃ-ವೀಚೀತರಂಗನ್ಯಾಯದಿಂ ಪಸರಿಸುವ ಧ್ವನಿಯೇ, ವಾರಿ-ಅಪ್ಪುತತ್ವವು, ವಾಕ್‌ವರ್ಣಗಳ ಉತ್ಪತ್ತಿಗೆ ಆಧಾರವಾದ ವಾಗಿಂದ್ರಿಯವೇ, ಭೂಃ-ಪೃಥ್ವೀತತ್ವವೆಂಬಿವು, ಖೇ-ಆಕಾಶದಲ್ಲಿಯ, ತತ್ತ್ವಪಂಚಕಂ-ಐದು ತತ್ತ್ವಗಳು.

●

ಸೂ : ಅನಂತರದಲ್ಲಿ ವಾಯುವಿನಲ್ಲಿಯೂ ಭೂತಪಂಚಕಮಂ ಪೇಳ್ದಪಂ-

ಮನ ಏವ ವಿಯದ್ವ್ಯಾನೋ ವಾಯುಶ್ಚರ್ಮಧನಂಜಯಃ ।
ಸ್ಪರ್ಶೋಽಂಭಶ್ಚ ಕ್ಷಮಾಪಾಣೀರ್ಮರುತಸ್ತತ್ವಪಂಚಕಂ ॥ ॥೨೧॥

ಮನ ಏವ-ಮನಸ್ಸೇ, ವಿಯತ್-ವಾಯುವಿನೊಳಗಣ ಆಕಾಶವು, ವ್ಯಾನಃ-ವ್ಯಾನವೆಂಬುದೆ, ವಾಯುಃ-ವಾಯುತತ್ವವು, ಚರ್ಮ-ತ್ವಗೀಂದ್ರಿಯವೇ, ಧನಂಜಯಃ-ಅಗ್ನಿಯು, ಸ್ಪರ್ಶಃ-ಸ್ಪರ್ಶವೆಂಬ ವಿಷಯವೇ, ಅಂಭಃ-ಉದಕವು, ಪಾಣಿಃ-ಪಾಣೀಂದ್ರಿಯವೆ, ಕ್ಷಮಾ ಚ-ಭೂಮಿಯು, ಇವು, ಮರುತಃ -ವಾಯುವಿನ ಸಂಬಂಧಗಳಾದ, ತತ್ವಪಂಚಕಂ-ಐದು ತತ್ವಂಗಳು.

●

ಸೂ : ಅನಂತರದಲ್ಲಿ ಅಗ್ನಿಯಲ್ಲಿಯ ತತ್ವಪಂಚಕಮಂ ಪೇಳುತ್ತಿರ್ದಪಂ-

ನಭೋ ಬುದ್ಧಿರುದಾನಶ್ಚ ಮರುದ್ಗೌರ್ವಹ್ನಿರೇವ ಚ ।
ಪಾಥೋರೂಪಂ ಧರಾ ಪಾದೋವಹ್ನೇರ್ಯತ್ತತ್ತ್ವಪಂಚಕಂ ॥ ॥೨೨॥

ಬುದ್ಧಿಃ-ಬುದ್ಧಿತತ್ವವೇ, ನಭಃ-ಅಗ್ನಿತತ್ವದಲ್ಲಿಯ ಆಕಾಶವು, ಉದಾನಶ್ಚ-ಉದಾನವಾಯುವೇ, ಮರುತ್-ವಾಯುತತ್ವವು, ಗೌರೇವ ಚ-ನೇತ್ರೇಂದ್ರಿಯವೇ, ವಹ್ನಿಃ-ಅಗ್ನಿಯು, ರೂಪಂ-ರೂಪವೆಂಬ ವಿಷಯವೆ, ಪಾಥಃ-ಉದಕವು, ಪಾದಃ-ಪಾದೇಂದ್ರಿಯವೇ, ಧರಾ-ಭೂಮಿಯು, ಹೀಗೆಂಬ, ಯತ್ -ಯಾವುದೋ, ಅದು, ವಹ್ನೇಃ-ಅಗ್ನಿಸಂಬಂಧಮಾದ, ತತ್ವಪಂಚಕಂ-ಐದು ತತ್ತ್ವಂಗಳು.

●

೧-೧ ಕೃತಿ (ಕ). ೨-೨ x (ಕ).

ಸೂ : ಅನಂತರದಲ್ಲಿ ಉದಕದಲ್ಲಿಯ ತತ್ತ್ವಪಂಚಕಮಂ ಪೇಳ್ದಪಂ–

ಚಿತ್ತಂ ವಿಷ್ಣುಪದಂ ವಾಯುರಪಾನೋ ರಸನಾಽನಲಃ ।

ರಸೋಜಲಮುಪಸ್ಥೋ ಭೂರಪಾಂ ತತ್ತತ್ತ್ವಪಂಚಕಂ ॥ ॥೨೩॥

ಚಿತ್ತಂ–ಚಿತ್ತವೆಂಬ ಅಂತಃಕರಣವೇ, ವಿಷ್ಣುಪದಂ–ಅಮೃತತತ್ವದಲ್ಲಿಯ ಆಕಾಶವು, ಅಪಾನಂ–ಅಪಾನವಾಯುವೇ, ವಾಯುಃ–ವಾಯುತತ್ತ್ವವು, ರಸನಾ–ಜಿಹ್ವೇಂದ್ರಿಯವೇ, ಅನಲಃ–ಅಗ್ನಿಯು, ರಸಃ –ರಸವೆಂಬ ವಿಷಯವೇ, ಜಲಂ–ಉದಕವು, ಉಪಸ್ಥಃ–ಗುಹ್ಯೇಂದ್ರಿಯವೇ, ಭೂಃ–ಪೃಥ್ವಿಯು, ತತ್ –ಅದು, ಅಪಾಂ–ಉದಕದ, ತತ್ತ್ವಪಂಚಕಂ–ತತ್ತ್ವಂಗಳೈದು.

●

ಸೂ : ಅನಂತರದಲ್ಲಿ ಪೃಥ್ವೀತತ್ವಪಂಚಕಮಂ ಪೇಳ್ದಪಂ–

ಅಹಂಕಾರೋ ವಿಯತ್ಪ್ರಾಣೋವಾಯುರ್ಘ್ರಾಣಂ ಹುತಾಶನಃ ।

ಆಪೋ ಗಂಧೋ ಮಹೀ ಪಾಯುಃ ಪ್ರಥಿವ್ಯಾಂ ತತ್ತ್ವಪಂಚಕಂ ॥ ॥೨೪॥

ಅಹಂಕಾರಃ–ಅಹಂಕಾರವೆಂಬ ಅಂತಃಕರಣವೇ, ವಿಯತ್–ಪೃಥ್ವಿಯಲ್ಲಿಯ ಆಕಾಶವು, ಪ್ರಾಣಃ –ಪ್ರಾಣವಾಯುವೇ, ವಾಯುಃ–ವಾಯುತತ್ವವು, ಘ್ರಾಣಂ–ಘ್ರಾಣೇಂದ್ರಿಯವೇ, ಹುತಾಶನಃ–ಅಗ್ನಿಯು, ಗಂಧಃ–ಗಂಧವೆಂಬ ವಿಷಯವೇ, ಆಪಃ–ಉದಕವು, ಪಾಯುಃ–ಗುದವೆಂಬ ಇಂದ್ರಿಯವೇ, ಮಹೀ –ಪೃಥ್ವಿಯು ಇವು, ಪೃಥಿವ್ಯಾಂ–ಪೃಥ್ವೀತತ್ವದಲ್ಲಿಯ, ತತ್ತ್ವಪಂಚಕಂ–ತತ್ತ್ವಂಗಳೈದು.

ತಾತ್ಪರ್ಯ : ಜ್ಞಾತೃತ್ವ ಮನ ಬುದ್ಧಿ ಚಿತ್ತ ಅಹಂಕಾರಗಳೆಂಬ ಐದು ಸಕಲ ವ್ಯವಹಾರಂಗಳಿಗೆ ಅವಕಾಶಮಂ ಕೊಡುವುದರಿಂದೆ ಕ್ರಮದಿಂ ವ್ಯೋಮಾದಿ ಪಂಚತತ್ವಂಗಳಲ್ಲಿಯ ಆಕಾಶತತ್ವಂ ಗಳೆನಿಸಿಕೊಂಬವು. ಸಮಾನ ವ್ಯಾನ ಉದಾನ ಅಪಾನ ಪ್ರಾಣಂಗಳೆಂಬೈದು ದೇಹಾವಯವಂಗಳ ವ್ಯೂಹನಮಂ ಮಾಳ್ಪುದರಿಂದ ಕ್ರಮದಿಂ ಪಂಚಭೂತಂಗಳಲ್ಲಿಯ ವಾಯತತ್ತ್ವಮೆನಸಿಕೊಂಬವು. ಶ್ರೋತ್ರ ತ್ವಕ್ಕು ನೇತ್ರ ಜಿಹ್ವಾಘ್ರಾಣಂಗಳೆಂಬುವೈದು ಆತ್ಮಂಗೆ ವಿಷಯಂಗಳಂ ಪ್ರಕಾಶಿಸಿ ಭೋಗಪರಿಪಾಕಮಂ ಮಾಳ್ಪುದರಿಂ ಕ್ರಮದಿಂ, ಪಂಚಭೂತಂಗಳಲ್ಲಿಯ ಅಗ್ನಿತತ್ವಂಗಳೆನಿಸಿಕೊಂಬವು, ಶಬ್ದ ಸ್ಪರ್ಶ ರೂಪ ರಸ ಗಂಧಂಗಳೆಂಬೈದು ಪ್ರವಾಹರೂಪದಿಂದಾತ್ಮಂಗೆ ಗ್ರಹಣಯೋಗ್ಯಮಪ್ಪುದರಿಂ ಕ್ರಮದಿಂ ಪಂಚಭೂತಂಗಳಲ್ಲಿಯ ಅಪ್‌ತತ್ವವೆನಿಸಿಕೊಂಬವು. ವಾಕ್ಪಾಣಿ ಪಾದ ವಾಯು ಉಪಸ್ಥವೆಂಬೈದು ವಚನ ಆದಾನ ಗಮನ ವಿಸರ್ಜನ ವಿಹರಣವೆಂಬ ವ್ಯಾಪಾರಂಗಳಂ ಧರಿಸಿ ಸ್ಥೂಲವಪ್ಪುದರಿಂ ಈ ಕ್ರಮದಿಂ ಪಂಚಭೂತಂಗಳಲ್ಲಿಯು ಪೃಥ್ವೀತತ್ತ್ವಂಗಳೆನಿಸಿಕೊಂಬುವೆಂಬಭಿಪ್ರಾಯಂ,

●

ಸೂ : ಈ ಪ್ರಕಾರದಿಂದ ಪಂಚವಿಂಶತಿತತ್ತ್ವಂಗಳನರಿದಾತನೇ ಮುಕ್ತನೆಂದು ಪೇಳ್ದಪಂ–

ಪಂಚವಿಂಶತಿತತ್ತ್ವಾನಿ ಪಂಚಭೂತಸ್ಥಿತಾನಿ ಚ ।

ತಾನಿ ಯೋ ವೇತ್ತಿ ತತ್ವಜ್ಞಸ್ಸ ಏವ ಸ ತು ಮುಕ್ತಿಭಾಕ್ ॥ ॥೨೫॥

ತಾನಿ–ಆ ಪೂರ್ವೋದಿತಂಗಳಾದಂಥ, ಪಂಚಭೂತಸ್ಥಿತಾನಿ ಚ–ಪಂಚಭೂತಂಗಳಲ್ಲಿಯಿರ್ಪಂಥ, ಪಂಚವಿಂಶತಿತತ್ವಾನಿ–ಇಪ್ಪತ್ತೈದು ತತ್ತ್ವಂಗಳನು, ಯಃ–ಆವಾತನು, ವೇತ್ತಿ–ತನ್ನಿಂದನ್ಯವಾಗಿ ಕಾಣುತ್ತಿದ್ದಾನೋ, ಸ ಏವ–ಆತನೇ, ತತ್ವಜ್ಞಃ–ತತ್ತ್ವಜ್ಞಾನಿಯೆನಿಸುವನು, ಸ ತು–ಆತನೇ, ಮುಕ್ತಿಭಾಕ್ –ಮೋಕ್ಷಮಂ ಭಜಿಸುವವನು.

ತಾತ್ಪರ್ಯ : ಕಣ್ಣೊಳಗಿರ್ದ ಕಸವನ್ನು ತೆಗೆದು ಕಾಣಲ್ಬಾರ್ಧೆ ತೊಲಗುವಂತೆ ಈ ತತ್ವಂಗಳಂ ವಿಲಕ್ಷಿಸಿ ಕಾಣಲ್ಮುಕ್ತನಪ್ಪವನೆಂದಭಿಪ್ರಾಯಂ.

●

ಸೂ : ಈ ತತ್ತ್ವಂಗಳಂ ವಿವೇಕದಿಂ ವಿಭಾಗಿಸುವ ಪ್ರಕಾರಮಂ ಪೇಳ್ದಪಂ–

ಅಧ್ಯಾತ್ಮಿಕಾಧಿಭೌತಾಧಿದೈವತಾನಿ ಯಥಾಕ್ರಮಂ ।
ದಶೇಂದ್ರಿಯೇಷು ವಿಭಜನ್ ಜೀವಾಂತಃಕರಣೇಷು ಚ ॥ ॥೨೬॥

ಆಧ್ಯಾತ್ಮಿಕಾಧಿಭೌತಾಧಿದೈವತಾನಿ–ಆಧ್ಯಾತ್ಮಿಕ ಆಧಿಭೌತಿಕ ಅಧಿದೈವಿಕಂಗಳನ್ನು, ಯಥಾಕ್ರಮಂ–ಕ್ರಮವನ್ನು ಮೀರದೆ, ದಶೇಂದ್ರಿಯೇಷು–ಜಾನೇಂದ್ರಿಯ ಕರ್ಮೇಂದ್ರಿಯಗಳೆಂಬ ದಶವಿಧವಾದ ಬಾಹ್ಯೇಂದ್ರಿಯಗಳಲ್ಲಿಯು, ಜೀವಾಂತಃಕರಣೇಷು ಚ–ಜೀವನ ಅಂತಃಕರಣಚತುಷ್ಟದಲ್ಲಿಯು, ವಿಭಜನ್ –ವಿಭಾಗಿಸುತನವು (ತನ್ನ ನಿಜರೂಪಂ ಸ್ಮರಿಸಲ್ಬೇಕೆಂದು ಮುಂದಣ ಗ್ರಂಥದ ಕ್ರಿಯೆಯೊಡನೆ ಸಂಬಂಧಮಂ ತಿಳಿವುದು).

ತಾತ್ಪರ್ಯ : ಜ್ಞಾನೇಂದ್ರಿಯಂಗಳೈದು ಕರ್ಮೇಂದ್ರಿಯಂಗಳೈದು ಕರಣ ಚತುಷ್ಟಯವೆಂಬ ಹದಿನಾಲ್ಕು ಆಧ್ಯಾತ್ಮಿಕವೆನಿಸಿಕೊಂಬವು. ಇದಕ್ಕೆ ಸಮ್ಮತಿ–

ಬುದ್ಧೀಂದ್ರಿಯಾಣಿ ವಿಪ್ರೇಂದ್ರಾಸ್ತಥಾ ಕರ್ಮೇಂದ್ರಿಯಾಣಿ ಚ ।
ಮನೋಬುದ್ಧಿರಹಂಕಾರಶ್ಚಿತ್ತಂ ಚೇತಿ ಚತುಷ್ಟಯಂ ।
ಆಧ್ಯಾತ್ಮಂ ಪೃಥಗೇವೇದಂ ಚತುರ್ದಶವಿಧಂ ಸ್ಮೃತಂ ॥

ಈ ಶ್ರೋತ್ರಾದಿ ಚತುರ್ದಶವಿಧಿಕರಣಕ್ಕೆ ವಿಷಯಂಗಳಾಗಿ ಕೇಳಲು ಯೋಗ್ಯ ಕಾಣಲು ಯೋಗ್ಯಂಗಳ್ ಮೊದಲಾದ ಹದಿನಾಲ್ಕು ಆಧಿಭೌತಿಕಂಗಳೆನಿಸಿಕೊಂಬವು. ಇದಕ್ಕೆ ಸಮ್ಮತಿ–

ದ್ರಷ್ಟವ್ಯಮೇತಚ್ಛ್ರೋತವ್ಯಂ ಘ್ರಾತವ್ಯಂ ಚ ಯಥಾಕ್ರಮಂ ।
ರಸಿತವ್ಯಂ ಮುನಿಶ್ರೇಷ್ಠಾಸ್ಸ್ಪರ್ಶಿತವ್ಯಂ ತಥೈವ ಚ ॥

ಮಂತವ್ಯಂ ಚೈವ ಬೋದ್ಧವ್ಯಮಹಂ ಕರ್ತವ್ಯಮೇವ ಚ ।
ತಥಾ ಚೇತಯಿತವ್ಯಂ ಚ ವಕ್ತವ್ಯಂ ಮುನಿಪುಂಗವಾಃ ॥

ಆದಾತವ್ಯಂ ಚ ಗಂತವ್ಯಂ ವಿಸರ್ಜಿತವ್ಯಮೇವ ಚ ।
ಆನಂದಿತವ್ಯಮಿತ್ಯೇತತ್ ಹ್ಯಾಧಿಭೂತ ಮನುಕ್ರಮಾತ್ ॥

ಈ ಹದಿನಾಲ್ಕಕ್ಕೆ ಕರ್ತೃಗಳಾದ ಆದಿತ್ಯಾದಗಳೇ ಆಧಿದೈವಿಕಂಗಳೆನಿಸಿಕೊಂಬುವು. ಇದಕ್ಕೆ ಸಮ್ಮತಿ–

ಆದಿತ್ಯೋಽಥ ದಿಶಶ್ಚೈವ ಪೃಥಿವೀವರುಣಸ್ತಥಾ ।

ವಾಯುಶ್ಚಂದ್ರಸ್ತಥಾ ಬ್ರಹ್ಮ ರುದ್ರಃ ಕ್ಷೇತ್ರಜ್ಞ ಏವ ಚ ॥

ಅಗ್ನಿಶ್ಚೇಂದ್ರಸ್ತಥಾ ವಿಷ್ಣುರ್ಮಿತ್ರೋ ದೇವಃ ಪ್ರಜಾಪತಿಃ ।

ಆಧಿದೈವತಮೇವಂ ಹಿ ಚತುರ್ದಶವಿಧಂ ಕ್ರಮಾತ್ ॥

ಎಂಬ ಪುರಾಣ ವಚನಪ್ರಮಾಣದಿಂದ ಆಧ್ಯಾತ್ಮಿಕಾದಿಗಳಂ ವಿಭಾಗಿಸಲ್ಬೇಕೆಂಬುದಭಿಪ್ರಾಯ.

●

ಸೂ : ನಿಷೇಧಮುಖದಿಂದಲೂ ವಿಧಿಮುಖದಿಂದಲೂ ತನ್ನ ನಿಜ ಸ್ವರೂಪನರಿದಾತನೇ ತತ್ತ್ವಜ್ಞಾನಿಯೆಂದು ಪೇಳ್ದಪಂ–

ನಾಹಂ ಭೂತಗುಣೇಂದ್ರಿಯಾಣಿ ಚ ಮನೋಽಹಂಚಿತ್ತಬುದ್ಧಿರ್ವಪುಃ

ಪ್ರಾಣಸ್ಪರ್ಶನಧರ್ಮಕರ್ಮನಿರತೋ ನೈವ ಪ್ರಪಂಚೋಽಖಿಲಃ ।

ನಿತ್ಯಂ ನಿಶ್ಚಲಮೇಕಮಚ್ಯುತಮಜಂ ಶಾಂತಂ ಶಿವಂ ನಿರ್ಗುಣಂ

ಶುದ್ಧಂ ಬುದ್ಧಪದಂ ಹಿ ಯತ್ತದಹಮಸ್ಮೀತಿ ಸ್ಮರನ್ ಜೀವತಿ ॥ ॥೨೭॥

ಭೂತಗುಣೇಂದ್ರಿಯಾಣಿ ಚ – ಪೃಥಿವ್ಯಾದಿಪಂಚಭೂತಂಗಳು, ಗುಣ–ರೂಪರಸ ಗಂಧ ಸ್ಪರ್ಶಾದಿಚತುರ್ವಿಂಶತಿಗುಣಂಗಳು, ಇಂದ್ರಿಯಾಣಿ ಚ–ಜ್ಞಾನೇಂದ್ರಿಯ ಕರ್ಮೇಂದ್ರಿಯಂಗಳು, ಅಹಂ –ನಾನು, ನೈವ–ಅಲ್ಲ, ಮನಃ–ಮನವು, ನಾಹಂ–ನಾನಲ್ಲ, ಅಹಂ–ಅಹಂಕಾರವು, ಚಿತ್ತಬುದ್ಧಿ–ಚಿತ್ತಬುದ್ಧಿಗಳೆಂಬ ಅಂತಃಕರಣಗಳು, ವಪುಃ–ಜಾತಿಕುಲಾದ್ಯಭಿಮಾನಾಶ್ರಯಮಾದ ಸ್ಥೂಲಶರೀರವು, ಪ್ರಾಣಸ್ಪರ್ಶನಧರ್ಮಕರ್ಮನಿರತಃ–ಪ್ರಾಣವಾಯುವಿನ ಸೋಂಕಾದ ಜೀವತ್ವದಿಂದಾದ ನಾನಾಜಾತಿಯ ಧರ್ಮಕರ್ಮದಲ್ಲಿ ತಾತ್ಪರ್ಯವುಳ್ಳಾತನು, ನೈವ–ಅಲ್ಲ, ಅಖಿಲಃ–ಸಮಸ್ತವಾಗಿರ್ದಂಥ, ಪ್ರಪಂಚ ದೃಶ್ಯಮಾನ ಪ್ರಪಂಚವು, ನ–ಅಲ್ಲ, ನಿತ್ಯಂ–ಕಾಲಾನವಚ್ಛಿನ್ನವಾದಂಥ, ನಿಶ್ಚಲಂ–ಅಖಂಡಿತವಪ್ಪುದರಿಂದ ಚಲಿಸದೇ ಇರ್ಪಂಥ, ಏಕಂ–ಮುಖ್ಯವಾಗಿರ್ಪಂಥ, ಅಚ್ಯುತಂ–ಕೇಡಿಲ್ಲದಿರ್ಪಂಥ, ಅಜಂ–ಜನ್ಮರಹಿತನಾಗಿರ್ಪಂಥ, ಶಾಂತಂ–ರಾಗದ್ವೇಷರಹಿತನಾಗಿರ್ಪಂಥ, ಶಿವಂ–ನಿರ್ಮಲನಾಗಿರ್ಪಂಥ, ನಿರ್ಗುಣಂ–ಗುಣತ್ರಯರಹಿತನಾಗಿರ್ಪಂಥ, ಶುದ್ಧಂ–ದೋಷರಹಿತನಾಗಿರ್ಪಂಥ, ಯತ್–ಯಾವುದೊ, ಬುದ್ಧಪದಂ –ಬೋಧಕವಾದ ವಸ್ತುವುಂಟೋ, ತತ್–ಆ ವಸ್ತುವೇ, ಅಹಂ–ನಾನು, ಅಸ್ಮೀತಿ–ಆಗುತ್ತಿದ್ದೇನೆ ಎಂದು, ಸ್ಮರನ್–ನೆನೆವುತ್ತಿರ್ದ್ದಾತನೇ, ಜೀವತಿ–ಬದುಕುತ್ತಿರ್ದಾತನಲಾ.

ತಾತ್ಪರ್ಯ : **ತದೇವ ನಿಷ್ಕಲಂ ಬ್ರಹ್ಮ ನಿರ್ವಿಕಲ್ಪಂ ನಿರಂಜನಂ ।**

ತದ್ಬ್ರಹ್ಮಾಹಮಿತಿ ಜ್ಞಾತ್ವಾ ಬ್ರಹ್ಮ ಸಂಪದ್ಯತೇ ಧ್ರುವಂ ॥

ಎಂಬ ಶ್ರುತಿ ಪ್ರಮಾಣದಿಂದ ತನ್ನನೇ ತಾ ನಿಷ್ಕಲಬ್ರಹ್ಮಸ್ವರೂಪನೆಂದು ಕಂಡಾತಂಗಲ್ಲದೆ ಬ್ರಹ್ಮಸಾಕ್ಷಾತ್ಕಾರವಾಗದೆಂಬುದಭಿಪ್ರಾಯಂ.

●

ಸೂ : ನಿಷೇಧಮುಖದಿಂದಾಗುವ ತತ್ವಜ್ಞಾನಮಂ ಪುನರಪಿ ಪ್ರಕಾರಾಂತರದಿಂ ಪೇಳ್ದಪಂ –

ದೇಹತ್ರಯೇ ಪ್ರಥಿತಷೋಡಷಧಾ ವಿಕಾರಾನ್
ಲಿಂಗಾನಿ ಸಪ್ತದಶಧಾ ನವಧಾ ಪದಾರ್ಥಾನ್ ।
ಆತ್ಮಾನಮಷ್ಟಕವಿಧಪ್ರಕೃತಿಸ್ವಭಾವಾನ್
ಜ್ಞಾ[೧]ತಾ[೧] ತದನ್ಯ ಇತಿ ಜೀವತಿ ಯೋ ಮಹಾತ್ಮ ॥ ॥೨೮॥

ದೇಹತ್ರಯೇ–ಸ್ಥೂಲ ಸೂಕ್ಷ್ಮ ಕಾರಣವೆಂಬ ದೇಹತ್ರಯದಲ್ಲಿ, ಪ್ರಥಿತಷೋಡಷಧಾವಿಕಾರಾನ್; ಪ್ರಥಿತ–ಪ್ರಸಿದ್ಧವಾದ, ಷೋಡಶಧಾ–ಹದಿನಾರು ಪ್ರಕಾರವಾದ, ವಿಕಾರಾನ್–ದೇಹವಿಕಾರಗಳನ್ನು (ಅವು ಯಾವ್ಯಾವೆಂದೊಡೆ–ದೇಹೋತ್ಪತ್ತಿಗೆ ಕಾರಣವಾದ ತಂದೆಯಿಂ ಕೊಂಡ ಮಧುರಾಮ್ಲಲವಣ ತಿಕ್ತ ಕಟು ಕಷಾಯವೆಂಬ ಷಡ್ವಿಧ ಆಹಾರವೇ ಉದರಾಗ್ನಿಯಿಂ ಪಚಿಸಿ ರಸಮಾಗಲು, ಆ ರಸದಿಂ ಶೋಣಿತವು ಮೊದಲಪ್ಪುದು, ಶೋಣಿತದಿಂ ಮಾಂಸ, ಮಾಂಸದಿಂ, ಮೇಧಸ್ಸು, ಆ ಮೇಧಸ್ಸಿನಿಂದ ಅಸ್ಥಿ, ಆ ಅಸ್ಥಿಯಿಂ ಮಜ್ಜೆ, ಆ ಮಜ್ಜೆಯಿಂ ಶುಕ್ಲಮಾಶುಕ್ಲಮೆ ಸ್ತ್ರೀಋತುಕಾಲದ ರಕ್ತದೊಳ್ ಕೂಡಲ್ ಏಕರಾತ್ರಿಯೊಳ್ ಕಲಲವಪ್ಪುದು, ಸಪ್ತರಾತ್ರೆಗೆ ಬುದ್ಬುದವೆನಿಪುದು. ಒಂದು ಮಾಸಕ್ಕೆ ಪಿಂಡವೆನಿಪುದು. ಮಾಸದ್ವಯಕ್ಕೆ ಶಿರಂ ತೋರ್ಪುದು. ಮಾಸತ್ರಯಕ್ಕೆ ಪದಂ ತೋರ್ಪುದು, ಮಾಸ ನಾಲ್ಕಕ್ಕೆ ಉದರ ಕಟ್ಟ ಪ್ರದೇಶಂಗಳ್ ಕಾಣಿಪುವು. ಮಾಸವೈದಕ್ಕೆ ಬೆನ್ನು ಕಾಣಲಪ್ಪುದು. ಮಾಸವಾರಕ್ಕೆ ಶ್ರೋತ್ರ ನೇತ್ರ ಪ್ರಾಣಂಗಳ ರಂಧ್ರಂಗಳ ಕಾಣಲಪ್ಪುವು. ಮಾಸ ಮೇಳಕ್ಕೆ ಜೀವನ ಸಂಚಾರವಪ್ಪುದು. ಈ ಹದಿನಾರು ಸ್ಥೂಲದೇಹ ವಿಕಾರಂಗಳೆನಿಸಿಕೊಂಬುವು). ಸಪ್ತದಶಧಾ–ಜ್ಞಾನೇಂದ್ರಿಯವೈದು ಕರ್ಮೇಂದ್ರಿಯವೈದು ಪ್ರಾಣಾದಿವಾಯುಗಳೈದು ಮನಬುದ್ಧಿಗಳೆರಡು ಅಂತು ಹದಿನೇಳು ಪ್ರಕಾರವಾದಂಥ, ಲಿಂಗಾವಿ–ಲಿಂಗಶರೀರಸಂಜ್ಞೆಯುಳ್ಳಂಥಾ ಅವನ್ನು, ನವಧಾ–ಶಬ್ದಾದಿ ವಿಷಯಂಗಳೈದು ಅಂತಃಕರಣ ವಿಷಯಂಗಳಂ ನಾಲ್ಕುಕೂಡಿ ಒಂಬತ್ತಾಗಿದ್ದಂಥ, ಪದಾರ್ಥಾನ್–ಪದಾರ್ಥಂಗಳನ್ನು, ಅಷ್ಟಕವಿಧಪ್ರಕೃತಿಸ್ವಭಾವನ್: ಅಷ್ಟಕವಿಧ–ಅವ್ಯಕ್ತಬುದ್ಧಿ ಅಹಂಕಾರ ತನ್ಮಾತ್ರ ಪಂಚಂಕಂಗಳೆಂಬ ಎಂಟು ಪ್ರಕಾರವಾದ, ಪ್ರಕೃತಿಸ್ವಭಾವಾನ್ –ಕಾರಣಸ್ವರೂಪಂಗಳನ್ನು, ಜ್ಞಾತ್ವಾ–ಅರಿದು, ಆತ್ಮಾನಂ–ತನ್ನನು, ತದನ್ನ ಇತಿ–ಅವರದೆಸೆಯಿಂದನ್ಯನೆಂದು, ಯಃ–ಯಾವದು, ಜೀವತಿ–ಜೀವಿಸುತ್ತಿದ್ದಾನೋ, ಸಃ–ಆತನೆ, ಮಹಾತ್ಮ–ಮಹಾಘನಪುರುಷನು.

ತಾತ್ಪರ್ಯ : ಕಥಂ ತು ತದ್ವಿಜಾ [೨]ನೀಯಾತ್[೨] ಕಿಮು ಭಾತಿ ವಿಭಾತಿ ಚ ।
ತತ್ಕಾರಣಂ ಸಾಂಖ್ಯಯೋಗಾಭಿಪನ್ನಂ ಜ್ಞಾತ್ವಾ ದೇವಂ ಮಂಚ್ಯತೇ ಸರ್ವಪಾಪೈಃ ॥

ಎಂಬ ಶ್ರುತಿಪ್ರಮಾಣದಿಂದ ದೇವತ್ವಂಗಳ[೩]ನಳಿದುಳಿದು ನಿಂದ ಸ್ವರೂಪವನರಿದಾತನೇ ಮಹಾಪುರಷನೆಂಬುದಭಿಪ್ರಾಯ.

●

೧–೧ ತಾ (ಕ). ೨–೨ ಯಂ (ಕ). ೩ + ಹೋರೆಯ (ಕ).

ಸೂ : ವಿಧಿಮುಖದಿಂ ಪೇಳ್ದ ಆತ್ಮಸ್ವರೂಪಮಂ ಮರಳಿ ಶ್ರುತಿವಾಕ್ಯಕ್ಕದ್ವಯದಿಂ ಪೇಳ್ದಪಂ–

ಸತ್ಯಂ ಜ್ಞಾನಮನಂತಂ ಯತ್ ಬ್ರಹ್ಮೇತಿ ವದತಿ ಶ್ರುತಿಃ ।

ಮುಕ್ತಾನಂದಸ್ವರೂಪಂ ಚ ನನು ತತ್ತ್ವಮಸಿಸ್ಥಿತಂ ॥ ॥೨೯॥

ತತ್–ಆ ಪ್ರಸಿದ್ಧವಾದಂಥ, ಬ್ರಹ್ಮ–ಬ್ರಹ್ಮವು, ಸತ್ಯಂ–ಸದ್ರೂಪವಾಗಿರ್ಪಂಥಾದ್ದು (ಅನ್ಯೋನ್ಯಾಧ್ಯಾಸವಿಲ್ಲದೆ ಇಹುದರಿಂದ ಸದ್ರೂಪವೆಂಬುದಭಿಪ್ರಾಯ). ಜ್ಞಾನಂ–ಬೋಧರೂಪವಾಗಿರ್ಪಂಥ, ಅನಂತಂ–ದಿಕ್ಕಾಲಂಗಳೆಂಬ ಪರಿಮಿತಿ ಇಲ್ಲಧೆಯಿದ್ದಂಥಾದ್ದು, ಇತಿ–ಹೀಗೆಂದು, ಶ್ರುತಿಃ–ವೇದವು, ವದತಿ–ಹೇಳುತ್ತಿದ್ದಿತು, ನನು–ಎಲೈ ಶಿಷ್ಯನೇ, ಮುಕ್ತಾನಂದಸ್ವರೂಪಂ ಚ –ಬೈಂದವಾನಂದದಿಂದ ಬಿಡಲ್ಪಟ್ಟ ಸ್ವರಪದವುಳ್ಳಂಥ, ತತ್–ಆ ವಸ್ತುವೆ, ತ್ವಂ–ನೀನು, ಅಸಿ–ಆಗುತ್ತಿದ್ದೆ, ಇತಿ–ಹೀಗೆಂದು, ಸ್ಥಿತಿಂ–ನಿಶ್ಚಯಿಸಲ್ಪಟ್ಟಿತು.

ಸೂ : ತನ್ನಿಂದನ್ಯವಾದ ಸಕಲಪ್ರಪಂಚಮಂ ನಿಷೇಧಮುಖದಿಂ ವಿಲಕ್ಷಿಸಿ ಪೌನಃಪುನ್ಯದಿಂ ತನ್ನನೇ ತಿಳಿಯಲ್ವೇಕೆಂದು ಪೇಳ್ದಪಂ–

ನೈತದಹಂ ನೈತದಹಂ ಚೇತಿ ಯದನ್ಯದ್ ವಿಭಾವಯಾತ್ಮಾನಂ ।

ಸೋಽಹಮತಿ ಸೋಽಹಮಿತ್ಯನುಭಾವಯ ಸತ್ಯಂ ತ್ವಮಾತ್ಮಾನಂ ॥ ॥೩೦॥

ಏತತ್–ಈ ದೃಶ್ಯಮಾನವಾದ ಪ್ರಪಂಚವು, ಅಹಂ–ನಾನು, ನ–ಅಲ್ಲ, ಅಹಂ ಚ–ಸಕಲಸಾಕ್ಷಿಕನಾದ ನಾನೂ, ಏತತ್–ಈ ಪ್ರಪಂಚವು, ನ–ಅಲ್ಲ, ಇತಿ–ಹೀಗೆಂದು ಚೇತನಾಚೇತನಂಗಳ ಅಧ್ಯಾಸನಿವೃತ್ತಿಯಿಂದೆ, ಆತ್ಮಾನಂ–ತನ್ನನ್ನು, ಯದನ್ಯತ್–ಆವುದಾನೊಂದು ಪ್ರಪಂಚದಿಂದನ್ಯನಾಗಿ, ವಿಭಾವಯ–ತಿಳಿ, ಸೋಽಹಮತಿ; ಸಃ–ಆ ತತ್ವ ತಾತ್ವಿಕಂಗಳಿಗೆ ಸಾಕ್ಷಿಕನಾಗಿರ್ದಂಥ ಆತನೇ, ಅಹಮಿತಿ–ನಾನು ಎಂದು, ಸಃ–ಆ ಅನುಗ್ರಹಶಕ್ತಿಯಿಂದಭಿವ್ಯಕ್ತಮಾದ ಶಿವತತ್ತ್ವವುಳ್ಳಾತನೇ, ಅಹಮಿತಿ–ನಾನು ಎಂದು, ತ್ವಂ–ನೀನು, ಆತ್ಮಾನಂ–ತನ್ನ ಸ್ವರೂಪವನ್ನು, ಸತ್ಯಂ–ಸತ್ಯವಾಗಿ, ಅನುಭಾವಯ–ಅಪರೋಕ್ಷದಿಂ ತಿಳಿ.

ತಾತ್ಪರ್ಯ : ವೈಕೃತಪ್ರಾಣಾಯಾಮಮಂತ್ರದರ್ಥಚಿಂತನೆಯಿಂ ತತ್ವಜ್ಞಾನವೇ ಮೋಕ್ಷಸಾಧನಮೆಂಬುದಭಿಪ್ರಾಯಂ.

●

ಸೂ : ಅಜ್ಞಾತಸ್ಯ ಕರಣಾಸಂಭವಾತ್–ಎಂಬ ನ್ಯಾಯದಿಂ ಮುಂದೆ ಪೇಳ್ದ ತಾರಕಾಭ್ಯಾಸಪ್ರವೃತ್ತಿಗೆ ತತ್ತ್ವಜ್ಞಾನವೇ ನಿಮಿತ್ತವಪ್ಪುದರಿಂದ, ತತ್ವಜ್ಞಾನವೇ ಮೋಕ್ಷಸಾಧನಮೆಂದು, ಸಮರ್ಥಿಸುತ್ತ ಈ ಸಾಂಖ್ಯಯೋಗಪರಿಸಮಾಪ್ತಿಯಂ ಮಾಡಿದಪಂ–

ಹೃದಿ ಜ್ಞಾನದೇವ ಮೋಕ್ಷ ಇತ್ಯೇತದ್ವಾಕ್ಯಮಾದರಾತ್ ।

ಗೃಹೀತ್ವಾ ಜ್ಞಾನಯೋಽಗೇಸ್ಮಿತ್ ಸಮಾಹಿತಮನಾ ಭವ ॥ ॥೩೧॥

ಜ್ಞಾನಾದೇವ–ಜ್ಞಾನದತ್ತಣಿಂದವೆ, ಮೋಕ್ಷ ಇತಿ–ಮೋಕ್ಷವೆಂಬ, ಏತದ್ವಾಕ್ಯಂ–ಈ ವಚನವನ್ನು, ಆದರಾತ್–ಪ್ರೀತಿಯದೆಸೆಯಿಂದ, ಹೃದಿ–ಹೃದಯದಲ್ಲಿ, ಗೃಹೀತ್ವಾ–ಗ್ರಹಿಸಿ, ಆಸ್ಮಿನ್–ಈ ಪೂರ್ವೋದಿತವಾದ, ಜ್ಞಾನಯೋಗೇ–ತತ್ವಜ್ಞಾನರೂಪವಾದ ಸಾಂಖ್ಯಯೋಗದಲ್ಲಿ, ಸಮಾಹಿತಮನಾಃ –ಚನ್ನಾಗಿ ಇರಿಸಲ್ಪಟ್ಟ ಮನವುಳ್ಳಾತನು, ಭವ–ಆಗು.

ತಾತ್ಪರ್ಯ : ಪ್ರಕೃತಿ ಪುರುಷ ವಿವೇಕಜ್ಞಾನದಿಂದವೆ ಮುಕ್ತಿಯೆಂಬ ಸಾಂಖ್ಯಮತವನ್ನು "ಇದು ರಜತಂ" ಎಂಬ ಭ್ರಾಂತಿಯು "ನೇದಂ ರಜತಂ" ಎಂಬ ಉತ್ತರಜ್ಞಾನದಿಂ ಕೆಡುವಂತೆ, "ಜೀವೋಽಹಂ" ಎಂಬ ಮಿಥ್ಯಾಜ್ಞಾನವು "ಅಹಂ ಬ್ರಹ್ಮ" ಎಂಬ ತಥ್ಯಜ್ಞಾನ ಮಾತ್ರದಿಂ ಕೆಟ್ಟುದೇ ಮೋಕ್ಷವೆಂಬ ದ್ವೈತಮತವನ್ನು ನಿರಾಕರಿಸಿ,

ಅಥಾತ್ಮಮಲಮಾಯಖ್ಯಕರ್ಮಬಂಧವಿಮುಕ್ತಯೇ ।
ವ್ಯಕ್ತಯೇ ಶಿವತತ್ವಸ್ಯ [1]ಶಿವಜ್ಞಾನಂ[1] ಪ್ರವರ್ತತೇ ॥

ಎಂಬ ಶಿವಾಗಮೋಕ್ತಿಯಿಂದೆ ತತ್ವವಿವೇಕಮಂ ಮಾಳ್ಪ ಶಿವಜ್ಞಾನದಿಂವಲೇ ಮೋಕ್ಷಮಪ್ಪುದೆಂದು ನಿಶ್ಚಯಿಸಲ್ವೇಕೆಂಬುದೇ ಅಭಿಪ್ರಾಯ.

●

ಸೂ : ಪಾಶಾವಲೋಕನಂ ತ್ಯಕ್ತಸ್ವರೂಪಾಲೋಕನಂ ಹಿ ಯತ್ ।
ಆತ್ಮವ್ಯಾಪ್ತಿರ್ಭವೇದೇಷಾ ಶಿವವ್ಯಾಪ್ತಿರತೋಽನ್ಯಥಾ ॥

ಎಂಬ ಆಗ್ರಮಗ್ರಂಥಾನುಸಾರದಿಂದಾತ್ಮವ್ಯಾಪ್ತಿಯಾದ ಸ್ವಸ್ವರೂಪಸಿದ್ಧಿಯಂ ಸಾಂಖ್ಯಯೋಗದಿಂ ಪೇಳ್ದು [2]ಶಿವಜ್ಞಾನ[2]ಮೆನಿಸುವ ಶಿವವ್ಯಾಪ್ತಿರೂಪಮಾದ ತಾರಕಯೋಗಮಂ ಪೇಳ್ವೆನೆಂದು ಪ್ರತಿಜ್ಞೆಯಂ ಮಾಡಿದಪಂ–

ಅತಃ ಪರತರಂ ಗುಹ್ಯಂ ದೃಷ್ಟಪ್ರತ್ಯಯಸಂಯುತಂ ।
ಮಮಾನುಭವಸಂಸಿದ್ಧಂ ಯೋಗಂ ಪ್ರಾಣಸಖೇ ಶೃಣು ॥ ॥೩೨॥

ಭೋಪ್ರಾಣಸಖೇ–ಎಲೈ ಪ್ರಾಣಸ್ನೇಹಿತನಾದ ಶಿಷ್ಯನೇ, ಆತಃ–ಈ ಸಾಂಖ್ಯಯೋಗದದೆಸೆಯಿಂದೆ, ಪರತಂ–ಅತ್ಯುತ್ತಮವಾದಂಥ (ಶಿವವ್ಯಾಪ್ತಿರೂಪದಿಂದತಿ ವಿಶಿಷ್ಟಮೆಂಬುದಭಿಪ್ರಾಯ), ಗುಹ್ಯಂ–ಗೋಪ್ಯವಾದಂಥ (ಅತಿರಹಸ್ಯಮಪ್ಪುದರಿಂದ ಅಯೋಗ್ಯರ್ಗೆ ಪ್ರಕಾಶಿಸಲ್ಬಾರದೆಂಬುದರ್ಥ), ದೃಷ್ಟಪ್ರತ್ಯಯ ಸಂಯುತಂ: ದೃಷ್ಟ–ಪ್ರತ್ಯಕ್ಷಮಾದ, ಪ್ರತ್ಯಯ–ಪ್ರಮಾಣದಿಂದ, ಸಂಯುತಂ ಕೂಡಲ್ಪಟ್ಟಂಥ (ಅನುಮಾನಾದಿಪ್ರಮಾಣಗಳಂತೆ ಪರೋಕ್ಷಾರ್ಥ ಸಾಧಕವಲ್ಲವೆಂಬುದರ್ಥ), ಮಮ–ಎನ್ನ, ಅನುಭವಸಂಸಿದ್ಧಂ: ಅನುಭವ–ಅಪರೋಕ್ಷ ಜ್ಞಾನದಿಂದ, ಸಂಸಿದ್ಧಂ–ಚನ್ನಾಗಿ ಸಿದ್ಧವಾಗಿರ್ಪಂಥ, (ಅತಿರಹಸ್ಯ ಶಾಸ್ತ್ರೋದಿತವಾದ ಸ್ವಾನುಭೂತಿ ಪ್ರಮಾಣಸಿದ್ಧವೆಂಬುದರ್ಥ), ಯೋಗಂ–ಈ ತಾರಕಯೋಗವನ್ನು, ಶೃಣು–ಕೇಳು.

ತಾತ್ಪರ್ಯ : ಮಾಯಾಭುವನಾಂತರ್ಗತರಾದ ಮುಮುಕ್ಷುಜನರಿಂ ಪರಶಿವಂಗೆ ಪರಮೋಪಾಧಿಗಳಾಗಿ ಶುದ್ಧಭುವನಾಂತರ್ಗತಗಳಾದ ನಾದಬಿಂದ್ವಾದಿಗಳಿಂ ತಾರಕಯೋಗದಿಂ ಕಾಣಲತಿ ಸಮೀಪವಪ್ಪಪ್ರಕಾರವೆಂತೆಂದೊಡೆ–ಪೃಥಿವ್ಯಾದಿಸ್ಥೂಲ ಪಂಚಭೂತಂಗಳಲ್ಲಿ ವಿದ್ಯಾತತ್ವವಾಸಿಗಳಾದ ಸಪ್ತಕೋಟಿಮಹಾಮಂತ್ರಂಗಳು ವ್ಯಾಪಿಸಿರ್ಪವು. ಸೂಕ್ಷ್ಮದೇಹಾರಂಭಕಂಗಳಾದ

೧–೧ ಶಿವದ್ಜ್ಞಾನಂ (ಕ). ೨–೨ ಶಿವಧ್ಯಾನ (ಕ).

ಸೂಕ್ಷ್ಮಪಂಚಭೂತಂಗಳಲ್ಲಿ ಸದಾಶಿವತತ್ವವಾಸಿಗಳಾದ ಪಂಚಮಂತ್ರತನುವಾದ ಸದಾಶಿವನಿರ್ಪನು. ಕರಣದಶಕದಿಂ ಮನನದಿಂದ ಕೂಡಿದ ಬುದ್ಧಿ ಅಹಂಕಾರ ತತ್ವದಲ್ಲಿ, ಬಿಂದುಕಲಾರೂಪಮಾದ ನಿವೃತ್ತಿಕಲೆಯಿರ್ಪುದು, ಧರ್ಮಾದಿಭಾವಾಷ್ಟಕದಿಂ ಪ್ರತ್ಯಯದಿಂ ಮಂತ್ರಮಂ ಕೂಡಿದ ಬುದ್ಧಿತತ್ತ್ವದಲ್ಲಿ, ಬಿಂದುಪ್ರತಿಷ್ಠಾಕಲೆಯಿರ್ಪುದು. ಗುಣತತ್ವದಲ್ಲಿ ಬಿಂದುಕಲೆಯಾದ ವಿದ್ಯಾಕಲೆಯಿರ್ಪುದು. ಪ್ರಕೃತಿತತ್ವದಲ್ಲಿ ಬಿಂದುಕಲೆಯಾದ ಶಾಂತಿಕಲೆ ಇರ್ಪುದು. ಪುರುಷತತ್ವದಲ್ಲಿ ಸ್ಥೂಲನಾದಸ್ವರೂಪವಾದ ಇಂಧಿಕೆ ಎಂಬ ಕಲೆ ಇರುವುದು. ರಾಗತತ್ವದಲ್ಲಿ ಸ್ಥೂಲನಾದ ಸ್ವರೂಪವಾದ ದೀಪಿಕೆ ಎಂಬ ಕಲೆ ಇರ್ಪುದು. ವಿದ್ಯಾತತ್ವದಲ್ಲಿ ಸ್ಥೂಲವಾದಸ್ವರೂಪವಾದ ರೋಚಿಕೆ ಎಂಬ ಕಲೆ ಇರ್ಪುದು, ನಿಯತಿತತ್ವದಲ್ಲಿ ಸ್ಥೂಲವಾದಸ್ವರೂಪವಾದ ಮೋಚಿಕೆ ಎಂಬ ಕಲೆ ಇರ್ಪುದು. ಕಾಲತತ್ವದಲ್ಲಿ ಸ್ಥೂಲನಾದಸ್ವರೂಪವಾದ ಊರ್ಧ್ವಗೆಯೆಂಬ ಕಲೆಯಿರ್ಪುದು. ಸಕಲತತ್ವಸಮಷ್ಟಿರೂಪವಾದ ಕಲಾತತ್ವದಲ್ಲಿ ಶುದ್ಧ ಸಕಲತತ್ವ ಸಮುದಾಯ ರೂಪವಾದ ಈ ದಿವ್ಯಾನಂದ ಸ್ವರೂಪವಾದ ಸೂಕ್ಷ್ಮನಾದವಿರ್ಪುದೆಂಬ ಈ ಪರಮರಹಸ್ಯಾರ್ಥಕ್ಕೆ ಸಮ್ಮತಿ :

ಗ್ರಂಥ : ನಾದಸ್ಸೂಕ್ಷ್ಮಃ ಕಲಾಕಾಲರಾಗಯುಗ್ಮೇ ಸ ಪೂರುಷೇ ।
ಸ್ಥೂಲಃ ಪಂಚಕಲೋ ನಾದಃ ಪಂಚತತ್ವಾಶ್ರಯೋ ಮುನೇ ॥

ಪ್ರಧಾನಾದಿ ಚತುರ್ಗ್ರಂಥಿ ನಿಧಿರ್ಬಿಂದುಶ್ಚತುಷ್ಕಲಃ ।
ಸರ್ವೇಮನೋಮುಖಾದೇವಾಬುದ್ಧೌ ಭಾವಾದಯಸ್ಸ್ಥಿತಾಃ ॥

ಪಂಚಮಂತ್ರತನುರ್ದೇವಸ್ಸ್ಥಿತಸ್ಸನ್ಮಾತ್ರಪಂಚಕೇ ।
ಸೂಕ್ಷ್ಮಭೂತೇಷು ಮಂತ್ರೇಶಾ ಮಂತ್ರಾಸ್ಸ್ಥೂಲೇಷು ಸಂಸ್ಥಿತಾಃ ॥

ಎಂದುದಾಗಿ, ಪರಮಾಪ್ತನಾದ ಪರಶಿವಂ ನಾದಬಿಂದ್ವಾದಿರೂಪದಿಂ ಮುಮುಕ್ಷು ಜನಕ್ಕೆ ಅತಿ ಸಮೀಪನಪ್ಪುದರಿಂದೆ,

"ಚಕ್ಷುರ್ವೈಬ್ರಹ್ಮ ಪರಮಂ ಬ್ರಹ್ಮ ನೈನಂ ಚಕ್ಷುರ್ಜಹಾತಿ ।
ನೇತ್ರವೇ ಬ್ರಹ್ಮವು, ಆ ಪರಬ್ರಹ್ಮವು, ನೇತ್ರಮಂ ಬಿಟ್ಟಿರದು ॥"

"ಶ್ರೋತ್ರವೇ ವೈ ಬ್ರಹ್ಮ ಪರಮಂ ಬ್ರಹ್ಮ ನೈನಂ ಶ್ರೋತ್ರಂ ಜಹಾತಿ" ಶ್ರೋತ್ರವೇ ಬ್ರಹ್ಮವು. ಆ ಪರಬ್ರಹ್ಮವು ಶ್ರೋತ್ರಮಂ ಬಿಟ್ಟಿರದು.

"ಮನೋ ವೈ ಬ್ರಹ್ಮ ಪರಮಂ ಬ್ರಹ್ಮ ನೈನಂ ಮನೋ ಜಹಾತಿ" ಮನವೇ ಬ್ರಹ್ಮವು, ಈ ಮನವಂ ಪರಬ್ರಹ್ಮ ಬಿಟ್ಟಿರದು.

"ಹೃದಯಂ ವೈ ಬ್ರಹ್ಮ ನೈನಂ ಹೃದಯಂ ಜಹಾತಿ" ಹೃದಯವೇ ಬ್ರಹ್ಮವು. ಈ ಹೃದಯಮಂ ಪರಬ್ರಹ್ಮವು ಬಿಟ್ಟಿರದು.

ಎಂಬ ಶ್ರುತಿಪ್ರಮಾಣದಿಂ ಪರಬ್ರಹ್ಮವೇ ನೇತ್ರಾದಿಗಳಿಗೆ ಸಾಕ್ಷಾತ್ಕಾರವಪ್ಪುದೆಂಬುದಭಿಪ್ರಾಯಂ.

●

ಸೂ : ಈ ಪೂರ್ವೋದಿತಮಾದ ಯೋಗತ್ರಯದಿಂ ಬ್ರಹ್ಮಸಾಕ್ಷಾತ್ಕಾರವಿಲ್ಲವಾಗಿ ಮುಂದೆ ಪೇಳ್ವ ತಾರಕಯೋಗವೇ ವಿಶೇಷವೆಂದು ಸಮರ್ಥಿಸುತ್ತಿರ್ದಪಂ–

ಮಂತ್ರೇಣ ಲಯಯೋಗೇನ ಹಠಯೋಗೇನ ಸರ್ವದಾ ।

ಯಾವದ್ಬ್ರಹ್ಮ ನ ಜಾನಾತಿ ತಾವತ್ಕ್ಲಿಶ್ಯಂತಿ ಪಂಡಿತಾಃ ॥ ॥೩೩॥

ಪಂಡಿತಾಃ–ಬರೀ ಬಲ್ಲತನದಭಿಮಾನಿಗಳು, ಮಂತ್ರೇಣ–ಪ್ರಾಕೃತ ಪ್ರಾಣಾಯಾಮ ರೂಪಮಾದ ಮಂತ್ರಯೋಗದಿಂದಲೂ, ಲಯಯೋಗೇನ–ವೈಕೃತಪ್ರಾಣಾಯಾಮರೂಪಮಾದ ಲಯಯೋಗದಿಂದಲೂ, ಹಠಯೋಗೇನ –ಕೇವಲ ಕುಂಭಕರೂಪಮಾದ ಹಠಯೋಗದಿಂದಲೂ, ಸರ್ವದಾ–ಯಾವಾಗಲೂ, ಯಾವತ್–ಎಲ್ಲಿಯ ವರೆಗೆ, ಬ್ರಹ್ಮ–ತಾರಕ ಬ್ರಹ್ಮವನ್ನು, ನ ಜಾನಾತಿ–ಅರಿವುತ್ತಿರರೋ, ತಾವತ್–ಅಲ್ಲಿ ವರೆಗೆ, ಕ್ಲಿಶ್ಯಂತಿ–ದುಃಖಪಡುತ್ತಿರುವರು.

ತಾತ್ಪರ್ಯ : ಈ ಸಕಲ ಯೋಗೀಶ್ವರರ ಮನದಲ್ಲಿಯ ಹಠಯೋಗಾಭ್ಯಾಸ ಪ್ರಯಾಸದಿಂದಾದ ವ್ಯಥೆಯು, ಬ್ರಹ್ಮಸಾಕ್ಷಾತ್ಕಾರದಿಂದಳಿವುದಾಗಿ ಆ ಬ್ರಹ್ಮವೇ ಕಳೆಯೆಂದು ನಾದವೆಂದು ಬಿಂದುವೆಂದು ಮೂರು ಪ್ರಕಾರಮಪ್ಪುದಾಗಿ[೧] ಆ ಕಲೆಯೇ ಪರಿಗ್ರಹಶಕ್ತಿಯ ಪ್ರಥಮಸ್ವರೂಪವಮಾದ ಶಾಂತ್ಯತೀತಕಲೆಯೆನಿಸುವುದು.[೧] ಆ ಕಲೆಯೇ ತಾವರೆಯ ನೂಲಿನಂತೆ ಪರಮ ಸೂಕ್ಷ್ಮವಾಗಿ ಹರಿಹಂಚಿಲ್ಲದೆ ಬ್ರಹ್ಮರಂಧ್ರಸ್ಥಾನದೊಳ್ ದಿವ್ಯಪ್ರಕಾಶರೂಪದಿಂ ಕಾಣಿಪುದು. ಮತ್ತೆ ಆ ಕಲೆಯೇ ಬಲಿದು, ಅಂಗುಷ್ಠಮಾತ್ರವಾದ ದೀಪಜ್ವಾಲೆಯಾಕಾರದಿಂ ಭ್ರೂಮಧ್ಯಸ್ಥಾನದೊಳ್ ಕಾಣಿಸಲದೇ ನಾದವೆನಿಸುವುದು. ಆ ನಾದವೇ ಬಲಿದು ಅರ್ಧಚಂದ್ರಾಕಾರಮಂ ತಾಳ್ದು ಮುಂದೆ ಪೇಳ್ವ ಪೂರ್ಣೇಂದು ಮಂಡಲಾದ್ಯಾಕಾರಂಗಳನೊಳಕೊಂಡು, ನೇತ್ರಮಧ್ಯದೊಳಿರಲದೇ ಬಿಂದುವೆನಿಪುದಾಗಿ–ಈ ಸ್ವರೂಪಂಗಳ ಉತ್ತರೋತ್ತರಮಾಗಿ ಕಾಣಲಾತನೇ ರಾಜಯೋಗಿಯೆನಿಸಿಕೊಂಬನೆಂಬುದುಭಿಪ್ರಾಯಂ.

ಅರ್ಧಚಂದ್ರಾಕೃತಿರ್ಬಿಂದುರ್ನಾದೋ ದೀಪಶಿಖಾಕೃತಿಃ ।

ಅಂಗುಷ್ಠಮಾತ್ರಮಚಲಂ ದೀಪ್ಯಮಾನಂ ಸಮಂತತಃ

ನೀವಾರಶೂಕಸದೃಶಂ ಬಿಸಸೂತ್ರಾಭಮೇವ ಚ ॥

ಎಂದುದಾಗಿ

●

ಸೂ : "ಮೋಚಯತಿ ದ್ರಾವಯತೀತಿ ಮುದ್ರಾ" ಎಂಬ ವಾಕ್ಯಾನುಸಾರದಿಂದೆ ಅಜ್ಞಾನಾಂಧಕಾರಮಂ ತೊಲಗಿಸಿ, ಶಿವಾನಂದ ಪ್ರವಾಹಮಂ ನಿರಾಯಾಸದಿಂ ಮಾಳ್ಪ ರಾಜಯೋಗದ ಮುಖ್ಯ ಮುದ್ರಾಸ್ವರೂಪಮಂ ಸೂಚಿಸುತ್ತಿರ್ದಪಂ–

ನೇತ್ರೇ ನಿಮೀಲಿತೇ ನಿತ್ಯಂ ಕಿಂಚಿದುನ್ಮೀಲಿತೇ ತಥಾ ।

ಯೋ ಮನಶ್ಚಕ್ಷುಷಾ ಬ್ರಹ್ಮ ಪಶ್ಯತೀತಿ ಸ ಯೋಗಿರಾಟ್ ॥ ॥೩೪॥

೧–೧ x (ಕ)

ನೇತ್ರೇ–ಸಕಲೇಂದ್ರಿಯಗಳಿಗೆ ಮುಖ್ಯವಾಗಿ ಜ್ಯೋತಿರ್ಮಂಡಲಾನ್ವಿತವಾದ ನೇತ್ರೇಂದ್ರಿಯವು, ನಿಮೀಲಿತೇ–ಅಂತರ್ಮುಖವಾಗಿ ಮುಗಿಯಲಾಗಿ, ಕಿಂಚಿತ್–ಅಲ್ಪ ಮಾತ್ರವಾಗಿ, ಉನ್ಮೀಲಿತೇ–ಅರ್ಧಾವಲೋಕನದಿಂ ನೋಡಲಾಗಿ, ಯಃ–ಯಾವಾತನು, ಮನಶ್ಚಕ್ಷುಷಾ–ಶುದ್ಧಸಾತ್ವಿಕರೂಪಮಾದ ಮನೋನೇತ್ರಂಗಳಿಂದೆ, ನಿತ್ಯಂ–ಅನವರತ, ತಥಾ–ಗುರೂಪದೇಶಪ್ರಕಾರದಿಂದವೆ, ಬ್ರಹ್ಮ–ತಾರಕ ಬ್ರಹ್ಮವನ್ನು, ಪಶ್ಯತಿ–ಕಾಣುತ್ತಿದ್ದಾನೋ, ಸಃ–ಆ ಯೋಗೀಶ್ವರನು, ಇತಿ–ಇದು ಕಾರಣವಾಗಿ, ಯೋಗಿರಾಟ್–ರಾಜಯೋಗಿಯೆನಿಸಿಕೊಂಬನು.

ತಾತ್ಪರ್ಯ : ಶಿವಾರ್ಕಶಕ್ತಿದೀಧಿತಾ ಸಮರ್ಥೀಕೃತಚಿದ್ದೃಶಾ ।

ಶಿವಂ ಶಕ್ತ್ಯಾದಿಭಿಸ್ಸಾರ್ಧಂ ಪಶ್ಯತ್ಯಾತ್ಮಗತಾವೃತಿಃ ॥

ಎಂದುದಾಗಿ ಶುದ್ಧನಾದಾತಂಗೆ ಊರ್ಧ್ವಮುಖವಾಗಲೀ ದೃಷ್ಟಿಯೇ ಜ್ಞಾನದೃಷ್ಟಿಯಾಗಲದರಿಂ ಬ್ರಹ್ಮಸಾಕ್ಷತ್ಕಾರಮಾಗಿ,

ಏಷೋಽಂತರಕ್ಷಿಣಿ ಪುರುಷೋ ದೃಶ್ಯತ ಏಷ ಆತ್ಮೇತಿ

ಈ ನೇತ್ರಮಧ್ಯದಲ್ಲಿ ಕಾಣಿಸುವ ಮೂರ್ತಿಯೇ ಪರಮಾತ್ಮನೆಂಬ ಶ್ರುತಿಯಿಂದಲೂ "ಉದಕೇಽವೇಕ್ಷ್ಯತಾಂ" ಉದಕಾಶ್ರಯದಲ್ಲಿಯೇ ಪರವಾತ್ಮನಂ ಕಾಂಬುದು ಎಂಬ ಶ್ರುತಿಪ್ರಮಾಣದಿಂದಲೂ ತಾರಕಬ್ರಹ್ಮವನೀಲೋಚನಂಗಳಿಂ ಕಂಡಾತನೇ ರಾಜ ಯೋಗಿ ಯೆಂಬುದಭಿಪ್ರಾಯ.

●

ಸೂ : ಅನಂತರದಲ್ಲಿ ಈ ದಿವ್ಯಮುದ್ರೆಯನ್ನೇ ವ್ಯಕ್ತಮಾಗಿ ಪೇಳುತ್ತೆ ಅದರಿಂದಲೇ ಈ ತಾರಕಯೋಗಾಭ್ಯಾಸಮಂ ಮಾಳ್ಪುದೆಂದು ಪೇಳ್ದಪಂ–

ಶಶಿಭಾಸ್ಕರಯೋರ್ಮಧ್ಯತಾರಯೋಸ್ಸ್ಥಿರತೇಜಸೋಃ ।

ಬಿಂದುದ್ವಯೋಶ್ಚ ಸಂಯೋಜ್ಯ ಬ್ರಹ್ಮತಾರಕಮಭ್ಯಸೇತ್ ॥ ॥೩೫॥

ಶಶಿಭಾಸ್ಕರಯೋಃ–ಚಂದ್ರಸೂರ್ಯರೆಂಬ ಹೆಸರುಳ್ಳ ವಾಮ ದಕ್ಷಿಣ ನೇತ್ರಂಗಳಲ್ಲಿ, ಮಧ್ಯತಾರಯೋಃ –ಮಧ್ಯದಲ್ಲಿಯ ತಾರೆಗಳಾಗಿರ್ಪಂಥ, ಸ್ಥಿರತೇಜಸೋ–ಊರ್ಧ್ವಮುಖಮಪ್ಪುದರಿಂದೆ ಚಲಿಸದ ದೀಪ್ತಿಯುಳ್ಳಂಥ, ಬಿಂದುದ್ವಯೋಶ್ಚ–ಮೂಲ ಪ್ರಕೃತಿರೂಪಂಗಳಾದ ಜೀವಚೈತನ್ಯ ಸೂತ್ರಕ್ಕೆ ಮುಖ್ಯಾಧಾರಂಗಳಾದ ಅಲೌಕಿಕದ್ವಯಂಗಳ, ಸಂಯೋಜ್ಯ–ಗುರೂಪದೇಶದಿಂ ಸಮ್ಯಕ್ಕಾಗಿ ಸಂಬಂಧಿಸಿ, ಬ್ರಹ್ಮತಾರಕಂ–ತಾರಕಬ್ರಹ್ಮವನ್ನು, ಅಭ್ಯಸೇತ್–ಅಭ್ಯಾಸಮಂ ಮಾಳ್ಪುದು.

ತಾತ್ಪರ್ಯ : ತಾರಕಬ್ರಹ್ಮವನ್ನು, ಸಂಯೋಜ್ಯ ಕಿಂಚಿದುನ್ನಮಯೇದ್ಭ್ರುವೌ ।

ಪೂರ್ವಯೋಗಸ್ಯ ಮಾರ್ಗೋಽಯಮುನ್ಮನೀಕರಣಂ ಕ್ಷಣಾತ್ ॥

ಕೃಷ್ಣಸ್ಸ್ವಚ್ಛಸ್ತು ಯೋ ನಿತ್ಯಂ ನೇತ್ರಮಧ್ಯೇ ವ್ಯವಸ್ಥಿತಃ ।

ಸ ಬಿಂದುರಿತಿ ವಿಜ್ಞೇಯೋ ಯತ್ರಾತ್ಮಾ ದೃಶ್ಯತೇ ಸ್ಥಿತ : ॥

ಎಂದುದಾಗಿ,

ಇಂದೋಹವೈ ನಾನಾಮೇಷ ಯೋಯಂ ದಕ್ಷಿಣೇಕ್ಷಸ್ತಂ ।

ವಾಯೇತಮಿಂದ ಸಂತಮಿಂದ್ರ ಇತ್ಯಾಚಕ್ಷತೇ ಪರೋಕ್ಷೇಣ ॥

ದಕ್ಷಿಣನೇತ್ರದ ಜ್ಯೋತಿರ್ಮಂಡಲಮಧ್ಯದಲ್ಲಿ ಪ್ರತ್ಯಕ್ಷರೂಪದಿಂದಿರ್ಪ ಪರಮಾತ್ಮನೇ ಪತಿಯೆಂಬುದು ಈ ಶ್ರುತಿಯ ತಾತ್ಪರ್ಯ,

ಅಥೈತದ್ವಾಮೇಕ್ಷಿಣಿ ಪುರುಷರೂಪಮೇಷಾಸ್ಯ ಪತ್ನೀ ।

ವಿರಾಟ್ ತಯೋ ರೇಷಸಂಸ್ಥಾ–

ಈ ವಾಮನೇತ್ರದ ಜ್ಯೋತಿರ್ಮಂಡಲಮಧ್ಯದಲ್ಲಿ ಜೀವಾತ್ಮನಿರ್ಪನಾಗಿ, ಈತನೇ ಆ ಪರಮಾತ್ಮಂಗೆ ಸತಿ, ಆ ಸತಿಪತಿಗಳ ಕೂಟವೇ ಐಕ್ಯವೆಂಬುದು ಈ ಶ್ರುತಿಯ ತಾತ್ಪರ್ಯವಪ್ಪುದರಿಂದೀ ತಾರಕಮಂಡಲಂಗಳ ಯೋಗವೇ ತತ್ತ್ವಮಸ್ಯಾದಿ ಮಹಾವಾಕ್ಯಾರ್ಥಮಿದೇ ಜೀವಪರಮೈಕ್ಯಮಿದೇ ಲಿಂಗಾಂಗಸಂಬಂಧಮಿದೇ ಶಿವಜೀವರ ಸಾಮರಸ್ಯಸಾಧನವೆಂಬುದಭಿಪ್ರಾಯ.

●

ಸೂ : ಈ ⁽¹ಲೋಕೋಕ್ತ¹⁾ ವ್ಯವಹಾರದೊಳಚೇತನಂಗಳಾದ ಚಿತ್ರಪ್ರತಿಮೆಗಳಲ್ಲಿಯ ನಯನಗತಂಗಳಾದ ಕೃಷ್ಣಕರ್ನಿಕಾರೇಖೆಯೆ ಅವಕ್ಕೆ ಜೀವಕಲೆಯೆನಿಸಿ ಕೊಂಬುದಾಗಿ ಈ ಜೀವಚೈತನ್ಯಕ್ಕೆ ಮುಖ್ಯಾಧಾರಂಗಳಾದ ತಾರಕದ್ವಯಯೋಗದಿಂ ಕಾಣ್ಬ ಲಕ್ಷ್ಯಮಂ ಮೂರು ಪ್ರಕಾರದಿಂ ವಿಭಾಗಿಸಲ್ಬೇಕೆಂದು ಪೇಳ್ದಪೆಂ–

ಬಾಹ್ಯಾಂತರ್ಮಧ್ಯಲಕ್ಷ್ಯೇಷು ಬ್ರಹ್ಮದರ್ಶನತತ್ಪರಃ ।

ದೃಷ್ಟಾದೃಷ್ಟಸ್ವರೂಪಾಣಿ ನನು ತಾನಿ ವಿಲೋಕಯ ॥ ॥೩೬॥

ನನು–ಎಲೈ ಸ್ನೇಹಿತನೇ, ಬ್ರಹ್ಮದರ್ಶನತತ್ಪರಃ–ತಾರಕಬ್ರಹ್ಮಾವಲೋಕನದಲ್ಲಿ ತಾತ್ಪರ್ಯವುಳ್ಳಾತನಾಗಿ, ಬಾಹ್ಯಾಂತರ್ಮಧ್ಯಲಕ್ಷ್ಯೇಷು–ಬಾಹ್ಯಲಕ್ಷ್ಯ ಅಂತರ್ಲಕ್ಷ್ಯ ಮಧ್ಯಲಕ್ಷ್ಯಂಗಳಲ್ಲಿ, ತಾನಿ–ತನ್ನಿಂದನುಭೂತಂಗಳಾಗಿರ್ಪಂಥ, ದೃಷ್ಟಾದೃಷ್ಟ ಸ್ವರೂಪಾಣಿ–ಬಾಹ್ಯವಾಗಿ ದೃಷ್ಟರೂಪಗಳಾಗಿರ್ಪಂಥ ಅಭ್ಯಂತರಗಳಾಗಿ ಅದೃಷ್ಟ ರೂಪಗಳಾಗಿರ್ಪಂಥ ಮಧ್ಯಸ್ಥವಾಗಿ ದೃಷ್ಟಾದೃಷ್ಟ ಸ್ವರೂಪಂಗಳಾಗಿರ್ಪಂಥವನ್ನಾಗಿ, ವಿಲೋಕಯ–ನೋಡು.

ತಾತ್ಪರ್ಯ : ಪ್ರಣವೋ ಧನುಶ್ಶರೋ ಹ್ಯಾತ್ಮ ಬ್ರಹ್ಮ ತಲ್ಲಕ್ಷ್ಯಮುಚ್ಯತೇ

ಅಪ್ರಮೇತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥

ಪ್ರಣವವೆಂಬ ಬಿಲ್ಲಿನೊಳಾತ್ಮನೆಂಬ ಬಾಣಮಂ ತೊಟ್ಟು ಬ್ರಹ್ಮವೆಂಬ ಲಕ್ಷ್ಯವಂ ಮೋಸವಿಲ್ಲದೆಸೆಯಲಾ ಬಾಣಮಾಲಕ್ಷ್ಯದೊಳ್ಸಮರಸವಪ್ಪುದೆಂಬ ಶ್ರುತಿ ಪ್ರಮಾಣದಿಂ ಪೇಳ್ದ ಲಕ್ಷ್ಯವನವಲೋಕನಂ ಗೈವುದೆಂಬುದಭಿಪ್ರಾಯಂ.

●

೧–೧ ಲೋಕ (ಕ).

ಸೂ : ಈ ಪೂರ್ವೋದಿತವಾದ ಅಕ್ಷ್ಯತ್ರಯಂಗಳೊಳಗೆ ಪ್ರಥಮದಲ್ಲಿ ಅಂತರ್ಲಕ್ಷ್ಯಸ್ವರೂಪಮಂ ಗ್ರಂಥದ್ವಯದಿಂ ಪೇಳ್ದಪಂ–

ಮೂಲಕಂದಾದ್ದಂಡಲಗ್ನಾಂ ಬ್ರಹ್ಮನಾಡೀಂ ಶಶಿಪ್ರಭಾಂ
ತಸ್ಯಾ ಮಧ್ಯೇ ತಟಿತ್ಕೋಟನಿಭಾಂ ತಾಮೂರ್ಧ್ವಗಾಮಿನೀಂ ।
ಮನಸಾ ಲಕ್ಷಯೇನ್ಮೂರ್ತಿಂ ಸದೃಶೀಂ ಬಿಸತಂತುನಾ
ಆಬ್ರಹ್ಮರಂಧ್ರಪರ್ಯಂತಗತಾಂ ಸಿದ್ಧಿಪ್ರದಾಂ ಸ್ಮರೇತ್ ॥ ॥೩೭॥

ಮೂಲಕಂದಾತ್–ಮೂಲಾಧಾರಕಂದದ ದೆಸೆಯಿಂದ,

ಕಂದಸ್ಥಾನಂ ಮುನಿಶ್ರೇಷ್ಠ ಮೂಲಾಧಾರಂ ನವಾಂಗುಲಂ ।
ಚತುರಂಗುಲಮಾಯಾಮಾವಿಸ್ತರಂ ಮುನಿಸತ್ತಮ ॥

ಎಂದುದಾಗಿ, ದಂಡಲಗ್ನಾಂ–ಪಶ್ಚಿಮಭಾಗದ ಅಸ್ಥಿದಂಡದಲ್ಲಿರ್ಪಂಥ, ಶಶಿಪ್ರಭಾಂ–ಪೂರ್ಣಚಂದ್ರನ ಕಾಂತಿಯೋಪಾದಿಯ ಕಾಂತಿಯುಳ್ಳಂಥ, ಬ್ರಹ್ಮನಾಡೀಂ–ಸುಷುಮ್ನಾನಾಡಿಯನ್ನು, ಸ್ಮರೇತ್–ಸ್ಮರಿಸುವುದು, ತಸ್ಯಾಃ–ಆ ಬ್ರಹ್ಮನಾಡಿಯ, ಮಧ್ಯೇ–ಮಧ್ಯದಲ್ಲಿ, ತಟಿತ್ಕೋಟನಿಭಾಂ–ಕೋಟಿಮಿಂಚುಗಳಿಗೆ ಸಮನಾಗಿರ್ಪಂಥ, ತಾಂ–ಆ ಪ್ರಸಿದ್ಧವಾದಂಥ, ಊರ್ಧ್ವಗಾಮಿನೀಂ–ಮೇಲನೆಯ್ದುತಿರ್ಪಂಥ, ಆಬ್ರಹ್ಮರಂಧ್ರಪರ್ಯಂತಗತಾಂ–ಬ್ರಹ್ಮರಂಧ್ರಪರ್ಯಂತವಾಗಿ ಎಯ್ದಲ್ಪಟ್ಟಂಥ, ಸಿದ್ಧಿಪ್ರದಾಂ–ಸಕಲಸಿದ್ಧಿಗಳಂ ಕೊಡುವಂಥ, ಮೂರ್ತಿಂ–ಪರಿಗ್ರಹಶಕ್ತಿ ಮೂರ್ತಿಯನ್ನು, ಮನಸಾ–ಮನಸ್ಸಿನಿಂದ, ಲಕ್ಷಯೇತ್–ಲಕ್ಷಿಸುವುದು.

●

ಸೂ : ಮರಳಿ [೧]ಪ್ರಕಾರಾಂತರಮಾದ[೧] ಅಂತರ್ಲಕ್ಷ್ಯಮಂ ಪೇಳ್ದಪಂ –

ಲಲಾಟೋರ್ಧ್ವೇಽಥ ವಾ ಲಕ್ಷ್ಯೇ ಯೋಗೀ ಗೋಲಾಟಮಂಡಲೇ ।
ವಿಸ್ಫುರತ್ತಾರಕಾಕಾರಂ ಮನಸಾ ಲಕ್ಷಯೇತ್ಸದಾ ॥೩೮॥

ಅಥವಾ–ಪರಿಪಾಕತಾರತಮ್ಯದಿಂ ಪೂರ್ವೋದಿತಮಾದ ಲಕ್ಷ್ಯವು ಮನೋಗೋಚರವಾಗದ ಪಕ್ಷದಲ್ಲಿ, ಯೋಗೀ–ರಾಜಯೋಗಾಭ್ಯಾಸಂ ಮಾಡುವಾತನು, ಲಾಲಾಟೋರ್ಧ್ವೇ–ಲಲಾಟದ ಮೇಲುಭಾಗದಲ್ಲಿರ್ಪಂಥ, ಲಕ್ಷ್ಯೇ–ಲಕ್ಷಿಸಲು ಯೋಗ್ಯವಾಗಿರ್ಪಂಥ, ಗೋಲಾಟಮಂಡಲೇ–ಊರ್ಧ್ವಮುಖಾವಲೋಕನದ ನಿಲುಕಡೆಯ ಸ್ಥಾನದಲ್ಲಿ, ವಿಸ್ಫುರತ್ತಾರಕಾಕಾರಂ–ಮಿನುಗುತ್ತಿರ್ದ ನಕ್ಷತ್ರಾಕಾರವನ್ನು, ಮನಸಾ–ಅಂತರ್ಮುಖವಾದ ಮನಸ್ಸಿನಿಂದ, ಸದಾ–ಅನವರತವು, ಲಕ್ಷಯೇತ್–ಲಕ್ಷಿಸುವುದು.

●

೧–೧ ಪ್ರಕಾರಾಂತರದಿಂದೆ (ಕ)

ಸೂ : ಅನಂತರದಲ್ಲಿ ಮಂದಾಧಿಕಾರಿಗೆ ಕಾಣಿಸುವ ನಾದರೂಪವಾದ ಅಂತರ್ಲಕ್ಷ್ಯಮಂ ಪೇಳ್ದಪಂ–

ಅಥವಾ ಕರ್ಣಯೋರ್ದ್ವಾರೇ ತರ್ಜನೀಭ್ಯಾಂ ನಿರೋಧಯೇತ್ ।

ಶ್ರೀಹಟ್ಟೇ ಮಸ್ತಕೇ ನಾದಂ ಘುಂಘುಂಕಾರಂ ಶೃಣೋತಿ ಚ ॥ ॥೩೯॥

ಅಥವಾ–ಹಿಂದೆ ಪೇಳ್ದ ತಾರಕಾಕಾರಮಾದ ಲಕ್ಷ್ಯವು ಮನೋಗೋಚರವಾಗದ ಪಕ್ಷದಲ್ಲಿ, ಕರ್ಣಯೋಃ–ಶ್ರೋತ್ರಂಗಳ, ದ್ವಾರೇ–ರಂಧ್ರಗಳನ್ನು, ತರ್ಜನೀಭ್ಯಾಂ–ತರ್ಜನಿ ಅಂಗುಲಗಳಿಂದ, ನಿರೋಧಯೇತ್–ಮಿಗಿಲಾಗಿ ಒತ್ತುವುದು. ತೇನ–ಅದರಿಂದ, ಶ್ರೀಹಟ್ಟೇ–ಶ್ರೀ ಹಟ್ಟವೆಂಬ ಸಂಜ್ಞೆಯುಳ್ಳಂಥ, ಮಸ್ತಕೇ–ಕಪಾಲಕುಹರದಲ್ಲಿ, ಘುಂಘುಂಕಾರಂ–ಘುಮು ಘುಮು ಧ್ವಾನರೂಪಮಾಗಿರ್ದಂಥ, ನಾದಂ ಚ–ಪ್ರಣವ ಘೋಷವನ್ನು, ಶೃಣೋತಿ–ಕೇಳುತ್ತಿಹನು.

●

ಸೂ : ಮಂದಾಧಿಕಾರಿಗೆ ನಾದಸಾಕ್ಷಾತ್ಕಾರಕ್ಕೆ ಉಪಾಯಮಂ ಪೇಳ್ದು ಬಿಂದುಸಾಕ್ಷಾತ್ಕಾರಕ್ಕೆ ಉಪಾಯಮಂ ಪೇಳುತ್ತೆ ಅಂತರ್ಲಕ್ಷ ಪರಿಸಮಾಪ್ತಿಯಂ ಪೇಳ್ದಪಂ–

ಚಕ್ಷುರ್ಮಧ್ಯೇಽಥವಾ ನೀಲಜ್ಯೋತಿರೂಪಂ ವಿಲಕ್ಷಯೇತ್ ।

ಅಂತರ್ಲಕ್ಷ್ಯಮಿದಂ ಜ್ಞೇಯಂ ಬಹಿರ್ಲಕ್ಷ್ಯಮಥ ಶೃಣು ॥ ॥೪೦॥

ಅಥವಾ–ಈ ಪೂರ್ವೋದಿತಮಾದ ನಾದಶ್ರವಣಕ್ಕೆ ಅಲಸಿದೊಡೆ, ಚಕ್ಷುರ್ಮಧ್ಯೇ–ನೇತ್ರಂಗಳ ಮಧ್ಯದಲ್ಲಿ, ನೀಲಜ್ಯೋತಿರೂಪಂ–ನೀಲವರ್ಣವಾದ ಜ್ಯೋತಿರೂಪವನು, ವಿಲಕ್ಷಯೇತ್–ವಿಶೇಷವಾಗಿ ಲಕ್ಷಿಸುವುದು. ಇದು–ಈ ಪೂರ್ವೋಕ್ತಮಾದ ಸ್ವರೂಪವು, ಅಂತರ್ಲಕ್ಷ್ಯಂ–ಮನೋಮಾತ್ರಕ್ಕೆ ಗೋಚರಮಾದ ಅಂತರ್ಲಕ್ಷ್ಯವೆಂದು, ಜ್ಞೇಯಂ–ಅರಿಯಲು ಯೋಗ್ಯವು, ಅಥ–ಅನಂತರದಲ್ಲಿ, ಬಹಿರ್ಲಕ್ಷ್ಯವನ್ನು, ಶೃಣು–ಕೇಳು.

●

ಸೂ : ಪ್ರಾಣಕಲಾಸಮೇತವಾದ ಪ್ರಾಣವಾಯುವು ನಾಸಾಪುಟಂಗಳಲ್ಲಿ ಪಂಚಭೂತಾತ್ಮಕವಾಗಿ ಚರಿಸುವುದಾಗಿ, ಆ ಸೂಕ್ಷ್ಮಭೂತಂಗಳಲ್ಲಿಯ ಪಂಚಕಲಾವರ್ಣಂಗಳು ಬಾಹ್ಯದಲ್ಲಿ ಲಕ್ಷಿಸುವುದೇ ಬಹಿರ್ಲಕ್ಷ್ಯವೆಂದು ಪೇಳ್ದಪಂ–

ನಾಸಾಗ್ರದೇಶಾಚ್ಚ ಚತುಷ್ಷಡಷ್ಟೌ ತಥಾ ದಶದ್ವಾದಶ ಸಂಖ್ಯಕಾಂಗುಲೌ ।

ಬಹಿಸ್ಸ್ಮರೇನ್ನೀಲಸುಧೂಮರಕ್ತತರಂಗಪೀತಾತ್ಮಸುತತ್ತ್ವಪಂಚಕಂ ॥ ॥೪೧॥

ನಾಸಾಗ್ರದೇಶಾಚ್ಚ–ನಾಸಿಕಾಗ್ರಸ್ಥಾನದ ದೆಶೆಯಿಂದ, ಬಹಿಃ–ಹೊರಗೆ, ಚತುಃ–ನಾಲ್ಕು, ಷಟ್–ಆರು, ಅಷ್ಟೌ–ಎಂಟು, ತಥಾ–ಹಾಗೆಯೇ, ದಶ–ಹತ್ತು, ದ್ವಾದಶ–ಹನ್ನೆರಡು, ಸಂಖ್ಯಾಕ–ಲೆಕ್ಕವುಳ್ಳ, ಅಂಗುಲೌ–ಅಂಗುಲ ಪ್ರಮಾಣದಲ್ಲಿ, ನೀಲಸುಧೂಮರಕ್ತತರಂಗಪೀತಾತ್ಮ–ಹಳದಿವರ್ಣರೂಪಾದಂಥ, ಸಂತತ್ತ್ವಪಂಚಕಂ–ಲೇಸಾದ ಆಕಾಶಾದಿ ಪಂಚತತ್ವವನು, ಸ್ಮರೇತ್–ಸ್ಮರಿಸುವುದು.

ತಾತ್ಪರ್ಯ : ನಾಸಾಗ್ರದಿಂ ಮುಂದೆ ನಾಲ್ಕು ಅಂಗುಲ ಪ್ರಮಾಣದಲ್ಲಿ ನೀಲವರ್ಣ ಆಕಾಶವನ್ನು, ಆರಂಗುಲದಲ್ಲಿ ಧೂಮವರ್ಣವಾದ ವಾಯುವನ್ನು, ಎಂಟು ಅಂಗುಲದಲ್ಲಿ ರಕ್ತವರ್ಣವಾದ ಅಗ್ನಿಯನ್ನು, ಹತ್ತು ಅಂಗುಲದಲ್ಲಿ ತೆರೆಗಳ ವರ್ಣವಾದ ಅಪ್ಪುವನ್ನು ಹನ್ನೆರಡು ಅಂಗುಲದಲ್ಲಿ ಹೊಂಬಣ್ಣವಾದ ಪೃಥ್ವಿಯನ್ನು ಲಕ್ಷಿಸುವುದೇ ಬಹಿರ್ಲಕ್ಷ್ಯವೆಂಬುದಭಿಪ್ರಾಯಂ.

●

ಸೂ : ಪುನರಪಿ ಪ್ರಕಾರಾಂತರಂಗಳಿಂ ಬಹಿರ್ಲಕ್ಷ್ಯಂಗಳಂ ಪೇಳ್ದಪಂ–

ಅಥವಾ ಸಂಮುಖಾಕಾಶಂ ಸ್ಥಿರದೃಷ್ಟ್ಯಾವಿಲೋಕಯೇತ್ ।
ಜ್ಯೋತಿರ್ಮಯೂಖಾ ದೃಶ್ಯಂ ತೇ ಯೋಗಿಭಿರ್ಧೀರಮಾನಸೈಃ ॥ ॥೪೨॥

ಅಥವಾ–ಪರಿಪಾಕ ತಾರತಮ್ಯದಿಂ ಪೂರ್ವೋದಿತಮಾದ ಲಕ್ಷ್ಯವು ಲೋಚನಕ್ಕೆ ಗೋಚರವಾಗದ ಪಕ್ಷದಲ್ಲಿ, ಸಮ್ಮುಖಾಕಾಶಂ–ನೇತ್ರಕ್ಕೆ ಇದಿರಾದ ಬಯಲನ್ನು, ಸ್ಥಿರದೃಷ್ಟ್ಯಾ–ನಿಮಿಷೋನ್ಮೇಷಗಳಿಂ ಚಲಿಸದ ದೃಷ್ಟಿಯಿಂದ, ವಿಲೋಕಯೇತ್–ನೋಡುವುದು, ಆ ನೋಟದಿಂ, ಜ್ಯೋತಿರ್ಮಯೂಖಾಃ–ಶಬ್ದತನ್ಮಾತ್ರಾಶ್ರಿತಮಾದ ಸದಾಶಿವಜ್ಯೋತಿಯ ಕಿರಣಗಳು, ಧೀರಮಾನಸೈಃ–ನಿಶ್ಚಲಚಿತ್ತರಾದಂಥ ಯೋಗಿಭಿಃ–ಯೋಗೀಶ್ವರರಿಂದ, ದೃಶ್ಯಂತೇ–ಕಾಣಲ್ಪಡುತ್ತಿವೆ.

ತಾತ್ಪರ್ಯ : ಆಕಾಶಂ ಬ್ರಹ್ಮ ಆಕಾಶೇ ವೈ ಸೂರ್ಯಚಂದ್ರಮಸಾವುಭೌ ।
ವಿದ್ಯುನ್ನಕ್ಷತ್ರಾಣ್ಯಗ್ನಿರಾಕಾಶೇ ಆಕಾಶಮುಪಾಸ್ವೇತಿ ॥

ಆಕಾಶದೊಳ್ತಾರಕಬ್ರಹ್ಮಂ ಪೂರ್ಣವಾಗಿರ್ಪುದರಿಂದೆ ಈ ಸೂರ್ಯಚಂದ್ರವಿದ್ಯುನ್ನಕ್ಷತ್ರಾಗ್ನಿ ರೂಪದಿಂದೊಳಗೆ ಬೆಳಗುತ್ತಿರ್ಪುದಾಗಿ, ಈ ಆಕಾಶಮಂ ನೋಳ್ಪುದೆಂಬ ಶ್ರುತಿಪ್ರಮಾಣದಿಂದಾ ಕಾಶಾವಲೋಕನದಿಂದೆ ಪರಮಾತ್ಮಜ್ಯೋತಿಯ ಸಾಕ್ಷಾತ್ಕಾರವಪ್ಪುದೆಂಬುದಭಿಪ್ರಾಯ.

●

ಸೂ : ಈ ದೃಷ್ಟಿಯ ಸ್ಥಿರತ್ವವೇ ಬ್ರಹ್ಮಸಾಕ್ಷಾತ್ಕಾರಕ್ಕೆ ಸಾಧನವಪ್ಪುದಾಗಿ ಅದಕ್ಕೆ ಉಪಾಯಮಂ ಪೇಳ್ದಪಂ–

ದೃಷ್ಟ್ಯಗ್ರೇ ವಾಪ್ಯಪಾಂಗೇ ವಾ ತಪ್ತಕಾಂಚನಸನ್ನಿಭಾಂ ।
ಭೂಮಿಂ ಸಂಲಕ್ಷಯೇದ್ದೃಷ್ಟಿಸ್ಸ್ಥಿರಾ ಭವತಿ ಯೋಗಿನಃ ॥ ॥೪೩॥

ದೃಷ್ಟ್ಯಗ್ರೇವಾ–ಲೋಚನಾಗ್ರದಲ್ಲಿಯಾದರೂ, ಅಪಾಂಗೇವಾ–ಕಡೆಗಣ್ಣಿನಲ್ಲಿಯಾದರೂ, ತಪ್ತಕಾಂಚನಸನ್ನಿಭಾಂ–ಕರಗಿದ ಕುಂದಣಕ್ಕೆ ಸಮಾನವಾದಂಥ, ಭೂಮಿಂ–ರಜೋಗುಣಾತ್ಮಕವಾದ ಭೂಮಿಯನ್ನು, ಸಂಲಕ್ಷಯೇತ್–ಚನ್ನಾಗಿ ಚಲಿಸದೆಯಿರ್ದದಂಥಾದ್ದು, ಭವತಿ–ಆಗುತ್ತಿದ್ದಿತು.

ಅಥವಾ ಶಿರಸಶ್ಚೋರ್ಧ್ವೇ ದ್ವಾದಶಾಂಗುಲಸಂಮಿತೇ ।
ಜ್ಯೋತಿಃಪುಂಜಂ ನಿರಾಕಾರಂ ಲಕ್ಷಯೇನ್ಮುಕ್ತಿದಂ ಭವೇತ್ ॥ ॥೪೪॥

ಅಥವಾ–ಈ ರೂರ್ಧ್ವೋದಿತಮಾದ ಲಕ್ಷ್ಯಮಂ ಮೀರುವ ಪಕ್ಷದಲ್ಲಿ, ಶಿರಸಃ–ಮಸ್ತಕದ, ಊರ್ಧ್ವೇ –ಮೇಲಣ ದೇಶವಾದಂಥ, ದ್ವಾದಶಾಂಗುಲಸಂಮಿತೇ–ಹನ್ನೆರಡುಂಗಲಪ್ರಮಾಣದಲ್ಲಿ, ನಿರಾಕಾರಂ –ಪೀತರಕ್ತಾದ್ಯಾಕಾರವಿಲ್ಲದಂಥ, ಜ್ಯೋತಿಃಪುಂಜಂ–ಶುದ್ಧ ಸಾತ್ವಿಕವಾದ ಬೆಳಗಿನೊಬ್ಬುಳಿಯನ್ನು, ಲಕ್ಷಯೇತ್–ಲಕ್ಷಿಸುವುದು, ಅದು, ಮುಕ್ತಿದಂ–ಮೋಕ್ಷಮಂ ಕೊಡುವಂಥಾದ್ದು, ಭವೇತ್–ಅಹುದು.

ತಾತ್ಪರ್ಯ : ಉತ್ತರೋತ್ತರವಾಗಿ ಅಂಗುಲಿದ್ವಯಂಗಳಂ ಪ್ರಮಾಣಿಸಿದ ಸೂಕ್ಷ್ಮ ಪಂಚಭೂತಂಗಳ ಮೇಲಣ ಭಾಗದಲ್ಲಿ ನಿರುಪಾಧಿಕಮಾದ ಕಾಂತಿಪುಂಜಮಂ ಲಕ್ಷಿಸುವುದರಿಂ ಕೈವಲ್ಯಮಪ್ಪು ದೆಂಬುದಭಿಪ್ರಾಯ.

ಸೂ : ಈ ಯೋಗೀಶ್ವರಂಗೆ ಎಲ್ಲಿ ನೋಡಿದರಲ್ಲಿಯೇ ಲಕ್ಷ್ಯವಾಗುವ ಉಪಾಯಮಂ ಪೇಳ್ದಪಂ–

ಯತ್ರಯತ್ರಾರ್ಥವಾನ್ಯೋಗೀ ತತ್ರತತ್ರ ವಿಲಕ್ಷಯೇತ್ ।

ಆಕಾಶಮೇವ ಯಸ್ತಸ್ಯ ಚಿತ್ತಂ ಭವತಿ ತಾದೃಶಂ ॥ ॥೪೫॥

ಯಃ–ಆವನೋರ್ವ ಯೋಗೀಶ್ವರನು, ಯತ್ರಯತ್ರ–ಎಲ್ಲಿ ಎಲ್ಲಿ, ಅರ್ಥವಾನ್–ಬಾಹ್ಯಾಂತಃಕರಣಕ್ಕೆ ಗೋಚರಮಾದ ವಿಷಯವುಳ್ಳಾತನಾಗುವನೋ, ತತ್ರತತ್ರ–ಅಲ್ಲಲ್ಲಿ, ಆಕಾಶಮೇವ–ಅವರವರ ನಿರಾಕಾರವನೇ, ವಿಲಕ್ಷಯೇತ್–ವಿಶೇಷವಾಗಿ ಲಕ್ಷಿಸುವನೋ, ತಸ್ಯ–ಆತನ, ಚಿತ್ತಂ–ಅರಿವು, ತಾದೃಶಂ–ಆಕಾಶದಂತೆ ನಿರಾಲಂಬವು, ಭವತಿ–ಆಗುತ್ತಿದ್ದಿತು.

ತಾತ್ಪರ್ಯ : ಮರದಿಂದಲಾದ ಸ್ತ್ರೀಪ್ರತಿಮೆಯನ್ನು ಸ್ತ್ರೀರೂಪವಾಗಿ ಕಂಡಾತಂಗೆ ಮೋಹಕವಪ್ಪುದಾಗಿ, ಮರನೆಂದು ಕಂಡಾತಂಗೆ ಮೋಹಕವಿಲ್ಲವಾಗಿ, ಷಡಧ್ವಾತ್ಮಕವಾದ ಈ ಜಗತ್ತನ್ನು ಕಾರ್ಯರೂಪದಿಂ ಕಂಡಾತಂಗೆ ಭೋಗವಪ್ಪುದಾಗಿ, ಪರಮಕಾರಣಮಾದ ಬಿಂದುಮಾಯಾರೂಪದಿಂದ ನಿರಾಕಾರಮಾಗಿ ಈ ಪ್ರಪಂಚಮಂ ಕಾಣಲಾತಂಗೆ ಮೋಕ್ಷವೆಂಬುದಭಿಪ್ರಾಯಂ.

●

ಸೂ : ಈ ಪ್ರಕಾರದಿಂದ ಬಹಿರ್ಲಕ್ಷ್ಯಮಂ ಪೇಳ್ದು ಮಧ್ಯಲಕ್ಷ್ಯಮಂ ಪೇಳಲುದ್ಯೋಗಿಸುತ್ತಿರ್ದಪಂ–

ಇತ್ಯನೇಕವಿಧಾಕಾರಂ ಬಹಿರ್ಲಕ್ಷ್ಯಮುದೀರಿತಂ ।

ಶೃಣುಷ್ವ ಮಧ್ಯಲಕ್ಷ್ಯಂಚ ಕಥಿತಂ ಪೂರ್ವಸೂರಿಭಿಃ ॥ ॥೪೬॥

ಇತಿ–ಈ ಪೂರ್ವೋಕ್ತ ಪ್ರಕಾರದಿಂದ, ಅನೇಕವಿಧಾಕಾರಂ–ಅನೇಕ ಪ್ರಕಾರಮಾಗಿರ್ಪಂಥ, ಬಹಿರ್ಲಕ್ಷ್ಯಂ–ಬಹಿರ್ಲಕ್ಷ್ಯವು, ಉದೀರಿತಂ–ಹೇಳಲ್ಪಟ್ಟಿತು, ಅನಂತರದಲ್ಲಿ, ಪೂರ್ವಸೂರಿಭಿಃ, ಪೂರ್ವ –ಮೊದಲ, ಸೂರಿಭಿಃ–ಯೋಗೀಶ್ವರರಿಂದೆ, ಕಥಿತಂ–ಹೇಳಲ್ಪಟ್ಟಂಥ, ಮಧ್ಯಲಕ್ಷ್ಯಂಚ–ಮಧ್ಯಲಕ್ಷ್ಯವನ್ನು, ಶೃಣುಷ್ವ–ಕೇಳು.

●

ಸೂ : ಪರಿಪಾಕತಾರತಮ್ಯದಿಂ ಬಹುವಿಧಮಾದ ಮಧ್ಯಲಕ್ಷ್ಯಸ್ವರೂಪಂಗಳಂ ಪೇಳ್ದಪಂ–

ಶ್ವೇತಾದಿವರ್ಣಾನಥಖಂಡಚಂದ್ರಸೌದಾಮನೀವಹ್ನಿಶಿಖೇನ ಬಿಂಬಾನ್ ।

ಜ್ವಲನ್ನಭೋ ವಾ ಸ್ಥಲಹೀನಮೇಕಂ ವಿಲಕ್ಷಯೇತ್ತತ್ಖಲುಧ್ಯಲಕ್ಷ್ಯಂ ॥ ॥೪೭॥

ಶ್ವೇತಾದಿವರ್ಣಾನ್–ಧವಲವರ್ಣವನ್ನು, ಆದಿಶಬ್ದದಿಂ ಕೃಷ್ಣಧೂಮ್ರಾದಿ ವರ್ಣಂಗಳನು, ಅಥ –ಅನಂತರದಲ್ಲಿ, ಖಂಡಚಂದ್ರಸೌದಾಮಿನೀವಹ್ನಿಶಿಖೇನ ಬಿಂಬಾನ್: ಖಂಡಚಂದ್ರ–ಅರ್ಧಚಂದ್ರನು, ಸೌದಾಮಿನೀ–ಮಿಂಚಿನಬಳ್ಳಿ, ವಹ್ನಿಶಿಖಾ–ಅಗ್ನಿಜ್ವಾಲೆ, ಇನಬಿಂಬಾನ್–ಸೂರ್ಯಬಿಂಬವನಾದರೂ, ಸ್ಥಲಹೀನಂ–ಒಳಗು ಹೊರಗೆಂಬ ಸ್ಥಲವಿಭಾಗವಿಲ್ಲದರ್ಪಂಥ, ಏಕಂ–ಒಂದೆಯಾಗಿರ್ಪಂಥ, ಜ್ವಲನ್ನಭೋವಾ–ಜ್ವಲಿಸುತ್ತಿರ್ಪ ಬಯಲುನಾದರೋ, ವಿಲಕ್ಷಯೇತ್–ಲಕ್ಷಿಸುವುದು, ತತ್–ಅದು, ಮಧ್ಯಲಕ್ಷ್ಯಂ ಖಲು–ಮಧ್ಯಲಕ್ಷವಲಾ.

ನೀಹಾರಧೂಮಾರ್ಕಜಲಾನಲಾನಾಂ ಖದ್ಯೋತವಿದ್ಯುತ್ ಸ್ಫಟಿಕಶ್ಯಶೀನಾಂ ।

ಏತಾನಿ ರೂಪಾಣಿ ಪುರಸ್ಸರಾಣಿ ಬ್ರಹ್ಮಣ್ಯಭಿವ್ಯಕ್ತಿಕರಾಣಿ ಯೋಗೇ ॥

ಎಂಬ ಶ್ರುತಿಪ್ರಮಾಣದಿಂದೀ ಹಿಮಧೂಮಾದಿಸ್ವರೂಪಂಗಳಂ ತೋರುವ ಭೇದಂಗಳಂ ಮಧ್ಯಲಕ್ಷ್ಯವೆನಿಸುವ ತಾರಕಬ್ರಹ್ಮಸ್ವರೂಪಗಳೆಂದರಿವುದು.

●

ಸೂ : ಅನಂತರದಲ್ಲಿ ಮಧ್ಯಲಕ್ಷ್ಯಂಗಳಾದ ಪಂಚಾಕಾಶಸ್ವರೂಪಂಗಳು ಪೇಳ್ದಪಂ –

ನಿರಾಕಾರಂ ಪಶ್ಯೇದ್ಗುಣರಹಿತಮಾಕಾರಮಥವಾ

ತಮೋರೂಪಂ ಗಾಢಸ್ಫುರದುತರಾಕಾಶಮಥವಾ ।

ಮಹಾಕಾಶಂ ಕಾಲಾನಲನಿಭಮಥಾತ್ಯಂತರುಚಿರಂ

ಪರಂ ತತ್ತ್ವಾಕಾಶಂ ರವಿಶತನಿಭಂ ಸೂರ್ಯಖಮಿತಿ ॥ ॥೪೮॥

ಮೊದಲಲ್ಲಿ, ನಿರಾಕಾರಂ–ಪೃಥಿವ್ಯಾದಿಚತುರ್ಭೂತಂಗಳಂತೆ ಆಕಾರವಿಲ್ಲದಿರ್ಪಂಥ, ಗುಣರಹಿತಂ –ನೀಲಲೋಹಿತಾದಿ ವರ್ಣಂಗಳಿಲ್ಲದಿರ್ಪಂಥ, ಆಕಾಶಂ–ಪಂಚಮವಾದ ಭೂತಾಕಾಶವನ್ನು, ಪಶ್ಯೇತ್ –ಸ್ಥಿರದೃಷ್ಟಿಯಿಂದ ನೋಡುವುದು. ಅಥ–ಅನಂತರದಲ್ಲಿ, ವಾ–ಮೇಣ್, ತಮೋರೂಪಂ– ತಮೋಗುಣಾತ್ಮಕವಪ್ಪುದರಿಂದೆ, ನೀಲವರ್ಣವಾಗಿರ್ಪಂಥ, ಗಾಢಸ್ಫುರದುರುತರಾಕಾಶಂ–ದಟ್ಟೈಸಿ ತೋರುವ ಸ್ಥೂಲಾಕಾಶವನ್ನು, ಪಶ್ಯೇತ್–ಕಾಣ್ಬುದು, ಅಥ–ಅನಂತರದಲ್ಲಿ ವಾ–ಮೇಣ್, ಕಾಲಾನಲನಿಭಂ –ರಜೋಗುಣಾತ್ಮಕವಪ್ಪುದರಿಂ ಕಾಲಾಗ್ನಿಗೆ ಸಮಾನವಾದಂಥ, ಮಹಾಕಾಶಂ–ಮಹದಾಕಾಶವನ್ನು, ಪಶ್ಯೇತ್–ಕಾಣ್ಬುದು, ಅಥ–ಅನಂತರದಲ್ಲಿ, ಅತ್ಯಂತರುಚಿರಂ–ಸತ್ವಗುಣಾತ್ಮಕವಪ್ಪುದರಿಂದತ್ಯಂತ ಮನೋಹರವಾಗಿರ್ಪಂಥ, ಪರಂ–ಮುಖ್ಯವಾಗಿರ್ಪಂಥ, ತತ್ತ್ವಾಕಾಶಂ–ತತ್ವಾಕಾಶವನ್ನು, ಪಶ್ಯೇತ್– ಕಾಣ್ಬುದು, ಅಥ–ಅನಂತರದಲ್ಲಿ, ರವಿಶತನಿಭಂ–ಕೋಟಿಸೂರ್ಯರ್ಗೆ ಸಮಾನವಾದಂಥ, ಸೂರ್ಯಖಂ –ಸೂರ್ಯಾಕಾಶವೆನಿಸುವ ಬಿಂದ್ವಾಕಾಶವನ್ನು, ಇತಿ–ಈ ಪ್ರಕಾರದಿಂ, ಪಶ್ಯೇತ್–ಕಾಣ್ಬುದು.

ತಾತ್ಪರ್ಯ : ಆಕಾಶೇ ರಮತ ಆಕಾಶೇನ ಜಾಯತ ಆಕಾಶಮಭಿಜಾಯತ ಆಕಾಶಮುಪಾಸ್ವ – ಎಂಬ ಶ್ರುತಿಪ್ರಮಾಣದಿಂದೆ ಚತುರ್ಭೂತಂಗಳನೊಳಕೊಂಡುದು ಭೂತಾಕಾಶ, ಅದನೊಳಕೊಂಡುದು ನೀಲವರ್ಣವಾದ ಸ್ಥೂಲಾಕಾಶ, ಅದನೊಳಕೊಂಡುದು, ಅರುಣವರ್ಣವಾದ ಮಹದಾಕಾಶ, ಅದನೊಳಕೊಂಡುದು ಶ್ವೇತವರ್ಣವಾದ ತತ್ವಾಕಾಶ, ಆ ತ್ರಿಗುಣಾತ್ಮಕವಾದ ಪ್ರಕೃತಿಮಾಯೆಗಳನೊಳ ಕೊಂಡುದು ಬಿಂದ್ವಾಕಾಶವಾದ ಕಾರಣ, ಯೋಗೀಶ್ವರನು ಕಣ್ಣಮುಂದಣ ಬಯಲಿನೊಳಗೆ ಕ್ರಮದಿಂದೆ ಈ ಆಕಾಶಂಗಳಂ ಕಾಣ್ಬುದೆಂಬುದಭಿಪ್ರಾಯಂ.

●

ಸೂ : ಒಳಹೊರಗೆ ಪೂರ್ಣವಪ್ಪುದರಿಂ ಮಧ್ಯಲಕ್ಷ್ಯವೆನಿಸುವ ಪಂಚಾಕಾಶಂಗಳಂ ವಿಭಾಗಿಸಿ ಕಂಡ ಯೋಗೀಶ್ವರಂಗೆ ಆಗುವ ಫಲವಂ ಪೇಳ್ದಪಂ–

ವ್ಯೋಮಪಂಚಕಮೇತದ್ಧಿ ತದ್ಬಾಹ್ಯಾಭ್ಯಂತರಸ್ಥಿತಂ ।
ಯಃ ಪಶ್ಯತಿ ನರೋ ಲಕ್ಷ್ಯೇಸವ್ಯೋಮಸದೃಶೋ ಭವೇತ್ ॥ ॥೪೯॥

ಏತತ್–ಈ ಪೂರ್ವೋಕ್ತಮಾಗಿರ್ಪಂತಹದು, ವ್ಯೋಮಪಂಚಕಂ ಹಿ–ಆಕಾಶ ಪಂಚಕವಲಾ, ಬಾಹ್ಯಾಭ್ಯಂತರಸ್ಥಿತಂ–ಪಿಂಡಾಂಡದೊಳಹೊರಗೆ ವ್ಯಾಪಿಸುತ್ತಿರ್ದಂಥ, ತತ್–ಆ ಪಂಚಾಕಾಶವನ್ನು, ಯಃ–ಆವನಾನೋರ್ವ, ನರಃ–ಪುರುಷನು, ಲಕ್ಷ್ಯೇ–ಮಧ್ಯಮಲಕ್ಷ್ಯದಲ್ಲಿ, ಪಶ್ಯತಿ–ಕಾಣುತ್ತಿದ್ದಾನೋ, ಸಃ–ಆ ಯೋಗೀಶ್ವರನು, ವ್ಯೋಮಸದೃಶಃ–ಆಕಾಶಕ್ಕೆ ಸಮಾನವಾಗಿರ್ಪಂಥಾತನು, ಭವೇತ್–ಆಗುವನು.

ತಾತ್ಪರ್ಯ : ಈ ಆಕಾಶಾನುಸಂಧಾನದಿಂದೆ ಆಕಾಶದಂತೆ ಅಖಂಡಿತ ನಿರ್ಲೇಪನಿರಾವರಣಾದಿ ಸ್ವರೂಪನಪ್ಪನೆಂಬುದಭಿಪ್ರಾಯ.

●

ಸೂ : ಈ ಪ್ರಕಾರದಿಂ ಲಕ್ಷ್ಯತ್ರಯರೂಪಮಾದ ತಾರಕಸ್ವರೂಪಮಂ ಪೇಳ್ದು, ಅದರ ಆಧಿಕ್ಯಮಂ ಪೇಳುತ್ತೆ, ಅದನ್ನೇ ಅಭ್ಯಾಸಿಸಲ್ತಕ್ಕುದೆಂದು ಆಚಾರ್ಯ ಶಿಷ್ಯಂಗೆ ನಿರೂಪಿಸುತ್ತಿರ್ದಪಂ–

ತಾರಣಾಚ್ಚ ಗುರುಶಿಷ್ಯಯೋರ್ದ್ವಯೋಸ್ತಾರಕೋಽಯಮಿತಿ ಯೋಗಸಂಜ್ಞಕಃ ।
ತಾರಕಂ ಭವಮಹಾಬ್ಧಿತಾರಕಂ ತತ್ತ್ವಮೇವ ಪರಿಶೀಲನಂ ಕುರು ॥ ॥೫೦॥

ಭೋ ಸಖೇ–ಎಲೈ ಸ್ನೇಹಿತನಾದ ಶಿಷ್ಯನೇ, ಅಯಂ–ಈ ಯೋಗವು, ಗುರು ಶಿಷ್ಯಯೋ–ಕಾರುಣ್ಯದೊಡನೆ ಕೂಡಿದ ಅನುಗ್ರಾಹಕನಾದ ಗುರುವೆಂಬ ವಿನಯದಿಂ ಕೂಡಿ ಅನುಗ್ರಾಹ್ಯನಾದ ಶಿಷ್ಯನೆಂಬ, ದ್ವಯೋ ಃ–ಇರ್ವರ, ತಾರಣಾಚ್ಚ–ಸಮೀಪಸ್ಥರಂ ಮಾಡಿ ಸೇರಿಸುವುದರಿಂದಲೂ, ತಾರಕಃ –ತಾರಕವು, ಯೋಗಸಂಜ್ಞಕಃ–ಯೋಗವೆಂಬ ಹೆಸರುಳ್ಳುದು.

ಅನುಗ್ರಾಹ್ಯಸ್ಯ ವಿನಯೇ ತಥಾನುಗ್ರಾಹಕಸ್ಯ ಚ ।
ಕಾರುಣ್ಯೇತ್ವನಯೋರ್ಯಸ್ಮಾತ್ತಯೋರ್ಯೋಗಸ್ಸದುರ್ಲಭಃ ॥

ಎಂದು ಆಗಮಪ್ರಮಾಣವುಂಟಾಗಿ ಈ ಗುರುಶಿಷ್ಯಸಂಬಂಧಮಂ ಮಾಳ್ಪುದಾಗಿ, ಈ ತಾರಕವೇ ಯೋಗವೆನಿಸುವದೆಂಬುದಭಿಪ್ರಾಯಂ, ಇತಿ-ಇದುಕಾರಣವಾಗಿ, ಭವಮಹಾಬ್ಧಿತಾರಕಂ-ಸಂಸಾರ ಸಾಗರಮಂ ದಾಂಟಿಸುವಂಥ. ತತ್-ಆ, ತಾರಕಮೇದ-ತಾರಕವನೇ, ತ್ವಂ-ನೀನು. ಪರಿಶೀಲನಂ-ಅಭ್ಯಾಸವನ್ನು, ಕುರು-ಮಾಡು.

ತಾತ್ಪರ್ಯ : "ಓಮಿತಿ ಬ್ರಹ್ಮ ಓಮಿತೀದಂ ಸ್ವರಂ ಓಮಿತಿ ಪ್ರಯುಕ್ತಮಾತ್ಮಜ್ಯೋತಿಃ ಸಕೃದಾವರ್ತತೇ ಅಥ ಕಸ್ಮಾದುಚ್ಯತೇ ತಾರಕಂ ಯಸ್ಮಾದುಚ್ಚಾರ್ಯಮಾಣ ಏವ ಗರ್ಭಜನ್ಮಜರಾಮರಣ ಸಂಸಾರಮಹದ್ಭಯಾತ್ತಾರಯತಿ ತಸ್ಮಾದುಚ್ಯತೇ ತಾರಂ" ಓಂಕಾರವೇ ಬ್ರಹ್ಮವೆನಿಪುದು. ಓಂಕಾರವೇ ಸರ್ವವ್ಯಾಪಕವು, ಓಂ ಎಂದು ಒಂದು ವೇಳೆ ಉಚ್ಚರಿಸಿದ ಮಾತ್ರದಲ್ಲಿಯೇ ಆತಂಗೆ ಪರಮಾತ್ಮಜ್ಯೋತಿ ಅಭಿಮುಖಮಪ್ಪುದು. ಈ ಓಂಕಾರಕ್ಕೆ ತಾರಕವೆಂಬ ನಾಮವೇನು ಕಾರಣವೆನಲ್ ಓಂ ಎಂದುಚ್ಚರಿಸಿದ ಮಾತ್ರದಲ್ಲಿಯೇ, ಗರ್ಭಜನ್ಮ ಜರಾಮರಣಾದಿ ಸಂಸಾರಭೀತಿಯಂ ದಾಟಿಸುವುದಾಗಿ ತಾರಕವೆನಿಸಿಕೊಂಬುದು ಎಂಬ ಶ್ರುತಿಪ್ರಮಾಣದಿಂದವೂ, ತ್ರಿಗುಣಾತ್ಮಕವಾದ ಅಕ್ಷರತ್ರಯಂಗಳಿಂದೆ ವಿಚಿತ್ರರೂಪಮಾಗಿ ಕಾಣಿಸುವ ತಾರಕಯೋಗವನೇ ಅಭ್ಯಾಸಮಂ ಮಾಳ್ಪುದೆಂಬುದಭಿಪ್ರಾಯಂ.

●

ಸೂ : ಈ ರಾಜಯೋಗದ ಅವಾಂತಭೇದಂಗಳಾದ ಸಾಂಖ್ಯಯೋಗ ತಾರಕಯೋಗಂಗಳಿಗೆ ಸಫಲಸಮಾನತೆಯಂ ಪೇಳ್ದು ಪಟಲದ ಪರಿಸಮಾಪ್ತಿಯಂ ಸೂಚಿಸುತ್ತಿರ್ದಪಂ-

ಫಲಮೇಕಂ ದ್ವಿಧಾ ಚರ್ಯಾ ಯಥಾರ್ಥಂ ಸಾಂಖ್ಯತಾರಯೋಃ ।
ಉಪಾಧಿರಹಿತಸ್ಸಾಂಖ್ಯೋ ಯೋಗಸ್ಸೋಪಾಧಿಕಸ್ತ್ವಯಂ ॥ ॥೫೧॥

ಸಾಂಖ್ಯತಾರಯೋಃ-ಸಾಂಖ್ಯಯೋಗ ತಾರಕಯೋಗಂಗಳಿಗೆ, ಯಥಾರ್ಥಂ-ಸತ್ಯವಾದಂಥ, ಫಲಂ-ಪರಮಾತ್ಮಸ್ವರೂಪಲಾಭವೆಂಬ ಫಲವು, ಏಕಂ-ಒಂದೆಯಾಗಿರ್ಪಂತಹದು, ಚರ್ಯಾ-ಆ ಉಭಯಯೋಗಂಗಳ ವರ್ತನವು, ದ್ವಿಧಾ-ಎರಡು ಪ್ರಕಾರವು.

ಅದು ಹೇಗೆಂದೊಡೆ, ಸಾಂಖ್ಯಃ-ಸಾಂಖ್ಯಯೋಗವು, ಉಪಾಧಿರಹಿತಃ-ಧ್ಯೇಯಾಕಾರವಾದ ವಸ್ತುವಿನ ಅವಲಂಬಿನವಿಲ್ಲದಿರ್ಪಂತಹದು, ಆಯುಂ-ಈ, ಯೋಗಸ್ತು- ತಾರಕಯೋಗವಾಯಿತ್ತಾದೊಡೆ, ಸೋಪಾಧಿಕಃ-ಧ್ಯಾನಕ್ಕೆ ಅವಲಂಬನಮಾದನೇಕಲಕ್ಷ್ಯಂಗಳೊಡನೆ ಕೂಡಿದಂತಹುದು (ಪರಮಾತ್ಮಾನುಸಂಧಾನವಿಲ್ಲದೆ ಕ್ರಮದಿಂ ತತ್ವಗಳ ಹೊರೆಯನತಿಗಳೆದು ಅಖಂಡಿತಮಾಗಿನಿಂದ ನಿಜಸ್ವರೂಪದುಳಿಮೆಯೇ ಸಾಂಖ್ಯಯೋಗವು; ನಾದಬಿಂದುಕಲಾತ್ಮಕವಾದ ಪರಮಾತ್ಮನುಸಂಧಾನಪೂರ್ವಕದಿಂ ತತ್ವಂಗಳಂ ಕಳೆದುಳಿದು ನಿಂದ ನಿಜದುಳಿಮೆಯೇ ತಾರಕಯೋಗವಾದಕಾರಣ ಫಲಸಮಾನವಾದರುಂ ತಾರಕಯೋಗಾಭ್ಯಾಸವೇ ವಿಶೇಷವೆಂಬುದಭಿಪ್ರಾಯಂ).

ಯಥಾ ವೈ ರಾಜಸಚಿವೋ ರಾಜಾನಂ ದ್ರಷ್ಟುಮುಂದ್ಯತಃ ।
ಸ್ಥಾನಾತ್ಸ್ಥಾವಾತ್ಪರಿತ್ಯಜ್ಯ ಪರಿವಾರಪರಿಚ್ಛದಾನ್ ॥

ವಿಸೃಜ್ಯ ಕೇವಲೋ ಭೂತ್ವಾ ಚಾಧ್ಯಕ್ಷೀ ಕುರುತೇ ನೃಪಂ ।
ತದ್ವಜ್ಜೀವೋಽಪಿ ಯೈರ್ಬದ್ಧಸ್ತತ್ಸರ್ವಂ ವಿನಿವರ್ತ್ಯ ಚ ॥

ಶಕ್ತೇರೂರ್ಧ್ವಸ್ಥಿತಂ ಶಂಭುಂ ಕೇವಲೋ ಯಾತಿ ತನ್ಮಯಂ ।
ತಾರಕೋ ಮೋಕ್ಷದಃ ಪ್ರೋಕ್ತಶ್ಶಿವ ಸಾನ್ನಿಧ್ಯ ಸಾಧನಂ ॥

ಎಂದುದಾಗಿ [೧]ಯೋಗಾಭ್ಯಾಸವೇ ವಿಶೇಷವೆಂಬುದಭಿಪ್ರಾಯ[೧]

ಇತಿ ಶ್ರೀಮದ್ವೇದವೇದಾಂತಾಗಮಪುರಾಣಸ್ಮೃತೀತಿಹಾಸಪ್ರತಿಪಾದಿತ
ಶ್ರೀವೀರಶೈವಸ್ಥಾಪನಾಚಾರ್ಯ ಶ್ರೀಬಸವಾರಾಧ್ಯದೇವವಿರಚಿತಾಯಾಃ
ಶಿವಯೋಗಪ್ರದೀಪಿಕಾಯಾಂ ಸಾಂಖ್ಯತಾರಕಯೋಗಪಟಲಃ

ಚತುರ್ಥ ಸಂಪೂರ್ಣಃ

❖❖

೧–೧ x (ಕ)

ಪಂಚಮ ಪಟಲಃ

ಸೂ : ಅನಂತರದಲ್ಲಿ ಆಚಾರ್ಯನು ಈ ಪೂರ್ವೋದಿತಮಾದ ತಾರಕಯೋಗ ಸಿದ್ಧಿಗೆ ಸಾಧನಂಗನಾದ ಬಹುವಿಧೋಪಾಯಂಗಳಂ ಪೇಳಲಾಲಕ್ಷ್ಯಂಗಳೊಳಗೆ ಅತಿಗೋಪ್ಯಮಾದ ದಿವ್ಯಲಕ್ಷ್ಯಮಂ ಕುರುಹಿಡಲುದ್ಯೋಗಿಸುತಿರ್ದಪಂ–

ಪುನಶ್ಚಾತಿರಹಸ್ಯಂ ಚ ಜ್ಯೋತಿಷಾಂ ನಿಲಯಂ ಮಹತ್ ।

ದಿವ್ಯಲಿಂಗಸ್ಥಲಂ ದೃಷ್ಟಮಂತರ್ಲಕ್ಷ್ಯಾತ್ಮಕಂ ಶೃಣು ॥ ॥೧॥

ಎಲೈ ಶಿಷ್ಯನೇ, ಪುನಶ್ಚ–ಮರಳಿಯು, ಅತಿರಹಸ್ಯಂ–ತತ್ವತಾತ್ವಿಕಮಧ್ಯದೊಳ್ ಶಾಸ್ತ್ರಸಮೂಹಮಧ್ಯದೊಳ್ ಅತಿಗೋಪ್ಯಮಾದಂಥ, ಜ್ಯೋತಿಷಾಂ–ಊರ್ಧ್ವಭುವನ ಮಧ್ಯಭುವನ ಅಧೋಭುವನದ ಬೆಳಗುಗಳಿಗೆ, ನಿಲಯಂ–ಆಶ್ರಯಮಾಗಿರ್ಪಂಥ, ಮಹತ್–ಸಕಲಪ್ರಪಂಚಮ ನೊಳಗೊಂಬುದರಿಂದ ಮಹದ್ರೂಪಮಾದಂಥ, ಅಂತರ್ಲಕ್ಷ್ಯಾತ್ಮಕಂ–ಅಂತರ್ಲಕ್ಷ್ಯರೂಪಮಾದಂಥ, ದೃಷ್ಟಂ–ಪ್ರತ್ಯಕ್ಷಪ್ರಮಾಣಗೋಚರವಾದಂಥ, ದಿವ್ಯಲಿಂಗಸ್ಥಲಂ–ದಿವ್ಯವಾದ ಲಿಂಗಸ್ಥಲವನ್ನು, ಶೃಣು–ಕೇಳು.

ತಾತ್ಪರ್ಯ : ಸುಷುಪ್ತ್ಯವಸ್ಥೆಯಲ್ಲಿ ಸಕಲವ್ಯವಹಾರಕ್ಕೆ ಲಯಸ್ಥಾನವೆನಿಸುವದಾಗಿ, ಜಾಗ್ರದವಸ್ಥೆಯಲ್ಲಿ ಸಕಲಕ್ಕೆಗಮನಸ್ಥಾನವೆನಿಸುವುದಾಗಿ, ಊರ್ಧ್ವಮುಖವಾಗಲ್ ಲಯಸ್ಥಾನವೆನಿಸಿ, ಅಧೋಮುಖವಾಗಲ್ ಗಮನಸ್ಥಾನವೆನಿಪುದರಿಂ ಲಿಂಗಸ್ಥಾನವೆನಿಸಿ, ಕದಂಬಗೋಳಕಾಕಾರಮಾದ ಅಕಾರ ಉಕಾರ ಮಕಾರಂಗಳೆಂಬ ಮಂಡಲತ್ರಯಮಧ್ಯವರ್ತಿಯಾಗಿದ್ದು ಸಾಕ್ಷಾತ್ಕಾರವೆನಿಸಿದ ಶಿವಲಿಂಗವೇ ಅಂತರ್ಲಕ್ಷ್ಯವೆಂಬುದಭಿಪ್ರಾಯಂ

ಕದಂಬಗೋಳಕಾಕಾರಸ್ಸ್ಫುರತ್ಕಿರಣಮಾಲಿತಃ ಎಂದುದಾಗಿ,

●

ಸೂ : ಪದ್ಮಕೋಶಪ್ರತೀಕಾಶಂ ಹೃದಯಂ ಚಾಪ್ಯಧೋಮುಖಂ ।

ತಸ್ಯಾಂ ತೇ ಸುಷಿರಂ ಸೂಕ್ಷ್ಮಂ ತಸ್ಮಿನ್ ಸರ್ವಂ ಪ್ರತಿಷ್ಠಿತಂ ॥

ಎಂಬ ಶ್ರುತಿಪ್ರಮಾಣದಿಂದೆ ಜ್ಞಾನಾನುಗ್ರಹೋನ್ಮುಖನಾದ ಆಚಾರ್ಯನು ಈ ಅಂತರ್ಲಕ್ಷ್ಯವನೇ ಶಿಷ್ಯನಿಗೆ ಕೈದೋರಿಕೆಯಾಗಿ ಪೇಳ್ದಪಂ–

ಸಾಂತಸ್ಥಂ ನ ಬಹಿರ್ವ್ಯಾಪ್ತಂ ಅಪರೋಕ್ಷಸ್ವರೂಪಕಂ ।
ಆಕಾಶಭ್ಯಂತರಾಕಾಶಮಂತರ್ಲಕ್ಷ್ಯಂ ತದೇವ ಹಿ ॥ ॥೨॥

ಯತ್–ಯಾವ ಲಕ್ಷ್ಯರೂಪವಾದ ವಸ್ತು, ಅಂತಸ್ಥಂ–ಅಂತರಂಗದಲ್ಲಿಯೇ ಇದ್ದಂಥಾದ್ದು, ನ –ಅಲ್ಲ (ಭಾವಶುದ್ಧಿಯಿಂ ಬಲಿದ ಧ್ಯೇಯಮೂರ್ತಿಯಂತೆ ಭಾವಮಾತ್ರಕ್ಕೆ ಗೋಚರವಲ್ಲವೆಂಬುದರ್ಥಂ) ಬಹಿರ್ವ್ಯಾಪ್ತಂ–ಬಾಹ್ಯದಲ್ಲಿಯೇ ವ್ಯಾಪಿಸಿದಂಥಾದ್ದು, ನ–ಅಲ್ಲ (ಭೂತಪಂಚಕಾದಿಗಳ ವರ್ಣಗಳಂತೆ ಬಾಹ್ಯದಲ್ಲಿಯೇ ಇದಿರಿಟ್ಟು ಕಾಣಿಸಿಕೊಂಬುದಲ್ಲವೆಂಬುದರ್ಥ). ಅಪರೋಕ್ಷ ಸ್ವರೂಪಕಂ–ದೇಹಳೀದೀಪನ್ಯಾಯದಂತೆ ಒಳಹೊರಗೆ ಬೆಳಗುತ್ತೆ ಪ್ರತ್ಯಕ್ಷರೂಪವಾದಂಥ, ಆಕಾಶಾಭ್ಯಂತರಾಕಾಶಂ – ಹೃದಯಾಕಾಶಮಧ್ಯದ ಗೋಳಕಾಕಾರವಾದ ದಿವ್ಯಾಕಾಶವುಂಟೋ, ತದೇವ–ಅದೇ, ಅಂತರ್ಲಕ್ಷ್ಯಂಹಿ –ಅಂತರ್ಲಕ್ಷ್ಯಹುದಲಾ.

ತಾತ್ಪರ್ಯ : ಯದಿದಮಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ।
ವೇಶ್ಮ ದಹರೋಽಸ್ಮಿನ್ನಂತರಾಕಾಶಃ ತಸ್ಮಿನ್ಯದಂತಸ್ತದನ್ವೇಷ್ಟವ್ಯಂ ॥

ಈ ಅಕ್ಷರತ್ರಯರೂಪದಿಂ ಬ್ರಹ್ಮಪರವೆನಿಸುವ ಮಂಡಲತ್ರಯ[೧]ಮಧ್ಯ[೧]ದಲ್ಲಿ ಯಾವ ಹೃದಯಕಮಲವೆಂಬ ಮನೆಯಲ್ಲಿಯ ಬಿಂದ್ವಾಕಾಶಮಧ್ಯದಲ್ಲಿ ಪರಮಾತ್ಮನು ಅರಸಲು ಯೋಗ್ಯನು ಎಂಬ ಶ್ರುತಿಪ್ರಮಾಣದಿಂದ ಹೃದಯಾಕಾಶ ಮಧ್ಯದ ದಿವ್ಯಲಿಂಗಸ್ಥಲವೇ ಅಂತರ್ಲಕ್ಷ್ಯವೆಂಬುದಭಿಪ್ರಾಯಂ.

●

ಸೂ : ಈ ದಿವ್ಯಲಕ್ಷ್ಮಮಂ ಕಾಣ್ಬುದಕ್ಕೆ ಪರಮೋಪಾಯವಾದ ಮುದ್ರಾಸ್ವರೂಪಮಂ ಪೇಳ್ದಪಂ–

ಲಕ್ಷ್ಯಲೀನಮನಸಾಽನಿಲೇನ ಯೋ ವರ್ತತೇಽಚಲಿತಾರಾಯಾ ಭವೇತ್ ।
ಖೇಚರೀಯಮಥ ಸೈವ ಶಾಂಭವೀ ಮುದ್ರಯಾ ಸತು ತಯಾ ಜಗದ್ಗುರುಃ ॥೩॥

ಯಃ–ಆವನೋರ್ವ ಯೋಗೀಶ್ವರನು, ಲಕ್ಷ್ಯಲೀನಮನಸಾ–ಪೂರ್ವೋದಿತವಾದ ದಿವ್ಯಲಿಂಗಸ್ಥಲವೆಂಬ ಅಂತರ್ಲಕ್ಷ್ಯದಲ್ಲಿ ಮುಳಗಿದ ಮನದಿಂದಲೂ, ಅನಿಲೇನ–ಆ ಮನದೊಡನೆ ಕೂಡಿನಿಂದ ವಾಯುವಿನಿಂದಲೂ, ಅಚಲಿತತಾರಯಾ–ಮನೋಮಾರುತಂಗಳ ನಿಶ್ಚಲತ್ವದಿಂ ಚಲಿಸದ ತಾರಾಮಂಡಲದಿಂದಲೂ, ವರ್ತತೇ–ವರ್ತಿಸುತ್ತಿದ್ದಾನೋ, ಇಯಂ–ಇದು, ಖೇಚರೀ–ಖೇಚರಿಮುದ್ರೆಯೇ, ಶಾಂಭವೀ–ಶಾಂಭವೀಮುದ್ರೆ ಎನಿಪುದು, ತಯಾ ಮುದ್ರಯಾ–ಆ ಖೇಚರೀ ಮುದ್ರೆಯಿಂದ, ಸತು–ಆ ಯೋಗೀಶ್ವರನಾದೊಡೆ, ಜಗದ್ಗುರುಃ–ಲೋಕಾಚಾರ್ಯನೆನಿಸುವನು.

ತಾತ್ಪರ್ಯ : ಮುದ್ರೇಯಂ ಶಾಂಭವೀಚಿತ್ತಮಂತಶ್ಚಕ್ಷುರ್ಬಹಿಸ್ಸ್ಥಿರಂ

ಎಂದುದಾಗಿ, ಈ ಖೇಚರೀ ಮುದ್ರಾಭ್ಯಾಸಮಂ ಮಾಡುವಾತನು ಜಾಗ್ರತ್ಸ್ವಪ್ನ ಸುಷುಪ್ತಿಗಳೆಂಬ ಅವಸ್ಥಾತ್ರಯಂಗಳಂ ಕ್ರಮದಿಂ ದೃಷ್ಟಿಮನೋಮಾರುತಂಗಳ ನಿಶ್ಚಲತ್ವದಿಂ ಗೆಲಿದು, ಲೋಕಪೂಜ್ಯನಪ್ಪನೆಂಬುದಭಿಪ್ರಾಯಂ

೧–೧ x (ಕ).

ಸ್ಥಿರತ್ವಮಾಗತಾ ದೃಷ್ಟಿರ್ಜಾಗ್ರತ್ವಂ ನಾಶಯೇತ್ಸದಾ ।
ಮನಸ್ಸ್ಥಿರತ್ವಮಾಪನ್ನಂ ಸ್ವಪ್ನಂ ನಾಶಯತಿ ಧ್ರುವಂ ।
ಪವನೇ ನಿಶ್ಚಲೇಃ ಯತ್ರ ಸುಷುಪ್ತಿಃ ಕ್ಷಯಮಾಗತಾ ॥

ಎಂದುದಾಗಿ,

ಸೂ : ನಿರಾಯಾಸದಿಂ ತಾರಕಬ್ರಹ್ಮಸಾಕ್ಷಾತ್ಕಾರಮಂ ಮಾಳ್ಪುದಾಗಿ ಈ ಅಂತಃಖೇಚರೀಮುದ್ರೆಯೇ ಬಾಹ್ಯಖೇಚರಿಯಿಂದತಿ ವಿಶಿಷ್ಟವೆಂದು ಪೇಳ್ದಪಂ–

ಲೋಕೇಽಂತಃಖೇಚರೀ ಮುದ್ರಾಮಜ್ಞಾತ್ವಾ ಬಾಹ್ಯಖೇಚರೀಂ ।
ಅವಲಂಬ್ಯ ತ್ವರಾಃ ಕೇಚಿಜ್ಜಿಹ್ವಾಚ್ಛೇದನಕರ್ಮಣಿ ॥ ॥೪॥

ಲೋಕೇ–ಈ ಲೋಕದಲ್ಲಿ, ಕೇಚಿತ್–ಕೆಲಯೋಗಿಗಳು, ಅಂತಃಖೇಚರೀ ಮುದ್ರಾಂ–ಈ ಪೂರ್ವೋದಿತವಾದ ಸೂಕ್ಷ್ಮಖೇಚರೀಮುದ್ರೆಯನು, ಅಜ್ಞಾತ್ವಾ–ಅರಿಯದೆ, ಬಾಹ್ಯಖೇಚರೀಂ–ಬಹುಪ್ರಯಾಸವಾದ ಲಂಬಿಕಾಯೋಗಮೆನಿಸುವ ಬಾಹ್ಯಖೇಚರಿಯನ್ನು, ಅವಲಂಬ್ಯ–ಆಶ್ರಯಿಸಿ, ಜಿಹ್ವಾಚ್ಛೇದನಕರ್ಮಣಿ–ನಾಲಿಗೆಯಸೀಳ್ವ ವ್ಯಾಪಾರದಲ್ಲಿ, ತ್ವರಾಃ–ಆತುರವುಳ್ಳವರಾಗುತ್ತಿಹರು.

ತಾತ್ಪರ್ಯ : ಕಪಾಲಕುಹರೇ ಜಿಹ್ವಾ ಪ್ರವಿಷ್ಟಾ ವಿಪರೀತಗಾ ।
ಭ್ರುವೋರಂತರ್ಗತಾ ದೃಷ್ಟಿರ್ಮುದ್ರಾ ಭವತಿ ಖೇಚರೀ ॥

ಎಂಬ ಬಾಹ್ಯಖೇಚರಿಯ ಅಭ್ಯಾಸದಿಂ ಕಪಾಲಕುಹರಾಂತರ್ಗತವಾದ ಶ್ಲೇಷ್ಮರಸಾಸ್ವಾದನಂ ಮಾಳ್ಪ ಹಠಯೋಗಿಯಿಂದಲೂ ಈ ಸೂಕ್ಷ್ಮಖೇಚರೀಮುದ್ರಾಭ್ಯಾಸದಿಂ ಪರಮಾನಂದಸಾಸ್ವದನಂ ಮಾಳ್ಪ ರಾಜಯೋಗೀಶ್ವರನೇ ವಿಶಿಷ್ಟನೆಂಬುದಭಿಪ್ರಾಯಂ.

●

ಸೂ : "ನಾಂತಸ್ಥಂ ನ ಬಹಿರ್ವ್ಯಾಪ್ತಂ" ಎಂಬ ಗ್ರಂಥದಲ್ಲಿ ಸೂಚಿತಮಾದ ಈ ದಿವ್ಯಲಿಂಗನೀಸ್ಥಲದೊಳ್ ಕಾಣಬಹುದೆಂದು ಕೈದೋರ್ಕೆಯಾಗಿ ಗ್ರಂಥದ್ವಯದಿಂ ಪೇಳ್ದಪಂ–

ತಾಲೂಮೂಲದ್ವಾದಶಾಂತಮಧ್ಯಂ ಪ್ರತ್ಯಕ್ಕಲಾತ್ಮಕಂ ।
ಯತ್ತಸ್ಮಿನ್ ಜ್ಯೋತಿಷಿ ಮನೋ ದತ್ವಾ ನಿಜಹೃದಿ ಕ್ರಮಾತ್ ॥ ॥೫॥

ತಾಲೂಮೂಲದ್ವಾದಶಾಂತಮಧ್ಯಂ: ತಾಲೂಮೂಲ–ಷೋಡಶಸ್ವರಾತ್ಮಕವಾದಂಥ ವಿಶುದ್ಧಿಚಕ್ರದ, ದ್ವಾದಶಾಂತ–ದ್ವಾದಶಾಂತವೆನಿಸುವ ಬ್ರಹ್ಮರಂಧ್ರದ, ಮಧ್ಯಂ–ಮಧ್ಯಸ್ಥಾನವಾದಂಥ, ಪ್ರತ್ಯಕ್ಕಲಾತ್ಮಕಂ–ಸಾಕ್ಷಾತ್ಕಾರವಾದ ಚೈತನ್ಯ ಕಲಾಸ್ವರೂಪವಾದಂಥ, ಯತ್–ಯಾವ ಸ್ಥಾನವುಂಟೋ, ತಸ್ಮಿನ್ ಜ್ಯೋತಿಷಿ–ಆ ತೇಜೋರೂಪವಾದಂಥ, ನಿಜಹೃದಿ–ನಿಜವಾದ ದಿವ್ಯ ಹೃದಯವೆನಿಸುವ ಸ್ಥಾನದಲ್ಲಿ, ಕ್ರಮಾತ್–ಈ ಪೂರ್ವೋದಿತಮಾದ ಖೇಚರೀಮುದ್ರಾಭ್ಯಾಸ ಕ್ರಮದತ್ತಣಿಂದೆ, ಮನಃ–ಮನಸ್ಸನ್ನು, ದತ್ವಾ–ನಿಲ್ಲಿಸಿ, ಪಶ್ಯೇತ್–ದಿವ್ಯ ಲಿಂಗಮಂ ಕಾಣ್ಬುದೆಂದು ಮುಂದಣ ಕ್ರಿಯೆಯೊಡನೆ ಸಂಬಂಧವು.

ತಾತ್ಪರ್ಯ : ವಿಶುದ್ಧಿಚಕ್ರ ಬ್ರಹ್ಮಚಕ್ರಂಗಳ ಮಧ್ಯಸ್ಥಾನವೆನಿಸಿ, ಸಾಕ್ಷಾತ್ಕಾರವಾಗಿ ಲೋಚನದ್ವಯಾಂತರ್ಗತವಾದ ಜ್ಯೋತಿರ್ಮಂಡಲಾತ್ಮಕವೇ ಹೃದಯಾಕಾಶವೆನಿಸುವದಾಗಿ, ಆ ಹೃದಯಾಕಾಶಮಧ್ಯದಲ್ಲಿ ಖೇಚರೀಮುದ್ರೆಯಂ ಮುಂದೆ ಪೇಳ್ವಾ ದಿವ್ಯಲಿಂಗಮಂ ಕಾಣ್ಬುದಾಗಿ "ಸ ಏಷೋಂತರ್ಹೃದಯ ಆಕಾಶ ಸ್ತಸ್ಮಿನ್ನಯಂ ಪುರುಷೋ ಮನೋಮಯಃ ಅಮೃತೋ ಹಿರಣ್ಮಯಃ ಅಂತರೇಣತಾಲುಕೇ ಯ ಏಷಸ್ತನ ಇವಾವಲಂಬತೇ ಸೇಂದ್ರಯೋನಿಃ ಯತ್ರಾಸೌಕೇಶಾಂತೋ ವಿವರ್ತತೇ"–ತಾಲುವಿನ ಕೇಶಾಂತ ಮಧ್ಯದಲ್ಲಿ ದಿವ್ಯಲಿಂಗಕ್ಕೆ ಪೀಠವಾಗಿ ಜೋಲಾಡುವ ಸ್ತನದೋಪಾದಿಯಲ್ಲಿ ಗೋಳಕಮಾಗಿರ್ಪುದು, ಅಸೌ–ಆ ಇದು ಅಂತರ್ಹೃದಯಾಕಾಶವೆನಿಸುವುದು. ಅಲ್ಲಿ ಮನೋಮಯನಾದ ವರ್ತಿಸುವನು–ಎಂಬ ಶ್ರುತಿಪ್ರಮಾಣದಿಂದ ದಿವ್ಯಹೃದಯದೊಳ್ ಲಿಂಗಮಂ ಕಾಣ್ಬುದೆಂದು ಅಭಿಪ್ರಾಯಂ.

ದೃಷ್ಟಿಸ್ತು ಪೂರ್ಣಿಮಾ ಜ್ಞೇಯಾ ದೃಶ್ಯಮಾದೌ ತಮೋಮಯಂ ।
ತನ್ಮಧ್ಯೇ ಮನಸಾ ಪಶ್ಯೇಜ್ಜ್ಯೋತಿರ್ಲಿಂಗಂ ಸುನಿಶ್ಚಲಂ ॥ ॥೬॥

ಆದೌ–ಪ್ರಥಮಾಭ್ಯಾಸದಲ್ಲಿ, ದೃಷ್ಟಿಸ್ತು–ಆ ಯೋಗೀಶ್ವರನ ನೋಟವಾದೊಡೆ, ಪೂರ್ಣಿಮಾ–ವ್ಯಾಪಕಸ್ವರೂಪವುಳ್ಳುದಾಗಿ, ಜ್ಞೇಯಾ–ಅರಿಯಲು ಯೋಗ್ಯವು, ದೃಶ್ಯಂ–ಅದರಿಂದ ನೋಡಲು ಯೋಗ್ಯವಾದ ಲಕ್ಷ್ಯವು, ತಮೋಮಯಂ–ಕೃಷ್ಣತಾರಾರೂಪಮಾದ ಬಿಂದುಸ್ವರೂಪವೆಂದು ಅರಿಯಲು ಯೋಗ್ಯವು, ತನ್ಮಧ್ಯೇ–ಆ ಕೃಷ್ಣತಾರಾಮಂಡಲಮಧ್ಯದಲ್ಲಿ, ಮನಸಾ–ಶುದ್ಧಚಿತ್ತದಿಂದೆ, ಸುನಿಶ್ಚಲಂ–ಅತ್ಯಂತವೂ ಚಲಿಸದೆಯಿದ್ದಂಥ, ಜ್ಯೋತಿರ್ಲಿಂಗಂ–ಪರಮಾತ್ಮ ಜ್ಯೋತಿಸ್ವರೂಪವಾದ ಲಿಂಗವನ್ನು, ಪಶ್ಯೇತ್–ಕಾಣಬಹುದು.

ತಾತ್ಪರ್ಯ : "ಚಕ್ಷುರ್ವೈ ಬ್ರಹ್ಮ ಚಕ್ಷುರ್ವೈ ಬ್ರಹ್ಮೇತ್ಯಪಶ್ಯತೋ ಹಿ ಕಿಂ ಸ್ಯಾತ್ ಪರಮಂ ಬ್ರಹ್ಮ ನೈನಂ ಚಕ್ಷುರ್ಜಹಾತಿ" ಇಲ್ಲಿ ನಯನವೇ ತಾರಕಬ್ರಹ್ಮವು ನಯನವೇ ಬ್ರಹ್ಮವೆಂದು ಕಾಣದಾತಂಗೆ ಏನಪ್ಪುದು? ಪರಬ್ರಹ್ಮವು ಈ ನೇತ್ರಮಂ ಬಿಟ್ಟಿರದು–ಎಂಬ ಶ್ರುತಿಗಳ ಪ್ರಮಾಣದಿಂದೀನೇತ್ರಮಧ್ಯಸ್ಥಿತವಾದ ಕೃಷ್ಣತಾರಾಮಂಡಲವೇ ದಿವ್ಯಲಿಂಗಸ್ಥಲವಾದ ಬಿಂದುವೆನಿಸಿಕೊಂಬುದಾಗಿ ಅದನ್ನೇ ಲಕ್ಷಿಸುವುದೆಂಬುದಭಿಪ್ರಾಯಂ.

ಕೃಷ್ಣಂ ಸ್ವಚ್ಛಂ ತು ಯನ್ನಿತ್ಯಂ ನೇತ್ರಮಧ್ಯೇ ವ್ಯವಸ್ಥಿತಂ ।
ಸ ಬಿಂದುರಿತಿ ವಿಜ್ಞೇಯೋ ಯತ್ರಾತ್ಮಾ ದೃಶ್ಯತೇ ಸ್ಥಿತಃ ॥
ಚಕ್ಷುರ್ಮಧ್ಯಸ್ಥಿತಾ ಯಾ ತಂ ಶಕ್ತಿಃ ಪ್ರಣವರೂಪಿಣೀ
ಸಾ ಬೈಂದವೀ ತಮಃಪಾರೇ ತದ್ರೂಪೇಣ ವ್ಯವಸ್ಥಿತಾ ॥

ಎಂಬುದಾಗಿ,

●

ಸೂ : ಈ ದಿವ್ಯಲಿಂಗಾನುಸಂಧಾನಕ್ಕೆ ಸಾಧನವಾದ ಖೇಚರೀಮುದ್ರೆಯನೆ ನಾಸಿಕಾಗ್ರವೆಂಬ ಸ್ಥಾನಭೇದದಿಂ ಶಾಂಭವೀಮುದ್ರೆಯೆಂದು ಪೇಳ್ದಪಂ–

ನಾಸಾಗ್ರದತ್ತನಿಮಿಷೋನ್ಮಿಷಬಾಹ್ಯದೃಷ್ಟ್ಯಾ

ಲಕ್ಷ್ಯೇಸದಾಶಿವವಿಮರ್ಶಕಗೂಢದೃಷ್ಟ್ಯಾ ।

ಜ್ಯೋತಿಸ್ಸ್ವರೂಪಮಚಲಂ ಹೃದಿ ಬಾಹ್ಯಹೀನಂ

ಪಶ್ಯಂತಿ ಯೇ ತ ಇಹ ಸಂಯಮಿನಃ ಕೃತಾರ್ಥಾಃ ॥ ॥೭॥

ನಾಸಾಗ್ರದತ್ತನಿಮಿಷೋನ್ಮಿಷಬಾಹ್ಯದೃಷ್ಟ್ಯಾ-ನಾಸಿಕಾಗ್ರದಲ್ಲಿ ಇರಿಸಲ್ಪಟ್ಟ ನಿಮಿಷೋನ್ಮಿಷಂಗಳಿಲ್ಲದ ನೇತ್ರಂಗಳುಳ್ಳಂಥ, ಸದಾಶಿವವಿಮರ್ಶಕಗೂಢದೃಷ್ಟ್ಯಾ-ಸಕಲನಿಷ್ಕಲಾತ್ಮಕನಾದ ದಿವ್ಯಲಿಂಗವನರಿದಲ್ಲಿ ಮುಳುಗಿದ ನೋಟದಿಂದ, ಲಕ್ಷ್ಯೇ-ಲಕ್ಷಿಸಲು ಯೋಗ್ಯವಾಗಿರ್ಪಂಥ, ಹೃದಿ-ಹೃದಯದಲ್ಲಿ, ಅಚಲಂ-ಚಲಿಸದಿರ್ಪಂಥ, ಜ್ಯೋತಿಸ್ವರೂಪಂ-ಜ್ಯೋತಿರ್ಮಂಡಲಾಕಾರವನ್ನು, ಬಾಹ್ಯಹೀನಂ-ಬಾಹ್ಯವ್ಯಾಪಾರವಿಲ್ಲದಿಹಣ ಹೇಂಗಹುದೋ ಹಾಂಗೇ, ಯೇ-ಆರು ಕೆಲಯೋಗೀಶ್ವರರು, ಪಶ್ಯಂತಿ -ಕಾಣುತ್ತಿದ್ದಾರೋ, ತೇ-ಆ ದಿವ್ಯಲಿಂಗಮಂ ಕಾಣುವಂಥ, ಸಂಯಮಿನಃ-ಯತೀಶ್ವರರು, ಇಹ - ಈ ಲೋಕದಲ್ಲಿ, ಕೃತಾರ್ಥಾಃ-ಜೀವನ್ಮುಕ್ತರಾಗುವರು.

ತಾತ್ಪರ್ಯ : ಈ ಮುದ್ರೆಯೇ ನಾಸಿಕಾಗ್ರದೃಷ್ಟಿಯಿಂದಲೂ, ನಾದಾನುಸಂಧಾನಮಂ ಮಾಳ್ಪ ಮನದಿಂ ಕೂಡಲ್ ಪೂರ್ವಶಾಂಭವೀಯೆನಿಪುದು. ಆ ನಾಸಿಕಾಗ್ರದೃಷ್ಟಿಯೂ ಮನವೂ ನಾದಬ್ರಹ್ಮನಲ್ಲಿ ಮುಳುಗಿ ಉತ್ತರಶಾಂಭವಿಯೆನಿಪುದಾಗಿ ಈ ಶಾಂಭವಿದ್ವಯದಿಂ ನಾದಾನುಸಂಧಾನಮಂ ಮಾಳ್ಪುದೆಂಬುದಭಿಪ್ರಾಯಂ.

ಅಂತಶ್ಚಿತ್ತಂ ಬಹಿಶ್ಚಕ್ಷುರ್ನಿಮಿಷೋನ್ಮೇಷವರ್ಜಿತಂ ।

ಏಷಾ ಸಾ ಶಾಂಭವೀ ಮುದ್ರಾ ಸರ್ವತಂತ್ರೇಷು ಗೋಪಿತಾ ।

ಶಾಂಭವೀ ದ್ವಿವಿಧಾ ಪ್ರೋಕ್ತಾ ಪೂರ್ವೋತ್ತರ ವಿಭೇದತಃ ॥

ಎಂದುದಾಗಿ,

●

ಸೂ : ಈ ದಿವ್ಯಲಿಂಗವನ್ನೇ ಪೂರ್ವೋದಿತಮಾದ ಮುದ್ರೆಯಿಂ ಕಾಣಭೇದಮಂ ಪೇಳ್ದಪಂ-

ಪಶ್ಚಿಮಾಭಿಮುಖಂ ಲಿಂಗಮಭಿನ್ನ ವಲಯಾಕೃತಿಂ ।

ತ್ವಂ ಪೂರ್ವಾಭಿಮುಖೋ ಭೂತ್ವಾ ಪಶ್ಯ ಪಶ್ಯ ಮಹಾದ್ಭುತಂ ॥ ॥೮॥

ಪಶ್ಚಿಮಾಭಿಮುಖಂ-ಪಶ್ಚಿಮದ್ವಾರವೆನಿಸುವ ದಿವ್ಯಾನಂದಸ್ಥಾನವಾದ ಭ್ರೂಮಧ್ಯದ ಸುಷುಮ್ನೆಗೆ ಅಭಿಮುಖವಾದಂಥ, ಅಭಿನ್ನವಲಯಾಕೃತಿಂ-ಲೋಚನದ್ವಯದ ಮಧ್ಯದಲ್ಲಿ ಎರಡೆನಿಸಿಯೂ, ಮುದ್ರೆಯು ಇದೇ ಭ್ರೂಮಧ್ಯದಲ್ಲಿ ಅಭಿನ್ನಮಂಡಲಾಕಾರವಾದಂಥ, ಲಿಂಗಂ-ದಿವ್ಯಲಿಂಗವನು, ತ್ವಂ-ನೀನು, ಪೂರ್ವಾಭಿಮುಖಃ-ಆ ಲಿಂಗಾವಲೋಕನಕ್ಕೆ ಸಂಮುಖವಪ್ಪಂತೆ ಪೂರ್ವಾಭಿಮುಖವುಳ್ಳಾತನು, ಭೂತ್ವಾ -ಆಗಿ, ಮಹಾದ್ಭುತಂ-ಮಹಾಶ್ಚರ್ಯವಪ್ಪಂತೆ, ಪಶ್ಯ ಪಶ್ಯ-ಮರಳಿಮರಳಿ ನೋಡು.

ತಾತ್ಪರ್ಯ : ಸತ್ವರಜಸ್ತಮೋಗುಣಗಳೆಂಬ ಮಂಡಲತ್ರಯಂಗಳ ಬೆಳಗನೊಳಕೊಂಡ ತಾರಾಮಂಡಲಂಗಳೆರಡಂ ಭ್ರೂಮಧ್ಯಸ್ಥಾನದೊಳೈಕ್ಯಮಂ ಮಾಡಿ ಶಾಂಭವೀಮುದ್ರಾನುಸಂಧಾನದಿಂ ಮರಳಿಮರಳಿ ಆಲೋಕನಂ ಗೈಯಲಾ ಮುಂದೆ ಪೇಳ್ವ ಮಹದಾಶ್ಚರ್ಯಂಗಳತಿ ಶೀಘ್ರದಿಂ ಕಾಣಿಪುವಾಗಿ–

ತಯೋರೇಷ ಸಂಸ್ಥಾವೋ ಯ ವಿಷಾಂತರ್ಹೃದಯ ಆಕಾಶಃ ।

ಯ ಏತದಂತರ್ಹೃದಯೇ ಜಾಲಕಮಿವಾಥೈನಯೋರೇಷಾ ಶ್ರುತಿಃ ॥

ಆ ವಾಮದಕ್ಷಿಣನೇತ್ರಂಗಳಲ್ಲಿ ಸತೀಪತಿರೂಪವಾದ ಬಿಂದುದ್ವಯದ ಕೂಟವೇ ಅಂತರ್ಹೃಯಯಾಕಾಶವೆನಿಪುದು. ಈ ಅಂತರ್ಹೃಯಮಧ್ಯದಲ್ಲಿ ಗವಾಕ್ಷದಂತಿಪ್ಪ ಪರಮಸೂಕ್ಷ್ಮದ್ವಾರದಲ್ಲಿ ಈ ಜೀವ ಪರಮರ ದಿವ್ಯಪ್ರಕಾಶಂ ಪಸರಿಸುವ ಶ್ರುತಿ ಪ್ರಮಾಣದಿಂದತ್ಯಾಶ್ಚರ್ಯಂಗಳ ಕಾಣಿಪುದೆಂಬುದಭಿಪ್ರಾಯ.

ಮೂಲಾವಲೋಕಿನೀ ಪೂರ್ವಮುಖೀ ಸಂಧಾನರೂಪಿಣೀ ।

ಬೋಧಮುದ್ರಾ ಧ್ಯಾನಮುದ್ರಾ ಶಾಂಭವೀತ್ಯೇಕವಾಚಕಂ ॥

ಎಂದುದಾಗಿ, ಈ ಶಾಂಭವೀ ಮುದ್ರಾನುಸಂಧಾನವೇ ಪೂರ್ವಾಭಿಮುಖವೆನಿಸುವದು.

ಸೂ : ಈ ದಿವ್ಯಲಿಂಗಸ್ವರೂಪಮಂ ಶ್ರುತಿಪ್ರಮಾಣದಿಂ ತೋರಿಸುತ್ತ ಅದು ದಿವ್ಯಜ್ಞಾನಿಗಳ್ಗೆಯೇ ಗೋಚರಮಪ್ಪುದೆಂದು ಪೇಳುತ್ತೆ ಅದರ ಸ್ಥಾನಮಂ ಪ್ರಕಾರಾಂತರದಿಂ ಪೇಳ್ದಪಂ –

ಯದಾಪೋ ಜ್ಯೋತಿರೋಂಕಾರ ಬ್ರಹ್ಮಾಮೃತ ಶಿವಾತ್ಮಕಂ

ಪಶ್ಯಂತಿ ಸೂರಯೋಽಶ್ರಾಂತಂ ತದ್ವಿಷ್ಣೋ ಪರಮಂ ಪದಂ ॥ ॥೯॥

ಆಪೋಜ್ಯೋತಿಃ–ಲೋಚನಾಂತರ್ಗತಮಾದ ಜಾಲದೊಳಗಣ ಜ್ಯೋತಿಯಾಗಿರ್ಪಂಥ, ಓಂಕಾರಬ್ರಹ್ಮ–ತಾರಕಬ್ರಹ್ಮವೆನಿಸಿಕೊಂಬಂಥ, ಅಮೃತಶಿವಾತ್ಮಕಂ–ನಿತ್ಯನಿರ್ಮಲಾತ್ಮಕವಾದಂಥ, ಯತ್ –ಯಾವ ದಿವ್ಯಲಿಂಗವನ್ನು, ಸೂರಯಃ–ಜ್ಞಾನಿಗಳಾದ ಯೋಗೀಶ್ವರರು, ಅಶ್ರಾಂತಂ–ವಿಷ್ಣು ಸಂಜ್ಞೆಯುಳ್ಳ ಮೂಲಪ್ರಕೃತಿವಾದರೂಪ ತಮೋಗುಣದ ದೆಶೆಯಿಂದ, ಪರಮಂ–ಮೇಲಾಗಿರ್ದಂಥ, ಪರಂ–ಸ್ಥಾನವು.

ತಾತ್ಪರ್ಯ : "ಅಪೋಜ್ಯೋತಿರಸೋಽಮೃತಂ ಬ್ರಹ್ಮ ತದ್ವಿಷ್ಣೋಃ ಪರಮಂ ಪದಂ" ಎಂಬ ಶ್ರುತಿಪ್ರಮಾಣದಿಂದವೂ, "ಲಿಂಗಮೂರ್ತಿಶ್ಶಿವಜ್ಯೋತಿಸ್ತಮಸಶ್ಚೋಪರಿ ಸ್ಥಿತಂ" ಎಂಬ ಪುರಾಣಪ್ರಮಾಣದಿಂದಲೂ ತಾರಾಮಂಡಲದಲ್ಲಿ ತಾರಕಬ್ರಹ್ಮಂ ಕಾಣ್ಬುದೆಂಬುದಭಿಪ್ರಾಯ.

●

ಸೂ : ನಿರ್ಮಲಾಂತಃಕರಣನಾದ ಯೋಗೀಶ್ವರಂಗೆ ವಿಚಿತ್ರವಾಗಿ ತೋರುವ ದಿವ್ಯಲಿಂಗದ ಸ್ವರೂಪಂ ಪೇಳ್ದಪಂ–

ಪೂರ್ಣೇಂದುಬಿಂಬಮಿವ ಸನ್ಮಣಿದೀಪಿಕೇವ
ಮಧ್ಯಾಹ್ನ ಸೂರ್ಯ ಇವ ವಹ್ನಿಶಿಖೇವ ನಿತ್ಯಂ ।
ವಿದ್ಯುತ್ಪ್ರಭೇವ ಶಿವಲಿಂಗಮಹೋ ವಿಚಿತ್ರಂ
ಲಕ್ಷ್ಯಾಂತರೇಜ್ವಲತಿ ಪಶ್ಯತು ಚಕ್ಷುರಗ್ರೇ ॥೧೦॥

ಪೂರ್ಣೇಂದುಬಿಂಬಮಿವ–ಷೋಡಶಕಲಾಪೂರ್ಣಮಾದ ಚಂದ್ರಮಂಡಲದಂತೆ, ಸತ್–ನಕ್ಷತ್ರದಂತೆ, ಮಣಿದೀಪಿಕೇವ–ರತ್ನದೀಪದಂತೆ, ಮಧ್ಯಾಹ್ನಸೂರ್ಯ ಇವ–ಮಧ್ಯಾಹ್ನ ಸಮಯದ ಸೂರ್ಯಮಂಡಲದಂತೆ, ವಹ್ನಿಶಿಖೇವ–ಅಗ್ನಿಜ್ವಾಲೆಯಂತೆ, ವಿದ್ಯುತ್ಪ್ರಭೇವ–ಮಿಂಚಿನಬಳ್ಳಿಯಂತೆ, ಶಿವಲಿಂಗಂ–ಶುದ್ಧಸ್ವಾತಿಕಾದಿ ಗುಣಾತ್ಮಕವಾದ ಶಿವಲಿಂಗವು, ಲಕ್ಷ್ಯಾಂತರೇ–ಅಂತರ್ಲಕ್ಷ್ಯವೆನಿಸಿದ ಬಿಂದುಪೀಠಮಧ್ಯದಲ್ಲಿ, ವಿಚಿತ್ರಂ –ನಾನಾಪ್ರಕಾರಮಾಗಿ, ಚಕ್ಷುರಗ್ರೇ–ಖೇಚರೀಮುದ್ರೆಯಿಂ ಮುದ್ರಿತಮಾದ ಲೋಚನಾಗ್ರದಲ್ಲಿ, ಜ್ವಲತಿ –ಬೆಳಗುತಿದ್ದೀತು. ಪಶ್ಯತು–ನೋಡು, ಅಹೋ–ಆಶ್ಚರ್ಯವು.

ತಾತ್ಪರ್ಯ : ತಾರಕಬ್ರಹ್ಮವೆನಿಸುವ ಶಿವಲಿಂಗವೇ "ಬಿಂದುಮಧ್ಯಗತಂ ಸೂಕ್ಷ್ಮಸುಷಿರಂ ಜ್ಯೋತಿರೂಪಕಂ" ಎಂಬ ದಿವ್ಯನಾಳದಲ್ಲಿ ಯೋಗೀಶ್ವರಗೇ ದಿವ್ಯಾನಂದಮಂ ಪುಟ್ಟಿಸಲನಂತರೂಪದಿಂ ತೋರ್ಪುದಾಗಿ–

ನೀಲತೋಯದಮಧ್ಯಸ್ಥಾ ವಿದ್ಯುಲ್ಲೇಖೇವ ಭಾಸ್ವರಾ ।
ನೀವಾರಶೂಕವತ್ತನ್ವೀ ಪೀತಾ ಭಾಸ್ವತ್ಯಣೂಪಮಾ ॥

ಎಂಬ ಶ್ರುತಿಪ್ರಮಾಣದಿಂದಲೂ, "ಸ ಓಂಕಾರೋ ಯ ಓಂಕಾರಃ ಸ ಪ್ರಣವೋ ಯಃ ಪ್ರಣವಃ ಸ ಸರ್ವವ್ಯಾಪೀ ಯಸ್ಸರ್ವವ್ಯಾಪೀ ಸೋಽನಂತೋ ಯೋಽನಂತಃ ತತ್ತಾರಂಯತ್ತಾರಂ ತತ್ಸೂಕ್ಷ್ಮಂ ಯತ್ಸೂಕ್ಷ್ಮಂ ತಚ್ಛುಕ್ಲಂ ಯಚ್ಛುಕ್ಲಂ ತದ್ವೈದ್ಯುತಂಯದ್ವೈದ್ಯುತಂ ತದ್ಬ್ರಹ್ಮೇತಿ ಸ ಏಕೋ ರುದ್ರಃ ಸ ಈಶಾನಸ್ಸಭಗವಾ ಮಹೇಶ್ವರಃ ಸ ಮಹದೇವಃ" ಕೃಷ್ಣತಾರಾಮಂಡಲ ಮಧ್ಯದಲ್ಲಿ ತೇಜೋರೂಪಮಾದ ಪರಮ ಸೂಕ್ಷ್ಮದ್ವಾರಮುಂಟು. ಅಲ್ಲಿ ಕಾರ್ಮೋಡದ ಮಧ್ಯದ ಮಿಂಚಿನ ಬಳ್ಳಿಯಂತೆ ದೀಪ್ತಮಾಗಿ ನೀವಾರಾಧಾನ್ಯದ ಮುಳ್ಳಿನ ಮೊನೆಯಂತೆ ಅಣುಮಾತ್ರವೆನಿಸಿ, ಹೊಂಬಣ್ಣದಿಂ ಬೆಳಗುವ ಪ್ರಣವಶಕ್ತಿಯೇ ಓಂಕಾರಪ್ರಣವ ಸರ್ವವ್ಯಾಪಿ ಅನಂತತಾರಾಸೂಕ್ಷ್ಮ ಶುಕ್ಲವೈದ್ಯುತ ಪರಬ್ರಹ್ಮ ಏಕರುದ್ರ ಈಶಾನ ಭಗವಾನ್ ಮಹೇಶ್ವರ ಮಹಾದೇವ ಎಂಬ ದಿವ್ಯನಾಮಂಗಳಂ ವಾಚ್ಯವೆನಿಸಿಕೊಂಬುದೆಂಬ ಶ್ರುತಿಪ್ರಮಾಣದಿಂದೆ ವಿಚಿತ್ರರೂಪಮಾದ ತಾರಕಬ್ರಹ್ಮವೇ ಪರಮಾತ್ಮರೂಪ ಮಪ್ಪುದರಿಂದದನೇ ಲಕ್ಷಿಸುವದೆಂಬುದಭಿಪ್ರಾಯಂ.

●

ಸೂ : ಬಾಹ್ಯಕ್ರಿಯಾ ವಿಲಾಸಗಳಂ ನಿಲಿಸಿ ಈ ಜ್ಞಾನಲಿಂಗಮಂ ಮಾನಸ ಕುಸುಮಂಗಳಿಂ ಪೂಜಿಪುದೆಂದು ಪೇಳ್ದಪಂ–

ಆತ್ಮಲಿಂಗಮಿದಂ ಪಶ್ಯನ್ನಿಮನ್ಯೈಃ ಕರ್ಮವಿಭ್ರಮೈಃ ।
ಅಹಿಂಸಾದ್ಯಷ್ಟಪುಷ್ಪೈಸ್ತನ್ಮಾನಸೈರಂಗ ಪೂಜಯ ॥ ॥೧೧॥

ಅಂಗ–ಎಲೈ ಸ್ನೇಹಿತನೇ, ಇದಂ–ಈ ಲೋಚನಾಗ್ರದಲ್ಲಿ ತೋರುವಂಥ, ಆತ್ಮಲಿಂಗಂ– ಬಿಂದುನಾದಾತ್ಮಕವಾದ ಪ್ರಾಣಲಿಂಗವನ್ನು, ಪಶ್ಯನ್–ಕಾಣುತ್ತಿದ್ದಾತನಾಗುತ್ತಲೂ, ಮಾನಸೈಃ– ಮನೋಜನಿಂಗಳಾದಂಥ, ಅಹಿಂಸಾದ್ಯಷ್ಟ ಪುಷ್ಪೈಃ–ಅಹಿಂಸೆಮೊದಲಾದ ಎಂಟು ಕುಸುಮಂಗಳಿಂದ, ತತ್–ಆ ಲಿಂಗವನ್ನೆ, ವ್ಯವಹಾರಗಳಿಂದ, ಕಿಂ–ಏನು? ಕ್ರಿಯಾ ಲಿಂಗಮಂ ಜ್ಞಾನಗೂಡಿದ ಕ್ರಿಯೆಯಿಂದ

ಪೂಜಿಪುದಾಜ್ಞಾನಲಿಂಗಮಯ ಜ್ಞಾನಮಾತ್ರದಿಂದವೇ ಪೂಜಿಪುದಾಗಿ, ಆ ದಿವ್ಯಲಿಂಗಮಂ ಪೂಜಿಸಲು ಯೋಗ್ಯವೆಂಬ ಶ್ರುತಿಯಿಂತಿದೆ-

ದಹರಂ ವಿಪಾಪಂ ಪರಮೇಶ್ಮಭೂತಂ ಹೃತ್ಪುಂಡರೀಕಂ ಪುರಮಧ್ಯಸಂಸ್ಥಂ ।

ತತ್ರಾಪಿ ದಹರಂ ಗಗನಂ ವಿಶೋಕಂ ತಸ್ಮಿನ್ಯದಂತಸ್ತದುಪಾಸಿತವ್ಯಂ ॥

ಪಾಪರಹಿತವಾದ ಪರಮಾಶ್ರಯಮಾದ ಬ್ರಹ್ಮಪುರಮಧ್ಯಸ್ಥಮಾದ ಹೃದಯಕಮಲಮುಂಟೋ, ಆ ಕಮಲಮಧ್ಯದಲ್ಲಿ ಹೊಗಲ್ ಬಾರದ ದುಃಖರಹಿತಮಾದ ಬಿಲದ್ವಾರಮುಂಟು, ಆ ಬಿಲದ್ವಾರದಲ್ಲಿ ದಿವ್ಯಲಿಂಗಮುಂಟು, "[೧]ಯದಿದ ಮಸ್ಮಿನ್ ಬ್ರಹ್ಮಪುರೇ" ಎಂಬ ಶ್ರುತಿಪ್ರಮಾಣದಿಂದೆ[೧] ಆ ದಿವ್ಯಲಿಂಗವನೆ ಪೂಜಿಸಲು ಯೋಗ್ಯವೆಂಬ ಶ್ರುತಿಪ್ರಮಾಣದಿಂದೀ ಕುಸುಮಂಗಳಂದುಪಾಸ್ತಿಯುಂ ಮಾಡಲ್ಬೇಕೆಂಬುದಭಿಪ್ರಾಯ.

●

ಸೂ : ಅನಂತರದಲ್ಲಿ ಈ ಅಷ್ಟಪುಷ್ಪಂಗಳ ಸ್ವರೂಪಮಂ ಪೇಳ್ದಪಂ –

ಪುಷ್ಪಾಣ್ಯಹಿಂಸೇಂದ್ರಿಯನಿಗ್ರಹಶ್ಚ ದಯಾ ಕ್ಷಮಾ ಜ್ಞಾನಮಥಾಹ್ವಯಾನಿ ।

ಧ್ಯಾನಂ ತಪಸ್ಸತ್ಯಮಮೀಭಿರೇವಂ ಪ್ರಪೂಜಯೇದಾತ್ಮನಿ ಸಿದ್ಧಲಿಂಗಂ ॥ ॥೧೨॥

ಅಹಿಂಸಾ–ಆವಪ್ರಕಾರದಿಂದಲೂ ಪ್ರಾಣಿಗಳಿಗೆ ದುಃಖಮಂ ಮಾಡದಿಪ್ಪ ಅಹಿಂಸೆಯು, ಇಂದ್ರಿಯನಿಗ್ರಹಶ್ಚ–ತಾನೇ [೨]ಮೇಲಿಕ್ಕಿ[೨] ಬಂದ ಪರಸ್ತ್ರೀಯನ್ನೂ ಮಾತೃಭಾವದಿಂ ತಿಳಿವ ಇಂದ್ರಿಯನಿಗ್ರಹವೂ, ದಯಾ–ಶತ್ರುವಾಗಲಿ ಮಿತ್ರನಾಗಲಿ ಅವರನ್ನು ರಕ್ಷಿಸುವ ಬುದ್ಧಿಯೇ ದಯೆಯು, ಕ್ಷಮಾ–ಸಮರ್ಥನಾಗಿಯೂ ಅಪಕಾರಮಂ ಸೈರಿಸುವ ಕ್ಷಮೆಯು, ಜ್ಞಾನಂ–ನಿತ್ಯಾನಿತ್ಯವಿವೇಕವು. ಅಥ–ಅನಂತರದಲ್ಲಿ, ಧ್ಯಾನಂ–ಪರಮಾತ್ಮಚಿಂತನವು, ತಪಃ–ಧರ್ಮಾರ್ಥಮಾಗಿ ದೇಹಶೋಷಣವು, ಸತ್ಯಂ–ಗುರುಪ್ರಯೋಜನ ದೇವತಾಪ್ರಯೋಜನ ಹೊರತಾಗಿ [೩]ಅಸತ್ಯವನರಿಯದಿಹುದೇ ಸತ್ಯವು[೩] ಎಂಬ, ಆಹ್ವಯಾನಿ–ಹೆಸರುಳ್ಳಂಥ, ಈ ಎಂಟು, ಪುಷ್ಪಾಣಿ–ಪುಷ್ಪಂಗಳೆನಿಸಿಕೊಂಬವು. ಅಮೀಭಿಃ –ಈ ಪುಷ್ಪಂಗಳಿಂದ ಆತ್ಮನಿ–ಪ್ರಾಣಕಲಾಧಾರವಾದ ಹೃದಯಪೀಠದಲ್ಲಿ, ಸಿದ್ಧಲಿಂಗಂ– "ಹೃದಯಕಮಲಮಧ್ಯೇ ದೀಪವದ್ವೇದಸಾರಂ" ಎಂಬ ಶ್ರುತಿಪ್ರಮಾಣದಿಂ ಗುರುಪದೇಶದಿಂದಾದ ಮುದ್ರೆಯಿಂ ಶುದ್ಧವಾದ ದಿವ್ಯಲಿಂಗವನ್ನು, ಏವಂ–ಈ ಪ್ರಕಾರದಿಂ, ಪ್ರಪೂಜಯೇತ್–ಚೆನ್ನಾಗಿ ಪೂಜಿಸುವದು.

ತಾತ್ಪರ್ಯ : ಕರಪೀಠದಲ್ಲಿ ಕಂಡ ಲಿಂಗವು ಪುಷ್ಪಪೂಜೆಯಿಂದಲ್ಲದೆ ಫಲಮಂ ಕೊಡದಂತೆ ಬಿಂದುಪೀಠದಲ್ಲಿ ಕಂಡ ದಿವ್ಯಲಿಂಗವನೀ ಕುಸುಮಂಗಳಿಂ ಪೂಜಿಸಿದಲ್ಲದೆ ಮೋಕ್ಷಮಂ ಕೊಡದಾಗಿ "ಸತ್ಯಂ ವದ ಧರ್ಮಂ ಚರ ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ ನೋ ಇತರಾಣಿ" ಸತ್ಯವನೇ ನುಡಿ, ಧರ್ಮವನೇ ಆಚರಿಸು, ನಿರ್ದೋಷಮಾದ ಕೃತ್ಯಂಗಳಂ ಮಾಡಲು ಯೋಗ್ಯವಾದವು, ದೋಷಕೃತ್ಯಂಗಳ ಮಾಡಲಾಗದು–ಎಂಬ ಶ್ರುತಿಪ್ರಮಾಣದಿಂ ಸ್ವೇಚ್ಛಾಚಾರಿಯಾಗಬಾರದೆಂಬುದಭಿಪ್ರಾಯ.

●

೧–೧ (ಕ). x ೨–೨ ಮೇಲಕ್ಕೆ (ಮೈ) ೩–೩ ಅಸತ್ಯವ ನುಡಿಯದಿಹುದೆಂಬ(ಕ)

ಸೂ : ಈ ಪೂರ್ವೋದಿತವಾದ ಮುದ್ರಾಭೇದಂಗಳಿಂ ಕಾಣಿಸಿದ ಲಕ್ಷ್ಯಂಗಳಲ್ಲಿ ನಿಶ್ಚಯಬುದ್ಧಿಯುಳ್ಳಾತನೇ ರಾಜಯೋಗೀಶ್ವರನೆಂದು ಪೇಳ್ದಪಂ–

ಯೋ ನಿಮೀಲದನಿಮೀಲದಂಬಕೋ ರೇಚಪೂರಪರಿವರ್ಜಿತಾನಿಲಃ ।

ಸರ್ವಸಂಶಯವಿಹೀನಮಾನಸೋ ರಾಜಯೋಗಪದಭಾಕ್ಸ ಏವ ಹಿ ॥ ॥೧೩॥

ಯಃ–ಯಾವ ಯೋಗಿಯು, ನಿಮೀಲದನಿಮೀಲದಂಬಕಃ–ಲಕ್ಷ್ಯಾನುಸಂಧಾನಾರ್ಥವಾಗಿ ಅರ್ಧಾವಲೋಕನಮೆನಿಸುವ ಅರೆಮುಗಿದ ನೇತ್ರಂಗಳುಳ್ಳಾತನಾಗುತ್ತಲು, ರೇಚಪೂರಪರಿನಿವರ್ಜಿತಾನಿಲಃ –ರೇಚಕಪೂರಕಂಗಳಲಗಿದ ಕೇವಲ ಕುಂಭಕವುಳ್ಳಾತನಾಗುತ್ತಲು, ಸರ್ವಸಂಶಯವಿಹೀನಮಾನಸಃ –ಸಕಲಸಂಶಯಂಗಳಂ ತೊಲಗಿದ ಮನಸ್ಸುಳ್ಳಾತನಾಗುತ್ತಲೂ ಇರುವನೇ, ಸ ಏವ–ಆತನೆ, ಹಿ– ಪ್ರಸಿದ್ಧನಾಗಿ, ರಾಜಯೋಗಪದಭಾಕ್–ರಾಜಯೋಗಪದಮಂ ಭಜಿಸುವಾತನು, ಭವೇತ್–ಆಗುವನು.

ತಾತ್ಪರ್ಯ : ಗುರೂಪದೇಶದಲ್ಲಿ ಆ ಉಪದೇಶದಿಂದಾದ ಮುದ್ರಾಭೇದಂಗಳಲ್ಲಿ ಆ ಮುದ್ರೆಯಂ ಕಾಣಿಸುವ ಲಕ್ಷ್ಯಂಗಳಲ್ಲಿ ಆ ಲಕ್ಷ್ಯಾನುಸಂಧಾನದಿಂ ತೋರುವ ದಿವ್ಯಪ್ರಕಾಶಂಗಳಲ್ಲಿ ಆ ಪ್ರಕಾಶವಲೋಕನದಿಂದಪ್ಪ ಮುಕ್ತಿಪದದಲ್ಲಿ ಸಂಶಯಮಂ ಮಾಡುವಾತಂಗೆ [೧]ಯೋಗವಿಲ್ಲ[೧] ವೆಂಬುದಭಿಪ್ರಾಯಂ.

●

ಸೂ : ಈ ಹಠಯೋಗಿಗೆ ಅಷ್ಟಾವಧಾನಮಂ[೨] ಪೇಳ್ದಪಂ–

ಶೃಂಗಾಟಕೇ ಯಸ್ತು ಮನೋ ನಿಯಮ್ಯ ।
ತ್ರಿಕೋಣಗಾಮೀ ಶಶಿಭಾಸ್ಕರಾಭ್ಯಾಂ
ಬಾಹ್ಯಾಂತರಂಗಪ್ರವಣೈಕಗೋಭಿ ।
ರಷ್ಟಾವಧಾನೀ ಹಠರಾಜಯೋಗೀ ॥ ॥೧೪॥

ಯಃ–ಆವನೋರ್ವ ಯೋಗೀಶ್ವರನು, ಶೃಂಗಾಟಕೇ–ಗಂಧದ್ವಾರ ಶಬ್ದ ದ್ವಾರಂಗಳ ಕೂಟಸ್ಥಾನಮಾದ ತ್ರಿಕೂಟಸಂಜ್ಞೆಯುಳ್ಳ ಶೃಂಗಾಟಕಸ್ಥಲದಲ್ಲಿ, ಮನಃ–ಮನಸ್ಸನ್ನು, ನಿಯಮ್ಯ– ಖೇಚರೀಮುದ್ರೆಯಿಂದ ಚಲಿಸದಂತೆ ನಿಯಮಿಸಿ, ಶಶಿಭಾಸ್ಕರಾಭ್ಯಾಂ–ಇಡಾಪಿಂಗಳೆಂಬ ಚಂದ್ರಸೂರ್ಯನಾಡಿಗಳೊಡನೆ, ತ್ರಿಕೋಣಗಾಮೀ–ಪರಯೋಗಿಯೆನಿಸುವ ಊರ್ಧ್ವ[೩]ಕುಂಡಲ[೩]ವಪ್ಪುದರಿಂ ತ್ರಿಕೋಣಾಕಾರ ಸ್ಥಾನವನ್ನು ಎಯ್ದುತಿರ್ದಂಥ, ಬಾಹ್ಯಾಂತರಂಗಪ್ರವಣೈಕಗೋಭಿಃ, ಬಾಹ್ಯಂತರಂಗ –ಒಳಗೂ ಹೊರಗೂ ಮಧ್ಯವೆಂಬ ಮೂರು ಸ್ಥಾನಂಗಳಲ್ಲಿ, ಪ್ರವಣ–ತತ್ಪರವಾದ, ಏಕ–ಮುಖ್ಯವಾದ, ಗೋಭಿಃ–ಲಕ್ಷ್ಯತ್ರಯಂಗಳಿಂದಲೂ [೪]ದೃಷ್ಟಿತ್ರಯಂಗಳಿಂದಲೂ[೪], ಅಷ್ಟಾವಧಾನೀ–ಎಂಟು ಅವಧಾನವುಳ್ಳಾತನುಂಟೋ, ಸಃ–ಆತನೇ, ಹಠರಾಜಯೋಗೀ–ಹಠಕೂಡಿದ ರಾಜಯೋಗಿಯೆನಿಸುವನು.

೧–೧ ಯೋಗಸಿದ್ಧಿಯಾಗ (ಕ). ೨ + ಪೇಳ್ದಂತ ರಾಜಯೋಗಿಗೆಯೂ ಹಠಗೂಡಿದ ಅಷ್ಟಾವಧಾನಮಂ (ಕ).

೩–೩ ಕುಂಡಲಿನೀಸ್ಥಲ (ಕ) ೪–೪ x (ಕ)

ತಾತ್ಪರ್ಯ : ಚಲಿಸದ ಮನದಿಂದಲೂ, ಆ ಮನದೊಡನೆ ಕೂಡಿ ನಿಲ್ಲಿಸಿದ ಮಾರುತನಿಂದಲೂ ⁽ಲಕ್ಷ್ಯತ್ರಯದಿಂದವೂ⁾ ಅಲ್ಲಿ ನಿಲ್ಲಿಸಿದ ದೃಷ್ಟಿತ್ರಯದಿಂದ ಕೂಡಿದ ಅಷ್ಟಾವಧಾನವುಳ್ಳಾತನೇ ರಾಜಯೋಗೀಶ್ವರನೆಂಬುದಭಿಪ್ರಾಯವು.

●

ಸೂ : ಈ ಮನೋದೃಷ್ಟಿಮಾರುಂತಗಳ ಮುದ್ರಾಭೇದಂಗಳನ್ನು ಮುದ್ರಿಸಿ ನಿಲ್ಲಿಸುವ ಪ್ರಯಾಸಕ್ಕೆ ಅವಧಿಯುಂ ಪೇಳುತ್ತೆ ಈ ರಾಜಯೋಗದಿಂದಪ್ಪ ಫಲಮಂ ಪೇಳ್ದಪಂ–

ದೃಗ್ದೃಶ್ಯಭಾವನಂ ಬಂಧಾದುನ್ಮನ್ಯಂತಂ ವಿಚಿಂತಯ ।

ಶಿವಹೋಗಮಿದಂ ಗುಹ್ಯಂ ಜೀವನ್ಮುಕ್ತಿಕರಂ ಮುನೇ ॥ ॥೧೫॥

ಭೋ ಮುನೇ–ವೈಖರಿಮಧ್ಯಮಂಗಳೆಂಬುಭಯವಾಗ್ವ್ಯವಹಾರಂಗಳನುಳಿದು ಮೌನ ಗುಣಾನ್ವಿತನಾದ ಎಲೈ ಶಿಷ್ಯನೇ, ದೃಗ್ದೃಶ್ಯಭಾವಸಂಭಂಧಾತ್–ಧ್ಯಾನರೂಪಮಾದ ದೃಕ್ಕಿನ ಧ್ಯೇಯರೂಪಮಾದ ಲಕ್ಷ್ಯದ ಕೂಟದ ದೆಸೆಯಿಂದ, ಉನ್ಮನ್ಯಂತಂ–ಉನ್ಮನೀಜ್ಯೋತಿಯ ನಿಲುಕಡೆ ಪರ್ಯಂತಮಾಗಿ, ವಿಚಿಂತಯ–ಚಿಂತಿಸು, ಗುಹ್ಯಂ–ಗೋಪ್ಯವಾದಾಂಥ, ಇದು–ಈ ಸಾಕ್ಷಾತ್ಕಾರಮಾದಂಥ, ಶಿವಯೋಗಂ–ಶಿವಯೋಗವೆನಿಸುವ ರಾಜಯೋಗವು, ಜೀವನ್ಮುಕ್ತಿಕರಂ–ಜೀವನ್ಮುಕ್ತಿಯನ್ನುಡುವಂಥಾದ್ದು.

ತಾತ್ಪರ್ಯ : ಈ ಪೂರ್ವೋದಿತಮಾದ ಲಕ್ಷ್ಯಾನುಸಂಧಾನದಿಂ ಉನ್ಮನೀಸಿದ್ಧಿಯಂ ಪಡೆದಾತನೀತನು ಕರಣಭುವನಭೋಗಾದಿತಳಿರ್ದು ಮುಕ್ತನೆನಿಸುವನಾಗಿ,

ಲಯವಿಕ್ಷೇಪರಹಿತಂ ಮನಃ ಕೃತ್ವಾ ಸುನಿಶ್ಚಲಂ ।

ಯದಾ ಯಾತ್ಯುನ್ಮನೀಭಾವಂ ತದಾ ತತ್ಪರಮಂ ಪದಂ ।

ಏತಾದ್ಜ್ಞಾನಂ ಜ ಮೋಕ್ಷಶ್ಚ ಶೇಷಾಸ್ತು ಗ್ರಂಥವಿಸ್ತರಾಃ ॥

ಮನವನಾಸುಷುಪ್ತಿಯಲ್ಲಿ ಮರೆಯದಂತೆ ಜಾಗ್ರದಲ್ಲಿ ಕೆದರದಂತೆ ನಿಶ್ಚಲವಂ ಮಾಡಿಭ್ರೂಮಧ್ಯದ ಲಕ್ಷ್ಯದಲ್ಲಿಡಿಸಲು ಉನ್ಮನೀಸ್ವರೂಪಪ್ಪುದಾಗಿ. ಅದೇ ಪರಮಪದ, ಅದೇ ಜ್ಞಾನಪದ, ಅದೇ ಮೋಕ್ಷವೆನಿಸುವದು. ಅದರಿಂದ ಅನ್ಯಮಾದರ್ಥಮಂ ಪೇಳ್ವ ವಿಸ್ತರ ಗ್ರಂಥಂಗಳ್ ವ್ಯರ್ಥಮೆಂಬ ಶ್ರುತಿಪ್ರಮಾಣದಿಂದೀ ಉನ್ಮನೀಯನೇ ಸಾಧಿಸಲ್ಬೇಕೆಂಬುದಭಿಪ್ರಾಯಂ,

●

ಸೂ : ಈ ರಾಜಯೋಗಾನುಸಂಧಾನದಿಂ ಕಾಣಿಸುವ ವಿಚಿತ್ರಪ್ರಭಾಮಂಡಲಕ್ಕೆ ದಿವ್ಯಾನಂದನಿಕ್ಷೇಪಭೂಮಿಯೆನಿಸುವ ಲೋಚನಂಗಳೇ ಮುಖ್ಯವೆಂದು ಪೇಳ್ದಪಂ–

ರುಚಿಸ್ತಟಿದ್ಧೂಮ್ರಕಬಿಂದುನಾದಕಲಾಭಖದ್ಯೋತರವೀಂದುದೀಪಾಃ ।

ತತ್ಪ್ರತ್ಯಯಾನೇತ್ರಸುವರ್ಣಕಂಜಕಿಂಜಲ್ಕದಂಡಾ ವರರತ್ನಮುಖ್ಯಾಃ ॥ ॥೧೬॥

೩–೩ x (ಮೈ).

ರುಚಿಃ–ದಿವ್ಯಪ್ರಕಾಶವು, ತಟಿತ್–ಮಿಂಚು, ಧೂಮ್ರ–ರಕ್ತಕೃಷ್ಣವರ್ಣವು, ಕ–ನಿರ್ಮಲೋದಕವು, ಬಿಂದು–ತಾರಾಮಂಡಲಾಕೃತಿಯು, ನಾದ–ದಶವಿಧನಾದವು, ಕಲಾ–ಶುದ್ಧಪ್ರಸಾದದ ಅನವಚ್ಛಿನ್ನಪ್ರಕಾಶವು. ಭ–ನಕ್ಷತ್ರವು, ಖದ್ಯೋತ–ಮಿಂಚುಹುಳವು, ರವಿ–ಸೂರ್ಯಮಂಡಲವು, ಇಂದು–ಚಂದ್ರಮಂಡಲವು, ದೀಪಾಃ–ದೀಪಾರೂಪಗಳು, ವರತ್ನಮುಖ್ಯಾಃ–ಶ್ರೇಷ್ಠವಾದ ವಜ್ರ ವೈಢೂರ್ಯ ಮರಕಮಾಣಿಕ್ಯಾದಿ ರತ್ನಂಗಳಾಕಾರಂಗಳಿಂದೆ ತೋರುವಂಥ, ತತ್ಪ್ರತ್ಯಯಾಃ–ಆ ಅನುಭವಗೋಚರಗಳಾಂಥ ಪ್ರತ್ಯಯಂಗಳು, ನೇತ್ರಸುವರ್ಣ ಕಂಜಕಿಂಜಲ್ಕದಂಡಾಃ–ಅಕಾರಾದಿಕ್ಷಕಾರಾಂತಮಾದ ದಿವ್ಯವರ್ಣ ಸ್ವರೂಪಂಗಳಿಂದೆ ಮಂಡಲತ್ರಯಾತ್ಮಕವಾದ ಲೋಚನಂಗಳೆಂಬ ಸುವರ್ಣಕಮಲದ ಕೇಸರನಾಳಂಗಳ ಸ್ವರೂಪಂಗಳಾಗುತ್ತಿಹವು.

ತಾತ್ಪರ್ಯ : ಯೋಗೀಶ್ವರನ ಲೋಚನಾಗ್ರದಲ್ಲಿ ತೋರುವ ಅನಂತಪ್ರತ್ಯಯಂಗಳು ದಿವ್ಯಹೃದಯ ಸ್ಫುರಣೆಗಳಪ್ಪುದರಿಂದೆ ಈ ದಿವ್ಯಹೃದಯವೇ ರಾಜಯೋಗಕ್ಕೆ ಮುಖ್ಯವೆಂಬುದಭಿಪ್ರಾಯವು.

•

ಸೂ : ಮಂದಾರಿಕಾರಿಯಾದಾತಂಗೆ ಈ ಪ್ರತ್ಯಯಂಗಳ ಹೃದಯದೊಳತಿ ಶೀಘ್ರದಿಂ ಕಾಣಿಸುವ ದಿವ್ಯ ಮುದ್ರೆಯಂ ಪೇಳ್ದಪಂ–

ವಕ್ತ್ರೇಚಾಪೂರ್ಯ ವಾಯುಂ ಹಂತವಹನಿಲಯೇಽಪಾನಮಾಕೃಷ್ಯಧೃತ್ವಾ
ಸ್ವಾಂಗುಷ್ಠಾದ್ಯಂಗುಲೀಭಿರ್ನಿಜಕರತಲಯೋಃಷಡ್ಭಿರೇವಂ ನಿರುಧ್ಯ ॥
ಶ್ರೋತ್ರೇ ನೇತ್ರೇ ಚ ನಾಸಾಪುಟಯುಗಳಮಥಾನೇನ ಮಾರ್ಗೇಣ ಧೀರಾಃ
ಪಶ್ಯಂತಿ ಪ್ರತ್ಯಯಾನ್ ಸತ್ಪ್ರಣವಬಹುವಿಧಧ್ವಾನಸಂಲೀನಚಿತ್ತಾಃ ॥ ॥೧೭॥

ವಕ್ತ್ರೇ–ಮುಖದ ಏಕದೇಶಮಾನದ ನಾಸಾಪುಟದಲ್ಲಿ, ವಾಯುಂಚ–ಪ್ರಾಣ ವಾಯುವನ್ನು, ಅಪೂರ್ಯ–ಚನ್ನಾಗಿ ಪೂರಿಸಿ, ಹಂತವಹನಿಲಯೇ–ಅಗ್ನಿಸ್ಥಾನವೆನಿಸುವ, ಅಧ್ಯಃ–ಕುಂಡಲಿನೀಸ್ಥಲಮಾದ ತ್ರಿಕೋಣಮಾಕಾರವಾದ ಮೂಲಾಧಾರದಲ್ಲಿಯ, ಅಪಾನಂ–ಅಪಾನವಾಯುಪನ್ನು, ಆಕೃಷ್ಯ–ಆಕುಂಚನವಂ ಮಾಡಿ, ಧೃತ್ವಾ–ಧರಿಸಿ, ನಿಜಕರತಲಯೋಃ–ತನ್ನ ಕರತಲವೆರಡರಲ್ಲಿಯ, ಸ್ವಾಂಗುಷ್ಠಾದ್ಯಂಗುಲೀಭಿಃ–ತನ್ನ ಅಂಗುಷ್ಠ ತರ್ಜನಿ ಮಧ್ಯಮೆಗಳೆಂಬಂಥ, ಷಡ್ಭಿಃ–ಆರರಿಂದಲಾದರೂ (ಅಂಗುಷ್ಠ ಮಧ್ಯಮೆ ಆನಾಮಿಕಗಳಿಂದಲಾದರೂ), ಶ್ರೋತ್ರೇ–ಶ್ರೋತ್ರರಂಧ್ರಗಳೆರಡನೂ, ನೇತ್ರೇಚ–ನೇತ್ರಂಗಳೆರಡನ್ನೂ, ನಾಸಾಪುಟಯುಗಳಂ–ನಾಸಿಕಾಪುಟಂಗಳೆರಡನ್ನೂ, ಏವಂ–ಈ ಗುರೂಪದೇಶ ಪ್ರಕಾರದಿಂದೆ, ನಿರುಧ್ಯ–ತಡೆದು, ಅಥ–ಅನಂತರದಲ್ಲಿ, ಅನೇಕ ಮಾರ್ಗೇಣ–ಈ ಷಣ್ಮುಖೀಕರಣಮಾರ್ಗದಿಂದ, ಧೀರಾಃ–ನಿಶ್ಚಲಚಿತ್ತರಾದ ಯೋಗೀಶ್ವರರು, ಸತ್ಪ್ರಣವಬಹುವಿಧಧ್ವಾನಸಂಲೀನಚಿತ್ತಾಃ–ಲೇಸಾದ ಪ್ರಣವದ ದಶವಿಧಮಾದ ನಾದದಲ್ಲಿ ಮುಳುಗಿದ ಚಿತ್ತವುಳ್ಳಂಥವರಾಗುತ್ತವೂ, ಪ್ರತ್ಯಯಾನ್–ದಶವಿಧಬಿಂದು ಸಾಕ್ಷಾತ್ಕಾರ ರೂಪಮಾದ ಪ್ರತ್ಯಯಂಗಳನ್ನು, ಪಶ್ಯಂತಿ–ಕಾಣುತ್ತಿಹರು.

ತಾತ್ಪರ್ಯ : ಈ ಷಣ್ಮುಖೀಮುದ್ರೆಯಿಂ ಕಾಣಿಸುವ ಪ್ರತ್ಯಯಂಗಳ ಪ್ರಕಾರವೆಂತೆಂದೊಡೆ – ಭ್ರೂಮಧ್ಯದಲ್ಲಿ ಬೆಳಗುವ ನಯನದೀಪ್ತಿಯೇ ಬಿಂದುದೇವನ ಮಹಾಸ್ಥಾನವಪ್ಪುದರಿಂದೆ ಧೂಮ್ರವರ್ಣದಂತೆ ಮೇಘಪಟಲದಂತೆ ಕಾಣಬಹುದು. ಶುದ್ಧ ತಮೋಗುಣಾತ್ಮಕವಾದ ಸ್ಥೂಲಬಿಂದುವೆನಿಸುವದು.

ಕುಂಕುಮವರ್ಣದಂತೆ ಖದ್ಯೋತಂಗಳಂತೆ ಕಾಣ್ಬುದು. ಶುದ್ಧರಜೋಗುಣಾತ್ಮಕವಾದ ಮಧ್ಯಬಿಂದುವೆನಿಪುದು, ಶುದ್ಧಸ್ಫಟಿಕದಂತೆ ನಿರ್ಮಲಾಕಾರದಿಂ ಕಾಂಬ್ಬುದು ಶುದ್ಧಸಾತ್ವಿಕವಾದ ಪರಮಬಿಂದುವೆನಿಪುದು. ಇದಕ್ಕೆ ಸಮ್ಮತಿ–

ನೇತ್ರಾಶ್ರೀತಾ ತು ಯಾ ಛಾಯಾ ಭ್ರುವೋರ್ಮಧ್ಯೇ ವಿನಿರ್ಗತಾ ।
ಬಿಂದುದೇವಸ್ಯ ಸಂಸ್ಥಾನಂ ಪರಾತ್ಪರತರಂ ಮಹತ್ ॥

ಧೂಮ್ರಾಭ್ರಪಟಲಾಕಾರಂ ವಿಸ್ತೀರ್ಣಂ ಸರ್ವತೋಮುಖಂ ।
ದೃಶ್ಯತೇ ನಶ್ಯತೇ ಚೈವ ಸ್ಥೂಲಬಿಂದುರಿತಿಸ್ಮೃತಃ ॥

ದೀಪ್ತತಾಮ್ರನಿಭಶ್ಚೈವ ಖದ್ಯೋತಸದೃಶದ್ಯುತಿಃ ।
ಹರಿಕುಂಕುಮಸಂಕಾಶೋ ಮಧ್ಯಮೋ ಬಿಂದುರುಚ್ಯತೇಃ ॥

ನೇತ್ರಮಧ್ಯಸ್ಥಿತೋ ದೀಪ್ತಃ ಪೂರ್ಯತೇ ಸ್ವೇನ ತೇಜಸಾ ।
ಶುದ್ಧಸ್ಫಟಿಕಸಂಕಾಶೋ ಬಿಂದುರ್ಜ್ಞೇಯಃ ಪರಾತ್ಪರಃ ॥

ಎಂದುದಾಗಿ, ಈ ಗುಣತ್ರಯಂಗಳ ಅನ್ಯೋನ್ಯಸಮ್ಮೇಳನದಿಂದ ಬಿಂದುವೇ ದಶವಿಧವೆನಿಪುದು. ಆ ದಶವಿಧವಾವುದೆಂದರೆ–ಸಿತವೆಂದು ರಕ್ತವೆಂದು ಕೃಷ್ಣವೆಂದು ನೀಲವೆಂದು ಮೇಘವರ್ಣವೆಂದು ಪೀತರಕ್ತವೆಂದು ಪೀತವೆಂದು ಕಪಿಲವೆಂದು ಧೂಮ್ರವೆಂದು ಸ್ಫಟಿಕವರ್ಣವೆಂದು ದಶವಿಧವಾಗಿ ಕಾಣಿಸಲವರೊಳ್ ಸ್ಫಟಿಕವರ್ಣನೇ ಮುಕ್ತಿಸಾದನವಪ್ಪುದಾಗಿ ಅದನ್ನೇ ಸಾಧಿಪುದು.

ಮನೋನುಕೂಲೇ ನಾತು ಚಕ್ಷುಪೀಡನೆ ಗುಹಾನಿವಾತಾಶ್ರಯಣೇ ಪ್ರಯೋಜಯೇತ್ ।
ನೀಹಾರಧೂಮಾರ್ಕಜಲಾನಿಲಾನಾಂ ಖದ್ಯೋತವಿದ್ಯುತ್‌ಸ್ಫಟಿಕಶ್ಮಶೀನಾಂ ।
ಏತಾವಿ ರೂಪಾಣಿ ಪುರಸ್ಸರಾಣಿ ಬ್ರಹ್ಮಣ್ಯಭಿವ್ಯಕ್ತಿಕರಾಣಿ ಯೋಗೇ ॥

ಎಂಬ ಶ್ರುತಿಪ್ರಮಾಣದಿಂದಲೂ,

ಸಿತಂ ರಕ್ತಂ ತಥಾ ಕೃಷ್ಣಂ ನೀಲಮೇಘಸಮಪ್ರಭಂ ।
ಪೀತರಕ್ತಂ ಚ ಪೀತಂ ಚ ಕಪಿಲಂ ಧೂಮ್ರಮೇವ ಚ ।
ದಶಮಂ ಸ್ಫಟಿಕಾಭಂ ಚ ಫಲಮೇಷಾಂ ಪೃಥಕ್ ಪೃಥಕ್ ॥

ಎಂಬ ಆಗಮಪ್ರಮಾಣದಿಂದಲೂ, ಈ ದಶವಿಧನಾದಸ್ವರೂಪವೆಂತೆಂದೊಡೆ–"ಚಿಣಿತಿ ಪ್ರಥಮಃ ಚಿಣಿಚಿಣಿತಿ ದ್ವಿತೀಯಃ ಘಂಟಾನಾಧಸ್ತೃತೀಯಃ ಶಂಖನಾದಶ್ಚತುರ್ಥಃ ಪಂಚಮಸ್ತಂತ್ರೀನಾದಃ ಷಷ್ಠಸ್ತಾಳನಾದಃ ಸಪ್ತಮೋ ವೇಣುನಾದಃ ಅಷ್ಟಮೋ ಭೇರಿನಾದಃ, ನವದೋ ಮೃದಂಗನಾದಃ ದಶಮೋ ಮೇಘನಾದಃ" ಎಂಬ ಶ್ರುತಪ್ರಮಾಣದಿಂದಲೂ ಈ ಬಿಂದುಸಾಕ್ಷಾತ್ಕಾರಂಗಳು ಚಕ್ಷುಪೀಡನವೆನಿಸುವ ಷಣ್ಮುಖೀಮುದ್ರೆಯಿಂದಲಪ್ಪುದೆಂಬುದಭಿಪ್ರಾಯ.

•

ಸೂ : ಅತಿಮಂದನಾದಾತಂಗೆ ಈ ವಿಚಿತ್ರಪ್ರತ್ಯಯಂಗಳು ಕಾಣುವ ಉಪಾಯಮಂ ಪೇಳ್ದಪಂ–

ದೃಷ್ಟಿಂ ಯೇ ರವಿಸೋಮಪಾವಕಯುತಾಂ ಚಂದ್ರಾರ್ಕಯೋರಾಗಮೇ ।
ಕೃತ್ವಾ ನಿಶ್ಚಲಗೇಹದೀಪನಿಕಟೇ ವಾ ನಿರ್ಮಿತೀ ನಾಮಪಿ
ದೃಶ್ಯಂತೇ ಸ್ಫುರಿತಾಸ್ಸ್ಫುಟಾ ನಯನಯೋರಗ್ರೇ ಚ ತತ್ಪ್ರತ್ಯಯಾ
ಸ್ತೇಷಾಂ ತತ್ಪರಚೇತಸಾಂ ವಿಗಳಿತಾ ತದ್ವ್ಯಾಪೃತೀನಾಂ ಕಿಮು ॥ ॥೧೮॥

ಯೇ–ಆರು ಕೆಲರು ಯೋಗಿಗಳು, ಚಂದ್ರಾರ್ಕಯೋಃ–ಬಾಹ್ಯರಾದ ಚಂದ್ರಸೂರ್ಯರುಗಳ, ಆಗಮೇ ವಾ–ಬರವಿನಲ್ಲಿಯಾದರೂ, ನಿಶ್ಚಲಗೇಹದೀಪನಿಕಟೇ ವಾ–ಚಲಿಸದೆ ಗೃಹದಲ್ಲಿ ಬೆಳಗುವ ದೀಪದ ಸಮೀಪದಲ್ಲಿಯಾದರೂ, ದೃಷ್ಟಿಂ–ದೃಷ್ಟಿಯನ್ನು, ರವಿಸೋಮಪಾವಕಯುತಾಂ–ಸೂರ್ಯಬಿಂಬಚಂದ್ರಬಿಂಬ ದೀಪ ಜ್ವಾಲೆಗಳಲ್ಲಿ ಕೂಡಲ್ಪಟ್ಟುದನ್ನಾಗಿ, ಕೃತ್ವಾ–ಮಾಡಿ (ಷಣ್ಮುಖೀಮುದ್ರೆಯಿಂ ನೋಡುತ್ತಿಹರು), ನಿರ್ಮತೀನಾಮಪಿ–ಮತಿಹೀನರಿಗಾಯಿತ್ತಾದರೂ, ತೇಷಾಂ–ಅವರುಗಳಿಗೆ, ನಯನಯೋಃ–ಲೋಚನಂಗಳ, ಅಗ್ರೇ–ಮುಂದೆ, ಸ್ಫುರಿತಾಃ–ತೋರಲ್ಪಟ್ಟಂಥ, ತತ್ಪ್ರತ್ಯಯಾಶ್ಚ–ಆ ಪೂರ್ವೋದಿತಮಾದ ಸಕಲಪ್ರತ್ಯಯಂಗಳು, ಸ್ಫುಟಾಃ–ವ್ಯಕ್ತಂಗಳಾಗಿ, ದೃಶ್ಯಂತೇ–ಕಾಣಲ್ಪಡುತ್ತಿಹವು, ವಿಗಳಿತಾತದ್ವ್ಯಾಪೃತೀನಾಂ–ಅನ್ಯವ್ಯಾಪಾರಂಗಳಿಲ್ಲದಿರ್ಪಂಥ, ತತ್ಪರಚೇತಸಾಂ–ಆ ತಾರಕಾನು ಸಂಧಾನದಲ್ಲಿ ಆ ಸಕ್ತವಾದ ಚಿತ್ತವುಳ್ಳವರ್ಗೆ, ಕಿಮು–ಹೇಳಲೇನು?

ತಾತ್ಪರ್ಯ : ಈ ಗ್ರಂಥದಲ್ಲಿಯ ಚಮತ್ಕಾರದಿಂದೆ ಪೂರ್ವೋದಿತಮಾದ ಪ್ರತ್ಯಯಂಗಳಿಂದನ್ಯಮಾದ ಬಾಲಸೂರ್ಯನಂತೆ ಆಲತಗೆಯ ರಸದಂತೆ ಕುಸುಂಬೆಯ ಹೂವಿನ ರಸದಂತೆ ಹೊಗೆಯಿಲ್ಲದ ಇಂಗಳದಂತೆ ಬಹುವಿಧಪ್ರತ್ಯಯಂಗಳು ಕಾಣಿಸುತ್ತಿರ್ಪವಾಗಿ,

ನೇತ್ರಾಶ್ರಿತಾ ತು ಯಾ ಛಾಯಾ ತಸ್ಯಾ ಲಕ್ಷ್ಯಂ ವದಾಮ್ಯಹಂ ।
ಯೇನ ವಿಜ್ಞಾನಮಾತ್ರೇಣ ಮುಚ್ಯತೇ ಜನ್ಮಬಂಧನಾತ್ ॥

ಮುಖಮಾವೃತ್ಯ ತಿಷ್ಠೇತ ಲಾಕ್ಷಾವರ್ಣರಸೋಪಮಂ ।
ಆದಿತ್ಯೋದಯಸಂಕಾಶಂ ಕೌಸುಂಭರಸಸನ್ನಿಭಂ ॥

ನಿರ್ಧೂಮಾಂಗಾರಸದೃಶಂ ಪಿಂಡೀಕೃತಮಿವ ಸ್ಥಿತಂ ॥

ಎಂದು ದಿವ್ಯಾಗಮದೊಳ್ ಪೇಳ್ದ ಪ್ರತ್ಯಯಂಗಳಿಗುಪಾಯದಿಂ ಜಡಮತಿಗಳ್ಗೆ ಕಾಣಿಪವೆನಲಾಗಿ ನಿರ್ಮಲಬುದ್ಧಿಯುಳ್ಳವರ್ಗೆ ತಳುವದೆ ಕಾಣಿಸುತಿರ್ಪವೆಂಬುದಭಿಪ್ರಾಯಂ.

•

ಸೂ : ದರ್ಪಣದಲ್ಲಿಯ ಪ್ರತಿಬಿಂಬದಂತೆ ಆಕಾಶದಲ್ಲಿಯ ಇಂದ್ರಚಾಪದಂತೆ ನಾದಬಿಂದಕಲಾರೂಪದಿಂ ಸಕಲನಿಷ್ಕಲಾತ್ಮಕವಾದ ವಸ್ತುವೇ ಬಹುವಿಧ ಪ್ರತ್ಯಯಾಕಾರದಿಂ ಗೋಚರಿಪುದಾಗಿ ನಿಷ್ಕಲತತ್ವವೂ ನಿಷ್ಕಲಾತೀತವೂ ಪ್ರತ್ಯಯರೂಪದಿಂ ಗೋಚರಿಪುದೆಂದು ಪೇಳ್ದಪಂ–

ಪ್ರಮಾಣಪ್ರತ್ಯಯಾತೀತಂ ಶಾಂತಂ ತೇಜೋಮಯಾತ್ಮಕಂ ।

ತದತೀತಂ ಪರಂ ಬ್ರಹ್ಮ ಚೇತಿ ವಿದ್ವದ್ಭಿರೀರಿತಂ ॥ ॥೧೯॥

ತೇಜೋಮಯಾತ್ಮಕಂ-ನಿಷ್ಕಲಪ್ರಕಾಶರೂಪವಾದಂಥ, ಶಾಂತಂ-ಶಾಂತ ತತ್ವವೆನಿಸುವ ಶಿವತತ್ವವು, ಪ್ರಮಾಣಪ್ರತ್ಯಯಾತೀತಂ-ಪ್ರತ್ಯಕ್ಷಗೋಚರವಾದ ಪ್ರತ್ಯಂಗಳ ಮೀರಿದಂಥಾದ್ದು ಎಂದೂ, ಪರಂಬ್ರಹ್ಮ ಚ-ಅದಕ್ಕುತ್ತರವಾದ ಪರಬ್ರಹ್ಮವು ಎಂದೂ, ತದತೀತಂ ಇತಿ ಚ-ಪ್ರಮಾಣ ಪ್ರತ್ಯಯಾತೀತವೆಂದೂ, ವಿದ್ವದ್ಭಿಃ-ತತ್ವಜ್ಞಾನಿಗಳಿಂದ, ಈರಿತಂ-ಹೇಳಲ್ಪಟ್ಟಿತು.

ತಾತ್ಪರ್ಯ : ಸದಾಶಿವತತ್ವವೇ ಯೋಗೀಶ್ವರರಶುದ್ಧಮನೋನಯನಕ್ಕೆ ಗೋಚರಮಪ್ಪುದಾಗಿ, ದಿವ್ಯಾನಂದರೂಪಮಾದ ನಿಷ್ಕಲವು ಗೋಚರವಾಗದಾಗಿ,

ನಿಷ್ಕಲಂ ನಿಷ್ಕ್ರಿಯಂ ಶಾತಂ ನಿರವದ್ಯಂ ನಿರಂಜನಂ

ಅಮೃತಸ್ಯ ಪರಂ ಸೇತಂ ದಗ್ಧೇಂಧನಮಿವಾನಲಂ ॥

ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಾ

ನೇಮಾ ವಿದ್ಯುತೋ ಭಾಂತಿ ಕುತೋಯಮಗ್ನಿಃ ॥

ನಿಷ್ಕಲಾದಿ ರೂಪದಿಂದಿರ್ಪುದು, ಶಾಂತತತ್ವವು, ಅದಕ್ಕೆ ಮೇಲಾದ ಪರಬ್ರಹ್ಮವು ಕಾಷ್ಠವಿಲ್ಲದ ಅಗ್ನಿಯಂತೆ ಪರಮನಿರ್ವಾಣರೂಪಮಾದಂಥಾದ್ದು, ಆ ವಸ್ತುವಿನಲ್ಲಿ ಸೂರ್ಯಚಂದ್ರತಾರಕ [1]ವಿದ್ಯುದ್ವಹ್ನಿ[1] ರೂಪವಾದ ಪ್ರಕಾಂಶಂಗಳ ತೋರಿಕೆಗಳಿಲ್ಲವೆಂಬ ಶ್ರುತಿಪ್ರಮಾಣದಿಂ ಮುಂದೆ ಪೇಳ್ವ ಅಮನಸ್ಕಯೋಗಸಿದ್ಧನಾಗಬೇಕೆಂಬುದಭಿಪ್ರಾಯ.

•

ಸೂ : ಈ ತಾರಕಾಭ್ಯಾಸದಿಂ ಸಿದ್ಧವಾದ ಉನ್ಮನಿಯಲ್ಲಿಯ ಮನೋಲಯವೇ ಭಾವಯೋಗವೆಂದು ಪೇಳ್ದಪಂ –

ಭಾವಯೋಗಮಸಂಕಲ್ಪವಿಕಲ್ಪಾಸ್ಪದಮಯದ್ಭುತಂ ।

ಸಂಪ್ರಾಪ್ತೋ ಯಸ್ತಸ್ಯ ಭವೇದವಸ್ಥಾ ಸೋನ್ಮನೀ ಹಿ ಯಾ ॥ ॥೨೦॥

ಅಸಂಕಲ್ಪವಿಕಲ್ಪಾಸ್ಪದಂ-ದೃಶ್ಯರೂಪಮಾದ ದೃಗ್ರೂಪಮಾದ ಸಂಕಲ್ಪವಿಕಲ್ಪಂಗಳಿಗೆ ಆಶ್ರಯವಿಲ್ಲದೆ ಇರ್ಪಂಥ, ಅದ್ಭುತಂ-ಆಶ್ಚರ್ಯವಾದಂಥ, ಭಾವಯೋಗಂ-ಉಂಟೆಂಬ ಮಾತ್ರವಾದ ನಿರ್ವಿಕಲ್ಪಕಜ್ಞಾನಯೋಗವನ್ನು, ಯಃ-ಯಾವನು, ಸಂಪ್ರಾಪ್ತಃ-ಎಯ್ದಲ್ಪಟ್ಟಾತನುಂಟೋ, ತಸ್ಯ-ಆತನಿಗೆ, ಯಾ-ಯಾವ, ಆವಸ್ಥಾ-ಅವಸ್ಥೆಯು, ಭವೇತ್-ಅಹುದೋ, ಸಾ-ಅದು, ಉನ್ಮನೀ ಹಿ-ಉನ್ಮನಿಯಲಾ.

•

೧-೧ ವಿದ್ಯುದ್ಧ್ವನಿ (ಮೈ).

ಸೂ : ಆ ನಿಷ್ಕಲಯೋಗಸ್ವರೂಪವನೇ ಪ್ರಕಾರಾಂತರದಿಂ ಪೇಳ್ದಪಂ–

ಆಧಾರಮಧ್ಯಹೃದ್ವ್ಯಾಪ್ತನಾದಬಿಂದುಕಲಾತ್ಮಕಂ ।

ತದತೀತಂ ಸ್ವರೂಪಂ ಯತ್ತದೇವ ಪರಮಂ ಪದಂ ॥ ॥೨೧॥

ಆಧಾರದಮಧ್ಯಹೃದ್ವ್ಯಾಪ್ತನಾದಬಿಂದುಕಲಾತ್ಮಕಂ–ಆರನೆಯ ಆಧಾರವೆನಿಸುವ ಆಜ್ಞಾಚಕ್ರಮಧ್ಯಸ್ಥಾನದಲ್ಲಿಯ ಹೃದಯಮಂ ವ್ಯಾಪಿಸಿದ ನಾದಬಿಂದು ಕಲಾರೂಪಮಾದ ಪ್ರಣವವೇ ಸ್ವರೂಪವಾಗಿವುಳ್ಳಂಥಾ, ತದತೀತಂ–ಆ ನಾದಬಿಂದು ಕಳೆಗಳೆಂಬ ವಿಭಾಗವನು ಮೀರಿದಂಥ, ಯತ್–ಆವುದಾನೊಂದು, ಸ್ವರೂಪಂ–ನಿಷ್ಕಲರೂಪಮುಂಟೋ, ತಯೇವ–ಅದೇ, ಪರಮಂ–ಸಕಲಕ್ಕೆ ಮುಖ್ಯವಾದಂಥ, ಪದಂ–ಸ್ಥಾನವು.

ತಾತ್ಪರ್ಯ : ಭ್ರೂಮಧ್ಯದಲ್ಲಿ ದ್ವಾತ್ರಿಂಶದ್ದಳ ಷೋಡಶದಳ ದಶದಳಂಗಳೆಂಬ ಹೃದಯಪೀಠದ ಚತುರ್ದಳಮಧ್ಯದಲ್ಲಿ ನಾದಬಿಂದುಕಲಾ ವಿಭಾಗವಿಲ್ಲದೇ ನಿಂದ ನಿಷ್ಕಲಬ್ರಹ್ಮವೇ ಪರವಸ್ತುವೆನಿಪುದೆಂಬುದಭಿಪ್ರಾಯ.

●

ಸೂ : ಈ ಪರವಸ್ತುವಿನಲ್ಲಿ ಮನೋಮಗ್ನತೆಯೇ ಜೀವಪರಮರ ಸಾಮರಸ್ಯವೆಂದು ಪೇಳ್ದಪಂ–

ಯಸ್ಸಮೇತಿ ಮನಸಾ ನಿರಾಶ್ರಯಂ ನಿರವಲಂಬಪದತತ್ತ್ವಮವ್ಯಯಂ ।

ಭಾವನಾವಿರಹಿತಂ ನಿರಾಮಯಂ ಪರಶಿವಂ ಹೃದಿ ಸ ತನ್ಮಯ ಭವೇತ್ ॥ ॥೨೨॥

ನಿರಾಶ್ರಯಂ–ಅಖಂಡಿತವಪ್ಪುದರಿಂದ ಆಶ್ರಯವಿಲ್ಲದಿರ್ಪಂಥ, ನಿರವಲಂಬಪದ ತತ್ತ್ವಂ–ನಿರಾಕಾರವಸ್ತುಸ್ವರೂಪವಾದಂಥ, ಅವ್ಯಯಂ–ಅವಿಭಾಗಮಪ್ಪುದರಿಂ ನಾಶವಿಲ್ಲದಂಥ, ಭಾವನಾವಿರಹಿತಂ–ಬುದ್ಧಿಗೋಚರವಲ್ಲದಿರ್ಪಂಥ, ನಿರಾಮಯಂ–ಅನಾದಿದೋಷವಿಲ್ಲದಿರ್ಪಂಥ, ಪರಶಿವಂ–ಪರಶಿವ ತತ್ತ್ವವನ್ನು, ಹೃದಿ–ಹೃದಯ ಮಧ್ಯದಲ್ಲಿ, ಯಃ–ಆವನಾನೋರ್ವಯೋಗೀಶ್ವರನು, ಮನಸಾ–ಶುದ್ಧಮಾನಸದಿಂದ, ಸಮೇತಿ–ಚನ್ನಾಗಿ ಎಯ್ದುತ್ತಿಹನೋ, ಸಃ–ಆತನು, ತನ್ಮಯಃ–ಆ ಪರಶಿವಸ್ವರೂಪವನು, ಭವೇತ್–ಆಗುವನು.

ತಾತ್ಪರ್ಯ : ನಿರ್ವಿಕಲ್ಪಾತ್ಮಕವಾದ ಪರವಸ್ತುವಿನಲ್ಲಿ ಮುಳುಗಿದ ಮನವು ಮರಳಿ ಅಂಕುರಿಸದಿರಲಾತನೇ ಪರಬ್ರಹ್ಮ ಸ್ವರೂಪನಪ್ಪನೆಂಬುದಭಿಪ್ರಾಯಂ.

ಅಣುಮಾತ್ರಂ ಯದಸ್ತೀತಿ ನಾಸ್ತೀತಿ ವಿದುಷಾಂ ಭುವಿ ।

ತದೇವ ಬಂಧಹೇತುತ್ವಾದ್ಭಾವಾಭಾವಾವುಭೌ ತ್ಯಜೇತ್ ॥ ॥೨೩॥

ಭುವಿ–ನಿರಾಲಂಬಸ್ಥಾನದಲ್ಲಿ, ವಿದುಷಾಂ–ಬಲ್ಲಯೋಗೀಶ್ವರರ್ಗೆ, ಅಸ್ತೀತಿ–ಉಂಟು ಎಂಬ, ನಾಸ್ತೀತಿ–ಇಲ್ಲವೆಂಬ, ಅಣುಮಾತ್ರಂ–ಲೇಶಮಾತ್ರವಾದ, ಯತ್–ಯಾವ ಮನದ ಮೊಳಕೆಯುಂಟೋ, ತದೇವ–ಅದೇ, ಬಂಧಹೇತುತ್ವಾತ್–ಸಂಸಾರ ಬಂಧನಕ್ಕೆ ನಿಮಿತ್ತವಾದಕಾರಣ, ಭಾವಾಭಾವೌ–ಉಂಟು ಇಲ್ಲವು ಎಂಬಂಥ, ಉಭೌ–ಎರಡನ್ನು, ತ್ಯಜೇತ್–ಬಿಡುವುದು.

ತಾತ್ಪರ್ಯ : ಪೂರ್ಣಾನಂದಯೋಗೀಶ್ವರನು ಮುಳುಂಗಿದ ಮನವನ್ನು ಲೇಶ ಮಾತ್ರವು ಮೊಳಕೆದೋರಿಸಬಾರದೆಂಬುದಭಿಪ್ರಾಯ.

ಚಿತ್ತೇ ಚಲತಿ ಸಂಸಾರೋ ನಿಶ್ಚಲೇ ಮೋಕ್ಷ ಏವ ಚ ।

ಎಂದುದಾಗಿ,

ಸೂ : ಈ ಪೂರ್ವಗ್ರಂಥದಲ್ಲಿ ಸೂಚಿತಮಾದ ಅರ್ಥವನ್ನೇ ಮರಳಿ ವಿಸ್ತಾರವಾಗಿ ಪೇಳ್ದಪಂ–

ಜ್ಞಾನಜ್ಞೇಯೇ ಧ್ಯಾನಧ್ಯೇಯೇ ಲಕ್ಷ್ಯಾಲಕ್ಷ್ಯೇ ಭಾವಾಭಾವೌ ।
ಊಹಾಪೋಹೌ ಯೋ ದೃಗ್ದೃಶ್ಯೇ ಸರ್ವಂ ತ್ಯಕ್ತ್ವಾ ಜೀವನ್ಮುಕ್ತಃ ॥ ॥೨೪॥

ಯಃ–ಯಾವ ಯೋಗೀಶ್ವರನು, ದೃಗ್ದೃಶ್ಯೇ–ನೋಡುವನೋಟವನ್ನು ನೋಡಿಸಿಕೊಂಬವಸ್ತುವನ್ನು, ಊಹಾಪೋಹೌ–ಆ ಕಾಣಿಸಿದವಸ್ತುವಿನಲ್ಲಿ ಅಹುದಾಗಬೇಕೆಂಬ ಅಲ್ಲವಾಗಬೇಕೆಂಬ ಮಾನಸವಿಕಲ್ಪಗಳನ್ನು, ಭಾವಾಭಾವೌ–ಅಹುದು ಅಲ್ಲವೆಂಬ ಬುದ್ಧಿಯ ಅಧ್ಯವಸಾಯಗಳನ್ನು, ಲಕ್ಷ್ಯಾಲಕ್ಷ್ಯೇ –ಭಾವಿಸದೇ ಮುದ್ರೆಗಳಿಂ ತೋರುವ ಲಕ್ಷ್ಯಾಲಕ್ಷ್ಯಂಗಳನ್ನು, ಧ್ಯಾನಧ್ಯೇಯೇ–ಲಕ್ಷ್ಯದ ಅನಂತರದಲ್ಲಿ ತೋರುವ ಧ್ಯಾನಧ್ಯೇಯುಂಗಳನ್ನು, ಜ್ಞಾನಜ್ಞೇಯೇ–[೧]ಕ[೧]ರಣಮಂ ಮೀರುವ ಜ್ಞಾನಜ್ಞೇಯಂಗಳೆಂಬ, ಸರ್ವಂ–ಕ್ರಮದಿಂದ ದ್ವಂದ್ವರೂಪಮಾದ ಸಕಲವನ್ನು, ತ್ಯಕ್ತ್ವಾ–ಬಿಟ್ಟು ವರ್ತಿಸುವಾತನುಂಟೋ ಆತನೇ ಜೀವನ್ಮುಕ್ತಃ–ಜೀವನುಕ್ತನೆನಿಸಿಕೊಂಬುವನು.

ತಾತ್ಪರ್ಯ : ಬಾಹ್ಯಾಂತಃಕರಣಂಗಳಲ್ಲಿ ದ್ವಂದ್ವಗ್ರಸ್ತವಾದ ವ್ಯಾಪಾರವಿಲ್ಲದೆ ಪೂರ್ಣಾಸ್ಥೆಯಲ್ಲಿರ್ದಾತನೇ ಜೀವನ್ಮಕ್ತನೆಂಬುದಭಿಪ್ರಾಯ–

●

ಸೂ : ಆ ಜೀವನ್ಮುಕ್ತನ ಇರವನ್ನೇ ಅವಸ್ಥಾತ್ರಯಂಗಳಲ್ಲಿ ದೃಷ್ಟಾಂತಪೂರ್ವಕದಿಂ ಪೇಳ್ದಪಂ–

ಸರ್ವಾಸ್ವವಸ್ಥಾಸ್ವಕೃತಪ್ರಯತ್ನೋ ನಿಶ್ಚಿಂತಭಾವೋ ಮೃತವತ್ಸತಿಷ್ಠನ್ ।
ಕಲ್ಲೋಲಹೀನಾಂಬುಧಿವನ್ನಿವಾತಪ್ರದೀಪವತ್ತತ್ವಮಯಸ್ಸುಖೀ ಭವೇತ್ ॥ ॥೨೫॥

ಸರ್ವಾಸು–ಸಮಸ್ತವಾಗಿರ್ದಂಥ, ಅವಸ್ಥಾಸು–ಅವಸ್ಥೆಗಳಲ್ಲಿ, ಅಕೃತಪ್ರಯತ್ನಃ–ಸ್ಥೂಲತನುವಿನಲ್ಲಿ ವ್ಯಾಪಾರವಿಲ್ಲದಾತನಾಗಿ, ನಿಶ್ಚಿಂತಭಾವಃ–ಸೂಕ್ಷ್ಮತನವಿನಲ್ಲಿ ಚಿಂತಾರಹಿತನಾಗಿ ಕಾರಣತನುವಿನಲ್ಲಿ ಭಾವಶೂನ್ಯನಾಗಿ, ತಿಷ್ಠನ್–ಇರುತಿರ್ಪಂಥ, ಸಃ–ಆತನು ಕ್ರಮದಿಂದ, ಮೃತವತ್–ಪ್ರಾಣವಿಲ್ಲದ ಶರೀರದಂತೆ, ಕಲ್ಲೋಲ ಹೀನಾಂಬುಧಿವತ್–ನಿಸ್ತರಂಗಾಂಬುಧಿಯಂತೆ, ನಿವಾತಪ್ರದೇಪವತ್–ನಿವಾತಜ್ಯೋತಿಯಂತೆ, ತತ್ತ್ವಮಯಃ–ಅಖಂಡಿತಮಾದ ಶಿವತ್ವಸ್ವರೂಪನಾಗಿ, ಸುಖೀ–ನಿತ್ಯಾನಂದವುಳ್ಳಾತನು, ಭವೇತ್–ಆಗುವನು.

●

೧–೧ ಕಾ (ಕ.)

ಸೂ : ಈ ಸಹಜಾವಸ್ಥೆಯಲ್ಲಿರ್ಪ ಈಶ್ವರಂಗೆ ಇದಿರಿಟ್ಟುಮಾಡುವ ಬಾಹ್ಯಾಭ್ಯಂತರ ಪೂಜಾವ್ಯವಹಾರವಿಲ್ಲವಾಗಿ ಆ ಜ್ಞಾನಪೂಜಾ ವಿಧಾನವತಿಗೋಪ್ಯವೆಂದು ಪೇಳ್ದಪಂ–

ಶೃಣು ಚಿಚ್ಛಿವಪೂಜಾಯಾಃ ಪ್ರಕಾರಂ ಕಥಯಾಮ್ಯಹಂ ।
ರಹಸ್ಯಂ ಸರ್ವಶಾಸ್ತ್ರಾರ್ಥಸಾರಂ ಸದ್ಯೋ ವಿಮುಕ್ತಿದಂ ॥ ॥೨೬॥

ಎಲೈ ಸ್ನೇಹಿತನೇ, ಸರ್ವಶಾಸ್ತ್ರಾರ್ಥಸಾರಂ–ಸಕಲಶಿವಾಗಮಾರ್ಥಂಗಳ ಸಾರವಾದಂಥ, ಸದ್ಯೋವಿಮುಕ್ತಿದಂ–ಆ ಕ್ಷಣದಲ್ಲಿ ನಿಜಮೋಕ್ಷಮಂ ಕೊಡುವಂಥ, ರಹಸ್ಯಂ–ಗೋಪ್ಯವಾದಂಥ, ಚಿಚ್ಛಿವಪೂಜಾಯಾಃ–ಜ್ಞಾನಮಾತ್ರದಿಂದಲಾಗುವ ಶಿವಪೂಜೆಯ, ಪ್ರಕಾರಂ–ವಿಧಾನವನ್ನು, ಅಹಂ –ನಾನು, ಕಥಯಾಮಿ–ಹೇಳುವೆನು.

ತಾತ್ಪರ್ಯ : ಜ್ಞಾನಪಾದದಲ್ಲಿ ಪೇಳ್ದ ಜ್ಞಾನದ, ಕ್ರಿಯಾಪದದಲ್ಲಿ ಪೇಳ್ದ ದೀಕ್ಷಾ ಮಂತ್ರಾದಿಗಳ, ಯೋಗಪಾದದಲ್ಲಿ ಪೇಳ್ದ ಯಮಾದಿಗಳ, ಚರ್ಯಪಾದದಲ್ಲಿ ಪೇಳ್ದ ಸದಾಚಾರಂಗಳೆಂಬ ಸಕಲಾರ್ಥಂಗಳ ಉಳಿಮೆಯಪ್ಪುದರಿಂ ಜ್ಞಾನಪೂಜೆಯೇ ಅತಿರಹಸ್ಯವೆಂಬುದಭಿಪ್ರಾಯ.

●

ಸೂ : ಈ ಜ್ಞಾನಪೂಜಾಸ್ವರೂಪವನೇ ಗ್ರಂಥದ್ವಯದಿಂ ಪೇಳ್ದಪಂ–

ನಿಶ್ಚಿಂತಾ ಯಚ್ಛಿವಧ್ಯಾನಂ ನಿಷ್ಕ್ರಿಯಾ ತಸ್ಯ ಪೂಜನಂ ।
ಪ್ರದಕ್ಷಿಣಂ ನಿಶ್ಚಲತ್ವಂ ಸೋಽಹಂಭಾವೋ ನಮಸ್ಕ್ರಿಯಾ ॥ ॥೨೭॥

ತಸ್ಯ–ಆ ಜೀವನ್ಮುಕ್ತಂಗೆ, ನಿಶ್ಚಿಂತಾ–ಇದಿರಿಟ್ಟು ಚಿಂತಿಸಬಹುದೆಂಬ, ಯತ್–ಆವುದುಂಟೋ, ತತ್–ಅದೇ, ಶಿವಧ್ಯಾನಂ–ಶಿವಧ್ಯಾನವೆನಿಪುದು, ತಸ್ಯ–ಆ ಜೀವನ್ಮುಕ್ತಂಗೆ, ನಿಷ್ಕ್ರಯಾ–ಬಾಹ್ಯಕ್ರಿಯೆಯಂ ಬಿಟ್ಟುದೇ, ಪೂಜನಂ–ಪೂಜೆಯು, ನಿಶ್ಚಲತ್ವಂ–ಮುಳುಗಿದ ಮನವು ಮರಳಿ ಚಲಿಸದೆ ಇಹುದೇ ಪ್ರದಕ್ಷಿಣಂ–ಪ್ರದಕ್ಷಿಣವೆನಿಸುವದು, ಸೋಽಹಂಭಾವಃ–ಸಕಾರ ಹಕಾರಂಗಳೆಂಬ ಬೀಜಾಕ್ಷರಂಗಳಳಿದುನಿಂದ ಪರಿಪೂರ್ಣಪ್ರವದಲ್ಲಿಯ ಸಾಮರಸ್ಯವೇ, ನಮಸ್ಕ್ರಿಯಾ–ನಮಸ್ಕಾರವೆನಿಪುದು.

ಮೌನಂ ಸಂಕೀರ್ತನಂ ತಸ್ಯ ಜಪಸ್ತು ಪರಿಪೂರ್ಣತಾ ।
ಕೃತ್ಯಾಕೃತ್ಯಜ್ಞತಾಶೀಲಂ ನಿರ್ವಾಣಂ ಸಮದರ್ಶನಂ ॥ ॥೨೮॥

ತಸ್ಯ–ಆ ಜೀವನ್ಮುಕ್ತಂಗೆ, ಮೌನಂ–ವೈಖರ್ಯಾದಿಶಬ್ದವ್ಯಾಪಾರವಳಿದುದೆ, ಸಂಕೀರ್ತನಂ–ಸ್ತೋತ್ರವು, ಪರಿಪೂರ್ಣತಾ–ಆಕಂಡಿತಮಾದ ಚೈತನ್ಯಮಂ ಕರಣಸಂಗದಿಂ ಖಂಡಿತಮಾಡದಿರ್ಪುದೆ, ಜಪಃ–ಜಪವು, ಕೃತ್ಯಾಕೃತ್ಯಜ್ಞತಾ–ವಿಧಿನಿಷೇಧಗಳನರಿಯದಿಹುದೇ, ಶೀಲಂ–ಸದ್ವರ್ತನವು, ಸಮದರ್ಶನಂ –ಪರಮಾತ್ಮಂಗೆ ತಾನು ಸಮಾನವೆಂದರಿದ ಕೂಟವೇ, ನಿರ್ವಾಣಂ–ಆತ್ಮಾರ್ಪಣವೆಂಬ ಪೂಜೆಯಂ (ಷೋಡಶೋಪಚಾರಂಗಳೊಳಗೆ) ನಾನು ನಿನ್ನವನೆಂದು [೧]ತನ್ನ[೧]ನರ್ಪಿಸುವುದೇ ಆತ್ಮಾರ್ಪಣವೆನಿಪುದಂ).

ತಾತ್ಪರ್ಯ : ಲೋಕವ್ಯವಹಾರದಲ್ಲಿ ಸಮರಸಭಾವದಿಂ ಬೆರಸಿದ ಸ್ನೇಹಿತರ್ಗೆ ಬಾಹ್ಯೋಪಚಾರವೇ ಭಾರವಪ್ಪಂತೆ "ದ್ವಾ ಸುಪರ್ಣೌ ಸಯುಜೌ ಸಖಾಯೌ ಜೀವಹಂಸ ಪರಮಹಂಸರೆಂಬ ಈರ್ವರು

೧–೧ ತನುವ (ಮೈ) ೨–೨ x (ಕ).

ಜ್ಞಾನಕ್ರಿಯೆಯೆಂಬ ಉಭಯಪಕ್ಷವುಳ್ಳವರು ಸಮಾನವಾದ ಕೂಟವುಳ್ಳವರು, ಪರಮ ಸ್ನೇಹಿತರುಗಳು ಎಂಬ ಶ್ರುತಿ ಪ್ರಮಾಣದಿಂದಲೂ

ಯದಾ ಪಶ್ಯಂ ಪಶ್ಯತೇ ರುಕ್ಮವರ್ಣಂ

ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಂ ।

ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ

ನಿರಂಜನಃ ಪರಮಂ ಸಾಮ್ಯಮುಪೈತಿ।

ಆರಿಂದಲೂ ಕಾಣಲು ಶಕ್ಯವಿಲ್ಲದ ಸುವರ್ಣವರ್ಣನಾದ ಜಗತ್ಕರ್ತುವಾದ ಶಬ್ದಬ್ರಹ್ಮವೇ ಪೀಠಮಾಗುಳ್ಳ ಪರಮಪುರುಷನಾದ ಶಿವನನ್ನು, ಆವಾಗ ಕಾಣ್ಬನೋ ಆಗಲೇ ವಿವೇಕಿಯಾದಾತನು ಪುಣ್ಯಪಾಪಂಗಳಂ ಕೊಡಹಿ, ನಿರ್ಮಲನಾಗಿ 'ಶಿವ' ವಿಶಿಷ್ಟಮಾದ ಶಿವಸಮಾನತೆಯನೈದುವನು, ಎಂಬ ದಿವ್ಯ ಶ್ರುತಿಪ್ರಮಾಣದಿಂದಲೂ ಪರಮಾತ್ಮನಲ್ಲಿ ಸಮರಸಭಾವದಿಂ ಕೂಡಿದ ಜೀವನ್ಮುಕ್ತಂಗೆ ಬಹುವಿಧೋಪಚಾರಂಗಳು ಬಿಟ್ಟುದೆ ಪೂಜೆಯೆನಿಪುದೆಂಬುದಭಿಪ್ರಾಯ.

ನಾತ್ರ ಪೂಜಾ ನಮಸ್ಕಾರೋ ನ ಜಪೋ ಧ್ಯಾನಮೇವ ಚ ।

ಕೇವಲ ಜ್ಞೇಯಮಿತ್ಯುಕ್ತಂ ವೇದಿತವ್ಯಂ ನ ಕಿಂಚನ ॥

ಎಂಬುದಾಗಿ,

•

ಸೂ : ಸುಷುಪ್ತನ ಕೈಯಕಂತುಕವು ಅಪ್ರಯತ್ನದಿಂ ಕಳೆವಂತೆ ಪೂಜೆ ಪೂರಿತವಾದ ಜೀವನ್ಮುಕ್ತನ ಬಾಹ್ಯಕ್ರಿಯೆಗಳಪ್ರಯತ್ನದಿಂ ಬಿಡಲಾತನ ನಿಜಾವಸ್ಥೆಯಂ ಪೇಳ್ದಪಂ–

ಸರ್ವೇಂದ್ರಿಯಗುಣರಹಿತಾ ರೂಪಾತೀತಾ ನಿರಂಜನಾ ಶಾಂತಾ ।

ಭಾವಾಭಾವವಿದೂರಾ ಸಹಜಾವಸ್ಥೇತಿ ಸಾ ಕಥಿತಾ ॥ ॥೨೯॥

ಸರ್ವೇಂದ್ರಿಯಗುಣರಹಿತಾ–ಜಾಗ್ರವಸ್ಥೆಯಂತೆ ಸಕಲೇಂದ್ರಿಯಂಗಳ ವ್ಯಾಪಾರಂಗಳ್ ತನಗಿಲ್ಲದಂಥ, ರೂಪಾತೀತಾ–ಸ್ವಪ್ನಾವಸ್ಥೆಯಂತೆ ಕಲ್ಪಿತವಾದ ರೂಪು ತನಗಿಲ್ಲಾದಂಥ, ನಿರಂಜನಾ–ಸುಷುಪ್ತಿಯಂತೆ ತಮೋರೂಪವಲ್ಲದೆ ಇರ್ಪಂಥ, ಶಾಂತಾ–ತುರ್ಯಾವಸ್ಥೆಯಂತೆ ದಿವ್ಯಾನಂದದಿಚ್ಛೆಯಿಂ ಪುಟ್ಟಿಸದಂಥ, ಭಾವಾಭಾವವಿದೂರಾ–ತೂರ್ಯಾತೀತದಂತೆ ಉಂಟು ಇಲ್ಲವೆಂಬ ತೋರಿಕೆಯ ಬಿಡುಗಡೆಗೆ ಸಮೀಪವಲ್ಲದೆ ಅತಿದೊಡ್ಡವಾದಂಥ, ಸಾ–ಆ ಇರವು, ಸಹಜಾವಸ್ಥೇತಿ–ಸಹಜಾವಸ್ಥೆಯೆಂದು, ಕಥಿತಾ–ಹೇಳಲ್ಪಟ್ಟಿತು.

ತಾತ್ಪರ್ಯ : ಇಂದ್ರಿಯ ವ್ಯಾಪರವುಳ್ಳ ಜಾಗ್ರದಿಂ ಕಲ್ಪಿತರೂಪುಳ್ಳಸ್ವಪ್ನದಿಂದ ತಮೋರೂಪಮಾದ ಸುಷುಪ್ತಿಯಿಂ ಬೈಂದವಭೋಗಾಸಕ್ತಿಯಾದ ತೂರ್ಯದಿಂ ತೋರಿಕೆಗಳುಳಿದು ನಿಂದ ತೂರ್ಯಾತೀತದಿಂ ತೊಲಗಿ ದೂರಮಾದ ಸರ್ವಸಾಕ್ಷಿಕಮಾಗಿ ನಿಂದ ನಿಲುಕಡೆಯೇ ಸಹಜಾವಸ್ಥೆಯೆನಿಪುದೆಂಬುಭಿಪ್ರಾಯ.

•

೧–೧ x (ಕ)

ಸೂ : ಆಚಾರ್ಯನು ಅವಸ್ಥಾಸ್ವರೂಪಂಗಳಂ ಪೇಳಲುದ್ಯುಕ್ತನಾಗಿ ಕ್ರಮದಿಂದವಂ ಪೆಸರಂ ಪೇಳ್ದಪಂ–

ಜಾಗ್ರತ್ಸ್ವಪ್ನಸುಷುಪ್ತಿಶ್ಚ ತುರೀಯಂ ಚ ಷಡೇವ ಚ ।

ತೂರ್ಯಾತೀತಂ ಚ ಸಹಜಂ ನ ಕಿಂಚಿಚ್ಚಿಂತಯೇತ್ತತಃ ॥ ॥೩೦॥

ಜಾಗ್ರತ್–ಜಾಗ್ರದವಸ್ಥೆಯೆಂದು, ಸ್ವಪ್ನಃ–ಸ್ವಪ್ನಾವಸ್ಥೆಯೆಂದು, ಸುಷುಪ್ತಿಶ್ಚ–ಸುಷುಪ್ತಿಯೆಂದು, ತುರೀಯಂ ಚ–ತೂರ್ಯಾವಸ್ಥೆಯೆಂದು, ತೂರ್ಯಾತೀತಂ–ತೂರ್ಯಾತೀತವೆಂದು, ಸಹಜಂ ಚ–ಸಹಜಾವಸ್ಥೆಯೆಂದು ಅವಸ್ಥೆಗಳು, ಷಡೇವ ಚ–ಆರುತೆರನು, ತತಃ–ಸಹಜಾವಸ್ಥೆಯೆಂದು ಮೇಲೆ, ಕಿಂಚಿತ್–ಒಂದಿಷ್ಟನ್ನು, ನ ಚಿಂತಯೇತ್–ಚಿಂತಿಸಲಾಗದು.

ತಾತ್ಪರ್ಯ : ಸಹಜಾವಸ್ಥೆಯಿಂ ಮೇಲೆ ಅವಸ್ಥಾಕಲ್ಪನಕ್ಕೆ ತೆರಪಿಲ್ಲವೆಂಬುದಭಿಪ್ರಾಯ.

●

ಸೂ : ಭೋಗದಲ್ಲಿಯ ಅನುರಕ್ತನೇ ಜೀವನು, ವಿರಕ್ತನೇ ಮುಮುಕ್ಷುವಾದ ಕಾರಣ ಈ ಅವಸ್ಥೆಯಲ್ಲಿ ಭೋಗಾಧಿಕಾರಿಯಾದಾತನು ಯೋಗಾಧಿಕಾರಿಯಾಗನೆಂದು ಪೇಳ್ದಪಂ–

ವಿಹಾಯ ಕರ್ಮಾಣ್ಯಘಸಂಯುತಾನಿ ಗೃಹ್ಣಾತಿ ಕರ್ಮಾಣಿ ಸುಖಾನ್ವಿತಾನಿ ।

ಸ್ವರ್ಗೋನ್ಮುಖೋ ಯಃ ಪುರುಷಃ ಪ್ರವೃತ್ತೋ ನೈವಾಧಿಕಾರೀ ಸ ತು ಜಾಗರೇಽಪಿ ॥ ॥೩೧॥

ಯಃ–ಯಾವ, ಪುರುಷಃ–ಪುರುಷನು, ಅಘಸಂಯುತಾನಿ–ಪಾಪದೊಡನೆ ಕೂಡಿದಂಥ, ಮನೋವಾಕ್ಕಾಯಗಳಿಂದ ಪುಟ್ಟುವ ಬಹು ವಿಧಮಾದ ದೋಷಕೃತ್ಯಂಗಳನ್ನು, ವಿಹಾಯ–ಬಿಟ್ಟು, ಸುಖಾನ್ವಿತಾನಿ–ಪುಣ್ಯಕೃತ್ಯಂಗಳಿಂ ಕೂಡಿದಂಥ, ಕರ್ಮಾಣಿ–ಕೃತ್ಯಗಳನ್ನು, ಗೃಹ್ಣಾತಿ–ಅಂಗೀಕರಿಸುತ್ತಿಹನೋ, ಸ ತು–ಆ ಪುಣ್ಯಾಪೇಕ್ಷೆಯುಳ್ಳಂಥ, ಸ್ವರ್ಗೋನ್ಮುಖಃ–ಸ್ವರ್ಗಾದಿಭೋಗದ ಬಯಕೆಯುಳ್ಳಾತನಾಗಿ, ಪ್ರವೃತ್ತಃ–ಪ್ರವರ್ತಿಸಿದಂಥವನು, ಜಾಗರೇಽಪಿ–ಯೋಗಸಾಧನವಾದ ಜಾಗ್ರದವಸ್ಥೆಯಲ್ಲಿಯೂ, ಅಧಿಕಾರೀ–ಯೋಗ್ಯನು, ನೈವ–ಅಲ್ಲವೇ!

ತಾತ್ಪರ್ಯ : ಕೈಮುತಿಕನ್ಯಾಯದಿಂದೆ ಉತ್ತರೋತ್ತರವಾದವಸ್ಥೆಗೆ ಮುನ್ನ ಯೋಗ್ಯವಲ್ಲವೆಂಬುದಭಿಪ್ರಾಯ.

●

ಸೂ : ಅನಂತರದಲ್ಲಿ ಭೋಗಸಾಧನವಾದ ಜಾಗ್ರದವಸ್ಥೆಯಿಂದ ಅನ್ಯವಾದ ಯೋಗೋನ್ಮುಖವಾದ ಜಾಗ್ರದವಸ್ಥೆಯಂ ಪೇಳ್ದಪಂ–

[೧]ಅಲಮಲಮಿತ್ಯಖಿಲ[೧] ಪದ[೨]ಸುಖೈಶ್ಚ[೨] ಕದಾಚಿನ್ನಿವೃತ್ತಮಾನ ಸೋ ಯಃ ।

ಸ ತು ಜಾಗ್ರದವಸ್ಥಾಯಾಂ ತಿಷ್ಠನ್ಮೋಕ್ಷೋನ್ಮುಖೋ ಭವತಿ ॥ ॥೩೨॥

೧–೧ ಅಮಲಮಮಲಖಿಲ (ಕ) ೨–೨ ಸುಖೈಶ್ಚೇತಿ (ಕ).

ಅಖಿಲಪದಸುಖೈಃ–ಅಖಿಲಸಮಸ್ತವಾದ ಉತ್ತರೋತ್ತರಭುವನಂಗಳಲ್ಲಿಯು, ಸುಖೈಶ್ಚ–ಸ್ರಕ್ಚಂದನವನಿತಾದಿಸುಖಂಗಳಿಂದಲೂ, ಅಲಮಲಮಿತಿ–ಸಾಕು ಸಾಕು ಎಂದು, ಕದಾಚಿತ್–ಶಕ್ತಿಪಾತಸಮಯದಲ್ಲಿ, ನಿವೃತ್ತಮಾನಸಃ–ಸಂಸಾರದಲ್ಲಿ [೧]ವಿಮುಖವಾದ ಮನಸ್ಸುಳ್ಳಂಥ[೧], ಯಃ–ಯಾವನು, ಸ ತು–ಆತನಾಯಿತ್ತಾದೊಡೆ, ಜಾಗ್ರದವಸ್ಥಾಯಾಂ–ಜಾಗ್ರದವಸ್ಥೆಯಲ್ಲಿ, ತಿಷ್ಠನ್–ಇರುತ್ತಿರ್ದಂಥಾತನಾಗಿ, ಮೋಕ್ಷೋನ್ಮುಖಃ–ಮೋಕ್ಷದತ್ತಣಿಂ ಅಭಿಮುಖನು, ಭವತಿ–ಆಗುತ್ತಿಹನು.

ತಾತ್ಪರ್ಯ : ಭೋಗಾರ್ಥವಾಗಿ ಪಿಡಿದ ವಸ್ತುಗಳನ್ನು ಹೇಯಬುದ್ಧಿಯಿಂದೆಚ್ಚತ್ತು ಬಿಡುವಾತನೇ ಮುಮುಕ್ಷುವೆನಿಸಿಕೊಳ್ಳುತ್ತಿಹನೆಂಬುದಭಿಪ್ರಾಯ.

•

ಸೂ : ಈ ಪೂರ್ವೋದಿತಮಾದ ಲಕ್ಷ್ಯಂಗಳಂ ಶೋತ್ರನೇತ್ರಂಗಳಿಂ ಕಾಣ್ಬ ಸೂಕ್ಷ್ಮಜಾಗರ ದಿಂದನ್ಯಮಾದ ಜಾಗ್ರದವಸ್ಥೆಯಂ ಪೇಳ್ದಪಂ–

ಸಂಸಾರೋತ್ತರಣಂ ಮಮಾಸ್ತಿ ಕಥಮಿತ್ಯಾಚಾರ್ಯಸಂಸೇವನಂ
ವಿದ್ವತ್ಸಂಗಮಕಾಮತಾಂ ಸ್ಮೃತಿಸದಾಚಾರಂ ಶಮಂ ಮೌನಿತಾಂ ॥
ವೈರಾಗ್ಯಂ ಶ್ರುತಿಶಾಸ್ತ್ರನಿಶ್ಚಯಧಿಯಂ ಕಾಮಾದ್ಯರಿಧ್ವಂಸನಂ
ಯೋಗಾಭ್ಯಾಸಸಮುಪೈತಿ ದಂಭರಹಿತೋ ಜಾಗ್ರತ್ಸ್ವಭಾವಾನ್ವಿತಃ ॥ ॥೩೩॥

ಮಮ–ನನಗೆ, ಸಂಸಾರೋತ್ತರಣಂ–ಜನನಮರಣರೂಪಮಾದ ಸಂಸಾರಮಂ ದಾಟುವದು, ಕಥಮಸ್ತೀತಿ–ಹೇಂಗೆ ಉಂಟಾಗುತ್ತಿದ್ದೀತೆಂದು, ಅಚಾರ್ಯ ಸಂಸೇವನಂ–ಸಮರ್ಥವಾದ ಶ್ರೀ ಗುರುವಿನ ಸೇವೆಯನ್ನು, ವಿದ್ವತ್ಸಂಗಂ–ವಿವೇಕಗಳ ಸಂಗವನ್ನು, ಆಕಾಮತಾಂ–ಇಹಲೋಕ ಪರಲೋಕಸುಖಂಗಳ ಬಯಸದೆ ಇಹತನವನು, ಸ್ಮೃತಿಶಾಸ್ತ್ರನಿಶ್ಚಯಧಿಯಂ–ವೇದಶಾಸ್ತ್ರಂಗಳಿಂದೆ ನಿಶ್ಚಯವಾದ ಬುದ್ಧಿಯನ್ನು, ಕಾಮಾಧ್ಯರಿಧ್ವಂಸನಂ–ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಗಳೆಂಬ ಅರಿಗಳ ಕೆಡಿಸುವದನ್ನು ಯೋಗಾಭ್ಯಾಸಂ–ಯಮಾದಿ ಯೋಗಾಭ್ಯಾಸ ಎಂಬಿವು ಮೊದಲಾದ ವ್ಯಾಪಾರವನ್ನು, ಜಾಗ್ರತ್ಸ್ವ ಭಾವಾನ್ವಿತಃ–ಜಾಗ್ರದವಸ್ಥೆಯಿಂ ಕೂಡಿದಾತನು, ದಂಭರಹಿತಃ–ಕಪಟವಿಲ್ಲದೆ ಇರ್ದಾತನಾಗಿ, ಉಪೈತಿ –ಎಯ್ದುತ್ತಿಹನು.

ತಾತ್ಪರ್ಯ : ಯಾ ತೇ ರುದ್ರ ಶಿವಾ ತನೂರಘೋರಾಽಪಾಪಕಾಶಿನೀ ಎಲೈ ಪರಮೇಶ್ವರನೇ, ಅಘೋರಾಮೂರ್ತಿಗಳಂತೆ ಭಯಂಕರವಿಲ್ಲದೆ ಇರ್ದಂಥ ಶಾಂತರೂಪಮಾದ ನಾದಬಿಂದುಕಲಾತ್ಮಕವಾದ ನಿನ್ನಮೂರ್ತಿಯು ಪಾಪರಹಿತರಾದ ನಿರ್ಮಲಬುದ್ಧಿಯುಳ್ಳವರಲ್ಲಿ ಬೆಳಗುತ್ತಿರ್ಪುದೆಂಬ ಶ್ರುತಿಪ್ರಮಾಣದಿಂದೆ ಶುದ್ಧ ಜಾಗೃದವಸ್ಥಾವ್ಯಾಪಾರಂಗಳು ಮುಂದಣ ಮೋಕ್ಷಾವಸ್ಥೆಗಳಿಗೆ ಸಾಧನಗಳೆಂಬುದಭಿಪ್ರಾಯ.

•

೧–೧ ವಿಮುಖನಾಗುತ್ತಿದ್ದಂಥಾ (ಮೈ).

ಸೂ : ಈ ಜಾಗ್ರದವಸ್ಥೆಯ ವ್ಯಾಪಾರಂಗಳು ದೇಹಾಂತರಮಂ ಕೊಟ್ಟರೂ ಕೆಡದೆ ಮುಮುಕ್ಷುಜನಕ್ಕೆ ಉತ್ತರಾವಸ್ಥೆಯನೆಯ್ದಿಸುವುವೆಂದು ಪೇಳ್ದಪಂ–

ಮೃತೋ ಜಾಗ್ರದವಸ್ಥಾಯಾಂ ಯದಿ ಚೇದನ್ಯಜನ್ಮನಿ ।

ಸ್ವಪ್ನಾವಸ್ಥಾಂ ಗತೋ ಯಾತಿ ಪೂರ್ವಾಭ್ಯಾಸವಶಾದ್ಭುವಿ ॥ ॥೩೪॥

ಯಃ–ಆವತಾನು, ಜಾಗ್ರದವಸ್ಥಾಯಾಂ–ಪೂರ್ವೋಕ್ತಮಾದ ಜಾಗ್ರದವಸ್ಥಾ ವ್ಯಾಪಾರದಲ್ಲಿ, ಯದಿ –ಒಂದುವೇಳೆ, ಮೃತಃಚೇತ್–ಆ ದೇಹವನ್ನು ಬಿಟ್ಟಾತನಾದರೆ, ಅನ್ಯಜನ್ಮನಿ–ಅನ್ಯವಾದ ಮುಂದಣ ಜನ್ಮದಲ್ಲಿ, ಪೂರ್ವಾಭ್ಯಾಸವಶಾತ್–ಪೂರ್ವಜನ್ಮದಲ್ಲಿಯ ಅಭ್ಯಾಸದ ಸಂಸ್ಕಾರವತದತ್ತಣಿಂದ, ಸ್ವಪ್ನಾವಸ್ಥಾಂ –ಉತ್ತರವಾದ ಸ್ವಪ್ನಾವಸ್ಥೆಯನ್ನು, ಗತಃ–ಎಯ್ದಿದಾತನಾಗಿ, ಭುವಿ–ಭೂಮಿಯಲ್ಲಿ, ಯಾತಿ–ಎಯ್ದುತ್ತಿಹನು.

ತಾತ್ಪರ್ಯ : ಸೂಕ್ಷ್ಮಶರೀರವು ಮೋಕ್ಷಾವಧಿಪ್ರಳಯಾವಧಿಯಲ್ಲಿಯಲ್ಲದೆ ಕೆಡದಾಗಿ, ಆ ಸೂಕ್ಷ್ಮತನುವನೆ ಜ್ಞಾನಕ್ರಿಯಾಜನಿತಮಾದ ಕರ್ಮಸಂಸ್ಕಾರವಾಶ್ರೈಸಿರ್ಪುದಾಗಿ ಸ್ಥೂಲಶರೀರವಳಿದರೂ ಪೂರ್ವ ಜನ್ಮದಸಂಸ್ಕಾರವೇ ಉತ್ತರ ಜನ್ಮದಲ್ಲಿ ಫಲಿಸುವೆಂಬುದಭಿಪ್ರಾಯ.

ಸೂ : ಅನಂತರದಲ್ಲಿ ಧ್ಯಾನಾನುಸಂಧಾನಮಾತ್ರದಿಂದೇಸ್ವಪ್ನಾವಸ್ಥೆಯಿಂದನ್ಯವಾದ ಸ್ವಪ್ನಾವಸ್ಥೆಯಂ ಪೇಳ್ದಪಂ–

ಸ್ವಪ್ನವದಖಿಲಂ ಲೋಕಂ ಪಶ್ಯನ್ ಶರದಭ್ರರೂಪಮಿವಚಿತ್ತೇ ।

ತಿಷ್ಠತಿ ಸತ್ತಾಮಾತ್ರೇ ಸ್ವಪ್ನಾವಸ್ಥಾನ್ವಿತಶ್ಚರತಿ ॥ ॥೩೫॥

ಯಃ–ಆವನೋರ್ವಯೋಗೀಶ್ವರನು, ಅಖಿಲಂ–ಸಮಸ್ತವಾದಂಥ, ಲೋಕಂ–ಪ್ರಪಂಚವನ್ನು, ಸ್ವಪ್ನವತ್–ಸ್ವಪ್ನದಲ್ಲಿ ತೋರಿದ ಪ್ರಪಂಚದೋಪಾದಿಯಲ್ಲಿ, ಶರದಭ್ರರೂಪಮಿವ–ಶರತ್ಕಾಲದ ಮೇಘಸ್ವರೂಪದಂತೆ, ಚಿತ್ತೇ–ಶುದ್ಧವಾದ ಮನಸ್ಸಿನಲ್ಲಿ, ಪಶ್ಯನ್–ಕಾಣುತ್ತ, ಸತ್ತಾಮಾತ್ರೇ–ಉಂಟೆಂಬಮಾತ್ರದಲ್ಲಿ, ತಿಷ್ಠತಿ–ಇರುತ್ತಿಹನೋ, ಸಃ–ಆತನು, ಸ್ವಪ್ನಾವಸ್ಥಾನ್ವಿತಃ–ಸ್ವಪ್ನಾವಸ್ಥೆಯಿಂ ಕೂಡಿದಾತನಾಗಿ, ಚರತಿ–ಚರಿಸುತ್ತಿಹನು.

ತಾತ್ಪರ್ಯ : ಸ್ವಪ್ನ ಪ್ರಪಂಚದಲ್ಲಿ ಭೋಗವನ್ನು ಪಡೆಯದಂತೆ, ಶರತ್ಕಾಲದ ಬೆಳ್ಮುಗಿಲಿನಲ್ಲಿ ಜಲವನ್ನು ಪಡೆಯದಂತೆ ಇದಿರಿಟ್ಟು ತೋರಿದ ಪ್ರಪಂಚದಲ್ಲಿ ನಾನು ನನ್ನದೆಂಬ ಅಭಿಮಾನವಳಿದು, ಉಂಟೆಂಬ ಮಾತ್ರದಲ್ಲಿಯೇ ಕಾಣಬಹುದು ಸ್ವಪ್ನಾವಸ್ಥೆಯೆಂಬುದಭಿಪ್ರಾಯ.

●

ಸೂ : ಆ ಸ್ವಪ್ನದಿಂದುತ್ತರವಾದ ಸುಷುಪ್ತಿಯಂ ಪೇಳ್ದಪಂ–

ಗತೇ ದ್ವೈತಭಾವೇ ಸ್ಥಿತೇ ಶಾಂತದೇಶೇ ಪ್ರಕಾಶಸ್ವಭಾವೇ ಚಿದಾನಂದಭಾನೌ ।

ಬಹಿರ್ಮುಕ್ತಿಯುಕ್ತೋಽಪಿ ಹೃತ್ಪದ್ಮವೃತ್ತಸ್ಸುಷುಪ್ತಿಸ್ಥಿತಶ್ಚಿತ್ರವದ್ಭಾತಿ ಯೋಗೀ ॥ ॥೩೬॥

ದ್ವೈತಭಾವೇ–ಧ್ಯಾನಧ್ಯೇಯ ಜ್ಞಾನಜ್ಞೇಯ ಭಾವಾಭಾವ ಮುಂತಾದ ದ್ವೈತಭಾವವು, ಗತೇ–ಹೋಗಲಾಗಿ, ಪ್ರಕಾಶಸ್ವಭಾವೇ–ನಿರುಪಾಧಿಕಜ್ಯೋತಿ ಸ್ವರೂಪಮಾದಂಥ, ಚಿದಾನಂದಭಾನೌ–ಜ್ಞಾನರೂಪಮಾಗಿ ಆನಂದರೂಪಮಾಗಿ ಅವಿದ್ಯಾಂಧಕಾರಕ್ಕೆ ಸೂರ್ಯನಾಗಿರ್ದಂಥ, ಶಾಂತದೇಶೇ–ಶಿವತತ್ವವೆಂಬ ಮಹದಾಶ್ರಯವು. ಸ್ಥಿತೇ–ಇರಲಾಗಿ, ಬಹಿರ್ಮುಕ್ತಿಯುಕ್ತೋಽಪಿ–ಬಾಹ್ಯವಿಷ

ಯೋನ್ಮುಖಂಗಳಾದ ಕರಣಂಗಳಲ್ಲಿ ಕೂಡಿದಾತನಾದರೂ, ಹೃತ್ಪದ್ಮವೃತ್ತಃ–ಹೃದಯಕಮಲಮಧ್ಯದಲ್ಲಿಯೇ ಪ್ರವರ್ತಿಸಲ್ಪಟ್ಟಂಥ, ಸುಷುಪ್ತಿಸ್ಥಿತಃ–ಸುಷುಪ್ತಿಯಾವಸ್ಥೆಯಲ್ಲಿರ್ದಂಥ, ಯೋಗೀ–ಯೋಗೀಶ್ವರನು, ಚಿತ್ರವತ್ –ಚಿತ್ರದ ಪ್ರತಿಮೆಯೋಪಾದಿಯಲ್ಲಿ, ಭಾತಿ–ಒಪ್ಪುತ್ತಿದ್ದಾನು, ಅಹೋ–ಆಶ್ಚರ್ಯವು.

ತಾತ್ಪರ್ಯ : ನಿರ್ವಿಕಾರವಾದ ಚೈತನ್ಯಸನ್ನಿಧಾನಮಾತ್ರದಿಂ ಪ್ರಾರಬ್ಧವಾಸನಾನ್ವಿತವಾದ ಕರಣಂಗಳ್ಬಹಿರ್ಮುಖವಾದರೂ ನಿಶ್ಚಲಬ್ರಹ್ಮಾನುಸಂಧಾನದಲ್ಲಿ ಇರುವಾತನೇ ಸುಷುಪ್ತನೆಂಬುದಭಿಪ್ರಾಯ.

ಸಮಾಸಕ್ತಂ ಯದಾ ಚಿತ್ತಂ ಜಂತೋರ್ವಿಷಯಗೋಚರೇ ।
ಯದ್ಯೈವಂ ಬ್ರಹ್ಮಣಿಸ್ಯಾತ್ತತ್ಕೋನ ಮುಚ್ಯೇತ ಬಂಧನಾತ್ ॥

ಎಂಬ ಶ್ರುತಿಪ್ರಮಾಣಮುಂಟಾಗಿ,

●

ಸೂ : ಅನಂತರದಲ್ಲಿ ತುರ್ಯಾವಸ್ಥೆಯಂ ಪೇಳ್ದಪಂ–

ಅನಮೃತೋಪ್ಯಮೃತಃ ಕ್ಷಯಮಾನಸೋ ವಿದಿತಶಾಂತತನುರ್ನಿರಹಂಕೃತಿಃ ।
ಗಳಿತಗಂಧಗುಣಸ್ಸ ತು ತುರ್ಯಭಾಗ್ವಹತಿ ಜೀವಿತಮುಕ್ತಿ ಸುಭಾವಿತಃ ॥ ॥೩೭॥

ಯಃ–ಆವಾತನು, ಅನಮೃತೋಪಿ–ಮರಣಾವಸ್ಥೆಯನೆಯ್ದಿದಂತೆ ನಿರ್ವ್ಯಾಪಾರಿಯಾದರೂ, ಅಮೃತಃ –ನಿತ್ಯನಾಗಿರ್ಪಂಥಾತನು, ಕ್ಷಯಮಾನಸಃ–ಮನೋ ವ್ಯಾಪಾರಮಂ ಕೆಡಿಸಿದಂಥ, ವಿದಿತಶಾಂತತನುಃ –ಸಿದ್ಧಿ ತುಷ್ಟಿ ಭಾವ ಪ್ರತ್ಯಯಾದಿ ಬುದ್ಧಿ ವ್ಯಾಪಾರವಿಲ್ಲವಾಗಿ ಪ್ರಸಿದ್ಧಮಾದ ಶಾಂತಸ್ವರೂಪನಾದಂಥ, ನಿರಹಂಕೃತಿಃ–ಅಹಂಕಾರ ಮಮಕಾರವಿಲ್ಲದಿರ್ಪಂಥ, ಗಳಿತಗಂಧಗುಣಃ–ಸುಖ ದುಃಖ ಮೋಹ ರೂಪಮಾದ ಗುಣತ್ರಯದ ವಾಸನೆಯಿಲ್ಲದಿರ್ದಂಥಾತನುಂಟೋ, ಸ ತು–ಆತನು, ತುರ್ಯಭಾಕ್–ತುರ್ಯಾವಸ್ಥೆಯಂ ಭಜಿಸುವಂಥಾತನಾಗುತ್ತಲೂ, ಜೀವಿತಮುಕ್ತಿ ಸಂಭಾವಿತಃ–ಜೀವನ್ಮುಕ್ತಿಯುಳ್ಳಾತನೆಂದು ಭಾವಿಸಲ್ಪಟ್ಟಾತನಾಗಿ, ವಹತಿ–ಚರಿಸುತ್ತಿಹನು.

ತಾತ್ಪರ್ಯ : ಹೃದಯಸ್ಥಾನಮಂ ಮೀರಿನಿಂದಾತನೆಂಬುದಭಿಪ್ರಾಯ.

●

ಸೂ : ಅನಂತರದಲ್ಲಿ ತುರ್ಯಾವಸ್ಥೆಯಲ್ಲಿ ನಿಂದಾತನ ಇರವಂ ಪೇಳ್ದಪಂ–

ಸಂಪೂರ್ಣಕುಂಭ ಇವ ವಾರಿನಿಧಾನಮಧ್ಯೇ
ಸಂಶೂನ್ಯಕುಂಭ ಇವ ವಿಷ್ಣು ಪದಾಂತರಾಲೇ ।
ಅಂತರ್ಬಹಿಃಪ್ರಥಿತ ಪೂರ್ಣಸುಶೂನ್ಯಭಾವ
ಸ್ಸಚ್ಚಿತ್ರದೀಪ ಇವ ಭಾತಿ ತುರೀಯಯುಕ್ತಃ ॥ ॥೩೮॥

ವಾರಿನಿಧಾನಮಧ್ಯೇ–ಸಮುದ್ರದ ಮಧ್ಯದಲ್ಲಿ, ಸಂಪೂರ್ಣಕುಂಭ ಇವ–ನಿರ್ಮಲೋದಕದಿಂದೊಳಹೊರಗೆ ಪೂರ್ಣಮಾಗಿ ಮುಳುಗಿದ ಕುಂಭದಂತೆ. ವಿಷ್ಣು ಪದಾಂತರಾಲೇ –ಆಕಾಶಮಧ್ಯದಲ್ಲಿ, ಸಂಶೂನ್ಯಕುಂಭ ಇವ–ಒಳಹೊರಗೆ ಬಯಲನೊಳಗೊಂಡ ಘಟದಂತೆ, ಅಂತರ್ಬಹಿಃಪ್ರಥಿತಪೂರ್ಣಸುಶೂನ್ಯಭಾವಃ; ಅಂತರ್ಬಹಿಃ–ದಗ್ಧಪಟದಂತಿರ್ಪ ದೇಹದೊಳಹೊರಗೆ, ಪ್ರಥಿತ–ಪ್ರಸಿದ್ಧಮಾದ, ಪೂರ್ಣಸುಶೂನ್ಯಭಾವಃ–ಪೂರ್ಣಭಾವವು ಲೇಸಾದಶೂನ್ಯಭಾವವುಳ್ಳಂಥ (ದಿವ್ಯ ಪ್ರಕಾಶದೊಳ್ಮುಳುಂಗಿದುದೇ ಪೂರ್ಣಭಾವವೆನಿಪುದು, ದಿವ್ಯಾನಂದದೊಳ್ ಮುಳುಂಗಿದುದೇ

ಶೂನ್ಯಭಾವವೆಂಬರ್ಥ), ತುರೀಯಯುಕ್ತಃ–ತುರೀಯಾವಸ್ಥೆಯಿಂ ಕೂಡಿದಾತನ, ಸಚ್ಚಿತ್ರದೀಪ ಇವ: ಸತ್–ಲೇಸಾದ, ಚಿತ್ರದೀಪ ಇವ–ಚಿತ್ರದಲ್ಲಿ ಬರೆದ ದೀಪದಂತೆ, ಭಾತಿ–ಒಪ್ಪುತ್ತಿರ್ದಾನು.

ತಾತ್ಪರ್ಯ : ಅಪ್ಯಯಂ ಪರಿಪೂರ್ಣತ್ವಾತ್ಸ್ವಾಮಿಭಾವಾತ್ತದೀಶ್ವರಂ
ಶಿವತತ್ತ್ವಮಿದಂ ಪ್ರೋಕ್ತಂ ಸರ್ವಾಧ್ವೋಪರಿ ಸಂಸ್ಥಿತಂ ।
ಓಂಕಾರಾತ್ಮತಯಾ ಭಾತಿ ಶಾಂತ್ಯತೀತಃ ಪರಶಿವಃ
ಬೀಜಪಂಕಜಮಧ್ಯಸ್ಥಸ್ಸಮಸ್ತಾಧ್ವಮುಖಃ ಪ್ರಭುಃ ॥

ಎಂಬದಿವ್ಯಾಗಮಪ್ರಮಾಣದಿಂದೀ ಪಿಂಡಬ್ರಹ್ಮಾಂಡವನೊಳಕೊಂಡ ಅಖಂಡಿತಾನಂದ ಸ್ವರೂಪದಲ್ಲಿ ಮುಳುಂಗಿದ ಯೋಗೀಶ್ವರನು ತನ್ನ ವಿಮಲಶರೀರದೊಳ್ ಪ್ರಕಾಶ್ಯ ಪ್ರಕಾಶಕಭಾವವಿಲ್ಲದ ಚಿತ್ರದೀಪದಂತೆ ನಿಸ್ತರಂಗದಲ್ಲಿರಲದೇ ತುರ್ಯಾವಸ್ಥೆಯೆಂಬುದಭಿಪ್ರಾಯಂ.

ಅಂತಃಪೂರ್ಣೋ ಬಹಿಃಪೂರ್ಣಃ ಪೂರ್ಣಕುಂಭ ಇವಾಂಭಸಿ ।
ಅಂತಶ್ಶೂನ್ಯೋ ಬಹಿಶ್ಶೂನ್ಯಶ್ಶೂನ್ಯಕುಂಭ ಇವಾಂಬರೇ ॥

ಎಂಬುದಾಗಿ,

●

ಸೂ : ಅನಂತರದಲ್ಲಿ ತೂರ್ಯಾತೀತ ಅವಸ್ಥೆಯಂ ಪೇಳ್ದಪಂ–

ಕೈಶ್ಚಿದ್ಬ್ರಹ್ಮೇತಿ ಕೈಶ್ಚಿದ್ಧರಿರಿತಿ ಶಿವ ಇತ್ಯೇವ ಕೈಶ್ಚಿಚ್ಚನಾನಾ
ಭೇದೈಃ ಪ್ರೋಕ್ತಸ್ಸಶೂನ್ಯಃ ಪ್ರಕೃತಿ ಪುರುಷಕಾಲಾರ್ಥ ರೂಪೇಣಕೈಶ್ಚಿತ್ ।
ಲೋಕೈರನ್ಯೈರ್ವಿಕಲ್ಪೈರ್ಬಹುತರವಚನೈರ್ದೇಹಯುಕ್ತೋಽಪಿ ನಿತ್ಯಂ
ಮುಕ್ತಸ್ಸಾಧ್ಯಸ್ತುರೀಯಾಧಿಕವಿನುತಸಮಖ್ಯಾಮಪಸ್ಥಾಂ ಸಮೇತ್ಯ ॥ ॥೩೯॥

ಯಃ–ಯಾವ ಯೋಗೀಶ್ವರನು, ತುರೀಯಾಧಿಕವಿನುತಸಮಾಖ್ಯಾಂ–ತುರ್ಯಾವಸ್ಥೆಯಿಂ ದುತ್ತರಮೆಂದು ಪ್ರಸಿದ್ಧಮಾದ ಹೆಸರುಳ್ಳಂಥ, ಅವಸ್ಥಾಂ–ತುರ್ಯಾತೀತಾವಸ್ಥೆಯನ್ನು, ಸಮೇತ್ಯ–ಚೆನ್ನಾಗಿಯೆಯ್ದಿ, ದೇಹಯುಕ್ತೋಽಪಿ–ದೇಹದೊಡನೆ ಕೂಡಿದಾತನಾದರೂ, ನಿತ್ಯಂ–ಅನವರತವು, ಮುಕ್ತಃ–ನಿರ್ಲೇಪನಾಗಿರ್ದಾತನೋ, ಸಃ–ಆ ಜೀವನ್ಮುಕ್ತನಾದ ಪರಮಯೋಗೀಶ್ವರನು, ಕೈಶ್ಚಿತ್–ಪೌರಾಣಿಕರಾದ ಕೆಲಂಬರಿಂದೆ, ಬ್ರಹ್ಮೇತಿ–ಬ್ರಹ್ಮನೆಂದು, ಕೈಶ್ಚಿತ್–ಪಾಂಚರಾತ್ರರೆನಿಸುವ ಕೆಲಂಬರಿಂದೆ, ಹರಿರಿಶಿ–ಪುರುಷೋತ್ತಮನೆಂದು, ಕೈಶ್ಚಿತ್–ಶಿವಾಗಮಜ್ಞರಾದ ಕೆಲಂಬರಿಂದೆ, ಶಿವ ಇತಿ–ಶಿವನೆಂದು, ನಾನಾಭೇದೈಃ–ನಾನಾಪ್ರಕಾರವಾಗಿರ್ದಂಥ, ಕೈಶ್ಚಿತ್–ಬೌದ್ಧಾದಿಸಾಂಖ್ಯ ವೇದಾಂತಿಗಳಿಂದ ಕಾಲವದಿಗಳಿಂದ, ಶೂನ್ಯಪ್ರಕೃತಿಪುರುಷಕಾಲಾರ್ಥ ರೂಪೇಣ–ಕ್ರಮದಿಂ ಶೂನ್ಯ ರೂಪದಿಂ ಪ್ರಕೃತಿರೂಪದಿಂ ಪುರುಷಕಾಲಾರ್ಥ ರೂಪೇಣ–ಕ್ರಮದಿಂ ಶೂನ್ಯ ರೂಪದಿಂ ಪ್ರಕೃತಿರೂಪದಿಂ ಪುರುಷರೂಪದಿಂ ಕಾಲ ರೂಪದಿಂದಲೂ, ಅನ್ಯೈ–ಮತ್ತೆ ಕೆಲಂಬರಾದಂಥ ನೈಯಾಯಿಕ ವೈಶೇಷಿಕ ಪಾತಂಜಲ ಪಾಶುಪತ ಮಹಾವ್ರತ, ಕಾಪಾಲಾದಿವಾದಿಗಳಿಂದ, ವಿಕಲ್ಪೈಃ–ವಿಕಲ್ಪರೂಪಗಳಾಗಿರ್ಪಂಥ, ಬಹುತರವಚನೈಃ–ಕ್ರಮದಿಂ ಸಕಲಜಗತ್ಕರ್ತನೆಂಬ ಪ್ರಕೃತಿ ಸಾಕ್ಷಿಕನೆಂಬ ಪರಮೇಶ್ವರರೂಪನೆಂಬ ಜ್ಞಾನದಶಕ್ತಿಮಾತ್ರಸ್ವರೂಪನೆಂಬ ಅನಂತಪ್ರಕಾರವಾದ ನುಡಿಗಳಿಂದ, ಪ್ರೋಕ್ತಃ–ವಿಶೇಷದಿಂ ಪೇಳಲ್ಪಟ್ಟಂಥಾತನು, ಸ್ಯಾತ್–ಆಗುವನು.

ತಾತ್ಪರ್ಯ : ಉಮಾಸಹಾಯಂ ಪರಮೇಶ್ವರಂ ಪ್ರಭುಂ
ತ್ರಿಲೋಚನಂ ನೀಲಕಂಠಂ ಪ್ರಶಾಂತಂ ।
ಧ್ಯಾತ್ವಾ ಮುನಿರ್ಗಚ್ಛತಿ ಭೂತಯೋನಿಂ
ಸಮಸ್ತ ಸಾಕ್ಷಿಂ ತಮಸಃ ಪರಸ್ತಾತ್ ॥
ಸ ಬ್ರಹ್ಮಾ ಸ ಶಿವಸ್ಸೇಂದ್ರಸ್ಸೋಕ್ಷರಃ ಪರಮಸ್ಸ್ವರಾಟ್ ।
ಸ ಏವ ವಿಷ್ಣುಸ್ಸಪ್ರಾಣಃ ಸಕಾಲೋಽಗ್ನಿ ಸ್ಸಚಂದ್ರಮಾಃ ॥

ಉಮಾಸಮೇತನಾದ ಪರಮೇಶ್ವರನಾದ ಪ್ರಭುವಾದ ತ್ರಿಲೋಚನನಾದ ನೀಲಕಂಠನಾದ ಮೂಲಕಾರಣನಾದ ಸಕಲಸಾಕ್ಷಿಕನಾದ ಶಿವತತ್ವವನಾ ಕೃಷ್ಣ ತಾರಾ ಮಂಡಲದಿಂ ಮೇಲೆ ಧ್ಯಾನವ ಮಾಡಿದ ಯೋಗೀಶ್ವರಂ ಮುಕ್ತಾತ್ಮನಪ್ಪನಾತನೇ ಬ್ರಹ್ಮ ಶಿವ ಇಂದ್ರ ವಿಷ್ಣು ಕಾಲ ಅಗ್ನಿ ಚಂದ್ರ ದೇವತಾಸ್ವರೂಪನಪ್ಪನು ಎಂಬ ಶ್ರುತಿಪ್ರಮಾಣದಿಂ ಪರಶಿವಸಾಮರಸ್ಯದಿಂ ತುರ್ಯಾತೀತನೆನಿಸಿದ ಯೋಗೀಶ್ವರರನಾ ಸಮಸ್ತವಾದಿಗಳಿಂದವರವರ ಇಷ್ಟದೇವತಾಸ್ವರೂಪದಿಂ ಪೂಜ್ಯನಪ್ಪನೆಂಬುದಭಿಪ್ರಾಯ.

●

ಸೂ : ಈ ಪ್ರಕಾರದಿಂ ಪಂಚಮಾವಸ್ಥೆಯ ಸಾಮರ್ಥ್ಯಮಂ ಪೇಳ್ದು ನಾನಾ ಪ್ರಕಾರದಿಂದಾವಸ್ಥೆಯಾನೆ ಸಾಧಿಪುದೆಂದು ಪೇಳ್ದಪಂ–

ತಸ್ಮಾತ್ಸರ್ವಪ್ರಯತ್ನೇನ ಕ್ರಮಾದಭ್ಯಾಸಯೋಗತಃ ।
ತುರೀಯಾತೀತಕಾವಸ್ಥಾಂ ಸಮಾಸಾಧ್ಯ ಸುಖೀ ಭವ ॥ ॥೪೦॥

ತಸ್ಮಾತ್–ಆ ಸಕಲಲೋಕಪೂಜ್ಯನಪ್ಪಕಾರಣದಿಂ, ಸರ್ವಪ್ರಯತ್ನೇನ–ಆ ಪೂರ್ವೋದಿತಮಾದ ಬಹುಪ್ರಯತ್ನದಿಂದ, ಕ್ರಮಾತ್–ಪ್ರಾಕೃತ ವೈಕೃತ ಕೇವಲ ಕುಂಭಕಮುದ್ರಾನುಸಂಧಾನಲಕ್ಷ್ಯಾವಲೋಕನಾದಿ ರೂಪದಿಂ ಕ್ರಮವಾದಂಥ, ಅಭ್ಯಾಸ ಯೋಗತಃ–ನಿರಾಯಾಸಮಾದ ಧ್ಯಾನಯೋಗದತ್ತಣಿಂ, ತುರೀಯಾತೀತಕಾವಸ್ಥಾಂ–ತುರ್ಯಾತೀತವೆಂಬ ಅವಸ್ಥೆಯನ್ನು, ಸಮಾಸಾಧ್ಯ–ಚನ್ನಾಗಿ ಪಡೆದು, ಸುಖೀ–ದಿವ್ಯಾನಂದವುಳ್ಳಾತನು, ಭವ–ಆಗು.

ತಾತ್ಪರ್ಯ : "ಮಧ್ಯೇ ವೈರಾಗ್ಯಂ ಕೇಸರೇ ಜಾಗ್ರದವಸ್ಥಾ ಕರ್ಣಿಕಾಯಾಂ ಸ್ವಪ್ನಂ ಲಿಂಗೇ ಸುಷುಪ್ತಿಃ ಪದ್ಮತ್ಯಾಗೇ ತುರೀಯಂ ಯದಾಹಂ ಸೋ ನಾದೇ ವಿಲೀನೋ ಭವತಿ ತತ್ತುರಿಯಾತೀತಂ ಅಥೋ ನಾದಮಾಧಾರಾತ್ ಬ್ರಹ್ಮರಂಧ್ರ ಪರ್ಯಂತಂ ಶುದ್ಧ ಸ್ಫಟಿಕಸಂಕಾಶಸ್ಸವೈ ಬ್ರಹ್ಮಪರಮಾತ್ಮೇತ್ಯುಚ್ಯತೇ" ಎಂಬ ಶ್ರುತಿಪ್ರಮಾಣದಿಂ ತುರ್ಯಾತೀತನೇ ಪರಮಾತ್ಮರೂಪನೆಂಬುದಭಿಪ್ರಾಯಂ.

●

ಸೂ : ಈ ಪಂಚಾವಸ್ಥೆಯಂ ಪಡೆದಾತನು ಪ್ರಾರಬ್ಧವಾಸನಾಬಲದಿಂ ಪೂರ್ವವಸ್ಥೆಗಳನೆಯ್ದಲಾಯಾ ಅವಸ್ಥೆಗಳಲ್ಲಿ ಮುಳುಂಗಲಾಗದೆಂದು ಪೇಳ್ದಪಂ–

ಸರ್ವಾವಸ್ಥಾಂ ಗತೋ ವಾಽಪಿ ಸರ್ವಾವಸ್ಥಾಂ ನ ಸಂಸ್ಮರ ।
ತ್ಯಜ ಸಂಗಮಶೇಷಂ ಚ ಮನೋಽಂತರ್ಬಹಿರನ್ವಿತಂ ॥ ॥೪೧॥

ಸರ್ವಾವಸ್ಥಾಂ–ಜಾಗ್ರತ್ಸ್ವಪ್ನಮೊದಲಾದ ಅವಸ್ಥೆಯನ್ನು, ಗತೋಽಪಿ–ಎಯ್ದಲ್ಪಟ್ಟಾತನಾದರೂ, ಸರ್ವಾವಸ್ಥಾಂ–ಆ ಪೂರ್ವಾವಸ್ಥೆಯನು, ನ ಸಂಸ್ಮರ ನೆನೆಯದಿರು, ಮನೋಽಂತರ್ಬಹಿರನ್ವಿತಂ; ಮನಃ –ಮನಸ್ಸನ್ನು, ಅಂತಃ–ಒಳಗೆ ಸ್ವಪ್ನದಲ್ಲಿ, ಬಹಿಃ–ಹೊರಗೆ ಜಾಗ್ರದಲ್ಲಿ, ಅನ್ವಿತಂ–ಕೂಡಿದಂಥ, ಅಶೇಷಂ–ಸಮಸ್ತವಾದಂಥ, ಸಂಗಂ–ಶುದ್ಧಾಶುದ್ಧವಿಷಯ ಸಂಗವನ್ನು, ತ್ಯಜ–ಬಿಡು.

●

ಸೂ : ಅನಂತರದಲ್ಲಿ ಅಮನಸ್ಕಸಂಜ್ಞೆಯುಳ್ಳ ಆರನೆಯದಾದ ಸಹಜಾವಸ್ಥೆಯನ್ನೆಯ್ದಲು ಪೂರ್ವಾಭ್ಯಾಸ ಕರ್ಮಂಗಳಂ ಬಿಡಲ್ಬೇಕೆಂದು ಪೇಳ್ದಪಂ–

ನಿವರ್ತಯಾನ್ಯಕರ್ಮಾಣಿ ಶಿವಯೋಗಂ ಪ್ರವರ್ತಯ ।
ಸಹಜಾಮಮನಸ್ಕಾಂತಾಂ ಮುದ್ರಾಂ ಸಂವಿನ್ಮಯೀಂ ಭಜ ॥ ॥೪೨॥

ಅನ್ಯಕರ್ಮಾಣಿ–ತಾರಕಾಭ್ಯಾಸದಿಂದನ್ಯವಾದ ಕರ್ಮಂಗಳನು, ನಿವರ್ತ್ತಯ–ಬಿಡಿಸು, ಶಿವಯೋಗಂ –ಪೂರ್ವೋದಿತಮಾದ ಶಿವಯೋಗಮನೇ, ಪ್ರವರ್ತಯ–ನಡೆಸು, ಸಹಜಾಂ–ಸಹಜಾವಸ್ಥೆಯೆನಿಸಿದಂಥ, ಸಂವಿನ್ಮಯೀಂ–ಕಾರಣವಿಲಕ್ಷಣವಾದ ಜ್ಞಾನಮಾತ್ರವೇ ಸ್ವರೂಪವಾದಂಥ, ತಾಂ–ಆ ಪೂರ್ವೋದಿತಮಾದಂಥ, ಅಮನಸ್ಕಾಂ–ಅಮನಸ್ಕಸಂಜ್ಞೆಯುಳ್ಳಂಥ, ಮುದ್ರಾಂ–ಮುದ್ರೆಯನ್ನು, ಭಜ –ಭಜಿಸು.

ತಾತ್ಪರ್ಯ : ದುರ್ಲಭೋ ವಿಷಯತ್ಯಾಗೋ ದುರ್ಲಭಂ ತತ್ತ್ವದರ್ಶನಂ ।
ದುರ್ಲಭಾ ಸಹಜಾವಸ್ಥಾ ಸದ್ಗುರೋಃ ಕರುಣಾಂ ವಿನಾ ॥

ಎಂಬುದಾಗಿ, ವಿಷಯವ್ಯಾಪಾರಂಗಳಂ ಬಿಟ್ಟಂಥ ತತ್ತ್ವಜ್ಞಾನಿಗಲ್ಲದೆ ಸಹಜಾವಸ್ಥೆಯಾಗ ದೆಂಬುದಭಿಪ್ರಾಯ.

●

ಸೂ : ಅನಂತರದಲ್ಲಿ ಅಮನಸ್ಕಮುದ್ರಾಸ್ವರೂಪಮಂ ಪುನರಪಿ ಪ್ರಕಾರಾಂತರದಿಂ ಪೇಳ್ದಪಂ–

ಆತ್ಮಾನಂ ಗಗನಂ ಕೃತ್ವಾ ಬಿಂದುಂ ಕೃತ್ವಾ ತಥೈವ ಚ ।
ದ್ವಯಂ ಸಮರಸಂ ಕುರ್ಯಾದಮನಸ್ಕಕಲಾ ಹಿ ಸಾ ॥ ॥೪೩॥

ಆತ್ಮಾನಂ–ಧ್ಯಾತೃರೂಪನಾದ ತನ್ನನ್ನು, ಗಗನಂ–ನಿರಾಲಂಬವನಾಗಿ, ಕೃತ್ವಾ–ಮಾಡಿ, ಬಿಂದುಂ –ಧ್ಯೇಯರೂಪವಾದ ಬಿಂದುವನ್ನು, ತಥೈವ ಚ–ಹಾಗೆಯೇ ನಿರಾಲಂಬವನಾಗಿ, ಕೃತ್ವಾ–ಮಾಡಿ, ದ್ವಯಂ–ಧ್ಯಾತೃಧ್ಯೇಯರೂಪಮಾದ ಎರಡನ್ನು, ಸಮರಸಂ–ಸಾಮರಸ್ಯವನ್ನಾಗಿ, ಕುರ್ಯಾತ್–ಮಾಡುವದು, ಸಾ–ಅದು, ಹಿ–ಪ್ರಸಿದ್ಧಮಾಗಿ, ಅಮನಸ್ಕಕಲಾ–ಅಮನಸ್ಕ ಸಂಜ್ಞೆಯುಳ್ಳಂಥ ಕಲೆಯು.

ತಾತ್ಪರ್ಯ : ವ್ಯೋಮಲೀನಮನಸ್ಸಮ್ಯಕ್ ವ್ಯೋಮಸ್ಥೋ ವ್ಯೋಮತನ್ಮಯಃ ।
ಪರಂ ಮೋಕ್ಷಮವಾಪ್ನೋತಿ ಯತ್ರ ಶಬ್ದೋ ಲಯಂ ಗತಃ ॥

ಎಂದುದಾಗಿ, ಧ್ಯಾತೃಧ್ಯೇಯವೆಂಬ ಉಭಯೋಪಾಧಿಗಳ ತೊಲಗಿಕೆಯಿಂ ನಿರಾಲಂಬತ್ವ ಮೆಂತೆಂದೊಡೆ. ಧ್ಯಾತ್ಮಲೀನವೈಖರಿಗೆ ಮಂತ್ರಸ್ವರೂಪವಾಗಿ, ಆತನ ಮಧ್ಯಮೆಗೆ ಅಜಪಾರೂಪವಾಗಿ,

ಆತನ ಪಶ್ಯಂತಿಗೆ ಬಹುವಿಧಲಕ್ಷ್ಯರೂಪವಾಗಿ ಆತನ ಸೂಕ್ಷ್ಮೆಗೆ ಬಹುವಿದರೂಪವಾಗಿ, ಆತನ ಆನಂದಕ್ಕೆ ನಾದಾಂತವೆನಿಸಿ, ಆತನ ಅಖಂಡಿತಜ್ಞಾನಕ್ಕೆ ಪರಪ್ರಕಾಶಮಾದ ದಿವ್ಯಶಕ್ತಿಯೆನಿಸಿ, ಆತನ ಆತ್ಮಾರಾಮಕ್ಕೆ ಸ್ವಪ್ರಕಾಸನೆನಿಸಿ ವಿಕ್ಷಿಪ್ತಗತಾಗತಸಂಶ್ಲಿಷ್ಟಸ್ವಲೀನವೆಂಬ ಶುದ್ಧಮನದ ಅವಸ್ಥಾಭೇದದಿಂ ಸಕಲಕ್ಕೆ ನಿಷ್ಕಲಮಾಗಿ ನಿಷ್ಕಲಕ್ಕೆ ನಿಷ್ಕಲಮಾಗಿ ನಿರಾಲಂಬಕೆ ನಿರಾಲಂಬವಾಗಿ ಮನವಳಿದು ನಿಂದ ಸಮರಸಭಾವವೇ ಅಮನಸ್ಕಕಲೆಯೆನಿಪುದಾಗಿ,

ಸ್ವಯಮಮನಸ್ಕಮಶ್ರೋತ್ರಮಪಾಣಿಪಾದಂ ಜ್ಯೋತಿರ್ವಿಹಿತಂ

ಶ್ರೋತ್ರಪಾಣಿ ಪಾದಾದಿಕಲ್ಪನೆಯಿಲ್ಲದೆ ನಿರಾಲಂಬಮಾದ ಸ್ವಯಂಜ್ಯೋತಿಯೇ ಅಮನಸ್ಕವೆಂದು ಅರಿಯಲ್ಪಟ್ಟಿತು–ಎಂಬ ಶ್ರುತಿಪ್ರಮಾಣದಿಂದೆ ಸಹಜಾವಸ್ಥೆಯೆಂಬುದಭಿಪ್ರಾಯಂ.

●

ಸೂ : ಈ ಅಮನಸ್ಕಕಲಾಪ್ರಾಪ್ತಿಯನ್ನೇ ಶಿಷ್ಯನು ಮರಳಿ ಬೆಸಗೊಳುತಿರ್ದಪಂ–

ಸ್ವಪ್ನಜಾಗರಣಾತೀತಂ ಮೃತಿಜೀವನವರ್ಜಿತಂ ।

ಸ್ವಾಮಿ^ನ್ ಶಿ^ವಾಮನಸ್ಕಾಖ್ಯಂ ಗಮಿಷ್ಯಾಮಃ ಕಥಂ ವಯಂ ॥ ॥೪೪॥

ಶಿವ–ನಿರ್ಮಲರೂಪನಾಗಿರ್ಪಂಥ, ಸ್ವಾಮಿನ್–ಎಲೈ ಶ್ರೀಗುರುವೇ, ಸ್ವಪ್ನ ಜಾಗರಣಾತೀತಂ–ಮನೋವ್ಯಾಪಾರಮಾದ ಸ್ವಪ್ನವನ್ನು ಬಾಹ್ಯೇಂದ್ರಿಯ ವ್ಯಾಪಾರಮಾದ ಜಾಗರಣವನ್ನು ಮೀರಿದಂಥ, ಮೃತಿಜೀವನವರ್ಜಿತಂ–ಅಜ್ಞಾನವೆಂಬ ಮರಣದಿಂದಲೂ ಜ್ಞಾನವೆಂಬ ಬಾಳ್ವೆಯಿಂದಲೂ ತೊಲಗಿರ್ಪಂಥ, ಅಮನಸ್ಕಾಖ್ಯಂ–ಅಮನಸ್ಕವೆಂಬ ಹೆಸರುಳ್ಳ ಅವಸ್ತಾಸ್ವರೂಪವನ್ನು, ವಯಂ– ನಾವು, ಕಥಂ–ಹೇಗೆ, ಗಮಿಷ್ಯಾಮಃ–ಎಯ್ದುವೆವು.

●

ಸೂ : ಈ ಕೇಳ್ದ ಶಿಷ್ಯಂಗೆ ಆಚಾರ್ಯನು ಉಪದೇಶಿಸುತಿರ್ದಪಂ–

ಸಚರಾಚರಮಖಿಲಂ ಯತ್ಕಿಂಚಿದಿದಂ ತದ್ಭವೇನ್ಮನೋದೃಶ್ಯಂ ।

ಮನಸೋಽಪ್ಯುನ್ಮನತಾಂ ಯೋ ಯಾತಿ ಸ ತತ್ತ್ವಂ ಕಥಂ ನ ಭವೇತ್ ॥ ॥೪೫॥

ಸಚರಾಚರಂ–ಚೇತನಾಚೇತನದೊಡನೆ ಕೂಡಿದಂಥ, ಅಖಿಲಂ–ಸಮಸ್ತವಾಗಿರ್ಪಂಥ, ಯತ್ಕಿಂಚಿತ್–ಆವುದಾನೊಂದುಂಟೋ, ತದಿದಂ–ಆ ಸಕಲಪ್ರಪಂಚವು, ಮನೋದೃಶ್ಯಂ–ಮನದಿಂದೆ ಕಾಣಲು ಯೋಗ್ಯವಾದಂಥಾದ್ದು, ಭವೇತ್ ಆಗುವುದೋ, ಯಃ–ಯಾವನು, ಮನಸೋಽಪಿ–ಮನಸಿನದೆಶೆಯಿಂದಲೂ, ಉನ್ಮನತಾಂ–ತೊಲಗಿರ್ಪಂಥ ಗತಿಯನ್ನು, ಯಾತಿ–ಎಯ್ದುತ್ತಿಹನೋ, ಸಃ–ಆತನು, ತತ್ತ್ವಂ–ಆ ಅಮನಸ್ಕಸ್ವರೂಪವು, ಕಥಂ–ಹೇಗೆ, ನ ಭವೇತ್–ಆಗನು?

ತಾತ್ಪರ್ಯ : ಅಳಿವುದಾಗಿ ಆ ಮನವ ನಿರಾಂಬದೊಳಿರಿಸಲಾತಂಗೆ ತಾನೆ ಉನ್ಮನೀಸಿದ್ಧಿಯಪ್ಪುದು ಎಂಬುದಭಿಪ್ರಾಯಂ.

೧–೧ ಂಥಿ (ಕ).

ಯಥಾ ನಿರಿಂಧನೋ ವಹ್ನಿಸ್ಸ್ವಯಮೇವ ಪ್ರಶಾಮ್ಯತಿ ।

ಗ್ರಾಹ್ಯಾಭಾವಾನ್ಮನಸ್ತದ್ವತ್ಸ್ವಯಮೇವ ವಿಲೀಯತೇ ॥

ಎಂದುದಾಗಿ,

●

ಸೂ : ಈ ಪ್ರಕಾರದಿಂ ಉನ್ಮನೀಸ್ವರೂಪಸಿದ್ಧಿಯಂ ಪೇಳ್ದಪಂ–

ಅಥವಾ ಯತ್ರ ಮನಸ್ಸಂಯಾತಿಹಿತತ್ರೈವ ತನ್ಮನಸ್ಸ್ಥಾಪ್ಯಂ ।

ತತ್ಕಾರಣಾಲ್ಲಯಸ್ಸ್ಯಾದ್ವೃದ್ಧಿಸ್ಸ್ಯಾದ್ವಾರ್ಯಮಾಣಂ ತು ॥ ॥೪೬॥

ಅಥವಾ–ಮಂದಾಧಿಕಾರಿಗೆ ನಿರಾಲಂಬಾನುಸಂಧಾನದಿಂ ಮನೋಲಯವಾಗದ ಪಕ್ಷದಲ್ಲಿ, ಯತ್ರ–ಪೂರ್ವೋದಿತಮಾದ ಲಕ್ಷ್ಯಂಗಳೊಳಗೆ ಆವಲಕ್ಷ್ಯದಲ್ಲಿ, ಮನಃ–ಮನಸ್ಸು, ಸಂಯಾತಿ–ಚನ್ನಾಗಿ ಎಯ್ದುತ್ತಿದ್ದೀತೋ, ತತ್ರೈವ–ಆ ಲಕ್ಷ್ಯದಲ್ಲಿಯೇ, ಹಿ–ಪ್ರಸಿದ್ಧವಾಗಿ, ತನ್ಮನಃ–ಆ ಮನವು, ಸ್ಥಾಪ್ಯಂ–ಇರಿಸಲುಯೋಗ್ಯವು, ತತ್ಕಾರಣಾತ್–ಆ ಬೈಂದವಭೋಗವು ತೀರ್ದು ಆ ಲಕ್ಷ್ಯವು ಕಾರಣರೂಪಮಪ್ಪುದರಿಂದೆ, ಲಯಃ–ಆ ಮನದ ಲಯವು, ಸ್ಯಾತ್–ಆಹುದು, ವಾರ್ಯಮಾಣಂ ತು–ತಡೆಯಲ್ಪಟ್ಟಂತಹುದಾದರೆ, ವೃದ್ಧಿಃ–ಆ ಮನೋ ವ್ಯಾಪಾರದ ಹೆಚ್ಚಿಗೆಯು, ಸ್ಯಾತ್–ಆಹುದು.

ತಾತ್ಪರ್ಯ : ಬರಬರಲತಿಸೂಕ್ಷ್ಮರೂಪದಿಂ ಕೆಡುತಿರ್ಪ ಜಲಪ್ರವಾಹಮಂ ತಡೆಯಲದೇ ಜಲರಾಶಿಯಪ್ಪಂತೆ ಉತ್ತರೋತ್ತರಲಕ್ಷ್ಯಾನುಸಂಧಾನದಿಂ ಕೆಡುತ್ತ ಬರ್ಪ, ಮನಮಂ ತಡೆಯಲಾ ಮನಂ ಪೆರ್ಚುವದಾಗಿ ಸವಿಕಲ್ಪಕಬೈಂದವಾನಂದ ಭೋಗವಾಸನೆಯುಳ್ಳಾತನು ಎಲ್ಲಿ ಮನವೈದಿತಲ್ಲಿಯೇ ಮನೋಲಯಮಂ ಕಾಣಬೇಕೆಂಬುದಭಿಪ್ರಾಯಂ.

●

ಸೂ : ಊರ್ಧ್ವಾಧೋಗತಿಹೇತುಶ್ಚ ನಾದಶ್ಚಿತ್ತಸ್ಯ ಕೀರ್ತಿತಃ

ತಸ್ಮಾನ್ನಾದೇ ಮನಸ್ಸಮ್ಯಕ್ ಲೀನಂ ಕುರ್ಯಾದ್ವಿಚಕ್ಷಣಃ ॥

ಸೋನ್ಮನೀ ಕಥಿತಾಽವಸ್ಥಾ ಶಿವೇನ ಶಿವಶಾಸನೇ ।

ಎಂಬ ಆಗಮ ಪ್ರಮಾಣದಿಂದ ನಾದದೊಳ್ಮುಳುಂಗಿ ನಿರಾಲಂಬಯೋಗದಿಂದ ಉನ್ಮನ್ಯವಸ್ಥೆಯನೆಯ್ದಿದ ಮನವಾಬೈಂದವಭೋಗ ವಾಸನಾಬಲದಿಂದಂಕುರಿಸಿ ಅಧೋಮುಖವಾಗಿ ಪ್ರವರ್ತಿಸಿದೊಡಂ ಮರಳಿ ನಿರಾಬಲಂಬಸ್ಥಾನದಲ್ಲಿಯೇ ಲಯವನೆಯ್ದುವುದೆಂಬುದಂ ದೃಷ್ಟಾಂತಪೂರ್ವಕವಾಗಿ ಪೇಳ್ದಪಂ–

ಯಥೇಚ್ಛಯಾ ಮನೋಗಚ್ಛತ್ಸ್ವಯಮೇವ ನಿರ್ವತೇ ।

ನಿರಂಕುಶೇನ ವಿಧಿನಾ ಕರೀವ ಸಮದೋತ್ಕಟಃ ॥ ॥೪೭॥

ನಿರಂಕುಶೇನ–ಅಂಕುಶವಿಲ್ಲದೆ ಇರುವ, ವಿಧಿನಾ–ವ್ಯಾಪಾರದಿಂದ, ಸಮದೋತ್ಕಟಃ–ಮದೋತ್ಕಟದಿಂ ಕೂಡಿದಂಥ, ಕರೀವ–ಆನೆಯು ಹೇಗೋ ಹಾಗೇ, ಯಥೇಚ್ಛಯಾ–ಭೋಗವಾಸನೆಯ ಅನುಸಾರದಿಂದ, ಗಚ್ಛತ್–ವಿಷಯೋನ್ಮುಖನಾಗಿ ಐದುತಿರ್ದಂಥ, ಮನಃ–ಮನವು, ಸ್ವಯಮೇವ–ತಾನೇ, ನಿವರ್ತತೇ–ನಿರಾಲಂಬವೆಂಬ ಮಹಾಸ್ಥಾನಕ್ಕೆ ತಿರುಗುತ್ತಿಹುದು.

ತಾತ್ಪರ್ಯ : ಯಥಾ ನಿರಂಕುಶೋ ಹಸ್ತೀ ಕಾಮಾನ್ಪ್ರಾಪ್ಯ ನಿವರ್ತತೇ ।

ಅವಾರಿತಂ ಮನಸ್ತದ್ವತ್ಸ್ವಯಮೇವ ನಿವರ್ತತೇ ॥

ಎಂದುದಾಗಿ, ಲೋಕವ್ಯವಹಾರದಲ್ಲಿ ಕುಕುಂಬೆಯನ್ನೇರಿ ಸಮುದ್ರಮಧ್ಯವನ್ನೈದಿದ ವಾಯಸನಂತೆ ಮನವಂಕುರಿಸಿ ಎಲ್ಲಿ ಚಲಿಸಿದರೂ ನಿರಾಲಂಬಸ್ಥಾನದಲ್ಲಿಯೇ ಬಂದು ಅಳಿವುದಾಗಿ ಅದೇ ಶಿವಜೀವನ ಸಾಮರಸ್ಯವೆಂಬುದಭಿಪ್ರಾಯವು.

●

ಸೂ : ಯೋಗಸಾಧನಮಾದ ಅವಸ್ಥೆಗಳೊಳಗೆ ಉನ್ಮನ್ಯವಸ್ಥೆಯೇ ವಿಶೇಷವೆಂದು ಪೇಳ್ದಪಂ–

ನಾದ ಏವ ಲಯಶ್ರೇಷ್ಠೋ ಮುದ್ರಾಣಾಂ ಖೇಚರೀ ಪರಾ ।

ದೇವಶ್ರೇಷ್ಠೋ ನಿರಾಲಂಬೋ ಹ್ಯವಸ್ಥಾ ಸುಮನೋನ್ಮನೀ ॥ ॥೪೮॥

ಯೋಗೀಶ್ವರನು ಪೇಳ್ದ ಬಹುವಿಧವಾದ ಲಯಯೋಗದಲ್ಲಿ, ನಾದೇ–ನಾದಬ್ರಹ್ಮದಲ್ಲಿಯ, ಲಯ ಏವ–ಮನೋಲಯವೇ, ಶ್ರೇಷ್ಠ–ವಿಶೇಷವು, ಮುದ್ರಾಣಾಂ–ನಾನಾಪ್ರಕಾರ ಮುದ್ರೆಗಳಿಗೆ, ಖೇಚರೀ –ಖೇಚರೀಮುದ್ರೆಯೇ, ಪರಾ–ಮಿಗಿಲಾಗಿರ್ಪಂಥಾದ್ದು, ನಿರಾಲಂಬಃ–ನಿರುಪಾಧಿಕವಸ್ತುವೇ, ದೇವ ಶ್ರೇಷ್ಠ–ಧ್ಯೇಯವಾದ ದೇವತಾಮೂರ್ತಿಗಳೊಳಗೆ ವಿಶೇಷವು, ಅವಸ್ಥಾಸು–ಅವಸ್ಥೆಗಳೊಳಗೆ, ಮನೋನ್ಮನೀ –ಮನೋನ್ಮನಿಯೆಂಬವಸ್ಥೆಯೇ ವಿಶೇಷವು.

ತಾತ್ಪರ್ಯ : ಅಮನಸ್ಕಂ ನಿರಾಲಂಬಂ ತತ್ವಂ ನಯತಿಯಾ ಪರಂ ।

ಮನೋನ್ಮನ್ಯಸ್ಯ ದೇವಸ್ಯ ಪ್ರೋಕ್ತಾ ಶಕ್ತಿರ್ಮನೋನ್ಮನೀ ॥

ಎಂದುದಾಗಿ, ಪರತತ್ವಪ್ರಾಪ್ತಿಗೆ ನಿಮಿತ್ತಮಾದಕಾರಣ ಉನ್ಮನ್ಯವಸ್ಥೆಯನೇ ಅಭ್ಯಾಸಮಂ ಮಾಳ್ಪುದೆಂಬುದಭಿಪ್ರಾಯ.

●

ಸೂ : ಈ ಮನೋನ್ಮನಿಯೆಂಬ ಅವಸ್ಥೆಯಂ ಪಡೆದು ಜೀವನ್ಮುಕ್ತನಾದ ಯೋಗೀಶ್ವರನ ವರ್ತನಮಂ ಪೇಳ್ದಪಂ–

ರಾಜಯೋಗಸ್ಯ ಮುದ್ರಾಂ ತಾಮೇತ್ಯ ಯೋಗೀ ಮನೋನ್ಮನೀಂ ।

ವಿಚರತ್ಯಖಿಲಾನ್ಲೋಕಾನ್ ಬಾಲೋನ್ಮತ್ತಪಿಶಾಚವತ್ ॥ ॥೪೯॥

ಯೋಗೀ – ರಾಜಯೋಗೀಶ್ವರನು, ರಾಜಯೋಗಸ್ಯ–ಅಮನಸ್ಕವೆನಿಸುವ ರಾಜಯೋಗದ, ಮುದ್ರಾಂ–ಮುದ್ರೆಯಾದಂಥ, ಮನೋನ್ಮನೀಂ–ಮನೋನ್ಮನಿಯೆಂಬ ಸಹಾಜಾವಸ್ಥೆಯನ್ನು, ಏತ್ಯ–ಪಡೆದು, ಅಖಿಲಾನ್–ಸಮಸ್ತವಾಗಿರ್ಪಂಥ, ಲೋಕಾನ್–ಲೋಕಂಗಳನ್ನು, ಬಾಲೋನ್ಮತ್ತಪಿಶಾಚವತ್ –ವಿಕಲ್ಪರಹಿತವಾದ ಜ್ಞಾನದಿಂ ಬಾಲಕನಂತೆ ವಿಧಿನಿಷೇಧ ವ್ಯಾಪಾರಂಗಳಿಲ್ಲದಿರ್ಪುದರಿಂದೆ ಉನ್ಮತ್ತನಂತೆ ಲೋಕರಂಜಿತವಾದ ವೇಷವಿಲ್ಲದಿರ್ಪುದರಿಂ ಪಿಶಾಚನಂತೆ, ವಿಚರತಿ–ಚರಿಸುತ್ತಿಹನು.

ತಾತ್ಪರ್ಯ : ನಾದಮಧ್ಯಗತಾ ಶಕ್ತಿರುನ್ಮನೀತಿ ಪ್ರಕೀರ್ತಿತಾ ।

ಸೈವಾವಸ್ಥಾ ನ ಕಿಂ ಯಸ್ಮಾದಣೋರ್ನಿರ್ವೃತ್ತಿದಾಯಿನೀ ॥

ಉನ್ಮನ್ಯವಸ್ಥಾ ತತ್ಪ್ರೋಕ್ತಾ ಮೋಚಿಕಾಪರಮೇಶ್ವರೀ ॥

ಎಂಬ ಆಗಮಪ್ರಮಾಣಂ ನಾದಮಧ್ಯಗತಮಾದ, ಅನುಗ್ರಹರೂಪಿಣಿಯಾದ ಮೋಚಿಕೆಯೆಂಬ ಶಿವಶಕ್ತಿಯೇ ಮನೋನ್ಮನಿಯೆನಿಸಿಕೊಂಬುದಾಗಿ ಆ ನಾದದೊಳ್ಮುಳುಂಗಲಾ ಶಿವಶಕ್ತಿಯೊಳಾತ್ಮಚೈತನ್ಯ ವಾಕಾಶಪ್ರಕಾಶಯೋಗದಂತೆ ಬೆರೆಯಲಾತನೇ ಜೀವನ್ಮುಕ್ತನೆನಿಸಿ, ಪ್ರಾರಬ್ಧವಾಸನೆಯ ನಾಶಪರ್ಯಂತವಾಗಿ ಚರಿಸುತ್ತಿರ್ಪನೆಂಬುದಭಿಪ್ರಾಯ.

ವಿಕಲ್ಪರಹಿತಂ ಜ್ಞಾನಮದೃಷ್ಟರಹಿತಾ ಕ್ರಿಯಾ ।
ಆಲೋಕರಂಜಕಂ ರೂಪಂ ಜೀವನ್ಮುಕ್ತಸ್ಯ ಲಕ್ಷಣಂ ॥

ಎಂದುದಾಗಿ,

●

ಸೂ : ಆ ಅಮನಸ್ಕಯೋಗವೇ ಜೀವನ್ಮುಕ್ತಿಗೆ ಮುಖ್ಯಕಾರಣವೆಂಬುದು ಸಕಲಶಾಸ್ತ್ರಸಿದ್ಧವೆಂದು ಪೇಳ್ದಪಂ–

ಜೀವನ್ಮುಕ್ತಿಪ್ರಕಾರಸ್ಯ ಯೋಗ ಏವ ನ ಚಾನ್ಯಥಾ ।
ಸ ಏವ ಸಿದ್ಧಿದಸ್ಸಮ್ಯಕ್ ಸರ್ವದರ್ಶನ ಸಂಮತಃ ॥ ॥೫೦॥

ಜೀವನ್ಮುಕ್ತಿಪ್ರಕಾರಸ್ಯ–ಶರೀರವಿಡಿದು ಮುಕ್ತನೆನಿಸುವ ಬಗೆಗೆ, ಯೋಗ ಏವ–ಅಮನಸ್ಕರಾಜಯೋಗವೇ (ದಿವ್ಯಸಾಧಕವೆಂಬುದು ವಾಕ್ಯವಿಶೇಷವು). ಅನ್ಯಥಾ ಚ–ಈ ಅಮನಸ್ಕವಲ್ಲದೆ ಅನ್ಯಪ್ರಕಾರದಿಂದ, ನ–ಮೋಕ್ಷವಿಲ್ಲ, ಅದು ಕಾರಣದಿಂ, ಸ ಏವ–ಆ ಮನಸ್ಕಯೋಗವೇ, ಸಿದ್ಧಿದಃ–ಮೋಕ್ಷಸಿದ್ಧಿಯಂ ಕೊಡುವದೆಂದು, ಸಮ್ಯಕ್–ಚೆನ್ನಾಗಿ, ಸರ್ವದರ್ಶನಸಂಮತಃ–ಸಕಲಸಮಯಕ್ಕೆ ಅಂಗೀಕಾರವು.

ತಾತ್ಪರ್ಯ : ಓಂಕಾರಸ್ಯ ವಿಧಿರ್ವಿಚಿತ್ರಕರಣೈಃ ಪ್ರಾಣಸ್ಯ ವಾಯೋರ್ಜಯ ।
ಸ್ತೇಜಶ್ಚಿಂತನಮಾತ್ಮದಿವ್ಯಕಮಲೇ ಶೂನ್ಯಾಂಬರಾಲಂಬನೈಃ ॥

ತ್ಯಕ್ತಾಸರ್ವಮಿದಂ ಕಳೇವರಗತಂ ಚಿತ್ರಂ ಮನೋವಿಭ್ರಮಂ ।
ದೇಹಾತೀತಮಚಿಂತ್ಯಮೇಕಮಮನಸ್ಕತ್ವಂ ಪರಂ ಸೇವ್ಯತಾಂ ॥

ಎಂಬ ಆಗಮ ಪ್ರಮಾಣದಿಂದ ಅಮನಸ್ಕವೇ ಕೈವಲ್ಯಸಾಧನವೆಂಬುದಭಿಪ್ರಾಯ.

●

ಸೂ : ಆಚಾರ್ಯನೀಪ್ರಕಾರಂಗಳಂ ಪೂರ್ವೋದಿತಮಾದ ಮಂತ್ರ ಲಯ ಹಠ ರಾಜವೆಂಬ ಚತುರ್ವಿಧಯೋಗಂಗಳಿಗೆ ಸಕಲಯೋಗ ಶಾಸ್ತ್ರಂಗಳೊಳ್ ಪ್ರಸಿದ್ಧವಾದ ಆರಂಭಭೂಮಿಕೆ ಘಟಭೂಮಿಕೆ ಪ್ರಚಯಭೂಮಿಕೆ ನಿಷ್ಪತ್ತಿಭೂಮಿಕೆ ಎಂಬ ನಾಲ್ಕು ಭೂಮಿಕೆಗಳಲ್ಲಿ ಕ್ರಮದಿಂದೇಕತ್ವಮಂ ಸೂಚಿಸುತಿರ್ದಪಂ–

ಮಂತ್ರಲಯಾವಾರಂಭಕಘಟಸಂಜ್ಞೌ ಹಠಃ ಪ್ರಚಯಸ್ಸ್ಯಾತ್ ।
ಸನ್ನಿಷ್ಪತ್ತಿರಿತಿಸ್ಮೃತ ಏಷ ಮಹಾರಾಜಯೋಗಸ್ತು ॥ ॥೫೧॥

ಮಂತ್ರಲಯೌ-ಪೂರ್ವೋದಿತಮಾದ ಮಂತ್ರಲಯಯೋಗಂಗಳು, ಆರಂಭಕಘಟ ಸಂಜ್ಞಾ-ಕ್ರಮದಿಂದಾರಂಭಭೂಮಿಕೆ ಘಟಭೂಮಿಕೆಯೆಂಬ ಹೆಸರುಳ್ಳವಾಗುತ್ತಿಹವು. ಹಠಃ-ಹಠಯೋಗವೇ, ಪ್ರಚಯಃ-ಪ್ರಚಯ ಎಂಬ ಭೂಮಿಕೆಯು, ಸ್ಯಾತ್-ಆಹುದು, ಏಷಃ-ಈ ಮುಕ್ತಿಸಾಧನವೆಂದು ಹೇಳಲ್ಪಟ್ಟಂಥ, ಮಹಾರಾಜಯೋಗಸ್ತು-ಅತಿವಿಶಿಷ್ಟವಾದ ರಾಜಯೋಗವಾದರೆ, ಸನ್ನಿಷ್ಪತ್ತಿರಿತಿ-ಲೇಸಾದ ನಿಷ್ಪತ್ತಿಭೂಮಿಕೆಯೆಂದು, ಸ್ಮೃತಃ-ನೆನೆಯಲ್ಪಟ್ಟಿತು.

ತಾತ್ಪರ್ಯ : ಆಭ್ಯೋ ನ ಪರಮೋ ಬಂಧ ಆಭ್ಯೋ ಮುಕ್ತಿಶ್ಚ ನಾಪರಃ ।

ಎಂಬ ಶಿವಾಗಮಪ್ರಮಾಣದಿಂ ಪರೆ ಪಶ್ಯಂತಿ ಮಧ್ಯಮೆ ವೈಖರಿ ಎಂಬ ಚತುರ್ವಿಧ ಶಬ್ದಂಗಳು ಅಧೋಮುಖಂಗಳಾಗಲವೇ ಆತ್ಮಂಗೆ ಪರಮಬಂಧಂಗಳು, ಊರ್ಧ್ವ ಮುಖಂಗಳಾಗಲವೇ ಮುಕ್ತಿಸಾಧನಂಗಳಾದ ಕಾರಣ, ಯೋಗೀಶ್ವರನ ಬಾಹ್ಯವ್ಯಾಪಾರಂಗಳನುಳಿದು ಇಷ್ಟಾಸನದಲ್ಲಿ ಕುಳಿತು ಮೊದಲಲ್ಲಿ ದಿನವೊಂದಕ್ಕೆ ಇಪ್ಪತ್ತೊಂದು ಸಾವಿರಆರನೂರುವೇಳೆ ಜಪಿಸುವ ಪ್ರಾಕೃತಪ್ರಾಣಾಯಾಮ ರೂಪಮಾದ ಹಂಸ ಮಂತ್ರಮಂ ವಿಪರೀತದಿಂ ಸೋಹಂಭಾವಮಂ ಮಾಡಿ ಸಕಾರದಿಂ ಪೂರಿಸಿ ಹಕಾರದೊಡನೆ ಕೂಡಿ ರೇಚಿಸುವ ವಾಯುಮಂ ಭ್ರೂಮಧ್ಯದ ತ್ರಿಕೋಣಸ್ಥಾನದ ಶುದ್ಧ ಪ್ರಸಾದಬೀಜದಲ್ಲಿ ನಿಲಿಸುತ್ತಿರಲವೇ ಆರಂಭ ಭೂಮಕೆ ಎನಿಸುವುದು. ಅದರ ಫಲಯಾವುವೆಂದೊಡೆ-ಕಾಯಕ್ಕೆ ಕಾಂತಿಯು ನಾಸಿಕಕ್ಕೆ ಸುಗಂಧವು ಮುಖಕ್ಕೆ ಪ್ರಸನ್ನತೆಯ ನೇತ್ರಂಗಳಿಗೆ ನಿರ್ಮಲತೆಯು ಕರ್ಣಕ್ಕೆ ಮೃದಂಗ ಮೇಘ ಭೇರಿಧ್ವನಿಗಳ ಅಭಿವ್ಯಕ್ತಿಯು ಮನಕ್ಕೆ ಆನಂದೋದ್ಬೋಧಕವೂ ಅಪ್ಪುದಾಗಿ ಅದೇ ಮಂತ್ರಯೋಗವೆನಿಪ್ಪುದು. ಅನಂತರದಲ್ಲಿ ಮನೋಮಾರುತಂಗಳೊಳ್ ಕೂಡಿ ಗಗನಮಂಡಲದಲ್ಲಿ ಸ್ಥಿರವಾಗಿ ನಿಲ್ಲಲು, ಅದೇ ಘಟಭೂಮಿಕೆಯೆನಿಪುದು. ಅದರ ಫಲವು ಆವುದು ಎಂದೊಡೆ, ಕಹಳೆ ಶಂಖ ಘಂಟಾ ನಾದಂಗಳು ಸಾಕ್ಷಾತ್ಕಾರವಪ್ಪುದಾಗಿ, ಅದೇ ಲಯಯೋಗಯೆನಿಪುದು. ತದನಂತರದಲ್ಲಿ ರೇಚಕಪೂರಕಂಗಳಲ್ಲದೆ ಕೇವಲ ಕುಂಭಕದಿಂ ಇಂದ್ರಿಯ ಸಮಷ್ಟಿಯಿಂ ಕೂಡಿದ ಮನಂ ಗಂಭೀರಮಾದ ದುಂದುಭಿಧ್ವಾನದಲ್ಲಿ ಮುಳುಂಗಲದೇ ಪ್ರಚಯಭೂಮಿಕೆಯೆನಿಸುವುದು. ಅಣಿಮಾದಿಸಿದ್ಧಿಗಳೇ ಅದರ ಫಲಂಗಳಪ್ಪುವಾಗಿ, ಅದೇ ಹಠಯೋಗವೆನಿಸುವುದು, ತದನಂತರದಲ್ಲಿ ಆ ಗಂಭೀರನಾದನೇ ಪರನಾದದಲ್ಲಿ ಅಡಗಿ, ಧ್ಯಾನಧ್ಯೇಯ ಭಾವಾಭಾವಂಗಳಿಲ್ಲದೆ ಮಹಾಶೂನ್ಯದಲ್ಲಿಯ ಸಮರಸಭಾವವೇ ನಿಷ್ಪತ್ತಿಭೂಮಿಕೆಯೆನಿಪುದು, ಅದಕ್ಕೆ ಜೀವನ್ಮುಕ್ತಿಯೇ ಫಲವಪ್ಪುದು, ಅದೇ ಅಮನಸ್ಕರಾಜಯೋಗವೆನಿಪುದಾಗಿ, ಸಕಲಯೋಗೋತ್ತರಮಾದ ಈ ಅಮನಸ್ಕವನೇ ಅಭ್ಯಾಸಮಂ ಮಾಳ್ಪುದು. ಇದಕ್ಕೆ ಸಮ್ಮತಿ-

ಹಂಸೇತಿ ಜೀವಃ ಖಲು ಷಟ್ಯತಾಧಿಕಂ ಸದಾ ಜಪತ್ಯೇಕಸಹಸ್ರವಿಂಶತಿಂ ।
ಜಪಸ್ಯ ಸರ್ವಸ್ಯ ಚ ವೈಪರೀತ್ಯಮಾರಂಭಭೂಮಿಂ ಪ್ರವದಂತಿ ಸಿದ್ಧಾಃ ॥

ತತೋಮಿಳಿತ್ವೈವಮನೋಮರುಚ್ಚಗ್ರಂಥಿಂ ವಿಭಿದ್ಯತ್ರಯಮೇತಿ ಸುಸ್ಥಿರಃ
ಅಪೂರ್ವಕಾಯೋ ಗಗನಂ ಸುಪೂರ್ಣೋ ಘಟಾಖ್ಯಭೂಮಿಂ ಪ್ರವದಂತಿ ಸಿದ್ಧಾಃ ॥

ಮನೋಮರುತ್ಪ್ರಾಪ್ಯವಿನೈವ ಪೂರಾದ್ವಿನೈವ ಕುಂಭೇಸತಿ ಪೂರ್ಣಶೈಲೇ
ಮನೋಲಯಂ ಯಾತ್ಯನಿಶಂತಥಾಂತರೇ ವದಂತಿ ಸಿದ್ಧಾಃ ಪ್ರಚಯಾಖ್ಯ ಭೂಮಿಕಾಂ ॥

ನಿಷ್ಪತ್ತಿಭೂಮಾವಥದುಂದುಭಿರ್ಧ್ವನಿಸ್ಸಂಶ್ರೂಯತೇಸೋಽಪಿಲಯಂ ಪ್ರಯಾತಿ ।
ಸ್ವಪುಣ್ಯಪಾಪಂ ವಿಲಯಂ ಪ್ರಯಾತಿ ಕರೋತಿ ದೇಹಸ್ಯ ಲಯಂತಥಾತ್ಮನಃ ॥

ಎಂದುದಾಗಿ, ಈ ನಾಲ್ಕು ಪ್ರಕಾರದಿಂ ಸಾಧಿಸುವ ನಾದಬ್ರಹ್ಮವು ಘೋಷವೆಂದುರವವೆಂದು ಸ್ವನವೆಂದು ಶಬ್ದವೆಂದು [೧]ವಿಸ್ಫೋಟಕವೆಂದು[೧] ಧ್ವನಿಯೆಂದು ಝೋಂಕಾರವೆಂದು ಧ್ವಂಕೃತಿಯೆಂದು ಕ್ರಮದಿಂದೆಂಟು ಪ್ರಕಾರಮಾಗಿಪ್ಪುದಾಗಿ, ಶ್ರೋತ್ರಂಗಳನಂಗುಷ್ಠದಿಂದೊತ್ತಿ ಕೇಳ್ವ ನಾದವೇ ಘೋಷವೆನಿಸುವುದು, ಒಡೆಗಂಚಿನ ಧ್ವನಿಯಂತೆ ಕೇಳಲದೇ ರಾವವೆನಿಸುವದು, ಉಪಾಂಗಧ್ವನಿಯಂತೆ ಕೇಳಲು ಅದೇ ಸ್ವನವೆನಿಸುವದು. ನುಡಿವ ಅಕ್ಷರಂಗಳಲ್ಲಿ ಅನುಸ್ಯೂತವಾದುದೇ ಶಬ್ದವೆನಿಸುವದು. ಮನದಲ್ಲಿ ಸಂಕಲ್ಪರೂಪದಿಂ ವರ್ತಿಸಲದೇ ಸ್ಫೋಟವೆನಿಸುವದು, ಮೃದುವಾದ ವೀಣಾಧ್ವನಿಯಂತೆ ಘಂಟಾನಾದದ ಕಡೆಯಂತೆ ಕೇಳಲದೇ ಧ್ವನಿಯೆನಿಸುವದು. ಕುಸುಮಾಮೋದಕ್ಕೆರಗಿದ ತುಂಬಿಯ ಧ್ವನಿಯಂತೆ ಕೇಳಲದೇ ಝೋಂಕೃತಿವೆನಿಪುದು. ಶಂಖಿಕಹಳಾಧ್ವಾನದಂತೆ ಕೇಳಲದೇ ಧ್ವಂಕೃತವೆನಿಪುದು, ಆ ಧ್ವಂಕೃತವೇ ಸಕಲನಾದಲಯ ಸ್ಥಾನವಪ್ಪುದರಿಂದದೇ ಪ್ರಣವವೆನಿಪುದು, ಆ ಪ್ರಣವವೇ ಶಿವತತ್ವವೆನಿಪುದು. ಆ ಅಖಂಡಿತನಾದಸ್ವರೂಪನಾದ ಶಿವತತ್ವವೇ ಆಧಾರವಾಗುಳ್ಳ ಪರಿಪೂರ್ಣವಾದ ಪರಮಕಾಷ್ಠಿಭಾವಮೆನಿಸುವ ಮಹಾಶಿವಶಕ್ತಿಯಲ್ಲಿ ಜೀವನ್ಮುಕ್ತನ ಅನವಚ್ಛಿನ್ನ ಚೈತನ್ಯಂ ತದಾಕಾರದಿಂ ಕ್ಷೀರದೊಳ್ ಕ್ಷೀರಂ ಘೃತದೊಳ್ ಘೃತಂ ಬೆರೆದಂತೆ ಬೆರಸಿ, ಸರ್ವಸಾಕ್ಷಿಕತ್ವದಿಂ ನಿಸ್ತರಂಗದಲ್ಲಿ ನಿಂದ ನಿಲವೇ ಅಮನಸ್ಕರಾಜಯೋಗವೆಂಬುದಕ್ಕೆ ಸಮ್ಮತಿ :

ಮಮಾತ್ಮೀಯಮಿದಂ ಸೂಕ್ಷ್ಮಶರೀರಂ ನಾದಸಂಜ್ಞಕಂ ।
ಪಶುಪಾಶಾಪನೋದಾಯ ಪ್ರಕಾಶೀಕೃತಮದ್ಭುತಂ ॥

ಘೋಷೋ ರಾವಸ್ಸ್ವನಶ್ಯಬ್ದಸ್ಫೋಟಾಖ್ಯೋಧ್ವನಿರೇವ ಚ ।
ಝೋಂಕಾರೋ ಧ್ವಂಕೃತಶ್ಚೈವ ಶಬ್ದೇ ಏವಾಷ್ಟಮೋ ರವಃ ॥

ಶ್ರವಣಾಂಗುಷ್ಠ ಸಂಯೋಗಾದ್ಯಶ್ಯಬ್ದಸ್ಸಂಪ್ರಜಾಯತೇ
ದೀಪ್ತವಹ್ನಿಶಿಖಾತುಲ್ಯೋ ಘೋಷ ಇತ್ಯಭಿಧೀಯತೇ ॥

ಭಿನ್ನಕಾಂಶೋ ಯಥಾರೂಕ್ಷೋ ರಾವೇತಿ ಪರಿಕೀರ್ತಿತಃ ।
ತತೋ ವಂಶಧ್ವನಿಸ್ಸೂಕ್ಷ್ಮನಿವಾತವೃಷ್ಟಿಸನ್ನಿಭಃ ॥

ಸ ಸ್ವನಃ ಪರಮಸೂಕ್ಷ್ಮೋ ಯತ್ತತ್ಪರಮನಾಮಯಂ ।
ಚತುರ್ಥಸ್ತು ಮಹಾಶಬ್ದಸ್ಸರ್ವ ಶಬ್ದೌಘಚಾರಕಃ ॥

ಪಂಚಮಸ್ತು ಮಹಾಶಬ್ದಸ್ಸರ್ವಯೋಗಿಹಿತಾವಹಃ ।
ಮನಸ್ಸದಾ ಕ್ರಮಧಾನ್ಯಂ ಸ್ಫೋಟ ಏವ ಪಡೀರಿತಃ ॥

೧–೧ ಸ್ಫೋಟವೆಂದು (ಕ).

ಶಾಶ್ವತೋನಾದಿರವ್ಯಕ್ತಸ್ಸಶಬ್ದಧ್ವನಿಲಕ್ಷಣಃ ।
ಮೃದುವೀಣಾಸ್ವನಶ್ಯಬ್ದಶ್ಯಾಂತಘಂಟಾನಿನಾದವತ್ ॥

ಕುಸುಮಾಮೋದಮತ್ತಾನಾಂ ಷಟ್ಪದಾನಾಮಿವಧ್ವನಿಃ ।
ಝೇಂಕಾರಸ್ತುಸ್ಮೃತಶ್ಶಬ್ದಸ್ಸಮಸ್ತಪರಮೇಶ್ವರೀ ॥

ಶಂಖಾಕಹಳಸಂಘಾತ[1]ವಜ್ರಘಾತ[1] ಸಂಭೈರವಃ ।
ಧ್ವಂಕೃತೇಷು ಸ್ಮೃತಶ್ಶಬ್ದಬ್ದಾಂತಲಯಮಾಲಯಂ ॥

ಸ ಶಿವಂ ಶಿವತತ್ವಂ ಸ್ಯಾಧ್ವಂಕೃತಃ ಪ್ರಣವಸ್ಮೃತಃ
ಆಸ್ಯ ಸಂಶ್ರವಣಾದ್ದೇವಿ ನಾದಸ್ಯಾಯತಲೋಚನೇ ॥
ಪರಮಂ ಸ್ಯಾಕ್ತುನಿರ್ವಾಣಂ ಚ್ಛಿನ್ನಪಾಶನಿಬಂಧನಂ ।

ಎಂಬ ಶಿವಾಗಮಪ್ರಮಾಣದಿಂ ದಿವ್ಯನಾದಾನುಸಂಧಾನದಿಂದಾದ ಅಮನಸ್ಕರಾಜಯೋಗದಿಂ ಪರಮಕೈವಲ್ಯಪ್ರಾಪ್ತಿಯಪ್ಪುದೆಂಬುದಭಿಪ್ರಾಯಂ

●

ಸೂ : ಈ ಅಮನಸ್ಕವೆಂಬ ನಿಷ್ಪತ್ತಿಯೋಗಮಂ ಪಡೆದ ಮಹಾಪುರುಷಂಗೆ ದೇಹವಿಕಾರಗಳೊಂದೂ ತೋರವೆಂದು ಪೇಳ್ದಪಂ–

ತಾಪತ್ರಯಂ ನವವಿಧವ್ಯವಹಾರಭಾವಾಷ್ಷಟ್ಕೌಶಿಕಾನಿ ಷಡಮಿತ್ರಕ ಪಂಚಕೋಶಾಃ ।
ಷಡ್ಭಾವನಾವಿಕೃತಯಶ್ಚ ಷಡೂರ್ಮಯಶ್ಚ ನಿಷ್ಪತ್ತಿಯೋಗ ಮಹತಾಂ ಭುವಿನಸ್ಯುರೇವ ॥೫೨॥

ತಾಪತ್ರಯಂ–ಹೊರಗೆ ವ್ಯಾಧಿರೂಪದಿಂದ ಒಳಗೆ ರಾಗದ್ವೇಷಾದಿಗಳಿಂ ಪುಟ್ಟುವ ಆಧ್ಯಾತ್ಮಿಕವೆನಿಪ ದುಃಖವೂ, ರಾಜಚೋರಗವ್ಯಾಘ್ರ ಸರ್ಪಭೂತಾದಿಗಳಿಂದ ಪುಟ್ಟಿದ ಆಧಿಭೌತಿಕವೆಂಬ ದುಃಖವೂ, ಶೀತಾತಪಾದಿಗಳಿಂ ಯಕ್ಷರಾಕ್ಷಸಾದಿಗಳಿಂ ಪುಟ್ಟುವ ಆಧಿದೈವಿಕವೆಂಬ ದುಃಖವೂ ಎಂಬ ತಾಪತ್ರಯವು, ನವವಿಧವ್ಯವಹಾರ ಭಾವಾಃ, ವ್ಯವಹಾರ–ಪಂಚೇಂದ್ರಿಯ ಅಂತಃಕರಣಚತುಷ್ಟಯವೆಂಬ ನವವಿಧವಾದವುಗಳ, ವ್ಯವಹಾರ–ವ್ಯಾಪಾರಂಗಳ, ಭಾವಾಃ–ಸ್ವರೂಪಂಗಳು, ಷಟ್ಕೌಶಿಕಾನಿ–ಮಜ್ಜೆ ಅಸ್ಥಿ ಶುಕ್ಲ ಮೇದಸ್ಸು ರಕ್ತ ಮಾಂಸಗಳೆಂಬ ಷಟ್ಕೌಶಿಕಗಳು, ಪಂಚಕೋಶಾಃ–ಅನ್ನಮಯ ಪ್ರಾಣಮಯ ಮನೋಮಯ ವಿಜ್ಞಾನಮಯ ಆನಂದಮಯವೆಂಬ ಪಂಚಕೋಶಂಗಳು, ಷಡ್ಭಾವನಾವಿಕೃತಯಶ್ಚ ಅಸ್ತಿ–ಉಂಟೆಂಬ, ಜಯತೇ–ಹುಟ್ಟುತ್ತಿದ್ದೀತೆಂಬ, ವಿಪರಿಣಮತೆ–ಹೆಚ್ಚಲುದ್ಯೋಗಿಸುತ್ತಿದ್ದೀತೆಂಬ, ವಿನಶ್ಯತೆ –ಕೆಡುತ್ತಿದ್ದೀತೆಂಬ ಷಡ್ಭಾವವಿಕಾರಂಗಳು, ಷಡೂರ್ಮಯಶ್ಚ–ಕ್ಷುತ್ತು ಪಿಪಾಸೆ ಶೋಕ ಮೋಹ ಜನನ ಮರಣಂಗಳೆಂಬ ಷಡೂರ್ಮಿಗಳು, ನಿಷ್ಪತ್ತಿಯೋಗಮಹತಾಂ–ನಿಷ್ಪತ್ತಿಯೋಗವುಳ್ಳ ಮಹಾಪುರುಷರ್ಗೆ, ಭುವಿ–ಭೂಲೋಕದಲ್ಲಿ, ನಸ್ಯುರೇವ–ಆಗುವದೇ ಇಲ್ಲ

೧–೧ ವಜ್ರಪಾತ (ಕ).

ತಾತ್ಪರ್ಯ : ಈ ಸಮಸ್ತದೇಹಧರ್ಮಂಗಳು ದೇಹಗಳಿಗಲ್ಲದೆ ನಿರ್ದೇಹಿಯಾದ ಜೀವನ್ಮುಕ್ತಂಗೆ ಇಲ್ಲವೆಂಬುದಭಿಪ್ರಾಯಂ.

●

ಸೂ : ಅನಂತರದಲ್ಲಿ ಈ ಜ್ಞಾನಯೋಗದಿಂದಪ್ಪ ಅನಿಷ್ಟಪರಿಹಾರಮಂ ಇಷ್ಟಪ್ರಾಪ್ತಿಯಂ ಪೇಳ್ದಪಂ–

ಮಹಾದೀಪ್ತ ವಹ್ನಿರ್ದಹೇಚ್ಛುಷ್ಕಮಾರ್ದ್ರಂ ಯಥಾ ಪುಣ್ಯ ಪಾಪತ್ಮಕಂ ಸರ್ವಕರ್ಮ ।

ತಥಾ ನಿರ್ದಹೇತ್ತತ್ಕ್ಷಣಾದ್ಜ್ಞಾನವಹ್ನಿಸ್ತತೋ ಮುಕ್ತಿಮಾಯಾತಿ ನಿಷ್ಪತ್ತಿಯೋಗೀ॥ ॥೫೩॥

ಮಹಾದೀಪ್ತವಹ್ನಿಃ–ಅತಿವಿಶೇಷವಾಗಿ ಉರಿಯಲ್ಪಟ್ಟ ಅಗ್ನಿಯು, ಶುಷ್ಕಂ–ಒಣಗಿದ ಮರವನು, ಆರ್ದ್ರಂ–ಹಸಿಯ ಮರವನ್ನು, ಯಥಾ–ಹೇಗೆ, ದಹೇತ–ಸುಡುವದೋ, ತಥಾ–ಹಾಗೆ, ಪುಣ್ಯಾಪಾಪಾತ್ಮಕಂ –ಪುಣ್ಯಾಪಾಪವಾಗಿರ್ದಂಥ, ಸರ್ವಕರ್ಮ–ಸಂಚಿತ ಪ್ರಾರಬ್ಧರೂಪಮಾದ ಕರ್ಮವನ್ನು, ಜ್ಞಾನವಹ್ನಿ– ಆತ್ಮವೆಂಬ ಪ್ರಣವವೆಂಬ ಕಾಷ್ಠದ್ವಯಂಗಳ ಮಥನದಿಂ ಜನಿತವಾದ ಮನೋನ್ಮನೀಜ್ಞಾನ ರೂಪವಾದಗ್ನಿಯು, ತತ್ಕ್ಷಣಾತ್–ತಾನು ಪ್ರವೇಶಿಸಿದ ಕ್ಷಣದಲ್ಲಿಯೇ, ನಿರ್ದಯೇತ್–

(ಆತ್ಮಾನಮರಣಿಂ ಕೃತ್ವಾ ಪ್ರಣವಂ ಚೋತ್ತರಾರಣಿಂ ।

ಧ್ಯಾನನಿರ್ವಥನಾಭ್ಯಸಾತ್ಸರ್ವಪಾಪಕ್ಷಯೋ ಭವೇತ್ ॥

ಎಂಬ ಶ್ರುತಿಪ್ರಮಾಣದಿಂ) ಚೆನ್ನಾಗಿ ಸುಡುವದು. ತತಃ–ಆ ಜ್ಞಾನದ ದೆಸೆಯಿಂದ, ನಿಷ್ಪತ್ತಿಯೋಗೀ –ನಿಷ್ಪತ್ತಿಭೂಮಿಕಾಸಿದ್ಧನಾದ ಯೋಗೀಶ್ವರನು, ಮುಕ್ತಿಂ–ಶಿವಸಮಾನತಾ ರೂಪವಾದ ಮೋಕ್ಷವನ್ನು, ಯಾತಿ–ಹೊಂದುವನು.

ತಾತ್ಪರ್ಯ : ಯೋಗೀಶ್ವರನಾವಿಧಿನಿಷೇಧಕವರ್ಣಾನುಷ್ಠಾನಮಿಲ್ಲದಿರ್ಪುದರಿಂದೆ ಅಧೋಮಾಯೆಯಂ ನೂಕಿ ದಿವ್ಯ ದೀಕ್ಷೆಯಿಂದಾಣವಂ ನಿವಾರಿಸಿ ನಾದಬಿಂದುಕಲಾನು ಸಂಧಾನದಿಂದಾದ ದಿವ್ಯಾನಂದಮಂ ತಣಿಯಲುಂಡು, ಪರಮ ವೈರಾಗ್ಯದಿಂದಾ ಬೈಂದವಬಂಧಮಂ ನಿರಾಕರಿಸಿ, ಸಕಲಸಾಕ್ಷಿಕನಾಗಿ ಅನಾಖ್ಯಮಾದ, ನಿರಾಲಂಬವಾದ ಅಗ್ರಾಹ್ಯವಾದ, ಪ್ರಮಾಣಾತೀತವಾದ, ಸಕಲತತ್ವೋತ್ತೀರ್ಣವಾದ ಸ್ವಪರಪ್ರಕಾಶವಾದ ನಿಜವಸ್ತುವಿನಲ್ಲಿ ಸಾಮರಸ್ಯಮಂ ಪಡೆದು ಪುನರಾವೃತ್ತಿಯಿಲ್ಲದಿರ್ಪನೆಂಬುದಭಿಪ್ರಾಯಂ.

ಅನಾಖ್ಯೇ ತು ನಿರಾಲಂಬೇ ಅಗ್ರಾಹ್ಯೇ ಮಾನವರ್ಜಿತೇ ।

ನಿಸ್ತತ್ವೇ ಯೋಜಿತೋ ಮುಕ್ತ ಇತಿ ಶಾಸ್ತ್ರಸ್ಯ ನಿಶ್ಚಯಃ ॥

ಎಂದುದಾಗಿ.

●

ಸೂ : ಈ ಪೂರ್ವೋಕ್ತಸಾಧಕನೀ ಅಮನಸ್ಕಯೋಗದೊಳಲ್ಪಕಾಲವಿರ್ದು, ಪೂರ್ವಯೋಗ ಕ್ಕಿಳಿದರೂ ಈ ಯೋಗವೇ ಸಕಲಕರ್ಮಕ್ಷಯಮಂ ಮಾಳ್ಪುದೆಂದು ಪೇಳ್ದಪಂ–

ಅತ್ಯಲ್ಪದೀಪಸ್ಸು ಮಹತ್ತಮಸ್ತು ವಿನಾಶಯೇದ್ಯೋನಿಬಿಡಂ ಹಠಾದ್ಯಥಾ ।

ಅಲ್ಪೋಪ್ಯಹೋ ಯೋಗಸಮಾಧಿರೇಷಾ ವಿನಾಶಯೇತ್ಕರ್ಮತು ಶುಭಾಶುಭಂ ತಥಾ ॥೨೪॥

ಯಃ–ಆವುದಾನೊಂದು, ಅತ್ಯಲ್ಪದೀಪಃ–ಅತ್ಯಲ್ಪಪ್ರಕಾಶವಾದದೀಪವು, ನಿಬಿಡಂ–ದಟ್ಟಿಸಿದಂಥ, ಸಮಹತ್ತಮಸ್ತು–ಅತ್ಯಂತ ವಿಶೇಷಮಾದ ಕತ್ತಲೆಯನ್ನಾದರೂ, ಹಠಾತ್–ಬಲಾತ್ಕಾರದಿಂದ, ಯಥಾ –ಹೇಗೆ, ವಿನಾಶಯೇತ್–ಕೆಡಿಪದೋ, ತಥಾ–ಹಾಂಗೆ, ಏಷಾ–ಈ, ಯೋಗಸಮಾಧಿಃ–ಅಮನಸ್ಕಯೋಗ ಸಮಾಧಿಯು, ಅಲ್ಪೋಽಪಿ–ಅಲ್ಪವಾಯಿತ್ತಾದರೂ, ಶುಭಾಶುಭಂ ಕರ್ಮ–ಪುಣ್ಯಾಪಾಪರೂಪವಾದ ಕರ್ಮವನ್ನು, ವಿನಾಶಯೇತ್–ಕೆಡಿಪುದು, ಅಹೋ–ಆಶ್ಚರ್ಯವು!

●

ಸೂ : ಈಗಲೇ ಯೋಗಾಭ್ಯಾಸಮಂ ಮಾಡಲುದ್ಯೋಗಿಸಿದ ಮಾತ್ರಕ್ಕೆ ಬರ್ಪ ಫಲಮಂ ಪೇಳ್ದಪಂ–

ಯೋ ಯದ್ಯೋಗಸಮುದ್ಯತೋಽವನಿತಲೇ ಯಾತ್ಯಂತರಾವಾಪದಂ

ಶಿವಲೋಕಂ ಸಮವೇತ್ಯ ಶಾಶ್ವತಸುಖಂ ತತ್ರಾನುಭೂಯ ಸ್ವಯಂ ।

ಅಭಿಜಾಯೇತ್ ಮನಸ್ವಿನಾಂ ಶ್ರುತಿ ಮತಾಂ ಯಸ್ಮಿನ್ಕುಲೇ ಯೋಗಿನಾಂ

ಸ ತು ಸಂಪ್ರಾಪ್ಯನಿವರ್ತಯತ್ಯಭವಯೋಗಂ ತಂ ಶಿವಾಖ್ಯಂ ಪುನಃ ॥ ॥೨೫॥

ಯಃ–ಯಾವನು, ಅವನಿತಲೇ–ಭೂಲೋಕದಲ್ಲಿ, ಯೋಗಸಮುದ್ಯತಃ–ಶಿವಯೋಗಾಭ್ಯಾಸಮಂ ಮಾಡಲುದ್ಯುಕ್ತನಾಗಿ, ಯತ್–ಯಾವ, ಅಂತರಾವಾ–ಮಧ್ಯದಲ್ಲಿಯಾದರೂ, ಆಪದಂ–ಆತನಾದೊಡೆ, ಶಿವಲೋಕಂ–ಸಾಲೋಕ್ಯಪದವೆನಿಸುವ ಶಿವಲೋಕವನ್ನು ಸಮವೇತ್ಯ–ಪಡೆದು, ತತ್ರ–ಆ ಕೈಲಾಸಾಧಿಸ್ಥಾನದಲ್ಲಿ, ಶಾಶ್ವತಸುಖಂ–ಹರಿಹಂಚಿಲ್ಲದ ಸುಖವನ್ನು, ಅನುಭೂಯ–ಅನುಭವಿಸಿ, ಸ್ವಯಂ –ತಾನು, ಮನಸ್ವಿನಾಂ–ವಿವೇಕಿಗಳಾದಂಥ, ಶ್ರುತಿಮತಾಂ–ಶಾಸ್ತ್ರ ಸಂಪನ್ನರಾದಂಥ, ಯೋಗಿನಾಂ–ಯೋಗೀಶ್ವರರ, ಯಸ್ಮಿತ್–ಯಾವ, ಕುಲೇ–ಉತ್ತಮಕುಲದಲ್ಲಿ, ಅಭಿಜಾಯತೇ–ಹುಟ್ಟುತ್ತಿಹನೋ, ಪುನಃ –ಮರಳಿ, ತಂ–ಆ ಪೂರ್ವಜನ್ಮದಲ್ಲಿ ಉದ್ಯೋಗಿಸಲ್ಪಟ್ಟಂಥ, ಶಿವಾಖ್ಯಂ–ಶಿವ ಯೋಗವನ್ನು, ಸಂಪ್ರಾಪ್ಯ –ಪಡೆದು, ನಿವರ್ತಯತಿ–ಸಂಸಾರವಿಚ್ಛಿತ್ತಿಯಂ ಮಾಡುತ್ತಿರ್ಪನು ಎಂಬುದಭಿಪ್ರಾಯ.

●

ಸೂ : ಈ ಶಿವಯೋಗೀಶ್ವರನ ಯೋಗಸಾಮರ್ಥ್ಯದಿಂದನೇಕರು ಕೃತಾರ್ಥರಪ್ಪರೆಂದು ಪೇಳ್ದಪಂ–

ಬ್ರಹ್ಮಣಿ ಪರೇ ಹೃದಯಮಪಿ ಯಸ್ಯ ಲೀನಂ ತಸ್ಯ ಪಿತರಾವಿಹಪರೇಽತಿ ಚರಿತಾರ್ಥೌ ।

ತಸ್ಯ ಕುಲಜಾಸ್ಸ್ಯುರನಘಾ ಜಗತಿ ಸರ್ವೇ ತಸ್ಯ ಪದಸಂಘಟಿತ ಭೂರತಿಪವಿತ್ರಾ ॥೨೬॥

ಯಸ್ಯ–ಯಾವನ, ಹೃದಯಮಪಿ,–ಮನವು, ಪರೇ–ಪರಮಾತ್ಮಸ್ವರೂಪವಾಗಿರ್ಪಂಥ, ಬ್ರಹ್ಮಣೀ –ನಾದಬ್ರಹ್ಮದಲ್ಲಿ, ಲೀನಂ–ಲಯಿಸಲ್ಪಟ್ಟಿತೋ, ತಸ್ಯ–ಆತನ, ಪಿತರೌ–ತಾಯಿತಂದೆಗಳು, ಇಹಪರೇ–ಈಲೋಕ ಪರಲೋಕದಲ್ಲಿ, ಅತಿ ಚರಿತಾರ್ಥೌ–ಅತ್ಯಂತ ಕೃತಾರ್ಥರುಗಳು, ತಸ್ಯ–ಆ ಯೋಗೀಶ್ವರನ, ಕುಲಜಾಃ–ಉಭಯಕುಲದಲ್ಲಿ ಜನಿತರಾದಂಥ, ಸರ್ವೇ–ಸಮಸ್ತರು, ಜಗತಿ–ಲೋಕದಲ್ಲಿ, ಅನಘಾಃ–

ಪಾಪರಹಿತರು, ಸ್ಯು–ಆಗುತ್ತಿಹರು, ತಸ್ಯ–ಆ ಯೋಗೀಶ್ವರನ, ಪದಸಂಘಟಿತಭೂಃ–ಪಾದಂಗಳಿಂದ ಮೆಟ್ಟಿದ ಭೂಮಿಯು, ಅತಿಪವಿತ್ರಾ–ಅತ್ಯಂತ ಪವಿತ್ರವಾದಂಥಾದ್ದಾಗಿಹುದು.

ತಾತ್ಪರ್ಯ : ಏಕೋ ಹಿ ಯತ್ರ ಶಿವಯೋಗಸಮಾಹಿತಾತ್ಮಾ ।

ಪದ್ಭ್ಯಾಂಪವಿತ್ರಯತಿ ಪಾವನಪಾದುಕಾಭ್ಯಾಂ ॥

ಎಂಬ ಪುರಾಣ ವಚನದಿಂದಲೂ,

ರೂಪೇ ರೂಪೇ ದಶ ಪೂರ್ವಾನ್ ಪುನಾತಿ ದಶೋತ್ತರಾನಾಚಕ್ಷುಃ ಪಂಕ್ತಿಂ ಪುನಾತಿ ।

ಎಂಬ ಶ್ರುತಿಪ್ರಮಾಣದಿಂದಲೂ ಆ ಶಿವಯೋಗೀಶ್ವರನಲ್ಲಿ ಜನಿಸುವನಲ್ಲಿ ತನ್ನಿಂ ಪೂರ್ವಮಾದ ದಶಕುಲವನು ತನ್ನಿಂದುತ್ತರವಾದ ದಶಕುಲವನು ಕೃತಾರ್ಥರಂ ಮಾಡಿ ತಾನಿರ್ದ ಭೂಮಿಯಂ ಪುಣ್ಯಕ್ಷೇತ್ರಮಂ ಮಾಳ್ಪನೆಂಬುದಭಿಪ್ರಾಯಂ.

●

ಸೂ : ಅನಂತರದಲ್ಲಿ ಈ ದಿವ್ಯಯೋಗಕ್ಕೆ ಆವ ವಿಘ್ನಗಳೂ ತೊಡಗದಂತೆ ಉತ್ತಮಸ್ಥಲದಲ್ಲಿ ಅಭ್ಯಾಸಮಂ ಮಾಳ್ಪುದೆಂದು ಪೇಳ್ದಪಂ–

ತಸ್ಮಾತ್ಸಂಸೇವ್ಯ ಏವಂ ವಿಧ ಇಹ ಯಮಿನಾಂ ಶ್ರೇಯಸೇ ಯೋಗಮಾರ್ಗೋ

ಹ್ಯಾಲಸ್ಯಂ ಧೂರ್ತಸಂಗಂ ಸ್ವಜನಕುಮತಶಾಸ್ತ್ರಾಂಧಕಾರೋರು ರೋಗಾನ್ ।

ಚಿತ್ವಾಽಮೂನಂತ ರಾಯಾನ್ಪುನರಪಿ ಚ ಮಹಾಯೋಗಜೈಶ್ವರ್ಯ ಸಿದ್ಧಿಂ ।

ತ್ಯಕ್ತ್ವಾ ಸ್ಥಿತ್ವಾ ಸುದೇಶೇ ಸುಜನಪರಿವೃತೇಽಬಾಧಿತೇ ಧರ್ಮರಾಜ್ಯೇ ॥ ॥೫೭॥

ತಸ್ಮಾತ್–ಆ ಯೋಗೀಶ್ವರನಿಂದ ಸಮಸ್ತರೂ ಕೃತಾರ್ಥರಪ್ಪದಕಾರಣದಿಂದೆ, ಏವಂ ವಿಧಃ–ಈ ಪೂರ್ವೋಕ್ತಪ್ರಕಾರವಾದಂಥ, ಯೋಗಮಾರ್ಗಃ–ಅಮನಸ್ಕಯೋಗಮಾರ್ಗವು, ಹಿ–ಪ್ರಸಿದ್ಧವಾಗಿ, ಆಲಸ್ಯಂ–ಮಹಾಹಾರಯೋಗ ನಿಷಿದ್ಧ ಆಹಾರಂಗಳಿಂದಪ್ಪ ಆಲಸ್ಯವನು, ಧೂರ್ತಸಂಗಂ–ದುರ್ಜನ ಸಂಗವನು, ಸ್ವಜನಕುಮತಶಾಸ್ತ್ರಾಂಧಕಾರ–ಭ್ರಾಂತವಾದ ದರ್ಶನಾಂತರಗಳ ಶಾಸ್ತ್ರಂಧಕಾರವೆಂಬ, ಉರುರೋಗಾನ್–ದೊಡ್ಡಿತ್ತಾದ ರೋಗಂಗಳೆಂಬಂಥ, ಅಮೂನ್–ಈ, ಅಂತರಾಯಾನ್–ವಿಘ್ನಂಗಳನ್ನು, ಜಿತ್ವಾ–ಜಯಿಸಿ, ಪುನರಪಿ–ಮರಳಿ, ಯೋಗಜೈಶ್ವರ್ಯಸಿದ್ಧಿಂ–ಯೋಗಾಭ್ಯಾಸಜನಿತಮಾದ ಅಣಿಮಾದ್ಯವಾಂತರಸಿದ್ಧಿಯನು, ತ್ಯಕ್ತ್ವಾ–ಬಿಟ್ಟು, ಸುಜನಪರಿವೃತೇ–ಕರಣತ್ರಯದೊಳ್ ದೋಷವಿಲ್ಲದ ಸುಜನರಿಂ ಬಳಸಲ್ಪಟ್ಟಂಥ, ಆಬಾಧಿತೇ–ರಾಜಚೋರಾದಿ ಬಾಧೆಇಲ್ಲದಂಥ ಧರ್ಮರಾಜ್ಯೇ–ಪುಣ್ಯರಾಜ್ಯವೆನಿಸುವಂಥ, ಸುದೇಶೇ–ಉತ್ತಮದೇಶದಲ್ಲಿ, ಸ್ಥಿತ್ವಾ–ಇದ್ದು, ಯಮಿನಾಂ–ಯತೀಶ್ವರರ್ಗೆ, ಶ್ರೇಯಸೇ–ಮೋಕ್ಷಕ್ಕೋಸ್ಕರ, ಇಹ–ಈ ಲೋಕದಲ್ಲಿ, ಸಂಸೇವ್ಯಃ–ಚೆನ್ನಾಗಿ ಅಭ್ಯಾಸ ಮಾಡಲು ಯೋಗ್ಯವು.

●

ಸೂ : ಆಚಾರ್ಯನು ಮುಮುಕ್ಷುಜನಾನುಗ್ರಹಾರ್ಥವಾಗಿ ಈ ಪೇಳ್ದ ಯೋಗಶಾಸ್ತ್ರಕ್ಕೆ ಪ್ರಮಾಣಪೂರ್ವಕತ್ವಮಂ ಪೇಳುತ್ತೀಶಾಸ್ತ್ರಪರಿಸಮಾಪ್ತಿಯಂ ಮಾಡುತಿರ್ದಪಂ–

ಶಿವಾನಮರಹಸ್ಯಾರ್ಥಾನ್ ಸಿದ್ಧ ಸಿದ್ಧಾಂತಪದ್ಧತಿಂ ।

ಸಂಕ್ಷೇಪತಃ ಕೃತಾऽऽಲೋಡ್ಯ ಶಿವಯೋಗಪ್ರದೀಪಿಕಾ ॥ ॥೫೮॥

ಶಿವಾಗಮರಹಸ್ಯಾರ್ಥಾನ್–ಕಾಮಿಕಾದಿವಾತುಳಾಂತಮಾದ ಶಿವಾಗಮಂಗಳಲ್ಲಿ ಅತಿಗೋಪ್ಯವಾದ ಅರ್ಥಂಗಳನು, ಸಿದ್ಧಸಿದ್ಧಾಂತ ಪದ್ಧತಿಂ–ಭುಶುಂಡ ವಾಮ ದೇವಾದಿಯೋಗಸಿದ್ಧರ ಸಿದ್ಧಾಂತ ಮಾರ್ಗಗಳನ್ನು, ಅಲೋಡ್ಯ–ವಿಚಾರಿಸಿ, ಸಂಕ್ಷೇಪತಃ–ಸಂಕೋಚವಹತನದಿಂದ, ಶಿವಯೋಗಪ್ರದೀಪಿಕಾ –ಶಿವಯೋಗ ಪ್ರದೀಪಿಕೆಯು, ಕೃತಾ–ಮಾಡಲ್ಪಟ್ಟಿತು.

●

ಸೂ : ವೇದಾಗಮಂಗಳೊಳ್ ಅತಿರಹಸ್ಯಾರ್ಥಮಾದ ಶಿವಯೋಗಸ್ವರೂಪವನತಿವ್ಯಕ್ತಮಾಗಿ ಕೈದೋರಿಕೆಯೆನಿಸಿ ಪೇಳ್ದ ಶಿವಯೋಗ ಶಾಸ್ತ್ರಮನಯೋಗ್ಯಂಗೆ ಕೊಡಲ್ ಮಹಾದೋಷಮಪ್ಪುದೆಂದು ಪೇಳ್ದಪಂ–

ಅಭ್ಯಾಸಶೂರಾಯ ಜಿತೇಂದ್ರಿಯಾಯ ಗುರೌ ಶಿವೇ ಭಕ್ತಿ ಸುನಿಶ್ಚಲಾಯ ।

ದೇಯಂ ರಹಸ್ಯಂ ಶಿವಯೋಗಶಾಸ್ತ್ರಂ ಯೋ ಮೂಢದಾತಾ ಗುರು ಪಾತಕೀ ಸ್ಯಾತ್॥ ॥೫೯॥

ಅಭ್ಯಾಸಶೂರಾಯ–ಯೋಗಾಭ್ಯಾಸದಲ್ಲಿ ಸಮರ್ಥನಾದಂಥ, ಜಿತೇಂದ್ರಿಯಾಯ–ಇಂದ್ರಿಯವಿಕಾರಮಂ ಜಯಿಸಿದಂಥ, ಗುರೌ–ಉಪದೇಶ ಮಾಡಿದಾಚಾರ್ಯನಲ್ಲಿಯೂ, ಶಿವೇ–ವಿಚಿತ್ರ ರೂಪದಿಂ ಧ್ಯೇಯನಾಗಿ ತನಗೆ ಮುಕ್ತಿಸ್ಥಾನವೆನಿಸುವ ಪರಶಿವನಲ್ಲಿಯೂ, ಭಕ್ತಿಸುನಿಶ್ಚಲಾಯ–ನಿಶ್ಚಲಭಕ್ತಿಯುಳ್ಳಾತಂಗೋಸುಗ, ರಹಸ್ಯಂ–ಅತಿಗೋಪ್ಯವಾದಂಥ, ಶಿಪಯೋಗಶಾಸ್ತ್ರಂ–ಈ ಶಿವಯೋಗ ಸ್ವರೂಪವನುಪದೇಶಮಂ ಮಾಳ್ಪಶಾಸ್ತ್ರವು, ದೇಯಂ–ಕೊಡಲು ಯೋಗ್ಯವು, ಯಃ–ಯಾವ, ಮೂಢದಾತಾ –ಅಯೋಗ್ಯನಾದ ಮೂಢಂಗೆ ಕೊಡುತ್ತಿರ್ಪನೊ ಆತನು, ಗುರುಪಾತಕೀ–ಗುರುದ್ರೋಹವ ಮಾಡಿದಾತನು, ಸ್ಯಾತ್–ಆಗುವನು.

ತಾತ್ಪರ್ಯ : ಈ ಲೌಕಿಕಮಾದ ರಾಜಯೋಗದೊಳತಿ ರಹಸ್ಯಾರ್ಥಮಂ ಪ್ರಕಟಮಂ ಮಾಡಿದಾತನು ಸ್ವಾಮಿದ್ರೋಹಿಯಪ್ಪಂತೆ ವೇದಾಗಮಂಗಳೊಳತಿ ರಹಸ್ಯಾರ್ಥಮಂ ಪೇಳ್ವೀಯೋಗಶಾಸ್ತ್ರಮಂ ಖ್ಯಾತಿಪೂಜಾಲಾಭಾರ್ಥಮಾಗಿ ಅಯೋಗ್ಯಂಗೆ ಕೊಡಲಾತನೆ ಗುರುದ್ರೋಹಿಯಪ್ಪನು.

[೧]ಲೋಭಾದಿ[೧]ಮೋಹಿತೋ ದೀಕ್ಷಾಂ ಯಃ ಕುರ್ಯಾತ್ತಸ್ಯದೇವತಾಃ ।

ಮಂತ್ರಸಿದ್ಧಿಂ ಹರಂ ತ್ಯಾ ಶು ನರಕೇಪಾತಯಂತಿ ಚ ॥

ಎಂಬ ಆಗಮ ಪ್ರಮಾಣದಿಂದಲೂ,

ನಾಪ್ರಶಾಂತಾಯ ದಾತವ್ಯಂ ನಾಪುತ್ರಾಯ ಚ ವೈಪುನಃ

ಯಸ್ಯ ದೇವೇ ಪರಾಭಕ್ತಿರ್ಯಥಾ ವೇದೇ ತಥಾ ಗುರೌ ।

ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

ಎಂಬ ಶ್ರುತಿಪ್ರಮಾಣದಿಂದಲೂ ಯೋಗ್ಯನಾದಾತಂಗೆ ಕೊಡಲುಚಿತವೆಂಬುದಭಿಪ್ರಾಯ.

●

೧–೧ ಲಾಭಾದಿ (ಕ).

ಸೂ : ಈ ಪ್ರಕಾರಮಾದ ಸದಾಶಿವಯೋಗೀಶ್ವರನು ಈ ಚತುರ್ವಿಧಯೋಗ ಸ್ವರೂಪಮಮಂ ಪೇಳ್ದ ಶಿವಯೋಗಪ್ರದೀಪಿಕೆಯೆಂಬ ದಿವ್ಯಶಾಸ್ತ್ರವನುಪದೇಶಂ ಮಾಡಿ, ಅದರೊಳ್ಕಂಡ ಗ್ರಂಥಗಳ್ಪೊಗದಂತೆ ಪ್ರತಿಪಟಲ ಗ್ರಂಥಸಂಖ್ಯೆಗಳಂ ಪೇಳತ್ತೆ ಆ ಮೂಲಾಂತಮಾದ ಗ್ರಂಥಸಂಖ್ಯೆಯಂ ಪೇಳ್ದಪಂ–

ಪುರಬಾಣಾವಜಸಾಯಕಾ ವಥ ಸಮುದ್ರರ್ತೂಕರೇಷೂ ತಥಾ
ನಿಧಿಬಾಣಾವಿತಿಪಂಚಧಾ ಪಟಲಿಕಾಸ್ವೇವಂ ಶಿವಾಂಕಂ ಮಯಾ ।
ಪರಮೇತ್ಯಾಧಿಕಶಬ್ದಜಾತವಿವಿಧಚ್ಛಂದೋಭಿರೇತತ್‌ಕೃತಂ ಗಿರಿನಾಗಾಂಬಕ
ಸಂಖ್ಯಯಾ ಸಕಲಪದ್ಯೈಶ್ಚೈವ ಯೋಗಾರ್ಥಕ್ಯೈಃ ॥ ॥೬೦॥

ಪುರಬಾಣೌ–ಪುರವೆಂದೊಡೆ ಮೂರು, ಬಾಣವೆಂದೊಡೈದು ಇದರ ಸಂಕೇತವಪ್ಪುದರಿಂದ ಮೂರರ ಹಿಂದ್ಯೆದನಿಡಲು ಪ್ರಥಮ ಪಟಲಕ್ಕೆ ಗ್ರಂಥ ೫೩. ಅಜಸಾಯಕೌ–ಅಜನೆಂದೊಡೆ ಬ್ರಹ್ಮರು ಒಂಬತ್ತು, ಸಾಯಕವೆಂದೊಡೆ ಬಾಣವೈದು ಮೊದಲಂತೆ ಲೆಕ್ಕವಿಡಲು ದ್ವಿತಿಯ ಪಟಲ ಗ್ರಂಥಗಳು ೫೯, ಅಥ–ಅನಂತರದಲ್ಲಿ, ಸಮುದ್ರರ್ತೂ–ಸಮುದ್ರವೆಂದೊಡೆ ನಾಲ್ಕು, ಋತುವೆಂದರಾರು ಅಂತೂ ತೃತೀಯ ಪಟಲಗ್ರಂಥಗಳು ೬೪, ಕರೇಷು–ಕರವೆನಲೆರಡು, ಇಷುವೆನಲ್ಯೆದು ಅಂತೂ ಚತುರ್ಥಪಟಲ ಗ್ರಂಥಗಳು ೫೨. ತಥಾ–ಹಾಂಗೆ, ನಿಧಿಬಾಣೌ–ನಿಧಿಯೆನಲೊಂಬತ್ತು. ಬಾಣವೆನಲ್ಯೆದು ಅಂತೂ ಪಂಚಮಪಟಲ ಗ್ರಂಥಂಗಳು ೫೯, ಇತಿ–ಈ ಪ್ರಕಾರದಿಂದೆ, ಪಂಚಧಾ–ಐದು ಪ್ರಕಾರವಾದಂಥ, ಪಟಲಿಕಾಸು–ಪಟಲಂಗಳಲ್ಲಿ, ಏವಂ–ಈ ಪ್ರಕಾರವಾದ, ಶಿವಾಂಕಂ–ನಿರ್ಮಲವಾದ ಲೆಕ್ಕವುಳ್ಳುದಾಗಿ, ಮಯಾ–ಎನ್ನಿಂದೆ, ಪರಮೇತ್ಯಾದಿಕಶಬ್ದಜಾತವಿವಿಧಚ್ಛಂದೋಭಿಃ, ಪರಮೇತ್ಯಾದಿಕ–ಪರಮ ಯೋಗೀಯೆಂಬುದೇ ಆದಿಯಾಗುಳ್ಳ, ಶಬ್ದ–ಶಬ್ದಂಗಳ, ಜಾತ–ಸಮೂಹವುಳ್ಳ, ವಿವಿಧ–ನಾನಾಪ್ರಕಾರವಾದ, ಛಂದೋಭಿಃ–ಛಂದಸ್ಸುಗಳುಳ್ಳಂಥ, ಯೋಗಾರ್ಥಕ್ಯೈಃ–ಮಂತ್ರಾದಿಚತುರ್ವಿಧ ಯೋಗವೇ ಅರ್ಥವಾಗುಳ್ಳಂಥ, ಸಕಲಪದ್ಯೈಶ್ಚ–ಪಂಚಪಟಲದ ಸಮಸ್ತವೃತ್ತಂಗಳಿಂದ, ಗಿರಿನಾಗಾಂಬಕ ಸಂಖ್ಯಮ್ಯೆವ–ಗಿರಿಯೆನಲೇಳು, ನಾಗವೆನಲೆಂಟು, ಅಂಬಕವೆನಲೆರಡು ಅಂತೂ ೨೮೭ ಎಂಬ, ಸಂಖ್ಯಯ್ಯೆವ–ಲೆಕ್ಕದಿಂದವೇ, ಏತತ್–ಈ ಶಿವಯೋಗಪ್ರದೀಪಿಕೆಯೆಂಬ ಶಾಸ್ತ್ರವು, ಕೃತಂ–ಮಾಡಲ್ಪಟ್ಟಿತು.

ಶ್ರವಣಂ ನಾದಶ್ರವಣಂ ದರ್ಶನಮವಲೋಕನಂ ಹಿ ತಾರಸ್ಯ ।
ಹೃದ್ಗತಿರಮನಸ್ಕಸ್ಸ್ಯಾದಾಸ್ಯಶ್ಶಿವಯೋಗದೀಪಿಕಾ ಟೀಕಾಯಾಃ ॥

ಇತಿ ಶ್ರೀಮದ್ವೇದವೇದಾಂತಾಗಮಪುರಾಣಸ್ಮೃತೇತಿಹಾಸ ಪ್ರತಿಪಾದಿತ
ಶ್ರೀ ವೀರಶೈವಮಾರ್ಗ ಸ್ಥಾಪನಾಚಾರ್ಯ ಶ್ರೀಬಸವಾರಾಧ್ಯವಿರಚಿತಾಯಾಂ
ಕರ್ನಾಟಕಟೀಕಾವಿರಾಜಿತಾಯಾಂ ಶಿವಯೋಗಪ್ರದೀಪಿಕಾಯಾಂ

ಪಂಚಮಪಟಲಃ ಸಂಪೂರ್ಣಃ

ಓಂ ತತ್ಸತ್

❖❖

ಶ್ಲೋಕಗಳ ವರ್ಣಾನುಕ್ರಮಣಿಕೆ

[ಮೊದಲ ಅಂಕಿ ಪುಟವನ್ನು ಮುಂದಿನ ಅಂಕಿ ಶ್ಲೋಕವನ್ನು ಸೂಚಿಸುತ್ತದೆ]

❖❖

ಪೀಠಾರೋಹಣ ರಜತ ಸಂಪುಟ : ೧೯

ಷಟ್ಸ್ಥಲಶಿವಾಯಣ

ಸಂಪಾದಕರು
ಡಾ. ಎಂ. ಎಂ. ಕಲಬುರ್ಗಿ
ಡಾ. ಸಿ. ಪಿ. ಕೃಷ್ಣಕುಮಾರ

ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ
೧೯೯೯

*

ಪೀಠಿಕೆ

ಸಾಹಿತ್ಯವೆನ್ನುವುದು ಮುಖ್ಯವಾಗಿ ಆಕಾರ ಪಡೆಯುವುದು, ಆಶಯ ಮತ್ತು ಅಭಿವ್ಯಕ್ತಿಗಳ ನೆಲೆಯಲ್ಲಿ. ಪ್ರಾಚೀನ ವೀರಶೈವಸಾಹಿತ್ಯವನ್ನು ಗುರಿಯಿಟ್ಟು ಹೇಳುವುದಾದರೆ ಅದು ಜೈನ-ವೈದಿಕ ಸಾಹಿತ್ಯಗಳಂತೆ ಆಶಯ ದೃಷ್ಟಿಯಿಂದ ತನ್ನ ಧಾರ್ಮಿಕ ಮೌಲ್ಯಗಳ ಪ್ರಸಾರಮಾಧ್ಯಮವಾಗಿ, ಅಭಿವ್ಯಕ್ತಿ ದೃಷ್ಟಿಯಿಂದ ದೇಶೀ ಮಾಧ್ಯಮವನ್ನು ಅವಲಂಬಿಸಿ ಹೊರಹೊಮ್ಮಿದೆ. ಈ ದಾರಿಯಲ್ಲಿ ಹೆಜ್ಜೆಯಿಟ್ಟ ವೀರಶೈವಕವಿಗಳು ಜೈನಕವಿಗಳಂತೆ ಪುರಾಣವಸ್ತುಗಳಿಗೆ ಸೀಮಿತರಾಗದೆ, ತಮ್ಮ ಪರಿಸರದಲ್ಲಿ ಬಾಳಿದ ಶರಣರನ್ನು ವಸ್ತುವಾಗಿಸಿಕೊಳ್ಳುವ ಮೂಲಕ ಕನ್ನಡ ಸಾಹಿತ್ಯವನ್ನು ಒಂದು ಅರ್ಥದಲ್ಲಿ ಪುರಾಣ ಪಾತಳಿಯಿಂದ ಚರಿತ್ರೆ ಪಾತಳಿಗೆ ಇಳಿಸಿದರು. ಬಸವಣ್ಣನನ್ನು ಕುರಿತು ಹರಿಹರ, ಹರಿಹರನನ್ನು ಕುರಿತು ರಾಘವಾಂಕ, ರಾಘವಾಂಕನನ್ನು ಕುರಿತು ಸಿದ್ಧನಂಜೇಶ ಬರೆದ ಚರಿತ್ರೆಗಳು ಇದಕ್ಕೆ ನಿದರ್ಶನವೆನಿಸಿವೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಕೆಲವೊಮ್ಮೆ ಜೈನಕವಿಗಳು ವೈದಿಕ ಪುರಾಣವ್ಯಕ್ತಿಗಳನ್ನು ಲೋಕ ವ್ಯಕ್ತಿಗಳ ಮಟ್ಟಕ್ಕೆ ಇಳಿಸಿ ಪುರಾಣ(ಪಂಪಭಾರತ)ಬರೆದರೆ, ವೀರಶೈವಕವಿಗಳು ಲೋಕವ್ಯಕ್ತಿಗಳನ್ನು ಪುರಾಣವ್ಯಕ್ತಿಗಳ ಮಟ್ಟಕ್ಕೇರಿಸಿ ಚರಿತ್ರೆ ಬರೆದರು. ಇದರಿಂದ ಚರಿತ್ರೆ ವೈಭವದ ಬಣ್ಣ ತಳೆಯಿತಾದರೂ ತಮ್ಮ ಪರಿಸರದ ಮಹಾತ್ಮರನ್ನು ಕಥಾವಸ್ತು ಮಾಡಿಕೊಳ್ಳುವ ಹೊಸ ಸಂಪ್ರದಾಯವನ್ನು ವೀರಶೈವಕವಿಗಳು ಕನ್ನಡದಲ್ಲಿ ತೆರೆದುದು ಮಹತ್ವದ ವಿಷಯವೆನಿಸಿದೆ. ಈ ಪರಂಪರೆಗೆ ಸೇರಿದ ಕೃತಿಯಾಗಿದೆ, 'ಷಟ್ಸ್ಥಲಶಿವಾಯಣ'.

ಕರ್ತೃ:

ಷಟ್ಸ್ಥಲಶಿವಾಯಣ ಕೃತಿಯ ಕಥಾನಾಯಕ ಚೀಲಾಳಸ್ವಾಮಿ. ಇವನ ಇನ್ನೊಂದು ಹೆಸರು ಬಸವಪ್ರಭು. ಈತನ ಶಿಷ್ಯ ಶಿಶುಪುರದ ಸಿದ್ಧಲಿಂಗಾಚಾರ್ಯ. ಇವನ ಇನ್ನೊಂದು ಹೆಸರು ಕುಮಾರಪ್ರಭು. ಗುರು ಹೇಳಿದ ಈ ಕಥೆಯನ್ನು ಶಿಷ್ಯ ಕೇಳಿ, ಕೃತಿ ಮಾಡಿದನೆಂದು ಅಲ್ಲಲ್ಲಿ ಸೂಚಿಸಲಾಗಿದೆ.

ಹೇಳಿದನು ಶ್ರೀ ಬಸವಪ್ರಭು ಗುರು
ಕೇಳಿದವನೆ ಕುಮಾರಪ್ರಭು ಸುತ
ಭಾಳನೇತ್ರನ ಲೀಲೆ ಈ ಷಟ್ಸ್ಥಲಶಿವಾಯಣವು॥(೩-೫)

ಬಸವಪ್ರಭುವಾರೆಂದು ಶಂಕಿಸೆ
ವಸುಧೆ ಜನ ಚೀಲಾಳಸ್ವಾಮಿಯೆ
ಶಿಶುಮರದ ಶ್ರೀ ಸಿದ್ಧಲಿಂಗಾಚಾರ್ಯ ಕುವರಪ್ರಭು॥(೩-೬)

ಎಂಬ ಪದ್ಯಗಳಲ್ಲಿ ಈ ವಿಷಯವನ್ನು ಸ್ಪಷ್ಟಪಡಿಸಲಾಗಿದೆ. ಇಲ್ಲಿ ಬರುವ ಶಿಶುಪುರ ಯಾವುದೆಂದು ಗೊತ್ತಾಗುವುದಿಲ್ಲ. ಬೇರೆಡೆಗಳಲ್ಲಿರುವ ಪುರಾಣದ ದೇಶಿಕನು(೩-೪೩) ಪುರಾಣದ ಸಿದ್ಧಲಿಂಗಾಚಾರ್ಯ(೫-೪೮) ಎಂಬ ಉಲ್ಲೇಖಗಳು ಕುಮಾರಪ್ರಭುವು ಪುರಾಣ ಪ್ರವಚನಕಾರನಾಗಿದ್ದನೆಂದು ತಿಳಿಸುತ್ತವೆ.* ಒಂದು ದಿನ ಶಿಷ್ಯ, ಈ ಕಥೆಯನ್ನು ಹೇಳಬೇಕೆಂದು ಗುರುವಿಗೆ ಬಿನ್ನವಿಸಿದ. ಆ ಸಂದರ್ಭದಲ್ಲಿ ಗುರು ಹೇಳಿದ ಒಂದು ಪದ್ಯ ಹೀಗಿದೆ:

ದರಹಸಿತ ಮುಖಕಮಲ ಸದ್ಗುರು
ಹರಹರಾ ಶಿವಶಿವ ನಮೋ ನಮೊ
ತರುಣ ಲಿಂಗವಧಾನಿ ದಾನಿ ಮಹಾಮಹಿಮ ವಿರತ।
ಕರುಣಮೂರ್ತಿ ಮಹಾನುಭಾವಿಗ
ಳರಸ ಬಾರೆಂದಪ್ಪಿ ಹರಸುತ
ಶಿರದಿ ಕರಗಳನಿರಿಸಿ.......(೩-೯)

ಇಲ್ಲಿ ಬಳಸಲಾದ ಲಿಂಗಾವಧಾನಿ, ಮಹಾಮಹಿಮ, ವಿರತ, ಕರುಣಮೂರ್ತಿ, ಮಹಾನುಭವಿಗಳರಸ ಎಂಬ ವಿಶೇಷಣಗಳು ಕವಿಯ ವ್ಯಕ್ತಿತ್ವವನ್ನು ಸೂಚಿಸುತ್ತವೆ.

ಕೃತಿಯ ಅಂತ್ಯದಲ್ಲಿ "ಶ್ರೀಮದಸಂಖ್ಯಾತ ನೂತನ ಪುರಾತನ ಪ್ರಮಥಗಣ ಪರಿವ್ರಾಜಕಾಚಾರ್ಯ ಶ್ರೀ ಸಹಜಾನಂದ ಗುರುವರ ಪಾದಕಮಲಭೃಂಗಾಯಮಾನ ಸಹವಾಸಿಯಾದಂಥ, ಮಹಾಮಹಿಮನುಂ ಶ್ರೀಮನ್ನಿರಂಜನಪ್ರಭು ಸಿದ್ಧಲಿಂಗನ ಸಂಪ್ರದಾಯದ ಶ್ರೀ ಷಟ್ಸ್ಥಲಗುರುಪೀಠ ಪಟ್ಟಾಭಿಷೇಕ ಶಿಖಾಕರ್ತೃಗಳಾದಂಥ, ಶ್ರೀಮತ್ಸಚ್ಚಿದಾನಂದ ಬಸವಪ್ರಭು ಚೀಲಾಳಸ್ವಾಮಿ ಸದ್ಗುರುವರ ಕೃಪಾಪ್ರಸನ್ನ ಪ್ರಸಾದ ಸತ್ಪಾತ್ರ ಸುಪುತ್ರನಾದಂಥ, ಕೌಶಲ್ಯ ನಾಮಕರಣಂ ಕುಮಾರಪ್ರಭು ಪುರಾಣದ ಸಿದ್ಧಲಿಂಗದೇಶಿಕೇಂದ್ರ ಶಿಖಾಮಣಿ" ಎಂಬ ಗದ್ಯ ವಾಕ್ಯವಿದೆ. ಇಲ್ಲಿ ಬರುವ 'ಸಹಜಾನಂದಗುರು' ಬೇರೊಬ್ಬ ವ್ಯಕ್ತಿಯ ಹೆಸರೋ ಚೀಲಾಳಸ್ವಾಮಿಯ ವಿಶೇಷಣವೋ ಸ್ಪಷ್ಟವಾಗುವುದಿಲ್ಲ. ಇಲ್ಲಿಯ 'ಸಹವಾಸಿ' ಎಂಬ ಮಾತು ಈ ಕವಿಯು ತನ್ನ ಗುರುವಿನ

---

* ಶ್ರೀ ಪರಬ್ರಹ್ಮಾವತಾರ ಪ್ರ
ತಾಪ ಬಸವಪ್ರಭು ಮಹಾಗುರು
ತಾಪಸೇಂದ್ರ ಕುಮಾರಪ್ರಭುವಿಗೆ ಪೇಳ್ದ ತತ್ವನೆ॥
ಶ್ರೀ ಪುರಾಣದ ದೇಶಿಕೇಂದ್ರ ನಿ
ರೂಪಿಸಿದ ಷಟ್ಸ್ಥಲಶಿವಾಯಣ
ದೀಪ ಸದ್ಭಕ್ತರ ಸಭಾಮಧ್ಯದಿ ಪ್ರಕಾಶಿಸಲಿ ॥೨೫-೨೭॥
ಈ ಪದ್ಯದಲ್ಲಿ ಕುಮಾರಪ್ರಭು ಪುರಾಣದ ದೇಶಿಕೇಂದ್ರರು ಭಿನ್ನರೆಂಬ ಸಂದೇಹ ಬರುವಂತೆ ಹೇಳಲಾಗಿದೆ.

ಸನ್ನಿಧಿಯಲ್ಲಿದ್ದುದನ್ನು ಸೂಚಿಸುತ್ತದೆ. "ಕೌಶಲ್ಯ ನಾಮಕರಣಂ" ಎಂಬುದು ಈ ಕವಿಯ ಕಾವ್ಯನಾಮ "ಕೌಶಲ್ಯ"ವೆಂದೂ ತಿಳಿಸುತ್ತದೆ. ಇನ್ನೊಂದೆಡೆ "ಮುದ್ರಪುರದ ಮಹೇಶ" (೨೫-೭೬)ನನ್ನು ಪರ್ಯಾಯವಾಗಿ ನೆನೆದಿರುವಂತಿದೆ. ಈ ಮುದ್ರಪುರ ಯಾವುದು? ಶೋಧಿಸಬೇಕು.

ಈ ಕವಿಯು, ಗುರು ಚೀಲಾಳೇಶನ ಚರಿತೆಯನ್ನು ಅವನ ಬಾಯಿಯಿಂದಲೇ ಕೇಳಿ ಕೃತಿಗೊಳಿಸಿರುವುದರಿಂದ ಗುರುವಿನ ಸಮಕಾಲೀನನೆಂದೂ, ಚೀಲಾಳೇಶನು ಕಪಿಲಸಿದ್ಧನಿಗೆ ಉತ್ತರಾಧಿಕಾರಿ ದೀಕ್ಷೆ ನೀಡಿರುವುದನ್ನು ಹೇಳಿರುವುದರಿಂದ ಈ ಶಿಷ್ಯನ ಸಮಕಾಲೀನನೆಂದೂ ತಿಳಿದುಬರುತ್ತದೆ.

ಕಟ್ಟಿಗೆಹಳ್ಳಿ ಸಿದ್ಧಲಿಂಗನ ಒಬ್ಬ ಶಿಷ್ಯ ಚೀಲಾಳಸ್ವಮಿ, ಇನ್ನೊಬ್ಬ ಶಿಷ್ಯ ಮುರುಗಾಶಾಂತವೀರ. ಚೀಲಾಳಸ್ವಾಮಿ ಹುಟ್ಟಿದುದು ಆನಂದನಾಮ ಸಂವತ್ಸರದಲ್ಲಿ. ಸಮಕಾಲೀನನಾದ ಮುರುಗಾಶಾಂತವೀರನ ಕಾಲ ೧೬೫೬-೧೭೦೩. ಈ ಶತಮಾನದಲ್ಲಿ ಆನಂದನಾಮ ಸಂವತ್ಸರವು ೧೬೧೫ ಮತ್ತು ೧೬೭೫ ಈ ಕ್ರಿಸ್ತಶಕಗಳಲ್ಲಿ ಬರುತ್ತದೆ. ಇವುಗಳಲ್ಲಿ ಚೀಲಾಳಸ್ವಾಮಿಯ ಜನನ ೧೬೧೫ ರಲ್ಲಿ ಸಂಭವಿಸಿರುವ ಸಾಧ್ಯತೆಯಿದೆ. ಹೀಗಾಗಿ ಗುರು ಚೀಲಾಳೇಶನ ಕಿರಿಯ ಸಮಕಾಲೀನನಾಗಿರಬಹುದಾದ ಕವಿ ಸಿದ್ಧಲಿಂಗಾಚಾರ್ಯ ೧೬೧೫ ರಿಂದ ಮುಂದೆ ಪೂರ್ಣಜೀವನ ಬಾಳಿರಬೇಕು.

ಐತಿಹಾಸಿಕ ಮಹತ್ವ :

ಕನ್ನಡದಲ್ಲಿ ಐತಿಹಾಸಿಕ ಕಾವ್ಯಗಳ ಸಂಖ್ಯೆ ಕಡಿಮೆ. ಷಟ್ಸ್ಥಲ ಶಿವಾಯಣವು ಪುರಾಣವಾಗಿದ್ದರೂ ವಿಪುಲ ಪ್ರಮಾಣದಲ್ಲಿ ಐತಿಹಾಸಿಕ ಅಂಶಗಳನ್ನು ತುಂಬಿಕೊಂಡಿದೆ. ಅದರಲ್ಲಿಯೂ ಕರ್ನಾಟಕದ ಬಹುದೊಡ್ಡ ಪರಂಪರೆಯಾಗಿರುವ ವೀರಶೈವ ವಿರಕ್ತಸಮಯದ ಸಂಘರ್ಷ ಸಂದರ್ಭದಲ್ಲಿ ಹುಟ್ಟಿದ ಇದು, ಈವರೆಗಿನ ತಪ್ಪುಗಳಿಗೆ ತಿದ್ದುಪಡಿ ನೀಡುತ್ತದೆ. ಮತ್ತು ಮುಚ್ಚಿ ಹೋಗಿದ್ದ ಅನೇಕ ಐತಿಹಾಸಿಕ ಸಂಗತಿಗಳನ್ನು ಬೆಳಕಿಗೆ ತರುತ್ತದೆ.

ವೀರಶೈವದಲ್ಲಿ ಗುರುಪರಂಪರೆ, ವಿರಕ್ತಪರಂಪರೆ ಎಂಬ ಎರಡು ಮುಖ್ಯ ಧಾರ್ಮಿಕ ಸಂಪ್ರದಾಯಗಳಿವೆ. ಇವುಗಳಲ್ಲಿ ವಿರಕ್ತಪರಂಪರೆ ೧೨ನೆಯ ಶತಮಾನದಲ್ಲಿ ಬಸವಾದಿ ಪ್ರಮಥರು ಶೂನ್ಯಸಿಂಹಾಸನ ಸ್ಥಾಪಿಸುವ ಮೂಲಕ ಅಸ್ತಿತ್ವಕ್ಕೆ ಬಂದಿತು. ಈ ಪರಂಪರೆಯ ಮೊದಲ ವ್ಯಕ್ತಿ ಅಲ್ಲಮಪ್ರಭು. ಆದುದರಿಂದ ಈ ವಿರಕ್ತ ಸಂಪ್ರದಾಯವನ್ನು "ಅಲ್ಲಮಪ್ರಭು ಸಂಪ್ರದಾಯ"ವೆಂದು ಚಾಮರಸಾದಿಗಳು ಸರಿಯಾಗಿಯೇ ಕರೆದಿದ್ದಾರೆ. ಅಲ್ಲಮನ ಬಳಿಕ ಚೆನ್ನಬಸವಣ್ಣ ಆಮೇಲೆ ಸಿದ್ಧರಾಮ ಈ ಪೀಠವೇರಿದರೆಂದು ವೀರಶೈವ ಇತ್ತೀಚಿನ ಕೃತಿಗಳು ತಿಳಿಸುತ್ತವೆ. ಈ ಮೂವರು ಸಮಕಾಲೀನರೇ ಆಗಿರುವುದರಿಂದ ಇವರ ಪೀಠಾರೋಹಣ ಕ್ರಿಯೆಗಳು ಒಂದರ ಹಿಂದೆ ಇನ್ನೊಂದರಂತೆ ಕ್ಷಿಪ್ರದಲ್ಲಿಯೇ ಸಂಭವಿಸಿದವೆಂದು ತೋರುತ್ತದೆ. ಇದಕ್ಕೆ ಕಲ್ಯಾಣದಲ್ಲಿ ಜರುಗಿದ ವಿಪ್ಲವವೇ ಕಾರಣವಾಗಿರಬಹುದು.

ಈ ತರುವಾಯ ಶೂನ್ಯಸಿಂಹಾಸನವನ್ನೇರಿದವರ ವಿಷಯ ಸಂದಿಗ್ಧವಾಗಿದೆ. ತೀರ ಇತ್ತೀಚಿನ ಅಂದರೆ ೧೮-೧೯ನೆಯ ಶತಮಾನದ 'ನಿರಂಜನವಂಶ ರತ್ನಾಕರ' ಮತ್ತು 'ಮಹಲಿಂಗೇಂದ್ರ

ವಿಜಯ'ಗಳು ಸಿದ್ಧರಾಮ ಮತ್ತು ತೋಂಟದಾರ್ಯರ ನಡುವೆ ಅನಾದಿ ಗಣನಾಥ, ಆದಿಗಣೇಶ್ವರ, ನಿರ್ಮಾಯ ಗಣೇಶ್ವರ, ನಿರಂಜನಸ್ವಾಮಿ, ಜ್ಞಾನಾನಂದಸ್ವಾಮಿ, ಆತ್ಮಗಣವರ, ಆಧ್ಯಾತ್ಮಗಣವರ, ರುದ್ರಮುನಿಸ್ವಾಮಿ, ಬಸವಪ್ರಭುಸ್ವಾಮಿ, ಆದಿಲಿಂಗಸ್ವಾಮಿ, ಚನ್ನವೀರಸ್ವಾಮಿ, ಗೋಸಲಸಿದ್ಧೇಶ್ವರಸ್ವಾಮಿ, ಶಂಕರಾಚಾರ್ಯಸ್ವಾಮಿ, ದಿವ್ಯಲಿಂಗೇಶ್ವರ, ಚೆನ್ನಬಸವರಾಜೇಂದ್ರ ಈ ಹೆಸರುಗಳನ್ನು ಹೇಳುವವಾದರೂ ವಿದ್ವಾಂಸರು ಇವುಗಳನ್ನು ಈಗಲೂ ಸಂದೇಹದಿಂದಲೇ ನೋಡುತ್ತಲಿದ್ದಾರೆ. ಇವು, ಈ ಪರಂಪರೆಗೆ ನಿರಂತರತೆಯನ್ನು ಕಲ್ಪಿಸಲು ನಿರ್ಮಿಸಿದ ಕಲ್ಪಿತನಾಮಗಳೆಂದು ಹೇಳುತ್ತಲಿದ್ದಾರೆ. ಅನಾದಿಗಣನಾಥ, ಆದಿಗಣೇಶ್ವರ, ಆತ್ಮಗಣವರ, ಆಧ್ಯಾತ್ಮಗಣವರ ಎಂಬಂಥ ನಾಮಸ್ವರೂಪಗಳೂ ಇವು ಕಲ್ಪಿತವೆಂಬ ಅಭಿಪ್ರಾಯವನ್ನು ಬಲಪಡಿಸುತ್ತವೆ. ಮೇಲಾಗಿ ತೋಂಟದ ಸಿದ್ಧಲಿಂಗನನ್ನು "ದ್ವಿತೀಯ ಅಲ್ಲಮ" ಎಂದು ಕಾವ್ಯಗಳು ಕರೆದಿರುವುದನ್ನು ನೋಡಿದರೆ ಅಲ್ಲಮನ ಬಳಿಕ ಈ ಪೀಠವೇರಿದ ದ್ವಿತೀಯ ವ್ಯಕ್ತಿ ತೋಂಟದಾರ್ಯನಿರಬಹುದೇ? ಚೆನ್ನಬಸವಣ್ಣ, ಸಿದ್ಧರಾಮರೇರಿರಲಿಲ್ಲವೇ? ಎಂಬ ಸಂದೇಹವೂ ಸುಳಿಯುತ್ತದೆ. ಅಲ್ಲಮನಿಂದ ತೋಂಟದಾರ್ಯರವರೆಗಿನ ಈ ಅವಧಿ ಶೂನ್ಯಸಿಂಹಾಸನದ ಇತಿಹಾಸದಲ್ಲಿ ಪ್ರಥಮ ಘಟ್ಟವೆನಿಸಿದೆ.

ದ್ವಿತೀಯ ಘಟ್ಟ ತೋಂಟದಾರ್ಯನಿಂದ ಕಟ್ಟಿಗೆಹಳ್ಳಿ ಸಿದ್ಧಲಿಂಗನವರೆಗೆ ವಿಸ್ತರಿಸಿಕೊಂಡಿದೆ. ಕಟ್ಟಿಗೆಹಳ್ಳಿ ಸಿದ್ಧಲಿಂಗನ ತರುವಾಯದ್ದು ತೃತೀಯಘಟ್ಟ. ಇವುಗಳಲ್ಲಿ ಎರಡನೆಯ ಘಟ್ಟದ ತೋಂಟದಾರ್ಯರ ಅಪಾರ ಶಿಷ್ಯರಲ್ಲಿ ನೇರ ಉತ್ತರಾಧಿಕಾರಿತ್ವ, ಶಾಖಾ ಉತ್ತರಾಧಿಕಾರಿತ್ವಗಳು ಕವಲೊಡೆದು ಉದ್ದಕ್ಕೂ ಬೆಳೆದಿವೆ. ಕನ್ನಡ ಕಾವ್ಯಗಳ ಸಹಾಯದಿಂದ ಈ ಶಾಖೆಗಳನ್ನು ವಿದ್ವಾಂಸರು ಪುನಃ ರಚಿಸಿಕೊಟ್ಟಿದ್ದಾರೆ.

ಇವುಗಳಲ್ಲಿ ನೇರ ವಾರಸುಶಾಖೆ ಯಾವುದು? ಉಪಶಾಖೆಗಳಾವವು? ಎಂಬುದನ್ನು ನಿರ್ಣಯಿಸುವುದು ಅವಶ್ಯವಿದೆ. ಕಟ್ಟಿಗೆಹಳ್ಳಿ ಸಿದ್ಧಲಿಂಗನ ತರುವಾಯ ಮುರುಗಾಸಮಯದ ಸ್ವಾಮಿಗಳು ಸ್ವತಃ ಸಾಹಿತಿಗಳೂ ಸಾಹಿತ್ಯಪೋಷಕರೂ ಆಗಿದ್ದುದರಿಂದ ಅವರದೇ ಅಲ್ಲಮಪ್ರಭು ಸಂಪ್ರದಾಯದ, ಅಂದರೆ ತೋಂಟದ ಸಿದ್ಧಲಿಂಗ ಸಂಪ್ರದಾಯದ ನೇರ ವಾರಸುಶಾಖೆಯೆಂಬ ಸಾಹಿತ್ಯ ಸೃಷ್ಟಿಯಾಗುತ್ತ ಬಂದಿದೆ. ಇದನ್ನೇ ಆಕರ ಸಾಮಗ್ರಿಯಾಗಿಟ್ಟುಕೊಂಡು ವಿದ್ವಾಂಸರು ಈ ವಾದವನ್ನು ಈವರೆಗೆ ಬೆಂಬಲಿಸುತ್ತ ಬಂದಿದ್ದಾರೆ. ಈಗ ಇದರ ಸತ್ಯಾಸತ್ಯತೆಯ ಚರ್ಚೆ ಸೂಕ್ತವೆನಿಸುತ್ತದೆ.

೧. ಮುರುಗಾ ಸಮಯದವರೇ ನೇರ ವಾರಸುದಾರರಾಗಿದ್ದರೆ, ಇವರು ಎಡೆಯೂರು ಸಿದ್ಧಲಿಂಗ ಕ್ಷೇತ್ರದೊಂದಿಗೆ ಗಾಢ ಸಂಬಂಧ ಇಟ್ಟುಕೊಳ್ಳಬೇಕಾಗಿತ್ತು. ವಸ್ತುಸ್ಥಿತಿ ಹಾಗಿಲ್ಲ. ಇಂಥ ಸಂಬಂಧ ಇಟ್ಟುಕೊಂಡದ್ದು ಗದುಗಿನ "ಚೀಲಾಳ ಸಮಯ".

೨. ಮುರುಗಾ ಸಮಯದ ಪ್ರತಿಯೊಬ್ಬ ಪೀಠಾಧಿಕಾರಿ ತಮ್ಮ ಹೆಸರಿನ ಹಿಂದೆ "ತೋಂಟದ" ವಿಶೇಷಣ ಬಳಸದೆ, "ಮುರುಗಾ" ವಿಶೇಷಣ ಮಾತ್ರ ಬಳಸುತ್ತಾರೆ. ಗದುಗಿನ ಚೀಲಾಳ ಸಮಯದ ಪೀಠಾಧಿಕಾರಿಗಳು ಮಾತ್ರ ತಪ್ಪದೇ ತಮ್ಮ ಹೆಸರಿನ ಹಿಂದೆ "ತೋಂಟದ" ಎಂಬ ವಿಶೇಷಣ ಬಳಸುತ್ತ ಬಂದಿದ್ದಾರೆ.

ಈ ಎರಡು ಮುಖ್ಯ ಆಚರಣಾತ್ಮಕ ಆಧಾರಗಳ ಬಲದಿಂದ, ಅಲ್ಲಮಪ್ರಭು ಸಂಪ್ರದಾಯದ ಮುಂದುವರಿಕೆಯಾಗಿರುವ ತೋಂಟದ ಸಿದ್ಧಲಿಂಗನ ವಿರಕ್ತಸಂಪ್ರದಾಯದ ನೇರ ಉತ್ತರಾಧಿಕಾರಿ

ಮುರುಗಾ ಸಮಯವಲ್ಲ, 'ಚೀಲಾಳ ಸಮಯ'ವೆಂಬ ಸಂದೇಹ ಮೂಡುತ್ತದೆ. ಈ ಸಂದೇಹಕ್ಕೆ ದಾಖಲಾತ್ಮಕ ಉತ್ತರವಾಗಿದೆ "ಷಟ್ಸ್ಥಲಶಿವಾಯಣ."

ತೋಂಟದ ಸಿದ್ಧಲಿಂಗೇಶ್ವರನ ನೇರ ವಾರಸುದಾರಿಕೆಯನ್ನು ಮುರುಗಾ ಸಮಯದವರಿಗೆ ಹೇಳುವ ಸುಮಾರು ೧೮೭೦ ರ ನಿರಂಜನವಂಶ ರತ್ನಾಕರ ಮತ್ತು ಮಹಾಲಿಂಗೇಂದ್ರ ವಿಜಯ ಕೃತಿಗಳಿಗಿಂತ ೧೭೦ ವರ್ಷ ಪೂರ್ವದ ಅಂದರೆ ೧೭೦೦ ರ ಷಟ್ಸ್ಥಲ ಶಿವಾಯಣ ಹೆಚ್ಚು ವಿಶ್ವಾಸಾರ್ಹವೆಂದೇ ಹೇಳಬೇಕು. ಮೇಲಾಗಿ ಈ ಕೃತಿಯನ್ನು ತನ್ನ ಹಿಂದಿನ ವಿರಕ್ತಸಂಪ್ರದಾಯದ ಎಲ್ಲ ಇತಿಹಾಸ ಗೊತ್ತಿದ್ದ ಚೀಲಾಳಸ್ವಾಮಿಯೇ ಹೇಳಿ ಬರೆಯಿಸಿದ ಕಾರಣ, ಇದರಲ್ಲಿನ ವಿಷಯ ಅಧಿಕೃತವೆನಿಸುತ್ತದೆ.

ಚೀಲಾಳಸ್ವಾಮಿ–ಚೀಲಾಳ ಸಮಯ :

ತೋಂಟದಾರ್ಯರ ಬಳಿಕ ನೇರ ಗುರುಪರಂಪರೆ, ಶಾಖಾ ಗುರು ಪರಂಪರೆಗಳು ವಿರಕ್ತಸಂಪ್ರದಾಯದಲ್ಲಿ ಬೆಳೆದು ಬಂದವು. ಇವುಗಳಲ್ಲಿ ಚೀಲಾಳಸ್ವಾಮಿಯದೇ ನೇರ ಗುರುಪರಂಪರೆಯೆಂದು ಹೇಳುತ್ತ, ತೋಂಟದ ಸಿದ್ಧೇಶ್ವರ–ಬೋಳಬಸವೇಶ್ವರ–ಚೆನ್ನಂಜೆದೇವ–ಕಟ್ಟಿಗೆಹಳ್ಳಿ ಸಿದ್ಧಲಿಂಗ–ಚೀಲಾಳಪ್ರಭು–ಕಪಿಲಸಿದ್ಧನೆಂದು ನೇರ ವಾರಸು ಗುರುಗಳನ್ನು ಸೂಚಿಸುತ್ತದೆ ಈ ಕೃತಿ. ಇದರ ೧೭ನೆಯ ಸಂಧಿಯಿಂದ ೩೩ನೆಯ ಸಂಧಿಯವರೆಗಿನ ಭಾಗದಲ್ಲಿ ಬರುವ ಈ ಗುರು ಪರಂಪರೆ ಮತ್ತು ಚೀಲಾಳಸ್ವಾಮಿಯ ಚರಿತ್ರೆ ಹೀಗಿದೆ :

ಇಂದಿನ ತುಮಕೂರು ಜಿಲ್ಲೆಯ ಗುಬ್ಬಿ ಸುಪ್ರಸಿದ್ಧ ವೀರಶೈವಕೇಂದ್ರ. ಅಲ್ಲಿಯ ಜಲಾಶಯ ತಟದ ಮೇಲಿರುವ ಮಲ್ಲಿಕಾರ್ಜುನದೇವರನ್ನು ಮಾಗುಡದ ಮಲ್ಲಿಕಾರ್ಜುನ ಅಥವಾ ಅಮರಗುಂಡದ ಮಲ್ಲಿಕಾರ್ಜುನ ಹೆಸರಿನಿಂದ ಕರೆಯುತ್ತಿದ್ದರು. ಹೀಗಾಗಿ ಗುಬ್ಬಿಗೆ ಕಾಲಕ್ರಮದಲ್ಲಿ ಅಮರಗುಂಡ ಎಂಬ ಹೆಸರು ಬಳಕೆಗೊಂಡಿತು. ಶ್ರೀಪತಿ ಪಂಡಿತ, ಮಲ್ಲಿಕಾರ್ಜುನ ಪಂಡಿತ, ಊರ್ಧ್ವಲೋಚನ ಪಂಡಿತ, ಪಾಲ್ಕುರಿಕೆ ಸೋಮರು ಈ ಗ್ರಾಮಕ್ಕೆ ಸಂಬಂಧಪಟ್ಟವರು. ಸಮೀಪದ ಊರ್ಧ್ವಗಿರಿ(ಮೇಗಣ ಗವಿ?) ನಿವಾಸಿಗಳೂ, ಮಲ್ಲಿಕಾರ್ಜುನ ಪಂಡಿತಾರಾಧ್ಯರ ವಂಶಜರೂ, ಆರಾಧ್ಯ ಸಂಪ್ರದಾಯದವರೂ ಆದ ಮಲ್ಲಿಕಾರ್ಜುನಸ್ವಾಮಿ ಮಹಾದೇವಮ್ಮ ದಂಪತಿಗಳಿಗೆ ಅಮರಗುಂಡದ ಮಲ್ಲಿಕಾರ್ಜುನ ದೇವರ ಕೃಪೆಯಿಂದ ಚೀಲಾಳಸ್ವಾಮಿ ಜನಿಸಿದ. ಅಲ್ಲಮಪ್ರಭುವಿನ ಮೂರನೆಯ ಅವತಾರ, ತೋಂಟದ ಸಿದ್ಧಲಿಂಗಯತಿಯ ಎರಡನೆಯ ಅವತಾರವೆನಿಸಿ ಧರೆಗಿಳಿದ (೧೭ನೆಯ ಸಂಧಿ).

ಚೀಲಾಳಸ್ವಾಮಿ ಹುಟ್ಟಿದ್ದು ಆನಂದನಾಮ ಸಂವತ್ಸರದ ಕಾರ್ತಿಕ ಮಾಸದ ಸೋಮವಾರ ಮುಂಜಾನೆ (ಸಮಕಾಲೀನ ಮುರುಗಾ ಶಾಂತವೀರರ ಕಾಲ ೧೬೫೬–೧೭೦೩. ಈ ಶತಮಾನದಲ್ಲಿ ಆನಂದನಾಮ ಸಂವತ್ಸರವು ೧೬೧೪, ೧೬೭೪ ಈ ಕ್ರಿಸ್ತಶಕಗಳಲ್ಲಿ ಬರುತ್ತದೆ. ಇವುಗಳಲ್ಲಿ ಚೀಲಾಳಸ್ವಾಮಿಯ ಜನನ ಕ್ರಿ.ಶ. ೧೬೧೪ ರಲ್ಲಿ ಸಂಭವಿಸಿರುವ ಸಾಧ್ಯತೆಯಿದೆ). ಏಳನೆಯ ವರ್ಷಕ್ಕೆ ಚೀಲಾಳಸ್ವಾಮಿಗೆ ಊರ್ಧ್ವಗಿರಿ ಸಿಂಹಾಸನದ ಗುರುಗದ್ದುಗೆಯ ಪಟ್ಟಾಭಿಷೇಕ ಜರುಗಿತು (೧೮ನೆಯ ಸಂಧಿ).

ಕೆಲವು ಕಾಲದ ಬಳಿಕ ಕೂಡಲ ಸಂಗಮಕ್ಕೆ ಬಂದು, ಅತ್ತಿಕಟ್ಟೆಗೆ ಹೊರಟು ನಿಂತಿದ್ದ ಚೀಲಾಳಸ್ವಾಮಿಗೆ ಸಂಗಮೇಶ್ವರನು ಪ್ರತ್ಯಕ್ಷನಾಗಿ, ಹರಪುರ (ಹರಪನಹಳ್ಳಿ)ದಲ್ಲಿ ಅವನು ಷಟ್ಸ್ಥಲ

ಪಟ್ಟಾಧಿಕಾರಿಯಾಗುವುದನ್ನು ಸೂಚಿಸುತ್ತಾನೆ. ಮತ್ತು ಇವನನ್ನು ಕರೆತಂದು ಪಟ್ಟಕಟ್ಟಲು ಹರಪನಹಳ್ಳಿಯಲ್ಲಿದ್ದ ಶಮಿತಪುರಾಧೀಶ (ಸಮಿಧೆಪುರಾಧೀಶ=ಕಟ್ಟಿಗೆಹಳ್ಳಿಸ್ವಾಮಿ)ನಿಗೆ ಓಲೆಯ ಮೂಲಕ ತಿಳಿಸುತ್ತಾನೆ. ಅದೇ ವೇಳೆಗೆ ಗಗನದಿಂದಿಳಿದ ಬೇರೊಂದು ಓಲೆಯೂ ಶಮಿತಪುರಾಧೀಶನ ಕೈಸೇರುತ್ತದೆ. ಅದರಲ್ಲಿ "ಪ್ರಥಮ ಪಟ್ಟ ನಿರಂಜನಪ್ರಭು(ಶಿವ), ದ್ವಿತೀಯ ಪಟ್ಟ ಅಲ್ಲಮಪ್ರಭು, ತೃತೀಯ ಪಟ್ಟ (ತೋಂಟದ)ಸಿದ್ಧ(ಲಿಂಗ), ಚತುರ್ಥ ಪಟ್ಟ ಬೋಳಬಸವೇಶ್ವರ, ಪಂಚಮ ಪಟ್ಟ ಚೆನ್ನಂಜೆದೇಶಿಕ, ಷಷ್ಠಮ ಪಟ್ಟ ಶಮಿತಪುರಾಧೀಶ (=ಕಟ್ಟಗೆಹಳ್ಳಿಸ್ವಾಮಿ), ಸಪ್ತಮಪಟ್ಟ ಚೀಲಾಳಸ್ವಾಮಿಗೆ ಸಲ್ಲುವುದರಿಂದ ಶಿಖಿನಿರೂಪ (ಸಿಕ್ಕಾ ಹಾಕಿದ ಪತ್ರ), ಉಡುಗೊರೆ ಸಹಿತ ಹರಪನಹಳ್ಳಿ ಅರಸು ಬಸವಂತರಾಯನನ್ನು ಕಳುಹಿಸಿ, ಅವನನ್ನು ಕರೆತಂದು ಷಟ್ಸ್ಥಲ ಪಟ್ಟ ಕಟ್ಟಬೇಕು" ಎಂದು ಬರೆಯಲಾಗಿರುತ್ತದೆ (ಈ ಕಾವ್ಯದಲ್ಲಿ ಶಮೀತಪುರಾಧೀಶನನ್ನು ವಿಂದನಪುರಾಧೀಶ ಎಂದೂ ಕರೆಯಲಾಗಿದೆ. ಇದರ ಶುದ್ಧರೂಪ ಇಂಧನಪುರಾಧೀಶ. ಇದರ ಅರ್ಥ ಕಟ್ಟಿಗೆಹಳ್ಳೀ ಸಿದ್ಧಲಿಂಗಸ್ವಾಮಿ. ಈ ಕಾವ್ಯದ ಬೇರೆ ಸಂದರ್ಭಗಳಲ್ಲಿ ಕಟ್ಟಿಗೆಹಳ್ಳಿ ಸ್ವಾಮಿ ಎಂಬ ಪ್ರಯೋಗಗಳೂ ಇವೆ).

ಆ ಓಲೆಯಲ್ಲಿಯ ನಿರೂಪದಂತೆ ಚೀಲಾಳಸ್ವಾಮಿಯನ್ನು ಕರೆತರಲು ಶಮಿತಪುರಾಧೀಶನು ಬಸವಂತರಾಯನಿಗೆ ಆಜ್ಞಾಪಿಸುತ್ತಾನೆ. ಬಸವಂತರಾಯ ಶ್ರೀಶೈಲ ಸಮೀಪದ ಅತ್ತಿಕಟ್ಟೆಗೆ ಬರುತ್ತಾನೆ. ಅಲ್ಲಿ ಬಾಲಸಂಗ, ಬಾಲಬಸವ, ಬೋಳಬಸವ, ಗೋಣಿಬಸವ, ಮೇಳಾಪುರ ವೃಷ(ಭ), ಮಲೆಯ ಮಾದನ ಮಂಟೇದಯ್ಯ, ಕೊಡೆಯಕಲ್ಲು ರಾಚ ಇವರಿಂದ (ಇವರ ಸಂಪ್ರದಾಯದವರಿಂದ?) ಪೂಜಿಸಲ್ಪಡುತ್ತಿದ್ದ ಚೀಲಾಳಸ್ವಾಮಿಯನ್ನು ಕಂಡು, ಹರಪನಹಳ್ಳಿಗೆ ಆಗಮಿಸಲು ಅರಸು ಬಸವಂತರಾಯ ಬಿನ್ನವಿಸಿಕೊಳ್ಳುತ್ತಾನೆ. ಮತ್ತು ಶರಣಸತಿ ಭಾವದಿಂದ ಕೈಗೆ ಬಳೆದೊಟ್ಟು ಚೀಲಾಳಸ್ವಾಮಿಯ ಪಾದಪೂಜೆ ಮಾಡುತ್ತಾನೆ. ಕಲ್ಯಾಣ, ಶ್ರೀಶೈಲ, ಸಂಗಮ, ಹಂಪೆ, ಹರಪನಹಳ್ಳಿ ಈ ಐದು ವೀರಶೈವ ಪುಣ್ಯಕೇಂದ್ರಗಳೆಂದು ವಿವರಿಸುತ್ತಾನೆ. ಹರಪನಹಳ್ಳಿಗೆ ಬರಲು ಒಪ್ಪಿದ ಚೀಲಾಳಸ್ವಾಮಿ "ನೀವು ಮುಂದೆ ನಡೆಯಿರಿ, ನಾನು ಆಮೇಲೆ ಬರುವೆ" ಎಂದು ತಿಳಿಸುತ್ತಾನೆ. ಆ ಮೇರೆಗೆ ಮಾಘಮಾಸದ ಬಹುಳ ಚತುರ್ದಶಿ(ಶಿವರಾತ್ರಿ)ಯಂದು ಅತ್ತಿಕಟ್ಟೆಯಿಂದ ಪ್ರಯಾಣ ಬೆಳೆಸಿ, ರಾಚವಟ್ಟಿ (ರಾಚೋಟಿ) ಗ್ರಾಮಕ್ಕೆ ಬರುತ್ತಾನೆ. ಫಾಲ್ಗುಣದ ಮುಂದಿನ ಚೈತ್ರದಲ್ಲಿ ಚೀಲಾಳಸ್ವಾಮಿ ಹರಪನಹಳ್ಳಿಗೆ ಬರುವನೆಂಬ ಸುದ್ದಿ ಕೇಳಿ ಶಮಿತಪುರಾಧೀಶ (ಕಟ್ಟಿಗೆಹಳ್ಳಿ ಸಿದ್ಧಲಿಂಗ) ಸಂತುಷ್ಟನಾಗುತ್ತಾನೆ (೧೯ನೆಯ ಸಂಧಿ).

ಬಸವಂತರಾಯನು ಅತ್ತಿಕಟ್ಟೆಯಲ್ಲಿ ಸಲ್ಲಿಸಿದ ವೈಭವದ ಕಾಣಿಕೆಗಳೊಂದಿಗೆ ಪ್ರಯಾಣ ಮುಂದುವರಿಸಿದ ಚೀಲಾಳಸ್ವಾಮಿ, ರಾಚೋಟಿಯಿಂದ ಹೊರಟು ಯಾಘಂಟಿ, ಕೊಲ್ಲಿಪಾಕಿ, ಬಾಗೋಡಿ, ಬಂಕನಗರಿ, ಮಕ್ಕೆ, ದಿಲ್ಲಿ, ಅವರಂಗಬಾದಿ, ಭಾಗನಗರ, ವಿಜಯಪುರ, ತೆಲಗುದೇಶ, ಉಮ್ಮಿರಾಣಿ, ದೌಲತಾಬಾದಿ, ಏಳೂ(=ವೂ)ರು, ಮಸಳೆ, ಶಾಖಾಕೊಳ, ಮೈಲಾಪುರ, ಚೆನ್ನಪಟ್ಟಣ, ಕಾಳಹಸ್ತಿ ಚೋಳಮಂಡಲ, ಆಡಮಂಡಲ, ಶಾಂತಮಂಡಲ, ಪಾಂಡೆಮಂಡಲ, ರಾಮೇಶ್ವರ, ಮಧುರೆ, ಕಂಚಿ, ಚೆಂದಿವಾರ, ಅರುಣಾಚಲ, ಚಿದಂಬರ, ಕುಂಭಕೋಣ, ಜಂಬುಕೇಶ್ವರ, ಪೆರೂರು, ಮಲೆಯಾಳ, ನೀಲಗಿರಿ, ಶಿವಗಂಗೆ, ವಾತುಲಪುರಗಳ ಮೂಲಕ ಎಡೆಯೂರಿಗೆ ಬರುತ್ತಾನೆ.

ಎಡೆಯೂರಿನಲ್ಲಿ ತೋಂಟದ ಸಿದ್ಧಲಿಂಗ ಪ್ರತ್ಯಕ್ಷನಾಗಿ ತನ್ನ ವಚನಾಮೃತ ಟೀಕೆಯನ್ನು ನೀಡಿ ಬೀಳ್ಕೊಡುತ್ತಾನೆ. ಅಲ್ಲಿಂದ ಗರಳಪುರಿ(ನಂಜನಗೂಡು), ಬೆಟ್ಟದಪುರ, ಹದಿನಾಡುಸೀಮೆ,

ಸೆಟ್ಟಿದೇಶ, ಮೊರಸನಾಡು, ಬೆಂಗಳೂರು, ಬಳ್ಳಪುರ, ಪುಂಗನೂರು, ಗುಮ್ಮಳಾಪುರ, ಹೊಸಕೋಟೆ, ನರಸಾಪುರ, ಬಾವ್ನೂರು, ನೆಲಮಂಗಲ, ಗುಬ್ಬಿ, ಹೊಸಹಳ್ಳಿ, ಹುಲಿಕಲ್ಲು, ಮಾಗಡಿ, ಗೂಳೂರು, ತುಮಕೂರು, ಚೆನ್ನಪಟ್ಟಣ, ಮಳವಳ್ಳಿ, ಶ್ರೀರಂಗಪಟ್ಟಣ, ಕಿಕ್ಕೇರಿ, ಸಾಸಲು, ಚೆನ್ನರಾಯನಪಟ್ಟಣಗಳ ಮೂಲಕ ಹಾಸನಕ್ಕೆ ಬರುತ್ತಾನೆ. ಆಮೇಲೆ ಬೇಲೂರು, ತುರುವೇಕೆರೆ, ನಾಗಮಂಗಲ, ಅರಳಗುಪ್ಪೆ, ಹೊಸಕೆರೆ, ಹಾಗಲವಾಡಿ, ನಾಗರನವಿಲೆ, ಜಂಬೂರ, ಹಂಡಸಿ, ಗಾಳಿಪೂಜೆ, ಸಕ್ಕರೆ ಪಟ್ಟಣ, ಎಕ್ಕಡಿ, ಬೆಂಕಿಪುರ, ಚೆನ್ನಗಿರಿ, ತವನಿಧಿ, ಹೊನ್ನೂರು, ಹೊನ್ನಾಳಿ, ಲಕ್ಕವಳ್ಳಿ, ಹೊಳೆಯ ಸೋಮಪುರಗಳಿಗೆ ಬಂದನು. ಆಗ ಕೆಳದಿ ಅರಸು ಆನೆಯ ಮೇಲೆ ಮೆರವಣಿಗೆಯೊಂದಿಗೆ ಕರೆದೊಯ್ದು ಮಾಣಿಕದ ಪದಕ, ವಜ್ರಖಚಿತ ಯೋಗವಟ್ಟ, ಮುತ್ತಿನ ಸರ, ಹವಳದ ಲಾಕುಲ, ಬೀಸಣಿಗೆ, ಬೆಳ್ಳಿ ಹಾವುಗೆ ಮೊದಲಾದವುಗಳನ್ನು ಅರ್ಪಿಸಿದನು. ಬಳಿಕ ಸಾಗರ, ಸೊರಬಗಳ ಮಾರ್ಗವಾಗಿ ಸೋದೆಗೆ ಪ್ರಯಾಣಿಸಿದನು.

ಸೋದೆಯ ಅರಸು ಪಾದರಸ, ಪಲ್ಲಕ್ಕಿ, ಕನಕಪಾತ್ರೆ ಇತ್ಯಾದಿಗಳನ್ನು ಸಲ್ಲಿಸಿದನು ಅಲ್ಲಿಂದ ಉಳಿವೆ, ತಿಳಿವಳ್ಳಿ, ಬನವಸಿ, ಜಂಬೂರ, ಬಳ್ಳೆಗಾವಿ, ಹಾವೇರಿ, ಹದಡಿ, ಲಕ್ಷ್ಮೇಶ್ವರ, ಶಿರಹಟ್ಟಿ, ಡಂಬಳ, ಹುನಗುಂದ, ಪಟ್ಟದಕಲ್ಲು, ಕೊಪ್ಪಳ, ಗದಗ, ಹನುಮಸಾಗರ, ಸುರಪುರ, ಕಲ್ಯಾಣ, ಕಲಬುರ್ಗಿ, ಮುದಗಲ್ಲು, ರಾಯಚೂರು, ಕಾಶಿ, ಕಾಶ್ಮೀರ, ಎಳಮಲೆ, ನೆಲುವಿಗೆ, ತಿಳಿಗಾವಿ, ನಾಗಾವಿ, ಬೊಳೆಯಗಾವಿ, ಸುರೇಯಗಾವಿ, ಅಳವಂಡಿ, ತಳಕಲ್ಲು, ಕನಕಗಿರಿ, ಮಾನವಿ, ಬಳಗಾನೂರು, ಗುಡಿಯಕೋಟೆ, ರಾಯದುರ್ಗ, ಕಡಪೆ, ಹೋತೂರು, ಉರುವಕೊಂಡೆ, ಕೊಂಡಗುಂದಿ, ಗಲಗ, ಕಂದಗಲ್ಲು, ಬೂದಗುಪ್ಪೆ, ಆದವಾನಿ, ಅರಕಾಡ, ಲಾಲಪೇಟೆ, ಗುಡೂರು ಮಾರ್ಗವಾಗಿ ಅನಂತಪುರಕ್ಕೆ ಬಂದು ಪ್ರನ್ನಭೂಪಾಲನಿಂದಲೂ, ಬಳ್ಳಾರಿಗೆ ಬಂದು (ಹಂಡೆಯ) ಹನುಮಂತ ದೊರೆಯಿಂದಲೂ ಗೌರವ ಸ್ವೀಕರಿಸಿದನು.

ತರುವಾಯ ಜೆರಿಮಲೆ, ಉಜ್ಜಯಿನಿ ಮೂಲಕ ಚಿತ್ತರಕಲ್ಲು ಗ್ರಾಮಕ್ಕೆ ಬರಲು, ಅಲ್ಲಿಯ ಸಂಪಿಗೆ ಸಿದ್ಧೇಶ್ವರನು ಜಂಗಮನಾಗಿ ಬಂದು, ಬೆಳ್ಳಿಯ ಪೀಠ, ಚಿನ್ನದ ಗದ್ದುಗೆ ಒಪ್ಪಿಸಿದನು. ಚೀಲಾಳಸ್ವಾಮಿ ಅಲ್ಲಿ ಆಳುವ ದೊರೆಗೆ ಆಶೀರ್ವದಿಸಿ ಹರಪನಹಳ್ಳಿ ಪ್ರಾಂತದ ಕೊನೆಯ ಗ್ರಾಮವಾದ ಅರಸೀಕೆರೆಗೆ ಬಂದನು. ಅಲ್ಲಿಯ ಕೋಲಶಾಂತೇಶ ಬಾಲಜಂಗಮನಾಗಿ ಬಂದು ಗೌರವಿಸಿದ, ಬಳಿಕ ಶಿಖಿಪುರ (ಕೊಟ್ಟೂರು?) ಕ್ಕೆ ಆಗಮಿಸಿ ಅಲ್ಲಿಯ ಮೂರುಕಲ್ಲು ಶಿವಾಲಯದಲ್ಲಿ ಬೀಡುಬಿಟ್ಟನು. ಇದನ್ನು ಕೇಳಿದ ಬಸವಂತರಾಯನು ವೈಭವದಿಂದ ಹರಪನಹಳ್ಳಿಗೆ ಬರಮಾಡಿಕೊಂಡನು. ಹರಪನಹಳ್ಳಿಯಲ್ಲಿ ಎದುರುನೋಡುತ್ತಿದ್ದ ಶಮೀತಪುರಾಧೀಶನ ದರ್ಶನವಾಯಿತು. ಈ ಗ್ರಾಮದ ಗುಡ್ಡದ ಓರೆಯಲ್ಲಿರುವ ಭವ್ಯಮಠದ ಕಮಲಮಂದಿರದಲ್ಲಿ ಚೀಲಾಳಸ್ವಾಮಿ ವಿರಾಜಿಸಿದನು (೨೦ನೆಯ ಸಂಧಿ).

ಚೀಲಾಳಸ್ವಾಮಿಯು ಹರಪನಹಳ್ಳಿಯಲ್ಲಿ ಷಟ್ಸ್ಥಲಪೀಠಸ್ಥನಾಗಿ ಅನುಭವಮಂಟಪದಲ್ಲಿ ಶೋಭಿಸುತ್ತಿರಲು, ಅತೃಪ್ತರಾದ "ಕೆಲವರು...... ಬೇರೆ ಸಮಯವ ಮಾಡಿಕೊಂಡರು". ಚೀಲಾಳಸ್ವಾಮಿ ಮೂರುಸಾವಿರ ಶಿಷ್ಯರಿಂದ ಶೋಭಿಸಿದನು. ಮುಮ್ಮಡಿ ಬಸವಂತಭೂಪಾಲ ಹಸ್ತಕ್ಕೆ ಬಳೆತೊಟ್ಟು 'ಶರಣಸತಿ' ಭವದಿಂದ ಸೇವೆ ಸಲ್ಲಿಸತೊಡಗಿದನು.

ಘಟಿಕಸ್ಥಳ ಹರಪುರದ ಗುಡ್ಡದ
ಮಠದ, ಷಟ್ಸ್ಥಲತತ್ವಕುಳ ಸಂ
ಪುಟದ, ಶರಣರ ಮಕುಟ ಪರಶಿವಯೋಗ ಮಂಟಪದ॥
ಘಟಿತ ಸಿಂಹಾಸನದ ಪ್ರಣಮದ
ಪಟಲ ಪೀಠದ ಮೇಲೆ ಕಮಲದಿ
ನಿಟಿಲನೇತ್ರವತಾರ ಚೀಲಳಸ್ವಾಮಿಯೊಪ್ಪಿಹರು॥(೨೧-೨೩)

ಹೀಗೆ ಕೆಲವು ಕಾಲ ಕಳೆಯಲು, ಶಮಿತಪುರಾಧೀಶ (ಕಟ್ಟಿಗೆಹಳ್ಳಿ ಸಿದ್ಧಲಿಂಗ) ಐಕ್ಯವಾದನು. ಕೆಲವು ದಿನಗಳ ಬಳಿಕ ಚೀಲಾಳಸ್ವಾಮಿ ಕಪಿಲಸಿದ್ಧಯತೀಶನಿಗೆ ಅನುಗ್ರಹ ದಯಪಾಲಿಸಿದ(೨೧ನೆಯ ಸಂಧಿ).

"ದೇಶಿಕ ವಿರಕ್ತರಿಗೆ ಷಟ್ಸ್ಥಲಕರ್ತ......ಕಪಿಲಸಿದ್ಧೇಶ"ನಾದನು. ಅವನಿಗೆ ಚೀಲಾಳಸ್ವಾಮಿಯು "ಉಪದೇಶ ಜ್ಞಾನಪ್ರಕಾಶಬೋಧೆಯ ತುಂಬಿ", "ಷಟ್ಸ್ಥಲಪೀಠಪಟ್ಟದ ಸಾಮರಾಜ್ಯದ ಶಿಖಿರೂಪವ"* ಒಪ್ಪಿಸಿದನು.

ಧರೆಗೆ ಧರ್ಮವ ಬೆಳೆಸಿ, ಷಟ್ಸ್ಥಲ
ದೊರೆತನವ ಸ್ಥಿರಗೊಳಿಸಿ, ಸಮಯದ
ಶರಣ ವಿರತರ ಪರಮಸುಖದೊಳಗಿರಿಸಿ, ಹರಪುರದ।
ದೊರೆಗೆ ಸ್ಥಿರಪಟ್ಟಗಳ ಕಟ್ಟಿಸಿ
ಕರೆಸಿ, ಕರುಣದಿ ಹರಸಿ, ಭಕ್ತರ
ನೆರವಿಗಭಯವನಿತ್ತು ಯೋಗಸಮಾಧಿಯೊಳಗಿಹನು॥ (೨೨-೨೭)

ಎಂಬ ಪದ್ಯದ ಮೂಲಕ ಚೀಲಾಳಸ್ವಾಮಿಯ ಬದುಕಿನ ಕೊನೆಯ ಘಟ್ಟವನ್ನು ಚಿತ್ರಿಸಲಾಗಿದೆ. "ಕೆಲವರು......ಬೇರೆ ಸಮಯವ ಮಾಡಿಕೊಂಡರು" ಎಂಬ ವಾಕ್ಯ ಸೂಚಿಸುವಂತೆ ಈ ಕಾಲದಲ್ಲಿ ಸಮಯಭೇದ ಶಾಖೆಗಳು ಅಂಕುರಿಸಿದ ಫಲವಾಗಿ ಮೂಲಶಾಖೆಯ ನೇರ ವಾರಸುದಾರನೆನಿಸಿದ ಚೀಲಾಳಸ್ವಾಮಿಯ ಹೆಸರಿನಲ್ಲಿ "ಚೀಲಾಳ ಸಮಯ" ಹುಟ್ಟಿಕೊಂಡಿತು. ಚೀಲಾಳಸ್ವಾಮಿಯ ಬಳಿಕ ಕಫಿಲಸಿದ್ಧಸ್ವಾಮಿ ಉತ್ತರಾಧಿಕಾರಿಯಾದನೆಂದು ಈ ಕೃತಿ ಹೇಳುತ್ತಿದ್ದರೂ ಈತನ ವಿವರ ಲಭ್ಯವಿಲ್ಲ. ಹರಪನಹಳ್ಳಿ ಭಾಗದಲ್ಲಿ ಅಂದರೆ ಬಳ್ಳಾರಿ ಪ್ರದೇಶದ ಉರವಕೊಂಡೆ, ಹೊಸಪೇಟೆ, ಕೊಪ್ಪಳ ಮೊದಲಾದ ಊರುಗಳಲ್ಲಿ ಈ ಚೀಲಾಳಸಮಯದ ಮಠಗಳಿವೆ. ಈ ಚೀಲಾಳ ಸಮಯದ ಜಗದ್ಗುರು ಪೀಠವು ಈ ಬಳ್ಳಾರಿ ಪ್ರದೇಶದಿಂದಲೇ ಡಂಬಳಕ್ಕೆ, ಬಳಿಕ ಗದುಗಿಗೆ ಬಂದಿದೆ ಎಂದು ಹೇಳಲು ಆಧಾರಗಳಿವೆ. ಆದರೆ ಬಳ್ಳಾರಿ ಪ್ರದೇಶದ ಚೀಲಾಳ ಸಮಯದ ಯಾವುದೇ ಶಾಖೆಯ ಗುರು ಪರಂಪರೆಯಲ್ಲಿಯೂ ಕಪಿಲಸಿದ್ಧ ಹೆಸರು ಕಂಡುಬರುವುದಿಲ್ಲ. ಈ ಸಮಯದ ಶಾಖೆಗಳಲ್ಲಿ

---

* ಶಿಖಿ = ಅಧಿಕಾರ ಮುದ್ರೆ. 'ಸಿಕ್ಕಾ' ಎಂಬ ಪದವನ್ನೇ ಇಲ್ಲಿ 'ಶಿಖಿ' ಎಂಬ ಪದದಿಂದ ಕರೆಯಲಾಗಿದೆ. ಚೆನ್ನಬಸವ ಕೊಟ್ಟ ಶಿಖಾಶೈಲಗಳು ತಮ್ಮ ಮಠದಲ್ಲಿ ಇರುವುದಾಗಿ ಚಿತ್ರದುರ್ಗ ಮಠದವರು ಹೇಳುತ್ತಾರೆ. ಬಹುಶಃ ಇವು ಸಿಕ್ಕಾ, ಶೀಲ್ಗಳಾಗಿರಬಹುದು.

ಜಗದ್ಗುರು ಪೀಠ ಗದುಗಿನದಾಗಿರುವುದರಿಂದ ಇದರ ಗುರುಪರಂಪರೆಯಲ್ಲಿಯೇ ಕಪಿಲಸಿದ್ಧ ಹೆಸರನ್ನು ಶೋಧಿಸಬೇಕಾಗಿದೆ.

ಧಾರವಾಡ ಕನ್ನಡ ಅಧ್ಯಯನ ಪೀಠದ ೨೬೪೯ನೆಯ ನಂಬರಿನ ವೀರಶೈವಾಮೃತ ಮಹಾಪುರಾಣದ ಕಾಗದ ಪ್ರತಿಯ ಅಂತ್ಯ ಪ್ರಶಸ್ತಿ ಹೀಗಿದೆ: "ತೋಂಟದ ಸಿದ್ಧಲಿಂಗೇಶನ ಸಂಪ್ರದಾಯಕರಾದ....... ಕಟ್ಟಿಗೆಹಳ್ಳಿ ಸಿದ್ಧಲಿಂಗೇಶ್ವರನ ಚಿತ್ಕರಕಮಲೋದಯ ಸುಜ್ಞಾನ ಪುಂಜಪ್ರದ ಸುದ್ವರ್ಣಲೋಷ್ಠಾದಿ ಲೌಕಿಕಭೋಗ ತೃಣೀಕೃತ ಭಕ್ತಜನಬಂಧು ಆಚಾರಾಗ್ರಣಿ ಬಸವಪ್ರಭು ಚೀಲಾಳಸ್ವಾಮಿಗಳ ಪಾದರವಿಂದಕ್ಕೆ ಈ ವೀರಶೈವಾಮೃತ ಪುರಾಣವನ್ನು ಕನ್ನಡದೇಶದ ರನ್ನಗನ್ನಡಿಯಂತೆ ಶೋಭಿಸುತ್ತಿರ್ಪ ಕಾನಕಾನಹಳ್ಳಿ ವಳಯದ ತುಂಗಣಿ ಗ್ರಾಮದ ಆರಾಧ್ಯ ಬರಹದ ಬಸವಲಿಂಗದೇವರು, ಮಾರಸಮುದ್ರದ ಶರಣಯ್ಯನ ಗುರುಪಾದಶೆಟ್ಟಿಯ ಭಕ್ತಿಯೆಂದು, ವೀರಶೈವಾಮೃತ ಪುರಾಣವ ಸಮರ್ಪಿಸಿದರು. ...ಪುನರಪಿ ಈ ಶಾಸ್ತ್ರಮಂ ಚೀ(ಲಾ)ಳೇಶ್ವರನು ತಮ್ಮ ಕರಸರಸೀಜಾತ ಕಪಿಲಸಿದ್ಧಸ್ವಾಮಿಗಳಿಗೆ ಪಾಲಿಸಿದರು. ಶ್ರೀ ಶ್ರೀ ಶ್ರೀ ......" ಈ ಅಂತ್ಯಪ್ರಶಸ್ತಿಯು ಷಟ್ಸ್ಥಲಶಿವಾಯಣದಲ್ಲಿ ಹೇಳಲಾಗಿರುವ ಚೀಲಾಳೇಶ್ವರ ಮತ್ತು ಕಪಿಲಸಿದ್ಧಸ್ವಾಮಿಗಳ ಗುರುಶಿಷ್ಯ ಸಂಬಂಧವನ್ನು ದೃಢೀಕರಿಸುತ್ತದೆಯೇ ಹೊರತು ಕಪಿಲಸಿದ್ಧಸ್ವಾಮಿಯ ಬಗ್ಗೆ ಹೆಚ್ಚಿನ ಮಾಹಿತಿ ನೀಡುವುದಿಲ್ಲ.

ವ್ಯಕ್ತಿತ್ವ :

'ಷಟ್ಸ್ಥಲ ಶಿವಾಯಣ' ಕೃತಿಯ ಮುಖ್ಯ ವಿಷಯ ಚೀಲಾಳಸ್ವಾಮಿಯ ಪರ್ಯಟನವೇ ಆಗಿರುವುದನ್ನು ಗಮನಿಸಿದರೆ, ಷಟ್ಸ್ಥಲಶಿವ ಎನಿಸಿದ ಚೀಲಾಳಸ್ವಾಮಿಯ ಅಯನವೆಂಬುದೇ ಈ ಶೀರ್ಷಿಕೆಯ ಅರ್ಥವೆನಿಸುತ್ತದೆ. 'ಷಟ್ಸ್ಥಲಶಿವ' ಎಂಬ ಈ ವಿಶೇಷಣಕ್ಕೆ ಅರ್ಥ ತುಂಬುವ ರೀತಿಯಲ್ಲಿ ಈ ಕೃತಿಯೊಳಗೆ ಈತನ ವ್ಯಕ್ತಿತ್ವ ಪರಿಣಾಮಕಾರಿಯಾಗಿ ಮೂಡಿದೆ.

ನಾರದನ ಬಿನ್ನಹದ ಮೇರೆಗೆ ವೀರಶೈವೋದ್ಧಾರಕ್ಕಾಗಿ ತನ್ನ ಚಿತ್ಕಳೆಯನ್ನೇ ಚೀಲಾಳಸ್ವಾಮಿ ಹೆಸರಿನಲ್ಲಿ ಶಿವ ಭೂಮಿಗೆ ಕಳಿಸಿದ (೧-೧೦.೧೧). ಈತನು ಪ್ರಥಮಯುಗದಲ್ಲಿ ಸುಕೇಶಪ್ರಭು, ಪಾಣಿನಿಮಹಾಪ್ರಭು, ನಿರಂಜನಪ್ರಭು ಶೂನ್ಯಕಾಯಪ್ರಭುವೆಂಬ ನಾಲ್ಕು ಹೆಸರುಗಳಿಂದ, ದ್ವಿತೀಯ ಯುಗದಲ್ಲಿ ಆನಂದಪ್ರಭು, ಸುಜ್ಞಾನಪ್ರಭು, ಚಿನ್ಮೂರ್ತಿಪ್ರಭು, ಗುಹೇಶಪ್ರಭುವೆಂಬ ನಾಲ್ಕು ಹೆಸರುಗಳಿಂದ, ಮೂರನೆಯ ಯುಗದಲ್ಲಿ ಅನಿಮಿಷಪ್ರಭು, ಚಿನ್ಮಯಪ್ರಭು, ಮೂಲಸ್ತಂಭಪ್ರಭು, ಜ್ಯೋತಿರ್ಮಹೇಶಪ್ರಭುವೆಂಬ ನಾಲ್ಕು ಹೆಸರುಗಳಿಂದ ಅವತರಿಸಿ ವೀರಶೈವವನ್ನು ಉದ್ಧರಿಸಿದಂತೆ, ನಾಲ್ಕನೆಯ ಯುಗದಲ್ಲಿ ಅಲ್ಲಮಪ್ರಭು, ಚಿದಾನಂದಪ್ರಭು, ಬಸವಪ್ರಭು, ಚೀಲಾಳಪ್ರಭುವೆಂಬ ನಾಲ್ಕು ಹೆಸರುಗಳಿಂದ ವೀರಶೈವವನ್ನು ಉದ್ಧರಿಸಿದ (೨-೨೦, ೨೧, ೨೨, ೨೩). ಎರಡನೆಯ ಪ್ರಭು (೧೩-೩೧) ತೋಂಟದಾರ್ಯಾವತಾರ(೨೧-೩೬) ಎಂದೂ "ಶಾರದಾಪೀಠ ಪ್ರಭುವೊ, ವಿದ್ಯಾರಣ್ಯ ಸದ್ಗುರುವೊ" ಎಂದೂ ಖ್ಯಾತನಾದುದಲ್ಲದೆ, 'ಪರಶಿವನೆ ಚೀಲಾಳಸ್ವಾಮಿಯು, ನಿರುತವಿದು ಚೀಲಾಳಸ್ವಾಮಿಯೆ ಪರಶಿವನು'(೧೩-೮) ಎಂಬ ಪ್ರಸಿದ್ಧಿ ಇವನದಾಗಿದ್ದಿತು. ೧೩-೯, ೧೩-೧೦ ರಲ್ಲಿ ಈ ವಿಷಯವನ್ನು ಇನ್ನೂ ಬೆಳೆಸಲಾಗಿದೆ. "ಧರೆಯೊಳಿರುವನು ದೇವಲೋಕದಿ ಹರನ

ಸಮಗದ್ದುಗೆಯಲಿರುವನು"(೧೪-೩೧) ಎಂಬ ಹೇಳಿಕೆ, ಚೀಲಾಳಸ್ವಾಮಿ ಶಿವನಿಗೆ ಸಮಾನವೆಂದು ತಿಳಿಸುತ್ತದೆ. ಮುಂದುವರಿದು

ಸೊನ್ನಲಾಪುರ ಸಿದ್ಧರಾಮಗೆ
ಮುನ್ನ ಬಸವನ ತೋರಿದಂದದಿ
ತನ್ನ ಹೃದಯವ ತೆರೆದು ತೋರಿದ ಸಭೆಗೆ ಶಂಕರನು॥(೧೪-೪೦)

ಎನ್ನುತ್ತ ಈತನು ಶಿವನ ಹೃದಯವಾಸಿಯೆಂದು ಪ್ರತಿಪಾದಿಸಲಾಗಿದೆ. ಈ ಎಲ್ಲ ವಿವರಗಳು ಚೀಲಾಳಸ್ವಾಮಿ ತನ್ನ ಪರಿಸರದಲ್ಲಿ ಪಡೆದ ದೈವೀವ್ಯಕ್ತಿತ್ವವನ್ನು ದ್ಯೋತಿಸುತ್ತವೆ.

ಉಲುಹಡಗಿದನುಭವ ಸುಧಾಬ್ಧಿಯೊ
ಎಲೆಗಳೆದ ಸುಜ್ಞಾನವೃಕ್ಷವೊ
ಫಲಪದಂಗಳ ಹಳಿದು ಹಬ್ಬಿದ ಪ್ರಣಮಲತೆ ಕುಡಿಯೋ॥(೨೨-೪೯)

ಕಲೆಯೋ ಗಾನವೋ, ಕಾವಿ ವಸ್ತ್ರವೋ
ತಲೆಯೊ ತತ್ವವೊ, ತಳಿರೊ ಜಡೆಗಳೊ
ಹೊಲಬೊ ಯೋಗವೊ, ಭಸಿತ ರುದ್ರಾಕ್ಷಿಗಳೆ ಭೂಷಣವೋ॥(೧೪-೨).

ಎಂಬ ಪದ್ಯಗಳಂತೂ ಚೀಲಾಳಸ್ವಾಮಿಯ ಭೌತಿಕ, ಸಾಂಸ್ಕೃತಿಕ, ಯೌಗಿಕ ಬದುಕನ್ನು ವ್ಯಕ್ತಪಡಿಸುತ್ತವೆ. ಹೀಗೆ ದೈವೀವ್ಯಕ್ತಿತ್ವವನ್ನು ರೂಪಿಸಿಕೊಂಡು ಹರಪನಹಳ್ಳಿ ಪರಿಸರವನ್ನು ಕಲ್ಯಾಣ ಪರಂಪರೆಯ ಒಂದು ತಿರುವು ಬಿಂದುವನ್ನಾಗಿ, ಉನ್ನತ ಕೇಂದ್ರವನ್ನಾಗಿ ಮಾಡಿದ ಯುಗಪುರುಷನೆನಿಸಿದ್ದಾನೆ, ಚೀಲಾಳಪ್ರಭು.

ಇದೆಲ್ಲವನ್ನು ನೋಡಿದರೆ, ಪರಂಪರೆಯೊಂದು ಹೋಳಾಗುವ ಕಠಿಣ ಸಂದರ್ಭದಲ್ಲಿ ನೇರ ಶಾಖೆಯ ವಾರಸುದಾರತ್ವ ವಹಿಸಿಕೊಂಡವನೆಂಬ ಕಾರಣದಿಂದಲ್ಲದೆ, ತನ್ನ ದೈವೀವ್ಯಕ್ತಿತ್ವದಿಂದಲೂ ಪ್ರಭಾವಶಾಲಿಯಾಗಿದ್ದ ಕಾರಣ, ಇವನ ಹೆಸರನ್ನು ಹೊತ್ತು "ಸಮಯ"ವೊಂದು ಮುನ್ನಡೆಯಿತೆಂದು ಸ್ಪಷ್ಟವಾಗುತ್ತದೆ.

ಕಾವ್ಯಶಿಲ್ಪ-ಕವಿತ್ವ:

ಮೂಲತಃ ಐತಿಹಾಸಿಕ ಕೃತಿಯಾಗಿರುವ ಷಟ್ಸ್ಥಲಶಿವಾಯಣಕ್ಕೆ ವೀರಶೈವ ಪುರಾಣಲಕ್ಷಣಗಳನ್ನು ಆರೋಪಿಸಲಾಗಿದೆ. ಕಥಾನಾಯಕನನ್ನು ದೇವಲೋಕ ಸಂಬಂಧಿಯಾಗಿ, ಅಲೌಕಿಕ ಶಕ್ತಿ ಹೊಂದಿದವನಾಗಿ ಚಿತ್ರಿಸುವುದು, ಪೂರಕವಾಗಿ ವೀರಶೈವ ಸಿದ್ಧಾಂತಗಳನ್ನು ವಿವರಿಸುವುದು - ಇವೇ ಮೊದಲಾದ ಪುರಾಣ ಲಕ್ಷಣಗಳು ಈ ಕೃತಿಯಲ್ಲಿ ಕಂಡುಬರುತ್ತವೆ. ಇದಲ್ಲದೆ ಶಿವನು ಪಾರ್ವತಿಗೆ, ನಂದೀಶನು ಶಿವಗಣಂಗಳಿಗೆ, ಅಲ್ಲಮಪ್ರಭುವು ಬಸವಾದಿಪ್ರಮಥರಿಗೆ ಹೇಳಿದ ಈ ಕಥೆಯನ್ನು ಕಥಾನಾಯಕ ಚೀಲಾಳಸ್ವಾಮಿಯು ತನ್ನ ಶಿಷ್ಯ ಕುಮಾರಪ್ರಭುವಿಗೆ ಹೇಳಿದಂತೆ ಇಲ್ಲಿ ಕಥಾಶಿಲ್ಪವನ್ನು ಕಲ್ಪಿಸಲಾಗಿದೆ. ಹೀಗಾಗಿ ಕೃತಿಯ ಉದ್ದಕ್ಕೂ ಶಿವ-ಪಾರ್ವತಿ ಸಂವಾದ, ಅಲ್ಲಮ-ಬಸವ ಸಂವಾದ, ಚೀಲಾಳಸ್ವಾಮಿ-ಕುಮಾರಪ್ರಭು ಸಂವಾದರೂಪದಲ್ಲಿ ಕೃತಿ

ಮುನ್ನಡೆಯುತ್ತದೆ. ಈ ತಂತ್ರ ಒಮ್ಮೊಮ್ಮೆ ಆಭಾಸವೆನಿಸುತ್ತಿದ್ದರೂ ಹೇಳಿಕೊಳ್ಳುವ ದೋಷ ಕಂಡುಬರುವುದಿಲ್ಲ.

ಇಲ್ಲಿ ಪ್ರತಿಯೊಂದು ಸಂಧಿಗೂ ಒಂದು ಕ್ರಮವಿದೆ. ಆರಂಭದಲ್ಲಿ ಕಥಾ ಸೂಚನೆಯ ಅರ್ಧಪದ್ಯ, ಶಿವಸ್ತುತಿ, ಚೀಲಾಳಸ್ವಾಮಿ ಸ್ತುತಿ, ಷಟ್ಸ್ಥಲಶಿವಾಯಣವನ್ನು ಇಂಥವರಿಗೆ ಹೇಳಬಾರದು-ಇಂಥವರಿಗೆ ಹೇಳಬೇಕು ಎಂಬ ಪದ್ಯಗಳು ಬರುತ್ತವೆ. ಬಳಿಕ ಶಿವನು ಪಾರ್ವತಿಗೆ, ನಂದಿ ಶಿವಗಣಂಗಳಿಗೆ, ಅಲ್ಲಮ ಬಸವಾದಿಗಳಿಗೆ, ಚೀಲಾಳಸ್ವಾಮಿ ಕುಮಾರಪ್ರಭುವಿಗೆ ಹೇಳಿದನೆಂಬ ವಿಷಯಗಳನ್ನೊಳಗೊಂಡ ಪದ್ಯ ಕಾಣಿಸುತ್ತದೆ. ಆಮೇಲೆ ಕಥಾ ವಿವರ ಮುಂದುವರಿಯುತ್ತದೆ. ಮತ್ತು ಕೊನೆಯಲ್ಲಿ ಶಿವನು ಪಾರ್ವತಿಗೆ, ನಂದಿ ಶಿವಗಣಂಗಳಿಗೆ, ಅಲ್ಲಮನು ಬಸವಾದಿಗಳಿಗೆ ಹೇಳಿದ ಕಥೆಯನ್ನು ಚೀಲಾಳಸ್ವಾಮಿ ಶಿಷ್ಯನಿಗೆ ಹೇಳಿದನೆಂಬ ಆಶಯದ ಪದ್ಯ ಬರುತ್ತದೆ. ಇದು ಪ್ರತಿಯೊಂದು ಸಂಧಿಯ ಚೌಕಟ್ಟು.

"ಕಡತ ಬಳಹವ ಹಿಡಿದು ಮಸಿಗಳ
ಒಡೆದು ಮಾತ್ರೆಯನೆಣಿಸಿ ಬರೆವೊಡೆ
ಬಡಮತಿಯ ಬಡಕವಿತೆ"(೧೪-೧೦)

ಎನ್ನುತ್ತ ಬಡಕವಿತೆಯನ್ನು ಸರಿಯಾಗಿಯೇ ಗುರುತಿಸಿ, ಇದನ್ನು ಮೀರಿದ ಕಾವ್ಯಪ್ರಕ್ರಿಯೆ ತನ್ನದೆಂದು ಹೇಳುವ ಈ ಕವಿಯದು ಶುದ್ಧ ದೇಶೀಪ್ರತಿಭೆ. ಲಲಿತಶೈಲಿ, ತತ್ವಜ್ಞಾನದ ಗಾಢ ತಿಳುವಳಿಕೆ, ಬಹುಶ್ರುತತ್ವ ಕಾರಣವಾಗಿ ಎಷ್ಟೇ ಮಾರ್ಗಮುಖಿಯಾದರೂ ಈತ ದೇಶೀ ನೆಲೆಯನ್ನು ಮರೆಯುವುದಿಲ್ಲ.

ಕೇಳೊ ಮಗನೇ ಬಸವಪ್ರಭುವಿನ
ಏಳಿಗೆಯ, ನವರಸ.........
ಚೀಲವನೆ ನಿನಗೊರೆವೆನೆಂದನು ನಗುತ ಗುರುರಾಯ॥(೨-೬)

ಎಂಬಲ್ಲಿಯ ಸಂಬೋಧನ ಶೈಲಿ, ನವರಸ ಚೀಲವೆಂಬಂಥ ಪದಪ್ರಯೋಗಗಳಿಂದ ಅಭಿವ್ಯಕ್ತಿ ದೇಶೀಯತೆಗೆ ತಿರುಗಿದೆ. ದೇಶೀ ಭಾಷೆಯ ಏಣುಗಳನ್ನು ಅತಿಯಾಗಿ ಮುರಿಯದ, ಛಂದಸ್ಸಿನ ಅತಿ ನಿಯಂತ್ರಣಕ್ಕೆ ರಚನೆಯನ್ನು ಗುರಿಪಡಿಸದ ಇಲ್ಲಿಯ ಸೃಷ್ಟಿಕ್ರಿಯೆ ಹೃದ್ಯವೆನಿಸುತ್ತದೆ.

ಮದಗಜವೊ ಮರಿಹಂಸೆ ಗಮನವೊ
ಕದಳಿ ಕಂಬವೊ ಕನಕದೊಡೆಗಳೋ
ಕದಪೊ ಕನ್ನಡಿ ಥಳಕೊ ದಂತವೊ ದಾಡಿಮದ ಬಿತ್ತೋ।
ವದನವೋ ಪರಿಪೂರ್ಣ ಚಂದ್ರನೊ......(೬೧)

ಎಂಬ ಸ್ತ್ರೀವರ್ಣನೆಯಲ್ಲಿ ಸಿದ್ಧ ಉಪಮೆಗಳಿದ್ದರೂ ಇಲ್ಲಿಯ ಲಲಿತಗತಿ ಕುಮಾರವ್ಯಾಸನನ್ನು ನೆನಪಿಸಿದರೆ,

ಸಚ್ಚಿದಾನಂದೈಕ ಬ್ರಹ್ಮದಿ
ಬೆಚ್ಚಿ ಬೆರೆಸಿದ ಯೋಗಮುದ್ರೆಯ
ಬಿಚ್ಚಿದರೋ ಎಂಬಂತೆ ಕಂಗಳ ತೆರೆದು ನೋಡುತಲೆ॥ (೨೦-೯೮)

ಎಂಬ ಪದ್ಯ ಚಾಮರಸನ ಅನುಭಾವಿಕ ಶೈಲಿಗೆ ಸಮನಾಗಿ ಸ್ಪಂದಿಸುತ್ತದೆ.

......ಶರಣರ
ಮೊತ್ತಕನುಭವ ಸುಧೆಯ ಕರ್ಣಸುಪಾತ್ರೆಗಳ ತುಂಬಿ॥
ಚಿತ್ತ ಹರುಷದಿ ಹೃದಯ ಕ್ಷೇತ್ರದಿ
ಬಿತ್ತಿ ಬೆಳೆಸುತ ಮುಕ್ತಿಫಲಗಳ॥ (೨೧-೫೨)

ಇವೇ ಮೊದಲಾದ ಪದ್ಯಗಳು, "ವೀರಶೈವಾಚಾರ ಪಾರಾವಾರ ಚಂದ್ರಚಕೋರ" (೨೨-೨೩) ಮೊದಲಾದ ವಾಕ್ಯಗಳು ಈ ಕವಿಯ ರೂಪಕ ನಿರ್ಮಾಣಕ್ಕೆ ನಿದರ್ಶನವೆನಿಸಿವೆ.

ಕಳಿತ ಕಲ್ಪದ್ರುಮವೊ ಪುಣ್ಯ
ಸ್ಥಳವೊ ಸುಕೃತದ ಕುಳವೊ ಭಕ್ತಿಯ
ಬೆಳೆಯೊ ಮುಕ್ತಿಯ ಕಳೆಯೊ ಷಟ್ಸ್ಥಲ ಸುಳಿಯೊ ಸುಜ್ಞಾನ।
ದಳೆಯೊ ಮಂತ್ರದ ಹೊಳೆಯೊ ಪ್ರಣಮದ
ಎಳೆಯೊ ಶುಚಿಯೊಬ್ಬುಳಿಯೊ..................................॥(೨೧-೨೭)

ಹೀಗೆ ಶೂನ್ಯಸಿಂಹಾಸನವನ್ನು ವರ್ಣಿಸುವಲ್ಲಿ ಶಬ್ದಾಲಂಕಾರದ ನಿರಾಯಾಸ ಗತಿಯನ್ನು ಗಮನಿಸಬಹುದು. ಇಂಥ ಶೈಲಿ ಕಾರಣವಾಗಿ ಈ ಕೃತಿ ಪ್ರಭುಲಿಂಗಲೀಲೆಗಿಂತ ಕಿಂಚಿದೂನ ನೆಲೆಯಲ್ಲಿ ನಿಲ್ಲುತ್ತದೆ; ವೀರಶೈವ ಪುರಾಣಕೃತಿಗಳಲ್ಲಿ ಇದಕ್ಕೆ ಖಂಡಿತವಾಗಿಯೂ ಗಮನಾರ್ಹ ಸ್ಥಾನ ಸಲ್ಲುತ್ತದೆಯೆಂದು ಹೇಳಬಹುದು.

ಪ್ರಭಾವ :

ಕವಿ ಪುರಾಣದ ಸಿದ್ಧಲಿಂಗನ ವ್ಯಾಸಂಗ ವ್ಯಾಪಕವಾದುದು. ಈಗಾಗಲೇ ಹೇಳಿದಂತೆ ಇವನದು ಜಾನಪದ ಪ್ರತಿಭೆ. ಈ ಧೋರಣೆಯ ಕವಿಗಳಿಗೆ ಕಾವ್ಯವೆನ್ನುವುದು ಖಾಸಗಿ ಆಸ್ತಿಯಲ್ಲ, ಸಮೂಹದ ಆಸ್ತಿ. ಹೀಗಾಗಿ ಇವರು ಅನ್ಯಸೃಷ್ಟಿಯನ್ನು ಮುಚ್ಚುಮರೆಯಿಲ್ಲದೆ ಬಳಸಿಕೊಂಡು ತಮ್ಮತನ ಮೆರೆಯುತ್ತಾರೆ.

ಈ ದೃಷ್ಟಿಯಿಂದ ನೋಡಿದರೆ ಇವನ ಮೇಲೆ ಬಸವಪುರಾಣ, ಪ್ರಭುಲಿಂಗಲೀಲೆ, ಗದುಗಿನ ಭಾರತಗಳು ವಿಪುಲ ಪ್ರಭಾವ ಬೀರಿವೆ.

ಅಗಮಜ್ಞರ ಕರ್ಣಪರ್ವಂ
ಯೋಗಿಗಳಿಗುದ್ಯೋಗಪರ್ವಂ
ಭೋಗ ಮೋಕ್ಷವ ಪಡೆವ ಸದ್ಭಕ್ತರ ಸಭಾಪರ್ವಂ।
ಲೋಗರಿಗೆ ಹೃಚ್ಛಲ್ಯಪರ್ವಂ
ರೋಗಿಗಳಿಗಿದು ಶಾಂತಿಪರ್ವಂ
ಶ್ರೀ ಗುರುವಿನುಪದೇಶ ಕೇಳ್ವರಿಗಾದಿಪರ್ವವಿದು॥ (೩-೧೮)

ಎಂಬ ಪದ್ಯ ಬಸವಪುರಾಣದ "ಆದಿರುದ್ರಗಣಾದಿ ಪರ್ವಂ" ಎಂಬ ಪದ್ಯದ ನೇರ ಪ್ರಭಾವಕ್ಕೆ ಗುರಿಯಾಗಿದೆ. ಪ್ರಭುಲಿಂಗಲೀಲೆಯ ಪ್ರಭಾವ ಹೆಜ್ಜೆ ಹೆಜ್ಜೆಗೂ ಕಾಣಿಸುತ್ತಿದ್ದು; ಪ್ರತಿಯೊಂದು ಸಂಧಿಯ ಆರಂಭದಲ್ಲಿ ಬರುವ

ಶ್ರೇಷ್ಠರಿಗೆ ಶರಣರಿಗೆ ಮನದಲ
ಭೀಷ್ಠೆಯುಳ್ಳವರಿಂಗೆ ಲಿಮಗದಿ
ನಿಷ್ಠೆ ನೆಲೆಗೊಂಡಿರ್ದ ನೀತಿಯನುಳ್ಳ ಪುರುಷರಿಗೆ।
ಅಷ್ಟಾವರಣವ ನಂಬಿದವರಿಗೆ
ಸೃಷ್ಟಿ ಭೋಗವ ಹಳಿದ ಭಕ್ತಿಪ್ರ
ತಿಷ್ಠರಿಗೆ ಬೋಧಿಸುವುದೀ ಷಟ್ಸ್ಥಲ ಶಿವಾಯಣವ॥

ಎಂಬಂಥ ಪದ್ಯಗಳು ಪ್ರಭುಲಿಂಗಲೀಲೆಯ "ಸತ್ಯಶರಣರು ತಿಳಿವುದೀ ಪ್ರಭುಲಿಂಗಲೀಲೆಯನು" (೧-೭) - ಈ ಪದ್ಯವನ್ನು ಮಾದರಿಯಾಗಿಟ್ಟುಕೊಂಡಿವೆ. "ವೀರಶೈವಾಚಾರ ಮಾರ್ಗೋದ್ಧಾರ" (೨-೧೨), "ಅಲ್ಲಮಪ್ರಭು ಸಂಪ್ರದಾಯದ ಬಲ್ಲಿದನ ಘನಕೀರ್ತಿ"(೨-೩೧, ೨೫-೫೬), "ಕಾಳಗದ ಕಥೆಯಲ್ಲ ಕಣ । ಬರು ಹಾಳು ಹರಟೆಯ ಗೊಟ್ಟಿಯಲ್ಲಿದು" (೩-೨೧) ಎಂಬಿವು ಪ್ರಭುಲಿಂಗಲೀಲೆಯ ನೇರ ಅನುಕರಣೆಯೆಂದು ಮೇಲುನೋಟಕ್ಕೇ ವ್ಯಕ್ತವಾಗುತ್ತದೆ. "ತಿಣಕಿದನು ಫಣಿರಾಜ ರಾಮಾಯಣದ ಕವಿತೆಯ ಭಾರಕೆ" (೩-೧೪) ಎಂಬುದು ಯಾರಿಗಾದರೂ ಕುಮಾರವ್ಯಾಸನನ್ನು ನೆನಪಿಗೆ ತರುತ್ತದೆ. ಹರಪನಹಳ್ಳಿಗೆ ಚೀಲಾಳಸ್ವಾಮಿ ಬರುವುದನ್ನು

ದೇವ ಬಂದನು ಭಕ್ತಜನವನು
ಕಾವ ಬಂದನು ಕರುಣರಸಸಂ
ಜೀವ ಬಂದನು ಶರಣಗತಜನ ವಜ್ರಪಂಜರನು॥ (೨೦-೧೦೨)

ಎಂದು ವರ್ಣಿಸುವ ಪದ್ಯದ ಮೇಲೆ ವಿದುರನ ಮನೆಗೆ ಕೃಷ್ಣ ಬರುವ ಕುಮಾರವ್ಯಾಸ ಭಾರತದ ಪದ್ಯ ಪ್ರಭಾವ ಬೀರಿದೆ. ಹೀಗೆ ಅನ್ಯಪ್ರಭಾವಗಳು ಅಲ್ಲಲ್ಲಿ ಕಂಡರೂ, ಕವಿ ಸಿದ್ಧಲಿಂಗಾಚಾರ್ಯನ ಕಾವ್ಯಪ್ರತಿಭೆ ದುರ್ಬಲವಾದುದೇನಲ್ಲ. ಇಡಿಯಲ್ಲಿ ದ್ವಿತೀಯ ಶ್ರೇಣಿಯ ಕವಿಯಾಗಿದ್ದರೂ, ಬಿಡಿಯಲ್ಲಿ ಪದ್ಯ ಸೃಷ್ಟಿ ಕ್ರಿಯೆಗೆ ಸಂಬಂಧಿಸಿದಂತೆ ಅದ್ವಿತೀಯನೆನಿಸಿದ್ದಾನೆ.

ಪರಿಷ್ಕರಣ :

ಅಕ್ಷರ ಛಂದಸ್ಸಿನ ಕಾವ್ಯಕ್ಕಿಂತ ಮಾತ್ರಾ ಛಂದಸ್ಸಿನ ಕಾವ್ಯಪರಿಷ್ಕರಣ ಜಟಿಲ. ಒಂದುವೇಳೆ ಮಾತ್ರಾ ಛಂದಸ್ಸಿನ ಕಾವ್ಯ ಅಂಶಛಂದೋಮುಖಿಯಾಗಿದ್ದರೆ ಇನ್ನೂ ಜಟಿಲ. ಏಕೈಕ ಹಸ್ತಪ್ರತಿಯಿದ್ದ ಸಂದರ್ಭದಲ್ಲಿ ಮತ್ತೂ ಜಟಿಲ. ಇಂಥ ಪರಿಸ್ಥಿತಿಯಲ್ಲಿ ನಿಂತು 'ಷಟ್ಸ್ಥಲಶಿವಾಯಣ'ವನ್ನು ಪರಿಷ್ಕರಿಸಲಾಗಿದೆ.

ಏಕೈಕ ಹಸ್ತಪ್ರತಿಯಾಗಿರುವುದರಿಂದ ಭಾಷಿಕ ದೋಷಗಳನ್ನು ನೇರವಾಗಿ ತಿದ್ದಿ, ದುಷ್ಟಪಾಠಗಳನ್ನು ಅಲ್ಲಲ್ಲಿ ಪರಿಷ್ಕರಣಕ್ಕೆ ಗುರಿಪಡಿಸಲಾಗಿದೆ. ಹೀಗಿದ್ದೂ ಇನ್ನಷ್ಟು ಪಾಠದೋಷಗಳು ಅಲ್ಲಲ್ಲಿ ಉಳಿದುಕೊಂಡಿದ್ದು, ವಿದ್ವಾಂಸರು ಇವುಗಳ ಪರಿಷ್ಕರಣಕ್ಕೆ ಗಮನಹರಿಸುವುದು ಅಗತ್ಯವಿದೆ.

ಈ ಆವೃತ್ತಿಯ ಒಂದು ವೈಶಿಷ್ಟ್ಯವೆಂದರೆ ಪ್ರತಿಯೊಂದು ಸಂಧಿಯ ಆರಂಭದಲ್ಲಿರುವ ರಾಗಗಳನ್ನು ಉಳಿಸಿಕೊಂಡುದು. ಪ್ರಾಚೀನ ಕರ್ನಾಟಕದಲ್ಲಿ ಸಾಕ್ಷರಿಗಳ ಸಂಖ್ಯೆ ತೀರ ಕಡಿಮೆ, ನಿರಕ್ಷರಿಗಳ ಸಂಖ್ಯೆ ತೀರ ಹೆಚ್ಚು. ಮಾರ್ಗಕಾವ್ಯಗಳು ರಾಜಾಸ್ಥಾನದಲ್ಲಿ ಕೃತಾರ್ಥವಾಗುತ್ತಿದ್ದರೆ

ಷಟ್ಸ್ಥಲಶಿವಾಯಣಗಳಂತಹ ದೇಶೀಕಾವ್ಯಗಳು ಕೃತಾರ್ಥವಾಗುತ್ತಿದ್ದುದು, ನಿರಕ್ಷರಿಗಳೇ ಪ್ರಧಾನವಾಗಿದ್ದ ಸಮಾಜದಲ್ಲಿ. ಇಲ್ಲಿ ಕಾವ್ಯವೆನ್ನುವುದು ವಾಚನ ಪಾತಳಿಯ ವಸ್ತುವಾಗಿರಲಿಲ್ಲ. ಶ್ರವಣ ಪಾತಳಿಯ ವಸ್ತುವಾಗಿದ್ದಿತು. ಇದನ್ನು ಅರ್ಥಮಾಡಿಕೊಂಡಿದ್ದ ನಮ್ಮ ದೇಶೀ ಕವಿಗಳು ತಮ್ಮ ಕಾವ್ಯದ ಪ್ರತಿಸಂಧಿಯ ಆರಂಭದಲ್ಲಿ ರಾಗವನ್ನು ಸೂಚಿಸುತ್ತಿದ್ದರು. ಈ ಸೂಚನೆ ಪಠ್ಯದ ಭಾಗವೇ ಸರಿ. ಸಾಕ್ಷರರಾದ ಇಂಗ್ಲಿಷರು ಶ್ರವಣಪಾತಳಿಗಿಂತ ವಾಚನಪಾತಳಿ ಸಂಸ್ಕೃತಿಯವರು. ಈ ಕಾರಣದಿಂದಾಗಿ ಶ್ರವಣ ಪಾತಳಿಯಲ್ಲಿಟ್ಟು ಹಾಡುತ್ತಲಿದ್ದ ನಮ್ಮ ಕಾವ್ಯಗಳನ್ನು ಅವರು ತಮ್ಮ ವಾಚನಪಾತಳಿಯಲ್ಲಿಟ್ಟು ಓದಲು ಆರಂಭಿಸಿದರು. ಈ ಸಂದರ್ಭದಲ್ಲಿ ಸಾಕ್ಷರತೆಯ ಪ್ರಮಾಣ ಬೆಳೆಯುತ್ತಲೇ ಕನ್ನಡಿಗರೂ ಅವುಗಳನ್ನು ವಾಚನಪಾತಳಿಯಲ್ಲಿಟ್ಟು ಓದಲು ಆರಂಭಿಸಿದರು. ಹೀಗೆ ಶ್ರವಣಪಾತಳಿಯ ಪ್ರಾಚೀನ ದೇಶೀಕಾವ್ಯಗಳು ವಾಚನಪಾತಳಿಯ ವಸ್ತುವಾಗುತ್ತಲೇ, ಅಂಥ ಕೃತಿಗಳ ಪ್ರಕಟನೆಯ ಸಂದರ್ಭದಲ್ಲಿ ಶ್ರವಣಪಾತಳಿಯ ಮಾಧ್ಯಮವಾದ 'ರಾಗ'ಗಳನ್ನು ಕೈಬಿಡುವುದು ಮೊದಲು ಇಂಗ್ಲಿಷರಿಂದ, ಬಳಿಕ ಕನ್ನಡಿಗರಿಂದ ಆರಂಭವಾಯಿತು. ಇದು ಕಾವ್ಯಾಸ್ವಾದನ ಇತಿಹಾಸದಲ್ಲಿ ಜರುಗಿದ ಒಂದು ಪಲ್ಲಟ. ಈಗ ಈ ಪಲ್ಲಟವನ್ನು ಸರಿಪಡಿಸುವ ರೀತಿಯಲ್ಲಿ ರಾಗಗಳನ್ನಿಟ್ಟು ಕೃತಿಗಳನ್ನು ಪ್ರಕಟಿಸುವುದು ಅವಶ್ಯವಿದ್ದು, ಇದೇ ಸರಿಯಾದ ಕ್ರಮವಾಗಿದೆ. ಆದುದರಿಂದ ಇಲ್ಲಿಯ ಇಪ್ಪತ್ತೈದೂ ಸಂಧಿಗಳ ತಲೆಯ ಮೇಲಿನ 'ರಾಗ'ಗಳನ್ನು ಹಾಗೆಯೇ ಉಳಿಸಿಕೊಂಡಿದ್ದೇವೆ. ಈ ವಿನೂತನ ಕ್ರಮವನ್ನು ವಿದ್ವಾಂಸರು ಮುನ್ನಡೆಸುವರೆಂದು ಆಶಿಸುತ್ತೇವೆ.

ಕೃತಜ್ಞತೆ :

ಚಾರಿತ್ರಿಕ ಕಾವ್ಯಗಳ ಪ್ರಕಟನೆ ಇಂದಿನ ಬಹುಮುಖ್ಯ ಅಗತ್ಯವೆನಿಸಿದೆ. ಇದನ್ನು ಪೂರೈಸಲು ನಡೆಸಿದ ಪ್ರಯತ್ನದ ಫಲವಾಗಿ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿರುವ "ಷಟ್ಸ್ಥಲಶಿವಾಯಣ" ಹೆಸರಿನ ಹಸ್ತಪ್ರತಿ (ಕೆ. ೧೭೪೨/೧) ನಮ್ಮ ಗಮನ ಸೆಳೆಯಿತು. "ಚೀಲಾಳಸ್ವಾಮಿಯ ಚರಿತ್ರೆ"ಯೆಂಬ ಸೂಚನೆಯಿಂದಾಗಿ ಇದು ಇನ್ನೂ ಆಕರ್ಷಕವೆನಿಸಿತು. ಈ ಹಸ್ತಪ್ರತಿಯನ್ನು ಒದಗಿಸಿದ ಕನ್ನಡ ಅಧ್ಯಯನ ಸಂಸ್ಥೆಗೆ ನಾವು ಋಣಿಯಾಗಿದ್ದೇವೆ. ಇದನ್ನು ಪ್ರತಿಮಾಡಿಕೊಟ್ಟ ಶ್ರೀ ಕೆ. ಆರ್. ಶೇಷಗಿರಿ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಗದುಗಿನ ಶ್ರೀ ತೋಂಟದಾರ್ಯ ಮಠದ "ವೀರಶೈವ ಅಧ್ಯಯನ ಸಂಸ್ಥೆ" ನಮ್ಮ ನಾಡಿನ ಪುಸ್ತಕ ಪ್ರಕಟಣೆಯ ಇತಿಹಾಸದಲ್ಲಿ ಒಂದು ಮಹತ್ವದ ಮೈಲುಗಲ್ಲು. ಪೂಜ್ಯ ಶ್ರೀ ಜಗದ್ಗುರು ತೋಂಟದ ಸಿದ್ಧಲಿಂಗಮಹಾಸ್ವಾಮಿಗಳ ಶೂನ್ಯಪೀಠಾರೋಹಣದ ರಜತವರ್ಷ ಸಂದರ್ಭದಲ್ಲಿ ಈ ಸಂಸ್ಥೆ ೨೫ ಕೃತಿಗಳನ್ನು ಪ್ರಕಟಿಸುತ್ತಿದ್ದು, ಈ ಮಾಲಿಕೆಯಲ್ಲಿ 'ಷಟ್ಸ್ಥಲಶಿವಾಯಣ'ವನ್ನು ಬೆಳಕಿಗೆ ತರುತ್ತಲಿರುವ ಪೂಜ್ಯ ಶ್ರೀ ಜಗದ್ಗುರುಗಳವರಿಗೆ ನಮ್ಮ ಭಕ್ತಿಪೂರ್ವಕ ಪ್ರಣಾಮಗಳು ಸಲ್ಲುತ್ತವೆ. ರಜತೋತ್ಸವ ಸಮಿತಿಯ ಸದಸ್ಯರಿಗೂ, ಗ್ರಂಥದಾನಿಗಳಾದ ಶ್ರೀ ಮಹಾಂತಣ್ಣ ಬ. ಬಡ್ನಿ, ಗದಗ ಅವರಿಗೂ, ಸಕಾಲದಲ್ಲಿ ಮುದ್ರಿಸಿಕೊಟ್ಟ ಗದುಗಿನ ಪ್ರಭು ಗ್ರಾಫಿಕ್ಸ್‌ನ ಶ್ರೀ ಶಾಂತವೀರ ಜಂಗಮನಿ ಅವರಿಗೂ ನಾವು ಋಣಿಯಾಗಿದ್ದೇವೆ.

–ಸಂಪಾದಕರು

❖❖

*

ಪರಿವಿಡಿ

ಪ್ರಥಮ ಸ್ಕಂಥ

* ರಾಗ : ಕಲ್ಯಾಣಿ

ದೇಶಿಕನು ಶಿಷ್ಯನಿಗೆ ಬಹು ಸಂ
ತೋಷದಲಿ ಶಿವತತ್ವಬೋಧೆಯ
ಲೇಸೆನಲು ವಿಸ್ತರಿಸಿ ಪೇಳಿದನನುಭವಿಗಳೊಲಿಯೆ ॥

ಶ್ರೀಮದಗಣಿತಮಹಿಮ ಮಂಗಳ
ಸೋಮಶೇಖರ ಶರಣಜನಸುರ
ಸ್ತೋಮಸನ್ನುತಚರಣಸರಸಿಜ ಸಕಲಜಗಜನಕ ।
ಕಾಮಹರ ಕಾಲಾರಿ ಪುರಹರ
ಶ್ಯಾಮಳಾಂಗಿಸುಸಂಗಸಮರಸ
ಹೇಮಗಿರಿನಿಜವಾದ ಶಂಕರ ಸಲಹು ಮೂಜಗವ॥ ॥ ೧ ॥

ಸಕಲ ಪರಶಿವತತ್ವರೂಪನೆ
ಸಕಲರನುಭವಸುಖನಿರೂಪನೆ
ಸಕಲ ವೇದಾಗಮಪುರಾಣಸುಶಾಸ್ತ್ರಸನ್ನುತನೆ ।

---

* ಶ್ರೀ ಗುರು ಬಸವಲಿಂಗಾಯ ನಮಃ ॥ ರಾಗ ಕಲ್ಯಾಣಿ ॥ ಸೂಚನೆ ॥ ಶ್ರೀ ಓಂ ಸದ್ಗುರು ಮದ್ಗುರು ಜಗದ್ಗುರು ಚಿದಾನಂದ ಬಸವಪ್ರಭುವೆ ನಮೋ ನಮಃ ಓಂ ಶ್ರೀ ಷಟ್ಸ್ಥಲಶಿವಾಯಣವ ಬರೆವುದಕ್ಕೆ ಶುಭಮಸ್ತು ಶೋಬನಮಸ್ತು ನಿರ್ವಿಘ್ನ ಮಸ್ತು.

ಪೂರ್ವಾಚಾರ್ಯರಾದ ವೀರಶೈವ ಮತೋದ್ಧಾರಕರಾದ ಶ್ರೀ ಷಟ್ಸ್ಥಲ ಬ್ರಹ್ಮ ಗಣಾಧೀಶರರಾದ ಮಹಾನುಭಾವಿಗಳ ಶ್ರೀ ಚರಣಾರವಿಂದಂಗಳಿಗೆ ನಮೋ ನಮೋ ಎಂದು ಶಾಸ್ತ್ರ ಪ್ರಾರಂಭದಲ್ಲಿ ಗುರು ನಮಸ್ಕಾರವೆ ಮುಖ್ಯವೆಂದು ಶ್ರೀಗುರು ನಮಸ್ಕಾರ ಮಾಡಿ ಸಾರೆ ನಿರೂಪಿಸುತ್ತಿರ್ದ ಪೂರ್ವಾಚಾರ್ಯ ಸಾರ್ವಭೌಮರೂ (ಮೂ)

ಸಕಲ ಪ್ರಮಥರ ಮೌಳಿಚರಣನೆ
ಸಕಲ ಕಲಿಕುಲಮೇಳ [1][ಹ][1] ರಣನೆ
ಸಕಲನಿಷ್ಕಲರೂಪ ಪರಶಿವ ಸಲಹು ಮೂಜಗವ ॥ ॥ ೨ ॥

ಶರಣು ಗಂಗಾಧರ ಗರ [2][ಳ][2] ಧರ
ಶರಣು ಗೌರೀರಮಣ ಘನತರ
ಶರಣು ಗಜಮುಖಜನಕ ಗುಹಪಿತ ವೀರಭದ್ರಪಿತ।
ಶರಣು ನಂದೀಶ್ವರಕಟಾಕ್ಷನೆ
ಶರಣು ಭೃಂಗೀಶ್ವರಸುರಕ್ಷನೆ
ಶರಣು ಷಟ್ಸ್ಥಲಬ್ರಹ್ಮಬೋಧನೆ ಶರಣು ಪರಶಿವನೆ ॥ ॥ ೩ ॥

ಕಲಿಬಲಾಪಹಶೌರ್ಯ ಕಾಲಘ
ಕುಲಸಲಿಲಪವಿ ಶೇಷಭೂಷಣ
ಜ್ವಲಮದನಭಸ್ಮಾಂಗ ಡಮರುಗ ಶೂಲ ಶಿರಮಾಲ ।
ಲಲಿತ ಪಾಶಾಂಕುಶದ ದಶಭುಜ
ಕಲಿತಕರ ಹರ ಹೃದಯಭವ ಷ
ಟ್ಸ್ಥಲಶಿವಾಯಣ ನಿಜಸ್ವಲೀಲೆಗೆ ಗೆಲುವ ಕೊಡು ದೇವ ॥ ॥ ೪ ॥

ಮಂಗಳವನೆಮಗೀಗೆ ವೃಷಭಕು
ರಂಗಲಕ್ಷಣ ಚಂದ್ರಶೇಖರ
ಗಂಗಶಿರಧರ ಗೌರಶಂಕರ ಧವಳ ಘನಶಿಶಿರ ।
ಮಂಗಳದ ಶ್ರೀಭಸಿತಭೂಷಣ
ಸಂಗ ಶರಣರ ಕರುಣಸರಸಿಕೃ
ಪಾಂಗ ಷಟ್ಸ್ಥಲಬ್ರಹ್ಮಗಳ ಮನವಿಜಯ ಜಯರುದ್ರ ॥ ॥ ೫ ॥

ಹರನು ಪಾರ್ವತಿಗೊರೆದ ಪೂರ್ವದಿ
ಶರಣರಿಗೆ ನಂದೀಶನರುಹಿದ
ಗುರು ಬಸವನಿಗೆ ಪ್ರಭುವೊರೆದ ಕಲ್ಯಾಣದಲಿ ಹಿಂದೆ ।
ಧರೆಗಧಿಕ ಹರಪುರದ ಶ್ರೀಗಿರಿ
ಶಿರದ ಸಿಂಹಾಸನದ ಷಟ್ಸ್ಥಲ
ದರಸು ಶ್ರೀಗುರು ಬಸವಪ್ರಭು ನಿಜಸುತಗೆ ಬೋಧಿಸಿದ ॥ ॥ ೬ ॥

೧-೧ ಶ (ಮೂ) ೨-೨ X (ಮೂ)

ಶ್ರೇಷ್ಠರಿಗೆ ಶರಣರಿಗೆ ಮನದಲ
ಭೀಷ್ಠೆಯುಳ್ಳವರಿಂಗೆ ಲಿಂಗದಿ
ನಿಷ್ಠೆ ನೆಲೆಗೊಂಡಿರ್ದ ನೀತಿಯನುಳ್ಳ ಪುರುಷರಿಗೆ ।
ಅಷ್ಟವರಣವ ನಂಬಿದವರಿಗೆ
ಸೃಷ್ಟಿಭೋಗವ ಹಳಿದ ಭಕ್ತಿಪ್ರ
ತಿಷ್ಠರಿಗೆ ಬೋಧಿಸುವುದೀ ಷಟ್ಸ್ಥಲಶಿವಾಯಣವ ॥ ॥ ೭ ॥

ದೂಷಕಗೆ ದುರ್ಜನಗೆ ದುರುಳಗೆ
ಪಾಶಬದ್ಧಗೆ ಪರರ ಹಳಿವಗೆ
ಭಾಷೆಹೀನಗೆ ಬಹಳ ಕ್ಷುದ್ರವ ನುಡಿವ ಮನುಜರಿಗೆ ।
ಹೇಸಿಕೆಯಲೇ ಹೊರಳುವವರಿಗೆ
ಕಾಸೆ ಜೀವನವಾಗಿರುವರಿಗೆ
ಕೂಸೆ ಬೋಧಿಸ ಸಲ್ಲದೀ ಷಟ್ಸ್ಥಲಶಿವಾಯಣವ ॥ ॥ ೮ ॥

ಶ್ರೀಗುರುವಿನುಪದೇಶವನು ಸೊಗ
ಸಾಗಿ ನಂಬುಗೆಯಿಂದ ಕೇಳಿದ
ಡಾಗದೇ ನಿಜಮುಕ್ತಿ ಸಂಶಯವೇನು ಬೇಡಿದಕೆ ।
ಬೇಗ ಬೇಗದಿ ನಿಜಗುರುವ ಶ್ರೀ
ರಾಗದಿಂದಲಿ ಪೊಗಳಿ ಪರಶಿವ
ಯೋಗಿ ಚೇಲಲಳಸ್ವಾಮಿ ಚರಣವ ಭಜಿಸು ಮನದೊಳಗೆ ॥ ॥ ೯ ॥

ವಿಘ್ನಧ್ವಾಂತನಿವಾರ[೧][ಣಾ][೧] ರವಿ
ವಿಘ್ನಮದಕರಿಸಿಂಹ ಶರಭಂ
ವಿಘ್ನಗಿರಿಹರಿವಜ್ರದಂಡಂ ವಿಘ್ನ [೨][ಬುಧಿ][೨] ವಡಬಂ ।
ವಿಘ್ನವ್ಯಾಳಕುಲೌಘಗರುಡಂ
ವಿಘ್ನಟವಿಹವಿರೂಪ ರುದ್ರಂ
ವಿಘ್ನಮೇಘಪ್ರಚಂಡ ಚೇಲಲಳಸ್ವಾಮಿಗುರು ಶರಣು ॥ ॥ ೧೦ ॥

ವಸುಧೆ ಪರವಾದಿಗಳ ನೆರೆ ಮ
ರ್ದಿಸಿ ಮತಾಂತ್ರವ ನೆಗ್ಗಿ ತುಂಬಿದ

೧–೧ ಣಂ (ಮೂ)   ೨–೨ನದಿ (ಮೂ)

ಬಸದಿಗಳ ಕಿತ್ತಿರಿಸಿ ವಿಪ್ರರ ವಿಕ್ರಮವ ಮುರಿದು ।
ಪಶುಪತಿಗೆ ಬಿಸಿಗಣ್ಣ ತೋರಿಸಿ
ವಿಷವನಮೃತವ ಮಾಡಿ ಮೆರೆಸಿದ
ಬಸವ ದಂಡಾಧೀಶ ಮಮ ಗುರುಮೂರ್ತಿ ಶರಣಾರ್ಥಿ ॥ ॥ ೧೧ ॥

ಮುನ್ನ ಪರಶಿವನಂತರಂಗದ
ಚಿನ್ನವಕ್ತ್ರದಿ ಜನಿಸಿ ಮೆರೆವ ಮ
ಹೋನ್ನತಿಯ ಷಟ್ಸ್ಥಲಶಿವಾಯಣವೆಂಬುಮೃತರಸವ ।
ಎನ್ನ ಕರ್ಣದಿ ತುಂಬಿ ಚಿತ್ತಪ್ರ
ಸನ್ನನಾಗಿಹ ಪರಮ ಶ್ರೀಗುರು
ಚೆನ್ನಬಸವನ ಚರಣಕಮಲಕೆ ಶರಣು ಶರಣಾರ್ಥಿ ॥ ॥ ೧೨ ॥

ಎಲ್ಲರನು ಸೋಲಿಸುವ ಬಹಳದಿ
ಖುಲ್ಲ ಮಾಯೆಯ ನಿಃಕರಿಸಿ ಜಗ
ವೆಲ್ಲವನು ಪಾವನವ ಮಾಡುತಲಾಚರಿಸಿ ಬಳಿಕ ।
ಮೆಲ್ಲ ಮೆಲ್ಲನೆ ತತ್ವಸಾರವ
ಬಲ್ಲ ಭಕ್ತರಿಗುಣಿಸಿ ದಣಿಸಿದ
ನಲ್ಲಮಪ್ರಭುರಾಯ ನಿಜಗುರುಮೂರ್ತಿ ಶರಣಾರ್ಥಿ ॥ ॥ ೧೩ ॥

ಪೊಡವಿಪತಿ ಬಜ್ಜಳನ ಗರ್ವವ
ಕೆಡಿಸಿ ಇದಿರಾದವನ ಮೇಲ
ಕ್ಕೆಡಿಸಿ ದಂತಿಯ ಸೀಳಿ ಪಟುಭಟರಾದರೆಲ್ಲರನು ।
ಕೆಡಹಿ ಬಸವನನಿಳೆಗೆ ಕಳುಹದೆ
ಮಡಗಿದವ ಹೊರಗೊಂದು ನಾದವ
ಹೊಡೆದ ಮಡಿವಾಳ ಮಾಚಿದೇವಗೆ ಶರಣು ಶರಣಾರ್ಥಿ ॥ ॥ ೧೪ ॥

ನೊಸಲ ಕಣ್ಣಿನ ನೋಟದಭವಗೆ
ಭಸಿತಭೂಷಿತ ಗಾತ್ರ ದೇವಗೆ
ಎಸೆವ ಕೆಂಜೆಡೆ ಮುಡಿಯ ಗೌಳದನೇಕ ಮಹಿಮನಿಗೆ ।
ವಿಷಯಗಳ ನೆಗ್ಗಿದ ವಿರಕ್ತಗೆ
ವಸುಧೆ ಪಾವನ ರುದ್ರಮೂರ್ತಿಗೆ
ನಸುನಗೆಯ ಯತಿ ಸಿದ್ಧರಾಮಗೆ ಶರಣು ಶರಣಾರ್ಥಿ ॥ ॥ ೧೫ ॥

ಕ್ಷೋಣಿಗತಿಶಯ ರುದ್ರ ಬಸವನ
ಪ್ರಾಣ ಶರಣ ನಿಧಾನ ಗಾನ ಪ್ರ
ವೀಣ ಜಂಗಮಮಹಿಮ ಗತಿಗೇ ಲಿಂಗಮುದ್ರೆಗಳ ।
ಕಾಣಿಸಿದ ಸೆಣಸಿದನ ಶಸ್ತ್ರದಿ
ಪೋಣಿಸಿದ ಶಿವಸಾಕ್ಷಿಯಿದೆ ಪೌ
ರಾಣಿ ಕಿನ್ನರಿ ಬ್ರಹ್ಮದೇವಗೆ ಶರಣು ಶರಣಾರ್ಥಿ ॥ ॥ ೧೬ ॥

ವೀರಶೈವಾಚಾರ ಗರುಡಿಯ
ಸೇರಿ ಸಾಧನೆಗಳನೆ ಮಾಡಿದ
ಬಾರಸರ ತೇರಸರ ದಶಕರ ನವಕರರುವತ್ತಾ ।
ಮೂರರನು ಷೋಡಶದ ಶ್ರೀಪದ
ವಾರಿಜಂಗಳ ನೆನೆನೆನೆದು ಮದ
ನಾರಿ ಗೌರೀಪತಿಯ ಧ್ಯಾನಿಸಿ ನುತಿಪೆ ನಿಜಗುರುವ ॥ ॥ ೧೭ ॥

ನೀಲ ನೀರದವೇಣಿ ಎರಡನೆ
ನೀಲಕಂಠನ ರಾಣಿ ಸಾಕ್ಷ್ಯ [೧][ತ][೧]
ಬಾಲಸಂಗನ ಜನನಿಯಲ್ಲಮಪ್ರಭುವರನ ಮಗಳೆ ।
ಕಾಲಕಾಮರನೊದ್ದು ಜಂಗಮ
ಜಾಲಕಮೃತಾನ್ನವನೆ ನೀಡಿದ
ನೀಲಲೋಚನೆ ದೇವಿ ಶಾಂಭವಿ ಶರಣು ಶರಣಾರ್ಥಿ ॥ ॥ ೧೮ ॥

ನಾಗಸನ್ನಿಭವೇಣಿ ನಗೆಮುಖಿ
ನಾಗಸಂಪಗೆಗಂಧಿ ನವರಸೆ
ನಾಗರಾಜನ ಮಗಳ ಜಡೆಮುಡಿ ಚರಣ ಶೃಂಗಾರೆ ।
ನಾಗರೀಕನ ಸತಿಶಿರೋಮಣಿ
ನಾಗರಾ ಮರಿಯಾನೆ ಸೊಗಸಿನ
ನಾಗಲಾಂಬಿಕೆ ದೇವಿಯಮ್ಮಗೆ ಶರಣು ಶರಣಾರ್ಥಿ ॥ ॥ ೧೯ ॥

ಚಿಕ್ಕಪ್ರಾಯದ ರಂಭೆ ಕರಗಿದ
ಚೊಕ್ಕ ಚಿನ್ನದ ಬೊಂಬೆ ವಿಷಯವ

೧-೧ ವ (ಮೂ)

ತಿಕ್ಕಿ ತೀವ್ರದಿ ತಿಳಿದ ಪರಮವಿರಕ್ತೆ ನಿಜಮುಕ್ತೆ ।
ಸೊಕ್ಕು ಜವ್ವನೆ ಸೋರ್ಮುಡಿಯ ರಸ
ಉಕ್ಕುತಿಹ ಚಂದುಟಿಯ ಶಶಿಮುಖಿ
ಯಕ್ಕ ಮಹದೇವಕ್ಕನವರಿಗೆ ಶರಣು ಶರಣಾರ್ಥಿ ॥ ॥ ೨೦ ॥

ಸೊಲ್ಲಿನಲಿ ಸೊಗಸಿನಲಿ ಸವಿನುಡಿ
ಯಲ್ಲಿ ನೋಟದಿ ಕೂಟಮಾಟದಿ
ಅಲ್ಲಮಪ್ರಭುವೆಂದು ಶಿವಜಂಗಮವ ನೆರೆನಂಬಿ ।
ಬಲ್ಲ ಕಾಯಕವಿಡಿದು ಕಲ್ಲ್ಯಾಣ
ದಲ್ಲಿ ದಾಸೋಹವನೆ ನಡೆಸುವ
ಎಲ್ಲ ಶರಣರ ಶರಣೆಯರ ಪದಸ್ಮರಣೆ ನಮಗಿರಲಿ ॥ ॥ ೨೧ ॥

ಬಸವರಾಜನ ಚೆನ್ನಬಸವನಿ
ಮಿಷನನಲ್ಲಮನಪ್ಪಣನ ಹೆರೆ
ನೊಸಲಗಣ್ಣಿನ ರಾಮ ಮಡಿವಳಮಾಚ ಸೊಡ್ಡಳನ ।
ಅಸಮ ಷಟ್ಸ್ಥಲಜ್ಞಾನಿಗಳ ಪದ
ಬಿಸರುಹಂಗಳ ನೆನೆದು ಮನದಲಿ
ಉಸುರುವೆನು ನವರಸದ ಶ್ರೀ ಷಟ್ಸ್ಥಲಶಿವಾಯಣವ ॥ ॥ ೨೨ ॥

ಶ್ರೀಯಶಃ ಷಟ್ಸ್ಥಲಶಿವಾಯಣ
ಮಾಯ ವಿಜಯಲ್ಲಮನೆ ಬಸವಸ
ಹಾಯ ಕಲ್ಯಾಣದ ಪುರಾತನ ನೂತ್ನ ಪ್ರಮಥರಿಗೆ
ರಾಯ ಸಿಂಹಾಸನಕಧಿಕ ಯತಿ
ರಾಯನನುಭವ ಮಂಟಪದ ಸಮು
ದಾಯ ಸನ್ನಿಧಿ ಶರಣರಿಗೆ ಪ್ರಭುರಾಯ ಬೋಧಿಸಿದ ॥ ॥ ೨೩ ॥

ಅದರಿನಿಂದಭಿಮಾನ ನಮ್ಮಯ
ಹೃದಯದುತ್ಸಹ ಕಾಣೊ ಮಗನೇ
ಇದಕೊಡೆಯ ಪ್ರಭುಸ್ವಾಮಿ ಹೇಳಿದ ಬಸವ ಕೇಳಿದನು ।
ಸದಮಲನುಭಾವಿಗಳ ಸಂಭ್ರಮ
ಕಿದೆ ಕಣಾ ಷಟ್ಸ್ಥಲಶಿವಾಯಣ
ತುದಿಗೆ ನಿಜಗುರು ಬಸವಪ್ರಭುವಿನೊಳಡಕ ಕೇಳೆಂದ ॥ ॥ ೨೪ ॥

ಪ್ರಭುಗಳಿಗೆ ಪ್ರಜೆಗಳಿಗೆ ಲೋಕದ
ವಿಭುಗಳಿಗೆ ವಿಮಲರಿಗೆ ವಿರತಿಗೆ
ವಿಬುಧರಿಗೆ ವಿದ್ಯರಿಗೆ ವಿಧಿಗಳ ಬಲ್ಲ ಹಿರಿಯರಿಗೆ ।
ಉಭಯಕವಿತೆಯ ಪ್ರಾಜ್ಞರಿಗೆ ವರ
ದಭಯ ಹಸ್ತವ ನೀಡು ನೀ ನಿಜ
ಸಭೆಗೆ ಗೆಲುವನೆ ಮಾಡು ಚೀಲಲಳಸ್ವಾಮಿ ಶ್ರೀಗುರುವೆ ॥ ॥ ೨೫ ॥

ಪರಶಿವನು ಪಾರ್ವತಿಗೆ ಷಟ್ಸ್ಥಲ
ವೊರೆದನದ ನಂದೀಶ ಪ್ರಮಥರಿ
ಗರುಹಿಸದನದನಲ್ಲಮನು ಬಸವಗೆ ನಿರೂಪಿಸಿದ ।
ಧರೆಗೆ ಶ್ರೀಕೈಲಾಸವೆನಿಸುವ
ಹರಪುರದ ಶ್ರೀಗಿರಿಯ ಸ್ಕಂಧದಿ
ಮೆರೆವ ಷಟ್ಸ್ಥಲಯೋಗಿ ಬಸವಪ್ರಭು ಸುತನಿಗೊರೆದ ॥ ॥ ೨೬ ॥

ವೀರಶೈವೋದ್ಧಾರಮಾರ್ಗಾ
ಚಾರ ಷಟ್ಸ್ಥಲದಗ್ರಗಣ್ಯರ
ಚಾರುಚರಣರವಿಂದಗಂಧಪರಾಗಮನಭೃಂಗ ।
ಧಾರಣೆಗೆ ಸಾಕ್ಷಾತು ಪರಶಿವ
ಕಾರಣೀಕವತಾರ ಶರಣ ಕು
ಮಾರ ಪ್ರಭುಬೋಧೆಗಳ ಕೇಳ್ವರಿಗೆಲ್ಲ ನಿಜಮುಕ್ತಿ ॥* ॥ ೨೭ ॥

❖❖

* ಇತಿ ಪ್ರಥಮ ನಿರೂಪಣೆ ಸಮಾಪ್ತ ಮಂಗಳ ಮಹಾಶ್ರೀ ॥

ದ್ವಿತೀಯ ಸ್ಕಂಧ

ರಾಗ : ಶಂಕರಾಭರಣ

ಗುರುಚರಣಗಳಿಗೆರಗಿ ಶಿಷ್ಯನು
ಹರಪುರದ ವೃತ್ತಾಂತಗೇಳಿದ
ಡರುಹಿದನು ನಸುನಗುತ ಸುತನಿಗೆ ದೇಶಿಕೋತ್ತಮನು ॥

ಅಸುರ ಶಿರಮಾಲೆಗಳ ಅಭವಗೆ
ಹಸಿಯ ಚರ್ಮವ ಹೊ [೧][ದ್ದ][೧] ಶಿವನಿಗೆ
ಬಸವ ಶೋಣಿತ ಕರಕಪಾಲದ ಕರ್ತೃ ಪರಶಿವಗೆ ।
ಶಶಿಯ ಗಂಗೆಯ ಸೂಡಿದವನಿಗೆ
ವಿಷವನಮೃತವ ಧರಿಸಿ ಮೆರೆವಗೆ
ವೃಷಭವಾಹನ ರುದ್ರಮೂರ್ತಿಗೆ ಶರಣು ಶರಣಾರ್ಥಿ ॥ ॥ ೧ ॥

ಜಡೆಯ ಮಡದಿಯನಿಳುಹಿ ಬೇಗದಿ
ತೊಡೆಯ ರಮಣಿಯ ಮಡಗಿ ಗೋಪ್ಯದಿ
ಸುಡುವ ಗರಲವನಿಡದೆ ಕೊರಳಿಗೆ ಸೂಕ್ಷ್ಮವಾಗಿರಿಸಿ ।
ಕಿಡಿಯನುಗುಳುವ ನೇತ್ರಜ್ವಾಲೆಯ
ನೊಡಲಿಗಿಕ್ಕಿದ ಮೃಡನೆ ತ್ರಿಜಗದ
ಒಡೆಯ ಸದ್ಗುರುಮೂರ್ತಿ ಚೀಲಳಸ್ವಾಮಿ ಶರಣಾರ್ಥಿ ॥ ॥ ೨ ॥

ಸತ್ಯದಲಿ ನಡೆವರಿಗೆ ನೇಮ ನಿ
ಮಿತ್ತ್ಯಗಳ ಹಿಡಿದರಿಗೆ ಬಿಡದಲೆ

೧-೧ ದಿಕೆ (ಮೂ)

ನಿತ್ಯದಾಸೋಹಗಳ ನಡೆಸುವ ಪರಮಭಕ್ತರಿಗೆ ।
ಮಿಥ್ಯವಳಿದ ಮಹಾತ್ಮರಿಗೆ ಸ
ತ್ಕೃತ್ಯಕಾಯಕವಿಡಿದ ಜಂಗಮ
ಭೃತ್ಯರಿಗೆ ಬೋಧಿಸುವುದೀ ಷಟ್ಸ್ಥಲಶಿವಾಯಣವ ॥ ॥ ೩ ॥

ಖೂಳರಿಗೆ ಕುಹಕರಿಗೆ ಕುಚಿತ ಸ
ಮೇಳರಿಗೆ [1][ಕ][1]ರಣರಿಗೆ ಸತಿಯರ
ಬಾಳಗೆಡಿಸುವ ಭಂಡರಿಗೆ ಭವಿಬಳಕೆಯುಳ್ಳರಿಗೆ
ತೂಳಮೇಳದಿ ತುಳುಕುವವರಿಗೆ
ಹಾಳು ಹರಟೆಯ ಹೊಸೆವ ಜನರಿಗೆ
ಹೇಳಬೇಡವೊ ಮಗನೆ ಈ ಷಟ್ಸ್ಥಲಶಿವಾಯಣವ ॥ ॥ ೪ ॥

ಹರಪುರದ ಸಿಂಗರವ ನಗರದ
ದೊರೆಯ ದೇಶದ ಜನರ ಘನತರ
ಸಿರಿಯ ಶರಣರ ಸಜ್ಜನರ ಸಂದಣಿಯ ಸಂಭ್ರಮವ ।
ಉರಗಪತಿ ದೇವೇಂದ್ರ ಶ್ರುತಿತತಿ
ಹರಿಯಜರಿಗಳವಲ್ಲವೆನುತಿವೆ
ಗುರು ಬಸವಪ್ರಭುಸ್ವಾಮಿ ನೆಲೆಗೊಂಡಿರ್ದ ಕಾರಣದೆ ॥ ॥ ೫ ॥

ಕೇಳೊ ಮಗನೇ ಬಸವಪ್ರಭುವಿನ
ಏಳಿಗೆಯ ಪರಶಿವನೆ ಗೌರಿಗೆ
ಹೇಳಲದ ನಂದೀಶ ಪ್ರಮಥರಿಗೊರೆದನದ ಪ್ರಭುವೆ ।
ಬಾಲಸಂಗಗೆ ಬಸವನಿಗೆ ಶ್ರೀ
ನೀಲಲೋಚನೆಗೊರೆದ ನವರಸ
ಚೀಲವನೆ ನಿನಗೊರೆವೆನೆಂದನು ನಗುತ ಗುರುರಾಯ ॥ ॥ ೬ ॥

ಶ್ರೀರಮಣನೈಶ್ವರ್ಯವನು ವಾ
ಣೀರಮನತಿ ಚತುರತೆಯ[2][ನು][2]ವಿ
ಚಾರ ಗುಣನಗ್ಗಳ ಸುಖವ ಶೇಷನ ಸುಭೋಗವನು
ಪಾರವಾರ ಗಭೀರತೆಯ ಮಹ

೧–೧ ಶ (ಮೂ), ೨–೨ ಲಿ (ಮೂ)

ಮೇರುವೆಯ ಮಹಿಮೆಯನು ಲಂಘಿಸಿ
ಹಾರುತಿರ್ದುದು ಶಿವಸಭೆಗೆ ಗುರು ಬಸವಪ್ರಭುಕೀರ್ತಿ ॥ ॥ ೭ ॥

ಇಂದ್ರನಣಕಿಸಿ ನಿಂದಿಸಗ್ನಿಯ
ಮುಂದೆ ಕಾಲನ ಹಳಿದು ನಿಋತಿಯ
ಹಿಂದಿಡುತಲಹ ವರುಣನಥಮನು ವಾಯು ಸಂಚಲಿಗ ।
ಸಂಧಿಗನು ಧನಪಾಲನೆಂದಾ
ನಂದಿವರುಥನ ಜರೆದು ಶಿವಗಣ
ವೃಂದ ಮಧ್ಯದ ನಟಿಸೆ ಚೀಲಳಸ್ವಾಮಿ ಕೀರ್ತಿಸತಿ ॥ ॥ ೮ ॥

ಚೀಲಳೇಶ್ವರನೆಂದು ಹಾಡುತ
ಚೀಲಳೇಶ್ವರನೆಂದು ಪಾಡುತ
ಚೀಲಳೇಶನೆ ಶಿವನೊ ಪ್ರಭುವೋ ಎನುತ ಕೈಯೆತ್ತಿ ।
ಚೀಲಳೇಶನೆ ಶಿವನ ಚಿತ್ಕಳೆ
ತಾಳಿ ಭೂಕೈಲಾಸ ಹರಪುರ
ಶೈಳದನುಭವಮಂಟಪದಲೊರಗಿರುವ ಗುರುವೆನಲು ॥ ॥ ೯ ॥

ಗೌರಿಗುಹಗಣಜನನಿ ಸ್ವಾಮಿ ಶ
ರೀರಮಧ್ಯದ ಚಿತ್ಕಳೆಯ ನರ
ಧಾರುಣಿಗೆ ಬೀಳ್ಕೊಟ್ಟ ಕಾರಣವೇನು ಬೆಸನೆಂದು ।
ಮಾರಹರನಡಿಗೆರಗಿ ಕೇಳಲು
ನಾರಿ ಕೇಳಾ ವೀರಶೈವವ
ಮಾರ ಮಥನಿಸಿತೆಂದು ನಾರದ ಬಿನ್ನವಿಸಲೊಡನೆ ॥ ॥ ೧೦ ॥

ಕಂಜಮುಖಿ ಕಮಲಾಕ್ಷಿ ಕೇಳೆ ನಿ
ರಂಜನಪ್ರಭುವಿನ ಸ್ವನೇತ್ರದ
ಕಂಜಮಧ್ಯದ [೧][ಲಿ][೧] ದರ್ ಚಿತ್ಕಳೆ ರೂಪ ನಿಜಹೃದಯ ।
ಪಂಜರದಲಿಟ್ಟಿ [೨][ದರ್][೨] ನದರ ಪ್ರ
ಪುಂಜವನೆ ಕುರುಹಿಟ್ಟು ಪ್ರಣಮದ
ಪಂಜರಕೆ ಹೆಸರಿ[೩][ಟ್ಟೆ][೩] ಚೀಲಳಸ್ವಾಮಿಯೆಂದೆನುತ ॥ ॥ ೧೧ ॥

೧-೧ ತೀ (ಮೂ), ೨-೨ ದರ್ (ಮೂ), ೩-೩ ಟ್ಟ (ಮೂ)

ವೀರಶೈವಾಚಾರಮಾರ್ಗೋ
ದ್ಧಾರ ಪಟ್ಟವನಿಲ್ಲೆ ಕಟ್ಟಿದೆ
ಗೌರಿ ಕೇಳಾ ಪ್ರಮಥಗುಣ ಸಹಿತಿಳೆಗೆ ಕಳುಹಿಸಿರೆ ।
ಧಾರುಣಿಯೊಳಾ ಮಹಿಮನಿಹ ಶ್ರೀ
ವೀರಶೈವಾ ಪುಣ್ಯ ಷಟ್ಸ್ಥಲ
ಸಾರಸತ್ವಾಮೃತವ ಶರಣರಿಗೆರೆದು ದಣಿಸುತಲಿ ॥ ॥ ೧೨ ॥

ಕಾಳಿ ಕಾತ್ಯಾಯಿನಿ ಕಮಲಮುಖಿ
ಬಾಳ ಹರುಷವ ತಾಳಿ ಹೃದಯದಿ
ಕೇಳಿದಳು ಕಲ್ಯಾಣಿ ಪುನರಪಿ ಪ್ರಾಣದೊಲ್ಲಭನ ।
ಭಾಳಲೋಚನ [ನೀನೆ][೧] ಆತನು
ಹೇಳಲಳವಲ್ಲೆನಗೆ ಸ್ವಾಮಿಯೆ
ಕೇಳಿ ಪ್ರಮಥರು ಮೇಣ್ ಗಣಂಗಳು ಹರಿಯಜಾದಿಗಳು ॥ ॥ ೧೩ ॥

ದೇವ ಋಷಿಗಳು ಹೊಗಳಿದರು ಗಣ
ದೇವತೆಗಳುಘೆಯೆನುತಲಿರ್ದರು
ದೇವಿ ಪಾರ್ವತಿ ಹರಸುತಿರೆ ಮನುಮುನಿಗಳಗ್ಘುಡಿಸೆ ।
ದೇವದುಂದುಭಿ ಮೊಳಗಿದವು ಕುಸು
ಮಾವಳಿಯ ಮಳೆಗರೆದವಾಕ್ಷಣ
ದೇವ ಶ್ರೀಗುರುರಾಯ ಚೀಲಳಸ್ವಾಮಿ ನಮೊಯೆನುತ ॥ ॥ ೧೪ ॥

ಪ್ರಮಥಗಣತತಿ ಹಾರುತೇರಿತು
ಸಮನಸರು ತಮತಮಗೆ ನಲಿದರು
ಕಮಲಸಂಭವ ಕಮಲನೇತ್ರರು ರುದ್ರಜಯವೆನಲು
ಉಮೆ ಹಸಾದವನಿಕ್ಕಿ ಸ್ವಾಮಿಗೆ
ಕ್ರಮದಿ ಮೃದುವಚನದಲಿ ಶ್ರೀ ಪದ
ಕಮಲನೇತ್ರನ ಶಂಕಿಸುತ ಕೈಮುಗಿದು ಕೇಳಿದಳು ॥ ॥ ೧೫ ॥

ಸ್ವಾಮಿ ಬಿನ್ನಹ ಪರಮಪುರುಷನೆ
ಪ್ರೇಮದಿಂದಾಲಿಪುದು ಪರಶಿವ
ನಾಮರೂಪಿನ ನಾಟಕವನಾಡಿಸುವ ಘನಮಹಿಮ ।

೧–೧ ನಿಗೇ (ಮೂ).

ಭೂಮಿಯೊಳು ಚೀಲಾಳಸ್ವಾಮಿಯ
ನಾಮಮಂತ್ರವ ಜಪಿಸುವವರಿಗೆ
ಕಾಮಿತಾರ್ಥವ ಪಾಲಿಸಲಿ ಇನ್ನೊಂದ ಬೆಸಗೊಂಬೆ ॥ ॥ ೧೬ ॥

ಏನ ಬೆಸಗೊಳುತಿರ್ಪೆ ಶಿವೆ ಸು
ಜ್ಞಾನಪ್ರಭುವಿನ ಘನತರವನದ
ನೇನನೆಂದಪೆನೆನಗೆ ಅಸದಳ ವೇದಕಸದಳವಾ ।
ಮಾನಿನೀಮಣಿ ಕೇಳು ಹೇಳುವೆ
ನೇನಭೀಷ್ಟೆಯದೆನಲು ಶಂಕರ
ಧ್ಯಾನಿಪರ ಹೃತ್ಕಮಲ ಜಯಜಯ ವರದಭಯಕರನೆ ॥ ॥ ೧೭ ॥

ಚಂದ್ರಶೇಖರಮೂರ್ತಿ ನಮೊ ನಮೊ
ಮುಂದಣವತಾರಗ [೧][ಳ][೧] ಚಿತ್ಕಳ
ವೃಂದ ಹಿಂದಣಲಿತ್ತೆ? ಇರ್ದಡೆ ಬೋಧಿಸೀ ಮನದ ।
ಸಂದೆಹವ ಪರಿಹರಿಸೆನುತ ಪದ
ದ್ವಂದ್ವ ಕಮಲಕ್ಕೆರಗಿ ಶಂಕರಿ
ನಿಂದು ನಗುತಲಿ ಶಂಕರನ ಶಶಿಧರನ ಕೇಳಿದಳು ॥ ॥ ೧೮ ॥

ಲೇಸು ಲೇಸಾ ದೇವಿ ಕೇಳಿದ
ಭಾಷೆ ಬಹು ಚೆನ್ನಾಯ್ತು ಶರಣ ವಿ
ಶೇಷಲೀಲೆಯ ಘನತರವ ನಾನರುಹುವೆನು ನಿನಗೆ ।
ಈ ಸಮಸ್ತರಿಗೆಲ್ಲರಿಗೆ ಸಂ
ತೋಷವಾಗುವ ಹಾಗೆನುತ ಫರ
ಮೇಶ ಪಾರ್ವತಿರಮಣ ಪರಶಿವ ನಗುತ ಬೋಧಿಸಿದ ॥ ॥ ೧೯ ॥

ಪ್ರಥಮ ಯುಗದಿ ಸುರೇಶಪ್ರಭು ಶ್ರುತಿ
ತತಿವಿನುತ ಪಾಣಿನಿ ಮಹಾಪ್ರಭು
ಯತಿಗಳರಸ ನಿರಂಜನಪ್ರಭು ಶೂನ್ಯಕಾಯಪ್ರಭು ।
ಚತುರ್ವಿಧದ ನಾಮದಲಿ ಷಟ್ಸ್ಥಲ
ಮತವನುದ್ಧರಿಸಿದ ಮಹಾತ್ಮನು
ಸತಿಕುಲೋತ್ತಮೆ ಕೇಳೆ ಬಸವಪ್ರಭುವಿನಗ್ಗಳವ ॥ ॥ ೨೦ ॥

೧-೧ ಳೆ (ಮೂ)

ದ್ವಿತಿಯುಗದಲಾನಂದಪ್ರಭು ಷ
ಣ್ಮತವಿಜಯ ಸುಜ್ಞಾನಪ್ರಭು ಮ
ನ್ಮಥವಿಜಿತ ಚಿನ್ಮೂರ್ತಿಪ್ರಭುವು ಗುಹೇಶಪ್ರಭುವೆನುತ ।
ಅತಿಶಯದ ಘನ ಹೆಸರಿನಲಿ ನಿಜ
ಮತವನೇ ಹಿಡಿದೆತ್ತಿ ನಡೆಸಿದ
ಯತಿಶಿರೋಮಣಿ ಬಸವಪ್ರಭುವಿನ ಘನವ ಕೇಳ್ ಗಿರಿಜೆ॥ ॥ ೨೧ ॥

ನಾರಿ ಕೇಳಾ ಅನಿಮಿಷಪ್ರಭು
ಧೀರನಾಮದ ಚಿದ್‌ಘನಪ್ರಭು
ಗೌರಿ ಮೂಲಸ್ತಂಭಪ್ರಭು ಜ್ಯೋತಿರ್ಮಹೇಶಪ್ರಭು।
ಮೂರನೆಯ ಯುಗಲೀಲೆಯಲಿ ಶ್ರೀ
ವೀರಶೈವಾಚಾರಮಾರ್ಗನು
ಸಾರವನೆ ಬೋಧಿಸಿದ ಚೀಲಳಸ್ವಾಮಿ ಕೇಳೆಂದ ॥ ॥ ೨೨ ॥

ಲಲನೆ ಕೇಳೌ ಅಲ್ಲಮಪ್ರಭು
ಸುಲಲಿತ ಚಿದಾನಂದ ಶ್ರೀಪ್ರಭು
ಕಲಿಯ ಕಟ್ಟಿದ ಬಸವಪ್ರಭು ಚೀಲಾಳಪ್ರಭುವೆಂಬೀ ।
ಸಲುವ ನಾಮವತಾರದಲಿ ಷ
ಟ್ಸ್ಥಲಕೆ ಕ[೧][ರ್ತೃ][೧] ಗಳಾಗಿ ಹರಪುರ
ಸ್ಥಲದಲದೆ ಶಿವಯೋಂಗನಿದ್ರಾಮುದ್ರೆಯಿಂದಿಹರು ॥ ॥ ೨೩ ॥

ಜಂಬುದ್ವೀಪದ ಜಾತಿಶ್ರೇಷ್ಠದ
ತುಂಬಿತುಳುಕುವ ಸಕಲಶಿವಗಣ
ಸಂಭ್ರಮದ ಸಡಗರದ ನೆಲೆವನೆಯಾದ ಹರಪುರದ ।
ಶಾಂಭವೀ ಎನ್ನಂತರಂಗ ಸು
ಬಿಂಬವೇ ಸುಜ್ಞಾನಮೂರ್ತಿ ಚಿ
ದಂಬುನಿಧಿ ಚೀಲಾಳಸ್ವಾಮಿ ಸುಷಟ್ಸ್ಥ ಲಲಲಾಮಿ ॥ ॥ ೨೪ ॥

ಮರ್ತ್ಯಲೋಕದ ಹೇಮಕ್ಷೇತ್ರದ
ಭರ್ತೃಕಾಂಡದ ಭಕ್ತಿನಿಳಯದ
ಕೀರ್ತಿಗೆತ್ತಿದ ಕಳಶ ಹರಪುರ ಷಟ್ಸ್ಥಲ ವಿಳಾಸ ।

೧–೧ ರ್ಮ (ಮೂ)

ವರ್ತಮಾನದ ವರದಭಯ ಚರ
ಮೂರ್ತಿಗಳ ಕರ್ಣರ್ತಿ ಶ್ರೀಗುರು
ಮೂರ್ತಿ ಚೀಲಳಸ್ವಾಮಿ ಯೋಗಸಮಾಧಿ ಮನದರ್ತಿ ॥ ॥ ೨೫ ॥

ಶ್ರೀಸಕಲಗುರುಪೀಠಕಿದೆ ಕೈ
ಲಾಸ ಗೌರೀ ಇದಕೆ ಘನ ನಂ
ದೀಶಸಭೆಯಾ ಸಭೆಗೆ ಘನ ಕಲ್ಯಾಣಪುರ ಬಸವ ।
ಶ್ರೀಸದನ ಪ್ರಭುಶೂನ್ಯಪೀಠವಿ
ಶೇಷ ಭೂಕೈಲಾಸ ಹರಪುರ
ವಾಸ ಬಸವಪ್ರಭುವಿನನುಭವಮಂಟಪ ವಿಶೇಷ ॥ ॥ ೨೬ ॥

ಆತ ಕೇಳಗಜಾತೆ ನಮಗತಿ
ಪ್ರೀತ ಕಣ ನಮ್ಮಂತರಂಗದ
ಜ್ಯೋತಿ ಭೂತಳಕಿಳಿದನಂತ ಪವಾಡಗಳ ಮೆರೆದು ।
ಭೂತಿರುದ್ರಾಕ್ಷಿಧರ ಲಾಂಛನ
ಘಾತಕರ ಬಹಿಸರಸಿ ಸ್ವಯಪರಂ
ಜ್ಯೋತಿ ಜ್ಯೋತಿಯ ಸರಸದಲಿ ಶಿವಯೋಗದಲ್ಲಿಹನೌ ॥ ॥ ೨೭ ॥

ಹರಪುರವೆ ಕೈಲಾಸವಗಜೇ
ಶರಣಸಭೆ ಗಣಸಭೆ ಕಣಾ ಅ
ಲ್ಲಿರುವ ಜನರೇ ಸುರರು ಮನುಮುನಿಗಳು ಮಹಾತ್ಮಕರು ।
ನೆರವಿಯೇ ಎನ್ನೋಲಗವು ಆ
ಸಿರಿಯೆ ನಿಜಸಿರಿಯೆಂದು ಪಾರ್ವತಿ
ಗರುಹಿದನು ಪರಶಿವನು ಕೇಳಿನುತೊರೆದ ದೇಶಿಕನು ॥ ॥ ೨೮ ॥

ಶ್ರೀಶೈಲ ಶಿವಗಂಗೆ ಸಂಗಮ
ದೇಶಯುಜ್ಜನಿ ಉಳುವೆ ಶಿಖಿಪುರ
ಶೇಷ ಹಂಪೆ[೧][ಯುಯ][೧] ಮರಗುಂಡಕೆ ಕೊಲ್ಲಿಪಾಕ ಮಾಹ।
ಕಾಶಿ ಕಂಚಿ ಕಳಸ್ತಿ ಗರಳ ವಿ
ಶೇಷ ಭೂಕೈಲಾಸ ಹರಪುರ
ವಾಸ ಚೀಲಾಳಕೇಶನಿಹ ಕ್ಷೇತ್ರವೆ ಮಹವಿಶೇಷ ॥ ॥ ೨೯ ॥

೧–೧ ಯನ (ಮೂ)

ವೃದ್ಧಚಾರ್ಯನಿಮಿಷನ ವೃಷಭನ
ಸಿದ್ಧರಾಮಪ್ರಭುವ ಮರುಳನ
ಸಿದ್ಧಲಿಂಗನ ಕೋಲಶಾಂತನ ಕೊಟ್ಟೂರೇಶ್ವರನ ।
ಮುದ್ದುಸಂಗನ ರುದ್ರಮುನಿಯ ಪ್ರ
ಸಿದ್ಧಯೋಗ ಸಮಾಧಿಗಿಂತತಿ
ಮುದ್ದೆನಿಸಿತಹ ಬಸವಪ್ರಭು ಶಿವಯೋಗಮಂಟಪವು ॥ ॥ ೩೦ ॥

ಅಲ್ಲಮಪ್ರಭು ಸಂಪ್ರದಾಯದ
ಬಲ್ಲಿದನ ಘನಕೀರ್ತಿಕಾಂತೆಯು
ನಿಲ್ಲಲಾರದೆ ಮರ್ತ್ಯಪಾತಳಸ್ವರ್ಗ ದೆಸೆದೆಸೆಯ ।
ಗೆಲ್ಲ ಸಾಧಿಸಿ ತನಗೆ ಸರಿಗುಣ
ವಿಲ್ಲೆನುತಲಂಬಿಕೆಯ ನಿಜ ಸಭೆ
ಯಲ್ಲೆ ನಟಿಸಲ್ಕರಿದೆಯೌ ಮೊದಲರಿಯೆ ಕೇಳೆಂದ ॥ ॥ ೩೧ ॥

ಶ್ರೀಪರಬ್ರಹ್ಮ ಸ್ವರೂಪ ನಿ
ರೂಪ ನಿಃಷ್ಕಲಲೀಲಾಜಾಲ ಪ್ರ
ತಾಪಗಳ ನೀ ಬಲ್ಲೆ ನಿಗಮಾಗಮಕಗೋಚರವು।
ತಾಪಸೇಂದ್ರರ ಹೃದಯಕಮಲನೇ
ಭಾಪು ಚೀಲಾಳೇಶನೆನುತಲೆ
ಶ್ರೀಪತಿಯು ಶ್ರೀಗೌರಿ ಗಣಸಭೆ ಸಹಿತ ಹೊಗಳಿದರು॥ ॥ ೩೨ ॥

ಶರಣು ಚೀಲಾಳೇಶ ಶುಭಕರ
ಶರಣು ಚೀಲಾಳೇಶ ಪುರಹರ
ಶರಣು ಷಟಸ್ಥಲಬ್ರಹ್ಮಿ ಇಹಪರ ಹರನೆ ಗುರುವರನೆ।
ಶರಣಜನ ಸುರತರುವೆ ಗುರುವೇ
ಕರುಣಶ್ರೀನಿಧಿಚಂದ ಗುರುವೇ
ಶರಣು ಶರಣೆಂದೆನುತ ಶಿವಸಭೆ ಹಾಡಿ ಹೊಗಳಿದರು ॥ ॥ ೩೩ ॥

ಶಿಶುಗಳಿಗೆ ಪಶುಗಳಿಗೆ ಜಯವನು
ಬಸುರ ಬಾಣತಿಯರಿಗೆ ಸುಖವನು
ಹಸಿದವರಿಗನ್ನವನು ತೃಷೆಯಾದವರಿಗಮೃತವ ।
ಅಸುವಳಿದವರಿಗೆ ಪ್ರಾಣದಾನವ

ವಸುಧೆ ಜನರಿಗೆ ಸಕಲಭೋಗವ
ಬಸವಪ್ರಭು ಶ್ರೀಗುರುವೆ ಪಾಲಿ⁽[ಸು]⁾ ಶರಣ ಶರಣಾರ್ಥಿ ॥ ॥ ೩೪ ॥

ಭಾಳಲೋಚನ ಗೌರಿದೇವಿಗೆ
ಹೇಳಿದೀ ಷಟ್ಸ್ಥಲಶಿವಾಯಣ
ದೇಳಿಗೆಯ ನಂದೀಶ ಪ್ರಮಥರಿಗೊರೆದ ನಂದನಗೆ ।
ಬಾಳ ಮಹಿಮೆಯ ಮೆರೆದ ಬಸವಗೆ
ಹೇಳಿದನು ಪ್ರಭುಸ್ವಾಮಿಯನುಭವ
ಮೇಳವಿದೆ ಕೇಳೆಂದು ಶ್ರೀಗುರು ಶಿಷ್ಯಗರುಹಿದನು ॥ ॥ ೩೫ ॥

❖❖

* ಇತಿ ದ್ವಿತೀಯ ನಿರೂಪಣೆ ಸಮಾಪ್ತ ಮಂಗಳ ಮಹಾಶ್ರೀ ॥ ೧-೧ ಸಿ(ಮೂ)

ತೃತೀಯ ಸ್ಕಂಧ

ರಾಗ : ತೋಡಿ

ಶಾಸ್ತ್ರಕರ್ತವಧಾರೆನುತ ಸುತ
ಸ್ತೋತ್ರಗೈದಡಿಗೆರಗಲಾ ತ
ತ್ಪುತ್ರನಿಗೆ ನಸುನಗುತ ಶ್ರೀಗುರಸ್ವಾಮಿ ಬೋಧಿಸಿದ॥

ದುರಿತಪುರ ಯಮಕಾಲ ಕಾಮಘ
ಕರಿಜಲಂಧರಸಿಂಹ ವ್ಯಾಘ್ರಪ
ಹರಗರಳ ಮೃಗ ವೃಷಭ ಗಂಗಾಧರನೆ ಗೌರೀಶ ।
ಕರಕರಸ್ಥಲ ಕಂಠ ಕರ್ಣಾ
ವರಣಶೇಷ ಕಪಾಲ ವಿಲಸಿತ
ತರಣೀಶಶಿಶಿಖಿನೇತ್ರ ಶಂಕರ ಸಲಹು ಮೂಜಗವ ॥ ॥ ೧ ॥

ಶ್ರೀಕರದ ಶಿವಲಿಂಗಮೂರ್ತಿ[1][ಯ][1]
ಲೋಕಿಸುವ ಕಡೆಗಣ್ಣ ಕಾಂತಿಯ
ನೇಕ ಶಿರ ಭುಜವೆರಡು ನೇತ್ರದ್ವಯ ಚರಣಯುಗಳ ।
ಏಕೋರುದ್ರವತಾರ ನಿಜ ತ್ರೈ
ಲೋಕಪಾಲಕ ಶಂಭು ಶರಣ ಕೃ
ಪಾಕಟೇಕ್ಷಣ ಗುರುವೆ ಚೀಲಳಸ್ವಾಮಿ ಶರಣಾರ್ಥಿ ॥ ॥ ೨ ॥

ಯತಿಗಳಿಗೆ ವ್ರತಿಗಳಿಗೆ ಬಹಳತಿ
ಪತಿವ್ರತೆಯರಿಗೆ ಪುಣ್ಯಜನರಿಗೆ

೧–೧ ಯ (ಮೂ)

ಸತತ ಶ್ರೀಗುರುಲಿಂಗವಾಗಮಭಕ್ತಿಯುಕ್ತರಿಗೆ।
ಮತದಿ ನಂಬುಗೆಯುಳ್ಳವರಿಗತಿ
ಹಿತದಿ ಕಿವಿಗೊಟ್ಟಾಲಿಸುವರಿಗೆ
ಸುತನೆ ಬೋಧಿಸು ಕಂಡ ನಿಜ ಷಟ್ಸ್ಥಲಶಿವಾಯಣವ ॥ ॥ ೩ ॥

ಹೀನರಿಗೆ ದೀನರಿಗೆ ಹಿರಿಯರ
ಮಾನಗೆಡಿಸುವ ಮನುಜರಿಗೆ ಶಿವ
ಧ್ಯಾನವಿಲ್ಲದರಿಂಗೆ ದೇಶಿಕಜನರ ಹಳಿವರಿಗೆ ।
ದಾನ ಧರ್ಮವ ಮಾಡದವರಿಗೆ
ಜ್ಞಾನವೆಳ್ಳನಿತಿಲ್ಲದವರಿಗೆ
ನೀನುಸಿರದಿರೊ ಮಗನೆ ಈ ಷಟ್ಸ್ಥಲಶಿವಾಯಣವ ॥ ॥ ೪ ॥

ಹೇಳೆ ಕೇಳಿದರಾರೆನಲು ಶಶಿ
ಮೌಳಿ ನಂದೀಶ್ವರನು ಪ್ರಭುಕರ
ಣಾಳಿ ಗೌರೀ ಪ್ರಮಥ ವೃಷಭ ಸುಬೋಧೆ ಷಟ್ಸ್ಥಲವ ।
ಹೇಳಿದನು ಶ್ರೀ ಬಸವಪ್ರಭುಗುರು
ಕೇಳಿದವನೆ ಕುಮಾರಪ್ರಭುಸುತ
ಭಾಳನೇತ್ರನ ಲೀಲೆ ಈ ಷಟ್ಸ್ಥಲಶಿವಾಯಣವು ॥ ॥ ೫ ॥

ಬಸವಪ್ರಭುವಾರೆಂದು ಶಂಕಿ[1][ಸೆ][1]
ವಸುಧೆ ಚೀಲಾಳಸ್ವಾಮಿ [2][ಯೆ][2]
ಶಿಶುಪುರದ ಶ್ರೀ ಸಿದ್ಧಲಿಂಗಾಚಾರ್ಯ ಕುವರಪ್ರಭು ।
ಹೊಸತೆನಲು ಶ್ರೀ ವೀರಶೈವವೆ
ಶಶಿ ಸುಧಾಬ್ಧಿಯೆ ಷಟ್ಸ್ಥಲವು ಮಹ
ರಸಿಕರಾದ ಮಹಾನುಭಾವಿಗಳಾದರಿಪುದಿದನು ॥ ॥ ೬ ॥

ಶಿರ ಕಿರೀಟವೊ ಕೊರಳ ಹಾರವೊ
ಕರದ ಕಂಕಣ ಕರ್ಣಭೂಷಣ
ಶರಿರಕಂಗಪಿತಾಂಬ್ರ ನಡುವಿಗೆ ಡಾಬು ಭುಜಕೀರ್ತಿ ।
ಬೆರಳ ಮುದ್ರಿಕೆ ಚರಣ ಸರಗಳು

೧-೧ ಸಿ (ಮೂ), ೨-೨ ಯ (ಮೂ)

ಧರಣಿಗತಿಶಯ ವೀರಶೈವದ
ಶರಣಭೂಷಣ ಧರಿಸಿರೋ ಷಟ್ಸ್ಥಲಶಿವಾಯಣವ ॥ ॥ ೭ ॥

ಒಂದು ದಿನದಿ ಕುಮಾರಪ್ರಭು ಗಣ
ವೃಂದ ಮಧ್ಯದ ಬಸವಪ್ರಭುಗುರು
ದ್ವಂದ್ವ ಚರಣರಕ್ಕೆರಗಿ ಕೀರ್ತಿಸಿ ನಮಿಸಿ ಕೈಮುಗಿದು ।
ತಂದೆ ಸದ್ಗುರುಸ್ವಾಮಿ ಸ್ವಯ ಸಂ
ಬಂಧ ಷಟ್ಸ್ಥಲಶರಧಿಶಶಿ ನಿ
ಮ್ಮಿಂದ ವರ್ಧನವಾಗಬೇಕೆನಗೆಂದು ಬಿನ್ನೈಸೆ ॥ ॥ ೮ ॥

ದರಹಸಿತ ಮುಖಕಮಲ ಸದ್ಗುರು
ಹರಹರಾ ಶಿವಶಿವ ನಮೋನಮೊ
ತರುಣ ಲಿಂಗವಧಾನಿ ದಾನಿ ಮಹಾಮಹಿಮ ವಿರತ।
ಕರುಣಮೂರ್ತಿ ಮಹಾನುಭಾವಿಗ
ಳರಸ ಬಾರೆಂದಪ್ಪಿ ಹರಸುತ
ಶಿರದಿ ಕರಗಳನಿರಿಸಿ ಕುಳ್ಳಿರಿಸಿದ ಸಮಕ್ಷದಲಿ ॥ ॥ ೯ ॥

ಜಗಕೆ ನೂತನವಲ್ಲ ಕಾಣೋ
ಮಗನೆ ಷಟ್ಸ್ಥಲ ವೀರಶೈವವು
ಬಗೆ ಬಗೆಯ ಯುಗ ಜಗದಿ ಪೂರ್ವಪರಾ ಸ್ಥಿತಮ್ಮೆಂದು ।
ಹೊಗಳುತಿವೆ ಕೋ ನಿಗಮತತಿಗಳು
ಸಗುಣನಿರ್ಗುಣ ಬ್ರಹ್ಮನಾಟಕ
ವಗಣಿತಾಗಮ ಸಿದ್ಧಿ ಸನ್ಮತ ಸ್ವಮತ ಕೇಳೆಂದ ॥ ॥ ೧೦ ॥

ಕಂದ ಕೇಳಿದ ಬಗೆಗೆ ಶಿವಗಣ
ವೃಂದ ಶಿರಗಳ ತೂಗಿ ಕೀರ್ತಿಸಿ
ತಂದೆ ನಮಗಿವ ಶಿವನು ಶ್ರೀಗುರುತಹುದು ಷಟ್ಸ್ಥಲದ ।
ಹಿಂದಣಾಗಮಗಳನು ಕೇಳಿದ
ಬಂದೆ ನಮಗಿದ ಮೋಕ್ಷಮಾರ್ಗವ
ಹೊಂದುವದಕಿದೆ ಸಮಯವೆನುತಡಿಗೆಡೆದು ಹೊಗಳಿದರು ॥ ॥ ೧೧ ॥

ಜಯಜಯತು ಜಗದಾದಿ ಪುರುಷನೆ
ಜಯಜಯತು ಜಗದೀಶ ಸರಸನೆ

ಜಯಜಯತು ಪರಶಿವ ನಿರಂಜನ ಜಂಗಮವತಾರ ।
ಜಯಜಯತು ಜಾಹ್ನವಿಯ ರಮಣನೆ
ಜಯಜಯತು ಜಿತೇಂದ್ರಿಯರ ಹರಣನೆ
ಜಯತು ಶ್ರೀಗುರುದೇವ ಕರುಣಿಸು ಸುತನಿಗಭಿಮತವ ॥ ॥ ೧೨ ॥

ತಮ್ಮ ಕೇಳೆಲೊ ನಮ್ಮ ಷಟ್ಸ್ಥಲ
ಬ್ರಹ್ಮದಗಣಿತ ಲೀಲೆಗಳ ಹರಿ
ಬ್ರಹ್ಮ ಶಾರದೆ ನಿಗಮ ಮನುಮುನಿಗಳಿಗಗೋಚರವ।
ಹಮ್ಮುಗಳನತಿಗಳೆದ ಪುರುಷರು
ತಮ್ಮ ತಮ್ಮ ಸ್ವರೂಪ ಕಂಡರು
ನಮ್ಮ ಗರುಡಿಯ ಸಾಧಕರಿಗರಿದಲ್ಲ ಕೇಳೆಂದ ॥ ॥ ೧೩ ॥

ತಿಣಿಕಿದನು ಫಣಿರಾಜ ರಾಮಾ
ಯಣದ ಕವಿತೆಯ ಕಥೆಯ ಭಾರಕೆ
ಹೆಣಗಿದನು ಭಾರತದ ಕವಿತೆಯ ಕಥೆಯ ಭಾರಣೆಗೆ ।
ಜುಣುಗಿದನು ಜೈಮಿನಿಯ ಜಂಪಿಗೆ
ಅಣಕವಲ್ಲಿದು ಭೂಮಿ ಭಾರದ
ಕುಣಿಕಿ ಲಘುತರಮಾದುದೀ ಷಟ್ಸ್ಥಲಶಿವಾಯಣದಿ ॥ ॥ ೧೪ ॥

ಭೂಮಿ ಭಾರವನಿಳುಹಿ ಶೇಷನು
ಸ್ವಾಮಿಧ್ಯಾನವ ಮಾಡುತಿರ್ದನು
ಕಾಮಿತಾರ್ಥವನೀವ ಕಾರಣಪುರುಷನಿವನೆನುತ ।
ಕಾಮಸಂಹರ ಕಾಲಮರ್ದನ
ನಾಮರೂಪಿನ ನಾಟಕದ ಪ್ರಭು
ಪ್ರೇಮದಿಂದಲಿ ಸಲಹೆನುತ ಹೊಗಳಿದನು ನಾಗೇಂದ್ರ ॥ ॥ ೧೫ ॥

ಸಂಸ್ಕೃತದ ಪ್ರಾಕೃತದ ಗರ್ಭಸು
ಖಾಸ್ಕೃದ ಸಂಸ್ಥಾನಪರರ ಮ
ಹಾಸ್ಕೃತಕಕಿದೆ ಕುಲಿಶ ಸಹಜಾನಂದ ಫಲಪದದ ।
ಸಂಸ್ಕೃತದ ಸಂಸ್ಕಾರ ಶರಣ ಸು
ಭಾಷ್ಕೃತದ ದೇಶೀಯ ಪ್ರಕೃತಿ ತಿ
ರಸ್ಕೃತವು ಗುರುಸ್ಮರಣ ಷಟ್ಸ್ಥಲವೀ ಶಿವಾಯಣವು ॥ ॥ ೧೬ ॥

ಅಂಕಿತಮೆ ಷಟ್ಸ್ಥಲಶಿವಾಯಣ
ಶಂಕೆಯೆಳ್ಳನಿತಿಲ್ಲ ಬಾಲಕ
ಕೊಂಕು ಕೊರತೆಗಳುಂಟೆ ಶಿವನಿಗೆ ಶರಣಸಂತತಿಗೆ ।
ಅಂಕಕಾರನ ತೆರದಿ ಬಿಡದೆ ಶಿ
ವಾಂಕಮಾಲೆಯ ಕೇಳೊ ಮಗನೇ
'ಶಂಕರಃ ಸ್ಮರಣಂ ವಶ್ಯಂ' ಯೆನುತಿವೇಕೋ ವೇದ ॥ ॥ ೧೭ ॥

ಆಗಮಜ್ಞರ ಕರ್ಣಪರ್ವಂ
ಯೋಗಿಗಳಿಗುದ್ಯೋಗಪರ್ವಂ
ಭೋಗಮೋಕ್ಷವ ಪಡೆವ ಸದ್ಭಕ್ತರ ಸಭಾಪರ್ವಂ ।
ಲೋಗರಿಗೆ ಹೃಚ್ಛಲ್ಯಪರ್ವಂ
ರೋಗಿಗಳಿಗಿದು ಶಾಂತಿಪರ್ವಂ
ಶ್ರೀಗುರುವಿನುಪದೇಶಗೇಳ್ವರಿಗಾದಿಪರ್ವವಿದು ॥ ॥ ೧೮ ॥

ಸಕಲವೇದಾಂತಾರ್ಥ ಮಿಮಾಂ
ಸಿಕಮೆ ಕರ್ಮಮೆನುತ್ತ ವರ್ಜಿಸಿ
ಶುಕನ ಸೂತ ದಧೀಚ್ಯಗಸ್ತ್ಯರು ಆಕ್ಷೇಪದ ಋಷಿಯು ।
ಭಕುತಿಯಿಂದೀಶ್ವರನ ಶರಣರ
ಯುಕುತಿಯಿಂ ಧ್ಯಾನಿಸುತಲರ್ಚಿಸಿ
ಮುಕುತಿಸುಖವನೆ ಪಡೆದರೈ ಸುಕುಮಾರ ಕೇಳೆಂದ ॥ ॥ ೧೯ ॥

ಧತಣಿ ಭಾರದ ಮಾತಿದಲ್ಲವೊ
ಹರಣಗಳೆದರ ಒಸಗೆಯಲ್ಲವೊ
ತರಣಿ ಶಶಿ ನಭ ತಾರಮಂಡಲ ತಲ್ಲಣವಿದಲ್ಲ ।
ತರುಣಿಯರ ವ್ಯವಹರಣೆಯಲ್ಲವೊ
ಶರಣ ಷಟ್ಸ್ಥಲಕುಲತಿಲಕ ಶಶಿ
ಕಿರಣಶಿರನವತಾರ ಬಸವಪ್ರಭುವಿನುದಹರಣೆ ॥ ॥ ೨೦ ॥

ಕಾಳಗದ ಕಥೆಯಲ್ಲ ಕಣ ಬರು
ಹಾಳ ಹರಟೆಯ ಗೊಟ್ಟಿಯಲ್ಲಿದು
ತೂಳಮೇಳದ ತೂರ್ಯವಾದ ಪ್ರಸಂಗವಿ[೧][ದುವ][೧]ಲ್ಲ ।

೧–೧ ಡೆಯ (ಮೂ)

ಜಾಡು ಮಾತಿನ ಜೋಡಣೆಯ ಎಡೆ
ಬೀ¹[ಡ]²ಳಿಕೆ ಮತವಲ್ಲವಿದು ನಿಜ
ಭಾಳನೇತ್ರನ ಲೀಲೆ ಕಣ ಷಟ್ಸ್ಥಲಶಿವಾಯಣವು ॥ ॥ ೨೧ ॥

ಕಂಡವರ ಮಾತೇನು ನಮಗು
ದ್ದಂಡವೇ ಜಗದೊಳಗೆ ಶ್ರೀಗುರು
ಪಂಡಿತರ ಶರಣರ ವಿರಕ್ತರ ಷಟ್ಸ್ಥಲಬ್ರಹ್ಮ ।
ಖಂಡ ಮಹಿಮ ಮಹಾನುಭಾವ ಸು
ಪಿಂಡ ಚೀಲಾಳೇಶನಂಘ್ರಿಗೆ
ದಿಂಡುರುಳಿ ಕೊಂಡಾಡುವುದೆ ಶ್ರುತಿಮತದ ಪಥ ನಮಗೆ ॥ ॥ ೨೨ ॥

ಯತಿಗಳಾಗಲಿ ವ್ರತಿಗಳಾಗಲಿ
ಮತದ ಹಲ ಬಗೆ ಮನುಜರಾಗಲಿ
ಸತಿಗಳಾಗಲಿ ಪತಿಗಳಾಗಲಿ ರಾಜಗುರುವಾಗೆ ।
ಶ್ರುತಿವಿದಿತ ಸಾಯುಜ್ಯ ಘನ ಸ
ದ್ಗತಿಯ ಪಾಲಿಪ ವೀರಶೈವ ಸು
ಮತ ಸಹಿಯರಾದವರೆ ನಮಗನುಕೂಲವಾಗಿರಲಿ ॥ ॥ ೨೩ ॥

ಕವಿಗಳಾಗಲಿ ಗಮಕಿಯಾಗಲಿ
ವಿವರಿಸುವ ವಾದಿಗಳದಾಗಲಿ
ಹವಣಿಸುವ ಸುವಿವೇಕ ಸಾರದ ವಾಗ್ಮಿಯಾದಡೆಯು ।
ಅವಿರಳ ಶ್ರೀ ವೀರಶೈವದ
ಸವಿ ರಸಾಮೃತ ದಿವ್ಯ ತೊಡಿಗೆಯ
ಕಿವಿಯಲಿಕ್ಕಿದವರೆ ನಮಗೆ ಸಹಾಯವಾಗಿರಲಿ ॥ ॥ ೨೪ ॥

ಶಾರದಾ ಶ್ರೀಗೌರಿ ಸಖಿಯರು
ವೀರಶೈವದ ಸ್ತುತಿಯ ನೆರವಿಗೆ
ಬಾರದಿರೆ ಗುಹಗಣಪವೀರನು ಶಿವನೆ ಸೈರಿಪನೆ ।
ಚೂರಿ ಹಾಕದೆ ಬಡನು ಗ್ರಹಣಕೆ
ವಾರಿಜಾತನ ಶಿರಕೆ ತುರುಬಿಗೆ
ಶೌರಿನೇತ್ರಕೆ ಸರಳ ಮಳೆಯಿದು ಕಂದ ಕೇಳಂದ ॥ ॥ ೨೫ ॥

೨-೨ ಡಾ (ಮೂ)

ತರ್ಕ ಕಥೆಗಳ ಕೇಳೊ ಬಾಲಕ
ತರ್ಕ ಮರ್ಕಟನೆನ್ನುತಿವೆ ಶ್ರುತಿ
ತರ್ಕ ಟಗರಿನ ನ್ಯಾಯವೆನುತಿವೆ ಸಾಕ್ಷಿಗ್ರಂಥಗಳು ।
ಮುರ್ಕಿ ಮುಗ್ಗುತ ವಿಷಯವ್ಯಸನಕೆ
ನುರ್ಕಿ ನುಗ್ಗುವ ಮನವ ಲಿಂಗದಿ
ಸಿರ್ಕಿಸುವ ಸಾಹಸವದೇ ಮಹ ತರ್ಕ ಕೇಳೆಂದ ॥ ॥ ೨೬ ॥

ವ್ಯಾಕರಣವೃತ್ತಿಗಳ ಕೇಳೋ
ಶೋಕಮೋಹವ ತೊಲಗಿ ಪರರ ನಿ
ರಾಕರಿಸುವನ ಬಿಟ್ಟು ಭ[1][ಕ್ತಿ][1]ಜ್ಞಾನವಳವಟ್ಟು ।
ಲೋಕದೊಳಗಾರಾದಡೆಯು ಬಹು
ಪೋಕನೆಂದಡೆ ಕೋಪ ಹುಟ್ಟದೆ
ಶ್ರೀಕರಸ್ಥಲದಲ್ಲಿ ಮನ ನಿಲಲದು ಸುವ್ಯಾಕರಣ ॥ ॥ ೨೭ ॥

ಕಾವ್ಯ ವಿವರವ ಕೇಳು ಹೇಳುವೆ
ಕಾವ್ಯ ಮಾಘಂ ಮಾಣುಯೆನುತಿವೆ
ಕಾವ್ಯ ಕಾಮನ ಬೀಡು ಕೇಡು ಕಕೋಕ ಶೃಂಗಾರ ।
ಕಾವ್ಯ ನರಸ್ತುತಿ ಕಾವ್ಯ ಪರಸ್ತುತಿ
ಕಾವ್ಯ ಕರ್ಮನಿವಾಸ ಕರಸ್ಥಲ
ದಿವ್ಯಮೂರ್ತಿಯ ಕೀರ್ತಿಗಳೆ ನವಕಾವ್ಯ ಕೇಳೆಂದ ॥ ॥ ೨೮ ॥

ಶಬ್ದಲಬ್ಧಿಯ ಕೇಳೊ ಬಾಲಕ
ಶಬ್ದವೇ ಬಹುಕಠಿಣ ಕಕ್ಕಸ
ಶಬ್ದವೆ ನಿರಾಕರಣೆ ಲೋಗರ ವಾಕ್ಯ ದೂಷಣೆಯೊ ।
ಶಬ್ದವೇ ನಿಜ ಪ್ರಣವ ಶಬ್ದವೊ
ಶಬ್ದವೇ ಮಾಧುರ್ಯ ಶಬ್ದವೊ
ಶಬ್ದವಾವುದು ಪರರ ನಿಂದಿಸದಿಹುದದೆ ಸುಶಬ್ದ ॥ ॥ ೨೯ ॥

ಚಂದವೇ ವರವೀರಶೈವ ಪ್ರ
ಬಂಧ ನಾಟಕ ಷಟ್ಸ್ಥಲಲಾಟಕೆ
ಹೊಂದಿರುವಲಂಕಾರವಷ್ಟಾವರಣ ತಿಳಿ ಶರಣ ।

೧-೧ ಕ್ತ (ಮೂ).

ಒಂದೆ ಪ್ರಣವವನೊಂದೆ ವಾಕ್ಯವ
ನೊಂದೆ ಪಂಕ್ತಿಯ ನೊಂದೆ ಓಲೆಯ
ನೊಂದೆ ಸಂಧಿಯನೋದಿ ಕೇಳ್ದರಿಗಹುದು ಸಾಯುಜ್ಯ ॥ ॥ ೩೦ ॥

ಗುರುಲಘುವ ಕೇಳ್ಮಿಗನೆ ಹೇಳುವೆ
ಒರಲುತಿವೆ ಛಂದಸ್ಸು ಶ್ರುತಿಗಳು
ಗುರುವೆ ಶಿವನೋ ಲ[೧][ಘು][೧]ವೆ ವಿಷ್ಣುವೆನುತ್ತಲನವರತ ।
ಗುರುವೆ ದೀರ್ಘವೊ ಲಘುವೆ ಹ್ರಸ್ವವೊ
ಸ್ವರವಿಡುವ ವ್ಯಾಕರಣವೇಕೋ
ಗುರುಸ್ತುತಿಯೆ ಮುಖ್ಯಾರ್ಥವೀ ಷಟ್ಸ್ಥಲಶಿವಾಯಣಕೆ ॥ ॥ ೩೧ ॥

ಪದವೆತ್ತುದೀ ಪದ ವನ್ಯಪದಗಳ
ಸೊದೆವಡದೆ ಪದಚ್ಛೇದವಣುಗ
ಪದಪದಾರ್ಥವೆ ಪುರುಳು ತೀರ್ಥ ಪ್ರಸಾದದನುಭಾವ ।
ಪದ ಪ್ರಬಂಧವೆ ಮಧುರ ಬಿಗಿತರ
ಪದದ ಸಾರವೆ ತತ್ತ್ವಸಾರಗ
ಳಿದೆ ಕಣಾ ಷಟ್ಸ್ಥಲಶಿವಾಯಣ ಕೇಳ್ ಕುಮಾರಪ್ರಭು ॥ ॥ ೩೨ ॥

ಪ್ರಾಸ ಗುರುವಚನಪ್ರಮಾಣ ಸ
ಮಾಸೆ ಸುಜ್ಞಾನುದಯವಿದರ ವಿ
ಶೇಷಲಿಂಗಪ್ರಾಣವ ಕಣ ವಿಶೇಷಣ ನಿರಾಭಾರಿ ।
ದೇಸಿಯವೆ ದೇಶಿಕ ವಿರಕ್ತರು
ಸೂಸುತಿಹ ಫಲಸ್ವಾನುಭಾವ ಪ್ರ
ಕಶತತ್ವನಿರೂಪವೀ ಷಟ್ಸ್ಥಲಶಿವಾಯಣದಿ ॥ ॥ ೩೩ ॥

ಅರ್ಥವಷ್ಟಾವರಣಮನ್ವಯ
ಮೂರ್ತಿ ನಿಜವೊ ನಿರಂಜನಪ್ರಭು
ವರ್ತಮಾನದ ಕಾಂಕ್ಷೆ ಶ್ರೀಗುರುವಾಕ್ಯ ತಾತ್ಪರ್ಯ ।
ಕರ್ತೃ ಬಸವಪ್ರಭುವೆ ಕರ್ಮನಿ
ವೃತ್ತಿಗಾವ ಸುಕರ್ಮ ಕ್ರೀಗಳೆ
ನಿತ್ಯದಾಸೋಹವೆ ಕಣಾ ಷಟ್ಸ್ಥಲಶಿವಾಯಣದಿ ॥ ॥ ೩೪ ॥

೧–೧ ಗ (ಮೂ).

ಯತಿಯೆ ಬಸವಪ್ರಭು ಗಣವೆ ತ
ತ್ರಿತಿಗಳನ ಶರಣರು ಸುನೇಮವೆ
ವ್ರತಗಳರುವತ್ತಾರು ಶೀಲರುವತ್ತನಾಲ್ಕಿವೆ ಕೋ ।
ಸುತನೆ ಮೂವತ್ಮೂರು ನೇಮದ
ಸ್ಥಿತಿಗೆ ಮಾತೃಸ್ಥಾನವಿದು ಷ
ಣ್ಮತವಿಜಯ ಶ್ರೀವೀರಶೈವದ ಘನವ ಕೇಳೆಂದ ॥ ॥ ೩೫ ॥

ವಿಷಯವೇ ಶಿವಜೀವರೇಕತೆ
ಶಿಶುಪ್ರಯೋಜನ ಲಿಂಗನಿಷ್ಠೆಯು
ಅಸಮ ಶರಣರ ಕೂಟವೇ ಸಮೃದ್ಧಿ ಸಂಬಂಧ ।
ದೆಸೆಯೆ ಷಟ್ಸ್ಥಲಶಿವ ಶಿವಾಯಣ
ಕುಶಲದನುಭವ ಸಾರವೀ ಗ್ರಹ
ಪಸರಿಸಿಹ ಸತ್ಕೀರ್ತಿ ನಾಮವೆ ಬಸವಪ್ರಭುಮೂರ್ತಿ ॥ ॥ ೩೬ ॥

ರಾಶಿಗೇಳಲು ವೃಷಭ ನಿಜ ಪರ
ಮೇಶವಾಹನ ಸಕಲಗ್ರಹ ತಾ
ರೇಶ ಶಿಬಿಗಳೆ ನಮ್ಮ ಸ್ವಾಮಿಗೆ ನಯನವಾಗಿಹವು ।
ಶೇಷಭೂಷಣ ಗಂಗದರ ಗೌ
ರೀಶ ಗುಹಗಣ ವೀರಭದ್ರ ಸ
ದಾಶಿ^೧[ವ]^೧ಗೆ ಸತ್ಪುತ್ರರೆಮ್ಮವರೆಮಗೆ ಸಾಹಿಗಳು ॥ ॥ ೩೭ ॥

ವಾರವೇ ಶಿವ ನಮ್ಮ ಭಾಗ್ಯೋ
ದ್ಧಾರ ಸ್ಥಿತಿ ಸತ್ಕೃತ್ಯ ಸುತನೇ
ತಾರೆ ಬೆಳ್ಳಿಯ ಬೆಟ್ಟ ಶಿವನ ನಿವಾಸ ಶಿವಯೋಗ ।
ಸಾರ ತತ್ವನಿರೂಪ ಕರಣವೆ
ಮಾರಹರಗುರು ಬಲಕೆ ಶನಿಬಲ
ದೂರ ಷಟ್ಸ್ಥಲಬ್ರಹ್ಮಗಳ ಬಲವೆಮಗೆ ಸಹಕಾರ ॥ ॥ ೩೮ ॥

ಸಭೆಯೆ ಶರಣರು ಪ್ರಭುವೆ ಕರ್ತನು
ವಿಬುಧರೇ ಮಾಹಾನುಭಾವರು
ಅಭಯಕರ ವರದಾನಿ ಚೇಲಳಸ್ವಾಮಿದೇಶಿಕನು ।

೧–೧ x (ಮೂ)

ಶುಭಕರನು ಸುಕುಮಾರಪ್ರಭುವಿಗೆ
ಪ್ರಭುಬಸವನಿಗೆ ಪ್ರಭುನಿರೂಪಣ
ತ್ರಿಭುವನದ ಕುಲತಿಲಕವೀ ಷಟ್ಸ್ಥಲಶಿವಾಯಣವು ॥ ॥ ೩೯ ॥

ಶರಣರೆಲ್ಲರು ಹೊಗಳಿದರು ಮಹ
ಪುರುಷರೆಲ್ಲರು ಅಡ್ಡಗೆಡೆದರು
ವಿರತರೆಲ್ಲರು ಪರಮಗುರುವಿನ ಪಾದಕೆರಗಿದರು ।
ಹರನ ಭಕ್ತರು ಹಾಡುರ್ತಿದರು
ದೊರೆ ಕುಮಾರರು ಶರಣು ಹೊಕ್ಕರು
ಗುರು ಬಸವಪ್ರಭುವರನ ಮಹಿಮೆಯ ಗಿರಿಜೆ ಕೇಳೆಂದ ॥ ॥ ೪೦ ॥

ಅಮರರಿಗೆ ಆಚಾರ್ಯರಿಗೆ ಜಯ
ಕಮಲಸಂಭವ ಕಮಲನೇತ್ರಗೆ
ಸುಮನಸರಿಗೆ ಸುಖಾದಿ ಋಷಿ ಮನುಮುನಿಗಣೇಶರಿಗೆ ।
ಸಮತೆಯುಳ್ಳವರಿಂಗೆ ಷಟ್ಸ್ಥಲ
ಸಮಯದ ಗಣಂಗಳಿಗೆ ನಿಜಸುಖ
ಸಮರಸವ ಪಾಲಿಸಲಿ ಚೀಲಳಸ್ವಾಮಿದೇಶಿಕನು ॥ ॥ ೪೧ ॥

ವೀರಶೈವೋದ್ಧಾರ ಶರಧಿ ಗ
ಭೀರ ಷಟ್ಸ್ಥಲ ಸಾರತತ್ವ ವಿ
ಚಾರ ಮಂಗಳಕಾರ ಮಂತ್ರಶರೀರ ಘನಮಹಿಮೆ ।
ಕಾರಣಾತ್ಮಕ ಪಾರ ಪರಶಿವ
ಸೂರಿಜನನತ ನರಕೃಪಾಕರ
ಧೀರ ಬಸವಪ್ರಭುಗುರುವ ಕೀರ್ತಿಸಿದ ಸುಕುಮರ ॥ ॥ ೪೨ ॥

ಶ್ರೀ ಶಿವನು ಶಾಂಭವಿಗೆ ಮೊದಲುಪ
ದೇಶಿಸಿದ ಷಟ್ಸ್ಥಲವ ನಂದಿ ನಿ
ರೂಪಿಸಿದ ಬಸವಂಗೆ ಇದುವೆ ಪ್ರುಭು ನಿರೂಪವಲಾ ।
ಈ ಸಮಸ್ತನುಭವಿಗಳಹುದೆನೆ
ಪ್ರಸಾದಾಮೃತವ ಪುರಾಣದ
ದೇಶಿಕನು ಸತ್ಪುತ್ರ ಸತ್‌ಶಿಷ್ಯರಿಗೆ ಬೋಧಿಸಿದ ॥ ॥ ೪೩ ॥

❖❖

ಚತುರ್ಥ ಸ್ಕಂಧ

ರಾಗ : ಗೌಳ

ಪಾಶಪರಿಹೃತ ಗುರುವೆ ಏಕೋ
ದೇಶ ಮಾತ್ರದ ವಸ್ತುವಿನ ನಿ
ರ್ದೇಶವನು ನನಗರುಹೆನುತಲಡಿಗೆಡೆದ ಸುತಗೊರೆದ ॥

ವಿಶ್ವಕುಕ್ಷನೆ ವಿಶ್ವರಕ್ಷನೆ
ವಿಶ್ವಪಾದನೆ ವಿಶ್ವಹಸ್ತನೆ
ವಿಶ್ವಗಾತ್ರನೆ ವಿಶ್ವವಕ್ತ್ರನೆ ವಿಶ್ವನೇತ್ರ ನಮೋ ।
ವಿಶ್ವರೂಪನೆ ವಿಶ್ವನಾಮನೆ
ವಿಶ್ವನಾಟಕಸೂತ್ರಧಾರನೆ
ವಿಶ್ವಪತಿ ವಿಶ್ವಾತ್ಮ ಶಂಕರ ಸಲಹು ಮೂಜಗವ ॥ ॥ ೧ ॥

ಅರಿವು ಮರವೆಗಳೆರಡ ಮೀರಿದ
ಹೊರಗು ಒಳಗೆಂಬುಭಯವೆಣಿಸದ
ಕರದ ಲಿಂಗದಿ ಕರಗಿ ಸಮರಸವಾದ ಶುಭಕರದ ।
ಶರಣಪದ್ಧತಿ ಸರಸಿಜಕೆ ರವಿ
ಕರುಣವಾರ್ಧಿ ಕಪರ್ದಿ ಚಂದ್ರಮ
ಗುರು ನಿರಂಜನಮೂರ್ತಿ ಚೀಲಳಸ್ವಾಮಿ ಶರಣಾರ್ಥಿ ॥ ॥ ೨ ॥

ಶರಣರಿಗೆ ಸದ್ಭಕ್ತರಿಗೆ ಶುಭ
ಕರಣರಿಗೆ ಸೂಕ್ಷ್ಮಾರ್ತರಿಂಗೆ ತ್ರಿ
ಕರಣ ಶುದ್ಧವನುಳ್ಳರಿಗೆ ತ್ರಿಮಲಗಳನೊದ್ದರಿಗೆ ।
ಕರುಣರಸಚಿತ್ತರಿಗೆ ಜಂಗಮ

ಚರಣಸೇವೆಯ ಮಾಳ್ಪರಿಗೆ ಗುರು
ಸ್ಮರಣೆಯುಳ್ಳರಿಗೊರೆವುದೀ ಷಟ್ಸ್ಥಲಶಿವಾಯಣವ ॥ ॥ ೩ ॥

ಕುಂಟರಿಗೆ ಕುರುಡರಿಗೆ ಕಾಸನೆ
ಗಂಟಿ ಹಾಕುವರಿಂಗೆ ಗರ್ವಿಸಿ
ನೆಂಟರಿಷ್ಟರ ಕೂಡೆ ಕಲಹವ ಮಾಳ್ಪ ಕಠಿಣರಿಗೆ ।
ತುಂಟರಿಗೆ ತುಡುಗುಣಿಗಳಿಗೆ ಮತ
ಕುಂಟರಿಗೆ [ಮಾ] ಮೂರ್ಖರಿಗೆ ಮಹ
ಶುಂಠರಿಗೆ ಬೋಧಿಸದಿರೀ ಷಟ್ಸ್ಥಲಶಿವಾಯಣವ ॥ ॥ ೪ ॥

ಪೂರ್ವಪರಯೆಂಬುಭಯವಿಲ್ಲದ
ಖರ್ವ ನಾಟಕಲೀಲೆಯಿಲ್ಲದ
ಪರ್ವತಂ ನದಿ ಸಪ್ತದ್ವೀಪ ಸುಭಾಂಡ ನಭಭೂಮಿ ।
ಗರ್ವ ಜ್ಞಾನಗಳೆಂಬವಿಲ್ಲದ
ನಿರ್ವಯಲ ನಿಜವಸ್ತುವನೆ ಕೇ
ಳ್ಸರ್ವಶೂನ್ಯಬ್ರಹ್ಮವೆಂಬರು ಆತ್ಮವಿದರುಗಳು ॥ ॥ ೫ ॥

ಲೋಕ ಲೌಕಿಕ ಲೇಖವಿಲ್ಲದ
ಶೋಕಮೋಹದ ಸೊಗಡುದೋರದ
ಬೇಕುಬೇಡೆಂದೆಂಬ ಭೇದದ ಬೆಂಬಳಿಗಳಿರದ ।
ನೂಕು ತಾಕಿನ ನುಡಿಗಳಿಲ್ಲದ
ಲೇಕಮಾತ್ರಂ ವಸ್ತುವಿರಲದ
ನೇಕದೇಶಬ್ರಹ್ಮವೆಂಬರು ಮಗನೆ ಕೇಳೆಂದ ॥ ॥ ೬ ॥

ಅಂಬಿಕೆಯರಾತ್ಮಜರು ಇಲ್ಲದ
ತುಂಬಿದಾ ಸಭೆ ಪ್ರಮಥರಿಲ್ಲದ
ಜಂಬುದ್ವೀಪ ಜಗತ್ತಿದೆಂಬ ವಿಚಿತ್ರಗಾಣಿಸದ ।
ಅಂಬುಜಾತ್ಮಜ ರುದ್ರರುದಿಸದ
ಅಂಬರಾದಿಯುಮವನಿಯಿರದ ಚಿ
ದಂಬರ ಪರಬ್ರಹ್ಮವೆ ನಿರಾಲಂಬವೆನುತಿಹರು ॥ ॥ ೭ ॥

ಅನುಪಮದ್ವಯನನಘನವ್ಯಯ
ಮನವ ಮೀರಿದ ಮಹಿಮ ಮಂಗಳ

ಮನು ಮುನಿ ಶ್ರುತಿ ತತಿಗಗೋಚರಮಾದಿಮಧ್ಯಂತ ।
ವಿನುತ ಸಕಲಾಗಮ ಪುರಾಣದ
ನೆನಹಿಗೆಟ್ಟದವಸುವನೇ ತಾಂ
ಘನಕೆ ಘನ ಪರಬ್ರಹ್ಮವೆಂಬರು ಮಗನೆ ಕೇಳೆಂದ ॥ ॥ ೮ ॥

ನಿರುಪಮ ನಿರಾಲಂಬ ನಿರ್ಗುಣ
ನಿರತಿಶಯ ನಿರ್ಮಾಯ ನಿರ್ಜಡ
ನಿರಘ ನಿರ್ಭಯ ನಿಬಿಡ ನಿತ್ಯಾನಂದ ನಿರ್ದ್ವಂದ್ವ ।
ನಿರಜ ನಿಃಸ್ಥಿತಿ ನಿಖಿಳ ನಿಃಕಳ
ನಿರಾತಂಕ ನಿರಾಳ ನಿಶ್ಚಲ
ನಿರುತ ಪರವಸ್ತುವ ನಿರಂಜನಬ್ರಹ್ಮನೆನುತಿಹರು ॥ ॥ ೯ ॥

ಓಲೆ ಕಾಗಜ ಕಡತ ಬಹಳ ವಿ
ಶಾಲ ಲೇಖನಿ ಕಂಠ ಲಿಖಿತನು
ಕೂಲವಾಗದ ವಾಚ್ಯವಾಚಕವೆರಡಕಸದಳದ ।
ಕಾಲ ಕಲ್ಪಿತಗಳಿಗೆ ಸಿಲ್ಕದ
ಹೇಳಿಕೇಳುವ ಶಬ್ದವಿರದ ನಿ
ರಾಳ ವಸ್ತುವೆ ಶಬ್ದಬ್ರಹ್ಮವೊ ಮಗನೆ ಕೇಳೆಂದ ॥ ॥ ೧೦ ॥

ಧ್ಯಾನ ಮೌನ ಸಮಾಧಿಯಿಲ್ಲದ
ಧ್ಯಾನಿಸುವ ಜನ ಮೊದಲೆ ಇಲ್ಲದ
ನೂನ ಚಿತ್ರ ವಿಚಿತ್ರ ಸೃಷ್ಟಿಯ ಕುರುಹುಗಾಣಿಸದ ।
ಸೂನು ನೆಲ ಜಲ ಶಿಖಿ ಮರುತ ನಭ
ಭಾನು ಶಶಿ ಮನ ಜನಿಸದಿಹುದದೆ
ತಾನೆ ನಿಃಷ್ಕಲವಸ್ತು ಸಕಲಬ್ರಹ್ಮ ಕೇಳೆಂದ ॥ ॥ ೧೧ ॥

ಅಣ್ಣ ತಮ್ಮಗಳಾಜ್ಞೆ ಇಲ್ಲದ
ಹೆಣ್ಣು ಗಂಡಿನ ಹೆಸರೆ ಇಲ್ಲದ
ಬಣ್ಣ ಬಿಳಿದಿನ ವರ್ಣ ಬಗೆಬಗೆ ಲಕ್ಷ್ಯ ಬಿಂಬಿಸದ ।
ಎಣ್ಣೆ ಬತ್ತಿಗಳೆರಕವಿಲ್ಲದ
ಕಣ್ಣ ಮಧ್ಯದ ಕಲೆಯ ಮಸಗುತ
ತಣ್ಣಗುರಿವುದೆ ಗುರುನಿರಂಜನಬ್ರಹ್ಮ ಕೇಳೆಂದ ॥ ॥ ೧೨ ॥

ಅಣುವಿಗಣುವಾಗಿರುವ ಆಗಮ
ಗಣಜನಕ ನಿಗಮಾಳಿ ಜನನಿಯು
ತ್ರಿಣಯನಾಮದ ಬೀಜವರ್ಣದ ತಿರುಳು ಶೂನ್ಯಸ್ವರ ।
ಎಣಿಕೆಯಿಲ್ಲದ ಜಪಶಿಖಾಮಣಿ
ಫಣಿಪರಸದಳ ಪರಮವಸ್ತುವ
ಪ್ರಣಮಬ್ರಹ್ಮವದೆಂದು ನುಡಿದರು ತತ್ವಜ್ಞಾನಿಗಳು ॥ ॥ ೧೩ ॥

ಗುಪ್ತಭಾವದ ಗೂಢವರ್ಣದ
ತಪ್ತಕಾಂಚನ ಪುತ್ಥಳಿಯ ಘನ
ದೀಪ್ತಿಮೂರ್ತಿಯ ಹೃದಯಮಧ್ಯದಲಿರಿಸಿ ಥಳಥಳಿಸಿ ।
ವ್ಯಾಪ್ತಿ ಪಿಂಡಾಂಡುಭಯದಲಿ ಸ್ವಯ
ಜ್ಞಾಪ್ತಿ ಬೆಳಗನೆ ಬೀರಿ ಸುಳಿವ ಸು
ಷುಪ್ತಿ ಮೀರಿದ ವಸ್ತು ಮಂತ್ರಬ್ರಹ್ಮ ಕೇಳೆಂದ ॥ ॥ ೧೪ ॥

ಮಹಿಮನಿಳಯದ ಮಂತ್ರಗರ್ಭದ
ಮಹಿತಳಕೆ ಒಡಲಾದ ಮಂಗಳ
ಬಹುಬಗೆಯ ಲಯಸೃಷ್ಟಿಮಾತೃಸ್ಥಾನ ಪಿಂಡಾಂಡ ।
ಸಹಿತ ದಳಕುಳಚಕ್ರಮಂದಿರ
ಬಹುಜನರ ಧ್ಯಾನಾರ್ಚನಾನ್ವಿತ
ಸಹಜ ನಿಜಮಹಮೂರ್ತಿ ಕೇಳ್ ಮಹಲಿಂಗವೆನುತಿಹರು ॥ ॥ ೧೫ ॥

ಧರಣಿ ಜಲಶಿಖಿ ಮರುತ ನಭ ಶಶಿ
ತರಣಿ ಜೀವಸಮೇತ ಸಮರಸ
ಶರಿರ ಕಾರಣಪುರುಷ ಜನ ಮಹಲಿಂಗಗರ್ಭದಲಿ ।
ವರದಭಯಕರಕಂಜ ಹಲ ಬಗೆ
ದರುಶನವು ಧಾತ್ರಿಗಳು ಆತನ
ಪರಶಿವನೆ ನಮೋಯೆಂದು ಶ್ರುತಿಗಳು ಕೂಗುತಿವೆ ಕೇಳು ॥ ॥ ೧೬ ॥

ಪುತ್ರ ಕೇಳುತ್ಪತ್ತಿಸ್ಥಿತಿಲಯ
ಮುಕ್ತಿನಿತ್ಯತ್ವಕ್ಕೆ ತಾನೇ
ಕರ್ತೃ ಕಣ ಪಿಂಡಾಂಡ ಕರ್ಮದ ಕೃತ್ಯನಿರ್ಲೇಪ ।
ಅತ್ತಿ ವೃಕ್ಷದ ಫಲದಲಂಡವು

ಹತ್ತಿಕೊಂಡಿಹವಖಿಳವದೆ ಪರ
ವಸ್ತುಗೀಶ್ವರಮೂರ್ತಿಯೆಂಬರು ಶಿಲ್ಪಶಾಸ್ತ್ರಿಗಳು ॥ ॥ ೧೭ ॥

ಬಾಹಿರಂಗದ ಬಯಲ ಬಣ್ಣ ಸ
ಮೂಹವಿರಹಿತ ಸಕಲ ಸೃಷ್ಟಿಯ
ದೇಹಪ್ರಾಣಭಿಮಾನ ಪ್ರಕೃತಿಪ್ರಳಯದೀ ವಡಬ ।
ಸಾಹಸಿಗನಾ ಸರ್ವ ಶಾಶ್ವತ
ದೇಹ ಪರವಸ್ತುವನೆ ಕಲ್ಪಿಸಿ
ಊಹಿಸುವರಾತ್ಮಜ ಮಹೇಶ್ವರಮೂರ್ತಿಯೆಂದೆನುತ ॥ ॥ ೧೮ ॥

ವನಜಭವ ವನಜಾಕ್ಷ ಸುರಪತಿ
ಮನುಮುನಿಗಳಖಿಳಾಂಡ ಕೋಟಿಯ
ಜನನ ಮರಣದ ಸ್ಥಿತಿಗತಿಯ ನಾಟಕದ ಸೂತ್ರಗಳ।
ನೆನಹು ಮಾತ್ರದಲಾಡಿಸುತ ತಾ
ನನಿತರೊಳಹೊರಗಿದ್ದು ಇಲ್ಲದ
ಘನತರದ ವಸ್ತುವ ಸದಾಶಿವಮೂರ್ತಿಯೆನುತಿಹರು ॥ ॥ ೧೯ ॥

ಅದ್ರಿಜಾತ್ಮಾಜನೆನಿಕೊಳುತಿಹ
ಕ್ಷುದ್ರದೈವದ ಕೊಬ್ಬ ನೆಗ್ಗುವ
ಮುದ್ರಪಂಚಕ ಕರ್ತೃ ಮುಳಿವರ ಗರ್ವಸಂಹಾರ।
ಭದ್ರಕಾಳಿಯ ರಮಣ ಕರುಣ ಸ
ಮುದ್ರ ಪರವಸ್ತುವನೆ ಸಾಕ್ಷಾತ್
ರುದ್ರಮೂರ್ತಿ ನಮಸ್ತೆ ಎಂಬರು ವೇದಕೋವಿದರು ॥ ॥ ೨೦ ॥

ಪರಮಶೂನ್ಯ ನಿರಂಜನೇಕಃ
ಸ್ಫುರಣ ಶಬ್ದನಿಶ್ಶಬ್ದಜ್ಯೋತಿಃ
ಕಿರಣ ನಿಃಷ್ಕಲಸಕಲ ಪ್ರಣವಂ ಮಂತ್ರಮಹಮೂರ್ತಿ
ತರುಣ ಕೇಳ್ಮಹಲಿಂಗ ಈಶ್ವರ
ವರ ಮಹೇಶ ಸದಾಶಿವಾಖ್ಯಂ
ತರದ ರುದ್ರವತಾರ ಪೂರ್ವದ ವಸ್ತುನಿರ್ದೇಶ ॥ ॥ ೨೧ ॥

ವೇದತತಿಯಾಗಮ ಸಮೂಹಗ
ಳಾದಿ ಪೌರಾಣಘಸ್ಮೃತಿ ಕುಳ

ಭೇದದುಪನಿಷದ್ವರ್ಗ ಶಾಸ್ತ್ರದ ಗಡಣ ಮತಗ್ರಂಥ ।
ಆದಿಮಧ್ಯವಸಾನ ಸಂಸ್ಕೃತ
ಸಾಧಕರು ಪ್ರಾಕೃತ ಪುರಾತರು
ಸಾಧಕರು ಅನುಭಾವಿಗಳು ಭೋಗಿಸುವ ತಾತ್ಪರ್ಯ ॥ ॥ ೨೨ ॥

ಆವ ಕಾಲದಲಾವ ಠಾವಿನ
ಲಾವ ಯುಗದಲದಾವ ದ್ವೀಪದ
ಲಾವ ಖಂಡದಲಾವ ದೇಶದಲಾವ ಗ್ರಾಮದಲಿ ।
ಆವ ವರುಷದಲಾವ ಮಾಸದ
ಲಾವ ದಿವಸದಲಾವ ಗಳಿಗೆಯ
ಲಾವಗಂ ಇದೆ ವಸ್ತು ಲಕ್ಷಣ[೧][ದಾ][೧]ಗಮವಿದಣುಗ ॥ ॥ ೨೩ ॥

ಆದಿಶಾಸ್ತ್ರಕೆ ಅಸುರರೇ ಹಗೆ
ವೇದಶಾಸ್ತ್ರಕೆ ಹೋತುಗಳೆ ಹಗೆ
ಗಾದೆ ಕಥೆ ಕಾವ್ಯಕ್ಕೆ ಗತಿಮೇಣ್ ಗಾರ ಮೊದಲಿಲ್ಲ ।
ಹೋದವಗಣಿತ ಹಿಂದಕವರ್ಗಳ
ಹಾದಿಯೇ ನಮಗಿಲ್ಲ ಮೋಕ್ಷವ
ಸಾಧಿಸುವರಾಲಿಸುವದೀ ಷಟ್ಸ್ಥಲಶಿವಾಯಣವ । ॥ ೨೪ ॥

ಆಲಸ್ಯ ನಿದ್ರೆಗಳನತಿಗಳೆ
ದಾಲಿಸಿದರಿದು ಅಮೃತಘಟಿಕೆಯು
ಹಾಲು ಸಕ್ಕರೆಗಿನಿದು ಕೇಳುವ ಪ್ರಾಜ್ಞ ಪುರುಷರಿಗೆ ।
ಬಾಲವೃದ್ಧರಿಗಿಂದೆ ಸದ್ಗತಿ
ಲೋಲ ಲಾಲರಿಗೆಲ್ಲ ನಿಜಸುಖ
ನೀಲಗಳನವತಾರ ಶ್ರೀ ಷಟ್ಸ್ಥಲಶಿವಾಯಣವು । ॥ ೨೫ ॥

ಬಡವರಿಗೆ ಬಲವಂತರಿಗೆ ನೆರೆ
ಮುಡುಬರಿಗೆ ಮೂಢರಿಗೆ ಮುಕ್ತಿಯ
ಪಡೆವರಿಗೆ ಪಂಗುಳಗೆ ಕುರುಡಗೆ ಬಹುಪರಾಕ್ರಮಿಗೆ ।
ಗಡಿಗೆ ಹೊರಗಿರುವವರಿಗೇ ಜಯ

೧-೧ ರಾ (ಮೂ)

ಪೊಡವಿ ಪಾಲಕ ಸಕಲ ಜನರಿಗೆ
ಕೊಡಲಿ ಚೀಲಾಳಸ್ವಾಮಿ ಸದ್ಗುರುರಾಯ ಸಂಪದವ ।   ॥ ೨೬ ॥

ನಂದಿವಾಹನ ಶಿವಗೊರೆದನಿದ
ನಂದಿಕೇಶ್ವರ ಪ್ರಮಥರಿಗೆ ಗಣ
ವೃಂದ ಬಸವಗೆ ಪ್ರಭುನಿರೂಪಣ ವಸ್ತುನಿರ್ದೇಶ ।
ವಂದೆ ಹರಪುರಕ್ಷೇತ್ರ ಶ್ರೀಗಿರಿ
ಸ್ಕಂಧ ಷಟ್ಸ್ಥಲಪೀಠ ಶ್ರೀಗುರು
ವಂದೆ ಬಸವಪ್ರಭು ಕುಮಾರಪ್ರಭುವಿಗಿದನೊರೆದ ॥*   ॥ ೨೭ ॥

❖❖

* ಇತಿ ಚತು:ಸ್ಕಂಧ ನಿರೂಪಣಂ ॥ ಅಂತುಭಯ ಪದಗಣನೆ ೧೩೯ ಕ್ಕಂ ಸಮಾಪ್ತ ಮಂಗಳ ಮಹಾಶ್ರೀ ॥

ಪಂಚಮ ಸ್ಕಂಧ

ರಾಗ : ಕಾಂಬೋಧಿ

ಶ್ರೀಗುರುವಿನಡಿಗೆರಗಿ ಶಿಷ್ಯನು
ಭೂಗಗನ ಸತ್ಕೀರ್ತಿ ಷಟ್ಸ್ಥಲ
ದಾಗಮವನರುಹೆನಲು ಸುತನಿಗೆ ಪೇಳ್ದ ದೇಶಿಕನು ॥

ಧರಣಿ ರಥ ರವಿಶಶಿಯೆ ಗಾಲಿಯು
ತುರಗಗಳೆ ಶ್ರುತಿ ಗಿರಿಯೆ ಚಾಪವು
ಉರಗವರ ಹೆದೆ ಬ್ರಹ್ಮ ಸಾರಥಿ ವಿಷ್ಣು ಮಹ ಸರಳು ।
ಉರಿಯೆ ಸರಳಿನ ಕೊನೆಯಲಘು ಈ
ತೆರದ ಸಾಧನದಿಂದ ತಿರುಗುವ
ಪುರವನಿಟ್ಟೊರಗಿಸಿದ ಶಂಕರ ಸಲಹು ಮೂಜಗವ ॥ ॥ ೧ ॥

ಕೆಂಜೆಡೆಯ ಕೆದರಿದ ಮುಗುಳ್ನಗೆ
ರಂಜಿಸುವ ಸುಲಿಪಲ್ಲ ರತಿಯಪ
ರಂಜಿಯಂದದಿ ಹೊಳೆವ ದೇಹದ ಭಸಿತ ರುದ್ರಾಕ್ಷ ।
ಪುಂಜದಾಭರಣಗಳ ಜಪಕರ
ಕಂಜದಿಷ್ಟಬ್ರಹ್ಮ ಪರಮ ನಿ
ರಂಜನ ಪ್ರಭುಮೂರ್ತಿ ಚೀಲಾಳಸ್ವಾಮಿ ಶರಣಾರ್ಥಿ ॥ ॥ ೨ ॥

ಜ್ಞಾನಿಗಳಿಗೆ ನಿಧಾನಿಗಳಿಗೆ ಸು
ಮಾನಿಗಳಿಗೆ ಸುಭಾಷಿತಗೆ ಸ್ವ
ಸ್ಥಾನಚಿತ್ತವಿರಕ್ತರಿಗೆ ನಿಜಲಿಂಗನಿಷ್ಠರಿಗೆ ।
ಸ್ಥಾನವಿಧಿಗಳ ನಡೆಸುವವರಿಗೆ

ಸ್ವಾನುಭಾವರ ಭಜಿಸುವವರಿಗೆ
ಮೌನದಲಿ ಬೋಧಿಸುವುದೀ ಷಟ್ಸ್ಥಲಶಿವಾಯಣವ ॥ ॥ ೩ ॥

ಮುಂಡರಿಗೆ ಪೋಟರಿಗೆ ಪಾಣ್ಬಗೆ
ಹೆಂಡಿರನು ಬಿಟ್ಟರಿಗೆ ಹೆಡ್ಡಗೆ
ಕಂಡವರ ಒಡವೆಗಳ ಕಳಚುವ ಕರ ಕನಿಷ್ಠರಿಗೆ ।
ಭಂಡತನದಲೆ ಬಾಳುವವರಿಗೆ
ಭಂಡು ಭೂತವ ಬಗಳುವವರಿಗೆ
ಕುಂಡ ಗೋಳಕರಿಗರುಹದಿರು ಷಟ್ಸ್ಥಲಶಿವಾಯಣವ ॥ ॥ ೪ ॥

ಶ್ರೀ ಪರಂಜ್ಯೋತಿಸ್ವರೂಪನೆ
ರೂಪ ಮಹಲಿಂಗಾವತಾರ ಪ್ರ
ತಾಪ ಪರಶಿವನಂತರಂಗದ ಗೋಪ್ಯಮುಖದುದಯ ।
ದಾ ಪರಾತ್ಪರ ನಂದಿಕೇಶ ಮ
ಹಾ ಪ್ರಮಥಗಣದಂಶ ಷಟ್ಸ್ಥಲ
ಸ್ಥಾಪನಾಚಾರ್ಯರ ಘನವ ಕೇಳೆಂದ ದೇಶಿಕನು । ॥ ೫ ॥

ವೀರಶೈವವೆ ಶೈವಶ್ರೇಷ್ಠವು
ವೀರಶೈವವೆ ದೈವದೃಷ್ಟವು
ವೀರಶೈವವೆ ಷಣ್ಮತಕೆ ಷಡ್ದರ್ಶನವಿಶಿಷ್ಟ ।
ವೀರಶೈವವೆ ಸರ್ವಸನ್ಮತಿ
ವೀರಶೈವವೆ ಸರ್ವಸದ್ಗತಿ
ವೀರಶೈವದ ಮತಮಹತ್ವವನಾದ ಕವಿ ಬಲ್ಲ ॥ ॥ ೬ ॥

ಋಗ್ಯಜುಸ್ಸಾಮಾದ್ಯಥರ್ವಣ
ಭರ್ಗೋ ದೇವಾಂತಃ ಪುರೋದ್ಭವ
ದಗ್ಗಳ ಶ್ರೀ ವೀರಶೈವ ಮಹತ್ವ ಷಟ್ಸ್ಥಲದ ।
ವರ್ಗ ಪೂರ್ವ ಪರಾಂಶ ಗಣ ಸಂ
ಸರ್ಗವೇ ಇಹಪರಕೆ ಘನವೆಂ
ದುಗ್ಗಡಿಸಲಾ ನಾದ ತುಂಬಿದುದಖಿಳಲೋಕದಲಿ । ॥ ೭ ॥

ಆದಿಷ್ಟಥಲ ವೀರಶೈವದ
ಭೇದಗಳ ಹರಿಯಜರು ಬಲ್ಲರೆ

ಓದಿಬೋಧಿಸುತಿವೆಕೊ ಮೂವತ್ತೆರಡುಪನಿಷತ್ತು ।
ಪಾದಲೋಚನನಂತರಂಗ ಚಿ
ದೋದಯರಜ ಶರಣ ಗಣ ಜಗ
ದಾದಿಗುರು ಪರವಸ್ತು ನಮೋಯೆಂದೆನುತುಲಿವುತಿವೆಕೋ ॥ ॥ ೮ ॥

ಅಪ್ರತಿಮ ಷಟ್ಸ್ಥಲಮತನ್ವಯ
ಸುಪ್ರತಿಷ್ಠೆಯ ವೀರಶೈವ ಮ
ಹ ಪ್ರತಾಪವ ವೀರ ವಾತುಲ ವಿಂಶತಿದ್ವಯ ಶ್ರೀ ।
ಕರ್ಪೂರಾಂಗನ ಗೋಪ್ಯವದನದಿ
ತೋರ್ಪಡಿಸಿಯವತರಿಸಿ ಚರಿಸುವ
ನಿಷ್ಪುರುಷರಿಹಪರಕೆ ಮಹಘನವೆನುತ ಬೊಬ್ಬಿಡಲು ॥ ॥ ೯ ॥

ಸಗುಣನಿರ್ಗುಣತತ್ವ ಷಟ್ಸ್ಥಲ
ದಗಣಿತ ಮಹತ್ವವನು ಗುಣಿಸುತ
ನಿಗಮತಂತ್ರಗಳುಪನಿಷತುಗಳ ನಾದವಿಹ ಪರಕೆ ।
ಹೊಗಳುತಿವೆ ಹದಿನೆಂಟು ಪೌರಾ
ಣಗಳು ಶಿವನವತಾರ ಶರಣರ,
ಜಗವ ಜರಿವುತ ನಗುತ ನಾದವು ನೆಗೆಯೆ ಶಿವಸಭೆಗೆ ॥ ॥ ೧೦ ॥

ಚಿತ್ತಜಾಂತಕನಂತರಂಗದ
ಚಿತ್ತಮಧ್ಯದಲುದಿಸಿ ನಟಿಸುವ
ಉತ್ತರಪದಸ್ಥಿತರ ಹತ್ತೊಂಬತ್ತು ಮನುವಾಕ್ಯ ।
ಉತ್ತರೋತ್ತರ ವೀರಶೈವ ಮ
ಹತ್ವ ಷಟ್ಸ್ಥಲಬ್ರಹ್ಮಿಗಳೆ ಪರ
ತತ್ವವಿಹಪರ ಪೂಜ್ಯ ನಮಸ್ಕಾರಾರ್ಹರೆಂದುಲಿಯೆ ॥ ॥ ೧೧ ॥

ಮದನವೈರಿಯ ಹೃದಯಕಮಲದ
ಲುದಯವಾದತಿಶಯದ ಷಟ್ಸ್ಥಲ
ತುದಿ ಪದದ ಶ್ರೀ ವೀರಶೈವ ಮಹನುಭಾವಿಗಳ ।
ಪದ ಘನವ ಹದಿನಾರು ಶಾಸ್ತ್ರವು
ಪದುಳದಲಿ ಕೀರ್ತಿಸುತ ಪರಶಿವ
ನಿದಿರಿನಲಿ ಶರಣರೆ ಮಹಾಘನವೆಂಬ ಸ್ವರದೊಳಗೆ ॥ ॥ ೧೨ ॥

ಆರು ಮತಕಗ್ರಜರೆನಿಪ ಶ್ರೀ
ವೀರಶೈವ ಮಹತ್ವ ಷಟ್ಸ್ಥಲ
ಕಾರಣಾತ್ಮಕ ಪರಶಿವನ ನಿಜಹೃದಯದಲಿ ಜನನ ।
ಸಾರ ಶರಣರೆ ಸಕಲಮತ ನಮ
ಸ್ಕಾರ ಪೂಜೆಗೆ ಯೋಗ್ಯರೆನುತಲಿ
ದಾರು ತರ್ಕಗಳುಲಿಯೆ ಶಿವಸಭೆ ಗೌರಿ ಬೆರಗಾಗೆ ॥ ॥ ೧೩ ॥

ವ್ಯಾಕರಣ ಲಕ್ಷಣ ಪದತ್ವವು
ಶ್ಲೋಕ ಶಬ್ದಲಂಕಾರ ನಾಟಕ
ನೇಕ ಕಾವ್ಯೇತಿಹಾಸ ಜ್ಯೋತಿಷ ಛಂದ ನೈಘಂಟು ।
ಏಕೋ ರುದ್ರವತಾರ ಷಟ್ಸ್ಥಲ
ಶ್ರೀಕರ[1][ರೆ][1] ಸಲೆ ಶುದ್ಧಶರಣರೆ
ಲೋಕಪೂಜ್ಯರು ಲೋಕವಂದ್ಯರು ಎನುತ ಧ್ವನಿಗೈಯೆ ॥ ॥ ೧೪ ॥

ಸಕಲಜನ ಸಂಗ್ರಹದ ಶಾಸ್ತ್ರವು
ಸಕಲಮತ ಗ್ರಂಥಾರ್ಥ ಸಾರವು
ಶಕುನ ಶಾಸ್ತ್ರಗಳಾದಿಯಾದ ಕುತಂತ್ರ ನ್ಯಾಯಗಳು ।
ಸಕಲನಿಷ್ಕಲವಸ್ತು ಷಟ್ಸ್ಥಲ
ನಿಕರ ಶರಣರೆ ಶ್ರೇಷ್ಠರೆನುತಲಿ
ಸಕಲಕಾಲದಿ ಹೊಗಳಲಾ ಧ್ವನಿ ಮುಸುಕೆ ತ್ರೈಜಗವ ॥ ॥ ೧೫ ॥

ಯುಗದ ದೇಶಿಕರುಗಳ ವಚನವು
ಸುಗುಣಚತುರಾಚಾರ್ಯ ವಾಕ್ಯವು
ಅಗಣಿತ ಪುರಾತನರ ನೂತನ ಪುರುಷರುಕ್ತಿಗಳು ।
ಬಗೆಬಗೆಯ ಬೋಧೆಗಳು ಷಟ್ಸ್ಥಲ
ದಗಣಿತ ಬ್ರ[2][ಹ್ಮಿ][2]ಗಳ ಘನವನೆ
ಹೊಗಳುತಿರಲಾ ನಾದ ನೆಗೆದುದು ಪರಶಿವನ ಸಭೆಗೆ ॥ ॥ ೧೬ ॥

ದೇವಲೋಕದ ದೇವಗಣಸ್ತುತಿ
ಭೂವಳಯ ಮಹಗಣ ಸುಕೀರ್ತನೆ
ತೀವಿದಾ ಪಾತಾಳಲೋಕದ ಪರಮಗಣಸ್ಮರಣೆ ।

೧–೧ ನೊ(ಮೂ). ೨–೨ ಹ್ಮ (ಮೂ).

ಈ ವಿಧದ ಶಬ್ದಗಳು ಷಟ್ಸ್ಥಲ
ದೇವ ಭಕ್ತರೆ ಶ್ರೇಷ್ಠರೆನುತ ಸ
ದಾವ ಕಾಲದಿ ಹೊಗಳಲಾ ರವವೇಳೆ ಶಿವಸಭೆಗೆ ॥ ॥ ೧೭ ॥

ಅಂತರಂಗ ಗಣೋಕ್ತಿಗಳು ಭೂ
ಪ್ರಾಂತಿನಗ್ಗಳ ಶರಣಸ್ತುತಿಗಳು
ಮಂತ್ರಶಕ್ತಿಯ ರುದ್ರಶಕ್ತಿಯರುಕ್ತಿ ಶಿವಶಕ್ತಿ ।
ಅಂತರಂಗದಲುದಯ ಷಟ್ಸ್ಥಲ
ಶಾಂತಿಪುರುಷರೆ ಪೂಜ್ಯರೆನುತಲ
ನಂತಕಾಲದಿ ಹೊಗಳುತಿರಲಾ ನಾದ ಪಸರಿಸಿತು ॥ ॥ ೧೮ ॥

ಶ್ರೀಮದಾದಿಯನಾದಿ ಪುರುಷರು
ಕಾಮಜಿತರು ಮಹಾನುಭಾವರು
ನಾಮರೂಪಿನ ನಾಟಕದಸಂಖ್ಯಾತ ರುದ್ರಗಣ ।
ಸ್ತೋಮ ಷಟ್ಸ್ಥಲಬ್ರಹ್ಮಿಗಳೆ ಇಹ
ಭೂಮಿ ಪರಲೋಕಕ್ಕೆ ಪೂಜ್ಯರು
ಸ್ವಾಮಿ ಸಾಕ್ಷಾದ್ವಸ್ತು ಚೀಲಾಳೇಶನೆನುತಿಹರು ॥ ॥ ೧೯ ॥

ಲಕ್ಷಣೀಕರ ಯೋಗಶಾಸ್ತ್ರವು
ದಕ್ಷ ಕೋಪೀ ಮೂರ್ತಿಯ ಸಲಹು
ಶಿಕ್ಷಗುರುಗಳ ಬೋಧೆ ಶಿಂಶುಮಾರ ಚ[೧][ಕ್ರ][೧] ಗಳು ।
ಅಕ್ಷಿತ್ರಯನವತಾರ ಷಟ್ಸ್ಥಲ
ಸಾಕ್ಷತಾ ಪರಬ್ರಹ್ಮ ಶರಣರೆ
ಮೋಕ್ಷ ಗುರುಗಳೆನುತ್ತ ಬೊಬ್ಬಿಡುತಿವೆಕೊ ಸುಕುಮಾರ ॥ ॥ ೨೦ ॥

ಗೌತಮ ದಧೀಚಿಗಳ ಕುಂಭಜ
ಸೂತಸು[೨][ತ][೨] ಕೌಶಿಕ ಶಿಲಾಧರ
ಜಾತಿ ಮನುಮುನಿಗಳ ಮಹಾಋಷಿ ಕೀರ್ತಿಘೋಷಗಳು ।
ಸೂತಕವನತಿಗಳೆದ ಷಟ್ಸ್ಥಲ ಪು
ರಾತನರೆ ಸ್ವಪರತ್ರ ಪೂಜ್ಯರು
ಭೂತಳಕೆ ರುದ್ರಾವತಾರರುಮೆನುತ ಡಂಗುರಿಸೆ ॥ ॥ ೨೧ ॥

೧–೧ ಕ್ರ(ಮೂ), ೨–೨ ಖ (ಮೂ).

ಬ್ರಹ್ಮಗೀತೆಯು ವಿಷ್ಣುಗೀತೆಯು
ಕರ್ಮಶಿಕ್ಷೆಯು ಧರ್ಮಶಿಕ್ಷೆಯು
ನಿರ್ಮಲಿನ ಪುರುಷರ ನಿರೂಪವು ಸುರಪನುಗ್ಗಡಣೆ ।
ಬ್ರಹ್ಮಸಂತತಿ ದೇವದೈತ್ಯರು
ಸುಮ್ಮನೇ ಷಟ್ಸ್ಥಲದ ಘನತೆಯ
ನೊಮ್ಮನದಿ ಕೊಂಡಾಡುತಿರಲಾ ಘೋಷವಾರ್ಭಟಿಸೆ ॥ ॥ ೨೨ ॥

ಹಿಂದೆ ಧರಣಿಯನಾಳಿದತಿರಥ
ವೃಂದ ಮಹರಥ ಕಿರೀಟಪತಿಗಳ
ಸಂದ ಮಾಂಧಾತ ಗೋವಿಂದರ ದಿವೋದಾಸ ।
ಅಂಧಕುಷ್ಠ ಪ್ರಬಂಧ ಷಟ್ಸ್ಥಲ
ಮುಂದೆ ಸದ್ಗತಿಯುಂಟೆನುತ ನಲ
ವಿಂದ ಕೀರ್ತಿಸುತಿರಲು ಶಬ್ದವು ಶಿವನ ಸಭೆಗಡರೆ ॥ ॥ ೨೩ ॥

ಶರಣರೇ ಘನವೆಂಬ ನಾದವ
ಗುರುಮುಖದಲದನರಿದು ಶ್ರುತಿಗಳ
ನೆರೆ ವಿಚಾರಿಸಿ ಸ್ವಾತ್ಮಜ್ಞಾನದಿ ತಿಳಿದು ದೃಢವಿಡಿದು ।
ಕರಣಶುದ್ಧದಿ ನುಡಿದು ನಡೆವುತ
ಪರಮ ಷಟ್ಸ್ಥಲಕೀತ ಜನ್ಮದಿ
ಸ್ಥಿರ ಶರಣ ನಿಜಮುಕ್ತಿಯೆನುತಲಿ ಹೊಗಳುತಿರೆ ಬುಧರು ॥ ॥ ೨೪ ॥

ಮಿಥ್ಯಕರ್ಮವ ಕಳೆದು ಪುನರಪಿ
ಸತ್ಯಧರ್ಮವ ತಿಳಿದು ಸ್ವರ್ಗವ
ಮರ್ತ್ಯ ಪಾತಳ ಸುಖದ ಲಾಭವ ಹಳಿದು ಷಟ್ಸ್ಥಲದ ।
ಭೃತ್ಯರಾಳಾಗಿರುವ ಜನರಿಗೆ
ಪ್ರತ್ಯಕ್ಷ ಸಾಯುಜ್ಯಪದ ಸ
ತ್ಕೃತ್ಯ ಶ್ರೀ ಷಟ್ಸ್ಥಲಶಿವಾಯಣವೆನುತ ಶ್ರುತಿ ಮೆರೆಯೆ ॥ ॥ ೨೫ ॥

ವೀರಶೈವವೆ ಸಕಲಲೋಕಕೆ
ವೀರಶೈವವೆ ಸಕಲಸಮಯಕೆ
ವೀರಶೈವವೆ ನಾಮಲಾಂಛನ ಸ್ಥಳಕುಳಕೆ ಶ್ರೇಷ್ಠ ।
ವೀರಶೈವವೆ ಇಹಪರಕೆ ಘನ

ವೀರಶೈವವೆ ಸ್ವಯಂಭುಬ್ರಹ್ಮವು
ವೀರಶೈವಕ್ಕೆಣೆಯ ಕಾಣೆನೆನುತ್ತುಲಿಯೆ ಘೋಷ ॥ ॥ ೨೬ ॥

ವೀರಶೈವರೆ ಮುಖ್ಯ ಪ್ರಸ್ಥಕೆ
ವೀರಶೈವರೆ ಪ್ರಮುಖ ಭಕ್ತಿಗೆ
ವೀರಶೈವರೆ ಪಾದಪೂಜೆಯೆ ಯೋಗ್ಯ ಭಕ್ತರಿಗೆ ।
ವೀರಶೈವರೆ ಪ್ರಣವಬ್ರಹ್ಮವು
ವೀರಶೈವರೆ ಮಂತ್ರವಿಗ್ರಹ
ವೀರಶೈವರೆ ಓಂ ಪರಾತ್ಪರ ವಸ್ತುವೆಂದುಲಿಯೆ ॥ ॥ ೨೭ ॥

ಬ್ರಹ್ಮಲೋಕವ ತುಡುಕಿ ಟೀಕಿಸಿ
ಕಮ್ಮಗೋಲನ ಪಿತನ ಟೋಕಿಸಿ
ಘಮ್ಮನೇ ಪಾತಾಳ ಮರ್ತ್ಯವ ಸ್ವರ್ಗ ದಿಗ್ದೆಸೆಯ ।
ಹಮ್ಮ ಮುರಿವುತ ಪರಶಿವನ ಸಭೆ
ಸಮ್ಮುಖದಿ ಓಂ ಓಂ ಎನುತ್ತಿರೆ
ಸಮ್ಮನಾಲಿಸೆ ನಗುತ ಪಾರ್ವತಿ ಪ್ರಣವ ಘೋಷಗಳ ॥ ॥ ೨೮ ॥

ಎಲ್ಲ ಲೋಕದ ಮಾತೆ ಪಾರ್ವತಿ
ಎಲ್ಲ ಮತಸಂಪ್ರೀತ ಗಿರಿಸುತೆ
ಎಲ್ಲ ಮನುಮುನಿ ಹರಿಯಜರುಗಳು ವೇದತತಿ ವಿನುತೆ ।
ಎಲ್ಲ ಪ್ರಮಥರ ತಾಯಿ ಶಾಂಭವಿ
ಎಲ್ಲ ಷಟ್ಸ್ಥಲಬ್ರಹ್ಮಪ್ರಭು ನಿಜ
ವಲ್ಲಭನ ದುರ್ಲಭನ ವದನವ ನೋಡಿ ನಸುನಗುತ ॥ ॥ ೨೯ ॥

ತೊಡೆಯ ಪೀಠವನಿಳಿದು ಸ್ವಾಮಿಯ
ಅಡಿಗೆರಗಿ ಕೀರ್ತಿಸುತ ಹಸ್ತವ
ಹಿಡಿದು ಜೋಡಿಸಿ ನಿಂದು ಮಹಭಕ್ತಿಯಲಿ ಮಹದೇವಿ ।
ಮೃಡನೆ ಮೃತ್ಯುಂಜಯನೆ ಶಂಕರ
ಜಡೆಯ ತಪಸಿಗಳೊಡೆಯನೇ ಕಡು
ಬೆಡಗಿ ಷಟ್ಸ್ಥಲ ಪಡೆಯ ಪಡೆದನೆ ಬಿನ್ನಹ ಪರಾಕು ॥ ॥ ೩೦ ॥

ಸೃಷ್ಟಿಪತಿ ವಿಧಿ ಸ್ಥಿತಿಗೆ ಧರ್ಮ
ದೃಷ್ಟ ಸಂಹರ ರುದ್ರ ಕರ್ತನು

ಶ್ರೇಷ್ಠ ಖೇಚರ ಭೂಚರರು ಜಲಚರರು ವನಚರರು ।
ದೃಷ್ಟಿಗೋಚರ ಬಿಲಚರರು ಗುಹೆ
ಘಟ್ಟ ಬೆಟ್ಟ ಸ್ಥಲದಲಿರುತಿಹ
ರಿಷ್ಟರಿಗುಷ್ಟರಿಗು ಷಟ್ಸ್ಥಲವೆ ಘನವೆಂದುಲಿವುತಿದೆ ಪ್ರಣವ ॥ ॥ ೩೧ ॥

ನರರೊಳಗೆ ಸುರರೊಳಗೆ ಅಸುರರ
ನೆರವಿಯಲಿ ಮನುಮುನಿಗಳಲಿ ಘನ
ದೊರೆಗಳಲಿ ಮೂಲೋಕದೊಳಗಿಹ ಮತಮತಾಂತ್ರದಲಿ ।
ಪರಶಿವನೆ ನಿಮ್ಮಂತರಂಗದ
ಸರಸಿಜದಲವತರಿಸಿ ನಟಿಸುತ
ಶರಣರಿಗೆ ಸರಿ ಇಲ್ಲವೆನುತಿವೆ ಶಬ್ದಸಮ್ಮುಖದೆ ॥ ॥ ೩೨ ॥

ಭೂಮಿ ಈರೇಳಿರಲಿಕದರಲಿ
ನಾಮರೂಪಿನ ಲೀಲೆ ಇರುತಿರೆ
ಗ್ರಾಮಸೀಮೆ ಸಮಸ್ತ ಕುಲಗುರು ವರ್ಣಲಾಂಛನಕೆ ।
ಸ್ವಾಮಿ ನಿಮ್ಮವತಾರ ಷಟ್ಸ್ಥಲ
ಸಾಮರಸ್ಯದ ಶರಣರೆ ಘನ ಓಂ
ನಮೋ ನಮೊಯೆಂಬ ನಾದದ ನಿಜಸ್ತುತಿಯ ಕೇಳಿ ॥ ॥ ೩೩ ॥

ಕೇಳಿರೈ ನಂದೀಶ ಪ್ರಮಥರು
ಕೇಳಿರೈ ಭೃಂಗೀಶ ಶರಣರು
ಕೇಳಿ ಮನುಮುನಿ ಹರಿಯಜೇಂದ್ರರು ಸಪ್ತಋಷಿ ಸುರರು ।
ಕೇಳಗಸ್ತ್ಯ ವಸಿಷ್ಠಋಷಿಗಳು
ಕೇಳಿ ಕೌಶಿಕ ಕಣ್ವಮುನಿಗಳು
ಕೇಳಿದಾಕ್ಷಣ ಮೋಕ್ಷ ಷಟ್ಸ್ಥಲ ತತ್ವ ಘೋಷವಿದು ॥ ॥ ೩೪ ॥

ಭಾಳಲೋಚನ ಮನಕೆ ಹಬ್ಬವು
ಕೇಳಿದರ ಕರ್ಣಕ್ಕೆ ಪರ್ವವು
ಹೇಳಲಳವಲ್ಲೆನ್ನ ಭಾಗ್ಯದ ಹೆಚ್ಚುಗೆಯ ಸುಖವ ।
ಕೌಳಿಕವೊ ಆಗಮ ಪ್ರಮಾಣವೊ
ಶೌಳಿ ಶಬ್ದವೊ ವೀರಶೈವದ
ತಾಳು ತುದಿಯನು ಎನಗೆ ಸಭೆಗೆ ನಿರೂಪಿಸೆಲೆ ಸ್ವಾಮಿ ॥ ॥ ೩೫ ॥

ಕಾಣಬಾರದು ವೀರಶೈವದ
ಪ್ರಾಣಲಿಂಗದ ಘನ ಮಹಾಶಯ
ಪ್ರಾಣದೊಲ್ಲಭ ಪ್ರಭುವೆ ಲಾಲಿಸಬೇಕು ಬಿನ್ನಹವ ।
ಕ್ಷೋಣಿ ಹದಿನಾಲ್ಕಕ್ಕೆ ಹೊಸತಿದು
ಸ್ಥಾಣು ಪರಶಿವ ಶಂಭು ಶಂಕರ
ಮಾಣದಿದ ಕರುಣಿಸುವುದೆನುತಲಿ ರಾಣಿ ಬೆಸಗೊಳಲು ॥ ॥ ೩೬ ॥

ಅಹುದಹುದು ದಿಟ ಗೌರಿ ಶಂಕರಿ
ಸಹಜ ಷಟ್ಸ್ಥಲಬ್ರಹ್ಮಿಗಳೆ ಘನ
ಬಹುಮತಕೆ ಬಹುಜನಕೆ ಬಹುಬಗೆ ಸೃಷ್ಟಿದರ್ಶನಕೆ ।
ಮಹಿತಳಕೆ ಪಾತಳಕೆ ಇಲ್ಲಿಗೆ
ಸಹಿತವಾಗೆನ್ನಂತರಂಗದ
ಗುಹೆಯೊಳಗೆ ಥಳಥಳಿಸಿ ಬೆಳಗುವ ಬಸವಪ್ರಭುಸ್ವಾಮಿ ॥ ॥ ೩೭ ॥

ವಂಶವೇ ಇಹಪರಕೆ ಶ್ರೇಷ್ಠವು
ಕೌಂಶಿಕದ ಧ್ವನಿಯಲ್ಲ ದೇವೀ
ಸಂಶಯವ ಮಾಡಿದರೆ ಸ್ವಾಮಿದ್ರೋಹತನ ಬಹುದೌ ।
ಹಿಂಸೆಕರ್ಮಕತೀತ ಷಟ್ಸ್ಥಲ
ದಂಶವೇ ಯಜ್ಞಾಂಶ ಪಾರ್ವತಿ
ಹಂಸಗತಿ ಗರುಡಾಂಕ ದಂತಿಗೆ ಸಭೆಗೆ ನಿಜಯುಕ್ತಿ ॥ ॥ ೩೮ ॥

ಶ್ರುತಿಗರ್ಭ ಶ್ರುತ್ಯಂತ ಗರ್ಭರು
ಸ್ಮೃತಿಪುರಾಣಾಗಮ ಸುಗರ್ಭರು ।
ಕಥಗರ್ಭ ಕವಿಗರ್ಭ ಶಾಸ್ತ್ರಸಕೀಲಮತಗರ್ಭ ।
ಕತಿ ಶಿಖಾಮಣಿ ವೀರಶೈವದ
ಮತದ ಶರಣರೆ ಶ್ರೇಷ್ಠರೆನುತಲಿ
ಸ್ತುತಿಸಿ ಜೀವನ್ಮುಕ್ತರಾದರು ಗಿರಿಜೆ ಕೇಳೆಂದ ॥ ॥ ೩೯ ॥

ಜಾತಿ ಗೋತ್ರಾಶ್ರಮ ಕುಲಂಗಳ
ನೇತಿಗಳೆದು ಪೊತರಾದರು
ನೂತನ ಪುರಾತನರ ಶರಣರ ಸ್ಮರಣೆ ಮಾತ್ರದಲಿ ।
ಭೂತಳಕೆ ಈ ಸ್ಥಳಕೆ ಪೂಜ್ಯರ

ಜಾತ ಷಟ್ಸ್ಥಲ ಭಕ್ತರಾದರು
ಶ್ರುತಿಗಳನು ತಿಳದಾಗಮಜ್ಞರು ಗೌರಿ ಕೇಳೆಂದ॥ ॥ ೪೦ ॥

ಸರ್ವಯುಗದಲಿ ಸರ್ವಜಗದಲಿ
ಸರ್ವಮತದಲಿ ಸರ್ವಜನದಲಿ
ಸರ್ವಶಾಸ್ತ್ರದ ಸಕಲ ಸಂಗ್ರಹ ಷಟ್ಸ್ಥಲಗ್ರಜರ ।
ಸರ್ವಕಾಲದಿ ಭಜಿಸಿ ಕೀರ್ತಿಸಿ
ಸರ್ವಭಿಷ್ಟಾರ್ಥ ಪಡೆದರು
ಸರ್ವಮಂಗಳೆ ಕೇಳೆನುತ ಬೋದಿಸಿದ ಶಿವನಣುಗ ॥ ॥ ೪೧ ॥

ಚೋಳ ಪಡೆ ತೋಡಿಯಲಿ ನವ ಬ
ಲ್ಲಾಳ ಸಭೆ ಸೌರಾಷ್ಟ್ರದಲಿ ಬಂ
ಗಾಳ ಮೌರಿ ಕದಂಬ ನವಡಣಾಯಕರೆ ರೇಗುಪ್ತಿ ।
ಗೌಳದಲಿ ಷೋಡಶನೃಪರು ಭೂ
ಪಾಳಿಯಲಿ ಷಟ್ಚಕ್ರವರ್ತಿಗಳು
ಚೀಲಳೇಶನ ಚರಣಸ್ಮರಣೆಯ ರಾಗ ರಸಘೋಷ ॥ ॥ ೪೨ ॥

ದಶರಥನ ಧರ್ಮಜನ ಗೀತ[೧][ದ][೧]
ದಶಶಿರನ ದಕ್ಷಣನ ಗಾನದ
ಶಿಶುನೃಪಾಲನ ಕೌಶಿಕನ ಕೌರವನ ನಾಂದ್ಯಗಳ ।
ರಸಿಕವಲ್ಲಿದು ವೀರಶೈವದ
ಬೆಸುಗೆ ತತ್ವವಿಚಾರ ಜ್ಞಾನದ
ಹಸಿಗೆ ಬಸವಪ್ರಭು ನಿರೂಪದ ಪ್ರಣವ ಝೇಂಕಾರ ॥ ॥ ೪೩ ॥

ಸೋಮವಂಶದ ಸೂರ್ಯವಂಶದ
ಭೂಮಿಪಾಲರ ಬಂಧುಬಳಗದ
ಸ್ತೋಮಹಿಂಸೆಯ ಭಂಗಬಾಧೆಯ ಕೊಳಹಳವಿದಲ್ಲ ।
ರಾಮ ರಾವಣ ರಂಪವಲ್ಲಿದು
ನಾಮರೂಪಿನ ವಸ್ತು ಚೀಲಳ
ಸ್ವಾಮಿ ತತ್ವಸುಬೋಧೆ ಪಾರ್ವತಿ ಕೇಳೆ ಝೇಂಕಾರ ॥ ॥ ೪೪ ॥

೧-೧ ನ(ಮೂ)

ಗುಣತ್ರಯದ ಮೂರ್ತಿಗಳು ಹುಟ್ಟಿದ
ಮಣಿಕಿರೀಟದ ಮಹಿಮರಿಲ್ಲದ
ಅಣುವಿಗಣುಮಹತ್ತಿಗೆ ಮಹತ್ತಾಗಿರುವ ಪರವಸ್ತು ।
ಪ್ರಣವಗರ್ಭದ ಮಂತ್ರಮೂರ್ತಿ ಚಿ
ದಣುಗ ಪರಶಿವನಂತರೋದ್ಭವ
ಗಣಶಿಖಾಮಣಿ ಬಸವಪ್ರಭುವಿನ ಜಪದ ಝೇಂಕಾರ ॥ ॥ ೪೫ ॥

ಬ್ರಹ್ಮ ವಿಷ್ಣರು ದೇವಋಷಿಗಳು
ಬ್ರಹ್ಮಋಷಿಗಳು ರಾಜಋಷಿಗಳು
ತಮ್ಮ ತಮ್ಮ ವಿರುದ್ಧವಳಿದರು ನಾದಗೇಳುತಲೆ ।
ಹಮ್ಮು ಬಿಮ್ಮುಗಳಡಗಿ ಹೋದವು
ನಮ್ಮ ಹೃದಯವತಾರ ಷಟ್ಸ್ಥಲ
ಬ್ರಹ್ಮಿಗಳೆ ಘನವೆಂಬ ನಾದವ ಕೇಳ್ದ ಫಲದಿಂದ ॥ ॥ ೪೬ ॥

ಕಿನ್ನರರು ಕಿಂಪುರುಷ ಮನುಮುನಿ
ಹನ್ನೆರಡು ಗರುಡಾಳಿ ನರಸುರ
ರಿನ್ನುಳಿದ ಗಾಂಧರ್ವ ದನುಜರು ಸಿದ್ಧಸಾಧಕರು ।
ನಿನ್ನ ಕರುಣದಿ ದೇವಿ ಸಕಲರು
ಸನ್ನಿದಾಸರು ಮುಕ್ತರಾದರು
ನನ್ನ ಷಟ್ಸ್ಥಲ ಶರಣರನುಭವಗೇಳ್ದ ಕಾರಣದಿ ॥ ॥ ೪೭ ॥

ಪ್ರಭೆಯೆ ಪಾವನವಾದುದಗಜೇ
ತ್ರಿಭುವನಕೆ ಮಳೆಯೇ ಸಮೃದ್ಧಿಯು
ಶುಭದ ಸೂಚನೆ ಇದೆ ಕಣ ಜಗನ್ಮಾತೆ ಪ್ರಖ್ಯಾತೆ ।
ವಿಬುಧವರಾದರು ಮೂಢರೆಲ್ಲರು
ನಭಕೆ ಭೂಮಿಗೆ ಕಳಶ ಷಟ್ಸ್ಥಲ
ಪ್ರಭು ಪುರಾಣದ ಸಿದ್ಧಲಿಂಗಾಚಾರ್ಯ ಗುರುಕೀರ್ತಿ ॥ ॥ ೪೮ ॥

ದೇವ ದುಂದುಭಿಗಳು ಮೊಳಗಿದವು
ತೀವಿ ಹೂಮಳೆಗರೆದವಾಕ್ಷಣ
ದೇವಗಣಸಭೆ ಸಹಿತ ಪ್ರಮಥರು ದೇವಿ ಹೊಗಳಿದಳು ।
ಪೂವಡಿಗ ಹಾವಡಿಗ ಗಜರಥ

ತಾವ ಬಿಟ್ಟಿದ್ದೆರಗಿ ಕೀರ್ತಿಸಿ
ದೇವ ಚೀಲಳಸ್ವಾಮಿ ಸಾಕ್ಷಾದವಸ್ತುವಹುದೆನುತ ॥ ॥ ೪೯ ॥

ದೊರೆಗಳಿಗೆ ಭುಜಭಲ್ಮೆ ಹೆಚ್ಚಲಿ
ಶರಣರಿಗೆ ಸಂತೋಷ ಉಕ್ಕಲಿ
ಹರನ ಭಕ್ತರ ಸಂತತಿಗೆ ಹರುಷಾಬ್ಧಿ ವರ್ಧಿಸಲಿ ।
ಧರೆಯ ಜನರಿಗೆ ದ್ರವ್ಯವೊದಗಲಿ
ಪುರುಷಸ್ತ್ರೀಯರು ಸುಖದಿ ಬಾಳಲಿ
ಗುರುಕಟಾಕ್ಷದಲೆನುತ ಪಾರ್ವತಿ ನಗುತ ಹರಸಿದಳು ॥ ॥ ೫೦ ॥

ಜಯತು ಜಯ ಶ್ರೀ ವೀರಶೈವನೆ
ಜಯತು ಜಯತು ಮಹಾನುಭಾವನೆ
ಜಯತು ಜಗದಾರಾಧ್ಯ ಪೂಜ್ಯನ ಜಠರ ವಿಶ್ವಾತ್ಮ ।
ಜಯತು ಜಯ ಇಹಪರ ಪ್ರಕಾಶನೆ
ಜಯತು ಜಯ ಷಟ್ಸ್ಥಲಕಧೀಶನೆ
ಜಯತು ಸದ್ಗುರುಮೂರ್ತಿ ಚೀಲಳಸ್ವಾಮಿ ಶರಣಾರ್ಥಿ ॥ ॥ ೫೧ ॥

ಗಂಗೆ ಗೌರಿಯು ಗುಹ ಗಣಪ ಶಿವ
ಭೃಂಗಿ ನಂದಿಯು ವೀರಭದ್ರ ಪ್ರ
ಸಂಗ ಸಮರಸ ಷಟ್ಸ್ಥಲಾಗ್ರಜ ಪ್ರಮಥಗಣನಿಕರ ।
ಭೃಂಗಕೀಟದ ನ್ಯಾಯ ಕರಸ್ಥಲ
ಲಿಂಗಯೋಗಾನ್ವಿತ ನಿರಂಜನ
ಜಂಗಮವೆ ಚೀಲಾಳಸ್ವಾಮಿ ನಮಸ್ತೆ ಪರವಸ್ತೇ ॥ ॥ ೫೨ ॥

ಹೆಡ್ಡರಿಗೆ ಹೆಳವರಿಗೆ ಸುಖವನು
ಮಡ್ಡರಿಗೆ ಮರಡರಿಗೆ ಮತಿಯನು
ದೊಡ್ಡವರಿಗೈಶ್ವರಯ ಜಂಗಮಭಕ್ತಿಭಾವವನು ।
ಗುಡ್ಡರಿಗೆ ಗುರಪಾದ ದೆಸೆಯಲಿ
ಅಡ್ಡ ಬಿದ್ದರಿಗಭಯ ಹರಪುರ
ಗುಡ್ಡದನುಭವ ಮಂಟಪದ ಗುರುರಾಯ ಪಾಲಿಸಲಿ ॥ ॥ ೫೩ ॥

೧-೧ ಗೆ(ಮೂ)

ಶಿವನು ದೇವಿಗೆ ನಂದಿ ಪ್ರಮಥರ
ನಿವಹಕುಪದೇಶಿಸಿದರಲ್ಲಿ[ಯ]
ವಿವರವನೆ ವೃಷಭೇಂದ್ರ ಮೊದಲಾದರಿಗೆ ಪ್ರಭು ಪೇಳ್ದ ।
ಸವಿರಸದ ಷಟ್ಸ್ಥಲದ ಸೂತ್ರವ
ನವನಿಗಿದೆ ಕೈಲಾಸ ಹರಪುರ
ನವರತ್ನ ಮಂಟಪದಿ ಬಸವಪ್ರಭು ತನಯಗೊರೆದ ॥ ॥ ೫೪ ॥

ಹೇಳಿದರೆ ಹೇಮಾದ್ರಿ ನೆಲೆವನೆ
ಕೇಳಿದರೆ ಕೈಲಾಸಪದವಿಯು
ತಾಳು ತುದಿಯನುಭವವ ತಿಳಿದರೆ ತಾರಕಬ್ರಹ್ಮ ।
ಮೇಳ ಸಾಯುಜ್ಯಾದಿ ಸಂಪದ
ದೇಳಿಗೆಯ ಪೀಳಿಗೆಯ ಶರಣರ
ಮೌಳಿಮಣಿ ಷಟ್ಸ್ಥಲಶಿವಾಯಣ ಮಗನೆ ಕೇಳೆಂದ ॥* ॥ ೫೫ ॥

❖❖

* ಇತಿ ಪಂಚಮ ಸ್ಕಂಧ ನಿರೂಪಣ ಅಂತು ಭಯಂ ಪದಗಳಿಗೆ ೧೮೭ ಕ್ಕಂ ಸಮಾಪ್ತ ಮಂಗಳ ಮಹಾಶ್ರೀ ॥

ಷಷ್ಠ ಸ್ಕಂಧ

ರಾಗ : ಭೈರವಿ

ಘನಗುರುವೆ ಷಟ್ಸ್ಥಲನಿರೂಪಣ
ಮನಸಿಗುತ್ಸಹವಾಯ್ತು ಮುಂದಣ
ಜನನಸ್ಥಲ ಹರಿಯಜರ ಸೃಷ್ಟಿಯನೊರೆಯಬೇಕೆಂದ ॥

ಹರಿಯ ಹುರಿವುತಲಜನನಟ್ಟುತ
ಸುರಪನುರುಹುತ ಸುರರ ಸುಡುತಲಿ
ಸುರುಳಿಸುತ ದಿಕ್ಪಾಲಕರ ಬೆಂಬಿಡದೆ ಶಶಿರವಿಯ ।
ನರೆದು ಮುಕ್ಕುತಲಾರ್ಭಟಸುತಲಿ
ಬರುವ ಗರಳವ ಕೊರಳ ಕೊನೆಯೊಳ
ಗಿರಿಸಿ ನಟಿಸುವ ಪರಮಶಂಕರ ಸಲಹು ಮೂಜಗವ ॥ ॥ ೧ ॥

ಕುಂಭಿನಿಯೆ ಹರಿಪೀಠ ವಾಲ್ಮಿಕ
ದುಂಭಿದುರಗಾಭರಣದೆರಡನೆ
ಶಂಭು ಷಟ್ಸ್ಥಲಬ್ರಹ್ಮಿ ಕಾಷಾಂಬರ ಭಸಿತಲೇಪ ।
ನಂಬಿ ಭಜಿಪರ [೧][ಪಾ][೧] ಲ ಶರಣ ಕ
ದಂಬ ರುದ್ರಾಕ್ಷಂಕ ಶಿವ ಕರ
ದಂಬುಜ ಪರಂಜ್ಯೋತಿ ಚೀಲಲಳಸ್ವಾಮಿ ಶರಣಾರ್ಥಿ ॥ ॥ ೨ ॥

ವೀರಶೈವ ವಿಚಾರರಿಗೆ ಸಂ
ಸಾರಪಾಶ ವಿದೂರರಿಗೆ ಬಹು

೧-೧ ಬಾಲ (ಮೂ)

ಭಾರಿಬುದ್ಧಿಯನುಳ್ಳರಿಗೆ ಷಟ್ಸ್ಥಲದ ಭಕ್ತರಿಗೆ ।
ತಾರಕವ ತಿಳಿದರಿಗೆ ತತ್ವದ
ಸಾರಗಳನರಿದರಿಗೆ ಬಿಡದೆ ಕು
ಮಾರಪ್ರಭು ಬೋಧಿಸುವುದೀ ಷಟ್ಸ್ಥಲಶಿವಾಯಣವ ॥ ॥ ೩ ॥

ಕೌಳರಿಗೆ ಕಾಪಾಲರಿಗೆ ಕಡು
ಜಾಳು ಮಾತಿನ ಜೈನರಿಗೆ ಜಡ
ಕಾಳವಕ್ತ್ರಗೆ ನೀಲಪಟರಿಗೆ [ಸೌ] ರ ಸಾಂಖ್ಯರಿಗೆ ।
ಕಾಳ ಗಾಣಾಪತ್ಯ ಮಧ್ವ ಸ
ಮೇಳ ತಿಗಳ ಸುಶಕ್ತಿ ಸಮಯಕೆ
ಹೇಳದಿರು ಎಲೆ ಮಗನೆ ಈ ಷಟ್ಸ್ಥಲಶಿವಾಯಣವ ॥ ॥ ೪ ॥

ಭ್ರಮರಕುಂತಳೆ ಗೌರಿಗೀಶ್ವರ
ಪ್ರಮಥರಿಗೆ ನಂದೀಶನಲ್ಲಿಗೆ
ಸಮರಸದ ಶರಣರಿಗೆ ಪ್ರಭು ಗುರು ಬಸವರಾಜನಿಗೆ ।
ಸಮಯದ ಗಣಂಗಳಿಗೆ ಹರಪುರ
ವಿಮಲಗಿರಿ ಸಿಂಹಾಸನದ ಗುರು
ಪ್ರಮುಖ ಷಟ್ಸ್ಥಲಬ್ರಹ್ಮ ಬಸವಪ್ರಭು ಸುತನಿಗೊರೆದ ॥ ॥ ೫ ॥

ಸೃಷ್ಟಿ ತ್ರಿವಿಧವದೆಂತೆನಲು ಕೇಳ್
ಬಟ್ಟಿ ಬಯಲ ಬ್ರಹ್ಮವಿರುತಿರೆ
ಹುಟ್ಟಿತಾತಗೆ ಹಮ್ಮುವದರಿಂ ಶಾಂತಿಕಲೆ ಚಿತ್ತು ।
ಗಟ್ಟಿಗೊಂಡುದೆ ಪ್ರಥಮಸೃಷ್ಟಿಯು
ಜ್ಯೇಷ್ಠನಿಂದೆರಡನೆಯ ಸೃಷ್ಟಿಯು
ಸೃಷ್ಟಿ ತ್ರಿವಿಧವು ವಿಶ್ವಕರ್ಮನ ಮುಖದಿ ಪ್ರಬಲಿಸಿತು ॥ ॥ ೬ ॥

ಭೂತಳದಲಿಹ ಸಾರ ವಿವರವ
ನೇಕ ಶಾಸ್ತ್ರ ನೋಡಿ ತಿಳಿ ಬಹು
ಶೋಕ ಸ್ಥಳ ಕುಳ ಹಸಿಗೆಯಳತೆ ಪ್ರಮಾಣ ಲಕ್ಷಣವ ।
ಈ ಕಥಾ ಕುಳಕಿನಲಿ ಮುಂದದ
ಟೀಕಿಸುವೆ ಸಂಕ್ಷೇಪ ಮಾತ್ರದಿ
ಲೋಕಕತಿಶಯ ಗೌರಿ ಶಂಕರಬೋಧೆ ಕೇಳೆಂದ ॥ ॥ ೭ ॥

ಶಂಕರನೆ ಶಶಿಧರನೆ ಷಟ್ಸ್ಥಲ
ದಂಕಮಾಲೆಯ ಕೇಳಿ ನಗುವನೆ
ಓಂಕರನೆ ವರದಭಯ ಕರದನೆ ಮಹಾದೇವ ನಮೋ ।
ಶಂಖಚಕ್ರವ ಹರಿಗೆ ಕೊಟ್ಟಕ
ಳಂಕವಮಹಿಮ ನಮಸ್ತೆಯೆನುತಲಿ
ಶಂಕರಿಯು ಶಂಕರನ ಕೀರ್ತಿಪ ಸಮಯದೊಳಗೊರ್ವ ॥ ॥ ೮ ॥

ಆದಿಯಲಿ ಪ್ರಮಥರ ಪುರಾತರ
ಪಾದರೇಣುವಿಲಾದ ಮಹಿಮನು
ಪಾದಲೋಚನಗೆರಗಿ ಕೀರ್ತಿಸಿ ಕೈಮುಗಿದು ನಿಂದು ।
ವೇದಶಾಸ್ತ್ರಾಗಮ ಪುರಾಣದ
ಸಾಧನೆಗೆ ಸಿ[ಲ್ಕ]ದ ಸದಾಶಿವ
ಗಾ ದಯಾಂಬುಧಿ ಮರಳಿ ನಮಿಸಿ ಪ್ರದಕ್ಷಿಣೆಯ ಮಾಡಿ ॥ ॥ ೯ ॥

ಅಂಗುಷ್ಠಗಣನಾಥನೆಂಬವ
ಲಿಂಗಮಹಿ[೧][ಮನು][೧] ಬ್ರಹ್ಮ ವಿಷ್ಣುವ್ವರ
ಭಂಗಿಸುವ ಪರಶಿವ ನಿರಂಜನ ಜಂಗಮವತಾರ ।
ಸಂಗಮೇಶ್ವರ ಸಲಿಲವೆನೆ ಧವ
ಳಾಂಗನಂಘ್ರಿಯ ಭಜಿಸಿ ಕರ್ಪುರ
ಮಂಗಳಾರ್ತಿಯನೆತ್ತಿ ಪುಷ್ಪಾಂಜಲಿಯ ಮಾಡಿದನು ॥ ॥ ೧೦ ॥

ಹೊಳೆವ ಚಂದ್ರಕಿರೀಟನೆ ನಮೋ
ಎಳೆಯ ನಾಗಾಭರಣನೆ ನಮೊ
ಥಳಥಳಿಪ ನಗೆಮೊಗದ ತಾವರೆಗಣ್ಣಚರಣ ನಮೋ ।
ಪ್ರಳಯಕಾಲವ ಮೀರಿದನೆ ನಮೊ
ಹಲಬರಿಗೆ ಬಹು ಹಳಬನೆ ನಮೋ
ನಳನಳಿಪನಖ ನೇತ್ರಸೌಂದರ ಗೌರಿಯರಸ ನಮೋ ॥ ॥ ೧೧ ॥

ಪರಶಿವನೆ ನಿಮ್ಮಂತರಂಗದ
ಸರಸಿಜದಲವತಿರಿಸಿ ನಟಿಸುವ
ಶರಣ ಷಟ್ಸ್ಥಲವೀರಶೈವನೆ ಇಹಪರಕೆ ಶ್ರೇಷ್ಠ ।

೧-೧ ಮೆಯ (ಮೂ)

ದರುಶನ ಮತಾಂತ್ರಾದಿಗಗ್ಗಳ
ಗಿರಿಜೆ ಕೇಳೆಂದೊರೆದ ಪ್ರಶ್ನೆಗೆ
ಧರಣಿ ಚತುರ್ದಶ ಸಭೆ ಸಮಸ್ತರು ಮುಕ್ತರೆಂದೆನುತ ॥ ॥ ೧೨ ॥

ಬುದ್ಧಿಗಲಿಸಿದಿರಾಗಿ ರೂಪ ಪ್ರ
ಸಿದ್ಧವಾದುದು ಸಕಲರಿಗೆ ಮದ
ಮರ್ದನನೆ ಪ್ರಮಥರಿಗೆ ಗೌರಿಗೆ ನಿಮಗೆ ನಿಜಸಭೆಗೆ ।
ಸಿದ್ಧಸಾಧಕ ಮನುಮುನಿಗಳಿಗೆ
ವೃದ್ಧಚಾರದ ಗುರುಹಿರಿಯರಿಗೆ
ಮುದ್ದು ಗಿರಿಜೆಯ ನೆವದಲೆಲ್ಲರು ಮುಕ್ತರಾದರಲ ॥ ॥ ೧೩ ॥

ಭಕ್ತವತ್ಸಲಮೂರ್ತಿ ಜಯಜಯ
ಭಕ್ತಸಂಪದಕೀರ್ತಿ ಜಯ ಜಯ
ಭಕ್ತರಿಷ್ಟಾರ್ಥಗಳ ಸಲಿಸುವ ಪ್ರಭುವೆ ಜಯಜಯತು ।
ಭಕ್ತಪರುಷದ ಖಣಿಯೆ ಜಯ ಜಯ
ಭಕ್ತಚಿಂತಾಮಣಿಯೆ ಜಯ ಜಯ
ಭಕ್ತಪಾಲಕ ಭಾಳಲೋಚನ ಬಿನ್ನಹ ಪರಾಕೆ ॥ ॥ ೧೪ ॥

ಗೋಪ್ಯಮುಖ ಭವ ವೀರಶೈವ ಪ್ರ
ಸ್ತಾಪವಾಗಿಹ ಪರಕೆ ಬಹು ದೇ
ದೀಪ್ಯ ದಿವ್ಯಜ್ಞಾನ ತತ್ವನಿರೂಪ ಷಟ್ಸ್ಥಲ ಸಾ ।
ಮಿಪ್ಯ ಶರಣರ ಹೊಗಳಲಸದಳ
ರೌಪ್ಯಗಿರಿಪತಿ ರಾಜಧರ ಬಹು
ಗೌಪ್ಯವಿನ್ನುಳಿದವರ ಸೃಷ್ಟಿಯನೊರೆಯಬೇಕೆಂದ ॥ ॥ ೧೫ ॥

ಭಾವಜನ ಭಕ್ತಿಗಳ ಮುರಿದನೆ
ದೇವಗಣಸಭೆ ದಿವಿಜಪೂಜ್ಯನೆ
ಕೋವಿದನೆ ಕೌಶಲ್ಯಲಿಂಗ ಸುಸಾವಧಾನಿಯಲಾ ।
ತಾವರೆಯ ಸಖನಣುಗ ವಿಜಯನೆ
ಭೂವಳಯಕಗ್ಗಳ ಗಣಾಧಿಪ
ನಾವ ದೃಷ್ಟಿಯ ಹೇಳಬೇಕೆನುತಭವ ಶಂಕಿಸಲು ॥ ॥ ೧೬ ॥

ಅಜಹರಿಗಳವತಾರದಾದಿಯ
ತ್ರಿಜಗ ಜನರುತ್ಪತ್ಯ ಸ್ಥಾನವ
ಸುಜನ ಮನುಮುನಿಜನನ ಚತುರಾಚಾರ್ಯರುದ್ಭವವ ।
ವಿಜಯ ವೇದಾಗಮಪುರಾಣದ
ನಿಜಜನ್ಮಸ್ಥಾನಗಳ ಕರುಣಿಸಿ
ಭಜಕಜನ ಭಕ್ತರ ವರದ ನಮೊಯೆನುತಲಡಿಗೆಡೆದ ॥ ॥ ೧೭ ॥

ಹಿಂದೆ ಪಾರ್ವತಿ ಪ್ರಮಥರಿಗೆ ನಲ
ವಿಂದಲಟ್ಟ ಸಮಸ್ತ ಪಾಕವ
ನೊಂದೆ ಬೋಧೆಯಲೆತ್ತಿ ನುಂಗಿದ ವರದ ಗಣನಾಥ ।
ಚಂದದಿಂದಲೆ ಕೇಳು ಮನಸಿನ
ಸಂದೆಹಂಗಳ ಮಾಣು ಪೇಳುವೆ
ನಂದಿ ಮೊದಲಾದಖಿಳ ಷಟ್ಸ್ಥಲವೃಂದ ಭಾಪೆನಲು ॥ ॥ ೧೮ ॥

ನಗುತ ತನ್ನಡಿಗೆರಗಿದಾತನ
ನೆಗಹಿ ಕರಗಳ ಹಿಡಿದು ಮುದ್ದಿಸಿ
ಮುಗುದನಿವನೆಂದೆನುತ ತಲೆದಡಹುತ್ತ ಶಂಕರನು ।
ಮಗನೆ ಬಾರೋ ಇತ್ತ ಬಾಬಾ
ಜಗಕೆ ನೂತನವಾಯ್ತು ಕೇಳುವ
ಬಗೆಯೆ ಬಹು ಸೊಗಸಾಯಿತೆಂದನು ರೇಣುಪುತ್ರನಿಗೆ ॥ ॥ ೧೯ ॥

ನೀಲಕಂಠನು ನಿಗಮಗೋಚರ
ಶೂಲಿ ಸುಜನರ ಭಾಗದೊಡೆಯನು
ಬಾಲಕನ ಬಹು ಮುದ್ದು ಮಾತಿಗೆ ಮಚ್ಚಿ ಹರುಷದಲಿ ।
ಕಾಲಕಾಲದಿ ಯುಗದಿ ಷಟ್ಸ್ಥಲ
ಲೀಲೆ ಮೆರೆಯಲಿ ಉಳಿದ ಸೃಷ್ಟಿಯ
ಜಾಲಗಳ ಹರಿಯಜರ ಭವಮೂಲಗಳ ಕೇಳೆಂದ ॥ ॥ ೨೦ ॥

ದೆಸೆ ಜನನ ಶ್ರೋತ್ರದಲಿ ರವಿ ದೃಕು
ಶಶಿ ಮನಃಪ್ರಾಣನಿಲ ಶಿಖಿಮುಖಿ
ತ್ವಶಿರ ಸುರ ಪುರುಹೂತ ಜ್ಞಾನಜಂಘ ನಭ ನಾಭಿ ॥
ವಸುಧೆ ಪದಭುಜ ಶೌರಿ ತವಮುಖ

ವಿಷರುಹದಿ ಶ್ರೀರುದ್ರ ಭವವಾ
ಬಸುರಿನಲಿ ಹದಿನಾಲ್ಕು ಭುವನಗಳುದಯ ಕೇಳೆಂದ ॥ ॥ ೨೧ ॥

ಪಂಚಮುಖದಲಿ ಪಂಚಗುರುಗಳು
ಪಂಚಮಂತ್ರವು ಪಂಚಕಲೆಗಳು
ಪಂಚವದನದ ಉದಯವಾಗಮ ಕೌಶಿಕಾದಿ ಋಷಿ ।
ಪಂವಶಕ್ತಿಯರುದಯ ಮನುಮುನಿ
ವಂಚನೆಯನತಿಗಳೆದ ತರು ನಿಜ
ಪಂಚವಕ್ತ್ರದಿ ಜನನ ಶ್ರುತಿಮತ ಕೇಳು ಗಣನಾಥ ॥ ॥ ೨೨ ॥

ಎನ್ನ ನುಡಿಗಳೆ ಪ್ರಣಮೂಲವು
ಎನ್ನ ಶ್ವಾಸವೆ ವೇದದಾದಿಯು
ಎನ್ನ ಜ್ಞಾನವೆ ಉಪನಿಷತ್ ಸ್ಮೃತಿ ಸಹ ಸಕೀಲಗಳು ।
ಎನ್ನ ಜಿಹ್ವೆಯ ಕೊನೆಯಲಾದವು
ಇನ್ನುಳಿದ ಪೌರಾಣಶಾಸ್ತ್ರವು
ಉನ್ನತದ ಮತಗ್ರಂಥ ಸಂಗ್ರಹಸಾರ ಕೇಳೆಂದ ॥ ॥ ೨೩ ॥

ಪಾದ ಕಡೆ ಮಸ್ತಕವೆ ಮೊದಲಾ
ಗಾದವಗಣಿತಜಾಂಡತತಿಗಳು
ಭೇದಭೇದದ ಜಾತಿವರ್ಣಾಶ್ರಮ ಕುಲಾಚಾರ ।
ವಾದ ವಾಕ್ಯವು ಶ್ರದ್ಧೆ ಸಮರಸ
ವೆಂದ ದುಃಖವು ಸಿರಿ ದರಿದ್ರತೆ
ಬೋಧೆ ದೇಶಿಕ ಶಿಷ್ಯ ಜನಪದ ನಿಮಿಷ ನಿಜವೆಂದ ॥ ॥ ೨೪ ॥

ತರು ಮರನು ಲತೆ ಗುಡ್ಡ ಗುಲ್ಮಂ
ಹಿರಿದು ಕಿರಿದಿನ ಹೆಣ್ಣು ಗಂಡುಗ
ಳುರಗ ಖಗ ಮೃಗ ಪಕ್ಷಿ ಶಿಶುಗಳ ನಾಮ ರೂಪಗಳು ।
ತರಣಿ ಶಶಿಗಳು ತಾರಮಂಡಲ
ನರ ಸುರರು ದನುಜಾಳಿ ನಮ್ಮಯ
ಶರಿರ ರೋಮದ ಕುಳಿಯಲುದಯವು ಶರಣ ಕೇಳೆಂದ ॥ ॥ ೨೫ ॥

ಸಪ್ತದ್ವೀಪವು ಸಪ್ತಗಿರಿಗಳು
ಸಪ್ತಶರಧಿ ಸಮಸ್ತಖಂಡ ಸು

ಸುಪ್ತದರ್ಬುದ ಕೋಟಿ ಸ್ಥೂಲದ ಪಂಚಶತಕೋಟಿ ।
ಲೋಪ ವಿಸ್ತೀರ್ಣದಲಿ ತೋರುವ
ಗುಪ್ತ ಬ್ರಹ್ಮಾಂಡಂಗಳೇ ನಿಜ
ಜ್ಞಪ್ತಿ ಮಾತ್ರದಿ ಜನನಸ್ಥಿತಿಲಯ ಸುತನೆ ಕೇಳೆಂದ ॥ ॥ ೨೬ ॥

ಭೂಮಿನವಗ್ರಹ ತಾರಾಮಂಡಲ
ಸೋಮರವಿಶಿಖಿಯಷ್ಟತನುಗಳು
ಸ್ತೋಮಸ್ತೋಮದಜಾಂಡ ತಂಡ ಸಮಸ್ತ ಕುಲ ಛಲವು ॥
ಸೀಮೆ ಗ್ರಾಮವು ದೇಶ ಕೋಶವು
ನಾಮರೂಪಿನನಿ ನಟನೆಗಳು ತವ
ರೋಮಕೂಪದಲುದಯವಾದವು ಕೇಳು ಗಣನಾಥ ॥ ॥ ೨೭ ॥

ಅಂಗಳದ ತವನಿಧಿಯೊ ತತ್ವವೊ
ಅಂಗುಳದ ಸೊಧೆಯೋ ಸುಧಾಬ್ಧಿಯೊ
ಲಿಂಗನಿಷ್ಠೆಯೊ ನಿಜದ ಘಟ್ಟಿಯೊ ಷಟ್ಸ್ಥಲವೊ ಬಲವೊ ।
ಜಂಗಮವೊ ಜಗತ್ಪಾವನವೊ ಮಹ
ಮಂಗಳವೊ ಮಹ ವೀರಶೈವವೊ
ಉಂಗುಷ್ಠ ಗಣನಾಥ ಕೇಳೆಂದೊರೆದನುಮೆಯರಸ ॥ ॥ ೨೮ ॥

ಆಗುಯೆಂದಡೆ ಆಗು ಕ್ಷಣದಲೆ
ಹೋಗುಯೆಂದಡೆ ಹೋಗು ನಿಮಿಷದಿ
ಆಗಿಹೋಗುಗಳೆಲ್ಲವೆಮ್ಮಯ ನೆನಹು ಮಾತ್ರವಲ ।
ಆಗಮಾಮ್ನಾಯಗಳ ಕೇಳಿಕೊ
ಶ್ರೀಗುರುವ ಬೆಸಗೊಳ್ಳೊ ಷಟ್ಸ್ಥಲ
ಯೋಗಿಗಳೆ ನಿಜವೆಂದು ಸ್ವಾತ್ಮಜ್ಞಾನದಲಿ ನೋಡು ॥ ॥ ೨೯ ॥

ಎಂದು ಬೋಧಿಸಲಭವನಂಘ್ರಿಗೆ
ವಂದಿಸುತಲಂಗುಷ್ಠಗಣವರ
ನಿಂದು ಕರಗಳ ಮುಗಿದು ಬದುಕಿದೆನೆಂದು ಕೀರ್ತಿಸಲು ।
ಇಂದುಧರ ಇನಕೋಟಿತೇಜ ಮು
ಕುಂದ ಮನುಮುನಿವಿನುತ ಚರಣಾರ
ವಿಂದ ಜಯಜಯ ತ್ರಾಹಿ ನಮೊ ನಮೊಯೆನಲು ಗಣನಿಕರ ॥ ॥ ೩೦ ॥

ಶರಣ ಷಟ್ಸ್ಥಲಪ್ರಮಥಶ್ರೇಷ್ಠರ
ಚರಣರೇಣು ವಿಲಾಸ ಮಹಿಮನ
ಗಿರಿಜೆ ಕೊಂಡಾಡಿದಳು ಹರಸುತ ಹರುಷರಸ ಹೆಚ್ಚಿ ।
ಹರಿಯಜರು ಹೊಗಳಿದರು ಋಷಿಗಳು
ತರತರದಿ ಕೀರ್ತಿಸಲು ಶಿವಗಣ
ಶರಣರುತ್ಸಹದಿಂದ ತೆಗೆದರು ಸಭೆ ಸಹಿತ.... ॥ ॥ ೩೧ ॥

ಭಕ್ತರಿಗೆ ಬಡವರಿಗೆ ಬಲವ ವಿ
ರಕ್ತರಿಗೆ ವಿಮಲರಿಗೆ ಶಿವಮತ
ಶಕ್ತರಿಗೆ ಶರಣರಿಗೆ ಷಟ್ಸ್ಥಲ ಭಕ್ತರಿಗೆ ಮಧುರ ।
ಯುಕ್ತಿಯುಳ್ಳವರಿಂಗೆ ಯುಗ ಶಾ
ಸ್ತ್ರೋಕ್ತಿಗಳ ಬೋಧಿಸುವ ಜನರಿಗೆ
ಶಕ್ತಿಸಂಪದ ಜಯವ ಚೀಲಳಸ್ವಾಮಿ ಪಾಲಿಸಲಿ ॥ ॥ ೩೨ ॥

ಹರಿನರಸಿಗರುಹಿದನಿದನು ಶಿವ
ಶರಣರಿಗೆ ನಂದೀಶ ಹೇಳ್ದನು
ಗುರುಬಸವನಿಗೆ ಪ್ರಭುನಿರೂಪಣ ಪೂರ್ವದಾಗಮವು ।
ಧರೆಗೆಹರಪುರಗಿರಿಯ ಷಟ್ಸ್ಥಲ
ದೆರೆಯ ಬಸವಪ್ರಭು ಕುಮಾರ ನಿ
ಗೊರೆದ ಶ್ರೀಗುರುಬೋಧೆ ಈ ಷಟ್ಸ್ಥಲಶಿವಾಯಣವು ॥ ॥ ೩೩ ॥

ಓದಿದರೆ ಶಿವನೋಲಗದ ಪದ
ನಾದಗೇಳ್ದರೆ ನಾಲ್ಕೆರಡು ಪದ
ಆದರದಿ ಕೇಳಿದರೆ ಅಷ್ಟೈಶ್ವರ್ಯ ಸಂಪದ[೧][ವು][೧] ।
ಆದಿಮಧ್ಯವಸಾನದರ್ಥವ
ನೋದಿ ಹೃದಯದಲಿರಿಸಿದವರಿಗೆ
ಪಾದಲೋಚನನೊಳಗಡಕವೆನುತಿವೆಕೊ ಗುರುವಚನ ॥* ॥ ೩೪ ॥

❖❖

೧-೧ ವಿ (ಮೂ)

* ಇತಿ ಷಷ್ಠಸ್ಕಂಧ ನಿರೂಪಣೆ ಅಂತುವುಭಯ ಪದಗಣನೆ ೨೨೨ಕ್ಕಂ ಸಮಾಪ್ತ ಮಂಗಳ ಮಹಾಶ್ರೀ ॥

ಸಪ್ತಮ ಸ್ಕಂಧ

ರಾಗ : ಮಂಗಳಾರತಿ

ಸೃಷ್ಟಿ ತ್ರಿವಿಧವದೆಂದು ಪೂರ್ವದಿ
ಕಟ್ಟಳೆಯ ಮಾಡಿದಿರಿ ಷಟ್ಸ್ಥಲ
ಶ್ರೇಷ್ಠ ಸದ್ಗುರು ತಿಳುಹೆಲ್ಕದನೊರೆದ ಗುರುಸುತಗೆ ॥

ಕುಣಿವ ಚರಣವೆ ವೇದದನಿ ಮನು
ಹಿಣಿತೆ ಪ್ರಮಥರು ಜಠರ ಜಗ ಸೃ
ಕ್ವಣಿ ಸುಧಾರಸ ಜ್ಞಾನ ಲಾಲವು ವೃಣಿಣ ಘನತೀರ್ಥ ।
ಪ್ರಣವ ಶಿರ ಉಪನಿಷ ವಿಷಾಣವು
ತ್ರಿಣಯಗುಣ ಹಣೆಗಣ್ಣು ರೋಮದ
ಕುಣಿಯೆ ಲಿಂಗ ವೃಷಾಂಕ ಶಂಕರ ಸಲಹು ಮೂಜಗವ ॥ ॥ ೧ ॥

ಕರೆಸಿ ದಕ್ಷಿಣಭಾಗದಲಿ ಕು
ಳ್ಳಿರಿಸಿ ಪೂರ್ವವ ಮರೆಸಿ ದುರ್ಲಿಪಿ
ಯೊರೆಸಿ ಭಸಿತವ ಧರಿಸಿ ಮಂತ್ರವ ಸ್ಮರಿಸಿ ಶಿರಕರವ ।
ನಿರಿಸಿ ಸದ್ಗುಣಸರಸಿ ದಯರಸ
ವೆರಸಿ ಬಹು ಸತ್ಕರಿಸಿ ತತ್ವವ
ನರುಹಿ ತೋರಿದ ಗುರುವೆ ಚೀಲಳಸ್ವಾಮಿ ಶರಣಾರ್ಥಿ ॥ ॥ ೨ ॥

ಅಂಗಸುಖಗಳನಳಿದರಿಗೆ ನಿಜ
ಲಿಂಗನಿಷ್ಠೆಯ ಶರಣರಿಗೆ ಪದ
ಜಂಗಮಾರ್ಚನೆ ಮಾಳ್ಪರಿಗೆ ಜಯ ಶೀಲವಂತರಿಗೆ ।
ಅಂಗಜಾರಿಯನೊಲಿಸುವವರಿಗೆ

ಮಂಗಳಾತ್ಮಕ ಮಹಿಮರಿಗೆ ಹೆರೆ
ಹಿಂಗದೊರೆಯಲಿ ಮಗನೆ ಈ ಷಟ್ಸ್ಥಲಶಿವಾಯಣವು ॥ ॥ ೩ ॥

ಸೂತಕದ ಶುನಿಗಳಿಗೆ ಐದನೆ
ಪಾತಕದ ಪಶುಗಳಿಗೆ ಹಿರಿಯರ
ಮಾತ ಕೇಳದೆ ಮಲೆತು ಮೈಮರೆದಿರುವ ಮನುಜರಿಗೆ ।
ಮಾತೆಪಿತರಿಗೆ ಮರುಗದವರಿಗೆ
ಹೋತ ನುಂಗುವ ಹೊಲೆಯರಿಗೆ ಬಲು
ಜಾತಿಗೆಟ್ಟರಿಗರುಹದಿರು ಷಟ್ಸ್ಥಲಶಿವಾಯಣವ ॥ ॥ ೪ ॥

ವೃಷಭರಾಜನಿಗಲ್ಲವಮನು ಗಣ
ವಿಸರಗುರು ನಂದೀಶ ಶಂಕರ
ಶಶಿವದನೆ ಪಾರ್ವತಿಗೆ ತಿಳುಹಿದ ಸೃಷ್ಟಿತ್ರಯವಿಧವ ।
ವಸುಧೆಗಗ್ಗಳ ಹರಪುರದ ಗಿರಿ
ಮಿಸುನಿಯನುಭವಮಂಟಪದ ಗುರು
ಬಸವಪ್ರಭು ಸುತಗೊರೆದನೀ ಷಟ್ಸ್ಥಲಶಿವಾಯಣವ ॥ ॥ ೫ ॥

ಏನು ಇಲ್ಲದ ಶೂನ್ಯಬ್ರಹ್ಮಗೆ
ತಾನೆ ತಾನಾಗಿರುತಿರಲ್ತಿಳಿ
ಯಾ ನಿರಂಜನವಸುವಿನಲೇ ಶಾಂತಿಕಲೆಯದರಿಂ ।
ಜ್ಞಾನ ಜ್ಞಾನದಿ ಚಿತ್ತು ಚಿತ್ತಲಿ
ತಾನೆ ಜನಿತ ಮಹತ್ತು ತತ್ಸಂ
ಧಾನದಲಿ ಗುಣತ್ರಯಗಳಾದವು ಮಗನೆ ಕೇಳೆಂದ ॥ ॥ ೬ ॥

ಬಯಲ ಬ್ರಹ್ಮನಿಗೊದವೆ ತ
ದ್ವಯ ಲೀಲೆಯನು ನಟಿಸುತಿರೆ ಮಹ
ಬಯಲೆ ಬೋರಿದುದೊಂದು ಕಂತುಕದಂತೆ ಅಂಡವಿದು ।
ಪ್ರಿಯದಲಿದನಿಟ್ಟಾಡಿ ದಣಿಯದೆ
ಸ್ವಯಪರವ ಚಿಂತಿಸಿದ ಮಾತ್ರದಿ
ಲಯಸುಮಾತ್ಮ ಬ್ರಹ್ಮನಾಹಂ ಹುಟ್ಟಿತಲ ॥ ॥ ೭ ॥

ಏಕದೇಶಂ ಮಾತ್ರದಲ್ಲಿರ
ಲೇಕೆನುತ ಪರಶಿವನು ನೆರೆಯ

ಲ್ಕಾ ಕಲಾಪದಿ ಹಮ್ಮು ಹಮ್ಮಿಲಜನೆ ಜನಿಸಿದನು ।
ಏಕೆ ಸೃಜಿಸಿದೆ ಸ್ವಾಮಿಯೆನುತಜ
ತಾ ಕರಂಗಳ ಮುಗಿದು ಬೆಳಗೊಳ
ಲಾ ಕಮಲಸಂಭವಗೆ ಮಂತ್ರೋಪದೇಶವಿತ್ತಭವ ॥ ॥ ೮ ॥

ಜೇಷ್ಠಪುತ್ರನೆ ಬಾರೊ ಎನುತಲಿ
ಕಟ್ಟಳೆ ನಿರೂಪಗಳ ಪಾಲಿಸಿ
ಗಟ್ಟಿ ನಂಬುಗೆಗೊಟ್ಟು ಹಸ್ತವ ಶಿರದ ಮೇಲಿಟ್ಟು ।
ಸೃಷ್ಟಿಕರ್ಮಕೆ ನಿನಗಿದೇ ಸ್ಥಿರ
ಪಟ್ಟವೆನುತಲಿ ಹರಸಿ ಸೇಸೆಯ
ನಿಟ್ಟು ಮನ್ನಿಸಿ ಕರೆದು ಕೊಟ್ಟನು ಬ್ರಹ್ಮಗದನಭವ ॥ ॥ ೯ ॥

ಕರಗಿ ಕರುವಿಟ್ಟೆರೆದ ಚಿನ್ನದ
ಕರಡಗೆಯೊ ನವರತ್ನಗೆಲಸದ
ಭರಣಿಯೋ ಅಪರಂಜಿ ಕಳಶವೊ ಕನಕ ಕೊಪ್ಪರಿಗೊ ।
ಹರ ಹರಾ ಶಿವ ಶಿವ ಜಗದ್ಗುರು
ಕರಸರೊಜವೊ ಕಮಲಕುಟ್ಮವೊ
ಮೆರೆವ ಬಣ್ಣದ ಚೆಂಡೆ ಬಾರೆನುತಜ ನಮಿಸಿ ತೆಗೆದು ॥ ॥ ೧೦ ॥

ಸನಸುಜಾತ ಸನತ್ಕುಮಾರನು
ಸನಕ ಸಾನಂದನು ಸನಾದನು
ನನುಜರೈವರು ಮಂತ್ರಜಾತರು ಜನಿಸಿದಾಕ್ಷಣವೆ ।
ಘನತಪಸ್ವಿಳಾಗಲಜ ಕರ
ವನಜಗಳ ಮುಗಿದೆರಗಲೇಸೆನ
ಲೆನಗಿದೊರ್ವನ ಮುಖದಲಾಗದು ಸ್ವಾಮಿ ಬಿನ್ನಹವು ॥ ॥ ೧೧ ॥

ದೇವನಹುದಹುದೆನುತ ಬ್ರಹ್ಮಗೆ
ಸಾವಿತ್ರಿ ಗಾಯತ್ರಿಯರ ಬಹು
ಠೀವಿಯಲಿ ಶೃಂಗರಿಸಿ ಧಾರೆಯನೆರೆದು ನೆರೆ ಹರಸಿ ।
ಓವಿ ಸೇಸೆಯನಿಟ್ಟಡಾಕ್ಷಣ
ಜೀವಿಸಲು ನವಬ್ರಹ್ಮರಾಗಲು
ತಾವೆ ಬೆಂಬಲವಾಗಲಜ ಬಂದಭವನಡಿಗೆಡೆದು ॥ ॥ ೧೨ ॥

ಸ್ವಾಮಿ ಬುದ್ಧಿ ಹಸಾದ ಬದುಕಿದೆ
ಶ್ರೀ ಮಹಾಮಹಿಮಸ್ವರೂಪನೆ
ನಾಮರೂಪಿನ ನಾಟಕವನಾಡಿಸುವ ಪ್ರಭು ನೀನೆ ।
ಈ ಮಹಾಬ್ರಹ್ಮಾಂಡ ಸೃಷ್ಟಿಗೆ
ನೇಮಕವ ದಯಮಾಡಿದಿರಿ ಬಹು
ಕ್ಷೇಮವಾದುದು ಗುರುವೆ ನೀವಿದರೊಳಗೆ ನೆಲೆಗೊಳಲು ॥ ॥ ೧೩ ॥

ಬಿಚ್ಚಿ ಬೇರ್ಪಡಿಸುವೆನು ನಾನಿದ
ಸಚ್ಚಿದಾನಂದಸ್ವರೂಪನೆ
ನಿಶ್ಚಯದ ನಂಬುಗೆಯನಭಯವ ಪಾಲಿಸೆಲೆ ಸ್ವಾಮಿ ।
ಹುಚ್ಚೆ ನೀನಂಜದಿರು ನಂಬೋ
ತೊಚ್ಚುತಿದೆ ನೀನಂಶವಿದರೊಳು
ಬೆಚ್ಚವೊಲು ನಾವಿರುವೆವೆನುತಲೆ ನುಡಿದ ಶಿವನಜಗೆ ॥ ॥ ೧೪ ॥

ಮೃಡನಿರೂಪವ ಪಡೆದು ಸೂತ್ರಿಸಿ
ಕೊಡತಿ ಮುಟ್ಟಲ್ಕೊಡೆದುದೆಂತೆನೆ
ಕಡೆದ ಕನಕದ ಭರಣಿ ಮುಚ್ಚಳದೆರೆದ ಮಾಳ್ಕೆಯಲಿ ।
ಒಡೆಯನಪ್ಪಣೆವಿಡಿದು ನಡೆದರೆ
ತಡೆವ ಕಾರ್ಯವದಿಲ್ಲೆನುತಲಡಿ
ಗೆಡೆದು ನುತಿಸಿದರಜಸಹಿತ ನವಬ್ರಹ್ಮರೀಶ್ವರನ ॥ ॥ ೧೫ ॥

ಇಂದುಶೇಖರ ಈಶ ಪರಮಾ
ನಂದ ಪರಶಿವಮೂರ್ತಿ ಸದ್ಗುಣ
ವೃಂದ ಶಂಕರ ಶಂಭು ಶಾಶ್ವತ ಶರಣಜನಕರುಣ ।
ಸಿಂಧು ಷಟ್ಸ್ಥಲಸರಸಿಹಂಸ ಮು
ಕುಂದವಂದಿತ ಚರಣಸರಸಿಜ
ಮುಂದಪ್ಪಣೆಯೇನು ಸದ್ಗುರುದೇವ ದಯಮಾಡಿ ॥ ॥ ೧೬ ॥

ಎನುತ ಬಿನ್ನೈಸುತಲಿ ನಮಿಸಿದ
ವನಜಭವನಿಗೆ ವಾರಣಾನನ
ಜನಕ ಜಾಹ್ನವಿಮಕುಟ ಜಗದಾರಾಧ್ಯ ಶಂಕರನು ।
ನಿನಗೆ ಮಾಡಿದ ಮಂತ್ರದೀಕ್ಷೆಯ

ನೆನಹಿನಿಂದರಿ ಜನಸಿದೈವರು
ವನದಿ ತಪಸಿಗಳಾಗೆ ಪೂರ್ವದ ಪುಣ್ಯಫಲ ಬ್ರಹ್ಮ ॥ ॥ ೧೭ ॥

ಆದಿಶಕ್ತಿ ಸಹಸ್ರಕಲೆಗಳ
ಸೋದಿಸಿದರೊಳಗೆರಡು ಕಾಂತೆಯ
ರಾಧರಿಸಿ ಕೈ ಹಿಡಿಸಲಾಕ್ಷಣಕವರ ಗರ್ಭದಲಿ ।
ಆದರಾ ನವಬ್ರಹ್ಮ ಪುತ್ರರು
ವೇದವಿದಸುತ ದಕ್ಷನಾತನಿ
ಗಾದ ಕಸ್ಯಪ ಕಸ್ಯಪನ ಸುತ ಕಾಸ್ಯಪಬ್ರಹ್ಮ ॥ ॥ ೧೮ ॥

ಆತನಿಗೆ ತ್ರೈದಶ ವನಿತೆಯರು
ಆ ತರುಣಿಯರ ಗರ್ಭದಿಂದಲಿ
ಭೂತಭವಿಷ್ಯದವರ್ತಮಾನಿಗಳೆಲ್ಲ ಜನಿಸುವರು ।
ಶೀತೊಷ್ಣ ಮೃದುಕಠಿಣವಿಹಪರ
ಜಾತಿಗೋತ್ರಾಶ್ರಮವು ಮನುಮುನಿ
ವ್ರಾತ ನರಸುರ ದನುಜಸಕಲರ ಸೃಷ್ಟಿ ಬರಿಯಿಸಲಿ ॥ ॥ ೧೯ ॥

ಎನುತಲಜನಿಗೆ ಬುದ್ಧಿಗಲಿಸುತ
ವನಜಸಂಭವ ಪುತ್ರನಾತ್ಮಜ
ತನುಜನಿಗೆ ಭೂಷಣವನುಡುಗೊರೆ ವೀಳ್ಯಗಳ ಕೊಡಿಸಿ ।
ಕನಕಗರ್ಭನ ಸುತರ ಮನ್ನಿಸಿ
ನಿನಗೆ ಮೂರಸೆ ಸೃಷ್ಟಿಯ ಚರ
ವೆನುತ ಪರಶಿವಮೂರ್ತಿ ತಲೆದಡಹಿದನು ಕಾಶ್ಯಪನ ॥ ॥ ೨೦ ॥

ವಾರಿಜೋದ್ಭವ ಪ್ರಥಮ ಸೃಷ್ಟಿಗೆ
ಕಾರಣಿಕ ದೊರೆ ನಾನೆ ಕಣ್ಣಿಗೆ
ತೋರಿದಂಡವನೊಡೆದೆ ಮುಚ್ಚಿದೆವುಭಯದವ ನೀನು ।
ಧಾರುಣಿಗೆ ನಭ ಮೇರು ಶರಧಿಗೆ
ಭೂರಿ ಸೃಷ್ಟಿತ್ರಯಕೆ ನಿನ್ನ ಕು
ಮಾರನಿರಲೆಂದಭವನಿಗೆ ತಾ ಕಟ್ಟುಮಾಡಿದನು ॥ ॥ ೨೧ ॥

ಶಿವನ ಚರಣಕ್ಕೆರಗಿ ಕಾಶ್ಯಪ
ನವ ಹಸಾದವೆನುತ್ತ ತಾವರೆ

ಕುವರನಿಗೆ ಕೈಮುಗಿದು ಕೇಳಿದನುಭಯದಪ್ಪಣೆಯ ।
ವಿವರಗಳ ಕೈಕೊಂಡು ಮುಂದಣ
ಹವಣಿಕೆಯ ನವನೂತ್ನ ಸೃಷ್ಟಿಯ
ನವವಿಧದ ಭಕ್ತಿಯಲಿ ನಡೆಸುತ್ತಿರ್ದ ಕೇಳೆಂದ ॥ ॥ ೨೨ ॥

ಉಳಿ ಕೊಡತಿಗಳ ಹಿಡಿಸಿ ಧ್ರುವಪದ
ತಳಕೆ ವಂದಿಸಿ ನೆನೆದು ಸೂತ್ರಿಸಿ
ಅಳೆದು ಚೌಕಸಿವೊಂದು ಮೂಲೆಲಿ ಹೊಕ್ಕನಿಸಲೊಡನೆ ।
ಬೆಳೆದು ಕಾಂಬುದು ಕಾರ್ಯವಾಕ್ಷಣ
ಒಳಗೆ ನಿರ್ಮಾಣಗಳು ಬ್ರಹ್ಮನ
ಹಳಿವ ನರಿಗು ನಮಗು ದೂರವು ಮಗನೆ ಕೇಳೆಂದ ॥ ॥ ೨೩ ॥

ಬ್ರಹ್ಮಲಿಖಿತವ ತೊಡೆದ ಹಿಂದಣ
ಕರ್ಮಕಲುಷವ ತೊಳೆದ ಮುಂದಣ
ಧರ್ಮಮಾರ್ಗವ ತೋರಿ ಕರಸರಸಿಜಕೆ ಪರಮೇಷ್ಠಿ ।
ಬ್ರಹ್ಮವನೆ ತಂದಿಳಿಹಿದ ಚರಿತ
ಬ್ರಹ್ಮ ಸದ್ಗುರುಮೂರ್ತಿ ಪಟ್ಸ್ಥಲ
ಬ್ರಹ್ಮಿಗಳ ನಿಜಭಕ್ತ ವಿಶ್ವಬ್ರಹ್ಮ ಕೇಳೆಂದ ॥ ॥ ೨೪ ॥

ಅಶ್ವಮೇಧವ ಮಾಳ್ಪರಿಗೆ ಅಜ
ಪಶ್ವಬಂಧಿಸಿ ತಿಂಬರಿಗೆ ಮಹ
ವಿಶ್ವಾಸಘಾತಕಗೆ ಸ್ವಾಮಿದ್ರೋಹಿ ಮನುಜರಿಗೆ ।
ವಿಶ್ವಮಿತ್ರನ ಗೋತ್ರದವರಿಗೆ
ವಿಶ್ವಪತಿಯನು ಭಜಿಸದವರಿಗೆ
ವಿಶ್ವಕರ್ಮನ ಹಳಿವ ನರರಿಗೆ ನರಕ ನೆಲೆಯಜನೆ ॥ ॥ ೨೫ ॥

ಅಲ್ಪಮಾನವರೇನ ಬಲ್ಲರು
ಜಲ್ಪಕ ಜಾಹ್ನವಿಯರಿವ ಫಣಿ
ಬಲ್ಲನಾ ಸ್ವಯಂಭುವೆಂಬುದ ವೇದಪ್ರಭು ಬಲ್ಲ ।
ಶಿಲ್ಪಿ ಸಿದ್ಧಾಂತಕ್ಕೆ ಕರ್ತನು
ಸ್ವಲ್ಪ ಪುರುಷನೆ ವಿಶ್ವಕರ್ಮನು
ಬಲ್ಪರಾಕ್ರಮಶಾಲಿಯಲ್ಲವೆ ಗಿರಿಜೆ ಕೇಳೆಂದ ॥ ॥ ೨೬ ॥

ಅಸುರರುವತ್ತಾರು ಕೋಟಿಗ
ಳಸಮ ಪಟುಭಟ ನಿಕರವಾತ್ಮಜ
ಶಿಶುವೆ ದಿವಿಜರ ಪಡೆಯೆ ಮೂವತ್ಮೂರು ಕೋಟಿಗಳು ।
ಋಷಿ ತಪಸಿಗಳು ಗೋವು ವಿಪ್ರರ
ಪಸರವಮೃತವು ಕಲ್ಪಕುಜ ಸುರ
ಪಶುವು ಪರುಷವು ಚಿಂತಾಮಣಿಗಳು ಬ್ರಹ್ಮನಿರ್ಮಾಣ ॥ ॥ ೨೭ ॥

ಅಣ್ಣತಮ್ಮನು ಅಕ್ಕತಂಗಿಯು
ಹೆಣ್ಣುಗಂಡಿನ ಹೆಚ್ಚುಕಡಿಮೆಯು
ಬಣ್ಣ ಬಿಳಿದಿನ ಬೆಡಗು ರೂಪು ಕುರುಪು ಕುಶಳಗಳು ।
ಪುಣ್ಯಪಾಪವು ಸ್ವರ್ಗನರಕವು
ಎಣ್ಣೆತುಪ್ಪವು ಪಣ್ಣು ಫಲಗಳು
ಕಣ್ಣ ಕಪ್ಪಿನ ಭರಣಿ ವಿಶ್ವಬ್ರಹ್ಮನಿರ್ಮಾಣ ॥ ॥ ೨೮ ॥

ಚಿನ್ನ ಬೆಳ್ಳಿಯು ಚಿತ್ರ ಕೆಲಸವು
ಬಿನ್ನಣದ ಘನ ಪಂಚಲೋಹವು
ಹೊನ್ನು ಹಣ ವರಹಗಳು ಮುದ್ರೆಯು ಟಂಕಸಾಲೆಗಳು ।
ಇನ್ನು ಕೇಳಲ ತೂಕ ಬಣ್ಣವು
ಮಿನ್ನು ಸುಧಕರ ಗೆಲುವ ಬಿಂಕವು
ಕಿನ್ನರಿಯು ಮದ್ದಳೆಯು ವೀಣಾ ಮೇಳಕವ ಕರ್ತ ॥ ॥ ೨೯ ॥

ಬೆಸುಗೆ ಸೂಚನೆ ಸೂತ್ರ ಮಠ ಮನೆ
ಯಸಮನೇತ್ರನ ವಾಲ್ಯವರಸಿನ
ಕುಶಲಗೆಲಸದ ಸೆಜ್ಜೆಯರಮನೆ ಮದುವೆ ಮಂಗಳದ ।
ಹಸೆಯ ವೇದಿಕೆ ಕುರುಜು ಚಪ್ಪರ
ಕೆಸೆವ ದಳವಾಡಗಳು ಬ್ರಹ್ಮನ
ಶಿಶುವಿನಾತ್ಮಜ ಸುತನ ನಿರ್ಮಾಣಗಳು ಕೇಳಣುಗ ॥ ॥ ೩೦ ॥

ಸಿಡಿಲು ಮೋಡವು ಗುಡುಗು ಮಿಂಚುಗಳ್
ಜಡಿಮಳೆಯು ಪೆರ್ಮಳೆಯು ಜಲಶಿಲೆ
ಗಿಡಮರನು ಲತೆ ಘಟ್ಟ ಬೆಟ್ಟವು ಪಕ್ಷಿ ಮೃಗಪಶುವು ।
ಕಡಿವ ನೀರ್ಗಿಂಡಿಗಳು ಮಂಚವು
ಕುಡಿವ ನೀರ್ಗಿಂಡಿಗಳು ಮಂಚವು
ಹಿಡಿವ ಸತ್ತಿಗೆಯಂದಣಂಗಳೆ ಬ್ರಹ್ಮನಿರ್ಮಾಣ ॥ ॥ ೩೧ ॥

ಸೂಜಿದಬ್ಬಳ ಶೂಲ ಕೋಳವು
ಸೋಜಿಗದ ಜಂಜಿರಿಯು ಸಂಕಲೆ
ತ್ರೈಜಗದ ಕರ್ಮಿಗಳ ಕೂಡುವ ಸೆರೆಮನೆಯು ಕಣಜ ।
ಜೂಜು ಚದುರಂಗಗಳು ಪಗಡೆಯು
ತೇಜಿ ಗಜಕಂಕುಶವು ಕೊರಡೆಯ
ರಾಜೀವಾಸನ ಮಗನ ಬಾಲನ ಸುತನ ನಿರ್ಮಾಣ ॥ ॥ ೩೨ ॥

ತ್ರಾಸು ತಕ್ಕಡಿ ಮೇಣ ಒರೆ
ಲ್ಲಾ ಸುವರ್ಣದ ಮಚ್ಚಗಡ್ಡಿಯು
ಕಾಸಿ ಕರಗುವ ಹದಪದಂಗಳು ಹೆಚ್ಚು ಕುಂದುಗಳು ।
ದೋಷಹರನನವರತ ಲಕ್ಷಣ
ದೇಸಿಯದ ನಗ ನಾಣ್ಯ ಮೋಹರ
ಕಾಸು ಬೆಳ್ಳಿ ರೂಪಾಯಿ ಕಾಶ್ಯಪ ಬ್ರಹ್ಮನಿರ್ಮಾಣ ॥ ॥ ೩೩ ॥

ಒರಳು ಒನಕೆಯು ವರ ಘರಟ್ಟವು
ಅರೆವ ಗುಂಡಸೆಗಲ್ಲು ಸಾಣೆಯು
ತರಳರಾಡುವ ಚೆಂಡು ಬೊಗರಿಯು ಚಕ್ರ ಗುದುಬಿಲ್ಲು ।
ಹರಳಮಣೆ ಹೂಗೋಲು ಬಣ್ಣದ
ಭರಣಿ ತೊಟ್ಟಲು ಮಂಚ ಕುಂಚವು
ಗರುಡಿಮನೆ ಸಾರಣೆಗೆಗಳಜನಂದನವನ ನಿರ್ಮಾಣ ॥ ॥ ೩೪ ॥

ಕೊಡತಿ ಗುದ್ದಲಿ ಸಲಿಕೆ ಸಾಗೋಲ್
ಕುಡುಗೋಲು ಕಳಕೊಟ್ಟು ಕುರುಚಿಗೆ
ಕಡೆಗೋಲು ಅಣಿಕೋಲು ಕೊಂಬಣಸುಗಳು ಕೊರಳ ಸರ ।
ಆಡಿವ ಜಂಗುರ ಗೆಜ್ಜೆ ಘಂಟೆಯ
ಖಡಿಯಣವು ಮೃದು ಕಾಲ ಲಾಳವು
ಪಡಗ ಪಾಶಾಲೆಗಳು ಪರಶಿವಬ್ರಹ್ಮನಿರ್ಮಾಣ ॥ ॥ ೩೫ ॥

ಘಂಟೆ ಒಂಟೆಯು ಕಡುಕು ಚೌಕುಳಿ
ಒಂಟೆ ಮುತ್ತಿನ ಮಣಿಯು ಬಾವುಲಿ
ಎಂಟೆ ಹೊನ್ನು ಮೇಟಿ ಮೂಗುತಿ ಎಸಳು ಹೆರೆಚಂದ್ರ ।
ಘಂಟೆ ಸರಗೆಜ್ಜೆಗಳು ಗಗ್ಗರ
ತುಂಟಿಗೆಯು ಪಾಡಗದ ಪಿಲ್ಲಿಗ
ಉಂಟು ಮಾಡಿದರಾರು ವಿಶ್ವ ಬ್ರಹ್ಮನಿರ್ಮಾಣ ॥ ॥ ೩೬ ॥

ಕಡಗ ಪಾಗಡ ಪಾದರಸ ಪಣೆ
ಒಡವೆ ಒಡ್ಯಾಣ ನಿರಿಯ ಬಲೆಗಳು
ನುಡಿವ ಗಂಟೆಯ ಸರವು ಲೇವಳ ಉಳಿಯು ಮುದ್ರಿಕೆಯು ।
ಜಡೆಯ ಹೂ ರೇಗಟೆಯು ಗುಬ್ಬಿಯು
ಮುಡಿ ಕಿರೀಟ ತುರಾಯಿ ಬ್ರಹ್ಮನ
ಒಡಲಜನ ನಂದನನ ಕಂದನ ಸುತನ ನಿರ್ಮಾಣ ॥ ॥ ೩೭ ॥

ಹಿಂಬಳೆಯ ಕಂಕಣವು ವಾಕುಸು
ತುಂಬಿ ತಾಲಿಯು ಪುಸ್ತಿ ಪದಕವು
ರಂಭೆಯರ ಒಡವೆಗಳು ಪುರುಷರ ಭೂಷಣಾವಳಿ ಮೈ ।
ದುಂಬಿದಾಭರಣಗಳು ಬುಗುಡಿಯು
ಜಂಬುದ್ವೀಪಕೆ ಶಾಂಬ ನಗರಿಗೆ
ಅಂಬುಜಾಸನನಾತ್ಮಜನ ಸುತನಣುಗ ನಿರ್ಮಾಣ ॥ ॥ ೩೮ ॥

ಓಲೆ ತಾಲಿಯ ದಾರ ಸರಗಳು
ಮೇಲು ನಗ ಚಿಂತಾಕ ಸರಿಗೆಯು
ಜೋಲುವತಿ ಜಂಘಗಳು ಕೊಪ್ಪು ಸುಮೂಗಬೊಟ್ಟುಗಳು ।
ತಾಳಬಳೆ ಭುಜಕೀರ್ತಿ ತಾತಿಯು
ಮೇಲುಗೆಲಸದ ಕಾಶಿತಾಲಿಯು
ಕೀಲಣೆಯ ನಗವೆಲ್ಲ ಪರಶಿವಬ್ರಹ್ಮನಿರ್ಮಾಣ ॥ ॥ ೩೯ ॥

ಶೃಂಗರದ ಪಣೆಬೊಟ್ಟು ದರ್ಪಣ
ಉಂಗುರವು ಉಡಿದಾರ ಸ್ತ್ರೀಯರ
ಮುಂಗುರುಳ ತಿದ್ದುವರೆ ಸಿಕ್ಕಟ್ಟಿಗೆಯು ಬಾಚಣಿಗೆ ।
ಮಂಗಳದ ಹಣೆವಣೆ ಪಗಡೆ ಚದು
ರಂಗ ಉಯ್ಯಲೆ ಪಂಚ ನೂತ್ನ ಪ
ರಂಗಿದೇಶದ ಕೆಲಸ ಬ್ರಹ್ಮನ ವಂಶನಿರ್ಮಾಣ ॥ ॥ ೪೦ ॥

ದೀವಿಗೆಯ ಕುಂಭಗಳು ನೂತ್ನದ
ಹಾವುಗೆಯು ಬೀಸಣಿಗೆ ಬಿರುದಿನ
ಕೀವಿ ಪೆಂಡೆಯ ಕಹಳೆ ಮೌರಿಯು ಶಂಖು ಜಯಘಂಟೆ ।

ದೇವಘಂಟೆಯು ದರ್ಪಣಂಗಳ
ದಾವನಿಂದುದಿಸಿದುವು ಪಾರ್ವತಿ
ತಾವರೆಯ ಸುತ ಬ್ರಹ್ಮನಣುಗನ ಸುತನ ನಿರ್ಮಾಣ ॥ ॥ ೪೧ ॥

ತೇರು ತಿರುನಾಳುಗಳು ಉತ್ಸವ
ಕೇರಿ ಕೇರಿಯ ತಳಿರುತೋರಣ
ನಾರಿ ಪುರುಷರು ಏರುವುಯ್ಯಲೆಗಂಬ ಮಂಟಪವು ।
ಭೇರಿ ಡೊಲ್ಲಿಡಿ ಬಿಡಿಯ ತಂಬಟೆ
ಚೀರುತಿಹ ರಣಗಾಳೆ ಇಹಪರ
ವೀರಶೈವರೆ ಹೊರತು ಉಳಿದರಿಗಜನ ನಿರ್ಮಾಣ ॥ ॥ ೪೨ ॥

ಜಲಚರಕೆ ವನಚರಕೆ ಖೇಚರ
ನೆಲಚರಕೆ ಸೂತ್ರಗಳ ಹೂಡಿದ
ನಲ ಕದಿರ ಮೊನೆ ಕಾರ ಮೊನೆಗಳು ಕಂಠ ಖಡ್ಗ ಮೊನೆ ।
ಶಿಲಪರೀಕ್ಷತೆ ದಾರು ವಿವರಣೆ
ಸಲುವ ವಿಗ್ರಹದೆರಕ ಸವುಸರ
ಹಲವು ಲಿಂಗಪ್ರತಿಷ್ಠೆ ವಿಶ್ವಬ್ರಹ್ಮನಿರ್ಮಾಣ ॥ ॥ ೪೩ ॥

ಬೊಂಬೆಯಾಟಕೆ ಬೊಗರಿ ವಿದ್ಯಕೆ
ಕಂಭಸೂತ್ರಕೆ ಕಪಟ ನಟನೆಗೆ
ಡೊಂಬಿದಾಸ ದಶಾವತಾರ ವಿಜಾತಿಕಾರರಿಗೆ ।
ಶಾಂಭವಿಯ ಶಾಂಭವ ಮಹೋತ್ಸವ
ದಂಬರೇಂದ್ರ ಮಹೇಂದ್ರಜಾಲವು
೧[ಸಂಚ]೧ ರಿಪ ಜನನೋಟ ವಿಶ್ವಬ್ರಹ್ಮಸೂತ್ರಗಳು ॥ ॥ ೪೪ ॥

ಪ್ರಥಮಸೃಷ್ಟಿಗೆ ಕರ್ತೃ ಪರಶಿವ
ದ್ವಿತೀಯ ರಚನೆಗೆ ಬ್ರಹ್ಮ ಪ್ರಮುಖನು
ತೃತಿಯ ಪದ ಸಕಲವನು ಸೃಜಿಸಿದ ವಿಶ್ವಕರ್ಮಪ್ರಭು ।
ಶ್ರುತಿಮತಗಳಾಗಮ ಪ್ರಮಾಣವು
ಚತುರಚಾರ್ಯರವೊಪ್ಪ ಷಟ್ಸ್ಥಲ
ದೆತಿಗಳಿಗೆ ಸನ್ಮತ ಪುರಾತನರೊಲುಮೆ ಕೇಳಣುಗ ॥ ॥ ೪೫ ॥

೧–೧ ಓಂ ಭ (ಮೂ)

ವೀರಶೈವಾಚಾರ ಷಟ್ಸ್ಥಲ
ಸಾರ ಶರಣರ ಚರಣಕಮಲವ
ಸೇರಿ ಬದುಕುವ ಗುರುಕಟಾಕ್ಷದ ಭಕ್ತ ಜನರುಳಿಯ ।
ಧಾರುಣಿತ್ರಯಗಳಲಿ ಕರ[೧][ಣಕೆ][೧]
ತೋರಿಯಡಗುವ ದೃ[೨][ಶ್ಯದೃಶ್ಯ][೨]ಗಳು
ವಾರಿಜೋದ್ಭವ ಸುತನ ಕಂದನ ಸುತರು ಕೇಳೆಂದ ॥ ॥ ೪೬ ॥

ವರುಷ ಮಾಸವು ಪಕ್ಷ ವಾರವು
ಹರುಷ ದುಃಖವು ವಸು ನವಗ್ರಹ
ವಿರಸ ಮಿತ್ರವು ತಾರೆ ನಭ ರವಿಚಂದ್ರಮಂಡಲವು ।
ಧರಣಿ ದಿಕ್ಪಾಲಕರು ಮನುಮುನಿ
ಸ್ಥಿರಚರ ಪ್ರಾಣಿಗಳು ಸರ್ವವು
ಸರಸಿಜಾಸನಸುತನ ಪುತ್ರನ ಮಗನ ನಿರ್ಮಾಣ ॥ ॥ ೪೭ ॥

ಇಹಪರದ ಋತುಶಾಖೆಗಾತನೆ
ಬಹುಪರಾಕ್ರಮಶಾಲಿ ಷಟ್ಸ್ಥಲ
ಸಹಜ ಜಂಗಮ ಭಕ್ತ ಶರೀರ ಪ್ರಾಣದಾಯಕನು ।
ಕುಹಕಿಗಳ ನಾಲಗೆಯ ಶಸ್ತ್ರವು
ಮಹಿಮ ವಿಶ್ವಬ್ರಹ್ಮವಲೆ ಹಿಮ
ಮಹಿಧರಜೆಯೇ ಕೇಳೆನುತ ಶಿವನೊರೆದ ಕೇಳಣುಗ ॥ ॥ ೪೮ ॥

ಕರಿಮುಖನು ಷಣ್ಮುಖನು ರುದ್ರನು
ಗಿರಿಜೆ ಗಂಗೆಯು ನಂದಿಭೃಂಗಿಯು
ಶರಣಗಣ ಪ್ರಮಥರು ಪುರಾತರು ಪಂಚಗುರುವಂಶ ।
ಹರನ ಹೃದಯದಲುದಯ ಷಟ್ಸ್ಥಲ
ಹರಿಯಜನರು ಸುರಪಾಲ ಶ್ರುತಿ ತಿಥಿ
ಚರಣ ತೊಡೆ ಭುಜ ಜನನಸ್ಥಲಗಳು ಮಗನೆ ಕೇಳೆಂದ ॥ ॥ ೪೯ ॥

ನಮ್ಮ ಕಾರ್ಯಕ್ಕಿವನೆ ಮುಖ್ಯನು
ನಮ್ಮ ಕೆಲಸಕ್ಕಿವನೆ ಸುಖ್ಯನು
ನಮ್ಮ ಪ್ರಸ್ಥಕೆ ಹವ್ಯಕವ್ಯಕೆ ಈತನೇ ಆತ ।

೧-೧ ಣೆಗೆ (ಮೂ), ೨-೨ ಶ್ಯದ್ರುಷಿ (ಮೂ)

ನಮ್ಮ ಭಾರವನಿವನೆ ವಹಿಸಿದ
ನೆಮ್ಮ ಸೃಷ್ಟಿಯನಿವನೆ ನಡೆಸುವ
ಬ್ರಹ್ಮನಿರ್ಮಿತದಿಂದರಿದು ತಿಳಿಯಗಜೆ ನೀನೆಂದ ॥ ॥ ೫೦ ॥

ದೇವಭಕ್ತರ ಮನಕೆ ಭಕ್ತಿಯ
ಸ್ಥಾವರಕೆ ಜಂಗಮಕೆ ಶಕ್ತಿಯ
ಭೂವನಿತೆಗತಿ ಕ್ಷಮೆಯ ಭೂಪರ ಸಭೆಗೆ ಕ್ಷಮೆದಮೆಯ ।
ದೇವತೆಗಳಿಗೆ ದಮೆಯ ದನುಜರ
ಧಾವತಿಗೆ ಧರ್ಮವನು ನರರಿಗೆ
ಸಾವಧಾನವ ಕೊಡಲಿ ಚೀಲಳಸ್ವಾಮಿ ಹರುಷದಲಿ ॥ ॥ ೫೧ ॥

ಸೃಷ್ಟಿವಿವರವ ಗೌರಿದೇವಿಗೆ
ದೃಷ್ಟಿ ಸನ್ನೆಯಲೊರೆದ ಶಂಕರ
ಶ್ರೇಷ್ಠ ನವ ನಂದೀಶ ಪ್ರಮಥರಿಗೊರೆದ ಪ್ರಭುಸ್ವಾಮಿ ।
ನಿಷ್ಠ ವೃಷಭನಿಗರುಹಿದನು ಈ
ಸೃಷ್ಟಿಯಲಿ ಹರಪುರದ ಶ್ರೀಗಿರಿ
ವಿಷ್ಟರದ ಷಟ್ಸ್ಥಲವ ಬಸವಪ್ರಭು ಸುತನಿಗೊರೆದ ॥ ॥ ೫೨ ॥

ಹಾಲು ಅನ್ನವು ಬಹಳ ಹೆಚ್ಚಲಿ
ಕಾಲ ಪ್ರಾಯವು ಕೆಡದೆ ಬಾಳಲಿ
ಬಾಲ ವೃದ್ಧರ ಬಂಧುಬಳಗಕೆ ಭಾಗ್ಯವೃದ್ಧಿಸಲಿ ।
ಕೇಳಿದವರಿಗೆ ಲಿಖಿಸಿದವರಿಗೆ
ಬಾಳ ಹರುಷದಲೋದಿದವರಿಗೆ
ನೀಲಕಂಠನಲೀಲೆ ಈ ಷಟ್ಸ್ಥಲಶಿವಾಯಣವ ॥* ॥ ೫೩ ॥

❖❖

* ಇತಿ ಸಪ್ತಸ್ಕಂಧ ನಿರೂಪಣಂ ಪದಗಣೆ ೨೭೩ಕ್ಕಂ ಸಮಾಪ್ತ ಮಂಗಳ ಮಹಾಶ್ರೀ ॥

ಅಷ್ಟಮ ಸ್ಕಂಧ

ರಾಗ : ರಾಗದೇಶಿ

ವೀರಶೈವಾಚಾರ ದೇಶಿಕ
ಧಾರುಣಿಯ ವಿಸ್ತೀರ್ಣ ಮುಂದಣ
ಕಾರಣಾರ್ಥವನರುಹಬೇಕೆನಲೊರೆದ ಗುರುಸುತಗೆ ॥

ಕುಂದುದೋರದ ದೂರ್ವೆ ವಟಕುಜ
ಬಂದ ವಾಲ್ಮಿಕ ಶೇಷ ಮೊಲ ಮೃಗ
ಕುಂದಿ ಹೆಚ್ಚದ ಅಮೃತಕಲೆಗಳ ಬಿಂದು ಕರಗಿರದ ।
ಅಂದಗೆಡದತಿ ಶಾಪವಡೆಯದ
ಅಂದಿನ ವಸಂತುದಯ ಪೌರ್ಣಮಿ
ಇಂದು ಮುಕುಟದಲಿಟ್ಟ ಶಂಕರ ಸಲಹು ಮೂಜಗವ ॥ ॥ ೧ ॥

ಆಗಮಾಮ್ನಯ ಬೋಧ ಪರಶಿವ
ಯೋಗಿಗಳ ಹೃನ್ನಾದ ಮಂಗಳ
ಶ್ರೀಗೌರಿಮನಸರಸಿ ನಿರುಪಮ ಜ್ಯೋತಿ ಕರಸ್ಥಳದ ।
ಭೋಗಲೋಕದ ಭಕ್ತಜನ ದಯ
ಸಾಗರ ಚಿದಾನಂದಪ್ರಭು ಭವ
ರೋಗಭೇಷಜ ಗುರುವೆ ಚೀಲಳಸ್ವಾಮಿ ಶರಣಾರ್ಥಿ ॥ ॥ ೨ ॥

ಬಸವರಾಜನ ನೆನೆವರಿಗೆ ಗುರು
ಬಸವಲಿಂಗನ ಕೀರ್ತಿಸುವರಿಗೆ
ಬಸವಪ್ರಭುವಿನ ಪಾದಕಮಲವ ಭಜಿಪ ಭಕ್ತರಿಗೆ ॥
ಬಸವಮಹಿಮೆಯ ಹೇಳ್ವರಿಗೆ ಶಿವ

ಬಸವ ಬೇರಲ್ಲೆಂಬರಿಗೆ ನಿಜ
ಶಿಶುವೆ ಹರುಷದಿ ಬೋಧಿಸೀ ಷಟ್ಸ್ಥಲಶಿವಾಯಣವ ॥ ॥ ೩ ॥

ಶಿವನ ಶರಣರಿಗೆರಗದವರಿಗೆ
ಶಿವನ ಚರಣವ ಭಜಿಸದವರಿಗೆ
ಶಿವನ ಸ್ತೋತ್ರವ ಮಾಡದವರಿಗೆ ಶಿವನ ಹಳಿವರಿಗೆ ।
ಶಿವನ ಕಥೆಗಳ ಕೇಳದವರಿಗೆ
ಕುವರ ಬೋಧಿಸ ಸಲ್ಲದೀ ಶಿವನಶಿವಾಯಣ ॥* ॥ ೪ ॥

ನಗಸುತೆಗೆ ನಿಟಿಲಾಕ್ಷ ನಂದೀಶ
ನಗಣಿತ ಗಣಂಗಳಿಗೆ ಪ್ರಭುವರ
ನಗುತ ವೃಷಭಗೆ ಹೇಳ್ದ ಮುಂದಣ ಕಾರ್ಯದಾಗಮವ ॥
ಜಗತ್ರಯಕೆ ಕೈಲಾಸ ಹರಪುರ
ನಗದಲನುಭವಮಂಟಪದಿ ಜಗ
ಜಗಿಪ ಷಟ್ಸ್ಥಲಕರ್ತೃ ಬಸವಪ್ರಭು ಸುತನಿಗೊರೆದ ॥ ॥ ೫ ॥

ಗುರುವೆ ಒಳ ವಿಸ್ತೀರ್ಣದಳತೆಯ
ಹೊರವಳೆಯ ತಾರಾಯ ದಂಡದ
ಪರಿ ಬಗೆಯ ವಿವರಗಳ ತಿಳುಹೆನಗೆನುತಲಡಿಗೆರಗಿ ॥
ಕರಕಮಲಗಳ ಮುಗಿದು ಬೆಸಗೊಳೆ
ತರಳ ಕೇಳೆಂದೆನುತ ನಗುತಲಿ
ಹರುಷದಿಂ ಬೋಧಿಸುತಲಿರ್ದನು ಮುಂದಣಾಗಮವ ॥ ॥ ೬ ॥

ಮೂರು ಲೋಕದ ಮೂಲಪುರುಷರು
ಕಾರಣೀಕ ಮಹಾನುಭಾವರು
ಮೀರಿದಗ್ಗಳ ದೇವಕವಿ ಲಕ್ಷಣಕವೀಶ್ವರರು ।
ಆರು ದರುಶನವಾರು ಮತಗಳು
ಆರು ಶಾಸ್ತ್ರವು ಆದಿ ಹಿರಿಯರು
ಆರುವರಿಯರು ಪರಶಿವಾಬ್ಧಿಯ ಆಳದಳತೆಯನು ॥ ॥ ೭ ॥

ಅರ್ಭಕನೆ ಮೂಲಾತ್ಮವನಧಿಯ
ಗರ್ಭವಾರ್ಧಿಯ ಜ್ಞಾನಶರಧಿಯ

* ಉತ್ತರಾರ್ಧದಲ್ಲಿ ಒಂದು ಚರಣ ಹಸ್ತಪ್ರತಿಯಲ್ಲಿ ಇಲ್ಲ (ಸಂ)

ಹರ್ಬಿ ತುಂಬಿದ ಹರಸಮುದ್ರವ ಮಹಿಮಸಾರವ ।
ಉರ್ಬದಾರ್ಣವ ಉಲಿಯದಬ್ಧಿಯ
ಸರ್ಬ ತತ್ವಕೆ ಪಾರವಾರದ
ಒರ್ಬರಿರ್ಬರಿಗಳವೆ ಪರಶಿವ ಲೀಲಜಲಧಿಯದು ॥ ॥ ೮ ॥

ಕೇಳು ಬಾಲಕ ಗಂಡ ಗಾತ್ರದ
ಸ್ಥೂಲವರ್ಬುದ ಕೋಟಿ ಯೋಜನ
ನೂಲಿನಳತೆಯು ಹೊರವಳಯವದು ಒಳಗಣಳತೆಗಳ ।
ಹೇಳುವೆನು ವೇದಪ್ರಮಾಣವು
ಬಾಳ ಹಿರಿಯರ ತಿಳಿಯೊ ಇದರ[೧][ವಿ][೧]
ಶಾಲಮೂಲದ ಪಂಚಶತಕೋಟಿಗಳ ವಿಸ್ತೀರ್ಣ ॥ ॥ ೯ ॥

ಅಂಡಲಕ್ಷಣ ಭಾವವಿದೆ ಮಹ
ಪಂಡಿತಶಿಖಾಮಣಿಯ ಪುನರಪಿ
ಕಂಡ ಕಾರ್ಯದ ಬೆಡಗ ಲಾಲಿಸಲೇಕ ಚಿತ್ತದಲಿ ।
ಕೆಂಡಗಣ್ಣಿನ ಸ್ವಾಮಿ ಶೀಘ್ರದಿ
ಪುಂಡರೀಕಾತ್ಮಜನ ಕರೆಸಲು
ಕಂಡು ಕರಗಳ ಮುಗಿದು ಸ್ತುತಿಸುತ ದಂಡವಿಕ್ಕಿದನು ॥ ॥ ೧೦ ॥

ಈಶ ವಿದ್ರುವಕೇಶವೀಶಪ್ರ
ಕಾಶ ವಿಘ್ನವಿನಾಶ ವಿರುಪಾ
ಕ್ಷೇಶ ವಿದಳಿತ ಪಾಶ ಮಹಿಮ ವಿರತೇಶ ವಿಶ್ವೇಶ ।
ಶೇಷಭೂಷವಿಲಾಸ ಕರುಣಾ
ವೇಶ ಕರ್ತೃ ಮಹೇಶ ಶ್ರೀ ಕೈ
ಲಾಸ ಶ್ರೀಗೌರೀಶ ಶಂಕರ ತ್ರಾಹಿ ಸದ್ಗುರುವೆ ॥ ॥ ೧೧ ॥

ನೀನೆ ವಸ್ತುವು ನೀನೆ ತತ್ವವು
ನೀನೆ ಬ್ರಹ್ಮವು ನೀನೆ ಪರಶಿವ
ನೀನೆ ಸರ್ವಾತ್ಮಕ ನಿರಂಜನಪ್ರಭು ಪರಂಜ್ಯೋತಿ ।
ನೀನೆ ನಿತ್ಯನು ನೀನೆ ಸತ್ಯನು
ನೀನೆ ನಿಜ ಪ್ರತ್ಯಕ್ಷ ಶ್ರೀಗುರು
ನೀನೆನಗೆ ಕುಲದೈವವೆಂದೆರಗಿದನು ಮಯ ಶಿವಗೆ ॥ ॥ ೧೨ ॥

೧-೧ ಲಿ (ಮೂ)

ಕರುಣದಾಲಿ ನಸುನಗುತ ಮಯನನು
ಕರೆದು ಮೈದಡಹುತ್ತ ನಿಜ ಕರ
ಸರಸಿಜವ ಶಿರಕಿರಿಸಿ ಸ್ಥಿರ ಬಾಳೆಂದು ಹರ ಹರಸಿ ।
ಸರಸಿಜಾಸನಪುತ್ರ ಬಹು ವಿ
ಸ್ತರದ ಮಹ ಭಾರಣೆಯ ಅಂಡದ
ಕರಡಗೆಯನಲ್ಲಾಡದಂದದಿ ನಿಲಿಸಬೇಕೆನಲು ॥ ॥ ೧೩ ॥

ಸ್ವಾಮಿಯಪ್ಪಣೆವಿಡಿದು ಶೀಘ್ರದ
ಲಾ ಮಯನು ಶ್ರದ್ಧೆಯಲಿ ಪರಶಿವ
ನಾಮಸ್ಮರಣೆಯ ಭಕ್ತಿಯಲಿ ಸರ್ವವನು ನಿರ್ಮಿಸುವ ।
ಭೂಮಿ ಭಾರದ ಕಥನವಲ್ಲಿದು
ಶ್ರೀಮಹಾ ಷಟ್ಸ್ಥಲಶಿವಾಯಣ
ಸೋಮಶೇಖರಲೀಲೆ ಘನತೆಯಿದೆಂದ ದೇಶಿಕನು ॥ ॥ ೧೪ ॥

ಸಮರಸದ ಗರ್ಭಾಬ್ಧಿ ಮಧ್ಯದಿ
ಕಮಲ ಕಮಲದ ಮೇಲೆ ನೂತ್ನದ
ವಿಮಲಸಿಂಹಾಸನವು ಸಿಂಹಾಸನದ ಮಧ್ಯದಲಿ ।
ಕಮಲದನದ ಆದಿಶಕ್ತಿಯ
ಭ್ರಮರ ಸನ್ನಿಭ ಮುಡಿಗೆ ಹೂವಿನ
ಕ್ರಮದಿ ಮುಡಿಸಿದ ಕಮಠ ಕಮಠನ ಮೇಲೆ ಕೇಳಣುಗ ॥ ॥ ೧೫ ॥

ಬಳಸಿ ಕೂರ್ಮನ ಬೆನ್ನರುಗಿನಲಿ
ನಿಲಿಸಿದನು ಷೋಡಶ ಗಜಂಗಳ
ತಿಳಿಯೊ ಕೊರಳಿಗೆ ಬಿಗಿದ ಮೂವತ್ತೆರಡು ಸರ್ಪಗಳ ।
ಚಲಿಸದಂದದಲದರ ಮಧ್ಯದಿ
ಹೊಳೆವ ಶೇಷನ ಸುತ್ತಿ ತುಡುಗಿದ
ನಿಳೆಯ ಭಾರಕ್ಕಿವನೆ ಪಟ್ಟದ ನೃಪತಿಯೋ ಎನಲು ॥ ॥ ೧೬ ॥

ಪೊಡವಿ ಭಾರಣೆಗೊಡೆಯ ಶೇಷನ
ಹೆಡೆ ಸಹಸ್ರ ಪುರಾಣಸಿದ್ಧವು
ಬಡವಗಿದನಡಸುವರಳವೆ ಶಿವಬ್ರಹ್ಮನಿರ್ಮಾಣ ।
ಕಡು ಪ್ರವೀಣ ಫಣೀಶ್ವರನ ನಡು

ಹೆಡೆಯಲಿದ ಮಡಗಿದನದೆಂತೆನ
ಲೆಡೆಮಣಿಯ ಮೇಲ್ನಿಂಬೆ ಹಣ್ಣನು ಮಡಗಿದಂದದಲಿ ॥ ॥ ೧೭ ॥

ಕಡೆದ ಕಂಭವೊ ಗುಡಿಯೊ ದೇವರೊ
ಒಡೆದು ಮೂಡಿದ ರೂಪೊ ಶಕ್ತಿಯೊ
ಮೃಢನ ಸೆಜ್ಜೆಯೊ ಗೋಪುರವೊ ಕರಡಿಗೆಯೊ ಕೊಪ್ಪರಿಗೊ ।
ಬೆಡಗೊ ಚಿತ್ರದ ಭರಣೊ ಕಮಲವೊ
ನುಡಿದು ವರ್ಣಿಸಲಳವೆ ಶೇಷನ
ಹೆಡೆಗೆ ಕಳಶವ ಮಡಗಿದನೊ ಎನೆ ಮೆರೆದ ಫಣಿರಾಜ ॥ ॥ ೧೮ ॥

ಪರಮಪುರುಷರ ಪರಮಪುರುಷನೆ
ಪರಮವಿರತರ ಪ್ರಾಣದೊಡೆಯನೆ
ಪರಮಪರಶಿವ ತತ್ವಷಟ್ಸ್ಥಲಕರ್ತೃ ಜಯಜಯತು ।
ಪರಸಮಯಕುಜಪರಶು ಪರತರ
ಪರಮಸದ್ಗುರುರಾಯ ಸಲಹೆಂ
ದೆರಗಿ ಕರಗಳ ಮುಗಿದು ಬಿನ್ನಹಮಾಡಿ ಬೆಸಗೊಂಡ ॥ ॥ ೧೯ ॥

ಕಾಲ ಕರ್ಮಪಹಾರ ಗುರುವೇ
ಮೂಲಮಂತ್ರಶರೀರ ಗುರುವೇ
ನೀಲಕಂಠ ನಿರಾಳವಸ್ತುಸ್ವರೂಪ ನಿಜಗುರುವೆ ।
ಮೂಲಶರಧಿಯ ಘಾತದಗಲ ವಿ
ಶಾಲ ಗಣಿಸಲಶಕ್ಯವೆನುತ ಸ
ಕೀಲದಲಿ ದಯಮಾಡಿ ಮಗನಿಗೆ ಬುದ್ಧಿಗಲಿಸಿದಿರಿ ॥ ॥ ೨೦ ॥

ಸ್ವಾನುಭಾವರ ಹೃದಯಸರಸನೆ
ಭಾನುಕುಂಡಲ ಪರಮಹಂಸ[೧][ನಿ][೧]
ದಾನನತಜನ ಭಕ್ತವತ್ಸಲ ಷಟ್ಸ್ಥಲಾಚಾರ್ಯ ।
ಜ್ಞಾನಬೋಧನೆ ಗೆಲಮುಖನೆ ನಮೊ
ಆ ನದಿಯ ಮೇಲಂಡ ನಿಲುವುದಿ
ದೇನು ಸೂತ್ರದ ಭಕ್ತಿಯೋ ಶ್ರುತಮತವೊ ಕೌತುಕವೋ ॥ ॥ ೨೧ ॥

೧–೧ ನ (ಮೂ)

ಸ್ವಾಮಿ ಬುದ್ಧಿ ನಿರೂಪ ತೃಷೆಗಳ
ತಾಮಸರು ಮಗಳಾಡೆ ಭಯ ಗುರು
ಸ್ವಾಮಿ ಚಿತ್ತಕೆ ಸಿಬ್ಬತಿಯೊ ಸನ್ಮತಿಯೊ ಕಾಣದಲ ।
ಭೂಮಿವ್ಯೋಮಗಳೇನು ತೋರದ
ನಾಮರೂಪಿನ ಕುರುಹಿದರ ನಿ
ಸ್ಸೀಮ ಪರಶಿವ ಲೀಲಶರಧಿಯ ಗರ್ಭಮಧ್ಯದಲಿ ॥ ॥ ೨೨ ॥

ವಾರಿಜಾಗ್ರದ ಪೀಠ ಶಕ್ತಿಯ
ತೋರದುರುವಿನ ಕೂರ್ಮಗಜವಹಿ
ಭಾರ ದಂಡವ ವಾರ್ಧಿಮಧ್ಯದ ನಿರಮೆ ತೀಡಲ್ಕಾ ।
ಧಾರೆ ಉದಕವದೇನು ಸೂತ್ರದ
ಹಾರಗಂಡಿಹ ಬ್ರಹ್ಮತಂತ್ರದ
ಕಾರಣವನರುಹೆಂದು ಶಿಷ್ಯನಿಗೊರೆದ ದೇಶಿಕನು ॥ ॥ ೨೩ ॥

ವಾಣಿವರ ಶ್ರೀಪತಿ ಸುರಪ ಗೀ
ರ್ವಾಣ ಮನುಮುನಿ ವೇದಶಾಸ್ತ್ರ ಪು
ರಾಣ ದಿಕ್ಪತಿ ಜಾತಿ ವರ್ಣಾಶ್ರಮ ಕುಲಾಚಾರ ।
ಶ್ರೇಣಿಗಳ ಸಾಕಾರಶಕ್ತಿಗೆ
ತ್ರಾಣ ಕಣ ಪರಶಿವ ನಿರಂಜನ
ತ್ರಾಹಿ ಸಂಭವ ವಾಯುಪುರುಷನ ಸೂತ್ರ ಕೇಳೆಂದ ॥ ॥ ೨೪ ॥

ವಾಯುವೇ ಮೂಲಾತ್ಮಚೇತನ
ವಾಯುವೇ ಜನಿತಕ್ಕೆ ಕಾರಣ
ವಾಯು ಮುಳುಗಿಸುವುದಕು ತೇಲಿಸುವುದಕು ಕರ್ತಾರ ।
ವಾಯು ಕಂಪ ಪ್ರತಿಷ್ಠೆಗನುಕುಲ
ವಾಯುವೀ ಸಾಧಾರ ಶ್ರುತಿಘೃತ
ವಾಯುಸೂತ್ರ ಪ್ರಬಂಧದಿಂದದ ಬಿಗಿದ ಕೇಳೆಂದ ॥ ॥ ೨೫ ॥

ಚಲಿಸದಂದದಿ ಜಗ್ಗದಂದಿ
ಸ್ಥಲದಿ ಉದ್ದಕ್ಕೇಳದಂದದಿ
ಮುಳುಗದಂದದಿ ಜಲಧಿ ಕಟ್ಟಿ ನಿಲಿಸಿದನು ।
ಚೆಲುವ ರಥವನು ರಚಿಸಿ ಕಳಶವ

ಬಲಿದು ಮುರುಗಣೆ ಇಟ್ಟು ಕೀಲ್ಗಳ
ಹಲವು ಮುಖದಲಿ ಜಡಿದು ಗಾಳಿಯ ಗಂಟನಿಕ್ಕಿದನು ॥ ॥ ೨೬ ॥

ಜಲಕು ಕಮಲಕು ಗಂಟನಿಕ್ಕಿದ
ಬಲಿದ ಪೀಠಕು ಆದಿಶಕ್ತಿಗು
ಹೊಲಿದ ಶಕ್ತಿಗಳು ಕಮಠ ಗಜಶೇಷನಿಗು ಬಂಧಿಸಿದ ॥
ಚೆಲುವೆ ಶೇಷನ ತಲೆಗು ಮುಂಡಕು
ಮಲುಕ ಹಾಕಿದ ತುದಿಗು ಬುಡಕಿದ
ನಲಕದಂದದಿ ವಾಯುಸೂತ್ರದ ಬಲದಿ ನಿಲಿಸಿದನು ॥ ॥ ೨೭ ॥

ಶ್ರೀ ಪರಂಜ್ಯೋತಿಸ್ವರೂಪ ನಿ
ರೂಪ ಮುಕುಟವ ತಿರದಿ ಮಂತ್ರಕ
ಲಾ ಪ್ರತಿಷ್ಠೆಯ ಮನದಿ ಜಿಹ್ವಾಗ್ರದಲಿ ಬೈತಿರಿಸಿ ।
ತಾಪಸೋತ್ತಮಮೂರ್ತಿ ಹೃದಯ ಪ್ರ
ತಾಪ ದೃಷ್ಟಿಯಲಿರಿಸಿ ಬಂದವ
ನಾ ಪರಬ್ರಹ್ಮದ ಪದಾಂಬುಜಕೆರಗಿ ಕೈಮುಗಿದು ॥ ॥ ೨೮ ॥

ದೇವ ದೇವನೆ ಶರಣು ಶಿವ ರಾ
ಜೀವಲೋಚನಚರಣಸರಸಿಜ
ಪಾವನಾತ್ಮಕ ಪರಮಪುರುಷನೆ ಪ್ರಣವರೂಪಕನೆ ।
ನಾವು ಮಾಡಿದ ಸೇವೆ ಸ್ವಾಮಿಯ
ಭಾವನೆಗೆ ಸರಿ ಬಂತೊ ಬಾರದೊ
ದೇವ ದಿವ್ಯದೃಷ್ಟಿಯಿಂದಲೆ ನೋಡಿ ಸಲಹೆಂದ ॥ ॥ ೨೯ ॥

ಅಗಣಿತ ಬ್ರಹ್ಮಾಂಡಸೂತ್ರವ
ನೆಗಳ್ದು ಚರಣಾಬ್ಜದಲೆ ಧರಿಸಿಹ
ಸಗುಣ ನಿರ್ಗುಣಮೂರ್ತಿ ಲೀಲೆಯ ನಟಿಸಿ ತೋರಿಸುವ ।
ತ್ರಿಗುಣ ಪುರುಷರ ಪಡೆದ ಶಂಕರ
ಮಗನೆ ಬಹು ಸೊಗಸಾಯ್ತು ಮುಂದೀ
ಜಗದ ನದಿ ನಗದ್ವೀಪ ಹಸಿಗೆಯ ಮಾಡು ನಿಮಿಷದಲಿ ॥ ॥ ೩೦ ॥

ಏಕ ಮೂರ್ತಿ ನಿರೂಪದಳೆದು ಪ
ರಾಕೆನುತಲಡಿಗೆಡೆದು ಕಾಶ್ಯಪ

ಭೂತದಳದ ವಿಸ್ತೀರ್ಣ ಭಾಗೆಯ ಮಾಡತೊಡಗಿದನು ।
ಪ್ರಾಕಿನಿಂದ ವಿಚಾರಿಸಲು ಪೂ
ರ್ವಿಕರಹುದಹುದೆನಲು ಪ್ರಥಮ ವಿ
ವೇಕಪುರುಷರ ಚಿತ್ತ ಮಧ್ಯದಿ ತೊಳಗಿ ಬೆಳಗುವನು ॥ ॥ ೩೧ ॥

ಪಂಚಮುಖನಾಜ್ಞೆಯಲಳೆದವಳ
ಗಂಚ ಸೂತ್ರವ ಹಿಡಿದು ನೋಡಿದ
ಪಂಚಶರಕೋಟಿಗಳ ವಿಸ್ತೀರ್ಣದ ಮಹಾಬಯಲ ।
ಮುಂಚೆ ನಿಜಗುಣಯೋಗಿ ವಿವರಿಸಿ
ಹಂಚಿದರೆ ನೃಪಖಂಡದೇಶ ಪ್ರ
ಪಂಚ ಅರ್ಬುದ ಕೋಟಿ ಸ್ಥೂಲವಿದೆಂದು ಬೋಧಿಸದೆ ॥ ॥ ೩೨ ॥

ಸರಸಿಜಾಸನ ಸುತನ ಮೊಮ್ಮಗ
ಧರಣಿಮಂಡಲಮಧ್ಯ ಹೇಮದ
ಗಿರಿಯ ನೆಟ್ಟನು ಲಕ್ಷಯೋಜನದಳತೆಯುನ್ನತವ ।
ಮೆರೆವ ಗಿರಿ ಶ್ರೀಧರಗೆ ಲಕ್ಷ್ಮಿಯ
ಸರಸಿಜಗೆ ಶಾರದೆಯ ಸುರಪನೆ
ದೊರೆತನವ ಪರಶಿವನ ಚರಣಕೆ ಶಿರಗೊಡುವೆನೆನುತ ॥ ॥ ೩೩ ॥

ನಗುವ ಭಾವದಿ ಮೂರು ಕಂಕಣ
ಸೊಗಸಿನಿಂದಲಿ ನೆಗೆದು ಮೇಲಣ
ಮುಗಿಲ ಮುಟ್ಟುವ ಪ್ರತುಮೆಯಂದದಿ ಹಗಲಿರುಳ ಹಳಿದು ।
ಬಗೆ ಬಗೆಯ ಯುಗಜುಗದ ಹಿರಿಯರ
ಹೆಗಲಲಾಡಿಹೆನೆನಗೆ ಹಿರಿಯರ
ಮೊಗವ ಕಾಣೆನಹಾ ಎನುತ ಜಗಜಗಿಸಿ ಕನಕಾದ್ರಿ ॥ ॥ ೩೪ ॥

ಕಂದ ಅಸ್ತಾಚಲಯುದಯಗಿರಿ
ವಿಂಧ್ಯ ಮೈನಾಕಾದಿ ಹಾಸ್ಯ ಪ್ರ
ಬಂಧಕೊಳಗಲ ಮಂದರಂಗಳಿವೆಲ್ಲ ಮೃಣ್ಮಯವೊ ।
ಗಂಧಮಾದನ ಕುಶಿಧ ರಜತವು
ಕುಂದಣವು ರಜತಾದ್ರಿ ಕುಳಸ್ಥಳ
ವೃಂದಗಳು ನಿಜಗರ್ಭವೆನುತಲಿ ನಲಿಯೆ ಮಹಮೇರು ॥ ॥ ೩೫ ॥

ಕೇಳಣುಗ ಶ್ರೀಮೇರು ಬಳಸಿಹ
ವೇಳು ದ್ವೀಪಗಳೇಳು ಶರಧಿಗ
ಳೇಳು ಪರ್ವತ ಸ್ವಾದುದಕ ನದಿಯಂದದರಗಿನಲಿ ।
ಹೇಳಲಸದಳ ಧರಣಿ ಮಂಡಲ
ವಾಳುತಿಹನ್ನೈ ಪರಾಂಶದೊಳ್ಳೆಯ
ಪೀಳಿಗೆಯ ಘನತರವನಗನಿನ್ನೇನು ವಣಿಪರೊ ॥ ॥ ೩೬ ॥

ಅಂಬುಜಾಸನಸುತನ ಪುತ್ರನು
ತುಂಬಿದೈವತ್ತಾರು ದೇಶವ
ಸಂಭ್ರಮದ ನವಖಂಡಪೃಥ್ವಿಯ ಸಕಲಜಾತಿಗಳ ।
ಇಂಬೆನಿಸಿದಿಹಪರದ ಸುಕೃತ ಕ
ದಂಬ ಜಂಬೂದ್ವೀಪ ಮಧ್ಯಮ
ಸ್ತಂಭಮೆನೆ ಮಹಮೇರು ಮೆರೆದುದು ಮುಕ್ತಿಸ್ಥಳಮೆನಿಸಿ ॥ ॥ ೩೭ ॥

ಮೇರು ಬಳಸಿದ ಜಂಬುದ್ವೀಪವೊ
ಧರುಣಿಯೊ ಭೂವನಿತೆ ವದನವೊ
ವಾರಿಜವೊ ಸೀಮಂತರತ್ನವೊ ಶ್ರೀಮುಡಿಯೋ ಗುಬ್ಬೊ ।
ಮೂರುನೇತ್ರನ ಗುಡಿಯೊ ಕಳಶವೊ
ಕಾರಣೀಕದ ಶಕ್ತ್ಯೊ ಪುರುಷನೊ
ಆರು ವರ್ಣಿಸಲರಿದು ಕನಕಾದ್ರಿಯ ಮಹತ್ವವನು ॥ ॥ ೩೮ ॥

ನವರತ್ನಮಯ ಕೋಡುಗಲ್ಗಳು
ನವನೂತ್ನತರದಮೃತ ಕೊಳಗಳು
ನವೀನತರ ವನ ಪುಷ್ಪಪತ್ರೆಯು ಕೆರೆಯು ಬಾವಿಗಳು ।
ಶಿವನ ನಿಳೆಯದ ಶೃಂಗರಂಗಳ
ತವಗ ಗೋಪುರ ಸೆಜ್ಜೆಯರಮನೆ
ಶಿವಗಣಂಗಳ ಪ್ರಮಥರನುಭವಮಂಟಪಗಳೆಸೆಯೆ ॥ ॥ ೩೯ ॥

ಮೇರುವಿನ ಶಿರದಗ್ರ ಶೃಂಗದಿ
ತೋರಿತಿಹ ಉಪ್ಪರಿಗೆ ಕಳಶವು
ಕೇರಿಕೇರಿಯ ಸಾಲ ಚೌಬಿನೆಗಳ ಕುರುಜುಗಳು ।
ಏರಿಸಿದ ಕಳಶಗಳನಂತವು
ಸೇರಿಸಿದ ನವರತ್ನಗೆಲಸದ
ವೀರಶೈವರ ಷಟ್ಸ್ಥಲದ ಮಹ ಪುರುಷರರಮನೆಯು ॥ ॥ ೪೦ ॥

ಸುರತರುವ ಸುರಧೇನು ಸುರಲತೆ
ಪುರುಷ ಪೀಯುಷ ಚಿಂತಮಣಿಗಳ
ತರತರದಿ ನಿರ್ಮಿಸಿದ ಪರಶಿವನಪ್ಪಣೆಗಳವನು ।
ವರರ ನಿಳೆಯವ ಸುರರ ಮನೆಗಳ
ಗಿರಿಯ ಮೂಲದಿ ದನುಜಪುರಗಳ
ಶಿರದಿ ಶೃಂಗರಿಸಿದನು ಶರಣರ ಪುರದ ಕೇರಿಗಳ ॥ ॥ ೪೧ ॥

ಭೂಮಿಮಧ್ಯದ ಹೇನಶೈಲದ
ಸೀಮೆ ಶಿರದಲಿ ರಚಿಸಿದನು ಪ್ರಭು
ಸ್ವಾಮಿ ನಂದೀಶ್ವರನ ಷಟ್ಸ್ಥಲಬ್ರಹ್ಮಿಗಳ ಮಠವ ।
ಸೋಮಶೇಖರನರಮನೆಯುಯೆನೆ
ಹೇಮನವರತ್ನದಲೆ ರಚಿಸಿದ
ಸೋಮಸೂರ್ಯರ ಬೀದಿ ಹೊಳೆದವು ಕಳಶ ವಿಳಸದಲಿ ॥ ॥ ೪೨ ॥

ಕಿನ್ನರರ ಕಿಂಪುರುಷ ಗರುಡರ
ಪನ್ನಗರ ಗಾಂಧರ್ವ ಯಕ್ಷರ
ಕನ್ನೆಯರ ಹರ್ಮ್ಯಗಳು ಸಿದ್ಧರ ವಿದ್ಯಧರ ಖಚರ ।
ಮುನ್ನಲಭವನ ಭಜಿಸಿ ಶಿವನ ಪ್ರ
ಸನ್ನ ಶೇಷವ ಪಡೆದ ದಿವಿಜ ಮ
ಹೋನ್ನತರ ಪುರಕೇರಿಯಿಂ ಹೇಮಾದ್ರಿ ॥ ॥ ೪೩ ॥

ಹರಿಯ ನಗರವ ಸುರನ ಪುರವನು
ಸರಸಿಜನ ಪಟ್ಟಣವ ದಿವಿಜರ
ನೆರವಿಯನು ಮನುಮುನಿಗಳಾಶ್ರಮ ಋಷಿನಿವಾಸಿಗಳ ।
ಸಿರಿಯ ದಿಗ್ವರ ನಗರಗಳ ಶೃಂ
ಗರದ ಸೊಗಸಿನ ಓಲಗಂಗಳ
ಪರವಿಡಿದು ನಿರ್ಮಿಸಿದ ಕನಕಾಚಲದ ಮಸ್ತಕದಿ ॥ ॥ ೪೪ ॥

ನಂದಿ ವನಗಳ ತಿಪ್ಪಗೊಳಗಳ
ನಂದ್ಯಾವರ್ತನ ನಾಗಸಂಪಿಗೆ
ಗಂಧ ಚಂದನವಗಲು ಕಡಬವ ಕಕ್ಕೆ ಬಿಲ್ವಗಳ ।
ವೃಂದ ವೃಕ್ಷವ ನಿರ್ಮಿಸಿದನು ಸು

ಗಂಧಿ ಬಕುಳವಶೋಕೆ ಕೊಸಗನು
ವಿಂದ ಲಾಮಚ ತುರುಗ ಮುಡಿವಳ ಕುಸುಮವಾಟಿಗಳ ॥ ॥ ೪೫ ॥

ದ್ರಾಕ್ಷಿ ಖರ್ಜುರ ಕದಳಿ ದಾಡಿಮ
ವೃಕ್ಷ ನೇರಿಲು ಹಲಸು ಚೂತ ಸ
ಮಕ್ಷದಲಿ ತೆಂಗಡಕೆ ಕುರವಕ ಕಂಚಿ ನಿಂಬೆಗಳ ।
ಪಕ್ಷಿ ಪಶು ಮೃಗ ಸೋಗೆ ಶುಕಪಿಕ
ವಾಕ್ಷಣವೆ ಕಳಹಂಸ ಕೊಳಗಳ
ನೀಕ್ಷಿಸಲ್ಕಳವಲ್ಲವಮೃತದ ನದಿ ತಟಾಕಗಳ ॥ ॥ ೪೬ ॥

ದೇವೃಷಿಗಳ ಬ್ರಹ್ಮಋಷಿಗಳ
ಠೀವಿಗಳ ಶ್ರೀ ರಾಜಋಷಿಗಳ
ದೇವಸ್ತ್ರೀಯರ ಶರಣಸತಿಯರ ಶೈವಕಾಳಿಗಳ ।
ಸಾವಧಾನದ ತಪಸಿಗಳ ಶಿವ
ಜೀವ ಸಮರಸವಾದ ತತ್ವನು
ಭಾವಿಗಳ ಮಠ ಮನೆಯ ಕ್ಷಣಮಾತ್ರದಲೆ ನಿರ್ಮಿಸಿದ ॥ ॥ ೪೭ ॥

ಯತಿಗಳಾಶ್ರಮ ಯೋಗಿಗಳ ಗೃಹ
ಮಠಪ್ರತಿಷ್ಠದ ಮನಸಿಗುತ್ಸಹ
ಪತಿವ್ರತೆಯರಿಗೆ ಪ್ರಾಣನಿರ್ಮಲವಾದ ಸ್ಥಾನಗಳ ।
ಶ್ರುತಿ ಪುರಾಣಾಗಮವ ಪಠಿಸುವ
ಯತಿ ವಟುಗಳಿಗೆ ಪರ್ಣಶಾಲೆಯ
ನತಿಸುಮಾನಿನದಿ ನಿರ್ಮಿಸಿದ ಮಯ ಪುಷ್ಪವಾಟಿಯಲಿ ॥ ॥ ೪೮ ॥

ಕಾರಣೀಕನು ವಿಶ್ವಕರ್ಮನು
ಮೇರುಗಿರಿ ಶಿರದಗ್ರಭೂಮಿಯ
ವಾರೆಪಾರೆಯ ಕಳೆದು ಸೂತ್ರಿಸಿ ನೋಡಿ ಚೌಕಿಸಿದ ।
ಸೇರುವೆಗೆ ಸರಿಯಾಗಿ ಶಿಲ್ಪಿಯ
ನಾರೈದು ಶುಭಮುಹೂರ್ತದಲಿ ಶ್ರೀ
ಕಾರ ಬಹು ಶೃಂಗಾರ ಪರಶಿವ ಪುರವ ನಿರ್ಮಿಸಿದ ॥ ॥ ೪೯ ॥

ಕೋಟಿ ಕೊತ್ತಳವಂಬುಗಂಡಿಯ
ಮೀಟೆನಿಪ ತೆನೆ ಡೆಂಕಣೆಗಳನು

ನೋಟಕಸದಳದಗಳನಾಶ್ವರಿ ಮೇರ್ವೆ ಹುಲಿಮುಖವ ।
ನಾಟಿಸದ ಮೊಳೆ ದ್ವಾರಗದಗಳ
ಕೂಟದಂಕದ ದಿಡ್ಡಿಗಳ ಶಶಿ
ಜೂಟನಿಹ ಕೈಲಾಸ ಪಟ್ಟಣ ಮೆರೆದಾಕ್ಷಣಕೆ ॥ ॥ ೫೦ ॥

ಎಳೆದನಪರಂಜಿಯಲೆ ಕೋಟೆಯ
ನೆಳೆಯ ಮಾಣಿಕದಲ್ಲೆ ಕೊತ್ತಳ
ಬಲಿದ ಮುತ್ತಿನ ತೆನೆಯ ಹವಳದಲಾಳುವೇರಿಯನು ।
ಎಳೆಯ ನೀಲದಲಗಳ ಪಚ್ಚೆಯ
ಹಿಲಿಮುಖದ ಕೆಲವಜ್ರ ಕದಗಳ
ಕುಳದ ಮೇರುವೆ ಹೊಳೆದುದಾ ಕೈಲಾಸ ಶಿವವಾಸ ॥ ॥ ೫೧ ॥

ಮಿಸುನಿಗಲ್ಲಿನಲೆಸೆವ ಕೋಟೆಯ
ದೆಸೆಗಳೆಂಟರ ದ್ವಾರದಂಕದಿ
ತ್ರಿಸುಲ ಡಮರುಗ ವರದಭಯ ಕರಕಂಜ ಚತುರ್ವಿಧವ ।
ಅಸಮ ಪಟುಭಟ ಷೋಡಶರ ಸಭೆ
ಕುಶಲ ಭೈರವರುಗಳು ಕಾವಲು
ಶಶಿಧರನ ಕೈಲಾಸಪುರ ಥಳಥಳಿಸಿ ಕಣ್ಗೆಸೆಯೆ ॥ ॥ ೫೨ ॥

ಮೇರುಶಿಖರದ ಶಿರದ ಶಿವಪುರ
ಕೇರಿಕೇರಿಲಿ ಬೀದಿ ಬೀದಿಲಿ
ತೋರುತಿಹವ್ಯೆ ಮಾಳಿಗೆಯ ಭುವನೇಶ್ವರಿಯ ಶ್ರೇಣಿ ।
ತೋರಣವು ನವರತ್ನ ತಳಿಗೆಯ
ತೋರಣವು ದರ್ಪಣದ ಕಳಶದ
ತೋರಣದ ಭಾರಣೆಯದಾಕೈಲಾಸ ಸುವಿಲಾಸ ॥ ॥ ೫೩ ॥

ಲಕ್ಷಿಸಿದ ಬೇರೊಂದು ಸ್ಥಳದಲಿ
ದಕ್ಷಿಣಾಮೂರ್ತಿಯ ವಿಳಾಸ ಸ
ಮಕ್ಷದಲಿ ಮಹ ಶಿಂಶುಮಾರನ ಚಕ್ರನಿರ್ವಹಣ ।
ಅಕ್ಷಿತ್ರಯನವತಾರ ಷಟ್ಸ್ಥಲ
ಮೋಕ್ಷ ಗುರುಮಠ ಬಳಸಿ ಷೋಡಶ
ದೀಕ್ಷ ಗುರುಗಳ ವಾಲ್ಯ ಶ್ರೀ ಕೈಲಾಸ ಕೇಳೆಂದ ॥ ॥ ೫೪ ॥

ಅಲ್ಲಿಗಲ್ಲಿದೆ ಪ್ರಮಥರಾಲಯ
ವಲ್ಲಿಗಲ್ಲಿಗೆ ಶರಣಗಣ ಗೃಹ
ವಲ್ಲಿಗಲ್ಲಿಗೆ ಮುಕ್ತಿಪುರುಷರ ಕೇರಿ ದಾಸೋಹ ।
ವಲ್ಲಿಗಲ್ಲಿಗೆ ಷಟ್ಸ್ಥಲನುಭವ
ವಲ್ಲಿಗಲ್ಲಿಗೆ ತತ್ತ್ವಬೋಧೆ ಗ
ಳಲ್ಲದನ್ಯಥವಿಲ್ಲವಾ ಕೈಲಾಸ ಪತ್ತಣದಿ ॥ ॥ ೫೫ ॥

ಸಿದ್ಧಪದ್ಮಾಸನದ ಪ್ರಮಥರು
ಸಿದ್ಧರಸ ಮಡು ಪರುಷವೇದಿಯು
ಇದ್ದವಗಣಿತ ಮರುಜವಣೆ ತರು ಗುಲ್ಮ ಲತೆ ಗಿರಿಯು ।
ಸಿದ್ಧಲಿಂಗನ ಸಾಂಪ್ರದಾಯ ಪ್ರ
ಸಿದ್ಧ ಷಟ್ಸ್ಥಲ ಶರಣಮಧ್ಯದ
ಲಿದ್ದ ಚೀಲಳಸ್ವಾಮಿಯನುಭವಪೀಠ ಮಧ್ಯದಲಿ ॥ ॥ ೫೬ ॥

ಕರಿಯ ಮಲ್ಲಿಗೆ ಬಿಳಿಯ ಮಲ್ಲಿಗೆ
ಸುರಗಿ ಸಂಪಿಗೆ ಪಾರಿಜಾತವು
ಪರಿಪರಿಯ ಕಮಲಗಳ ಕುಮುದದ ಪಚ್ಚಿ ದವನಗಳ।
ಕರದ ಲಿಂಗಕ್ಕರ್ಪಿಸುತ ಮಹ
ವಿರತರಿಗೆ ತತ್ತ್ವೋಪದೇಶವ
ನೊರೆವುತಿರ್ದನು ಗುರು ನಿರಂಜನ ಚೀಲಳೇಶ್ವರನು ॥ ॥ ೫೭ ॥

ಜಾತಿಶ್ರೇಷ್ಠರ ಜಗದ ಗುರುಗಳ
ನೂತನ ಪುರಾತನರ ಪ್ರಮಥರ
ಜ್ಯೋತಿರೂಪಿನ ಜ್ಞಾನಜಂಗಮ ಭಕ್ತಮಂದಿರದ ।
ತೀತ ಮಠ ಮಹಂತು ವಿರತಸಂ
ಖ್ಯಾತ ಷಟ ಲಶರಣ ಬಳಸಿನ
ಳಶಳದ ಮಧ್ಯದಲಿ ಪರಶಿವ ನಿಳಯ ನಿರ್ಮಾಣ ॥ ॥ ೫೮ ॥

ರನ್ನಗಿರಿ ರಜತಾದ್ರಿ ರಂಜಿಪ
ಚಿನ್ನದಚಲ ತ್ರಿಕೂಟ ಶಿಖರಿ ಮ
ಹೋನ್ನತದ ಶಿಖಿಮಧ್ಯದಲಿ ಪರಶಿವನಿರೂಪದ ಕ ।
ಣ್ಣಿನ್ನೆಯಲಿ ನವರತ್ನಗೆಲಸದ

ಬಿನ್ನಣದ ಬಹು ಚಿತ್ರದರಮನೆ
ಸನ್ನಹವನದನಾದ ಕವಿ ವರ್ಣಿಸುವನೋ ಸ್ವಾಮಿ ॥ ॥ ೫೯ ॥

ಹರಿಗೆ ಹಾಸ್ಯಪಹಾರವನು ಸರ
ಸಿರುಹಪೀಠಗೆ ಗಿರಿಜೆಯನು ಪುರ
ವರಗೆ ನಿರ್ದೋಷವನು ಸಿರಿ ವಾಣಿಗೆ ಸಲಕ್ಷಣವ ।
ಉರಗರಾಜಗೆ ನಿರ್ವಿಷವ ಸ
ದ್ಗುರುಶಿಖಾಮಣಿ ಷಟ್ಸ್ಥಲಾಘಣಿ
ಚರ ನಿರಂಜನಮೂರ್ತಿ ಚೀಲಲಸ್ವಾಮಿ ಪಾಲಿಸಲಿ ॥ ॥ ೬೦ ॥

ಈಶ್ವರಿಗೆ ಈಶ್ವರನೊರೆದ ನಂ
ದೀಶ್ವರನು ಪ್ರಮಥರಿಗೊರೆದ ಬಸ
ವೇಶ್ವರಗೆ ಪ್ರಭು ಶಿಕ್ಷೆ ಈ ಷಟ್ಸ್ಥಲಶಿವಾಯಣ ತ್ರೈ ।
ವಿಶ್ವಕಗ್ಗಳ ಹರಪುರದ ಗಿರಿ
ಶಾಶ್ವತನುಭವಮಂಟಪದಿ ವಿರ
ತೇಶ್ವರನು ಗುರು ಬಸವಪ್ರಭು ಸುತಗೊರೆದ ಕೇಳಣುಗ ॥* ॥ ೬೧ ॥

❖❖

---

* ಇತಿ ಅಷ್ಟಮ ಸ್ಕಂಧ ನಿರೂಪಣಂ ಪದಗಣನೆ ೨೩೪ಕ್ಕೆ ಮಂಗಳ ಮಹಾಶ್ರೀ ॥

ನವಮ ಸ್ಕಂಧ

ರಾಗ : ರಾಗದೇಶಿ

ವಂದೆ ಸದ್ಗುರು ತಂದೆ ಪರಶಿವ
ಮಂದಿರದ ವಿಸ್ತರವ ಬಹು ದಯೆ
ದಿಂದೆನಗೆ ಅರುಹೆಂದ ಬಹು ಶಿಷ್ಯನಿಗೊರೆದ ದೇಶಿಕನು ॥

ಅಂಬ ಶ್ರೀಜಗದಂಬ ಪೂಜ್ಯ ನಿ
ತಂಬ ಮುಡಿ ಭ್ರಮರಾಂಬ ಶಕ್ತಿಕ
ದಂಬ ಮುಖಶಶಿಬಿಂಬ ಶುಂಭ ನಿಶುಂಭಕ ವಿಡಂಬ ।
ಸಾಂಬಸೋದರಿ ಲೋಕಮಾತೆ ಚಿ
ದಂಬ ಬಾಂಬೊಳೆಯೆಂಬ ನೂತ್ನ ನಿ
ತಂಬ ಗಂಗಾ ಜೂಟಶಂಕರ ಸಲಹು ಮೂಜಗವ ॥ ॥ ೧ ॥

ದೇವ ಭಕ್ತರ ಭಾವ ಭವ ಸಂ
ಜೀವರುಪವನ ದಾವ ಕಾವನ
ಪೂವ ಪುಂಕಣಠೀವ ಪಾವಕನೇತ್ರ ಶ್ರೀ ವೀರ ।
ಶೈವಷಟ್ಸ್ಥಲಜೀವ ಮರೆಹೊಗೆ
ಕಾವ ಮೋಕ್ಷವನೀವ ತತ್ವನು
ಭಾವ ಸದ್ಗುರುದೇವ ಚೀಲಳಸ್ವಾಮಿ ಶರಣಾರ್ಥಿ ॥ ॥ ೨ ॥

ಅಂತರಂಗದ ಸ್ನೇಹಿಗಳ್ಗೆ ಅ
ನಂತಶ್ರದ್ಧೆಯ ಹಿರಿಯರಿಗೆ ಪ್ರಾ
ಣಾಂತ್ಯಲಾದರು ಹಿಡಿದ ವ್ರತಗಳ ಬಿಡದ ಕರಸ್ಥಳದ ।
ಶಾಂತಮೂರ್ತಿಯ ಬೆರೆದರಿಗೆ ಬಹು

ಭ್ರಾಂತಿ ಲಕ್ಷ್ಯವ ತೊರೆದರಿಗೆ ನಿಜ
ವಂತರಿಗೆ ಬೋಧಿಸು ಮಗನೆ ಷಟ್ಸ್ಥಲಶಿವಾಯಣವ ॥ ॥ ೩॥

ಅಸುರಕೃತ್ಯಾತ್ಮರಿಗೆ ಗರ್ಭದ
ಶಿಶುವ ಗೋಣ್ಮುರಿವರಿಗೆ ಜೀವದ
ಪಶುವ ನೆಗದಗುವರಿಂಗೆ ಪರಶಿವಮತವಿಮಗ್ನರಿಗೆ ।
ಹಸಿದಗನ್ನವನಿಕ್ಕದವರಿಗೆ
ತೃಷೆಯಘ್ರಣೆಯ ಎರೆಯದವರಿಗೆ
ಶಿಶುವೆ ಬೋಧಿಸಲಾಗದೀ ಷಟ್ಸ್ಥಲಶಿವಾಯಣವ ॥ ॥ ೪ ॥

ಮೇನಕಾತ್ಮಜೆಗಭವ ನಂದಿ ನಿ
ಧಾನಪ್ರಮಥರ ಸಭೆಗೆ ಪ್ರಭು ಸಂ
ಧಾನಿ ವೃಷಭೆಗೆ ಬೋಧಿಸಿದ ಪೂರ್ವಣಿ ಕೈಲಾಸ ।
ಸ್ಥಾನಕಗ್ಗಳ ಹರಪೂರದ ಗಿರಿ
ಸ್ಥಾನುಭವಮಂಟಪದ ಷಟ್ಸ್ಥಲ
ಜ್ಞಾನಿ ಬಸಪ್ರಭುಕುಮಾರ ನಿರೂಪ ಸೂತ್ರವಿದು ॥ ॥ ೫ ॥

ದೇಶಿಕನೆ ತವ ಬಿನ್ನ ಚಿನ್ನಕೆ
ಬೇಸರವೊ ಬಹು ಸೊಗಸೊ ಲಾಲಿಸಿ
ಪೋಷಣೆಯ ಮಾತಲ್ಲ ನಿಮ್ಮ ಕಟಾಕ್ಷಮಾತ್ರದಲೆ ।
ಲೇಸು ಕಷ್ಟವ ಕಾಣೆ ಮುಂದಣ
ಶ್ರೀ ಸದಾಶಿವ ರಾಜಧಾನಿ ವಿ
ಶೇಷದಾಗಮ ವಿವರ ವರ್ಣವನೊರೆವುದೆಂದೆನುತ ॥ ॥ ೬ ॥

ಚರಣಸರಸಿಜಕೆರಗಿ ಕೀರ್ತಿಸಿ
ಕರಕಮಲಗಳ ಮುಗಿದು ಗುರುವೇ
ಪರಶಿವನ ನಿಜರೂಪ ಧರಿಸಿಯೆ ಧರೆಯ ರಕ್ಷಿಸಲು ।
ತ್ವರಿತದಿಂದವತರಿಸಿ ಸುಳಿದಿರಿ
ದರುಶನವೆ ನಿಜಮುಕ್ತಿ ಶ್ರುತಿಮತ
ಕರುಣವಾರಿಧಿ ಶಾಂತಮೂರ್ತಿ ನಮಸ್ತೆ ಕಾಯೆಂದ ॥ ॥ ೭ ॥

ಸುತನ ಬಿನ್ನಹಗೇಳಿದಾಕ್ಷಣ
ಕೆತಿಕುಲಾಗ್ರಣಿ ಯೋಗಿಹೃದಯದ

ಲತಿ ದಯಾನ್ವಿತನಾಗಿ ಸುಖಂ ಭವತೆಂದು ಗುರು ಹರಸಿ ।
ಶ್ರುತಿತತಿಗಳಳವಲ್ಲ ವಲ ಕೇಳ್
ಶಿತಿಗಳನೆ ಕೈಲಾಸವಾಸದ
ಸ್ಥಿತಿಯ ವರ್ಣಿಸಲಳವೆ ಸ್ವಾತ್ಮಜ್ಞಾನಬಲವೆಂದ ॥ ॥ ೮ ॥

ಆವ ವೇದಾಗಮಪುರಾಣಗ
ಳಾವ ಲಕ್ಷಣಶಾಸ್ತ್ರ ಕವಿಕುಲ
ವಾವ ಕಾಲದಲಾವ ದೇಶದಲಾವ ಯುಗಮತದಿ ।
ದೇವದೇವಿಯ ಪಾದವರ್ಣನು
ಭಾವನೆಗೆ ಭಕ್ತಿಕೆ ಕುಳಂ ಸ್ವಯ
ದೇವಶಿಲ್ಪಿ ಸಮರ್ಥನಲ್ಲದೆ ಮಿಕ್ಕಿನರಿಗಳವೆ ॥ ॥ ೯ ॥

ಕರ್ತೃ ಪರಶಿವ ವಿಶ್ವಕರ್ಮನ
ಹತ್ತಿರಕೆ ಕರೆತರಿಸಿ ಭೂಷಣ
ವಿತ್ತು ಉಡುಗೊರೆಗೊಟ್ಟು ವೀಳ್ಯವ ಕೊಡಿಸಿ ತಲೆದಡಹಿ ।
ರತ್ನಚಲ ಕನಕಾದ್ರಿ ರಜತಗಿ
ರಿ ತ್ರಿಕೂಟದಿ ನಮಗೆ ನೂತ್ನ ವಿ
ಚಿತ್ರದರಮನೆಯಾಗಬೇಕಲ ನಿಮಿಷ ಮಾತ್ರದಲೆ ॥ ॥ ೧೦ ॥

ಜಲಧಿಮಧ್ಯದಿ ಕಮಲ ಕಮಲದಿ
ಲಲಿತ ಪೀಠದಿ ಶಕ್ತಿ ಶಕ್ತಿಯ
ತಲೆಯ ಕೂರ್ಮನ ದಂತಿ ಶೇಷನ ಶಿರದಲುಂಡವನು ।
ಚಲಿಸದಂದದಿ ಬಲಿದೆ ಶಿಲ್ಪಿಯ
ಕುಲಶಿರೋಮಣಿಯಹುದೊ ನೀನೇ
ಭಲರೆ ಭಾಪುರೆ ಬ್ರಹ್ಮವಂಶದ ಶರಧಿಚಂದ್ರಮನೆ ॥ ॥ ೧೧ ॥

ಸ್ವರ್ಗ ಮರ್ತ್ಯ ಸುಪಾತಳ ಸ್ಥಳ
ವರ್ಗಕುಳವೀರೇಳ್ಬುವನಗಳ
ಶೀಘ್ರದಲಿ ನಿರ್ಮಿಸಿದೆ ಮೂರನೆ ಸೃಷ್ಟಿ ದೊರೆ ನೀನೆ ।
ಅಗ್ರಕುಲ ಶಿರೋಮಣಿಯೆ ಬಾರೊ ಸ
ಮಗ್ರ ಸಭೆಗಧಿಕಾರಿ ಪ್ರಮಥ ಪ
ದಗ್ರ ಪೂಜಾರಚನೆಗರಮನೆಯಾಗಬೇಕೆಮಗೆ ॥ ॥ ೧೨ ॥

ಭೂಕೊಳದ ವಿಸ್ತಾರ ಚತುರ್ದಶ
ಲೋಕಪಾಲರ ದೇಶ ಪುರ ಗೃಹ
ಟೀಕೆ ಹೇಳುವರಳವೆ ಸರ್ವರ ಸಕಲಸಂಭ್ರಮದ ।
ಶ್ರೀಕರದ ಶೃಂಗರದ ಬೆಡಗಿನ
ಪ್ರಾಕರದ ಗೋಪುರದ ಕಲಶದೆ
ರೇಖೆ ಲಕ್ಷಣವಾದುದಲ ಕೈಲಾಸಪುರ ಮಗನೆ ॥ ॥ ೧೩ ॥

ಪುಣ್ಯಸ್ಥಳಗಳು ಪುಣ್ಯ ನೆಲಗಳು
ಪುಣ್ಯಗಿರಿಗಳು ಪುಣ್ಯ ಮರಗಳು
ಪುಣ್ಯ ಗಿಡುಗಳು ಪುಣ್ಯ ಮಡುಗಳು ಪುಣ್ಯಜನರುಗಳ ।
ಪುಣ್ಯಕ್ಷೇತ್ರವ ಪುಣ್ಯತೀರ್ಥವ
ಪುಣ್ಯದೇವತ ಭುವನ ಭವನವ
ಕಣ್ಣ ಮಟ್ಟದಿ ಸೃಜಿಸಿದೆಯಲಾ ಇಹಪರಂಗಳಲಿ ॥ ॥ ೧೪ ॥

ಕೊಳಗೆ ಬಳ್ಳವ ಮಾನ ಸೊಲಗೆಯ
ನಳತೆ ತೂಕವ ಚಿನ್ನ ಬಣ್ಣವ
ಕಳೆವ ಕಟ್ಟುವ ಸಲುವ ಸಲ್ಲದವಟ್ಟವರಿಪಡಿಯ ।
ಒಳಗೆ ಹೊರಗಳ ಧ್ಯಾನಮುದ್ರೆಯ
ಕಳಶ ಲಕ್ಷದ ಯೋಗಮಾರ್ಗದ
ಕುಳವ ಬಲ್ಲವನಲ್ಲ ವಿಶ್ವಬ್ರಹ್ಮ ಕೇಳೆಂದ ॥ ॥ ೧೫ ॥

ಚಂದ್ರಮಂಡಲ ಸೂರ್ಯಮಂಡಲ
ಸಾಂದ್ರ ಧ್ರುವಪಥ ತಾರಗಣವ ಫ
ಣೀಂದ್ರಭೋಗ ಮಹೇಂದ್ರವೈಭವ ಸರ್ವಸಡಗರವ ।
ಆಂಧ್ರ ಪಾರ್ಷಿ ಸುಭಾಷಿ ಲಿಖಿತವ
ಮಂದ್ರ ಮಧ್ಯಮ ತಾರಕವ ಕಲ
ಸಾಂದ್ರ ಸಮರಸರಾಗ ಗಾನವೆ ಶಿಲ್ಪ ಶಿಕ್ಷೆಗಳು ॥ ॥ ೧೬ ॥

ಶ್ರೀ ಮನೋರಥ ಜಂಬು ದ್ವೀಪದ
ಹೇಮಶೈಲಶಿರಃಸ್ಥಲದ ಮಹ
ಹೇಮಮಯ ನವರತ್ನಗೆಲಸದ ಕೋಟೆ ಕೊತ್ತಳವೆ ।
ಸೋಮಸೂರ್ಯರ ವೀಧಿ ಗೋಪುರ

ಕಾಮಪಿತನಜನಗರ ದಿವಿಜಲ
ಲಾಮವೆನೆ ಕೈಲಾಸಪುರವತಿ ನೂತ್ನತರವೆಂದ ॥ ॥ ೧೭ ॥

ಬೆಡಗಿ ನೀನಹುದಹುದಲಾ ನೀ
ಹಿಡಿದ ಕಾರ್ಯ ಪ್ರಸಿದ್ಧಿ ಶ್ರುತಿಮತ
ವಡಸು ಮುಂದಣ ಕೆಲಸಗತಿಗಳನೆಂದಡಾಕ್ಷಣವೆ ।
ಮೃಡ ನಿರೂಪವ ಧರಿಸುತಲಿ ಜಗ
ದೊಡೆಯನುಂಘ್ರಿದ್ವಯಕೆ ಮಯಪೊಡ
ಮಡುತ ಸ್ತುತಿಸುತ ಕೈಮುಗಿದು ತೊರಗಿದನು ಕೇಳಣುಗ ॥ ॥ ೧೮ ॥

ಆರ್ಥಿಜನರಾನಂದ ಜಯಹರ
ಮೂರ್ತಿ ಮೂವರ ಪಡೆದ ಜಯ ಪರ
ಮಾರ್ಥಿಕರ ಪ್ರಾಣಾಗ್ರ ಪರಶಿವ ಶಕ್ತಿ ಷಟ್ಚಕ್ರ ।
ವರ್ತಿ ಷಟ್ಸ್ಥಲ ಪ್ರಭುವೆ ಜಯ ಶಿವ
ಕೀರ್ತಿಗಭಿಮುಖವಸ್ತು ಜಯ ಚ
ತ್ಸಾರ್ಥಿ ವಿಶ್ವಬ್ರಹ್ಮ ಕುಲಗುರು ಸ್ವಾಮಿ ನಮೊಯೆನುತ ॥ ॥ ೧೯ ॥

ಕುಲಗುರುವ ಕೊಂಡಾಡಿ ಹರುಷದಿ
ನೆಲನ ಚೌಕವ ಮಾಡಿ ಸೂತ್ರಿಸಿ
ಹಲಬಗೆಯ ಶಿಲ್ಪಿಗಳ ಶೋಧಿಸಿ ಶುಭಮೂಹರ್ತದಲಿ ।
ಗೆಲವುದೋರುವ ಕೀಲನರಿವುತ
ನಲಿದು ಮನದಲೆ ಹೆಚ್ಚಿನಗುತವ
ಛಲವ ದಕ್ಕಿಸೊ ಗುರುವೆ ಪರಶಿವನೊ ಶಿವ ಶೀಘ್ರದಲಿ ॥ ॥ ೨೦ ॥

ಎನುತ ಸ್ವಾಮಿಯ ನಾಮಸ್ಮರಣೆಯ
ಮನದೊಳಗೆ ನೆಲೆಗೊಳಿಸಿದವ ತನ
ತನಗೆ ಉತ್ಸಹದಿಂದಲೀಶನ ಮನೆಗೆ ನೇಮಕಲ ।
ಕನಕಮಯ ನವರತ್ನದಿಂದಲೆ
ದಿನತ್ರಯಕೆ ನಿರ್ಮಿಸುವೆನೆಂಬತಿ
ವಿನಯದಲೆ ಯೋಚಿಸಿದ ಶಿಲ್ಪಿಯ ಘನವ ಕೇಳಣುಗ ॥ ॥ ೨೧ ॥

ಕುಂದಣದಲೇರಿಸಿದ ಕೋಟೆಯ
ಸಂದಿಗಿಕ್ಕಿದ ಪಚ್ಚೆ ಹೊಡೆಯ

ಬಿಂದುಗಳೆಯದ ಮುತ್ತಿನಲಿ ತೆನೆ ಹವಳ ಲೋವೆಗಳ ।
ಒಂದಿಸಿದ ವೈಢೂರ್ಯದಾಳ್ವೆರಿ
ಹಿಂದೆ ಗೋಮೇಧಿಕದ ಗಳ ನವ
ಬಂಧವಜ್ರದ್ವಾರ ಗೋಪುರ ಪುಷ್ಯರಾಗಕೃತ ॥ ॥ ೨೨ ॥

ರತ್ನ ಕೀಲಿತ ಕಳಶಗದಗಳ
ಕೆತ್ತಿಸಿದವೈ ಮಾಳಿಗೆಯ ನವ
ನೂತ್ನದೊಯ್ಯಾಪುರಿಯ ಭುವನೇಶ್ವರಿಯನೀಶ್ವರಿಯ ।
ಪತ್ನಿಗತಿಶಯ ಸೆಜ್ಜೆವನೆಗಳ
ಕೆತ್ನೆಗೆಲಸದಲುಪ್ಪರಿಗೆಗಳ
ಯತ್ನಿಕರಿಸಿದನೇಕೊ ಮೂರ್ತಿಯ ನೇತ್ರಕುತ್ಸಹದಿ ॥ ॥ ೨೩ ॥

ತೊಟ್ಟಿ ಚಿತ್ರದದ ತೊಟ್ಟಿ ಸೂತ್ರದ
ತೊಟ್ಟಿ ಬೊಂಬೆಯ ತೊಟ್ಟಿ ದರ್ಪಣ
ತೊಟ್ಟಿ ಪ್ರಾಣದ ತೊಟ್ಟಿ ಮಂತ್ರದ ತೊಟ್ಟಿಯನಿತಗಳ ।
ತೊಟ್ಟಿ ರುದ್ರಾಕ್ಷಿಗಳ ರತ್ನದ
ತೊಟ್ಟಿ ನವರಂಗದ ಮಹಾಘನ
ತೊಟ್ಟಿ ಸಾಂದ್ರವಿಲಾಸ ನಾಟಕಶಾಲೆ ಶೃಂಗಾರ ॥ ॥ ೨೪ ॥

ಬೊಕ್ಕಸದ ತೊಟ್ಟಿಗಳ ಗೌರಿಯ
ಮಕ್ಕಳಾಡುವ ತೊಟ್ಟಿವೋದುವ
ಲೆಕ್ಕದನುಭವ ತೊಟ್ಟಿ ಮಂಟಪಗಳನ್ನು ನಿರ್ಮಿಸಿದ ।
ಚೊಕ್ಕ ಚಿನ್ನಗಳಿಂದ ಸೋಸಿದ
ಚೊಕ್ಕ ಬೆಳ್ಳಿಗಳಿಂದ ರತ್ನಗ
ಳಿಕ್ಕಿ ಕೆತ್ತಿದನೊಂದು ಶಯನಾಲಯವ ಪರಶಿವಗೆ ॥ ॥ ೨೫ ॥

ಓಲಗದ ಚಾವಡಿ ವಸಂತದ
ಮಾಲ ನಿರ್ಮಿಸಿ ನಗುತ ಸ್ಥಾನದ
ಸಾಲೆ ಜಳಕದ ತೊಟ್ಟಿ ಭೋಜನ ಶಾಲೆ ರಾಣಿಯರ ।
ಮೇಲು ಧವಳಾರಗಳ ತ್ರೈಜದ
ಪಾಲನೆಯ ಓಲಗ ಹಜಾರವ
ಮೇಲು ಮೇಲಿದು ಹೊಸತು ಹೊಸತೆನೆ ಕಳಶವೇರಿಸಿದ ॥ ॥ ೨೬ ॥

ಆನೆ ಮಹಲನು ಕುದುರೆ ಲಾಯವ
ಸೇನೆ ಚಾವಡಿ ರಥದ ಮನೆಗಳ
ಜ್ಞಾನಶಾಲೆಯನಮೃತ ಮಹಲನು ಆಯುಧಾಲಯವ ।
ಮಾನವರ ದಾನವರ ದಿವಿಜರ
ಸ್ಥಾನಸ್ಥಾನಾಶ್ರಯವನೆತ್ತಿದ
ಗಾನಮೂರ್ತಿಯ ಶಿಷ್ಯ ವಿಶ್ವಬ್ರಹ್ಮ ಕೇಳೆಂದ ॥ ॥ ೨೭ ॥

ಸ್ವಾಮಿಯರಮನೆ ಬಳಸಿ ಹೂವಿನ
ಸ್ತೋಮ ಸರವಲೆ ಕುಚ್ಚು ರನ್ನದ
ಧಾಮ ನವರತ್ನಗಳ ತೋರಣ ತಳಿಗೆ ದರ್ಪಣದಾ ।
ನೇಮಿಸಿದ ನವಕಂಠಭಾರಣೆ
ರಾಮಮಣಿ ಸುರಧೇನು ಪರುಷಭಿ
ರಾಮ ಸುರಕುಜವಮೃತ ಸರಸಿಯ ಶುಕಪಿಕಾಳಿಗಳ ॥ ॥ ೨೮ ॥

ಇಂದುಧರನರಮನೆಯ ಸುತ್ತಲಿ
ನಂದವನಗಳ [೧][ತೆಪ್ಪ][೧] ಗೊಳಗಳ
ನಂದ್ಯವರ್ತವ ನಾಗಸಂಪಿಗೆ ನಾನ ವೃಕ್ಷಗಳ ।
ಕುಂದ ಮಲ್ಲಿಗೆ ಮೊಲ್ಲೆ ಮುಡಿವಳ
ಗಂಧ ಚಂದನ ಲಾಮಚಂಗಳ
ಸಿಂಧುವಾರದ ವನವು ಕಸ್ತುರಿ ಮರುಗ ಹೂದೋಟ ॥ ॥ ೨೯ ॥

ಕಮಲ ಕುಮುದವ ವಿಮಲ ಸರಸಿಯ
ಸಮರಸದ ಶ್ರೀಗಂಧ ಮಡುಗಳ
ತಮ ತಮಗೆ ಕಂಪೆಸೆವ ಕಸ್ತುರಿ ಮೃಗದ ಹಂಸೆಗಳ ।
ಪ್ರಮಥರನುಭವಮಂಟಪಂಗಳ
ಕ್ರಮದಿ ಷಟ್ಸ್ಥಲಬ್ರಹ್ಮಿಗಳ ಮಠ
ದ್ಯುಮಣಿ ಕೋಟಿಪ್ರಕಾಶ ಸಿಂಹಾಸನ ನಿರ್ಮಿಸಿದ ॥ ॥ ೩೦ ॥

ಕಸ್ತುರಿಯ ಸಾರಣೆಯ ಕುಂಕುಮ
ದೊಸ್ತು ರೇಖೆಯ ಸಕಲಪುಷ್ಪ ಫ

೧–೧ ರೆಪ್ಪೆ (ಮೂ)

ಲಸ್ಥ ಕುಪ್ಪಿಗೆ ಕುಚ್ಚು ಚಪ್ಪರ ಕುರುಜ ಮೇರುವೆಯ ।
ವಿಸ್ತರಿಸಲಳವಲ್ಲ ವಲ ಪರ
ವಸ್ತುವಿನ ಸಿಂಹಾಸನಕ್ಕೆ ನ
ಮಸ್ತೆನುತ ಶೃಂಗರಿಸಿದನು ಚಮತ್ಕಾರದಲಿ ಶಿಲ್ಪಿ ॥ ॥ ೩೧ ॥

ಅಲ್ಲಿ ಚತುರ್ವಿಧ ಗುರುಗಳಾಶ್ರಮ ।
ವಲ್ಲಿ ಶರಣರ ಮಠ ಮಹಾಯತಿ
ಗಲ್ಲಿ ನೆಲೆ ಯೋಗಿಗಳ ಸ್ಥಾನವು ವಿರತರಿಗೆ ಗವಿಯು ।
ಅಲ್ಲಿ ಸದ್ಭಕ್ತರಿಗೆ ಮಂದಿರ
ಮಲ್ಲಿಗೆಯ ಪೂದೋಟ ಮಧ್ಯದ
ಲಲ್ಲಮಪ್ರಭು ತಾನೆ ಚೀಲಳಸ್ವಾಮಿ ಮಂಟಪವು ॥ ॥ ೩೨ ॥

ಪರಶಿವನ ಹೃತ್ಕಮಲ ಮಧ್ಯದ
ಲಿರುವ ಚಿತ್ತಿನ ಕಳೆಯೆ ಶೀಘ್ರದಿ
ಹೊರಗೆ ಮೂರ್ತಿಯ ಧರಿಸಿ ಚೀಲಳಸ್ವಾಮಿಯೆಂದೆನುತ ।
ಕರೆದರಾಕ್ಷಣ ಗೌರಿ ಶಂಕರ
ಹರಗಣಂಗಳು ಶರಣಷಟ್ಸ್ಥಲ
ಧರೆಯಲಿವ ಮಹಪುರುಷನೆನುತಲೆ ಪಟ್ಟಗಟ್ಟಿದರು ॥ ॥ ೩೩ ॥

ಹರನಿರೂಪಣೆ ಗುರುಗಳಪ್ಪಣೆ
ಪರಮಷಟ್ಸ್ಥಲ ಶರಣರೊಪ್ಪಿಗೆ
ಚರ ಮಹೇಶ್ವರ ಪ್ರೀತಿ ಚೀಲಳಸ್ವಾಮಿ ಗುರುವೆಂದು ।
ಧರಣಿಗಿಲ್ಲಿಗೆ ಬರುತ ಹೋಗುತ
ಚರಿಸುತಿರಲದ ಕಂಡ ಶಿಲ್ಪಿಯ
ವಿರತಕುಲಶಿರೋಮಣಿಯೆನುತ ಸಿಂಹಾಸನವ ರಚಿಸಿ ॥ ॥ ೩೪ ॥

ಮರ್ತ್ಯಲೋಕದ ಶರಣರಿಗೆ ಶಿವ
ತತ್ವಬೋಧೆಯನರುಹಿದಾಕ್ಷಣ
ಕತ್ತವರ ಕಣ್ಮನಕೆ ಕಾಣಿಸದಂತೆ ಬಯಲಾಗಿ ।
ಹತ್ತಿ ಊರ್ಧ್ವಕೆ ಸಿದ್ಧರಾಮನ
ವರ್ತಮಾನದಿ ನಮ್ಮ ದರ್ಶಿಸಿ
ಚಿತ್ರದನುಭಮಂಟಪದಿ ಶಿವಯೋಗದಲ್ಲಿಹನು ॥ ॥ ೩೫ ॥

ಎಂದು ಪಾರ್ವತಿ ಪ್ರಮಥ ಶಿವಗಣ
ವೃಂದ ಷಟ್ಸ್ಥಲ ಸಾಂಪ್ರದಾಯದ
ನಂದಿಕೇಶ್ವರ ವೃಷಭ ಯೋಗಾಚಾರ್ಯ ನಿಜಸಭೆಗೆ ।
ಕಂದುಗೊರಲ ನಿರೂಪ ವಿಹಪರ
ದ್ವಂದ್ವ ಸದ್ಗುರು ಪೀಠಕವ ಪ್ರಭು
ವೆಂದು ಕೊಂಡಾಡಿದರು ಚೀಲಳಸ್ವಾಮಿ ಘನತರವ ॥ ॥ ೩೬ ॥

ಅಮರರಾಲಯ ಕೋಟಿಚಕ್ರದ
ಪ್ರಮಥನಿಳಯವೆ ಪೀಠ ಷಟ್ಸ್ಥಲ
ವಿಮಲ ಶರಣರ ಮಠದ ಕೇರಿಯ ಚೌಕಮಧ್ಯದಲೆ ।
ಉಮೆಯ ಕಾಂತನ ರಾಜಧಾನಿಯೊ
ಹಿಮನಗಾತ್ಮಜೆ ಮುಖದ ಮುಕುರವೊ
ಕಮಲಕಾಂತೆಯ ಕೈಯ ಕಳಶವೊಯೆನೆ ವಿರಾಜಿಸಿತು ॥ ॥ ೩೭ ॥

ಭಕ್ತಿಭಾವೆಯೊ ಕೀರ್ತಿಕಾಂತೆಯೊ
ಮುಕ್ತಿಮಡದಿಯೊ ಜ್ಞಾನಬಲಕ್ರಿಯ
ಶಕ್ತಿಯೋ ಪರಶಕ್ತಿಯೋ ಚಿಚ್ಛಕ್ತಿಯೋ ಆದಿ ।
ಶಕ್ತಿಯೋ ಸದ್ಗುಣವೊ ಶಾಂತಿ ಸು
ಶಕ್ತಕಳೆಯೊಬ್ಬುಳಿಯೊ ಶಾಂಭವ
ಶಕ್ತಿ ಶಂಕರಿ ಗೌರಿಯರಮನೆ ಥಳಥಳಿಸಿತಣುಗ ॥ ॥ ೩೮ ॥

ಶೈವಪುರುಷನ ಶಿಖಿಯ ರತ್ನವೊ
ಶೈವಕಾಂತೆಯ ಮುಖದ ತಿಲಕವೊ
ಕೈವಲ್ಯ ರಮಣನ ಕಿರೀಟವೊ ಷಟ್ಸ್ಥಲದ ಪಟವೊ ।
ಶೈವಮಾತೆಯೊ ಶಬ್ದಬ್ರಹ್ಮವೊ
ಐವಳಿಯೊ ಶಾಂಭವಿಯ ಪುತ್ರರ
ಮೈವೆಳಗೊ ಸಂಗಮವೊ ಕಾಶಿಯೊ ಶ್ರೀಗಿರಿಯೊ ಸಿರಿಯೋ ॥ ॥ ೩೯ ॥

ದ್ವಾರ ನಾಲ್ಕಕೆ ಕಾವಲಿಟ್ಟನು
ವೀರಗಣ ಋಗ್ವೇದ ಪುರುಷರ
ಸೇರಿಸಿದನೆರಡಕ್ಕೆ ತಾನೆಜುರ್ವೇದ ಶರಣರನು ।
ಧೀರ ಪ್ರಮಥರ ಸಾಮವೇದವ

ಮೂರನೆಯ ಬಾಗಿಲ್ಗೆ ಚಾಚಿದ
ದಾರುಕರ ರೇಣುಕರಥರ್ವಣ ಚೌಕಕಿಕ್ಕಿದನು ॥ ॥ ೪೦ ॥

ಧರೆಗೆ ಧರ್ಮವ ಹರಿಗೆ ಹರುಷವ
ಸರಸಿಜಾತಗೆ ವಾಗ್ವಿಲಾಸವ
ಸುರಪತಿಗೆ ಸೌಂದರ್ಯಕಾಯವ ಗುರುವಿಗುತ್ಸಹವ ।
ಶರಧಿಗತಿ ಗಂಭೀರತೆಯ ಸುರ
ಗಿರಿಗೆ ಧೈರ್ಯವ ಮೂರುಲೋಕದ
ವಿರತರಿಗೆ ವಿರಲೆಯನೆ ಚೀಲಳಸ್ವಾಮಿ ಪಾಲಿಸಲಿ ॥ ॥ ೪೧ ॥

ಫಾಲಲೋಚನ ಶಿವೆಗೆ ನಂದಿ ವಿ
ಶಾಲ ಪ್ರಮಥರ ಸಭೆಗೆ ಪ್ರಭುವರ
ನೀಲಲೋಚನ ವೃಷಭನಿಗೆ ಪೂರ್ವಾಣಿಯ ನಿರೂಪ ।
ಬಾಲ ಹರಪುರ ಶ್ರೀಗಿರಿಯ ಸುವಿ
ಶಾಲ ಷಟ್ಸ್ಥಲತಿಲಕ ತತ್ವ ಸ
ಕೀಲ ಸದ್ಗುರು ಬಸವಪ್ರಭು ವ್ರತಶೀಳ ಸುತಗೊರೆದ ॥* ॥ ೪೨ ॥

❖❖

---

* ಇತಿ ನವಮ ಸ್ಕಂಧ ನಿರೂಪಣಣ ಅಂತು ಉಭಯ ಪದಗಣನೆ ೩೭೬ ಕ್ಕಂ ಮಂಗಳ ಮಹಾಶ್ರೀ ॥

ದಶಮ ಸ್ಕಂಧ

ರಾಗ : ಮಧ್ಯಮಾಧವಿ

ಶಾಂಭವನ ಶಾಂಭವಿಯ ಮಂಟಪ
ಸಂಭ್ರಮವನರುಹೆಂದು ಸದ್ಗುರುಪ
ದಾಂಬುಜಂಗಳಿಗೆರಗಿ ಬೆಸಗೊಳಲೊರೆದ ಗುರು ಸುತಗೆ ॥

ಹಮ್ಮಿನಿಂದಲೆ ಹತ್ತು ಪರಿವದ
ಸುಮ್ಮನೇ ಹೊದ್ದಲೆಯ ನೀಗಿದ
ಬೊಮ್ಮ ಖಗಪತಿ ತಿಮ್ಮ ವರಹಗಳಾಗಿ ನೆಗೆದಗಿದು ।
ನಿಮ್ಮ ಪಾದವ ಕಾಣಲಾರದೆ
ತಮ್ಮ ತಾವೇ ಹೆಣಗಲಿಬ್ಬರ
ಸಮ್ಮುಖದಲುರಿದೆದ್ದ ಶಂಕರ ಸಲಹು ಮೂಜಗವ ॥ ॥ ೧ ॥

ಷಟ್ಸ್ಥಲ ಪರಬ್ರಹ್ಮ ಶಾಂಭವ
ಷಟ್ಸ್ಥಲ ಪರಂಜ್ಯೋತಿ ಶಂಕರ
ಷಟ್ಸ್ಥಲದ ಚಿನ್ಮೂರ್ತಿ ಷಟ್ಸ್ಥಲಚಕ್ರವರ್ತಿ ನಮೊ ।
ಷಟ್ಸ್ಥಲ ಸುವರ್ಣಾಬ್ಜ ಭಾಸ್ಕರ
ಷಟ್ಸ್ಥಲಸುಧಾಂಬುಧಿಗೆ ಚಂದ್ರಮ
ಷಟ್ಸ್ಥಲದ ಗುರುಮೂರ್ತಿ ಚೀಲಲಳಸ್ವಾಮಿ ಶರಣಾರ್ಥಿ ॥ ॥ ೨ ॥

ಉತ್ತಮೋತ್ತಮರಿಂಗೆ ಉಚಿತವ
ನಿತ್ತು ಮನ್ನಿಪರಿಂಗೆ ಉಣ್ಣುತ
ತುತ್ತ ಪರರಿಗೆ ನೀಡುವವರಿಗೆ ತೂರ್ಯಭಕ್ತರಿಗೆ ।
ಚಿತ್ತನಿರ್ಮಲರಿಂಗೆ ಚಿಂತೆಯ
ನುತ್ತರಿಪ ಹಿರಿಯರಿಗೆ ಸದ್ಗುರು
ವೃತ್ತಿಯುಳ್ಳರಿಗೊರೆವುದೀ ಷಟ್ಸ್ಥಲಶಿವಾಯಣವ ॥ ॥ ೩ ॥

ಬಣಗರಿಗೆ ಭವಿಗಳಿಗೆ ಭಕ್ತರ
ನಣಕಿಸುವರಿಗೆ ಗುರುಗಳಂಘ್ರಿಗೆ
ಮಣಿಯದವರಿಗೆ ಮಹತು ಪುರುಷರ ತೃಣಕರಿಸುವರಿಗೆ ।
ಗುಣರಹಿತರಿಗೆ ಗುಣಿಗಳೊಳಗವ
ಗುಣವನೆಣಿಸುವ ಕುಹಕರಿಗೆ ಬಹು
ಕ್ಷಣಿಕರಿಗೆ ಬೋಧಿಸದಿರೀ ಷಟ್ಸ್ಥಲಶಿವಾಯಣವ ॥ ॥ ೪ ॥

ರಾಜಶೇಖರ ರಾಣಿ ನಂದಿ ಸ
ಹಾಜ ಶರಣರ ಸಭೆಗೆ ಪ್ರಭು ವೃಷ
ರಾಜನಿಗೆ ಬೋಧಿಸಿದ ಪೂರ್ವಾಣಿಯಲಿ ತ್ರೈಜಗಕೆ ।
ಸೋಜಿಗದ ಹರಪುರದ ಶ್ರೀಗಿರಿ
ರಾಜ ಷಟ್ಸ್ಥಲಪೀಠ ಸದ್ಗುರು
ಭೂಜ ಬಸವಪ್ರಭು ಕುಮಾರನಿಗೊರೆದ ಸೂತ್ರವಿದು ॥ ॥ ೫ ॥

ಪಿಂಡಬ್ರಹ್ಮಾಂಡಗಳ ಪ್ರೇರಿಸಿ
ಕಂಡು ಕೇಳಿದ ನಿಜವ ಕಲ್ಪಿಸಿ
ತಂಡ ತಂಡದ ನಾಯರೂಪಿನ ಸ್ಥಾನವನು ಸ್ಥಾಪಿಸಿ ।
ಹಿಂಡು ದೈವದ ಗಂಡ ಪರಶಿವ
ತಾಂಡವೇಶ ವಿರಾಟಪುರುಷಗೆ
ದಂಡವಿಕ್ಕಿ ಪರಾಕು ಬಿನ್ನಹವೆಂದು ಕೈಮುಗಿದು ॥ ॥ ೬ ॥

ಅಪ್ರತಿಮ ಆನಂದಬ್ರಹ್ಮನೆ
ನಿಃಪ್ರಪಂಚ ನಿರಂಜನಪ್ರಭು
ಸುಪ್ರಕಾಶನೆ ಶುಭದ ಪುಂಜವೆ ಸುಖದ ಸಂದಣಿಯೆ ।
ಕರ್ಪುರಾಂಗನೆ ಕರುಣಿ ದೇವನೆ
ತಪ್ಪು ತಡೆಯೇ ಸೇರ್ದಡೆನ್ನನು
ಒಪ್ಪಿಕೊಳುತಿಹ ಒಡೆಯ ಸಲಹೆಂದೆರಗಿ ಕೀರ್ತಿಸಿದ ॥ ॥ ೭ ॥

ಸ್ತೋತ್ರಕೃತಘನ ವಿಶ್ವಕರ್ಮಸು
ಪುತ್ರ ಬಾರೋ ಎಂದು ಶಿಲ್ಪಿಯ
ಸೂತ್ರಸೃಷ್ಟಿಯ ಕೀಲ್ಗಳಸದಳ ನಿಗಮಗೋಚರವೊ ।
ನೇತ್ರ ಸಂಜ್ಞೆ ಶಭಾಸೆನುತ ಹೊಸ

ಧೋತ್ರ ಮುರಿ ಸರ ಒಂಟಿ ಜೋಡ ಪ
ವಿತ್ರಭೂಷಣ ವೀಳ್ಯ ಸಹ ಕೊಡೆ ನಮಿಸಿ ತೆಕ್ಕೊಂಡ ॥ ॥ ೮ ॥

ಶಿವಪ್ರಸಾದವೆ ಮುಖ್ಯ ಶ್ರುತಿಮತ
ಶಿವಪ್ರಸಾದವೆ ಸೌಖ್ಯವಾಗಮ
ಶಿವಪ್ರಸಾದವೆ ಸರ್ವಪಾಪಕ್ಷಯಕೆ ಕಾರಣವು ।
ಶಿವನ ಶೇಷವೆ ಮೋಕ್ಷ ನೆಲೆವನೆ
ಶಿವನ ಶೇಷವೆ ನಿತ್ಯನಿಜಪದ
ಶಿವನ ನಿರ್ಮಾಲ್ಯಗಳೆ ನಮಗಿದೆ ವಜ್ರಕವಚಗಳು ॥ ॥ ೯ ॥

ವಿನಯದಿಂದಳವಡಿಸಿ ತನ್ನಯ
ವನಿತೆಯರಿಗುಡೆ ತೊಡಿಸಿ ತಪ್ಪದೆ
ದಿನಚರಿಯ ಸೇವೆಗಳನೊಪ್ಪಿಸಿ ಮನವಿಜಯದಿಂದ ।
ತನುಜಭವನಾತ್ಮಜನ ಸುತನಿರೆ
ಮನಸಿಜಾಂತಕ ಕರೆಯ ಕಳುಹಿಸಿ
ಕನಕದ ಹಜಾರದಲೆ ಸಿಂಹಾಸನವ ರಚಿಸೆಂದ ॥ ॥ ೧೦ ॥

ಮನ ಹರುಷದಿಂದವನ ಹರಸುತ
ವಿನಯದಿಂ ತಲೆದಡಹೆ ಶಿವಪದ
ವನಜಯುಗಳಕ್ಕೆರಗಿ ಬುದ್ಧಿ ಹಸಾದ ಸದ್ಗುರುವೆ ।
ಘನತರದ ಕೆಲಸಕ್ಕೆ ಸ್ವಾಮಿಯ
ಕನಕ ಬೆಳ್ಳಿಯ ರನ್ನಗಿರಿಗಳ
ನೆನಗೆ ಅಪ್ಪಣೆಗೊಡಿಸೆನಲ್ಪರಶಿವ ನಗುತ ನುಡಿದ ॥ ॥ ೧೧ ॥

ನಮ್ಮ ಕೇಳುವದೇನೊ ಶಿಲ್ಪೀ
ನಿಮ್ಮ ಕೈವಶ ಸಕಲಭಾಗ್ಯವು
ಬ್ರಹ್ಮಸೃಷ್ಟಿಯ ನಿಮ್ಮ ನಿರ್ಮಿತ ಹೇಮರತ್ನಗಳ ।
ಸುಮ್ಮನೇ ನಾವೆನಲು ನಡುಗುತ
ದಮ್ಮಯ್ಯ ಈರೇಳು ಧರಣಿಯು
ನಿಮ್ಮ ನೋಟ ಕಟಾಕ್ಷಸೂತ್ರದ ಬಲ್ಮೆ ನಮಗೆಂದು ॥ ॥ ೧೨ ॥

ನೀವು ಮಾಡಿದಡಾದುದಂಡವು
ನೀವು ಕಲ್ಪಿಸಲಾಯ್ತು ಸೃಷ್ಟಿಯು

ನೀವೆ ಸರ್ವಜಗಕ್ಕು ಕರ್ತರು ಸಕಲರಿಗು ಗುರುವೊ ।
ನಾವು ಮಾಡುವದೇನು ನಿಜಪದ
ಸೇವಕರು ನಮಗೆಲ್ಲ ಸ್ವಾಮಿಯ
ಸೇವೆಗಳೆ ಪ್ರಾಮುಖ್ಯ ಸ್ಥಿರಸುಖವೆಂದನಾ ಶಿಲ್ಪಿ ॥ ॥ ೧೩ ॥

ತ್ರಿಜಗವೆಲ್ಲವನಾಡಿಸುವ ಪ್ರಭು
ಭಜಕಜನಮನ ಕೊನೆಯಲಿಹ ವಿಭು
ಸುಜನಸುಜ್ಞಾನಿಗಳ ನೇತ್ರದ ಸೂತ್ರದಲ್ಲಿಹನು ।
ಅಜಹರೀಂದ್ರರ ಕುಣಿಸುವಭವನು
ವಿಜಯ ಸೃಷ್ಟಿಯ ಕಿರಿಗೊಡೆಯನು
ನಿಜವ ನೋಡಲಿ ಶಿಲ್ಪಿಯನು ಶಂಕಿಸಿದ ಕೇಳಣುಗ ॥ ॥ ೧೪ ॥

ಬುದ್ಧಿ ಓಜೆಯಲಿದ್ದು ಬದುಕೋ
ಪೆದ್ದ ಬೊಮ್ಮನ ಸೇರಬೇಡವೊ
ಹದ್ದನೇರಿದನತ್ತ ಸುಳಿದಡೆ ಗುದ್ದಿಸದೆ ಬಿಡವೊ ।
ಮುದ್ದೆ ಹಣ ಹೆಚ್ಚಿದಡೆ ಮುಂದಕೆ
ಇದ್ದ ಮಟ್ಟಿನಲಿರದು ಸುಮ್ಮನೆ
ತಿದ್ದಿಕೊಂಬರ ಕಾಣೆ ಸಿಬ್ಬತಿ ನಮಗೆ ಹುಟ್ಟಿದರೆ ॥ ॥ ೧೫ ॥

ಒಂದು ಮುಂದಣ ಭಯವನೆಬ್ಬಿಸಿ
ಬೆಂದವನ ಕಣ್ಬೇನೆಯಿಂದಲಿ
ನೊಂದವನ ನೋಟಗಳ ಸಲೆ ತಿಂದವನ ತಿಸುಳದಲಿ ।
ನಿಂದವನ ಜರೆದೇರಿದವನನು
ಪಂದಲೆಯ ಸಂದಿಕ್ಕಿ ಮೆರೆದನ
ಮುಂದಲೆಯು ಮೂಗಿಲ್ಲದವರನೆ ದೃಷ್ಟಿದೋರಿಸಲು ॥ ॥ ೧೬ ॥

ಘಡಘಡನೆ ನಡುಗುತ್ತ ಶಿಲ್ಪಿಯು
ಬಡವ ನನಗೇಕವರ ಸಂಗಡ
ನಡೆ ನುಡಿಗಳಿಂದೇನು ಲಭಿಸುವುದೆನ್ನ ಸದ್ಗುರುವೆ ।
ಕೊಡುವ ಕೊಡಿಸುವ ಒಡೆಯ ನೀನಿರ
ಲಡವಿಗರ ಹತ್ತೇನು ಎನ್ನನು
ಕಡೆಗು ನೋಡಿಕೊ ಬಿಡದೆ ಸಲಹಿಕೊ ಎಂದು ಕೈಮುಗಿದ ॥ ॥ ೧೭ ॥

ಬೇಕೆಂದು ಬೆದರಿಸಿದೆ ವಲ ನೀ
ಪೋಕನೇನವರಂತೆಯಲ್ಲವೊ
ಜಾಕರಿಗೆ ತಗಲೆರೆದು ಕೊಟ್ಟೆವು ಸೃಷ್ಟಿಯೊಳಿಗವ ।
ಲೋಕಕತಿಹಿತನಾಗೆ ವೇದದ
ಲಾಕಿಗಗ್ಗಳನಾದೆ ಎಚ್ಚರ
ಏಕೋ ದೇವನ ಆಳ್ದ ಸ್ವಾಮಿಯ ನಂಬಿ ಬದುಕೆಂದು ॥ ॥ ೧೮ ॥

ಶರಧಿ ಮಧ್ಯದಿ ಕಮಲ ಕಮಲದ
ಶಿರದಿ ಪೀಠವ ಪೀಠಶಕ್ತಿಯ
ತರಬು ಕಮಠನ ಬೆನ್ನ ದಂತಿಯ ಬಳಸಿ ಮಧ್ಯದಲಿ ।
ಉರಗರಾಜನ ಶಿರದ ಮೇಲೀ
ಧರಣಿಕಳಶವನಿರಿಸಿ ಮರುತನ
ಬರಿಯನಿಕ್ಕುವನಾವನುಂಟಲ ಶಿಲ್ಪಿ ಕುಲತಿಲಕ ॥ ॥ ೧೯ ॥

ಇದರೊಳಗೆ ಬಹುದ್ವೀಪ ಗಿರಿಗಳ
ನಿದರೊಳಗೆ ನವಜಾಂಡ ಶರಧಿಯ
ನಿದರೊಳಗೆ ಬಹುಕೋಟಿ ಪೇಟೆಯ ದುರ್ಗವರ್ಗಗಳ ।
ನಿದರೊಳಗೆ ಮಹರಾಜ ಪ್ರಜೆಗಳ
ನಿದರೊಳಗೆ ನವಭಿನ್ನರುಚಿಗಳ
ನಿದರ ನಡು ಮಧ್ಯದಲೆ ಕನಕಾಚಲವ ನಿರ್ಮಿಸಿದೆ ॥ ॥ ೨೦ ॥

ಆರು ದ್ವೀಪದ ಮಧ್ಯ ದ್ವೀಪದಿ
ಮೇರುವೆಯ ಕೀಲಿಸಿದೆ ಶಿಲ್ಪಿ ಕು
ಮಾರುನಹುದಲ ಮೇರು ಶಿರದಲೆ ಕೋಟೆಯೆಬ್ಬಿಸಿದೆ ।
ಮೂರು ಸುತ್ತಿನ ಕೋಟೆಯೊಳಗೆ ವಿ
ಕಾರದೊಳಿಗ ವರ್ಗ ಪುರ ಗಡಿ
ಕೇರಿ ಗುಹೆ ಗುಡಿ ಗೋಪುರಕೆ ಹೊಸ ಕಳಸವೇರಿಸಿದೆ ॥ ॥ ೨೧ ॥

ಅಮರಮುನಿಗಳ ಪ್ರಮಥ ಶರಣರ
ವಿಮಲ ಕೇರಿಯ ಚೌಕ ಮಧ್ಯಮ
ಲೆಮಗೆ ರಚಿಸಿದೆ ರಾಜಧಾನಿಯ ರತ್ನ ಹೇಮದಲೆ ।
ದ್ಯುಮಣಿ ಶಶಿಕಿರಣಗಳ ಬೆಳಗಿನ

ಉಮೆಯ ಸಾಂದ್ರವಿಲಾಸ ಕೃತಕದಿ
ಕಮಲಸಿಂಹಾಸನವ ರಚಿಸೆಲೆ ಘನ ಹಜಾರದಲೆ ॥ ॥ ೨೨ ॥

ಎನೆ ಹಸಾದವೆನುತ್ತ ಶಿಲ್ಪಿಯು
ಮನದ ಕೊನೆಯಲಿ ಸ್ವಾಮಿ ಪಾದದ
ನೆನಹ ನಿಲಿಸಿದನೇಕಚಿತ್ತವಧಾನ ದೃಷ್ಟಿಯಲಿ ।
ಘನತರದ ಉದ್ಯೋಗವಿದನೊಂ
ದಿನಕೆ ತೀರಿಸಬೇಕು ಸುಮ್ಮನೆ
ದಿನಗಳೆಯಲಪಕೀರ್ತಿ ಬಂದಡೆ ಪರಿಹರಿಪರಾರೊ ॥ ॥ ೨೩ ॥

ದೊಡ್ಡವರ ಕೈಸಂಧಿಯೊಳಿಗ
ಹೆಡ್ಡು ನಡೆದರೆ ಕೇಡು ಮುಂದಕೆ
ಕಡ್ಡಿ ಚಿಟಕೆನಲದನೆ ತಪ್ಪೆಂದಾರಿ ಪರಿಸುವರು ॥
ಅಡ್ಡ ದಡ್ಡೀ ನುಡಿಯ ನುಡಿದಡೆ
ಬಡ್ಡಿಸೂಳೆಯ ಮಗನೆಯೆಂದಡೆ
ಅಡ್ಡಲಾಗುವರಾರೊ ಗುರುವೇ ನೀವೆ ಗತಿಯೆಂದು ॥ ॥ ೨೪ ॥

ಮಾನಗೆಟ್ಟರೆ ಮಾತು ನಿಲ್ಲದೆ
ಹೀನಾಯ ಹಿರಿಯರಿಗೆ ಬಾರದ
ಮಾನಮಾಚಂದ್ರಾರ್ಕ ತಾರವು ಎನ್ನವೈ ವೇದ ।
ಧ್ಯಾನ ಪೂಜಾ ಪಂಚಕುಲಗುರು
ಹಾನಿವೃದ್ಧಿಯೆ ನಿಮ್ಮದೆನುತಲ
ನೂನಮೂರ್ತಿಯ ಚರಣಕಮಲವ ನೆನೆದ ಮನದೊಳಗೆ ॥ ॥ ೨೫ ॥

ತಾಯದಂತೆಯೆ ಬಳಗ ಕಪಿಬಲ
ದಾಯಾದ್ಯರುಪಹತಿಗಳವರಿಗೆ
ನ್ಯಾಯವಲ್ಲಿವರೇನ ಹೇಳಲಿ ಬುದ್ಧಿಯೆನಬೇಕು ।
ಆಯು ಶ್ರೀ ಕೊಡಲುಂಟು ಇವರಿಗೆ
ರಾಯಪಟ್ಟಕ್ಕಿವರೆ ಧನಿಗಳು
ಬಾಯಬಿಡಿಸಲ್ಲೆನುತ ಮೈಕೈ ಕಟ್ಟಿ ನಿಂದಿಹನು ॥ ॥ ೨೬ ॥

ಗಜಮುಖನೆ ಷಣ್ಮುಖನೆ ಭುಜಬಲ
ತ್ರಿಜಗದೊಡೆಯನೆ ನಿಜಕುಮಾರರು

ವಿಜಯವೀರನೆ ಸೊಕ್ಕಿ ನಡೆದರೆ ಸಂದ ನೆಗ್ಗುವನು ।
ಸುಜನ ಶರಣರೆ ಶಿವಸಹಾಯರು
ಭಜಿಸಿದರೆ ಸೌಭಾಗ್ಯವೀವರು
ನಿಜ ತೊಲಗಿದರೆ ನಿಂತ ಮಟ್ಟಲಿ ಸುಲಿಸಿ ಬಿಡುತಿಹರು ॥ ॥ ೨೭ ॥

ಪರಶಿವನೆ ಕರ್ತಾರ ಸೃಷ್ಟಿಗೆ
ಪರಶಿವನೆ ಗುರು ಸರ್ವಲೋಕಕೆ
ಪರಶಿವನೆ ಕುಲದೈವ ಸಕಲಕೆ ಶಿವನೆ ಮನೆದೈವ ।
ಧರಣಿ ಹದಿನಾಲ್ಕಕ್ಕೆ ಈತನೆ
ದೊರೆಯೆನಿಸುತಿಹನೀ ತನುತ್ರಯಕೆ
ಮರಳಿಯುತ್ರವ ನಡೆಸಲಾಜ್ಞೆಯ ಮಾಡಿಸದೆ ಬಿಡನು ॥ ॥ ೨೮ ॥

ಪುಂಡಗಾರನ ಕಣ್ಣ ಮೀಟಿದ
ಅಂಡಿ ಬೊಮ್ಮನ ತಲೆಯನೆತ್ತಿದ
ಚಂಡಿಸಿದ ಪಂಪುಣನ ದೊಂದಿಯ ಕಟ್ಟಿ ಬೇಯಿಸಿದ ।
ಹಿಂಡು ದೈವದ ಗಂಡ ಪರಶಿವ
ಕೆಂಡಗಣ್ಣಿನ ಸ್ವಾಮಿ ಪಾದವ
ಕಂಡು ಬದುಕುವನವನೆ [೧][ಜಾ][೧]ಣನು ಮನವೆ ಕೇಳೆಂದ ॥ ॥ ೨೯ ॥

ವಾಣಿಯೆಂಬಳ ಘ್ರಾಣಹತ ಹರಿ
ರಾಣಿ ಮುರಿದಲೆ ಕೃಂತನಿಂದ್ರನ
ರಾಣಿಯೆಂದರು ಬಿಡದೆ ಮುದ್ರೆಯನೊತ್ತಿಸಿದ ಸುರರ ।
ನಾಣುಗೆಡಿಸಿದ ನಂಬದಮರರ
ತ್ರಾಣಗೆಡಿಸಿದ ಪಿತನ ತಾತನ
ಪ್ರಾಣರತ್ನವ ಕಳೆಯದಾತನೆ ಜಾಣನೆಲೆ ಮನವೆ ॥ ॥ ೩೦ ॥

ತಪ್ಪಿದರೆ ಕೈಕಾಲ ಕಳೆಸುವ
ತಪ್ಪದಿದ್ದರು ಹಲ್ಲ ಕೀಳಿಸುವ
ತಪ್ಪಿ ನಡೆನುಡಿ ಇರಲು ನಾಲಗೆ ಸೋಸಿ ಸೀಳಿಸುವ ।
ಅಪ್ಪ ಅವ್ವಾಯೆನಲು ಬಿಡುವನೆ

೧–೧ ಕಾ (ಮೂ)

ಬೆಪ್ಪು ಬುದ್ಧಿಯ ಬಿಟ್ಟು ಮನವೇ
ಒಪ್ಪದರಿ ಮಹಸ್ವಾಮಿ ಪಾದವ ನಂಬಿ ಬದುಕೆಂದು ॥ ॥ ೩೧ ॥

ಮನಕೆ ಬುದ್ಧಿಯ ಹೇಳುತಿರೆ ಮಯ
ತನುಜಪೀಠನ ಮನದಿ ಜನಿಸಿದ
ಮುನಿಯು ನಾರದ ಬಂದನಲ್ಲಿಗೆ ಕಂಡನವ ಋಷಿಯ ।
ವಿನಯದಿಂದೇನೈದಿರೆಂದನೆ
ತನಯ ನಿನ್ನನು ಕರೆಯ ಕಳುಹಿದ
ನಿನಗೆ ಮನ ಕನಗಿಲ್ಲ ಬ್ರಹ್ಮನ ಮನಸು ನಿಲ್ಲುವದೆ ॥ ॥ ೩೨ ॥

ಮುಖವ ನೋಡದೆ ಅನ್ನ ಸೇರದು
ಮುಖವ ಕಾಣದೆ ನಿದ್ರೆ ಬಾರದು
ಮುಖವ ತೋರಿ ಕ್ಷಣಕೆ ಹೋಗಲಿ ಕರೆದು ತಾರೆಂದ ।
ಸಕಲರಿಗೆ ಸುಕ್ಷೇಮ ಸಂಭ್ರಮ
ಸುಖವೆ ನಿನಗೆಲ್ಲೆನುತ ಚಿಂತಿಸಿ
ಸಖಿಸಹೋದರಿ ಮಾತಪಿತಸುತರಳರೆ ಬಾರೆಂದ ॥ ॥ ೩೩ ॥

ನಾರದನ ವಾಕ್ಯಗಳ ಮನದಲಿ
ಸೇರಿ ಸೇರದ ಹಾಗೆ ಒಳಹೊರ
ಗಾರೈದು ನೋಡಿದನು ಹಿಂದಣ ಮುಂದಣಾಗಮವ ।
ಕಾರಣಾರ್ಥದ ಭೀಕರ ಬಹು
ಭಾರಣೆಯ ಉದ್ಯೋಗ ನಿಲೆ ಕರಿ
ವೀರನಾಜ್ಞೆಯೊ ತಪ್ಪಿದರೆ ಚಿತ್ರಾಜ್ಞೆಯೊ ಕಾಣೆ ॥ ॥ ೩೪ ॥

ಎಂದು ಮನದಲಿ ತಿಳಿದು ನಾರದ
ತಂದೆ ತಾಯಿಗಳಹುದು ಚಿತ್ತಕೆ
ಕಂದಹುದು ಸರಿದಿಲ್ಲ ಈ ನುಡಿ ಗರ್ಭ ಸಂಬಂಧ ।
ಬಂಧು ಬಳಗವು ಗುರುವು ದೈವವು
ಇಂದುಶೇಖರ ನಿಮಗು ನನಗೆಯು
ಎಂದು ಬರುವರೆ ಸಮಯವಾಗದು ಹೋಗು ಕೇಳೆಂದ ॥ ॥ ೩೫ ॥

ಹೆಚ್ಚು ಮಾತಾಡುವರೆಯಸದಳ
ಕಿಚ್ಚುಗಣ್ಣನ ಸೇವೆನೀ ಮನ

ಮಚ್ಚಿದಲ್ಲಿರುಯೆನುತ ನಾರದನಯ್ಯನಿಗೆ ಹೇಳಿ ।
ಹಚ್ಚಿದನು ಬೇಗೆಯನು ಹುಸಿಯನು
ಕೊಚ್ಚಿದನು ಕೊಬ್ಬಿದನು ನಿಮ್ಮನು
ನುಚ್ಚಿಗಿಂ ಕಡೆಯೆಂದನೆಂದನು ನಗುವ ಬ್ರಹ್ಮನಿಗೆ ॥ ॥ ೩೬ ॥

ಹಸುಮಗನ ಮಾತಲ್ಲ ನಾರದ
ಹಸುಕನೆಂಬುದ ಬಲ್ಲ ಬ್ರಹ್ಮನು
ತಸಕಲನೆ ಗಂಟಿಕ್ಕಿ ಕಲಹವ ಬೆಳೆಸದಿರು ಹೋಗೊ
ಶಶಿಧರಗೆ ಶ್ರೀಹರಿಗೆ ನಮಗೆಯು
ಬೆಸುಗೆ ಭೇದವ ಮಾಡಿ ಬಹಳು
ಬ್ಬಸವನರಿದವನಲ್ಲ ಹಿಂದಕೆ ಪ್ರಳಯ ನಿನ್ನಿಂದ ॥ ॥ ೩೭ ॥

ಚೀಟು ನಾರದಗಾದಡೇನತ
ಕೀಟಕವ ನಡೆಸುವದ ಬಿಡುವನೆ
ಮೋಟ ಮುಂಡೇಗಂಡನೆನುತಲೆ ನುಡಿಕೊಳುತ ಹೋದ ।
ಪೋಟ ನಾರದ ಬಂದು ಹೋದನು
ಕೋಟಲೆಗಳಿಲ್ಲೆನುತ ಮಯ ಶಶಿ
ಜೂಟನಪ್ಪಣೆವಿಡಿದು ಕೆಲಸಕೆ ತೊಡಗಿದನು ಮಗನೆ ॥ ॥ ೩೮ ॥

ಸಿರಿಯ ಕ್ಷೀರಾಂಬುಧಿಯ ಸ್ಥಿತಿಯನು
ಧರೆಯ ಸೃಷ್ಟಿಯ ಶ್ರುತಿಯ ವಾಣಿಯ
ಸುರರ ಬಲವನು ಸ್ವರ್ಗಸುಖವನು ಶಚಿಯ ಭೋಗವನು ।
ಹರಿಯಜೇಂದ್ರಾದಿಗಳು ಪಡೆದರು
ಹರನ ನಾಮಸ್ಮರಣೆಯಿಂದಲೆ
ಮರೆಯದಾ ಮಂತ್ರವನೆ ಜಪಿಸಲು ಸರ್ವಜಯವೆಂದು ॥ ॥ ೩೯ ॥

ಒಂದು ಕರದಲಿ ವಜ್ರದುಳಿ ಮ
ತ್ತೊಂದು ಕರದಲಿ ರತ್ನಗೊಡತಿಯ
ನಂದದಿಂದಲಿ ಹಿಡಿದು ತಾಟಿಸೆ ನೆನೆದ ಸೃಷ್ಟಿಗಳು ।
ನಿಂದು ತೋರುವ ಕಾರಣವದೇ
ನೆಂದು ಕೇಳಿದೆಯಾದಡೆಯು ನ
ಮ್ಮಿಂದಲಲ್ಲದು ಸ್ವಾಮಿ ನಾಮಸ್ಮರಣೆ ಬಲ್ಮೆಯದು ॥ ॥ ೪೦ ॥

ಬಾಲಸುಂದರಿ ನಿಳಯದುತ್ತರ
ದೋಲಗದ ಮೈ ಮಾಳಿಗೆಯ ಘನ
ಮೇಲಣಪರಂಜಿಯ ಹಜಾರದ ಮಧ್ಯಸ್ಥಾನದಲೆ ।
ಕೀಲಿಸಿದ ನವರತ್ನ ಪಿಂಡದ
ಮೇಲೆ ಪಚ್ಚೆಯ ಚೌಕಗಲ್ಲಿನ
ಮೇಲೆ ಕನಕದ ಕಂಬ ವಜ್ರದ ಬೋದಿಗೆಯನಿಟ್ಟ ॥ ॥ ೪೧ ॥

ಮೇಲೆ ರನ್ನದ ತೊಲೆಗಳಿರಿಸಿದ
ನೀಲವಲಗೆಯ ಮುಚ್ಚಿ ಮುತ್ತಿನ
ಸಾಲುದೆನೆಗಳಗೈದ ವೈಢೂರ್ಯದಲೆ ವೃಷಭಗಳ ।
ಮೂಲೆಗೆತ್ತಿದ ಹೊಳೆವ ಹವಳದ
ಲೋಲ ಲೋವೆಯ ಸವೆದ ನೆಲೆ ಸುವಿ
ಶಾಲವಾದುದು ಶಿವನ ಶಕ್ತಿಯ ಕಳಶಮಂಟಪವು ॥ ॥ ೪೨ ॥

ಹತ್ತಿಗೆಯ ಸೋಪಾನ ಬೆಳ್ಳಿಯು
ಇತ್ತರದ ಸಿಂಹಗಳೆ ಪುಷ್ಪವು
ಸುಪ್ತ ಪಾಳಿಯೆ ಚಿತ್ರಗೋಮೆಧಿಕದ ಕಿಟಕಿಗಳು ।
ಕೆತ್ತನೆಯಲರಳೆಲೆಯು ಗಂಟೆಯು
ಮತ್ತೆ ಜಂಗಿನ ಸರವು ಗೆಜ್ಜೆಗ
ಳೊತ್ತಿನಲಿ ನವಮೂತ್ನ ಗುಬ್ಬಿಯ ಕಳಶವೇರಿಸಿದ ॥ ॥ ೪೩ ॥

ಐವಳಿಗೆತ್ತಿದ ಹವಳದೆನೆಗಳ
ಆವಳಿಗದಗಳ ನಾಲ್ಕು ಬಾಗಿಲ
ನವರತ್ನದಲೆ ಗೈದ ಚಿತ್ರವಿಚಿತ್ರಗೆಲಸಗಳ ।
ಶಿವನ ಶಕ್ತಿ ಸಿಂಹಪೀಠವು
ಟವಳಿಗವಿಗಳಿಗಳವೆ ವರ್ಣಿಸಿ
ಶಿವನ ನಟ ನಾಟಕವ ತತ್ವವ ಭಾವಿಕನೆ ಬಲ್ಲ ॥ ॥ ೪೪ ॥

ರತ್ನಗಳ ತೋರದನದ ಸರವಲೆ
ನೂತ್ನ ಕುಸುಮ ಸುಬಂಧಗಳ ಬಿಡು
ಮುತ್ತುಗಳ ಕುಂಚಗಳ ಕುಪ್ಪಿಗೆ ಕಳಶಗುಬ್ಬಿಗಳ ।
ಚಿತ್ರಪತ್ರದ ಕದಳಿಗೆಲಸದ

ಸೂತ್ರಬೊಂಬೆಗಳಲ್ಲಿಗಲ್ಲಿಗೆ
ಎತ್ತಿಸಿದ ಜ್ಯೋತಿಗಳ ತತ್ವಸ್ಥಾನ ನೆಲೆನೆಲೆಗೆ ॥ ॥ ೪೫ ॥

ಕರೆಯದೇ ಕೈಗೊಡುವ ಗೊಂಬೆಯ
ಕರೆದು ಮಾತಾಡಿಸುವ ಪ್ರತುಮೆಯ
ಕರೆದು ವರಗಳ ಕೊಡುವ ವಿಗ್ರಹ ಸೂತ್ರ ಪುತ್ಥಳಿಯ
ಹರನ ಗಂಗಾಧರನ ಗೌರೀ
ವರನ ಶಿ¹[ತಿ]¹ ಕಂಧರನ ಶಿವಶಂ
ಕರನ ಪೀಠದ್ವಾರ ನಾಲ್ಕರ ಹೊರಗೆ ನಿಲಿಸಿದನು ॥ ॥ ೪೬ ॥

ಅಣಿಮಾದಿ ಸಿದ್ಧಿಗಳ ಹಾಸಿದ
ಮಣಿಯ ಪದಗಳ ಮೇಲೆ ಕಟ್ಟಿದ
ನೆಣಿಸಬಾರದ ಫಲಪದಂಗಳ ತೆರೆಯ ಹಾಕಿಸಿದ ।
ಗುಣತ್ರಯದ ಸ್ತಂಭಗಳ ಸ್ಥಾಪಿಸಿದ
ಪ್ರಣಮದಾರತಿಯವಕೆ ತುಂಬಿದ
ತ್ರಿಣಯನೇರುವ ಸಿಂಹಪೀಠಕೆ ಶರಣು ಶರಣೆಂದ ॥ ॥ ೪೭ ॥

ಗಂಧಕಸ್ತುರಿ ಭರಣಿ ಪುನುಗಿನ
ಚಂದನದ ಕರ್ಪುರದ ಕರಡಿಗೆ
ಸಂದು ಸಂಧಿಯ ಗೂಡಿಗಿರಿಸಿದ ಹೊಳೆವ ಕನ್ನಡಿಯ ।
ನಂದಿ ಧ್ವಜ ಬಿರುದುಗಳ ಹಿಡಿಸಿದ
ಚಂದವಾದ ಪರಂಗಿ ಪೀಠಗ
ಳಂದಗಳ ಹೇಳುವರ ಕಾಣೆನು ಮಗನೆ ಕೇಳೆಂದ ॥ ॥ ೪೮ ॥

ಆದಿಶಕ್ತಿಯೊ ಆಗಮೋಕ್ತವೊ
ವೇದಪುರುಷರ ಯೋಗ ಶಾಲೆಯೊ
ಸಾಧಕರ ಸಾಯುಜ್ಯ ಗರುಡಿಯೊ ಷಟ್ಸ್ಥಲವೊ ಗೆಲವೊ ।
ನಾದ ಬ್ರಹ್ಮವೊ ನವರಸಾಬ್ಧಿಯೊ
ವಾದಿಗಳ ಹೃತ್ಶಲ್ಯವೋ ಇದು
ಪಾದಲೋಚನ ಪಾರ್ವತಿಯ ಸಿಂಹಾಸನವೊ ಘನವೊ ॥ ॥ ೪೯ ॥

೧-೧ ಲೆ (ಮೂ)

ಶಕ್ತಿಯರ ಸೌಂದರ್ಯಲಕ್ಷ್ಮಿಯೊ
ಭಕ್ತ ನೃಪಭುಜಕೀರ್ತಿಯೋ ಸುವಿ
ರಕ್ತ ಷಟ್ಸ್ಥಲಬ್ರಹ್ಮಿಗಳ ಶಿವಯೋಗ ಮಂಟಪವೋ ।
ರಕ್ತಿರಸ ಸುಜ್ಞಾನ ಪುಂಜವೊ
ಮುಕ್ತಿಪುರುಷರ ಮಣಿಕಿರೀಟವೊ
ಶಕ್ತಿಪರಶಿವ ಪೀಠವೋ ನಿಜಮುಕ್ತರಿಹ ಠಾವೋ ॥ ॥ ೫೦ ॥

ಕಳೆದುಳಿದ ಅಪರಂಜಿ ತಿಟ್ಟವೊ
ಥಳಥಳಿಪ ನವರತ್ನ ಬೆಟ್ಟವೊ
ತೊಳೆದು ಕರಗೆರೆದಿಟ್ಟ ಮೂರ್ತಿಯೊ ಚಿತ್ರದಾರತಿಯೊ ।
ನಳನಳಿಪ ತಾವರೆಯೊ ನದಿಯೋ
ಕೊಳನೊ ಹಂಸನೊ ಶಿವನೊ ಶಕ್ತಿಯೊ
ಬೆಳವಿಗೆಯೊ ಬೆಳಸಿರಿಯೊ ಸಿಂಹಾಸನವೊ ಶ್ರೀ ಘನವೋ ॥ ॥ ೫೧ ॥

ರವಿಶಶಿಗಳನು ನವರಸಗಳನು
ಕವಿ ವಿಸರವನು ಕಾಂತ ಜನರನು
ಭುವನಕೋಶವು ಬುಧ ವಿಶೇಷವ ಕೀರ್ತಿಸತಿ ತಾರಾ ।
ನಿವಹವನು ನಿಗಮವನು ಜರಿವುತ
ಸವೆದ ಶಿಲ್ಪಿಯ ಶಿಶುವೆನುತ ಶಿವ
ಶಿವೆಯ ಬರವನೆ ಬಯಸುತಿರ್ದುದು ಚಿತ್ರಪೀಠವದು ॥ ॥ ೫೨ ॥

ಗಂಗೆಗೌರಿಗೆ ಹರುಷರಸವನು
ಹಂಗಣಪರಿಗೆ ವೀರರಸವ ಗ
ಣಂಗಳಿಗೆ ದಯರಸವ ಸತಿಪತಿಗಳಿಗೆ ಸಮರಸವ ।
ಜಂಗಮಕೆ ವೈರಾಗ್ಯರಸವ ಭು
ಜಂಗನಿಗೆ ನಿರ್ವಿಷರಸವನ
ನಂಗನಿಗೆ ಸುಜ್ಞಾನರಸವನೆ ಕೊಡಲಿ ಶಂಕರನು ॥ ॥ ೫೩ ॥

ವನಕೆ ವಾರ್ಧಿಗೆ ದಿನಕೆ ದಿಕ್ಕಿಗೆ
ಜನಕೆ ಜಾತಿಗೆ ಧನಕೆ ಧಾನ್ಯಕೆ
ಕನಕ ಬೆಳ್ಳಿಗೆ ಖಗತತಿಗಳಿಗೆ ಪಕ್ಷಿಪಶುಗಳಿಗೆ ।
ಮನೆಗೆ ಮಕ್ಕಳಿಗೆಲ್ಲ ಲೋಕಕೆ

ಮನಕೆ ಮಂಗಳ ಸುಖವ ಪಾಲಿಸಿ
ಘನಮಹಾಸುಜ್ಞಾನಿ ಚೇಲಳಸ್ವಾಮಿ ಸದ್ಗುರುವೆ ॥ ॥ ೫೪ ॥

ಮೃಡನು ಗೌರಿಗೆ ನಂದಿ ಪ್ರಮಥರ
ಪಡೆಗೆ ಪ್ರಭು ವೃಷಭನಿಗೆ ಪೂರ್ವದಿ
ತೊಡಗಿ ಬೋಧಿಸಿದಂಥ ಷಟ್ಸ್ಥಲತತ್ವಸೂತ್ರವಿದು ।
ಪೊಡವಿಗಿದೆ ಹರಪುರದ ಪರ್ವತ
ದಡದ ಷಟ್ಸ್ಥಲ ಕರ್ಮ ತ್ರೈಜಗ
ದೊಡೆಯ ಶ್ರೀಗುರು ಬಸವಪ್ರಭು ಬೋಧಿಸಿದ ಶಿಷ್ಯನಿಗೆ ॥ ॥ ೫೫ ॥

❖❖

* ಇಂತಿ ದಶಮ ಸ್ಕಂಧ ನಿರೂಪಣಂ ಅಂತು ಉಭಯ ಪದಗಣನೆ ೪೩೧ಕ್ಕಂ ಮಂಗಳ ಮಹಾಶ್ರೀ ॥

ಏಕಾದಶ ಸ್ಕಂಧ

ರಾಗ : ಸೌರಾಷ್ಟ್ರ

ಮಹಿಮನಿಧಿ ಸದ್ಗುರುವೆ ಬಿನ್ನಹ
ಗೃಹಪ್ರವೇಶದ ವರ್ಣವಿಧಿ ಮಹ ಸ
ನ್ನಹದ ಶಿವಗಣಪರ್ವವೆಂತೆನಲೊರೆದ ಗುರು ಸುತಗೆ ॥

ಅರಿಯದೆಯೆ ಇದಿರಾದ ಕಾಲನ
ಸರಳನೇರಿಸಿ ನಿಂದ ಕಾಮನ
ದುರುಳಿನಲಿ ದೂಷಿಸಿದ ದಕ್ಷನ ತ್ರಿವಿಧ ಹಗೆಗಳನು ।
ಇರಿದು ಶೂಲದಲುರುಹಿ ಬಲ್ಗೊರ
ಳರಿದು ಕುರಿದಲೆಯಿರಿಸಿ ಮೆರೆಸಿದ
ಬಿರುದಿನಗ್ಗಳ ಪುರುಷ ಶಂಕರ ಸಲಹು ಮೂಜಗವ ॥ ॥ ೧ ॥

ಕಂಡು ಕರಗಳ ಮುಗಿದು ಕೀರ್ತಿಸಿ
ದಂಡವಿ[ದ್ದೆ]ರಗಿದರ ಪಾಶವ
ಖಂಡಿಸುತ ತತ್ತ್ವೋಪದೇಶವನಿತ್ತ ತತ್ಕ್ಷಣವೆ ।
ಮಂಡಲತ್ರಯ ಮಧ್ಯಪೀಠದ
ಖಂಡತೇಜೋಮೂರ್ತಿಯನೆ ಕರ
ಪುಂಡರೀಕದಿ ತೋರ್ದ ಚೀಲಲಳಸ್ವಾಮಿ ಗುರುಶರಣು ॥ ॥ ೨ ॥

ತತ್ವಜ್ಞಾನವ ಹೇಳ್ವರಿಗೆ ನಿಜ
ತತ್ವಬೋಧೆಯ ಕೇಳ್ವರಿಗೆ ಪರ

೧–೧ ಬೈ (ಮೂ)

ತತ್ವ ಕರಸ್ಥಲದಿಷ್ಟಬ್ರಹ್ಮದಿ ಮನವನಿಟ್ಟರಿಗೆ ।
ಸತ್ವಗುಣವಂತರಿಗೆ ಶಿವನ ಮ
ಹತ್ವಗಳ ಬಲ್ಲರಿಗೆ ಭಕ್ತಿ ಹಿ
ತತ್ವರಿಗೆ ಬೋಧಿಸುವುದೀ ಷಟ್ಸ್ಥಲಶಿವಾಯಣವ ॥ ॥ ೩ ॥

ಬುದ್ಧರಿಗೆ ಭೂಭಾರಕರಿಗೆಯ
ಬದ್ಧರಿಗೆಯಭಿಚಾರಿಗಳಿಗೆಯ
ಶುದ್ಧರಿಗೆಯಪಾತ್ರರಿಗೆ ಯತಿಗಳನೆ ಹಳಿವರಿಗೆ ।
ಮುದ್ದುಗಾರಗೆ ಮರವೆ ಮನುಜಗೆ
ಸಿದ್ಧಲಿಂಗನ ನೆನೆಯದವರಿಗೆ
ಬಿದ್ದು ಕೇಳ್ವರಿಗರುಹದಿರು ಷಟ್ಸ್ಥಲವಾಯಣವ ॥ ॥ ೪ ॥

ಪಾರ್ವತಿಗೆ ಪರಶಿವನು ನಂದಿಯ
ಖರ್ವ ಪ್ರಮಥರ ಸಭೆಗೆ ಪ್ರಭು ಬಹು
ಪೂರ್ವದಲಿ ವೃಷಭನಿಗೆ ನೀಲಾಂಬ[೧][ಕಿ][೧] ಗೆ ಗಣಸಭೆಗೆ ।
ಉರ್ವಿಗಳ ಅಹ ಹರಪುರದ ಘನ
ಪರ್ವತದ ಷಟ್ಸ್ಥಲಮಹಾಗುರು
ಅರ್ವ ಬಸವಪ್ರಭು ಕುಮಾರನಿಗೊರೆದ ಸೂತ್ರವಿದು ॥ ॥ ೫ ॥

ಶರಣು ಶಾಂಭವ ಶರಣು ಶಾಂಭವಿ
ಶರಣು ಪರಶಿವ ಶರಣು ಪಾರ್ವತಿ
ಶರಣು ಶಂಕರ ಶರಣು ಶಂಕರಿ ಶರಣು ಶಿವಗೌರಿ ।
ಶರಣು ಗಜಮುಖ ಶರಣು ಷಣ್ಮುಖ
ಶರಣು ರುದ್ರಗೆ ಭದ್ರಕಾಳಿಗೆ
ಶರಣು ನಂದೀಶ್ವರಗೆ ಭೃಂಗೀಶ್ವರಿಗೆ ಗಣಸಭೆಗೆ ॥ ॥ ೬ ॥

ಬಹುಪ್ರಕಾರದಿ ಹೊಗಳಿ ತನ್ನಯ
ಸಹಸಗಳ ಬಿನ್ನೈಸಿ ಸ್ವಾಮಿಗೆ
ಸಹಸ್ರದಂಡವನಿಕ್ಕಿ ಸಹಜಾನಂದ ಸದ್ಗುರುವೆ ।

೧–೧ ನಿ(ಮೂ)

ಬಹು ವಿಚಿತ್ರದ ನೂತ್ನಗೆಲಸದ
ಮಹಿಮಪೂಜ್ಯದ ಮಂತ್ರ ರಾಜ್ಯದ
ಸಹಸ್ರದಳ ಮಂಟಪವು ದೇವರ ಪದಕೆ ಸಲಲೆಂದ ॥ ॥ ೭ ॥

ಕಡಲ ಮಧ್ಯದಿ ಕಮಲಪೀಠನ
ಮಡ[1][ಗಿ][1]ಮುಡಿಯಲಿ ಕಮಠನಗ್ರದಿ
ಮಡಗಿ ದಂತಿಯ ನಡುವೆ ಶೇಷನ ನಿಲಿಸಿ ಫಣಿಪತಿಯ ।
ಹೆಡೆಯಲಂಡವಿನಿಟ್ಟು ಮರುತನ
ತೆಡೆಯನಿಕ್ಕಿದೆನಿದರ ಮಧ್ಯದಿ
ನಡೆಸಿದೆನು ಮಹಮೇರು ಶಿರದಲಿ ಕೋಡಿಗಟ್ಟಿದೆನು ॥ ॥ ೮ ॥

ಕೋಟಿಯೊಳಗೆ ಅನಂತಪುರದ
ನಾಟಿಸಿದೆ ಮಹಸ್ವಾಮಿ ವಾಲ್ಯವ
ಮೊಟೆನಿಸಿ ನಿರ್ಮಿಸಿದೆ ದೊಡ್ಡ ಹಜಾರ ಮಧ್ಯದಲೆ ।
ನೋಟಕತಿಶಯ ಹೇಮಮಣಿಮಯ
ಕೂಟ ಸಮರಸ ಕೆಲಸ ಕಳಶ ಪ್ರ
ಪೀಠ ಶೃಂಗರವಾದುದೆಂದಡಿಗೆಡೆದನಾ ಶಿಲ್ಪಿ ॥ ॥ ೯ ॥

ನೀವು ಇದರೊಳಗಿರುವುದೆನುತಲಿ
ನಾವು ಬಿನ್ನಹ ಮಾಡಲೋಸ್ಕರ
ದೇವರೊಪ್ಪಿದರಲ್ಲಿ ಸ್ವಾಮಿಯ ಚಿತ್ತಕೆ ಪರಾಕೆ ।
ನಾವು ನಮ್ಮೊಟ್ಟಿಲ್ಲ ಪಾದದ
ಸೇವಕರು ಸರಿಯಷ್ಟೆ ಮಿಕ್ಕಿನ
ದೇವರಾಕ್ಷಸ ಮನುಮುನಿಗಳೇ ಊಳಿಗದ ಪಟ್ಟು ॥ ॥ ೧೦ ॥

ಮೊದಲ ಬಿನ್ನಹ ಪರಾಕೆ ಪರಶಿವ
ಹದಿನಾಲ್ಕು ಲೋಕಗಳ ಪಾಲಿಪ
ಸದರಿದೇಕೋ ಆಸನಗಳಿವೆ ರಾಜಧಾನಿಯಿದೆ ।
ವಧುಗಳಿರ್ವರು ಸುತರು ಮೂವರು
ಹದುಳದಿಮದಿರಿವೆಲ್ಲ ಸ್ವಾಮಿಯ
ಪದಕೆ ಸಲಲೆಂದಡ್ಡಬಿದ್ದೊಪ್ಪಿಸಿದನಾ ಶಿಲ್ಪಿ ॥ ॥ ೧೧ ॥

೧-೧ ವಿ (ಮೂ)

ಬೈಲನೇ ಬಲಿದಂಡಚೆಂಡನೆ
ಬಿಲ್ಲಾಟದಿಂದಾಡುತಿದ್ದಿರಿ
ಕೈಲಾಸ ಪುರವಾಯ್ತು ಸಿಂಹಾಸನೆ ಸೊಗಸಾಯ್ತು ।
ಶೈಲಜಾತ್ಮಜೆ ಪಟ್ಟದರಸಿಯು
ವೈಲದಿಂದೆ ಸುಪುತ್ರರಾದರು
ಶೈಲರಿಪು ಹರಿಬ್ರಹ್ಮರೆಲ್ಲರು ನಿಮ್ಮ ಸೇವಕರು ॥ ॥ ೧೨ ॥

ಸಕಲರವನು ನಿರ್ಮಿಸಿದೆ ನೀ ಮಹ
ಸಖನಲಾ ನಮಗೆನುತ ಶಂಕರ
ಮಕರ ಕುಂಡಲಗಳನು ರತ್ನಕಿರೀಟ ಪದಕವನು ।
ಸಕಲಾತಿ ಸಾಲುಗಳ ಸರಗಳ
ಸಕಲ ಭೂಷಣ ವೀಳ್ಯಗೊಡಿಸಲು
ಸುಖಮುಖದಲವ ತೆಗೆದು ಶೃಂಗರಿಸಿದನು ನಸುನಗುತ ॥ ॥ ೧೩ ॥

ಗುರುವೆ ಜಯ ನಂಬಿದರ ದಯಸಾ
ಗರವೆ ಜಯ ನವಭಕ್ತಜನಸುರ
ತರುವೆ ಜಯ ನಗವರಸುತೆಯ ಕಡವರವೆ ಜಯ ಕುವರ ।
ಕರವೆ ಜಯ ಪೂಜಾರ್ಥ ಪರಕಾ
ಗರವೆ ಜಯ ಸುಜ್ಞಾನ ಬೋಧೋ
ದ್ಧರವೆ ಜಯ ನಮೋಯೆಂದು ಶಿಲ್ಪಿಯು ಸುಖದಲಿರುತಿರಲು ॥ ॥ ೧೪ ॥

ಅಗ್ನಿಗಣ್ಣ ಗೃಹಪ್ರವೇಶತಿ
ಶೀಘ್ರದಲೆ ಬರಬೇಕು ಇದೆ ಶುಭ
ಲಗ್ನಮೆನುತಲಿ ಸಾರಿದರು ಕೈಲಾಸಪುರ ಜನಕೆ ।
ವಿಘ್ನಹರ ಗಣಪರ್ವವಿಂದೇ
ಪ್ರಾಜ್ಞ ಗಣ[೧][ರೇಳೆ][೧]ಂದು ವಂದಿಸು
ತಗ್ರದಂಬುಲವಿತ್ತು ಭಸಿತವ ಕೊಟ್ಟು ಹೇಳಿದರು ॥ ॥ ೧೫ ॥

ವೀರಶೈವಾಚಾರ ಪುರುಷರು
ನಾರಿಯರು ಶೃಂಗರಿಸಿ ಬಂದರು
ಸಾರಣೆಯ ಕಾರಣೆಯ ಮುತ್ತಿನ ರಂಗವಾಲೆಗಳ ।

೧–೧ ರೆಳ್ಳೆ (ಮೂ).

ಆರತಿಯನಕ್ಷತೆಯ ಗಂಧವ
ಹಾರಮಣಿ ಹೂಮಾಲೆಗಳ ಬಹು
ಪೇರಿಸಿದರು ಸಹಸ್ರ ಮುಖದಲಿ ನೂತ್ನತರವಾಗಿ ॥ ॥ ೧೬ ॥

ಕರೆಸಿ ಗುರುಗಳ ಮೊದಲೆ ಪರಶಿವ
ನರಮನೆಯ ಪುಣ್ಯಾರ್ಚನೆಯನತಿ
ಭರದಿ ತೀರಿಸಿ ವಿದಿತ ಷಟ್ಸ್ಥಲ ತತ್ವಜ್ಞಾನಿಗಳ ।
ಚರಣತೀರ್ಥಗಳಿಂದ ಶಂಕರ
ನರಮನೆಗಳೆಲ್ಲಕ್ಕೆ ಮಂತ್ರ
ಸ್ಮರಣೆಯಿಂದಲೆ ತಳಿದರ ಆಗಮವರಿದ ಪೂರ್ವಿಕರು ॥ ॥ ೧೭ ॥

ಸಕಲ ಶರಣರು ಸಕಲ ಪ್ರಮಥರು
ಸಕಲ ಗುರುಗಳು ಸಕಲ ಭಕ್ತರು
ಸಕಲ ವೇದಾಗಮ ಪುರಾತನ ವಿಧಿಯ ನಡೆಸಿದರು ।
ಸಕಲ ಗಣಕುಲ ಸಖಿಯರೆಲ್ಲರು
ಸಕಲ ಮುತ್ತೈದೆಗಳ ಕಂಡತಿ
ಸಕಲ ನೂತ್ನದ ಶಾಕಪಾಕವ ಮಾಡಿ ಮಡಗಿದರು ॥ ॥ ೧೮ ॥

ಗದ್ದುಗೆಯನಿಕ್ಕಿದರು ಮೃದು ವಾ
ಗಿದ್ದ ಸುಪ್ಪತ್ತಿಗೆಯ ಪೀಠವ
ನುದ್ದಕಿಕ್ಕಿದರೊಂದ ಚೀಲಳಸ್ವಾಮಿಗೆಂದೆನುತ ।
ಶುದ್ಧಚಿನ್ನದ ತಟ್ಟೆ ಬಟ್ಟಲ
ಬುದ್ಧಿಶಾಲಿಗಳಿರಿಸಿದರು ಮಹ
ವೃದ್ಧಚಾರ್ಯರಿಗೆಲ್ಲ ನೂತ್ನದ ಸುಳುಹ ಹಾಸಿದರು ॥ ॥ ೧೯ ॥

ಎಲ್ಲ ಪ್ರಮಥರ ಮಠದ ಮಧ್ಯದ
ಮಲ್ಲಿಗೆಯ ಪೂದೋಟದೊಳಗಿಹ
ಸಲ್ಲಲಿತ ಷಟ್ಸ್ಥಲದ ಸಿಂಹಾಸನದ ಗುರುಕರ್ತೃ ।
ಅಲ್ಲಮನು ಎರಡನೆಯ ಪ್ರಭು ಬಹ
ರಿಲ್ಲಿಹನು ಚೀಲಾಳಸ್ವಾಮಿಯ
ಪಲ್ಲಕಿಯನೇ ಕಳುಹಿ ಕರಯಿಸಿಕೊಂಡ ಪರಶಿವನು ॥ ॥ ೨೦ ॥

ಕೊಟ್ಟರಗ್ಗಣಿ ಹಸ್ತಪಾದಕೆ
ಇಟ್ಟರತಿಶಯ ಯೋಗಪಾದವ
ಮೆಟ್ಟಿ ಚೀಲಳಸ್ವಾಮಿ ನಡೆದರು ಷಟ್ಸ್ಥಲಾಚಾರಿ ।
ದಿಟ್ಟ ಪ್ರಮಥರು ದೀಕ್ಷಗುರುಗಳು
ಪಟ್ಟಣದ ಶಿವಭಕ್ತರೆಲ್ಲರು
ಮುಟ್ಟಿ ಗಣ ಸಭೆಗೆರಗಿ ಕುಳಿತರು ಎಡಬಲಕೆ ಬಳಸಿ ॥ ॥ ೨೧ ॥

ಚಿನ್ನ ರನ್ನದ ನೂತ್ನ ಚಿತ್ರದ
ಕನ್ನಡಿಯ ಮೇಲ್ಕಟ್ಟ ಕಲಶದ
ಉನ್ನತದ ಚೀಲಾಳಸ್ವಾಮಿಯ ಕುಳ್ಳಿರಿಸಿ ಪನ್ನ ।
ಬೆನ್ನಿನಲಿ ಮನುವೊರಗನಿಟ್ಟರು
ಪನ್ನಳಿನಗಳ ತೊಳೆದು ಪೂಜೆಗೆ
ಸನ್ನಹಂಗಳನಿರಿಸಿದರು ಸಕಲೋಪಕರಣಗಳ ॥ ॥ ೨೨ ॥

ಎಡಬಲಕೆ ಶಿವಗಣ ಪ್ರಮಥಪಡೆ
ನಡುವೆ ಚೀಲಳಸ್ವಾಮಿ ಸದ್ಗುರು
ಎಡೆಯಲುಪಕರಣಗಳು ಲಿಂಗಾರ್ಚನೆಯ ನಡೆಸಿದರು ।
ಮಡದಿಯರು ಸಾಂಬ್ರಾಣಿ ಕರ್ಪುರ
ಸುಡುತ ಜಯಮಂಗಳವ ಹೇಳುತ
ಬೆಡಗಿಯರು ನವನೂತ್ನದಾರ್ತಿಯನೆತ್ತಿ ಹರಸಿದರು ॥ ॥ ೨೩ ॥

ಮಂಗಳಂ ಮಹಲಿಂಗಮೂರ್ತಿಗೆ
ಮಂಗಳಂ ಮಹದಾದಿಚಿತ್ತಗೆ
ಮಂಗಳಂ ಮಹವೃಷಭ ಯೋಗಚಾರ‍್ಯಪ್ರಮಥರಿಗೆ ।
ಮಂಗಳಂ ಶ್ರೀ ಗಂಗೆ ಗೌರಿಗೆ
ಮಂಗಳಂ ಗುಹಗಣಪವೀರಗೆ
ಮಂಗಳಂ ಪರಶಿವಗೆ ಚೀಲಳಸ್ವಾಮಿ ಶರಣರಿಗೆ ॥ ॥ ೨೪ ॥

ಮಂಗಳಂ ಮಹರುದ್ರಮೂರ್ತಿಗೆ
ಮಂಗಳಂ ಮಹಮದನಭಸ್ಮಗೆ
ಮಂಗಳಂ ಅನಲಾರ್ಕಚಂದ್ರ ತ್ರಿಲೋಚನಾಂಚಿತಗೆ ।
ಮಂಗಳಂ ಮಹ ವೃಷಭರೊಢಗೆ

ಮಂಗಳಂ ಮಹಲೋಕಪಾಲಗೆ
ಮಂಗಳಂ ಪರಶಿವಗೆ ಚೀಲಳಸ್ವಾಮಿ ಶರಣರಿಗೆ ॥ ॥ ೨೫ ॥

ಮಂಗಳಂ ಷಡ್ಗುಣ ಸ್ವರೂಪಗೆ
ಮಂಗಳಂ ಷಟ್ಸ್ಥಲನಿರೂಪಗೆ
ಮಂಗಳಂ ಶ್ರೀ ವೀರಶೈವ ಸಮಸ್ತಭಕ್ತರಿಗೆ ।
ಮಂಗಳಂ ಪರವಸ್ತುವಾದಗೆ
ಮಂಗಳಂ ಪರತತ್ವಬೋಧಗೆ
ಮಂಗಳಂ ಪರಶಿವಗೆ ಚೀಲಳಸ್ವಾಮಿ ಶರಣರಿಗೆ ॥ ॥ ೨೬ ॥

ವಿಘ್ನವಿಜಯಕೆ ಮುಖ್ಯಷಟ್ಸ್ಥಲ
ದಗ್ರಗಣ್ಯರ ಪೂಜೆಯಿಂದಲಿ
ಶೀಘ್ರದಲೆ ತತ್ಪಾದಪೂಜೆಯ ಮಾಡಿ ವಿಧಿಗೂಡಿ ।
ಉಗ್ರ ಓಂ ನಮೊಯೆಂದು ತೀರ್ಥವ
ಸಂಜ್ಞೆಯಿಂ ಪಡೆದಿರಿಸಿ ನಿಜಗುರು
ಪ್ರಾಜ್ಞಯಿಂ ಕರಸ್ಥಲದ ಮೂರ್ತಿಗೆ ಕೊಟ್ಟು ಸ್ವೀಕರಿಸಿ ॥ ॥ ೨೭ ॥

ನಂದಿಭೃಂಗಿಯು ಪ್ರಮಥಗಣ ಗುರು
ವೃಂದ ಷಟ್ಸ್ಥಲಶರಣ ಸತಿಸುತ
ಸಂದ ಕರಿಮುಖ ವೀರ ತಭದ್ರನು ಭದ್ರಕಾಲಮ್ಮ ।
ಇಂದುಶೇಖರ ಗಂಗೆ ಗೌರಿಯು
ಹಿಂದುಮುಂದಣ ಹಿರಿಯಭಕ್ತರು
ವಂದಿಸುತಲಡಿಗೆಡೆದು ತೀರ್ಥವ ಸಲಿಸಿ ಶರಣೆಯರು ॥ ॥ ೨೮ ॥

ಕಪ್ಪುಗೊರಳನಿಗೆರಗಿ ನೀಡಲು
ಅಪ್ಪಣೆಯ ತಕ್ಕೊಂಡು ಶರಣೆಯ
ರುಪ್ಪುಗಾಯಾದಿಗಳ ಪಚ್ಚಡಿ ಬಜ್ಜಿ ತಾಳದವ ।
ನೆಪ್ಪಮರೆಯದೆ ಭಕ್ಷ್ಯಭೋಜ್ಯವ
ಹಪ್ಪಳವ ಶ್ರೀಗೌರಿಗಂಗೆಯು
ತುಪ್ಪ ತೋಯ್ಗಳ ನೀಡಿದಾಕ್ಷಣ ಶರಣು ಹಾಕಿದರು ॥ ॥ ೨೯ ॥

ಶರಣ ಘಂಟೆಯ ಕೇಳಿ ಷಟ್ಸ್ಥಲ
ಗುರುವೆ ಚೀಲಳಸ್ವಾಮಿ ಸಲಿಲೆನೆ

ಕರಸ್ಥಲದ ಶಿವಲಿಂಗಕರ್ಪಿಸಿ ಒಮ್ಮೆ ಸ್ವೀಕರಿಸೆ ।
ಚರಣಕೆರಗಿ ಪ್ರಸಾದಗೊಂಡರು
ಹರನಿಗರ್ಪಿಸಿ ತತ್ಪ್ರಸಾದವ
ಹರುಷದಿಂ ಸಲಿಸಿದರು ಶರಣರು ಶಿವನು ಸುತಸಹಿತ ॥ ॥ ೩೦ ॥

ವಡೆಯನೊಬ್ಬಟ್ಟುಗಳ ಸುಖಿಗಳ
ಕಡುಬು ಕಜ್ಜಾಯಗಳ ದೋಸೆಯ
ದೃಢದ ಚೆಕ್ಕಲಿ ಮುದ್ದು ಸೋರೆಯ ಕರಜಿಕಾಯಿಗಳ ।
ಬೆಡಗಿಯರು ಬಿಸರುಗೆಯ ಬುಗೆಯನು
ಕೆಡಹಿದರು ಗಾರಿಗೆ ಮನೋಹರ
ವಡಗಿಸುತಲೆರೆಯಪ್ಪ ಹಸ್ತವ ಹಿಡಿದು ಹಿಡಿದರಗಿಂ ॥ ॥ ೩೧ ॥

ಎಸರು ಅನ್ನವ ಹೆಸರ ತೋವೆಯ
ಮೊಸರು ಬೋನವ ಹಾಲು ತುಪ್ಪವ
ರಸವಾಳೆ ಇನಿಮಾವು ಹಲಸಿನ ಹಣ್ಣ ಜೇನುಗಳ ।
ರಸ ರಸಾಯನಗಳನೆ ಹೊಸ ಬಿಸಿ
ಬಿಸಿಯ ಶಾಕವ ಪಾಕವಸ್ತುವ
ಶಶಿಧರನ ಶರಣರಿಗೆ ಶಿವನಿಗೆ ನೀಡಿದರು ನಗುತ ॥ ॥ ೩೨ ॥

ಲೇಹ್ಯಗಳ ಸೀಕರಣೆ ಹುಳಿ ರಸ
ಚೋಷ್ಯಗಳ ಪರಮಾನ್ನ ಪಾಯಸ
ಗ್ರಾಹ್ಯ ವಸ್ತುವ ಕ್ಷೀರಘೃತ ಸಕ್ಕರೆಯ ಖರ್ಜುರವ ।
ಬಾಹ್ಯದಂತರಸ್ವಾಮಿ ತೃಪ್ತಿ ಸ
ದಾಹ್ಯೆಗಾದರೆ ಸೊಗಸಲಾವೋ
ಹಾಯೆನುತ ಸಲಿಸಿದರು ನಲಿವುತ ಪಾನದ್ರವ್ಯಗಳ ॥ ॥ ೩೩ ॥

ತೇಗುತಲೆ ಡರ್‍ರೆಂದು ತಲೆಗಳ
ತೂಗುತಲೆ ಎಡಬಲನ ತಡಕುತ
ಬಾಗುತಲೆ ಕುಕ್ಷಿಗಳ ನೀವುತ ಕರಸ್ಥಲಗಳಿಂದ ।
ಹಾಗೆ ಹಸ್ತವ ತೊಳೆದು ಶೇಷವ
ಬೇಗ ಖಂಡಿತ ಮಾಡೆ ಶರಣರ
ಪೂಗ ಷಟ್ಸ್ಥಲಬ್ರಹ್ಮಿಗಳ ಸಂಭ್ರಮಕೆ ಶಿವ ಗೌರಿ ॥ ॥ ೩೪ ॥

ದಿನಚರಿಯಲೀ ಪರಿಯಲೆಮ್ಮರ
ಮನೆಯಲಿಹ ಷಟ್ಸ್ಥಲದ ಶರಣರು
ಘನಮಹಾತ್ಮರು ಜ್ಞಾನಗುರು ಚೀಲಾಳಸ್ವಾಮಿಗಳು ।
ದಿನಸು ದಿನಸಿನ ಹೊದಕೆ ಹೊದೆವುತ
ಮನಸಿಗಿನಿದಾವುದನೆ ಸಲಿಸುತ
ವಿನಯದಿಂದಿಹುದೆಂದು ಬಿನ್ನಹ ಮಾಡಿದರು ಬಿಡದೆ ॥ ॥ ೩೫ ॥

ಹೊಸನೂತ್ನ ಜವಳಿಗಳ ಸ್ವಾಮಿಗೆ
ಕುಶಲಗೆಲಸದ ಭೂಷಣಂಗಳ
ಶಶಿಧರನೆ ಚೀಲಾಳಸ್ವಾಮಿಗೆ ನಮಿಸಿ ಒಪ್ಪಿಸಿದ ।
ದೆಸೆಯ ದೇಶಿಕರುಗಳ ಪಂಕ್ತಿಗೆ
ಅಸಮ ಷಟ್ಸ್ಥಲಶರಣರೊಟ್ಟಿಗೆ
ನಸುನಗೆಯ ನಂದೀಶ ಪ್ರಥಮಾಚಾರ್ಯ ಸಂತತಿಗೆ ॥ ॥ ೩೬ ॥

ಗಂಧ ಕಸ್ತುರಿ ಪುಣುಗು ವೀಳ್ಯ ಸು
ಗಂಧಕತಿ ಸುಮ ಮಾಲೆಗಳ ನಲ
ವಿಂದ ಲಿಂಗಕೆ ತೋರಿ ಲೇಪಿಸೆ ತಾಂಬುಲವ ಸವಿದು ।
ಮುಂದೆ ಷಟ್ಸ್ಥಲಬ್ರಹ್ಮಿಗಳ ಪಡೆ
ಹಿಂದೆ ಪ್ರಮಥರ ಪೌಜು ಗುರುಗಳ
ವೃಂದ ಚೀಲಳಸ್ವಾಮಿ ಪಾಲಕಿ ನಡೆದುದಾಶ್ರಮಕೆ ॥ ॥ ೩೭ ॥

ದೇವದುಂದುಭಿ ಮೊಳಗಿದವು ಕಣ
ಪೂವಿನಾ ಮಳೆಗರೆದವಾಕ್ಷಣ
ದೇವದೇವಿ ಸುಪುತ್ರರುತ್ಸಹವೇನ ಹೇಳುವೆನೊ ।
ದೇವಗಂಗೆಯು ಗೌರಿಪ್ರಮಥರ
ಭಾವೆಯರು ಗುರುಸತಿಯರೆಲ್ಲರು
ತೀವಿ ಒಂದೇ ಪಂಕ್ತಿಯಲಿ ಶರಣೆಯರು ಸಲಿಸಿದರು ॥ ॥ ೩೮ ॥

ಶರಣರಾರಾಧನೆಗಳಾಗಲು
ಶರಣೆಯರ ಗುರುರಾಣಿವಾಸಕೆ
ತರಳವಳಿಯ ಜವಳಿಗಳ ಭೂಷಣ ವೀಳ್ಯಗಳ ಕೊಡಿಸೆ ।
ಪರಿಮಳ ದ್ರವ್ಯಗಳ ಲೇಪಿಸಿ

ತುರುಬಿಗೇರಿಸಿ ಕುಸುಮಸರಗಳ
ಗಿರಿಜೆ ಕಳುಹಿಸೆ ತೆರಳುತಿರ್ದರು ಹರಸಿ ನಿಜಗೃಹಕೆ ॥ ॥ ೩೯ ॥

ಶೃಂಗರದ ಸೋಜಿಗದ ಸೊಗಸಿನ
ರಂಗುದುಟಿ ರಾಜೀವದಳ ನಯ
ನಂಗಳಂಬುಜಮುಖದ ಮುಗುಳ್ನಗೆ ಮಧುರ ನುಡಿ ಪ್ರಮಥ ।
ರಂಗನೆಯರೊಲೆದಾಡಿ ನಲಿವುತ
ಮಂಗಳಾರ್ತಿಯನೆತ್ತಿ ಗೌರಿಗೆ
ಗಂಗೆ ಗುಹ ಗಣ ರುದ್ರಸ್ವಾಮಿಗೆ ಹರಸಿ ಸಾಗಿದರು ॥ ॥ ೪೦ ॥

ಹರನು ಗೌರಿಯು ಪುತ್ರಮಿತ್ರರು
ಪರಮಗುರು ಚೀಲಾಳಸ್ವಾಮಿಯ
ಶರಣಗಣ ಗುರು ಹಿರಿಯ ಭಕ್ತರ ಪ್ರಮಥರಗ್ರಜರ ।
ಹರುಷದಿಂದಲಿ ಕಳುಹಿದಾಕ್ಷಣ
ತೆರಳಿದರು ತಂತಮ್ಮ ಸ್ಥಾನಕೆ
ಬರುತ ಹೋಗುತಲಿರ್ದರೆಂದಿನ ಹಾಗೆ ಭಕ್ತಿಯಲಿ ॥ ॥ ೪೧ ॥

ಸಾರಿದಾಕ್ಷಣ ಬಂದು ಬಾಗಿಲ
ಸೇರಿ ಕೈಗಳ ಕಟ್ಟಿ ನಿಂದಿಹ
ವಾರಿಜೋದ್ಭ ವಾರಿಜಾಂಬಕ ಸುರಪ ಸುಮನಸರ ।
ನಾರದರ ತುಂಬುರರ ಗರುಡರ
ಓರಗೆಯ ಗಂಧರ್ವ ಖಚರರ
ಸೇರುವೆಗೆ ಮೃಷ್ಟಾನ್ನಪಾನಗಳಿಂದ ದಣಿಸಿದರು ॥ ॥ ೪೨ ॥

ಹೊರಗೆ ದ್ವಾರವ ಕಾಯ್ದು ನಿಂದಿಹ
ಹರಿಯಜೇಂದ್ರಾದಿಗಳ ಒಟ್ಟಿಗೆ
ಸುರರ ನೆರವಿಗೆ ಮನುಮುನಿಗಳಿಗೆ ದನುಜ ಶ್ರೇಷ್ಠರಿಗೆ ।
ಸಿರಿ ಸರಸ್ವತಿ ಶಚಿಯರುಂಧತಿ
ಪರಮಋಷಿದಂಪತಿ ದಿಶಾಧಿಪ
ತರಣಿ ಶಶಿ ಗ್ರಹ ತಾರ ನರ ಫಣಿ ಕುಕೆ ದಣಿಸಿದರು ॥ ॥ ೪೩ ॥

ಸರಳಿಗೆಯ ಶಾವಿಗೆಯ ಗೌಲಿಯ
ಪರಡಿ ಪಾಯಸ ಸೂಸಲುಂಡಿಗೆ

ಪರಿಪರಿಯ ಹೋಳಿಗೆಯ ಹುಗ್ಗಿಯ ಹಣ್ಣುಕಾಯಿಗಳ ।
ಪರಿಮಳದ ಹಪ್ಪಳವ ಸಂಡಿಗೆ
ಎರೆಯಪ್ಪವೋ ತುಪ್ಪ ತಾಳದ
ನೊರೆವಾಲ ಕೆನೆ ಮೊಸರ ಮಜ್ಜಿಗೆ ಎಸರುವನ್ನಗಳ ॥ ॥ ೪೪ ॥

ರೊಟ್ಟಿ ಕಿಚ್ಚಡಿ ಕಟ್ಟಿದನ್ನವ
ನೊಟ್ಟಿದರು ಎದೆಗಿಚ್ಚ ಗೇಣಸನು
ಸುಟ್ಟ ಬದನೆಯ ಕಾಯ ಬಜ್ಜಿಯ ಸುಂಟಿ ಪಚ್ಚಡಿಯ ।
ಘಟ್ಟಿ ತೋವೆಯ ಕೊಟ್ಟಿಗಡುಬನ
ಒಟ್ಟದರು ಎದೆಯುದ್ದ ರಾಶಿಯ
ಕುಟ್ಟಿದರು ರಕ್ಕಸರು ದಿವಿಜಯ ಹೊಟ್ಟೆ ಬಿರಿವಂತೆ ॥ ॥ ೪೫ ॥

ಬೋನವಾಮ್ರವ ತೋಯ ಘೃತವನಿ
ದಾನಿಸಿಕ್ಕಿದರೆಲ್ಲ ಪಂಕ್ತಿಗೆ
ನಾನಾ ಬಗೆತರ ಶಾಕ ಪಾಕವ ಕಸರೆಪಸರೆಗಳ ।
ಜೇನ ಕೊಡಗಳ ಜವಳಿವಡೆಗಳ
ಸ್ಥಾನ ಸ್ಥಾನವ ನೋಡಿ ವಿವರಿಸಿ
ಪಾನ ಪನ್ನೀರೀಂಟಿ ತೇಗುವ ಕೈದೊಳೆದರಣುಗ ॥ ॥ ೪೬ ॥

ಊಳಿಗದ ಜನರಿಂದ ದಿವಿಜರ
ಏಳಿಗೆಗೆ ರಕ್ಕಸರವೊಟ್ಟಿಗೆ
ಭಾಳಲೋಚನ ತೃಪ್ತಿಬಡಿಸಲು ಹೊಗಳಿ ಸೈಗೆಡೆದು ।
ಏಳಲಾದರದಲೆದು ಕೈಗಳ
ಭಾಳತಟದಲ್ಲಿರಿಸಿ ನಗುತಲಿ
ಕಾಳಿಕಾಂತನೆ ಸಲಹೆನುತ ಮಗುಳ್ದೆರಗಿ ನಿಂದಿರಲು ॥ ॥ ೪೭ ॥

ಜವಳಿ ಭೂಷಣ ವೀಳ್ಯದಂದವ
ಕವಿವ ಪರಿಮಳ ಪುಷ್ಪಮಾಲೆಯ
ವಿವರಿಸುತ ಶಾರದೆಗೆ ಲಕ್ಷ್ಮಿಗೆ ಶಚಿಗೆ ದಿಕ್ಪತಿಯ ।
ಯುವತಿಯರ ಕುಲತಿಲಕರುಂಧತಿ
ಶಿವನ ಭಕ್ತನು ಶಿಲ್ಪಿ ಸತಿಯರ
ನಿವಹ ರಂಭೆಯರಾದಿ ದಿವಿಜರ ಕುಲಕೆ ದಣಿಸಿದರು ॥ ॥ ೪೮ ॥

ಭೈರವರ ಸತಿ ಪತಿಗಳಿಗೆ ಪರಿ
ಚಾರಕರ ದಂಪತಿಗಳಿಗೆ ಘನ
ಸೇರುವೆಯ ದೈತ್ಯರಿಗೆ ವಾದ್ಯದ ಮೇಳದೂಳಿಗದ ।
ಪಾರುಪತ್ಯವ ಮಾಡುವವರಿಗೆ
ಭೂರಿ ಸಕಲರ ಮತದ ಜನರಿಗೆ
ಹೀರಿದರು ಮತ್ತುಷ್ಟನೊಂದೇ ಸಾರಿ ದಣಿವಂತೆ ॥ ॥ ೪೯ ॥

ಕೊಡಿಸಿ ವೀಳ್ಯವ ತೊಡಿಗೆ ಜವಳಿಯ
ತೊಡಿಸಿ ತಾ ಪರಿಮಳವ ಕೊರಳಿಗೆ
ಮುಡಿದರು ಪೂಮಾಲೆಗಳ ಮುಡಿತುಂಬ ಶೀಘ್ರದಲೆ ।
ನಡೆಸಿದರು ಅವರವರ ಸ್ಥಾನಕೆ
ಹಿಡಿದರು ಕಹಳೆಗಲ ಪರ್ವದ
ಸಡಗರವನೇನೆಂಬೆ ಶ್ರುತಿ ತತಿಗಳಿಗಗೋಚರವೊ ॥ ॥ ೫೦ ॥

ಶರಣಸತಿಯರ ಕಳುಹಿ ಎರಗಿದ
ಹರಿಯಜರ ಬೀಳ್ಕೊಟ್ಟು ಸುಮನಸ
ನೆರವಿಗಳ ಸಾಗಿಸುತ ದೈತ್ಯರನಿಳುಹಿ ಗಿರಿಸ್ಥಳಕೆ ।
ಪರಿಚರರನಿರಿಸುತ್ತ ದಿನಚರಿ
ಸರದಿಯೊಳಿಗದವರ ಮೊತ್ತದಿ
ಹರನು ಗಿರಿಜೆಯು ಗಂಗೆಪುತ್ರರು ಪೌತ್ರ ಸಹಿತಿರಲು ॥ ॥ ೫೧ ॥

ಶುಭಯೋಗ ಶುಭಕರ ಶುಭಸ್ಥಿತಿ
ಶುಭಲಗ್ನ ಶುಭಘಳಿಗೆ ಶುಭದಿನ
ಶುಭದ ನಕ್ಷತ್ರದಲೆ ಗೃಹಪ್ರವೇಶ ಶುಭವೆಂದು ।
ಶುಭದ ವೇದಾಗಮ ಪುರಾಣವು
ವಿಬುಧರುಗ್ಗಡಿಸಲ್ಕೆ ಬಹುತರ
ಶುಭವೆನುತ ಶೃಂಗರಿಸಿ ಶಿವಸಿಂಹಾಸನವನೇರೆ ॥ ॥ ೫೨ ॥

ಭಕ್ತಿವನಿತೆಯು ಮುಕ್ತಿಕಾಂತೆಯು
ಕೀರ್ತಿರಮಣಿಯು ಜ್ಞಾನಸತಿ ಪರ
ಶಕ್ತಿಯರು ಪರಶಿವನ ಪಾದವ ಕಾಯ್ದುಕೊಂಡಿರಲಿ ।
ಚಿತ್ರಮಂಟಪದಲ್ಲಿ ಗುರುಚರ

ಮೂರ್ತಿಗಳು ಸುಖಮಿರಲಿ ಷಟ್ಸ್ಥಲ
ಚಕ್ರವರ್ತಿ ಚೀಲಾಳಸ್ವಾಮಿಯ ಕರುಣ ನಮಗಿರಲಿ ॥ ॥ ೫೩ ॥

ಪುರದ ಸಿರಿ ಪುರಜನರ ಸಿರಿಗಳು
ಧರಣಿ ಹದಿನಾಲ್ಕರ ಮಹಾಸಿರಿ
ದೊರೆನತದ ಸಿರಿ ದೊಡ್ಡ ಷಟ್ಸ್ಥಲ ಶರಣಜನಸಿರಿಯು ।
ಹರನ ಸಿರಿ ಹರನರಸಿಯರ ಸಿರಿ
ಹರನ ಪುತ್ರರ ಮಿತ್ರರೈಶ್ವರಿ
ಶರಧಿಯನುದಿನ ತುಂಬಿತುಳುಕಲಿ ಗುರುಕಟಾಕ್ಷದಲಿ ॥ ॥ ೫೪ ॥

ಅಕ್ಷಿತ್ರಯನಂಬಿಕೆಗೆ ನಂದಿ ಸ
ಮಕ್ಷ ಶಿವಗಣಸಭೆಗೆ ಪ್ರಭು ಬಹು
ಪಕ್ಷದಲಿ ವೃಷಭನಿಗೆ ನೀಲಾಂಬಕಿಗೆ ಪೂರ್ವದಲಿ ।
ಸಾಕ್ಷತಾ ಹರಪುರದ ಶೈಲ ಸ
ಲಕ್ಷಣದ ಷಟ್ಸ್ಥಲದ ಪೀಠದ
ಮೋಕ್ಷಗುರು ಬಸವಪ್ರಭುವೆ ಸುತಗೊರೆದ ಸೂತ್ರವಿದು ॥* ॥ ೫೫ ॥

❖❖

* ಇತಿ ಏಕಾದಶ ಸ್ಕಂಧ ನಿರೂಪಣಂ ಅಂತು ಉಭಯ ಪದಗಣನೆ ೪೮೭ಕ್ಕಂ ಮಂಗಳ ಮಹಾಶ್ರೀ ॥

ದ್ವಾದಶ ಸ್ಕಂಧ

ರಾಗ : ವರಾಳಿ

ಕಾಮಿತಾರ್ಥದ ಗುರುವೆ ಬಿನ್ನಹ
ಸ್ವಾಮಿ ಶಿಷ್ಯನು ಪೀಠವೇರಿದ
ಸಾಮರ್ಥ್ಯವರುಹೆಂದ ಕಂದನಿಗೊರೆದ ದೇಶಿಕನು ॥

ಶ್ರೀಮದಮರ ಕಿರೀಟ ಸಮನಸ
ಕಾಮಿನೀ ಕಚಮಾಲ ಮಲ್ಲಿಕ
ವ್ಯೋಮ ರವಿಶಶಿರತ್ನದರ್ಪಣ ಜ್ಯೋತಿ ತಾರೆಗಳ ।
ಶ್ರೀಮುಖದ ಶಾರದೆಯ ವದನ ವಿ
ರಾಮ ಕಂಜ ಸ್ವಯಂಭು ಕೀರ್ತಿಲ
ಲಾಮ ಪದನಖನಿಕರ ಶಂಕರ ಸಲಹು ಮೂಜಗವ ॥ ॥ ೧ ॥

ಪರಕೆ ಪರ ಪರತತ್ವ ವಸ್ತುವೆ
ಪರಿಪೂರ್ಣ ಪರಬ್ರಹ್ಮ ಕರ್ಮವೆ
ಪರಶಿವನ ಪರಶಕ್ತಿ ಚಿತ್ಕಳಜ್ಯೋತಿ ನಿಜದಿರವೆ ।
ಶರಣಷಟ್ಸ್ಥಲಶರಧಿ ಚಂದ್ರಮ
ತರಣಿ ಶಶಿಶಿಖಿ ಮಂಡಲಾಶ್ರಮ
ಕರುಣಿ ಸದ್ಗುರುಮೂರ್ತಿ ಚೀಲಳಸ್ವಾಮಿ ಶರಣಾರ್ಥಿ ॥ ॥ ೨ ॥

ಆದ್ಯರಿಗೆ ಆಚಾರಮಾರ್ಗ ಸು
ಬೋಧ್ಯರಿಗೆ ಆರೈದು ಪ್ರಣವ ಸು
ವೇದ್ಯರಿಗೆ ಲಿಂಗಾಂಗಸಮರಸಜ್ಞಾನ ಸತ್ಕ್ರಿಯವ ।
ಸಾಧ್ಯರಿಗೆ ಷಟ್ಸ್ಥಲ ಮಹಾಘನ

ಭೇದ್ಯರಿಗೆ ನಿಃಪ್ರೀತಿ ಚಿತ್ತದು
ಪಾಧ್ಯರಿಗೆ ಬೋಧಿಸುವುದೀ ಷಟ್ಸ್ಥಲಶಿವಾಯಣವ ॥ ॥ ३ ॥

ದುಃಖಜೀವಿಗೆ ದೂರ್ತ ನರನಿಗೆ
ಠಕ್ತ ಭಕ್ತಗೆ ಠವಳಿ ಮನುಜಗೆ
ರಕ್ಕಸ ವೃತ್ತಿಯಲೆ ನಡೆವಗೆ ರಂಪಗರಾರರಿಗೆ ।
ಸೊಕ್ಕಿ ನಡೆವಗೆ ಷಂಡಪುರುಷಗೆ
ಧಕ್ಕಡಿಗ ದಢಿಗರಿಗೆ ಅರಿಯದ
ಮಕ್ಕಳಿಗೆ ಬೋಧಿಸದಿರೀ ಷಟ್ಸ್ಥಲಶಿವಾಯಣವ ॥ ॥ ೪ ॥

ಮೃಢನು ದೇವಿಗೆ ನಂದಿ ಪ್ರಮಥರ
ಪಡೆಗೆ ಪ್ರಭು ವೃಷಭನಿಗೆ ಪೇಳ್ದತಿ
ಸಡಗರದ ಶ್ರೀ ವೀರಶೈವದ ತತ್ತ್ವಬೋಧೆಯನೇ ।
ಪೊಡವಿಯಗ್ಗಳ ಹರಪುರದ ಗಿರಿ
ದಡದ ಷಟ್ಸ್ಥಲ ಸಿಂಹಪೀಠ
ಕ್ಕೊಡೆಯ ಸದ್ಗುರು ಬಸವಪ್ರಭು ಸುತಗೊರೆದ ಸೂತ್ರವಿದು ॥ ॥ ೫ ॥

ಮಿಥ್ಯವಾದಿಗಳೇನ ಬಲ್ಲರು
ನಿತ್ಯಪ್ತಗೆ ತೃಪ್ತಿಯುಂಟೆಲೊ
ಪ್ರತ್ಯಕ್ಷ ಜಂಗಮದ ಮುಖದಲೆ ತೃಪ್ತಿಶಿವಗೆಂಬ ।
ಶ್ರುತ್ಯರ್ಥ ವಾಕ್ಯಪ್ರಮಾಣದಿ
ಸತ್ಯ ಷಟ್ಸ್ಥಲಬ್ರಹ್ಮಿಗಳಿಗತಿ
ಭೃತ್ಯತ್ವದಲೆ ಜಂಗಮಾರ್ಚನೆ ನಡೆವುವೆಡೆವಿಡದೆ ॥ ॥ ೬ ॥

ಸ್ವಯಪದದ ಸ್ಥಿತಿ ಭುಕ್ತಿಮುಕ್ತಿಗೆ
ಸ್ತಯ ಸುಭಕ್ತಿಯೆ ಮಾತೆಯೋ ಗುರು
ದಯ ಪುರಾಗಮ ವಚನ ನುಡಿಯವೆ ಶ್ರದ್ಧೆ ಮೊದಲೆಂದು ।
ಜಯ ಪದವಿ ಶಿವ ಜಂಗಮಾರ್ಚನೆ
ನಯವೆನುತ ಶ್ರೀ ಗೌರಿ ಗಂಗೆಯು
ಭಯಭಕ್ತಿಯಲೆ ನಡೆಸುತಿರ್ದರು ಸ್ವಾಮಿಯಾಜ್ಞೆಯಲೆ ॥ ॥ ೭ ॥

ಮಾಂಗಲ್ಯ ವಸ್ತುವಿಗೆ ನೂತ್ನದ
ಶೃಂಗರವ ಮಾಡಿದರು ಶರಣಗ
ಣಂಗಳೆಡಬಲ ಪ್ರಮಥಪತಿಗಳು ಕುಶಲಗತಿಗಳಲಿ ।
ಭೃಂಗಿನಾಟ್ಯದ ಸೊಗಸು ನಂದಿ ಮೃ
ದಂಗ ಘೋಷದ ಸೊಬಗು ಸ್ವಾಮಿಯ
ನಂಗಕೋಟಿಯ ಹಳಿವ ಚೆಲ್ವಗೆ ಮಗನೆ ಕೇಳೆಂದ ॥ ॥ ೮ ॥

ಕಂಗಳೋ ಕಾರ್ಮಿಂಚೊ ಕುರುಳ್ಗಳೊ
ಭೃಂಗವೋ ಭ್ರೂಲತೆಯೊ ನೊಸಲರೆ
ದಿಂಗಳೋ ದರ್ಪಣವೊ ಗಲ್ಲವೊ ಮುಖವೊ ಪಂಕಜವೊ ।
ಸಿಂಗವೋ ಸೆಳೆನಡುವೊ ಕುಚಗಳೊ
ಪೊಂಗಿದಪರಂಜಿಗಳೊ ಕಳಶವೊ
ಮಂಗಲೆಯ ಸಖಿನಿಷ್ಟ ಸ್ವಾಮಿಗೆ ಮೂರ್ತ ಮಾಡಿದರು ॥ ॥ ೯ ॥

ಹಸ್ತಿಗಮನದ ಹಂಸಗತಿಗಳ
ಹಸ್ತ ಕಡಗದ ಹಾರ ಪದಕದ
ಹೊಸ್ತಾದ ದಿವ್ಯಾಂಬರದ ತನು ಗಂಧ ಪೂಸರದ ।
ವಿಸ್ತರದ ಶೃಂಗರದ ಪ್ರಾಯದ
ಕಸ್ತುರಿಯ ಹೆರೆನೊಸಲ ಸಖಿಯರು
ಸಿಸ್ತ ಮಾಡುತಿರ್ದರಭವಗೆ ಮಗನೆ ಕೇಳೆಂದ ॥ ॥ ೧೦ ॥

ಕೊಂಕುಗುರುಳಿನ ಕೋಮಲಾಂಗದ
ಶಂಖಗೊರಳಿನ ಶ್ಯಾಮವರ್ಣದ
ಬಿಂಕದುಡಿಗೆಯ ತೊಡಿಗೆ ನೂತ್ನದ ಬೆಡಗಿನಗ್ಗಳದ ।
ಶಂಕರಿಯ ನಿಜ ಕೆಳದಿ ನಗುತ ಶ
ಶಾಂಕಮುಖಿಯಡಿವಿಡಿದು ಹರುಷದಿ
ಶಂಕರಗೆ ಶೃಂಗರಿಸುತಿರ್ದಳು ಮಗನೆ ಕೇಳೆಂದ ॥ ॥ ೧೧ ॥

ಎಸೆವ ಜಡೆಗೆ ಕಿರೀಟ ಕೆಲಸದ
ನೊಸಲ ಕಣ್ಣಿಗೆ ಭಸಿತ ತಿಲಕ ಸು
ಮಿಸುಪ ಕುಂಡಲ ಕೆಲಕೆ ಕರ್ಣಾಭರಣ ಕೌತುಕದ ।
ದಶಭುಜಕೆ ಕೌಸ್ತುಭಗಳಿಟ್ಟರು

ವಿಷಗಳಕೆ ಕಂಪಿಸುವ ಗಂಧವ
[೧][ನ][೧] ಸುರ ಶಿರಗಳನೆತ್ತಿ ಗೌಳವ ಗುದಿಯ ಸರಗಳನು ॥ ॥ ೧೨ ॥

ಚೀಲದುಡಿಗೆಯ ಸೆಳೆದು ದಿವ್ಯದು
ಕೂಲಗಳ ತೊಡಿಸಿದರನರ್ಘ್ಯದ
ಸಾಲುಗಳ ಧರಿಸಿದರು ಘಟ್ಟಮಿರಾಜಿದುಸ್ಸುಗಳ ।
ವ್ಯಾಲಕಟಕವನೆತ್ತಿ ಹಸ್ತಕೆ
ಕೀಲಿಸಿದ ಕಂಕಣದ ಜೋಡನು
ನೀಲಮೈಯನ ನೇತ್ರವಿರೆ ಘನ ಪಾದಸರಗಳನು ॥ ॥ ೧೩ ॥

ರತ್ನಮಕುಟಕೆ ಶಶಿ ತುರಾಯವ
ಕೆತ್ನೆ ಪದಕವ ಸರವ ಕೊರಳಿಗೆ
ಮುತ್ತ ರನ್ನದ ಪಚ್ಚೆ ಫಣಿಗಳ ಕರ್ಣಕಿಕ್ಕಿದರು ।
ನೂತ್ನತರ ಬೆರಲುಂಗುರಂಗಳ
ಒತ್ತಿಗಿಟ್ಟರು ಶಿಖಿಯ ಶಿವಗೆ ವಿ
ಚಿತ್ರದಲಿ ಪಾದಾದಿ ಶಿರ ಕಡೆ ಶಿಸ್ತ ಮಾಡಿದರು ॥ ॥ ೧೪ ॥

ಕುಂಡಲಿಯ ಶಿರಮಣಿಯೊ ರವಿ ಶಶಿ
ಮಂಡಲವೊ ನವರತ್ನಗಳೊ ತ್ರೈ
ಮಂಡಲವ ಪಾರಿಸುವ ಬಿರದನ ಬಾಹುರಿಯ ಬೊಂಬೊ ।
ದುಂಡು ಮುತ್ತಿನ ಉಳಿಯೊ ಸರವಿಯೊ
ಹಿಂಡು ದೈವದ ಗಂಡನೆನಿಸುವ
ಪೆಂಡೆಯವ ಶಿವಪಾದಕಿಟ್ಟರು ಮಗನೆ ಕೇಳೆಂದ ॥ ॥ ೧೫ ॥

ತನ್ನ ತಾನೇ ಉರಿವ ಜ್ಯೋತಿಗೆ
ಕನ್ನಡಿಯ ಊಳಿಗವ ಹಿಡಿದರು
ಹೊನ್ನ ಹಾವಿಗೆ ಜೋಡನಿಟ್ಟರು ಸಕಲ ಬಿರಿದುಗಳ ।
ಸನ್ನಿಧಾನದಿ ಹಿಡಿದು ನಿಂದರು
ಸನ್ನೆ ವಾದ್ಯವಳಾದವಾಕ್ಷಣ
ಸನ್ನಹದ ಪಲ್ಲಕ್ಕಿ ಸ್ವಾಮಿಯ ಮುಂದೆ ನಿರಿಸಿದರು ॥ ॥ ೧೬ ॥

೧–೧ ನು(ಮೂ)

ಹಸ್ತಿಗಮನನೆ ಛತ್ರವಿಡಿದನು
ಹಸ್ತಲಾಘವ ಹರಿಯೆ ಕೊಟ್ಟನು
ವಸ್ತುಕದ ವರ್ಣಕದ ಬಿರಿದನೆ ಬ್ರಹ್ಮ ಹೊಗಳಿದನು ।
ಸ್ವಸ್ತಿ ಲೇಸೆಂದೆಲ್ಲ ಪ್ರಮಥ ಸ
ಮಸ್ತ ಮನುಮುನಿ ದೇವಋಷಿ ಪರ
ವಸ್ತು ಸಿಂಹಾಸನಕೆ ಚಿತ್ತೈಸೆಂದು ಎರಗಿದರು ॥ ॥ ೧೭ ॥

ಆಲವಟ್ಟದ ಬೀಸಣಿಗೆಗಳ
ವಾಲ ಪಾವಡದುಭಯ ಜಾಂಬ್ರದ
ಕೀಲಗಿಂಡಿಯ ಮೇಲು ಪಟ್ಟಿ ಸರಾಫ ಹಾವಿಗೆಯ ।
ಸಾಲ ಸತ್ತಿಗೆ ಸುರುಟಿ ಸಿಂಹದ
ಜೋಲುದಲೆ ಶಿವ ಬಿರಿದ ಹಿಡಿದ ವಿ
ಶಾಲ ನಂದಿಧ್ವಜದ ವ್ಯಾಸನ ತೋಳ ಜಾಂಡ್ಯಗಳ ॥ ॥ ೧೮ ॥

ಸಕಲ ಪರಿಮಳ ಭರಣಿ ಕುಸುಮದ
ಮುಖರ ಕುಂಚ ಕಳಂಚೆ ಸಂಚಿಯ
ಸಕಲ ಊಳಿಗವರ್ಗ ಕವಿ ಬುಧ ಭಟ್ಟ ನಟ್ಟುವರ ।
ಸಕಲ ವರ್ಣದ ವಾದ್ಯಜನ ಸಂ
ಮುಖವ ಹೇಳುವ ಚರರು ಸ್ವಾಮಿಗೆ
ಮಕರ ಡೆಕ್ಕೆಯ ಮಾಯಮುರುತಾಪಾದಿ ಬಿರಿದಿವೆಕೋ ॥ ॥ ೧೯ ॥

ಪಾದವೆಚ್ಚರ ಸ್ವಾಮಿ ಹೆಚ್ಚಿದ
ಮಾಧವನ ಕಣ್ಣೆತ್ತಿ ಧರಿಸಿದ
ನಾದಬ್ರಹ್ಮಾನಂದ ಮೇಲವಧಾನ ಸುಯ್ಧಾನ ।
ಸಧಾಕರ ಸಂಭ್ರಮದ ಪಾದರಸ
ದಾದಿಗುಣದ ನಿಧಾನ ಶುಭವೆಂ
ದೋದಿದರು ಶಿವನಂಕಮಾಲೆಯ ವೇದ ಮಾಗಧರು ॥ ॥ ೨೦ ॥

ಸೂರಪದ್ಮನ ಸುಲಿದ ಪಾದವು
ಮಾರನುರುಹಿದ ಮಹಿಮ ಪಾದವು
ನಾರಸಿಂಹನ ನೆಗ್ಗಿ ನಾಟ್ಯಕೆ ನಿಂದ ನಿಜಪಾದ ।
ಮೂರು ಪುರಗಳ ಮುರಿದ ಪಾದವು

ಮೀರಿದಸುರರ ಮಿಡಿದ ಪಾದವು
ತಾರಕಾಕ್ಷನ ತ್ರಾಣಗೆಡಿಸಿದ ತತ್ತ್ವಮಸಿ ಪಾದ ॥ ॥ ೨೧ ॥

ಅಂಧಕನ ರಾವಣನ ಮೆಟ್ಟಿ ಜ
ಲಂಧರನ ಸಿಂಧುರವ ಸೀಳ್ದ ಮು
ಕುಂದ ಬೊಮ್ಮ ಬಿಡೌಜ ಮುನಿಜನರೊಂದಿಸುವ ಪಾದ ।
ಇಂದು ಕುಂದ ತುಷಾರ ಗೌರ ಸು
ಗಂಧ ರವಿ ಶಶಿ ತಾರಗಣ ಕವಿ
ವೃಂಧ ವರ್ಣಪ್ರಬಂಧ ರಂಜಿತ ಸ್ವಾಮಿ ಶ್ರೀಪಾದ ॥ ॥ ೨೨ ॥

ಪ್ರಣವ ನೆಲೆ ಮಂತ್ರಾಳಿ ಭವನಂ
ಗಣ ಜಲಧಿಯಣಿಮಾದಿ ಸ್ಥಳ ಸುಖ
ದಣಿ ಮುಕುತಿ ಖಣಿ ಶುಭದ ಗ್ರಹಗಣ ಬೀಡು ದಣಿವಳಲು ।
ಡೊಣೆ ಪರುಷರಸ ಸತ್ಯ ಸಂದಣಿ
ತ್ರಿಣಯ ಕರುಣದ ಸರಸಿ ಸುಮನಸ
ಮಣಿಕಿರೀಟಪ್ರಕಾಶ ಪಾದವಧಾನ ಮಹಸ್ವಾಮಿ ॥ ॥ ೨೩ ॥

ನೆನೆವರಘಹರಪಾದ ಸುಜನರ
ವನಜ ದಿನಕರಪಾದ ವಿನಮಿತ
ಜನ ಮಕುಟ ಕುಳರತ್ನ ಕುಸುಮ ಸಮರ್ಪಿತದ ಪಾದ ।
ವನಜಭವ ವನಜಾಕ್ಷ ವರ್ಣಿಪ
ಘನ ಮಹಾಶಿವ ದಿವ್ಯಪಾದವು
ಕನಕಗಿರಿ ಕೈಲಾಸವಾಸ ಪ್ರಕಾಶ ಶ್ರೀಪಾದ ॥ ॥ ೨೪ ॥

ಯೋಗಿಗಳಿಗಣಿಮಾದಿ ನೆಲೆ ಶೀ
ಲಾಗಮಜ್ಞರ ಜ್ಞಾನ ಕ್ರೀಯ ಸು
ಭೋಗಿಗಳಿಗಿಹ ಪರದಭಕ್ತಿಯ ಮುಕ್ತಿನಿಧಿಪಾದ ।
ರೋಗಿಗಳಿಗೆ ಚಿಕಿತ್ಸೆ ಭೇಷಜ
ರಾಗಿಗಳಿಗೊಯ್ ರಾಗ್ಯ ಕೃತ ಘನ
ಶ್ರೀಗುರುವೆ ಸಿಂಹಾಸನಕೆ ಬಿಜಮಾಡಿ ಶಿವಪಾದ ॥ ॥ ೨೫ ॥

ನಂದಿಕೇಶ್ವರ ಭೃಂಗಿ ನಾರದ
ಸ್ಕಂದ ಕರಿಮುಖ ವೀರ ತಂಬುರ

ನಿಂದು ಹೊಗಳುವ ಭಟನಟುವ ಗರುಡ ಗಾಂಧರ್ವ ।
ಸಂದಣಿಪ ಚರಸುರರ ನೆರವಿ ಮು
ಕುಂದ ಹಸ್ತವ ಹಿಡಿದು ಶಿವಗಣ
ವೃಂದ ಪಾದವಧಾನವೆನೆ ಹರ ನಗುತ ತೆರಳಿದರು ॥ ॥ ೨೬ ॥

ನಡೆಯ ಠೀವಿಯ ನುಡಿಯ ಬೆಡಗನು
ಅಡಿಯಿಡುವ ಅಂಧಕನು ಸ್ವಾಮಿಯ
ಒಡವೆ ಶಿಸ್ತುನು ಒಲೆವ ದಸ್ತನು ವರ್ಣಿಸಲ್ಕಳವೆ ।
ಎಡ ಬಲದಿ ಹಿಡಿದಿರ್ದ ಬಿರಿದನು
ಒಡನೊಡನೆ ಉಗ್ಘಡಿಪ ಭಟರನು
ಮೃಡ ಮಹೋತ್ಸಹದಿಂದ ಸಿಂಹಾಸನಕೆ ತೆರಳಿದರು ॥ ॥ ೨೭ ॥

ಮಾರಹರ ಸಿಂಹಾಸನವ ನಲಿ
ದೇರಿದಾಕ್ಷಣ ದೇವದುಂದುಭಿ
ಬೇರಿ ಡೋಲು ಡಮಾಮಿ ಗಿಡಿಬಿಡಿ ಶಂಖ ಜಯಘಂಟೆ ।
ಭೋರಿಡುವ ಹೆಗ್ಗಾಳೆ ಬುರುಗಿನ
ಪೂರಿ ಮೌರಿ ಸುಕೊಳಲು ತಂಬಟ
ವಾರ ವಧುಗಳ ನಾಟ್ಯರತಿ ಮದ್ದಳೆಯ ಝೇಂಕಾರ ॥ ॥ ೨೮ ॥

ಚಂದ್ರವಾದ್ಯ ಸೂರ್ಯವಾದ್ಯದ
ಮಂದ್ರಮಧ್ಯಮ ತಾರಕತ್ರೆಯ
ಸೌಂದ್ರಸಮರಸರಾಗ ಸ್ಥಳ ಕುಳ ಪ್ರೌಢ ನಿರ್ಮಾಣ ।
ಇಂದ್ರಜಾಲ ಮಹೇಂದ್ರಜಾಲ ಫ
ಣೀಂದ್ರಲೋಕ ಸುವಿದ್ಯವಿದರು ಗ
ಣೀಂದ್ರನಿಗೆ ಸೈಗೆಡೆದು ಕಾಣಿಸಿಕೊಂಡರಲ ಮಗನೆ ॥ ॥ ೨೯ ॥

ಆರತಿಯ ಕೊಳದಾರತಿಯ ಕಮ
ಲಾರತಿಯ ಕಟ್ಟಾರತಿಯ ಕುಶ
ಲಾರತಿಯ ರಥದಾರತಿಯ ಬಂದಾರತಿಯ ಪ್ರಣಮ ।
ದಾರತಿಯ ಕರ್ಪೂರದ ನವ ಪಂ
ಚಾರತಿಯನತಿ ನೂತ್ನತರದೇ
ಕಾರತಿಯ ರಮೆ ವಾಣಿ ಹಿಡಿದರು ಮಂಗಳಾರತಿಯ ॥ ॥ ೩೦ ॥

ಇಹಪರಕೆ ಇಷ್ಟಾರ್ಥ ಸಿದ್ಧಿಯ
ಬಹುಮತಕೆ ಸೌಭಾಗ್ಯ ವೃದ್ಧಿಯ
ಅಹಿತರಿಗೆ ಆನಂದಪದವಿಯ ಆದ್ಯರಿಗೆ ಸುಖವ ।
ಮಹಿಮರಿಗೆ ಮಾಹಾನುಭಾವವ
ಸಹಸ ಷಟ್ಸ್ಥಲಜ್ಞಾನ ಕ್ರೀಗಳ
ವಹಿಸಿ ನಡೆಸಲಿ ನಮಗೆ ಚೀಲಲಳಸ್ವಾಮಿ ಕರುಣದಲಿ ॥ ॥ ೩೧ ॥

ಲಲನೆಗೀಶ್ವರ ನಂದಿ ಪ್ರಮಥರಿ
ಗೊಲಿದು ಪ್ರಭು ವೃಷಭನಿಗೆ ತತ್ವದ
ನೆಲೆಯನುಪದೇಶಿಸಿದ ಕಲ್ಯಾಣದಲೆ ಗಣಸಭೆಗೆ ।
ನೆಲಕೆ ನಿಜ ಕೈಲಾಸ ಹರಪುರ
ನೆಲೆಯ ಸಿಂಹಾಸನದ ಷಟ್ಸ್ಥಲ
ಕುಲಶಿಖಾಮಣಿ ಬಸವಪ್ರಭು ಸುತಗೊರೆದ ಸೂತ್ರವಿದು ॥* ॥ ೩೨ ॥

❖❖

* ಇತಿ ದ್ವಾದಶ ಸ್ಕಂಧ ನಿರೂಪಣಂ ಅಂತು ಉಭಯ ಪದಗಣನೆ ೫೯೯ಕ್ಕಂ ಮಂಗಳ ಮಹಾಶ್ರೀ ॥

ತ್ರಯೋದಶ ಸ್ಕಂಧ

ರಾಗ : ವಸಂತ ಭೈರವಿ

ಶಾಂಭವನ ಶಾಂಭವಿಯ ಓಲಗ
ಸಂಭ್ರಮವನರುಹೆಂದು ಗುರು ಪಾ
ದಾಂಬುಜಂಗಳಿಗೆರಗಿ ಬೆಸಗೊಳಲೊರೆದ ಶಿಷ್ಯನಿಗೆ ॥

ಶ್ರೀಪತಿಗೆ ಸೌಭಾಗ್ಯವನು ವಾ
ಣೀಪತಿಗೆ ಚತುರತೆಗಳನು ಛಾ
ಯಾಪತಿಗೆ ಪ್ರೀತೋರ್ವಿಯನು ಗ್ರಹಪತಿಗೆ ತೇಜವ ತಾ ।
ರಾಪತಿಗೆ ಶಾಂತಿಯನು ಹವಿಜಾ
ಲಾಪತಿಗೆ ಬಹುಸುಖದ ಪದವ ನಿ
ರೂಪಗಳ ಪಾಲಿಸಿದ ಶಂಕರ ಸಲಹು ಮೂಜಗವ ॥ ॥ ೧ ॥

ಪರಮನಂಗಚ್ಛವಿಯೊ ಪಂಚಾ
ಕ್ಷರಿಯ ಮಂತ್ರದ ಕಳೆಯೊ ಪ್ರಣಮವೊ
ಹರನ ಪ್ರಾಣದ ರೂಹೊ ಕರುಣಾಂಬುಧಿಯೊ ಪ್ರಭು ತಾನೆ ।
ಕರಚರಣಮಂ ಪಡೆದನೋ ಶಂ
ಕರನೋ ಷಟ್ಸ್ಥಲಬ್ರಹ್ಮವೋ ಶ್ರೀ
ಗುರುವೆ ನುತ ಸುರತರುವೆ ಚೀಲಲಳಸ್ವಾಮಿ ಶರಣಾರ್ಥಿ ॥ ॥ ೨ ॥

ಘನಮಹಾಪತಿವ್ರತೆಗೆ ಜ್ಞಾನದ
ನೆನಹಿನಲ್ಲಿಹ ಪತಿಗೆ ಕ್ರೀಗಳ
ಮನಪಕ್ವದಲಿ ನಡೆಸುವವರಿಗೆ ಲಿಂಗನಿಷ್ಠರಿಗೆ ।
ಅನುಭವದ ಸಖಿಗಾತ್ಮಸಖನಿಗೆ

ವಿನಯಪರಳಿಗೆ ವಿರತಿಪುರುಷಗೆ
ತನಯ ಮರೆಯದೆ ಬೋಧಿಸೀ ಷಟ್ಸ್ಥಲಶಿವಾಯವ ॥ ॥ ೩ ॥

ಕಲಹಗಾತಿಗೆ ಕಪಟಗಾರಗೆ
ಕಲೆಯ ಹೆಣ್ಣಿಗೆ ಖಳತೆ ಗಂಡಿಗೆ
ಛಲದ ಚಗರೆಗೆ ಚಾಕರತ್ವದ ಚಪಳದಂಪತಿಗೆ ।
ಬಲುಮೆ ಪತ್ನಿಗೆ ಭಡವ ಗಂಡಗೆ
ಮಲೆವ ನಾರಿಗೆ ಮಥನಗಾರಗೆ
ಕೆಲವರಿಗೆ ಬೋಧಿಸದಿರೀ ಷಟ್ಸ್ಥಲಶಿವಾಯಣವ ॥ ॥ ೪ ॥

ಆದಿಶಕ್ತಿಗೆಯಭವ ನಂದಿ ಗ
ಣಾದಿ ಶರಣರ ಸಭೆಗೆ ಪ್ರಭು ಬಸ
ವಾದಿ ಪ್ರಮಥರಿಗೊರೆದ ಕಲ್ಯಾಣದಲಿ ಪೂರ್ವದಲಿ ।
ಮೇದಿನಿಗೆ ಹರಪುರದ ಗಿರಿತಟ
ದಾದಿ ಷಟ್ಸ್ಥಲಪೀಠಗುರು ಜಗ
ದಾದಿ ಶಿವನೋಲಗವ ಬಸವಪ್ರಭು ಸುತನಿಗೊರೆದ ॥ ॥ ೫ ॥

ಓಲಗದ ಸಿಂಹಾಸನದ ಸವಿ
ಶಾಲವೆಂತೆನೆ ಕೇಳು ಹೇಳುವೆ
ತಾಳಿನಿಂ ತುದಿಗೆಣಿಸಿ ದಶಶತ ಸಾವಿರದ ನೆಲೆಯೊ ।
ಮೇಲೆ ಶಂಕರ ಗೌರಿ ಷಣ್ಮುಖ
ಬಾಲ ಕರಿಮುಖ ರುದ್ರಪ್ರಮಥರ
ಸಾಲು ಷಟ್ಸ್ಥಲಬ್ರಹ್ಮಿ ಚೀಲಳಸ್ವಾಮಿ ಮಧ್ಯದಲಿ ॥ ॥ ೬ ॥

ನಂದಿಕೇಶ್ವರ ಭೃಂಗಿರಿಟಿ ಸಾ
ನಂದಯೋಗಾಚಾರ್ಯ ಶಿವಗಣ
ವೃಂದ ನೂತ್ನ ಪುರಾತನರ ದೇಶಿಕರ ಚತುರ್ಯುಗದ ।
ಹಿಂದುಮುಂದಣ ಹಿರಿಯ ಶರಣರ
ಸಂದು ಸಂದಿನ ಸಕಲ ಭಕ್ತರ
ಸಂದಣಿಯನೇನೆಂಬೆ ಷಟ್ಸ್ಥಲಪ್ರಭುವಿನೋಲಗದ ॥ ॥ ೭ ॥

ಪರಶಿವನೆ ಚೀಲಾಳಸ್ವಾಮಿಯು
ನಿರುತವಿದು ಚೀಲಾಳಸ್ವಾಮಿಯೆ

ಪರಶಿವನದೆಂತೆನಲು ಶ್ರುತಿಮತವಾಗಮಪ್ರಮಾಣ ।
ಪರಶಿವನ ಚಿತ್ಕಳೆಯೆ ತಾ ಬಹಿ
ಷ್ಕರಿಸಿ ವಿಗ್ರಹವಾದ ಕಾರಣ
ಗುರುವೆ ಶಿವಶಿವ ಗುರುವೆನುತಲಿವೆ ತತ್ವಬೋಧಗಳು ॥ ॥ ೮ ॥

ಗುರುವಚನ ಹರವಚನ ಷಟ್ಸ್ಥಲ
ನಿರಿಗೆ ಸಮರಸ ತತ್ವನಿರ್ಣಯ
ಶರಣರಾಚರಣೆಗಳ ಶಿಖಿಕರ್ಪುರದ ಸಂಯೋಗ ।
ಹರನ ಶರಣರ ಲೀಲೆ ಜಾಲವ
ನರ ಹುಳುಗಳೇನೇನ ಬಲ್ಲರು
ಹರನೆ ಬಲ್ಲನು ಗೌರಿ ಬಲ್ಲಳು ಶ್ರುತಿಪುರುಷ ಬಲ್ಲ ॥ ॥ ೯ ॥

ಶಿವಗೆ ಶರಣಗೆ ಭೇದವಿಟ್ಟವ
ಶಿವನೆಯಂತ್ಯಜನವನೆ ಗಾರ್ಧವ
ನವನೆ ಪರಶಿವದ್ರೋಹಿ ಗುರುಚರಮಾರ್ಗಮತಭ್ರಷ್ಟ ।
ಅವನ ವದನವ ನೋಡಲಾಗದು
ಅವನೊಡನೆ ಮಾತಾಡೆ ನರಕವು
ಅವನೆಯಷ್ಟಾವರಣ ಪಂಚಾಚಾರ ಬಹಿಷ್ಕಾರಿ ॥ ॥ ೧೦ ॥

ಚಿನ್ನ ಬಣ್ಣಕೆ ಪುಷ್ಪಂಗಂಧಕೆ
ಕನ್ನಡಿಗೆ ಕಪುರಕೆ ಅಗ್ನಿಗೆ
ಹೊನ್ನಿಗೆಯು ಅಪರಂಜಿದೊಡಿಗೆಗೆ ಭಿನ್ನವೆರಡುಂಟೆ ।
ಕನ್ನೆ ಕೇಳಾ ಗೌರಿಯೆನುತಲಿ
ಮುನ್ನ ಪರಶಿವ ಶಕ್ತಿಗೊರೆಯನೆ
ಎನ್ನ ಚಿತಕ್ಳಮೂರ್ತಿ ಚೀಲಲಳಸ್ವಾಮಿ ನಿಜವೆಂದು ॥ ॥ ೧೧ ॥

ಶಶಿವದನೆ ಕೇಳ್ಕಿನ್ನರಯ್ಯನೆ
ಬಸವರಾಜಗೆ ಪ್ರಾಣವೆನಗೆಯು
ವಸಮ ಷಟ್ಸ್ಥಲಬ್ರಹ್ಮಿ ಚೀಲಲಳಸ್ವಾಮಿ ನಿಜಪ್ರಾಣ ।
ಉಸುರಲೇನೆನ್ನಂತರಂಗದ
ಬಿಸರುಹದಲವತರಿಸಿದುದರಿಂ
ಹೆಸರನಿಟ್ಟೆನು ನಾನೆ ಚೀಲಲಳಸ್ವಾಮಿಯೆಂದೆನುತ ॥ ॥ ೧೨ ॥

ಕಾಂತೆ ಕೇಳೌ ಷಟ್ಸ್ಥಲವೆ ಎ
ನ್ನಂತರಂಗದ ಗೋಪ್ಯಮುಖಭವ
ಶಾಂತ ಚಿತ್ಕಳಬಿಂಬ ಚೀಲಳಸ್ವಾಮಿಯವತಾರ ।
ಇಂಥ ಮಹಿಮನ ಪೂರ್ವ ಪರಗಳ
ನಂತ್ಯಜರು ಪರವಾದಿ ಬಲ್ಲರೆ
ಶಾಂತಮೂರ್ತಿವನೆನ್ನ ಸರಿ ಗದ್ದುಗೆಗೆ ಪ್ರಭುವೆಂದ ॥ ॥ ೧೩ ॥

ಮನುಮುನಿಗಳಿಗೆ ಘನಮಹಿಮರಿಗೆ
ವನಜಮುಖಿಪಾರ್ವತಿಗೆ ಸುತರಿಗೆ
ಸನಕಸಾನಂದಾದಿ ಋಷಿಗಣ ಪ್ರಮಥಗುರುಗಳಿಗೆ ।
ಅನುಪಮದ ಪೂರ್ವಿಕರ ಷಟ್ಸ್ಥಲ
ವಿನುತರಿಗೆ ಬೋಧಿಸುತ ಪರಶಿವ
ವಿನಯದಿಂ ಚೀಲಾಳಸ್ವಾಮಿಯನಪ್ಪಿ ಮುಂಡಾಡಿ ॥ ॥ ೧೪ ॥

ಸ್ವಾನುಭಾವಿಗಳರಸ ಬಾರೋ
ಜ್ಞಾನಮೂರ್ತಿಯ ಗುರುವೇ ಬಾರೋ
ಆನಂದ ಪ್ರಭುಸ್ವಾಮಿ ಬಾರೋ ಎನ್ನ ಹೃತ್ಕಮಲ ।
ಭಾನುಜ್ಯೋತಿ ಪ್ರಕಾಶ ಬಾರೋ
ನೀನೆನ್ನ ಅವತಾರ ಬಾರೋ
ನಾನೆ ನಿನ್ನ ಶರೀರವೆನ್ನಸು ಪ್ರಾಣ ನೀ ಬಾರೊ ॥ ॥ ೧೫ ॥

ಎನುತ ಚೀಲಳಸ್ವಾಮಿ ಲೀಲೆಯ
ಘನತೆಗಳ ಕೊಂಡಾಡಿ ಪರಶಿವ
ಕನಕಸಿಂಹಾಸನದ ಸದರಿನ ಮೇಲೆ ಸರಿಯಾಗಿ ।
ಮನಹರುಷದಿಂದೀರ್ವರೋಲಗ
ದಿನಚರಿಯಲೀ ಪರಿಯಲೊಪ್ಪಿರೆ
ವನಜಭವ ವನಜಾಕ್ಷ ಸುಮನಸರೋಲೈಸುತಿರಲು ॥ ॥ ೧೬ ॥

ಆವಾದ ಕಾಲದಲಿ ಯುಗದಲಿ
ಯಾವಾದ ಲೀಲೆಗಳೊ ಸ್ವಾಮಿಗೆ
ತಾವೆ ಬಲ್ಲರು ನಮಗಗೋಚರವೆನುತ ಪ್ರಮಥಗಣ ।
ದೇವಋಷಿ ಮನುಮುನಿಗಣೇಶ್ವರ
ದೇವಿ ಹರಿಯಜ ವೇದಪುರುಷರು
ಶೀವಿ ಶಿವಸಭೆಯಾಗಮಿಕರು ಹೊಗಳಿದರು ಮಗನೆ ॥ ॥ ೧೭ ॥

ನೆರೆದ ಶಿವಸಭೆ ಹರಿಯಬಾರದು
ಬರುತ ಹೋಗುತಲಿರುತಲಿರುವದು
ತೆರಹಿಲ್ಲ ಹಗಲಿರುಳಿದೆಂಬುದನರಿಯಲೇ ಬಾರ ।
ತರ ತರದ ಊಳಿಗದ ವರ್ಗದ
ಪರಿಚರರದ ಜನ ಬಿರದು ಬಾವುಲಿ
ಹರನ ಸಿಂಹಾಸನದ ಕೆಳಗಿದಿರಿನಲೆ ನಿಂದಿಹರು ॥ ॥ ೧೮ ॥

ತಾಳ ಮೇಳದ ವಾದ್ಯವೈಭವ
ಹೇಳಿ ಕೇಳುವ ಊಳಿಗದ ಜನ
ಬಾಳ ಸಲಿಗೆಯ ಹರಿಯಜರು ಸುಮನಸ ಮನುಮುನಿಗಳು
ಏಳು ನೆಲೆಗಳ ಮೇಲಣಾಗ್ರದಿ
ಭಾಳನೇತ್ರನ ಓಲಯಿಸುವರು
ಬಾಲಕನೆ ಕೇಳೆಂದು ಸದ್ಗುರುರಾಯ ಬೋಧಿಸಿದ ॥ ॥ ೧೯ ॥

ಗಂಗೆ ಜಡೆಯಲಿ ಗೌರಿ ತೊಡೆಯಲಿ
ಭೃಂಗಿ ನಾಟಕ ಸಂಭ್ರಮದ ಶ್ರೀ
ಮಂಗಳದ ಷಟ್ಸ್ಥಲದ ಮಹಿಮರು ಪುತ್ರರೆಡಬಲದಿ ।
ಶೃಂಗರದ ಸಿಂಹಾಸನಾಗ್ರ ಗ
ಣಂಗಳುಂ ಪ್ರಭುಸ್ವಾಮಿ ಇರ್ದರು
ಸಂಗನೊಡ್ಡೋಲಗದ ಠೀವಿಯನಾವ ಕವಿ ಬಲ್ಲ ॥ ॥ ೨೦ ॥

ವೀರಶೈವಾಚಾರ ಸಮಯದ
ನಾರಿ ಪುರುಷರು ಷಟ್ಸ್ಥಲದ ಬಹು
ಕಾರಣೀಕದ ಭಕ್ತದಂಪತಿ ಕರ್ತೃವನು ಬಳಸಿ ।
ಸೇರಿ ಶರಣರ ಪಂಕ್ತಿ ಕೆಳಗೆಯೆ
ಸೇರಿ ಚತುರಾಚಾರ್ಯ ಪ್ರಮಥರ
ನಾರಿಯರ ಶ್ರೇಣಿಗಳು ಪರಶಿವ ಬಳಗವೊಪ್ಪಿಹುದು ॥ ॥ ೨೧ ॥

ಶ್ರೀವಿಭೂತಿ ಲಲಾಟ ಲೇಪದ
ಕಾವಿವಸ್ತ್ರದ ಕೈಯ ಜಪಸರ
ಠೀವಿ ರುದ್ರಾಕ್ಷೆಗಳ ಕಂಠದ ಕರ್ಣ ಕಂಕಣದ ।
ಶ್ರೀವಿಮಲ ಜಡೆ ಬೋಳ ಮಂಡೆಯ
ಹಾವಿಗೆಯ ಲಾಕುಳದ ದಂಡದ
ಠೀವಿ ಷಟ್ಸ್ಥಲಬ್ರಹ್ಮಿಗಳು ಪ್ರಭುಸ್ವಾಮಿ ಬಳಸಿಹರು ॥ ॥ ೨೨ ॥

ನಗೆಮೊಗದ ಕೆಂಜೆಡೆಯ ಶಾಸ್ತ್ರದ
ಬಗಲ ಪುಸ್ತಕ ತೋಳಿನಾಥರ
ಹೆಗಲಧೋತ್ರದ ಅಡ್ಡ ಜಾಡಿಯ ಬೋಳಮಸ್ತಕದ ।
ಝುಗಝುಗಿಪ ಭೂಷಣದೆ ಜಂಗಮ
ವಗಣಿತವಸಂಖ್ಯಾತ ವಿರತರು
ಅಗಜೆಯರಸನ ಓಲಗದ ಪ್ರಭು ಬಳಸಿ ಕುಳಿತಿಹರು ॥ ॥ ೨೩ ॥

ಗಡ್ಡಮಂಡೆಯ ಬಿಟ್ಟ ಹಿರಿಯರು
ದೊಡ್ಡದೊಡ್ಡ ಮಹಾನುಭಾವರು
ಒಡ್ಡಿನಲಿ ಕುಳಿತಿಹರು ಚೀಲಳಸ್ವಾಮಿ ಬಳಸಿನಲಿ ।
ಪಡ್ಡೆ ವಟು ಪರದೇಶಿ ದೇಶಿಕ
ರಡ್ಡಬೀಳುತ ಗುರುಗಳಿಗೆ ಕಿವಿ
ಯೊಡ್ಡಿ ಕೇಳುತಲಿರ್ದರಭವನ ಓಲಗದ ಸೊಗಸ ॥ ॥ ೨೪ ॥

ಸಗುಣ ನಿರ್ಗುಣ ಲೀಲಮೂರ್ತಿಯ
ಬಗೆ ಸಕೀಲಾಗಮದ ಪುಸ್ತಕ
ಬಗಲಡಕ ಕರಸ್ಥಳದಿ ಕಥೆ ಕಾವ್ಯಗಳು ಮತಗ್ರಂಥ ।
ನಗುತ ಲಿಖಿಸುವ ಓಲೆ ಕಂಠದ
ಸೊಗಸಿನನುಭವ ಬಾಲವಿರತರು
ಅಗಜೆಯರಸನ ಓಲಗದ ಪ್ರಭುಸನ್ನಿಧಿಯಲಿಹರು ॥ ॥ ೨೫ ॥

ಸಾಲ ಸಕಲಾತಿಗಳ ದಿವ್ಯದು
ಕೂಲ ಬರಹದ ಕಳಶ ಪಾಕಿ ವಿ
ಶಾಲ ಹೂವಿನ ಹಚ್ಚಡದ ಮಂಜೀಲಪಟ್ಟೆಗಳ ।
ಲೋಲಜಾಡಿಯ ಯೋಗವಟ್ಟೆಯ
ಗೌಳ ಸರಗಳ ಚರಣ ಜಂಗಿನ
ಬಾಲವಿರತರು ಬಂದು ಕುಳಿತರು ಪ್ರಭುವಿಗೊಂದಿಸುತ ॥ ॥ ೨೬ ॥

ಬಿಟ್ಟ ಮಂಡೆಯ ಬಿಗಿದ ಕಾಸೆಯ
ಕಟ್ಟಿರುವ ಕಟಿಸೂತ್ರ ಬೆಡಗಿನ
ಘಟ್ಟಿ ಕಾಷಾಂಬರದ ಗೌಳದ ಸಣ್ಣ ಸರ ಜಪದ ।
ಇಟ್ಟ ವಿಭೂತಿಯ ಲಲಾಟದ

ತೊಟ್ಟ ರುದ್ರಾಕ್ಷಿಗಳ ತೊಡಿಗೆಗಳ
ದಿಟ್ಟ ವಿರತರು ಬಂದು ಪ್ರಭುವಿಗೆ ನಮಿಸಿ ಕುಳಿತಿಹರು ॥ ॥ ೨೭ ॥

ಬೋಳ ಮಂಡೆಯ ಬೊದಡೆ ಚಿತ್ತದ
ತೋಳಿಲಾದರ ತೊದಲ ನುಡಿಗಳ
ಗೌಳ ಸರ ಜಪಮಾಲೆ ಹಾವುಗೆ ಯೋಗವಟ್ಟಗಳ ।
ಬೋಳಶಾಸ್ತ್ರವನೋದಿ ಕೇಳಿದ
ಬಾಳದೇಶಾಂತ್ರಗಳ ಮಾಡಿದ
ಬಾಳ ಹಿರಿಯರು ಬಂದು ಗುರುಪದಕೆರಗಿ ಕುಳಿತಿಹರು ॥ ॥ ೨೮ ॥

ಕೊಡೆಯ ಬೀಸಣಿಗೆಗಳ ಚಕ್ರದ
ಹಿಡಿದ ಶಕುನಿಯ ಗರಿಯ ಗಾಣದ
ಕೊಡತಿ ಬೆತ್ತದ ಡೊಣ್ಣೆ ಚೂರಿಯ ಹೀಲಿದೊಂದಿಗಳ ।
ಜಡೆಯ ಲೋಚನ ಕಿಚ್ಚು ಮಂಡೆಯ
ಮುಡಿ ದಿಗಂಬರ ಹಾವುಗೆಯ ಕಡು
ಬೆಡಗಿನಯ್ಯಗಳು ಬರುತ ಸ್ವಾಮಿಗೆ ನಮಿಸಿ ಕುಳಿತಿರಲು ॥ ॥ ೨೯ ॥

ಎಳೆಗಾವಿ ದುಪ್ಪಟಿಯ ವಸ್ತ್ರದ
ತಿಳಿಗಾವಿ ಧೋತ್ರದ ಲಪಾಟಿಯ
ತಳ ತಳಿಸುತಿಹ ಹಸ್ತ ಪಾದದ ಮುಖರಸವೆ ತುಂಬಿ ।
ತುಳುಕಿ ಸೂಸುವ ಸ್ವಾನುಭವದಳ
ಕುಳದ ನಿರ್ಣಯ ಕಾಯ ಕಾಂತಿಯ
ಹೊಳೆವ ಚರಮೂರ್ತಿಗಳು ಪ್ರಭು ಪದಕೆರಗಿ ಕುಳಿತಿರಲು ॥ ॥ ೩೦ ॥

ಎಲ್ಲಿಂದಲಿಳಿದಂದರೆಂದೆನೆ
ಮಲ್ಲಿಗೆಯ ಹೂದೋಟದೊಳಗಣ
ಕಲ್ಲಮಠದನುಭವದ ಮಂಟಪಪೀಠ ಷಟ್ಸ್ಥಲದ ।
ಅಲ್ಲಮನು ಎರಡನೆಯ ಪ್ರಭು ಮಹ
ಬಲ್ಲಿದನು ಚೀಲಾಳಸ್ವಾಮಿವ
ರೆಲ್ಲ ಶಿಷ್ಯರು ಇವನಿವರ ಗುರು ಗಿರಿಜೆ ಕೇಳೆಂದ ॥ ॥ ೩೧ ॥

ಲೇಸಾದುದಯ್ಯಭವ ಪ್ರಕೃತಿಯ
ಪಾಶ ವಿಜರು ಪರಮವಿರತರು

ದೇಶಿಕರು ದೊಡ್ಡವರು ಮೂರ್ತಿಗಳು ಷಟ್ಸ್ಥಲ ನಿ
ವಾಸಿಗಳು ಶಿವತತ್ವಜ್ಞಾನುಪ
ದೇಶಿಗಳು ಲಿಂಗಾಂಗ ಸಮರಸ ಸ
ಹಾಸಿಗಳು ಶರಣರ ಸಮೂಹಕ್ಕೊಮ್ಮೆ ಶರಣಾರ್ಥಿ ॥ ॥ ೩೨ ॥

ಈರೇಳು ಹದಿನಾಲ್ಕು ಭುವನಕೆ
ವೀರಶೈವರೆ ಅಗ್ರಗಣ್ಯರು
ಮಾರಹರ ನಿಮ್ಮಂತರಂಗದಲುದಯ ಷಟ್ಸ್ಥಲ ಶ್ರೀ ।
ವಾರುಧಿಗೆ ಪರಿಪೂರ್ಣ ಚಂದ್ರಮ
ಕಾರಣ ಪರಂಜ್ಯೋತಿಯೆನುತಲಿ
ಗೌರಿ ಕೊಂಡಾಡಿದಳು ಶರಣರ ಮಗನೆ ಕೇಳೆಂದ ॥ ॥ ೩೩ ॥

ವಂದೆ ಶ್ರೀಗುರು ತಂದೆ ಕರುಣಿಸಿ
ಮುಂದಣಾಗಮ ವಿವರಗಳನೆನ
ಗೆಂದು ಚರಣಕ್ಕೆರಗಿ ಕರಗಳ ಮುಗಿದು ಬೆಸಗೊಳಲು ॥
ಕಂದ ಲಾಲಿಸು ಹರನವೋಲಗ
ದಂದ ಪಂಥದ ಬೆಡಗನೆನುತತಿ
ಮಂದಹಾಸದಿ ಮಧುರವಚನವ ನುಡಿದ ಶಿಷ್ಯನಿಗೆ ॥ ॥ ೩೪ ॥

ದಂಡ ಮೌಂಜಿ ಕಮಂಡಲದ ಕರ
ಪುಂಡರೀಕದ ಜಪಸರದ ಮಣಿ
ಕುಂಡಲದ ಮಕುಟಗಳ ರಕ್ತಾಂಬರದ ಸತಿ ಸಹ ಬ್ರ ।
ಹ್ಮಾಂಡ ಬೆಸುಗೆಯನೊಡೆದ ಪುತ್ರರ
ತಂಡ ಪೌತ್ರ ಸಮೇತ ಬ್ರಹ್ಮನು
ದಂಡವಿಕ್ಕಿದ ಸ್ವಾಮಿ ಬಲದಲೆ ಕಾಯ್ದು ನಿಂದಿಹನು ॥ ॥ ೩೫ ॥

ಮಕರಕುಂಡಲ ಮಕರಕೌಸ್ತುಭ
ಮುಖರಸದ ಕಳೆ ಶಂಖ ಚಕ್ರದ
ಚಕಿತ ಪೀತಾಂಬರದ ಕಾಂಚಿಯ ಕಮಲಲೋಚನದ ।
ಸಖಿಸಖರ ಸುತಸಹಿತ ಕೃಷ್ಣನು
ಶಿಖಿನೇತ್ರನಡಿಗೆರಗಿ ತನ್ನಯ
ಸಕಲ ಬಲ ಸಹವಾಗಿ ಸ್ವಾಮಿಯ ಎಡದಿ ನಿಂದಿರ್ದ ॥ ॥ ೩೬ ॥

ತೋಳಬಳೆ ಭುಜಕೀರ್ತಿ ಕಂಕಣ
ಮೌಳಿಮಣಿಮಯ ಮಕುಟಕುಂಡಲ
ಗೌಳಸರದಲಾಂಭ್ರಸತಿ ಸಹ ವಜ್ರಕರ ರಂಭಾ ।
ಬಾಳೆಯರ ವಧುಬಲದಲಿಂದ್ರನು
ಭಾಳನೇತ್ರನಿಗೆರಗಿ ಕೀರ್ತಿಸಿ
ಕಾಳಿಯರಸನ ಹಿಂದೆ ದೂರದಿ ಕೆಳಗೆ ನಿಂದಿಹನು ॥ ॥ ೩೭ ॥

ವಾಮದೇವ ವಸಿಷ್ಠ ಗೌತಮ
ನಾಮಿ ಕೌಶಿಕ ಕಪಿಲ ಕಶ್ಯಪ
ಸೋಮ ಕುಂಭಜ ಜಾಂಭ ಜಹ್ನುಕ ಕಣ್ವ ಜಮದಗ್ನಿ ।
ಜೈಮಿನಿಯು ಪಾರಾಶ ವ್ಯಾಸ ಲ
ಲಾಮ ದೂರ್ವಾಸಾದಿ ಋಷಿಗಣ
ಸ್ವಾಮಿ ಪಾದಕ್ಕೆರಗಿಯಾರನೆ ಸ್ಥಾನದಲ್ಲಿಹರು ॥ ॥ ೩೮ ॥

ವೇದಶಾಸ್ತ್ರಾಗಮ ಪುರಾಣವು
ವೇದಶಿರ ಮುನಿವಾಕ್ಯ ತರ್ಕವು
ವಾದಿಗಳು ವಾಗ್ಮಿಗಳು ಕವಿಗಳು ಗಮಕಿಗಳು ಬುಧರು ।
ಆದಿಪುರಷರನಾದಿಪುರುಷರು
ಪಾದಲೋಚನಗೆರಗಿ ನಿಂದರು
ಸಾದರದಿ ಹತ್ತನೆಯ ಸ್ಥಾನದಿ ಮಗನೆ ಕೇಳೆಂದ ॥ ॥ ೩೯ ॥

ತುಂಬುರರು ನಾರದರು ಗರುಡರು
ಸಂಭ್ರಮದ ಗಾಂಧರ್ವ ಹನುಮನು
ಕಂಬಲಾಶ್ವತ ಪದ್ಮ ಮಹಪದ್ಮಾಳಿ ಕ. . . . ಕರು ।
ತುಂಬ ಕಿನ್ನರ ಕಿಂಪುರುಷಗಣ
ಶಾಂಭವನ ಶಾಂಭವಿಯ ಶ್ರೀ ಪಾ
ದಾಂಬುಜಂಗಳಿಗೆರಗಿ ಐದನೆ ಸ್ಥಾನದಲ್ಲಿಹರು ॥ ॥ ೪೦ ॥

ಇಂದ್ರ ಸತ್ತಿಗೆಯಗ್ನಿ ದೀವಟಿ
ಗೊಂದಿದೆಮ ಕರಚಿತ್ತ ನಿಋತಿ ಸು
ಗಂಧಪುಷ್ಪವ ಹಡಪ ವರುಣನೆ ಗಿಡಿವಿಡಿದಿಹನು ।
ಮುಂದೆ ಮರುತನೆ ಬೀಸಣಿಗೆ ನಲ

ಏಂದ ಧನಪನೆ ಸಕಲ ಬೊಕ್ಕಸ
ನಂದಿಪನ ಸಮ್ಮುಖವ ಬಿಡಿಸುತ ನಿಂದರೆಂಟರಲಿ ॥ ॥ ೪೧ ॥

ಧರ್ಮಾರ್ಥಗಳ ಕಾಮ ಮೋಕ್ಷದ
ಪೆರ್ಮೆ ಫಲಪ್ರದ ಪೂರ್ವ ಪುರುಷರು
ನಿರ್ಮಳಾಂಗನ ನಿಜಪದಾಬ್ಜವ ಹಿಡಿದ ದೃಢದಿಂದ ।
ಕರ್ಮ ಪ್ರಕೃತಿಯ ಕಾಲ ಕಾಮರ
ವರ್ಮ ಘರ್ಮವ ಮೆಟ್ಟಿ ಪೀಠದ
ಕರ್ಮ ದ್ವಾರವ ಸೇರಿ ಸ್ವಾಮಿಯ ಓಲೈಸುತಿಹರು ॥ ॥ ೪೨ ॥

ಸಾಲೋಕ್ಯ ಸಾಮೀಪ್ಯ ಪದಗಳ
ಸಾಲು ಸಾರೂಪ್ಯಗಳ ಶ್ರೇಣಿ ವಿ
ಶಾಲ ಸಾಯುಜ್ಯದ ಪದಸ್ಥಿತರೆಲ್ಲ ಪರಶಿವನ ।
ಪಾಲಿಸೆಂದಡಿಗೆಡೆದು ಕೀರ್ತಿಸಿ
ಕೇಳು ಶತ ನೆಲೆ ಸ್ಥಾನ ಮಧ್ಯದ
ಓಲಗದ ಚಾವಡಿಯ ಬಾಗಿಲ ಕಾಯ್ದು ನಿಂದಿಹರು ॥ ॥ ೪೩ ॥

ಕ್ಷಿತಿಯ ಮಧ್ಯದ ಹೇಮ ಶೈಲದ
ಲತಿಶಯದ ಕೈಲಾಸ ಸುಖ ಸ
ತ್ಪಥದ ದೊಡ್ಡ ಹಜಾರದಗ್ರದ ದಶಶತದ ನೆಲೆಯ
ಶ್ರುತಿ ಪುರಾಣಾಗಮದ ಕವಿಗಳ
ಸ್ತುತಿಗಗೋಚರ ಸಿಂಹಪೀಠದಿ
ಶಿತಿಗಳನು ಚೀಲಾಳಸ್ವಾಮಿಯು ಶರಣರೊಪ್ಪಿಹರು ॥ ॥ ೪೪ ॥

ಶ್ರೌತಿಗಳು ತಂತ್ರಗಳು ಸ್ಮೃತಿಗಳು
ಭೂತ ಭವಿಷ್ಯದ್ವರ್ತಮಾನಿಗ
ಳಾತ್ಮವಿದ ಪೌರಾಣವಿದರಸಂಖ್ಯಾತಗಣಮೆನಲು ।
ನೂತನ ಪುರುತಾನರು ಪ್ರಮಥರು
ಜಾತಿಶ್ರೇಷ್ಠರು ವೀರಶೈವರು
ಭೂತಪತಿಶಿವ ಸಭೆಯಲಿರ್ದರು ಹೇಳಲರಿದೆಂದ ॥ ॥ ೪೫ ॥

ಮಿಂಚೊ ಧವಲಾಂಬರವೊ ಪ್ರಣಮದ
ಗೊಂಚಲೋ ಕ್ಷೀರಾಬ್ಧಿ ತೆರೆಗಳೊ

ಹಂಚಿ ವಿವರಿಸಿ ಹೇಳಲಸದಳ ಪ್ರಮಥ ಸ್ಥಳ ಕುಳವ ।
ಮುಂಚೆ ಶ್ರುತಿಗಳು ಮಳಲ ಸಾಗ್ರಿದು
ಕೊಂಚೆಯಲ್ಲೆಂದೆನುತ ಸಾರವೆ
ಪಂಚಮುಖನೋಲಗದಿ ಷಟ್ಸ್ಥಲ ಶರಣರೊಪ್ಪಿರಲು ॥ ॥ ೪೬ ॥

ಬಾಲ ಒಂದನೆ ಸ್ಥಾನ ನೋಟಕ
ವಾಲಗದ್ವಯ ಮೂರೆ ಬಿರಿದಿನ
ಸಾಲು ನಾಲ್ಕೇ ಪರಿಚರರು ಊಳಿಗವೆ ಐದರಲಿ ।
ಮೇಲಣಾರನೆ ಸ್ಥಾನ ಮುನುಮನಿ
ಏಳರಲಿ ಋಷಿ ಎಂಟು ನೆಲೆ ದಿ
ಕ್ಪಾಲರೊಂಬತ್ತರಲಿ ಸಿದ್ಧರು ಸಾಧ್ಯರೊಪ್ಪಿದರು ॥ ॥ ೪೭ ॥

ತುಂಬರರ ನಾರದರ ಗಾನದ
ಕಂಬಲಾಶ್ವತರುಗಳ ಗೀತಕ
ದಂಬ ಗರುಡರ ಗಾಂಧರ್ವ ಹನುಮಾಣ್ಯ ರಾಗರಸ ।
ತುಂಬಿತುಳುಕುತಲಿರಲಿ ಸಭೆಯನು
ಶಾಂಭವನು ಶಾಂಭವಿಯು ಲಾಲಿಸ
ಲಂಬುಜೋದ್ಭವನರಸಿ ವೀಣೆಯ ಕೇಳಿಸಿದಳಣುಗ ॥ ॥ ೪೮ ॥

ಈರೇಳು ಲೋಕದ ವಿಚಾರಣೆ
ಭಾರಗಳ ನಿಮಿಷದಲೆ ತೀರಿಸಿ
ನಾರದನ ಭೂತಳಕೆ ಕಳುಹಿಸಿ ಸಕಲ ಪ್ರಮಥರ ।
ನಾರಿಯರ ಡವಳಾರಗಳ ಸುರ
ನಾರಿಯರ ಶೋಭನವ ಕೇಳುತ
ಮಾರಹರ ಚೇಲಾಳಸ್ವಾಮಿಯು ನಗುತಲೊಪ್ಪಿರಲು ॥ ॥ ೪೯ ॥

ಶ್ರೀಪರಂಜ್ಯೋತಿ ಸ್ವರೂಪಕ
ನೀ ಪರಿಯಲೋಲಗದೊಳೊಪ್ಪಿರೆ
ತಾಪಸೋತ್ತಮ ಕಮಲಭಾಸ್ಕರನೆಂದು ಕರವೆತ್ತಿ ।
ಭಾಪುರೇ ಪರಬ್ರಹ್ಮ ತ್ರೈಜಗ
ಸ್ಥಾಪಕಾಚಾರ್ಯಾಂಶನಿಧಿ ಚಿ
ದ್ರೂಪ ಶಂಭು ಪರಾಕೆನುತ ಭೃಂಗೀಶ ನಟಿಸದನು ॥ ॥ ೫೦ ॥

ಭೃಂಗಿಯೋ ಲಿಂಗಾಂಗ ಸಂಪ್ರ
ಸಂಗಿಯೋ ಮಾಯಾಹೃದಯ ಸೂ
ಲಂಗಿಯೋ ಪರಿಹಾಸ್ಯ ಶರಧಿ ತರಂಗಿಣಿಯೊ ಎನಲು ।
ಉಂಗುಟಾಗ್ರದಿ ನಿಲುತ ಕುಕ್ಷಿಯ
ಪೊಂಗಿಸುತ ಮುರುಕಿಸುತ ಮೋರೆಯ
ಕಂಗಳೆರಡನು ಮೀಟಿ ಮಿಣಿಕಿಸಿ ಕುಣಿದು ನಗಿಸುತಲೆ ॥ ॥ ೫೧ ॥

ವಾರಿಜೋದ್ಭವನಿಗೆ ಕಿರೀಟವ
ಶಾರದೆಗೆ ನವರತ್ನಮುಕುರವ
ಮಾರುತಿಗೆ ಕಂಕಣವನಗ್ನಿಗೆ ಘಟ್ಟಿ ಮಧು ಘೃತವ ।
ಸೂರಿಯಗೆ ಇಕ್ಷುವನು ಲಕ್ಷ್ಮಿಗೆ
ಪಾರಿಜಾತದ ಸರವ ಸುರುಳಿಸಿ
ತೋರಿದಾಕ್ಷಣ ಭೃಂಗಿ ಶಿವಸಭೆ ಹಾಸ್ಯ ಸಭೆಯೊಳಗೆ ॥ ॥ ೫೨ ॥

ಪುಟ್ಟ ಮರಿದೇವರುಗಳೆಲ್ಲರು
ಹೊಟ್ಟೆ ಹಸಿಯಿತ್ತಮ್ಮ ಪಾರ್ವತಿ
ರೊಟ್ಟಿ ಕಜ್ಜಯ ಹಣ್ಣು ಕಾಯ್ಗಳ ಕೊಡಿಸಿ ನಮಗೆನಲು ।
ಅಟ್ಟಹಾಸಗಳಿಂದ ಹಿರಿಯರು
ದಟ್ಟಸಲ್ಕದ ಕೇಳಿ ಈಶ್ವರ
ತಟ್ಟಿನೋಲಗ ಹರಿಸೆನಲ್ಕಾರತಿಯನೆತ್ತಿದರು ॥ ॥ ೫೩ ॥

ದೃಷ್ಟ ದೃಢದರ ಭಕ್ತ ಜಯ ಬಹು
ತ್ರೃಷ್ಟ ತೃಡ್ಜಿತ ನಮಿತ ಜಯ ಸಹಿ
ತಿಷ್ಟ ಶರಣರ ಹೃದಯಸರಸಿಜ ಬಾಲಭಾಸ್ಕರನೆ ।
ವಿಷ್ಣುಬ್ರಹ್ಮಾರ್ಚಿತ ಚರಣ ಜಯ
ವಿಷ್ಣು ಜಯಕರ ಬಾಣ ಶರಣೆನು
ತುಷ್ಣಕರ ಹಿಮಗೈರುಭಯಕ ದೀವಟಿಗೆ ಹಿಡಿಯೆ ॥ ॥ ೫೪ ॥

ದೀವಟಿಗೆಯ ಸಲಾಮು ತೀರಲು
ದೇವತೆಗಳೆಲ್ಲಡ್ಡ ಬಿದ್ದರು
ಪೂವಡಿಗ ಹಾವಡಿಗ ಸೈಗೆಡೆದೆದ್ದು ಕೈಮುಗಿದು ।
ಹಾವುಗೆಯ ತಂದಿಟ್ಟರಾಕ್ಷಣ

ಹೂವಿನ ಮಳೆಗರೆದವಾಗಳೆ
ದೇವದುಂದುಭಿ ಮೊಳಗಿದವು ಸುರಮುನಿಗಳುಘೆಯೆನಲು ॥ ॥ ೫೫ ॥

ಹಗಲಬತ್ತಿಯ ಚಂದ್ರಜ್ಯೋತಿಯ
ನೆಗೆವ ಕೊಳವೆಯ ನಗುವ ಬಿರಿಸಿನ
ಉಗುವ ಚಕ್ರ ಹಿಲಾಲು ಪಂಜಿನ ಸಾಲ ದೀವಟಿಗೆ ॥
ಬಿಗಿದ ರಥ ತಿರುಗಣಿಯ ಕುರುಜಿನ
ಹೊಗೆಯ ಮುಚ್ಚಳ ಕುಡಿಕೆ ಕಳೆಗಳು
ಹಗಲಿರುಳು ಜಗಜಗಿಸುವ ಭವನ ಚರಣನಖಕೆಣೆಯೆ ॥ ॥ ೫೬ ॥

ಬಲಯುತರ ಬಗ್ಗಿಸಿದ ಗರ್ವದಿ
ಮಲೆತವರ ಮರ್ದಿಸಿದ ಸೆಣಸಿದ
ಚಲದ ದನುಜರ ಚಚ್ಚಿ ಮಡಗಿದ ಚರಣವೆಚ್ಚರಿಕೆ ।
ಕಲಿ ಜಲಂಧರ ಕಾಲಕಾಮರ
ಗೆಲಿದ ಪಾದದ ಧ್ಯಾನವೆನುತಲಿ
ಜಲಜ ಬಹು ಜಲಜಾಕ್ಷ ಪರಶಿವ ಬಿರುದ ಹೊಗಳಿದರು ॥ ॥ ೫೭ ॥

ಅಮರಪಡೆ ಆದಿಯ ಪುರಾತರು
ಸುಮನಸರು ಸುಖಿ ಸೂತ ವಿರತರು
ಯಮಿಜನರು ಶಿವಯೋಗಿಗಳು ವೇದಾಗಮ ಪುರಾಣ ।
ಪ್ರಮಥಗಣ ಮುನಿ ಒಟ್ಟು ಷಟ್ಸ್ಥಲ
ವಿಮಲ ಭಕ್ತರು ಹರಿಯಜೇಂದ್ರರು
ಉಮೆಯರಸ ಚೀಲಾಳಸ್ವಾಮಿ ತ್ರಾಹಿ ರಕ್ಷಿಪುದು ॥ ॥ ೫೮ ॥

ಎನುತ ಹೊಗಳುವ ಚೇದ್ಯ ಮಾಗಧ
ತನುವಿನಗ್ಗಳದಾಗಮಿಕರ
ವಿನುತ ಕವಿಬುಧ ದೇವವಾದ್ಯದ ಸಕಲ ವೈಭವದ ।
ಘನತರದ ಷಟ್ಸ್ಥಲದ ಶರಣರ
ಮನೆಗೆ ಬಿಜಹರಿಸುತಲಿ ಮಿಕ್ಕಿನ
ಜನರನೆಲ್ಲರ ಕಳುಹಿ ಹರಿಯಜ ಸುರರ ಬೀಳ್ಕೊಟ್ಟು ॥ ॥ ೫೯ ॥

ಶ್ರೀ ಗುರುವು ಚೀಲಾಳಸ್ವಾಮಿಯು
ನಾಗಭೂಷಣ ಗೌರಿ ಗಣಪತಿ

ಭಾಗೀರಥಿ ಗುಹ ವೀರಭದ್ರನು ಭದ್ರಕಾಳಮ್ಮ ।
ಆಗಮಿಕರು ಆಪ್ತ ಶಿವಗಣ
ಸಾಗಿಯಂತಃಪುರಕೆ ಬರಲೊಳ
ಬಾಗಿಲಲ್ಲಾರತಿಯ ಹಿಡಿದರು ಮಗನೆ ಕೇಳೆಂದ ॥ ॥ ೬೦ ॥

ಮದಗಜವೊ ಮರಿಹಂಸೆಗಮನವೊ
ಕದಳಿ ಕಂಬವೊ ಕನಕದೊಡೆಗಳೊ
ಕದಪೊ ಕನ್ನಡಿ ತಳುಕೊ ದಂತವೊ ದಾಡಿಮದ ಬಿತ್ತೊ ॥
ವದನವೋ ಪರಿಪೂರ್ಣ ಚಂದ್ರನೊ
ಚದುರೆಯರು ಗುರುಸ್ವಾಮಿ ಶಿವನಿಗೆ
ಕದಡಿನಾರತಿಯೆತ್ತಿ ನಿಜ ಮಂಗಳವ ಹೇಳಿದರು ॥ ॥ ೬೧ ॥

ಭ್ರಮರವೋ ಕೃಷ್ಣಹಿಯೊ ನೀಲವೊ
ಕಮಲವೋ ದರ್ಪಣವೊ ಚಂದ್ರನೊ
ಕುಮುದವೋ ಮೀನ್ಮರಿಯೊ ಮೃಗವೋ ಲತೆಯೊ ಕರಿಕರವೊ ।
ಅಮಮ ಸಿಂಹನೊ ಉಡುವೊ ಕಡಜನೊ
ರಮಣಿಯರು ಗುರುಸ್ವಾಮಿ ಶಿವನಿಗೆ
ಕಮಲದಾರತಿಯೆತ್ತಿ ಶುಭಮಂಗಳವ ಹೇಳಿದರು ॥ ॥ ೬೨ ॥

ಅಳಿಕುಳವೊ ಅಳಕೋಳಿ ಬಳಗವೊ
ಎಳವೆರೆಯೊ ಶ್ರೀ ನೊಸಲ ರೇಖೆಯೊ
ಫಲಕುಸುಮವೋ ನಾಸಿಕವೊ ವಿದ್ರುಮವೊ ಚೆಂದುಟಿಯೊ ।
ಕಳಶವೋ ಗುರುಕುಚವೊ ಶಿಸ್ತಿನ
ಕೆಳದಿಯರು ಗುರುಸ್ವಾಮಿ ಶಿವನಿಗೆ
ಕಳಶದಾರಿಯೆತ್ತಿ ಜಯಮಂಗಳವ ಹೇಳುತಲೆ ॥ ॥ ೬೩ ॥

ನಡೆದರಂತಃಪುರಕೆ ಬೆಡಗಿನ
ಮಡದಿಯರು ನವನೂತ್ನದಂಬರ
ದುಡಿಗೆ ಭೂಷಣ ತೊಡೆದ ಗಂಧದ ಮುಡಿದ ಪುಷ್ಪಗಳ ।
ಹಿಡಿದ ಕಳಶದ ಮಡಿಲವೀಳ್ಯದ
ಸಡಗರದ ಶಾಂಭವಿಯ ಸಖಿಯರು
ಮೃಡ ಗುರುವಿನಡಿಗೆಡೆದು ಸುಖಸಂತೋಷದಿಂದಿಹರು ॥ ॥ ೬೪ ॥

ಮಣಿಕಿರೀಟದ ಫಣಿವಿಭೂಷದ
ಪಣೆಯ ಭಸಿತದ ಹಣೆಯ ನೇತ್ರದ
ಗಣಕುಲಧಿಪನು ಗಣಪ ಜನಕನು ಒಂದೆಯಾಗಿಹರು ।
ಪ್ರಣವಕೋಶನು ಪ್ರಣವಪುರುಷನು
ಗುಣದಶನು ಗುಣತ್ರಯಕಧೀಶನು
ತ್ರಿಣಯ ತಾರಕಬ್ರಹ್ಮ ಚೀಲಳಸ್ವಾಮಿ ಪರವಸ್ತು ॥ ॥ ೬೫ ॥

ಸಕಲಸಂಭ್ರಮ ಸುಖದ ಸಂದಣಿ
ಸಖಿಯರೀರ್ವರು ಸುತರು ಮೂವರು
ಸಖರು ಷಟ್ಸ್ಥಲಮೂರ್ತಿ ಚೀಲಳಸ್ವಾಮಿ ಶಂಕರನು ।
ಅಖಿಳಜಗಪಾಲಕನು ಪ್ರಮಥರ
ನಕರಕನುದಿನ ತೃಪ್ತಿವಡಿಸುತ
ಸಕಲವೈಭವದಿಂದಲಿರ್ದರು ಮಗನೆ ಕೇಳೆಂದ ॥ ॥ ೬೬ ॥

ಸೃಷ್ಟಿ ಈರೇಳೆಕ್ಕೆ ಕ್ಷಮೆಗಳ
ಹುಟ್ಟಿ ಬಾಳುವ ಜನಕೆ ದಮೆಗಳ
ಪಟ್ಟಣಕೆ ಪಾಳೆಯಕೆ ಪ್ರಭುವಿಗೆ ಪ್ರಜೆಗೆ ಫಲತತಿಗೆ ।
ದಿಷ್ಟಿಮುಷ್ಟಿಗೆ ದಿವ್ಯಕ್ಷೇತ್ರಕೆ
ಷಟ್ಸ್ಥಲದ ಶರಣರಿಗೆ ನಿಜಸುಖ
ಗೊಟ್ಟು ಪಾಲಿಸಬೇಕು ಚೀಲಳಸ್ವಾಮಿ ಕರುಣದಲಿ ॥ ॥ ೬೭ ॥

ರಾಣಿಪಾರ್ವತಿಗಭವ ಪ್ರಮಥರ
ಶ್ರೇಣಿಗಿದ ನಂದೀಶ ಜಂಗಮ
ಪ್ರಾಣಿ ವೃಷಭಗೆ ಪ್ರಭುವರಣೆ ಬೋಧಿಸಿಯೆ ಪೂರ್ವಾಣಿ ।
ಕ್ಷೋಣಿಗಗ್ಗಳ ಹರಪುರದ ನಿ
ರ್ವಾಣಿಗಿರಿ ಷಟ್ಸ್ಥಲದ ಪೀಠ ಪ್ರ
ವೀಣ ಬಸವಪ್ರಭು ಪುರಾಣದ ದೇಶಿಕನಿಗೊರೆದ ॥* ॥ ೬೮ ॥

❖❖

---

* ಇತಿ ತ್ರಯೋದಶ ಸ್ಕಂಧ ನಿರೂಪಣಂ ಅಂತು ಉಭಯ ಪದಗಣನೆ ೫೬೮ಕ್ಕಂ ಮಂಗಳ ಮಹಾಶ್ರೀ ॥

ಚತುರ್ದಶ ಸ್ಕಂಧ

ರಾಗ : ಸಾವೇರಿ

ಮಾರಹರ ಶ್ರೀಗುರುವೆ ಧರಣಿಗೆ
ನಾರದನ ಕಳುಹಿಸಿದ ವಿವರದ
ಕಾರಣವನರುಹೆಂದ ಕಂದನಿಗೊರೆದ ದೇಶಿಕನು ॥

ಶ್ರೀಸದಾಶಿವ ಶಾಂತಶಾಶ್ವತ
ದೇಶಿಕೇಂದ್ರಸುದಾಬ್ಧಿಚಂದ್ರಮ
ದಾಸೋಹಿ ಸದ್ಭಕ್ತಿ ಸರಸಿಜ ಜ್ಞಾನಭಾಸ್ಕರನೆ ।
ಪೂಷನಂದನ ಪುಣ್ಯವಿರಹಿತ
ಪಾಶದಂಡಧೃತಾಂಕ ಕರಕೀ
ನಾಶ ಗರ್ವವಿನಾಶ ಶಂಕರ ಸಲಹು ಮೂಜಗವ ॥ ॥ ೧ ॥

ಕಲೆಯೊ ಗಾನವೊ ಕಾವಿ ವಸ್ತ್ರವೊ
ತಲೆಯೊ ತತ್ವವೊ ತಳಿರೊ ಜಡೆಗಳೊ
ಹೊಲಬೊ ಯೋಗವೊ ಭಸಿತ ರುದ್ರಾಕ್ಷಿಗಳೊ ಭೂಷಣವೊ ।
ಕುಲ ನಿರಂಜನ ನೆಲೆಯ ಹರಪುರ
ಸ್ಥಲವೆ ಷಟ್ಸ್ಥಲ ಪ್ರಭುಪರಂಪರೆ
ಚೆಲುವ ಸದ್ಗುರುಮೂರ್ತಿ ಚೀಲಲಳಸ್ವಾಮಿ ಶರಣಾರ್ಥಿ ॥ ॥ ೨ ॥

ಅರಿದ ಕಾಂತೆಗೆ ಅನುಭವಿಕಗೆ
ಸರಸಗಾತಿಗೆ ಸಲುವ ಪುರುಷಗೆ
ಕರದ ಲಿಂಗವ ನಂಬಿದವಳಿಗೆ ಕ್ರೀಯನಿಷ್ಠನಿಗೆ ।
ಗುರುವೆ ಪರಶಿವನೆಂಬ ರಮಣಿಗೆ

ಚರವೆ ಶಂಕರನೆಂಬ ರಮಣಗೆ
ತರುಣ ಮರೆಯದೆ ಬೋಧಿಸೀ ಷಟ್ಸ್ಥಲಶಿವಾಯಣವ ॥ ॥ ೩ ॥

ಮಡೆಯ ಗಂಡಿಗೆ ಮದಡ ಹೆಣ್ಣಿಗೆ
ದಡಿಗೆ ಗಂಡಗೆ ದಡರೆ ಪತ್ನಿಗೆ
ಬಡಿವ ಬಣಗಗೆ ಬಡಿಗೆ ಗೌಡಿಗೆ ಭಂಡ ದಂಪತಿಗೆ ।
ಕೆಡಿಸುವವಳಿಗೆ ಕೆಟ್ಟು ನಡೆವಗೆ
ದುಡುಕುಗಾರಗೆ ಧೂರ್ತನಾರಿಗೆ
ನುಡಿದು ಬೋಧಿಸಬೇಡವೀ ಷಟ್ಸ್ಥಲಶಿವಾಯಣವ ॥ ॥ ೪ ॥

ಬೆಟ್ಟದಣುಗಿಗೆ ಭಾಳಲೋಚನ
ಶ್ರೇಷ್ಠ ನಂದೀಶ್ವರ ಪ್ರಮಥರಿಗೆ
ನೆಟ್ಟನೇ ಪ್ರಭುರಾಯ ವೃಷಭಗೆ ಬೋಧಿಸಿದ ಸೂತ್ರ ।
ಸೃಷ್ಟಿಗಗ್ಗಳ ಹರಪುರದ ಶ್ರೀ
ಬೆಟ್ಟದನುಭವಪೀಠ ಷಟ್ಸ್ಥಲ
ಪಟ್ಟದಧಿಪತಿ ಬಸವಪ್ರಭು ಸುತಗೊರೆದ ಗುರುವಾಕ್ಯ ॥ ॥ ೫ ॥

ಸೋಮ ಶಂಕರ ಸಿಂಗಿ ಶಿವಗುರು
ಧಾಮ ರಾಘವ ಹರಿಹರ ಪ್ರಭು
ಭೀಮಕವಿ ವಿರುಪಾಕ್ಷ ಕೇಶಿಯ ಪದ್ಮ ಜಕ್ಕಣರ ।
ಚಾಮ ನಿಜಗುಣ ಕಲ್ಲಮಠಪ್ರಭು
ಶ್ರೀಮಹಾದೇವಾರ್ಯ ಮಠಗುರು
ಸ್ವಾಮಿಗಳ ನೆನೆ ಮಗನೆ ಷಟ್ಸ್ಥಲ ಕುಲಚಲೋದ್ಧರರ ॥ ॥ ೬ ॥

ರೇವಣಾಚಾರ್ಯರ ಮರುಳಗುರು
ದೇವರೇಕೋರಾಮದೇಶಿಕ
ದೇವ ಪಂಡಿತಗುರುವ ವಿಶ್ವಾಚಾರ್ಯ ಜಗದ್ಗುರುವ ।
ಶ್ರೀವಿಮಲ ಷಟ್ಸ್ಥಲ ಮಹಿಮರಡಿ
ದಾವರೆಯ ಭಜಿಸುವರ ಕುಲಗುರು
ದೇವಗುರುಗಳ ನೆನೆ ಮಗನೆ ಶಿವಮತ ಪ್ರತಿಷ್ಠಿತರ ॥ ॥ ೭ ॥

ಕೇಳೊ ಮಗನೇ ನಿಮ್ಮ ಗುರುವಿನ
ಪೀಳಿಗೆಯ ಏಳಿಗೆಯ ಹೇಳುವ

ಭಾಳನೇತ್ರನು ಸತಿಸುತರು ಚೀಲಾಳಸ್ವಾಮಿಗಳು ।
ತಾಳಮೇಳವು ಊಳಿಗವು ಸಹ
ಬಾಳಸಂದಣಿಯಿಂದ ಪ್ರಮಥರು
ಓಲಗವ ಕೈಕೊಳುತಲಿರ್ದರು ಸಕಲಸಂಭ್ರಮದಿ ॥ ॥ ೮ ॥

ಹಾಡುವರು ಹೊಗಳುವರು ಸರಸವ
ನಾಡುವರು ಕರವೊಡ್ಡಿ ವರಗಳ
ಬೇಡುವರು ಬಿದ್ದೆದ್ದು ಕಯ್ಗಳ ಮುಗಿದು ನಂದಿಹರು ।
ಕೂಡುವರು ಅಗಲುವರು ನಲಿದೊಲೆ
ದಾಡುವರು ನಗುತಿಹರು ಶಶಿಕಳೆ
ಸೂಡಿದನ ಓಲಗದ ವರ್ಣವನಾವ ಕವಿ ಬಲ್ಲ ॥ ॥ ೯ ॥

ಕಡತ ಬಳಹವ ಹಿಡಿದು ಮಸಿಗಳ
ತೊಡೆದು ಮಾತ್ರೆಯನೆಣಿಸಿ ಬರೆವೊಡೆ
ಜಡ ಮರಿಯ ಬಡಕವಿತೆಂದವೆ ಸ್ವಾನುಭವಬೋಧೆ ।
ಹಿಡಿದ ಲೇಖವ ಬಿಡದೆ ಕಂಟವ
ಮಡಿವ ಪ್ರಣವ ಲಿಖಿಸುವಗ್ಗಳ
ಮೃಡನಿರೂಪ ಸ್ವರೂಪತತ್ತ್ವಜ್ಞಾನ ಬಲವೆಂದ ॥ ॥ ೧೦ ॥

ಓಲೆ ಕಂಟವ ಹಿಡಿದು ಚಿಂತಿಸಿ
ಮೇಲೆ ಕೆಳಗನೆ ನೋಡಿ ಲಿಖಿಸುವ
ಸಾಲುಗತಿಗಳ ಸಾಲೆ ಷಟ್ಸ್ಥಲತತ್ವಮಣಿಮಾಲೆ ।
ಹಾಲುಕ್ಕಿ ಮೇಲ್ವರಿದ ಹಾಗೆಲೆ
ಬಾಲಕನೆ ಸುಕುಮಾರ ಪ್ರಭುವಿನ
ಶೀಲವನ್ನ ಸಕೀಲಕೆಳಸದ ಗುರುಕಟಾಕ್ಷ ಬಲ ॥ ॥ ೧೧ ॥

ಧಾರಣಿಯ ಘನಕ್ಷೇತ್ರ ತೀರ್ಥವ
ವಾರುಧಿಯ ನವಖಂಡಪೃಥ್ವಿಯ
ಮೇರುಮಂದಿರ ಋಷಿಗಳಾಶ್ರಮ ಮುನಿನೃಪರ ಸಭೆಯ ।
ಮೂರುಲೋಕದ ಮುಕ್ತಿಪುರುಷರ
ಚಾರುಚರಿತರ ನೋಡಿ ನಲಿವುತ
ನಾರದರು ನಿಜಗುರುವ ಕಂಡನು ಮಗನೆ ಕೇಳೆಂದ ॥ ॥ ೧೨ ॥

ಭೂಪ್ರದಕ್ಷಿಣ ತೀರೆ ನಾರದ
ಪಾಪಕ್ಷಯ ಹರಪುರದ ಮುಕ್ತಿಯ
ಸೋಪಾನ ಸೋಪಾನಗಳ ಶಿವಯೋಗ ಮಂಟಪದ ।
ಶ್ರೀ ಪರಂಜ್ಯೋತಿಸ್ವರೂಪನಿ
ರೂಪ ತಾರಕ ಬ್ರಹ್ಮಬೋಧ ಪ್ರ
ತಾಪ ಚೀಲಳಸ್ವಾಮಿ ಚರಣವ ಕಂಡ ನಾರದನು ॥ ॥ ೧೩ ॥

ಆನಂದ ಪ್ರಭುವೀತನೋ ಸು
ಜ್ಞಾನಮೂರ್ತಿಯ ಲೀಲೆಯೋ ಶಿವ
ಸ್ಥಾನಸ್ಥಾನದಿ ತಾನೆ ತಾರಕಬ್ರಹ್ಮವಾಗಿದೆ ಹೋ ।
ನಾನರಿಯಬೇಕೆನುತ ಬೇಗದಿ
ಜ್ಞಾನದೃಷ್ಟಿಲಿ ತಿಳಿದ ನಾರದ
ಸ್ವಾನುಭಾವಿಗಳರಸ ಚೀಲಳಸ್ವಾಮಿ ನಮೊಯೆಂದ ॥ ॥ ೧೪ ॥

ಹೊಳೆವ ಕೆಂಜೆಡೆ ಹೊದರ ಗಡ್ಡದ
ತಿಳಿಗಾವಿ ವಸ್ತ್ರದ ತ್ರಿಪುಂಡ್ರದ
ಗಳದ ಗೌಳದ ಪಂಚಸ್ತೋತ್ರದ ಹಸ್ತ ಜಪಸರದ ।
ಥಳಥಳಿಪ ಮುಖರಸದ ನಸುನಗೆ
ಬೆಳಗುಗಂಗಳ ಬ್ರಹ್ಮಬೋಧೆಯ
ನಳನಳಿಪ ಗುರುಚರಣಕಮಲವ ಕಂಡ ನಾರದನು ॥ ॥ ೧೫ ॥

ದೊಡ್ಡ ಜಡೆಗಳ ಧೋತ್ರದುಡಿಗೆಯ
ಗಡ್ಡ ಮೀಸೆಯ ಘನವಿರಕ್ತರು
ಅಡ್ಡಬಿದ್ದರು ಭವವ ಕೀಳುವ ಠೀವಿಗಳ ಕಂಡು ।
ಗುಡ್ಡದೊತ್ತಿನ ಮಠದ ನೂತ್ನದ
೧[ದೊ]೧ಡ್ಡಿದನುಭವಯೋಗಪೀಠದ
ದೊಡ್ಡ ವಸ್ತುವಿದೆಂದು ಸೈಗೆಡೆದೆದ್ದು ಕೈಮುಗಿದು ॥ ॥ ೧೬ ॥

ಕಂಡೆನೀ ಕ್ಷಣದಲ್ಲೆ ವಸ್ತುವ
ಕಂಡೆನೀ ಗಳಿಗೆಯಲೆ ಬ್ರಹ್ಮವ
ಕಂಡೆನೀಗಳೆ ಪರಕೆ ಪರತರ ಘನಕೆ ಘನತರವ ।

೧–೧ ತೊ(ಮೂ)

ಕಂಡೆನಿಂದೇ ಮೋಕ್ಷಮಾರ್ಗವ
ಕಂಡೆನೀಗ ಕೃತಾರ್ಥನಾದೆನು
ಕಂಡೆ ತಾರಕಬ್ರಹ್ಮ ಚೇಲಳಸ್ವಾಮಿಚರಣವನು ॥ ॥ ೧೭ ॥

ಶ್ರೀಮಹಾಲಿಂಗ ಸ್ವರೂಪನೆ
ಸಾಮಸುಖ ಸಂತಾದಿ ವಿನುತನೆ
ನಾಮಸೀಮೆಗಳಳಿದ ಪರಶಿವಮೂರ್ತಿ ಸದ್ಗುರವೆ ।
ಸೋಮಸೂರ್ಯ ಚಿದಗ್ನಿಮಂಡಲ
ರಾಮ ತಾರಕಬ್ರಹ್ಮ ಚೇಲಳ
ಸ್ವಾಮಿ ಶಾಂಭವಪ್ರಾಣ ಕಳೆಯಲ ಶಿವಶಿವಾಯೆಂದ ॥ ॥ ೧೮ ॥

ಆಸನವೆ ಸಿದ್ಧಾಂತ ಋಜುತನು
ನಾಸಿಕಾಗ್ರದ ದೃಷ್ಟಿ ಖೇಚರಿ
ಸೂಸದಿಹ ಮನ ಮರುತ ಶಿಖಿ ನಿಜ ಭ್ರೂಲತಸ್ಥಾನ ।
ಸಾಸಿರದಳಾಂಬುಜದ ಮಧ್ಯ ಪ್ರ
ಕಾಶ ಚೇಲಳಸ್ವಾಮಿ ಶಾಂಭವಿ
ಶೇಷ ತಾರಕಬ್ರಹ್ಮ ನಿಜವಲ ಶಿವಶಿವಾಯೆಂದ ॥ ॥ ೧೯ ॥

ಮಣಿ ಕಿರೀಟದ ಜಡೆಗಳೊಲೆವುತ
ಮಣಿಯ ಜಪಮಾಲೆಗಳ ಹಸ್ತದ
ತ್ರಿಣೆಯನವತಾರದ ವಿರಕ್ತರ ಕಂಡ ನಾರದನು ।
ಗುಣತ್ರಯವ ಮೀರಿದನ ಲೀಲೆಯ
ನೆಣಿಸಿ ಬೋಧಿಪ ತತ್ವಚಿಂತಾ
ಮಣಿಯೆ ಚೇಲಳಸ್ವಾಮಿ ನಿಜಗುರು ಶಿವಶಿವಾಯೆಂದ ॥ ॥ ೨೦ ॥

ನೀಲಗಿರಿಯಗ್ರದಲೆ ಸೂಕ್ಷ್ಮ ವಿ
ಶಾಲನೇತ್ರದ ಮಧ್ಯ ವಿದ್ಯುತ
ಬಾಲರವಿಶಶಿ ಶಿಖಿಯ ಮಧ್ಯದ ವಸ್ತುವಿದೆ ತಾನೆ ।
ಚೇಲಳೇಶ್ವರನೆಂಬ ನಾಮದಿ
ಗೋಲಟಾಗ್ರದ ಮೇಲೆ ನಟಿಸುವ
ನೀಲತಾರಕಜ್ಯೋತಿ ಕಲೆಯಲ ಶಿವಶಿವಾಯೆಂದ ॥ ॥ ೨೧ ॥

ಕುಂಡಲಿಯ ಕುಣಿಕೆಗಳ ಕಳಚಿದ
ಖಂಡಿಸಿದ ಕರಣಾದಿ ಗುಣಗಳ
ಪಿಂಡಬ್ರಹ್ಮಾಂಡಗಳ ಚಕ್ರಪ್ರಬೋಧ ಗುರುವೀತ ।
ಮಂಡಲತ್ರಯ ಮಧ್ಯವಸ್ತು ಪ್ರ
ಚಂಡ ಚೀಲಳಸ್ವಾಮಿ ತಾರಕ
ಖಂಡ ಜ್ಯೋತಿಪ್ರಕಾಶ ಕಳೆಯಲ ಶಿವಶಿವಾಯೆಂದ ॥ ॥ ೨೨ ॥

ಅರಿವೆಯೊಬ್ಬುಳಿಯಾದ ಜ್ಞಾನದ
ಶರಧಿ ತೆರೆ ಮೇಲ್ವರಿದ ತತ್ವದ
ನಿರಿಗೆ ನಿಶ್ಚಲವಾದ ಮಹಿಮನ ಕಂಡು ನಾರದನು ।
ಶರಿರ ಮನ ಭಾವೇಂದ್ರಿಯಂಗಳು
ಕರಗಿ ಸಮರಸವಾದ ಬ್ರಹ್ಮದ
ಕುರುಹೆ ಚೀಲಳಸ್ವಾಮಿಯಹುದಲ ಶಿವಶಿವಾಯೆಂದ ॥ ॥ ೨೩ ॥

ಅಂಬುಜದ ಕರ್ನಿಕೆಯ ಮಧ್ಯದ
ಶಾಂಭವಿಯೊ ಷಟ್ಸ್ಥಲವೊ ಶರಣ ಕ
ದಂಬವೋ ಜ್ಞಾನಾಂಬುನಿಧಿಯೊ ಚಿದಂಬರವೊ ಗುರುವೊ ।
ತುಂಬಿತುಳುಕುವ ಪ್ರಮಥ ಸಭೆಯಾ
ಡುಂಬೊಲವೊ ಚೀಲಾಳಸ್ವಾಮಿಯೊ
ಶಾಂಭವಿಯೊ ಶಾಂಭವನ ಲೀಲೆಯೊ ಶಿವಶಿವಾಯೆಂದ ॥ ॥ ೨೪ ॥

ವೀರಶೈವದ ಅಚ್ಚೊ ಷಟ್ಸ್ಥಲ
ಸಾರತತ್ವದ ಕೆಚ್ಚೊ ಅನುಭವ
ಭಾರಿ ವಿರತರ ಮಚ್ಚೊ ಕ್ರೀಯ ಜ್ಞಾನರಸಗಚ್ಚೊ ।
ಶಾರದಾಪೀಠ ಪ್ರಭುವೊ ವಿ
ದ್ಯಾರಣ್ಯ ಸದ್ಗುರುವೊ ಸಾಕ್ಷಾತ್
ತಾರಕವೆ ಚೀಲಾಳಸ್ವಾಮಿಯು ಶಿವಶಿವಾಯೆಂದ ॥ ॥ ೨೫ ॥

[೧][ಕಾ][೧]ಲಚಕ್ರದ ಮೇಘಚಕ್ರದ
ಕೀಲಭೂಪಟ ಚಕ್ರ ಸ್ಥಳಕುಳ
ಜಾಲದವಗಡ ಚಕ್ರ ಕರ್ತೃವ ಕಂಡ ನಾರದನು ।

೧–೧ ಕೋ(ಮೂ)

ಮೇಲಕೆಳಗಾರೈದು ನೋಡಿದ
ಬಾಲಯೋಗಾಭ್ಯಾಸಿ ಪರಶಿವ
ಲೀಲೆ ಚೀಲಳಸ್ವಾಮಿಯಹುದಲ ಶಿವಶಿವಾಯೆಂದ ॥ ॥ ೨೬ ॥

ಅರಿವು ಮರವೆಯನೆರಡ ಮೀರಿದ
ನೆರವಿಯೊ ಸುಜ್ಞಾನಸಾರವ
ಕರುವ ಕಟ್ಟೆರೆದಿಟ್ಟ ಮಂತ್ರದ ಪ್ರತಿಮೆಯೊ ಗುರುವೆ ।
ತರತರದ ಷಟ್ಸ್ಥಲದ ಪುತ್ಥಳಿ
ಶರಣಸಭೆ ಎಡಬಲದ ವಿಗ್ರಹ
ಕರಸ್ಥಲದ ಪರಂಜ್ಯೋತಿಪ್ರಭುವೆ ಶಿವಶಿವಾಯೆಂದ ॥ ॥ ೨೭ ॥

ಭಕ್ತರಿಚ್ಛೆಯ ೧[ಪಾ]೧ ಲಕನೆ ನಮೊ
ಶಕ್ತಿತಂತ್ರಕೆ ಸಿಲ್ಕದನೆ ನಮೊ
ರಕ್ತರೇತ ಸಮೇತ ವಿರಹಿತ ರಾಜಶಿವಯೋಗಿ ।
ಮುಕ್ತಿಕಾಂತಾಮೌಳಿ ಚರಣವಿ
ರಕ್ತ ಸಂಪದದೋರಿ ಶ್ರುತಿ ಶಿರ
ಸೂಕ್ತಿಗಳ ಉಪದೇಶಿ ಚೀಲಳಸ್ವಾಮಿ ಶರಣಾರ್ಥಿ ॥ ॥ ೨೮ ॥

ಯುಗ ಜುಗವ ಮೀರಿದನ ಚರಣವ
ಹಲಿರುಳ ಗೆದ್ದವನ ಪಾದವ
ಬಗೆಬಗೆಯ ವರ್ಣದಲಿ ಕೀರ್ತಿಸಿ ಸ್ವಾಮಿಯಗ್ಗಲವ ।
ಅಗಣಿತೋತ್ಸಹದಿಂದ ಕೀರ್ತಿಸಿ
ನಗುತ ವೀಣೆಯ ಮೀಟಿ ನಟಿಸುತ
ಸುಗುಣ ನಾರದ ಬಳಸಿಬಂದಡಿಗೆರಗಿ ಕೈಮುಗಿದು ॥ ॥ ೨೯ ॥

ಎಲ್ಲ ಲೋಕಾರಾಧ್ಯ ಪ್ರಭುವನು
ಮಲ್ಲಗೆಯ ಪೊದೋಟದೊಳಗಂ
ದಲ್ಲಿ ದರ್ಶನ ಸ್ವಾಮಿ ಪಾದವು ಬಹಳ ದಿವಸದಲಿ ।
ಇಲ್ಲಿ ಕಂಡೆ ಕೃತಾರ್ಥನಾದೆನು
ಎಲ್ಲ ಜನ್ಮ ಪವಿತ್ರವಾಯಿತು
ಅಲ್ಲಮನೆ ಸಲಹೆನುತ ನಾರದ ನೆಗೆದನಂಬರಕೆ ॥ ॥ ೩೦ ॥

೧–೧ ಬಾ(ಮೂ)

ಶರಣ ಷಟ್ಸ್ಥಲ ವಿರತರೊಟ್ಟಿಗೆ
ಕರಕಮಲಗಳ ಮುಗಿದು ನಾರದ
ಗುರುತ ಹೇಳಿದನೊಂದ ಚೀಲಲಳಸ್ವಾಮಿಪ್ರಭುವೆಂದು ।
ಧರೆಯೊಳಿರುವನು ದೇವಲೋಕದಿ
ಹರನ ಸರಿಗದ್ದುಗೆಯಲಿರುವನು
ಗುರು ನಿರಂಜನಲೀಲೆ ಶ್ರುತಿಮತವೆನುತ ತೆರಳಿದನು ॥ ॥ ೩೧ ॥

ಧವಳಮೇಘವೊ ಧವಳಕಮಲವೊ
ಅವಯವಂಗಳೊ ಭಸಿತ ಪ್ರಭೆಗಳೊ
ಶಿವನ ಸ್ತೋತ್ರವೊ ಶ್ರೀಮುಖವೊ ನೇತ್ರಗಳೊ ದಂತ್ರಗಳೊ ।
ರವಿಯೊ ಚಂದ್ರನೊ ಮಿಂಚೊ ತಾರೆಯೊ
ನಿವಹವೇ ರೂಪಾದ ಮೂರ್ತಿಯೊ
ಶಿವಶವಾಯೆನುತಳಿದ ನಾರದ ನಭದಿ ಶಿವಸಭೆಗೆ ॥ ॥ ೩೨ ॥

ಜೆಡೆಗಳೊಲೆವುತ ಜಾಗು ಜಗ್ಗಿದ
ನಡೆಯ ನೂತ್ನಾಂಬರ ಲಲಾಟದಿ
ತೊಡೆದ ಭಸ್ಮದ ತೊಟ್ಟ ರುದ್ರಾಕ್ಷೆಗಳ ನಗೆಮೊಗದ ।
ಹಿಡಿದ ವೀಣೆಯ ಜಪಸರದ ಕರ
ಮಿಡಿವ ಮಂತ್ರದ ಬೆಡಗು ಪರಶಿವ
ನಡಿಗೆರಗಿ ಕೈಮುಗಿದು ಕೀರ್ತಿಸಿ ನಿಂದ ನಾರದನು ॥ ॥ ೩೩ ॥

ಅಧಮದೈವದ ಗಂಡನಭವನ
ಸದರಿನಲೆ ಸರಿ ಗದ್ದುಗೆಯ ಸದು
ಹೃದಯ ಭಾವದಲಿರುವ ಚೀಲಲಳಸ್ವಾಮಿಯನೆ ಕಂಡ ।
ಮದನಮರ್ದನ ಪ್ರಭುವೆ ಚಿತ್ತೈ
ಸಿದಿರೆ ಷಟ್ಸ್ಥಲ ಬ್ರಹ್ಮಿ ಇಹಪರ
ವಿಧಿ ವಿರಿಂಚಿಗಳೊಡೆಯ ನಮೊಯೊಂದೆರಗಿ ನಾರದನು ॥ ॥ ೩೪ ॥

ಅವನಿಯಲಿ ಶಿವಯೋಗಿಗಳ ಸಭೆ
ಶಿವನ ಸಭೆಯಲಿ ಭೋಗಿಗಳ ಪ್ರಜೆ
ಶಿವನೆ ಚೀಲಳಸ್ವಾಮಿ ಚೀಳಲಸ್ವಾಮಿ ಪರಶಿವನು ।
ಕವಲು ನೋಟದ ಕಪಟ ಚಿತ್ತದ

ಭವದ ಕುರಿಗಳದೇನಬಲ್ಲರು
ಶಿವನೆ ಬಲ್ಲನು ಪ್ರಭುವೆ ಬಲ್ಲನು ಎಂದನಾ ಮುನಿಪ ॥ ॥ ೩೫ ॥

ವೇದಪುರುಷರು ಆಗಮೀಕರು
ಮಾಧವಜ ಸುರಪಾಲ ಸುಮನಸ
ರಾದಿ ಋಷಿಗಳು ಪ್ರಮಥಮುನಿಗಣ ಗೌರಿ ಸಹ ಸಭೆಯು ।
ಭೇದವೇ ಚೀಲಾಳಸ್ವಾಮಿಗೆ
ಪಾದಲೋಚನಗೆನುತ ನುತಿಸುವ
ನಾದವೆಣ್ದೆಸೆ ಮುಸುಗಿ ಮೊಳಗಿತು ಮಗನೆ ಕೇಳೆಂದ ॥ ॥ ೩೬ ॥

ಕೇಳಿರೈ ಪ್ರಮಥರು ಪುರಾತರು
ಕೇಳಿ ಷಟ್ಸ್ಥಲಶರಣ ವಿರತರು
ಕೇಳಿರೈ ಗುರು ಗೌರಿ ಗುಹಗಣ ವಿರತ ನೀ ನಂದಿ ।
ಕೇಳಿರೈ ಹರಿಯಜ ಸುರಪ ಋಷಿ
ಕೇಳಿ ಮನುಮುನಿದಿನಪ ದಿವಿಜರು
ಕೇಳಿ ಚೀಲಳಸ್ವಾಮಿಯಂತರ್ಯಾಮಿಯೆಂಬುದನು ॥ ॥ ೩೭ ॥

ನಡೆದುದೇ ಸತ್ಪಥವು ಕಾಣಿರೆ
ನುಡಿದುದೇ ತಾ ಮಂತ್ರ ದರ್ಶನ
ಬಡೆದವನೆ ನಿಜಮುಕ್ತನಿರ್ದುದೆ ಕ್ಷೇತ್ರವಿವ ಹೊಕ್ಕ ।
ಮಡುವೆ ತೀರ್ಥವು ಮಾತೆ ಶ್ರುತಿವಿಧಿ
ಪಿಡಿದುದೇ ಪರತತ್ವವೀತನು
ತೊಡಗಿ ಮಾಡಿದುದೆಲ್ಲ ದೈವಪ್ರತಿಷ್ಠೆ ಕೇಳೆಂದ ॥ ॥ ೩೮ ॥

ಈತ ನಡೆದುದೆ ಆಗಮೀಕವು
ಈತ ನುಡಿದುದೆ ವೇದವಾಕ್ಯವು
ಈತ ಹಡೆದುದೆ ಪರಮಪಾವನ ಧರ್ಮತತ್ವಗಳು ।
ಈತನೇ ಕಾರುಣ್ಯ ಸುರತರು
ಈತನೇರಿದ ಬೆಟ್ಟ ಪರ್ವತ
ಈತ ನೋಡಿದ ಖಣಿಯೆ ಪರುಷವು ಗಿರಿಜೆ ಕೇಳೆಂದ ॥ ॥ ೩೯ ॥

ಎನ್ನ ಚಿತ್ತದ ಜ್ಯೋತಿ ಈತನು
ಎನ್ನ ಪ್ರಾಣದ ಕಳೆಯು ಈತನು

ಎನ್ನ ಹೃತ್ಕಮಲದಲಿ ಚೀಲಳಸ್ವಾಮಿ ನೆಲಸಿಹನು ।
ಸೊನ್ನಲಾಪುರ ಸಿದ್ಧರಾಮಗೆ
ಮುನ್ನ ಬಸವನ ತೋರಿದಂದದಿ
ತನ್ನ ಹೃದಯವ ತೆರೆದು ತೋರಿದ ಸಭೆಗೆ ಶಂಕರನು ॥ ॥ ೪೦ ॥

ವಿಷಧರನು ಗುರುಸಿದ್ಧರಾಮಗೆ
ಬಸವರಾಜನ ತನ್ನ ಹೃದಯದ
ವಿಷರುಹದ ಮಧ್ಯದಲಿ ತೋರಿಸಿದಂತೆ ಗಣಸಭೆಗೆ ।
ಶಶಿಧರನು ಚೀಲಾಳಸ್ವಾಮಿಯ
ನೊಸೆದು ತೋರಿದನೀ ಪ್ರಕಾರದಿ
ವಸುಧೆ ಈರೇಳ ಜನದ ಚಿತ್ತದಲಿರುವನೆಂದೆನುತ ॥ ॥ ೪೧ ॥

ನೋಡಿರೈ ಪ್ರಮಥರು ಪುರಾತರು
ನೋಡಿ ಷಟ್ಸ್ಥಲ ಶರಣ ಭಕ್ತರು
ನೋಡಿ ಮತಗುರು ಗಂಗೆ ಗೌರಿಯು ವೀರಗುಹಗಣರು ।
ನೋಡಿ ಹರಿಯಜ ಸುರಪ ಋಷಿಗಳು
ನೋಡಿ ದಿಕ್ಪಾಲಕರು ದಿವಿಜರು
ನೊಡಿ ಮನುಮುನಿ ಜನರು ಚೀಲಳಸ್ವಾಮಿ ಚರಣವನು ॥ ॥ ೪೨ ॥

ಒಳಗೆ ಹೊರಗೆಯು ನಗುತ ಕುಳಿತಿಹ
ಚೆಲುವೆ ಚೀಲಳಸ್ವಾಮಿ ಚರಣವ
ನಳಿನನಾಭ ಸ್ವಯಂಭು ಸುರಪತಿ ಸುಮನಸರು ಗೌರಿ ।
ಭಳಿರೆ ಚೀಲಳಸ್ವಾಮಿ ನಮೋನಮೊ
ಅಳಿಕಲೋಚನನಂತರಂಗದಿ
ಹೊಳೆವ ನಿರುಪಮ ಜ್ಯೋತಿಯೆನುತಲಿ ಸಭೆ ಸಹಿತ ॥ ॥ ೪೩ ॥

ಕುಸುಮ ಮಳೆಗಳು ಸುರಿಯೆ ಸುಮನಸ
ರೊಸಗೆ ವಾದ್ಯವು ಮೊಳಗೆ ದುಂದುಭಿ
ದೆಸೆಗೆ ಭೋರಿಡೆ ಶ್ರುತಿಪುರುಷರುಗ್ಗಡಿಸೆ ಪ್ರಮಥಗಣ ।
ಋಷಿಗಳುಘೆಯೆನ್ನುತಿರೆ ಷಟ್ಸ್ಥಲ
ದೇಶಿಕರು ಚೀಲಾಳಪ್ರಭು ಪದ
ಬಿಸರುಹಂಗಳಿಗೆರಗೆ ನಾರದ ಸೈಗೆಡೆದು ನಡೆದ ॥ ॥ ೪೪ ॥

ಅಂತರಂಗದ ಜ್ಯೋತಿ ಅದ್ವಿತಿ
ಕಾಂತಿ ಷಡ್ಗುಣಗ್ರಂಥಿ ಕರಸ್ಥಲ
ಶಾಂತನಲಿ ಕೀಲಿಸಿದ ಕಂಗಳ ಸಮರಸ ಜ್ಞಾನ ।
ಕ್ರಾಂತ ಷಟ್ಸ್ಥಲಮಾರ್ಗಕ್ರೀಗಳ
ಪಂಥ ಬೋಧ ಸುಧಾಬ್ಧಿಚಂದ್ರಕ
ಲಾಂತ ಚೀಲಳಸ್ವಾಮಿ ಶಂಕರ ವಂದೆ ನಿಜವಸ್ತು ॥ ॥ ೪೫ ॥

ಮೂರು ಲೋಕದ ಕರ್ತೃ ಪರಶಿವ
ಮೂರು ಸಾವಿರ ಭರ್ತೃ ಪ್ರಭುನವ
ವೀರ ಗುಹಗಣ ಜನಕ ಶಂಕರ ವೀರಶೈವ ಚರ ।
ಮೂರು ಪುರಗಳ ಗೆಲಿದ ಘನಗುಣಿ
ಮೂರ ಮೀರಿದ ಷಟ್ಸ್ಥಲಾಗ್ರಣಿ
ತಾರಕ ಪರಬ್ರಹ್ಮ ಚೀಲಳಸ್ವಾಮಿ ಶಿವಶರಣು ॥ ॥ ೪೬ ॥

ಪಂಚಮುಖನವತಾರ ಸಕಲ ಪ್ರ
ಪಂಚಮೀರಿದ ಪರಮವಿರತರ
ಸಂಚಯಕೆ ಷಟ್ಸ್ಥಲ ಸುತತ್ವಾಮೃತರಸವ ನೆರೆದು ।
ಪಂಚಭೂತ ಪ್ರಕೃತಿ ಗುಣಮನ
ಸಂಚಲಂಗಳ ಕಿಡಿಸಿ ಲಿಂಗಮು
ಖಾಂಚಿತದ ನಿಜಸುಖವ ತೋರಿದ ಗುರುವೆ ಶರಣಾರ್ಥಿ ॥ ॥ ೪೭ ॥

ಕನಕಮಣಿಗಣ ಕುಶಲಗೆಲಸದ
ಘನವರದ ಸಿಂಹಾಸನಾಗ್ರದಿ
ಮನವಿಜಯ ಚೀಲಾಳಸ್ವಾಮಿಯು ಮನಸಿಜಾಂತಕನು ।
ತನುವೆರಡು ಮನವೊಂದೆಯಾಗಿಹ
ಧನಿಕ ಪ್ರಮಥರು ದೇಶಿಕೇಂದ್ರರು
ದಿನಚರಿಯವೋಲಗವ ಕೈಕೊಳುತಿರ್ದರರ್ತಿಯಲಿ ॥* ॥ ೪೮ ॥

❖❖

---

* ಇತಿ ಚತುರ್ದಶ ಸ್ಕಂಧ ನಿರೂಪಣಂ ಅಂತು ಉಭಯ ಪದಗಣನೆ ೬೩೭ಕ್ಕಂ ಮಂಗಳ ಮಹಾಶ್ರೀ॥

ಪಂಚದಶ ಸ್ಕಂಧ

ರಾಗ : ಲಲಿತೆ

ಮುಂದಣಾಗಮ ವಿವರಗಳ ದಯ
ದಿಂದೆನಗೆ ತಿಳುಹೆಂದು ಶ್ರೀಗುರು
ತಂದೆಯಡಿಗಳಿಗೆರಗಿದಾತ್ಮಜಗೊರೆದ ದೇಶಿಕನು॥

ನಿಜನಯನವೇ ತ್ರಿಜಗನಯನವು
ನಿಜರಮಣಿಯೇ ತ್ರಿಜಗಮಾತೆಯು
ನಿಜಭರಣವೇ ಭೂಮಿಭಾರವ ಧರಿಸಿಕೊಂಡಿಹುದು।
ನಿಜಧನುವೆ ಹರಿಯಜ ನಿವಾಸವು
ನಿಜವಾಹನವೆ ಧರ್ಮವಾಸವು
ನಿಜದಾಟ ಜಗದಾಟ ಶಂಕರ ಸಲಹು ಮೂಜಗವ॥ ॥ ೧ ॥

ಮುದ್ದು ವಿರತರ ಮೌಳಿಪಾದನೆ
ವೃದ್ಧ ಸದ್ಗುರು ಭರ್ಗ ಬೋಧನೆ
ಸಿದ್ಧಲಿಂಗನ ವಂಶವಾರುಧಿಪೂರ್ಣ ಚಂದ್ರಮನೆ।
ಬುದ್ಧಿಚಿತ್ತಮನಸ್ಸಹಂಕೃತಿ
ಬದ್ಧ ಯಮಸ್ಮರ ಕರ್ಮ ಪ್ರಕೃತಿ ವಿ
ಪದ್ದ ಗೆದ್ದ ಪ್ರಸಿದ್ಧ ಚೀಲಳಸ್ವಾಮಿಗುರು ಶರಣು॥ ॥ ೨ ॥

ಗುರುವಾಕ್ಯವನೆ ನಂಬಿದವರಿಗೆ
ಕರದ ಲಿಂಗವ ಭಜಿಸುವವರಿಗೆ
ಚರಲಿಂಗ ದಾಸೋಹ ಕರ್ತೃಭಿಮಾನವಿಡಿದರಿಗೆ।
ಪರದೈವಕೆರಗದವರಿಗೆ

ಪರಮತವ ಕೊಂಡಾಡದವರಿಗೆ
ಶರಣರಿಗೆ ಬೋಧಿಸುವುದೀ ಷಟ್ಸ್ಥಲಶಿವಾಯಣವ॥ ॥ ೩ ॥

ಮಲವ ತೊಳೆಯದ ಮಾಯಘೃಷ್ಟಿಗೆ
ಜಲವ ಸೋಸದ ಜಾತಿಭ್ರಷ್ಟಗೆ
ಹಲವು ವರ್ಣವ ಬೆರೆದು ಹದುಗುವ ಹರಟೆ ಸತಿಪತಿಗೆ।
ಕುಲದ ಗುರುಗಳ ಕಳೆದು ನುಡಿವಗೆ
ಎಲುವ ತಿನ್ನುವ ಶ್ರೌತಿಯಾಜಿಗೆ
ಎಲವೊ ಬೋಧಿಸಬೇಡವೀ ಷಟ್ಸ್ಥಲಶಿವಾಯಣವ॥ ॥ ೪ ॥

ಶಂಕರಿಗೆ ಶಂಕರನು ನಂದಿ ಶಿ
ವಾಂಕಮಾಲೆಯ ಶರಣರಿಗೆ ವೃಷ
ಭಾಂಕನಿಗೆ ಪ್ರಭು ಬೋಧಿಸಿದ ಪೂರ್ವಾಣಿ ಚರಭಕ್ತಿ।
ಗಂಕುರದ ಹರಪುರದ ಗಿರಿಸ್ಥಳ
ಝೇಂಕರದ ಷಟ್ಸ್ಥಲದ ಕುಲಗುರು
ಪಂಕಜಕೆ ರವಿ ಬಸವಪ್ರಭು ಸುತಗೊರೆದ ಸೂತ್ರವಿದು॥ ॥ ೫ ॥

ಮತ್ತೆ ಕೇಳೆಲೆ ಮಗನೆ ಹೇಳುವೆ
ನತ್ತ ಕೈಲಾಸದಲಿ ಪ್ರಮಥರ
ಮೊತ್ತ ಚೇಲಳಸ್ವಾಮಿ ಪರಶಿವ ಸತಿಸುತರುಸಹಿತ।
ಅರ್ತಿಯಿಂದೋಲಗದೊಳಿರ್ದರು
ಇತ್ತ ಕಲ್ಯಾಣದಲಿ ಬಸವನು
ತೆತ್ತಿಗ ಗಣಂಗಳ ಕರೆಸಿ ಸಂಪಾದಿಸಿದರೊಂದ॥ ॥ ೬ ॥

ಅಸಮ ಪ್ರಭು ಬಯಲಾದ ಕಾಲಕೆ
ವಸುಧೆಗೀ ಷಟ್ಸ್ಥಲದ ಪಟ್ಟಕ
ನಿಶ ಗುರುವು ಯಾರೆಂದು ಬಸವನು ಚೆನ್ನಬಸವಣ್ಣ।
ಬಿಸಿಗಣ್ಣ ಮಡಿವಾಳ ದೇವನು
ವಿಷಯ ವಿರಹಿತ ಸಿದ್ಧರಾಮನು
ಬಸವನಸುವಹ ಕಿನ್ನರಯ್ಯನು ಹಡಪದಪ್ಪಣ್ಣ॥ ॥ ೭ ॥

ಧನ್ಯ ಷಟ್ಸ್ಥಲಧನಿಕ ಬಸವನು
ಮಾನ್ಯ ಶರಣ ಮಹಾನುಭಾವರು

ಶೂನ್ಯಪೀಠದ ಪ್ರಭುವ ಬೆಸಗೊಳುತಿರ್ದರೆಂತೆನಲು।
ಜನ್ಯ ಪರಿಭವ ಕರಿಹರೀಂದ್ರಜ
ಗನ್ಯ ಪ್ರಕೃತಿ ವಿಲಾಸ ವಿಷಯ ಫ
ಲಾನ್ಯ ಷಟ್ಸ್ಥಲ ಗುರುವದಾರ್ಯೆ ಸ್ವಾಮಿ ಬಯಲಾಗೆ॥ ॥ ೮ ॥

ಎಂದು ಬಸವನು ಎಲ್ಲ ಪ್ರಮಥರು
ಮುಂದಣಾಗಮ ಘನವ ಬೆಸಗೊಳ
ಲಿಂದು ಪ್ರಭು ನಿಜವೆಂದು ತಿಳಿದನು ಗಹನ ದೃಷ್ಟಿಯಲಿ।
ಇಂದೆ ನೀವೂ ನಾವು ಸಹ ಗಣ
ವೃಂದ ಬಯಲಾದಡೆಯು ಷಟ್ಸ್ಥಲ
ವೆಂದಿಗೂ ಲಯವಿಲ್ಲವೆಂದನು ನಗುತ ಅಲ್ಲಮನು॥ ॥ ೯ ॥

ಕಲ್ಯಾಣ ಕಡೆಯೆನುತ ಪ್ರಮಥರಿ
ಗೆಲ್ಲರಿಗೆ ಕರುಣಿಸಿದಿರೆಲ ನಾ
ವೆಲ್ಲ ನಿಮ್ಮೊಳಗಡಕ ನೀವೇ ಬಯಲ ಬೆರೆದಲ್ಲಿ।
ಇಲ್ಲಿ ಷಟ್ಸ್ಥಲವಿರುವದಿರುತಿರ
ಲೆಲ್ಲರಿಗೆ ಉಪದೇಶಗೊಡುತಿಹ
ಸಲ್ಲಲಿತ ಸದ್ಗುರುವ ಕುರುಹಿಡಬೇಕು ನಮಗೆನಲು॥ ॥ ೧೦ ॥

ಲಿಂಗದಲಿ ನೀಲಮ್ಮ ಬಯಲು ಗ
ಣಂಗಳೇ ತಮತಮಗೆ ಬಯಲಲಿ
ಸಂಗನೊಳು ಬಸವಣ್ಣ ಬಯಲಹ ನಮಗೆ ನಿರ್ವಯಲು।
ಸಂಗ ಸಮರಸ ಷಟ್ಸ್ಥಲವ ಹೆರೆ
ಹಿಂಗುವರು ನಾವಲ್ಲವೈ ನಿಲೆ
ಹಂಗಿಗರು ನಮಗುಂಟು ಲೀಲೆಗಳೆಂದನಲ್ಲಮನು॥ ॥ ೧೧ ॥

ಅಂತರಂತರವಾದ ತತ್ವ ಚಿ
ದಂತರಂಗದ ಜ್ಯೋತಿ ಕಳೆಗಳ
ನಂತಸ್ಥಲ ಕುಳಗಳನು ಮೀರಿ ಪ್ರಕಾಶಿಸುವ ಮೂರ್ತಿ।
ಯಂತಲೀಲೆಯದೆಂತು ನಾಮವ
ದೆಂತು ದೇಶವದೆಂತು ಗ್ರಾಮವ
ದಿಂತಿದೆಲ್ಲವನರುಹಿ ತೋರಿಸಬೇಕು ಗುರುರಾಯ॥ ॥ ೧೨ ॥

ಬುದ್ಧಿವಂತರು ನೀವು ನಮಗತಿ
ಹೊದ್ದಿಗೆಯ ನಿಜಭಕ್ತ ಕೃತರಾ
ಗಿರ್ದ ಬಳಿಕಹ ಹೇಳಬೇಕಿದಕೇನು ವಂಚನೆಯೆ।
ಸಿದ್ಧಲಿಂಗನ ನಾಮ ನಮಗೆ ಪ್ರ
ಸಿದ್ಧ ಬಸವಪ್ರಭುವೆನುತ ಮುಂ
ದಿದ್ದವರು ಹೊಗಳುವರು ಉಭಯವತಾರ ಕೇಳೆನಲು॥ ॥ ೧೩ ॥

ಜ್ಞಾನಿ ಬಸವ ಪುರಾತರೆಲ್ಲರ
ದೇನು ಕಾರಣವೆಂದು ಶಂಕಿಸ
ಲೀ ನರಾಧಿಪ ಭಕ್ತ ಪ್ರಭು ಪ್ರಜೆ ಕೀಳು ಮೇಲೆಲ್ಲ।
ನಾನ ಜಾತಿಯ ಸಂಕರತ್ವದಿ
ಜ್ಞಾನಕ್ರೀ ವ್ರತ ಭ್ರಷ್ಟರಾಗಿರೆ
ಭಾನುಶಶಿಶಿಖಿನೇತ್ರ ತಿಳಿವನು ನಾರದನ ಮುಖದಿ॥ ॥ ೧೪ ॥

ಭೌಷ್ಯದುತ್ತರ ವೀರಶೈವ ವಿ
ನಶ್ಯವೆಂಬುದ ಕೇಳಿ ಪರಮರ
ಹಸ್ಯ ಷಟ್ಸ್ಥಲಗುರು ಮಹತ್ವಪ್ರಕಾಶ ಪ್ರಭು ಮುಖ ಪ್ರ
ಶಸ್ಯ ಶ್ರುತಿಮತವೆನುತ[೧][ಶಂಭುವ
ವಶ್ಯವೀತನ ಕಳುಹಿದರೆಯಪ][೧]
ಹಾಸ್ಯ ನಿಲ್ಲುವುದೆನ್ನ ಮತಕೆಂದೊಳಗೆ ಧ್ಯಾನಿಸುತ॥ ॥ ೧೫ ॥

ಎನ್ನ ಕರೆದತಿ ಮನ್ನಿಸುತ ಶಿವ
ನಿನ್ನ ಷಟ್ಸ್ಥಲಶೂನ್ಯಮೆನಲಾ
ಚಿಹ್ನೆಗೇಳಾ ಕ್ಷಣವೆ ನಾ ಧರೆಗವತರಿಸಿ ಬರುವೆ।
ನಿನ್ನು ಸಿದ್ಧೇಶ್ವರನೆನಿಸಿ ಪ್ರ
ಸನ್ನನಾಗುವೆ ಮಲ್ಲಿಕಾರ್ಜುನ
ಚೆನ್ನ ಜ್ಞಾನಾಂಗನೆಯರಿರ್ವರ ಭಕ್ತಿಭಾವನೆಗೆ॥ ॥ ೧೬ ॥

ನೀಲಕಂಧರ ಬಸವರಾಜನು
ನೀಲಲೋಚನೆ ಬಾಲಸಂಗ ವಿ

೧-೧ ಶಾಂಭೆ ನವಶ್ಯ ವೇತನ ಕಳಹವಿರಲಪ(ಮೂ).

ಶಾಲ ನಾಗಲದೇವಿ ಮಹದೇವಲಕ್ಕ ಶರಣೆಯರು।
ಶೀಲವ್ರತಸಂಪನ್ನ ಷಟ್ಸ್ಥಲ
ಲೋಲ ಪ್ರಮಥ ಪುರಾತರೆಲ್ಲರು
ಸಾಲುಸಾಲಾಗಡ್ಡಬಿದ್ದರು ಪ್ರಭುವೆ ಶರಣೆನುತ॥ ॥ ೧೭ ॥

ತಾರಕಾಗ್ರಣಿ ಸಿದ್ಧಲಿಂಗವ
ತಾರದಲಿ ನೀವಿದ್ದ ಘನ ವಿ
ಸ್ತಾರಗಳ ಲೀಲೆಯ ಪವಾಡವ ಷಟ್ಸ್ಥಲಲೋದ್ಧರನ।
ಕಾರಣೀಕನೆ ಕರುಣಿಸೆನುತಲಿ
ವೀರಶೈವಾಗ್ರಣ್ಯ ಬಸವ ಕು
ಮಾರ ಪ್ರಮಥರು ಎರಗಿ ಬೆಸಗೊಳ[೧][ಲೊರೆದ][೧] ಪ್ರಭುರಾಯ॥ ॥ ೧೮ ॥

ಸ್ವರ್ಣಗಿರಿ ದಕ್ಷಿಣದ ದೆಸೆ ಫಲ
ವರ್ಣ ಭೂಸತಿನೊಸಲ ಮಣಿ ವಿ
ಸ್ತೀರ್ಣ ತೆರೆ ಸ್ತ್ರೀಪುರುಷ ಸಕಲ ಪ್ರೌಢಿಸೌಂದರ್ಯ।
ಕರ್ಣಾಟಕಾಂತಾನೃಪರ ಮುಖ
ವರ್ಣದರ್ಪಣ ಕಮಲ ಕೊಳಮೆನೆ
ವರ್ಣಿಸುವರಳವಲ್ಲ ನರಸುರ ಕವಿಗೆ ಕಾವೇರಿ॥ ॥ ೧೯ ॥

ಕಾವೇರಿ ನದಿ ತೀರ [೨][ದಕ್ಷಿಣ][೨]
ಠೀವಿ ಬಹುಬಗೆ ಕೋಟೆ ಮಾರ್ಗವು
ಹಾವಭಾವ ವಿಲಾಸಸರಸವು ಸಮರಸಜ್ಞಾನ।
ತೀವಿಹುದು ಕರ್ನಾಟದೇಶದಿ
ಕೋವಿದತ್ವವು ಹೆಣ್ಣುಗಂಡಿಗೆ
ದೇವತಾಸ್ಥಾನಗಳು ಪುಣ್ಯಕ್ಷೇತ್ರ ತೀರ್ಥಗಳು॥ ॥ ೨೦ ॥

ತುಂಬಿತುಳುಕದ ಭೋಗ ಭಾಗ್ಯಕ
ದಂಬ ಜನಪದ ಗೋಷ್ಠಿಯನುದಿನ
ಶಂಬರಾರಿಯ ಪೂಜೆ ಜಂಗಮಭಕ್ತಿ ಮತನಿಷ್ಠೆ।
ಜಂಭರಿಪು ವೈಭವದ ನೃಪರತಿ
ಸಂಭ್ರಮದಿ ನಸುನಗುತ ಕನ್ನಡಿ
ಬಿಂಬ ಚಂದ್ರಮ ಕಮಲಜರೆ ಹದಿನಾಡ ಕರೆ ಕೇಳಿ॥ ॥ ೨೧ ॥

೧-೧ ಲೆರಡ(ಮೂ), ೨-೨ ದಕ್ಷನ(ಮೂ)

ಚಂಪಕಾರಣ್ಯದ ಮಹಾಸ್ಥಳ
ಪಂಪಲಾದಿಗಳಧಿಕ ಜನಪದ
ಗುಂಪು ವೆಗ್ಗಳ ದಂಪತಿಗಳತಿ ಶಿಸ್ತು ಮಹಕೋಟೆ।
ಸಂಪತ್ತುವೆಗ್ಗಳತೆ ಪರಿಮಳ
ಕಂಪೆಸೆವ ಕೊಳ ಬಾವಿ ಕೆರೆ ತೊರೆ
ತಂಪು ಹೂದೋಟಗಳು ಕ್ರಮುಕ ಸುತೆಂಗು ಎಲೆದೋಟ॥ ॥ ೨೨ ॥

ಹಲಸು ಚೂತವು ನಿಂಬೆ ಕಂಚಿಯು
ಕಳಿತಕಳಿಗಳಿಕ್ಷುವಟಟಿಯ
ಕಳಮೆ ಕ್ಷೇತ್ರದ ಕಾಲುವೆಯ ಸಾಲುಗಳ ವಿಸ್ತರದ।
ಕಳಹಂಸ ಶುಕಪಿಕ ಶಿಖಿಯು ಮೃಗ
ವಳಿ ಕಮಲ ಕುಮುದಾಳಿ ಚಾತಕ
ತಳಿತಶೋಕ ಸುಗಂಧ ಕುಳ ಕರ್ನಾಟವೊಪ್ಪಿಹುದು॥ ॥ ೨೩ ॥

ದಿವ್ಯಕ್ಷೇತ್ರವೆನಿಪ್ಪ ಕ್ಷೇತ್ರವು
ದಿವ್ಯಲಿಂಗವೆನಿಪ್ಪ ಲಿಂಗವು
ದಿವ್ಯನಾಮದ ಶಕ್ತಿಕಾಮಾಕ್ಷಮ್ಮ ಮುದಿಬೆಟ್ಟ।
ಸೇವ್ಯ ಗೋಮುಖ ಕೊಳಸುವರ್ಣಾದಿ
ಹವ್ಯಕವ್ಯ ಶ್ರುತಿಪ್ರಮಾಣತಿ
ನವ್ಯ ಋಷಿಯೆ ವಸಿಷ್ಠಗಸ್ತ್ಯರು ರೋಮಜಾಶ್ರಮವು॥ ॥ ೨೪ ॥

ರೋಮಜಾಶ್ರಮ ವೃದ್ಧಚಲ ಮಹ
ಗೋಮುಖದ ಕೊಳ ದಿವ್ಯಕ್ಷೇತ್ರದ
ಕಾಮಾಕ್ಷಿ ವರ ದಿವ್ಯಲಿಂಗದಿ ಚಂಪಕಾರ್ಣ್ಯ।
ಹೇಮನದಿ ಕಾವೇರಿ ಸಂಗಮ
ಭೂಮಿಗಗ್ಗಳ ಗರಳ ಕ್ಷೇತ್ರದ
ಸೀಮೆ ಪೂರ್ವದಲೆಸೆದಿಹುದು ಕರ್ನಾಟ ಮಹದೇಶ॥ ॥ ೨೫ ॥

ಘನ ಮಹಾಕರ್ನಾಟದೇಶದ
ವನಿತೆಯರ ಕುಲತಿಲಕವೆನಿಸುವ
ಘನಗುಣದ ಜವ್ವನದ ಚೆಲ್ವಿನ ಸಕಲಶೃಂಗರದ।
ಧನಪಗಗ್ಗಳ ದ್ರವ್ಯಮಣಿಗಣ

ಧನಿಕ ವರ್ತಕ ಮಲ್ಲಿಶೆಟ್ಟಿಯು
ವನಿತೆ ಜ್ಞಾನಾಂಗನೆಯರಿರುವರು ವೈಶ್ಯಪುರದೊಳಗೆ॥ ॥ ೨೬ ॥

ಕನ್ನಡದ ದೇಶಕ್ಕೆ ಕಳಸವೊ
ಕನ್ನಡಿಯ ಕಳೆವೆಳಗೊ ಕರಗಿದ
ಚಿನ್ನವೋ ಕರುವಿಟ್ಟೆರೆದ ಪುತ್ಥಳಿಯೊ ಮಿಥುನಗಳೊ।
ಕನ್ನೆ ಜ್ಞಾನಾಂಗನೆಯೊ ಗೌರಿಯೊ
ಚನ್ನಮಲ್ಲನೊ ಮಲ್ಲಿಶೆಟ್ಟಿಯೊ
ಸನ್ನುತದ ಷಟ್ಸ್ಥಲದ ಶರಣರ ಚರಣ ಸೇವಕರೊ॥ ॥ ೨೭ ॥

ಗುರುಸಿದ್ಧಯತಿವರ ಪ್ರಸನ್ನದ
ಪರಮ ಪುಣ್ಯಕ್ಷೇತ್ರ ಗೋಮುಖ
ಸರಸಿ ದರುಶನ ಮಾತ್ರದಲೆ ಭವದುರಿಗಳನ್ನೊರಸಿ।
ಹರಪುರಕೆ ನೆಗಹುವದು ಶ್ರುತಿ ಮತ
ನಿರುತವಿದು ಗುರುವಾಕ್ಯ ಕೇಳಿರೆ
ಹರದನಾಪುರದಲ್ಲಿರುವನಾ ಷಟ್ಸ್ಥಲದ ಭಕ್ತ॥ ॥ ೨೮ ॥

ಮಾರಿ ಮಸಣಿಯ ಗಂಡ ಮಲೆತರೆ
ಮೀರಿದರೆ ಶಿರವರಿದು ಬಿಸುಡುವ
ಹೋರಿದರೆ ಹೆಣಗಿದರೆ ಹೊಟ್ಟೆಗೆ ಸರಳ ಹೂಣಿಸುವ।
ಮೂರುಕಣ್ಣಿನ ದಿವ್ಯಲಿಂಗ ಕು
ಮಾರ ಗುಡ್ಡದ ಮಠದ ಹರಪುರ
ವೀರಸಿಂಹಾಸನ [೧][ಕ][೧]ಶರಭವತಾರಕಾಗಿರುವ॥ ॥ ೨೯ ॥

ಜಾತಿಶ್ರೇಷ್ಠರು ಜಗಕೆ ಪೂಜ್ಯರು
ದಾತರಗ್ಗಳ ದಾನಶೀಲರ
ತೀತ ಷಟ್ಸ್ಥಲಶರಣರಲಿ ಬಹುಭಕ್ತಿಗುಣಯುತರು।
ಯಾತರಲಿ ಕೊರತಿಲ್ಲವವರಿಗೆ
ಯಾತನೆಗಳಿಂದುಂಟುದೆಂತೆನೆ
ಜಾತಸ್ಯ ಪುತ್ರಸ್ಯ ಗತಿಸಹಿತೆಂಬ ಶ್ರುತಿ ಭೀತಿ॥ ॥ ೩೦ ॥

೧–೧ ದ(ಮೂ)

ಸತಿಪತಿಗಳತಿ ಭಕ್ತಿಯಿಂದಲಿ
ಯತಿಗುರುಗಳಿಗೆ ತೃಪ್ತಿಪಡಿಸುತ
ಶಿತಗಳನ ಧ್ಯಾನಿಸಿದರೊಂದಿನ ಸುತನ ಕೊಡಿಸೆನುತ।
ಮತದ ಗುರುವಿಗೆ ಹರಸಿಕೊಂಬರು
ಶತ ಸಹಸ್ರಕೆ ತೃಪ್ತಿಯೆನುತಲಿ
ವ್ರತವ ನೇಮವ ನಡಸೆ ಮಕ್ಕಳ ಫಲವೆ ಇಲ್ಲದಿರೆ॥ ॥ ೩೧ ॥

ಮನೆಗೆ ಆಪ್ತರ ಕಾವಲಿಡುವರು
ಕನಕಮಣಿದೊಡಿಗೆಗಳ ಬಿಡುವರು
ಘನ ಪೀತಾಂಬ್ರವ ಭಸಿತ ರುದ್ರಾಕ್ಷಿಗಳ ಧರಿಸುವರು।
ವನಿತೆಗತಿವೈರಾಗ್ಯ ಶ್ರೇಷ್ಠಿಗೆ
ತನಯನಾಸೆಯ ಚಿಂತೆಗೋಸ್ಕರ
ವನಕೆ ನಡೆವರು ಗೋಮುಖದ ಸರಸಿಯಲೆ ತಪವಿಹರು॥ ॥ ೩೨ ॥

ದಾನಧರ್ಮವ ಮಾಡಿ ದಣಿವರು
ನಾನಾ ಯಾತ್ರೆಯ ಮಾಡಿ ಸೋಲ್ವರು
ಏನ ಮಾಡಿದರಿಲ್ಲ ನಿಜ ಸಂತಾನವೆಮಗೆನುತ।
ಸ್ನಾನ ಮಡಿಗಳ ಮಾಡಿಕೊಂಬರು
ಧ್ಯಾನಪೂಜೆಯ ಮರೆಯದಿರುವರು
ಮೌನ ಜಪದಲ್ಲಿಹರು ಗೋಮುಖ ಕೊಳದ ತೀರದಲಿ॥ ॥ ೩೩ ॥

ಊರ ಬಿಡುವರು ಮನೆಯ ತೊರೆವರು
ಕೇರಿ ನಂಟರ ಹಂಗಹರಿವರು
ವಾರಿಗೆಯ ಸಯಸಖರ ಸಂಗವ ಕಳೆದು ಸುಖವಳಿದು।
ನಾರ ಸೀರೆಯ ನಾರಕಂಥೆಯ
ಪಾರವಾಗಳವಡಿಸಿ ಭಸಿತ ಶ
ರೀರ ರುದ್ರಾಕ್ಷಿಗಳ ಶೃಂಗರಿಸುವರು ತಪಸಿಗಳು॥ ॥ ೩೪ ॥

ಬಾಲಿ ಬದುಕುವ ಕಾಲದಲ್ಲಿಯೆ
ಬಾಲಕನ ಬಲು ಚಿಂತೆಯಿಂದಲೆ
ನೀಲಕಂಠನೆ ಕರಸ್ಥಲದ ಗುರುಶಾಂತ ಗತಿಯೆನುತ।
ಆಲೆ ಮುಗಿವವು ಕರ ನಿಲುವವು

ಮೇಲೆ ಬಾಹ್ಯದ ವಿಷಯವಳಿದವು
ಬಾಲಚಂದ್ರ ಕಪರ್ದಿ ಶಂಕರ ಬಾಲಕಂ ದೇಹಿ॥ ॥ ೩೫ ॥

ಅತ್ರಿಪುತ್ರಕಲತ್ರ ಫಣಿನದಿ
ಮಾತ್ರ ಜಟಧರವಹ್ನಿಶಶಿ ರವಿ
ನೇತ್ರ ನರಸುರ ನಮಿತ ಶ್ರುತಿ ತತಿಸ್ತೋತ್ರ ಘನಪಾತ್ರ।
ಗೋತ್ರ ಷಟ್ಸ್ಥಲಮಿತ್ರ ದಿವ್ಯಸು
ಕ್ಷೇತ್ರ ಗೋಮುಖಸರಸಿ ಹಂಸಿತ
ಗಾತ್ರ ಶ್ರೀಗುರುಸಿದ್ಧಲಿಂಗ ಸುಪುತ್ರಕಂ ದೇಹಿ॥ ॥ ೩೬ ॥

ಎಂದು ಅನಿಮಿಷದೃಷ್ಟಿಯಿಂ ಮನ
ವಿಂದು ಕರಸ್ಥಲಯೋಗಮುದ್ರ ಪ್ರ
ಬಂಧ ಬೆಸುಗೆಯ ಬಿಚ್ಚದಿರುವರು ಸಿದ್ಧ ಷಟ್ಸ್ಥಲದ॥
ಸಂದೇಹಮಾದಿತ್ಯ ನಿಜಗುರು
ತಂದೆ ಎನ್ನವತಾರದೆತಿವರ
ಮುಂದೆ ದಂಪತಿಗಳಿಗೆ ಶಿಶುರೂಪಿನಲಿ ಕುಳಿತಿಹನು॥ ॥ ೩೭ ॥

ಎನಲು ಪ್ರಭುಪದವನಜಕೆಲ್ಲರು
ತನುವನೀಡಾಡುವರು ಹೊಗಳುತ
ವಿನಯದಿಂದಲಿ ಕೇಳುತಿರ್ದರು ಪ್ರಭುಪ್ರಸನ್ನತೆಯ।
ಮನವಿಜಯ ಯತಿರಾಯಗುರುವರ
ವನವಾಸಿ ಶಿವಸಿದ್ಧಲಿಂಗನು
ಮುನಿಹೃದಯ ವಟುವಾಗಿಯಾ ಸ್ಥಳಕೆಲ್ದ ಬಗೆ ಹೇಗೆ॥ ॥ ೩೮ ॥

ಕೇಳಿರೈ ಬಸವಾದಿಪ್ರಮಥರು
ಹೇಳುವೆನು ನಾನವರ ವಿವರವ
ಭಾಳಲೋಚನ ಬಾಲನಾದನೆ ಬಹಳ ಮಾತೇನು।
ಕಾಳಿಯರಸ ನಿರೂಪ ಪ್ರಮಥ ಸ
ಮೇಳ ಪುಷ್ಪಪಕರೂಢ ಸಿದ್ಧನ
ಬಾಳ ಸಂಭ್ರಮದಿಂದ ಕಳುಹಿಸಿ ಕೊಡುವ ಪರಶಿವನು॥ ॥ ೩೯ ॥

ಜಗಜಗಿಪ ಪುಷ್ಪಕವನಡರುವ
ರಗಣಿತರು ನೂತನ ಪುರಾತರು

ಗಗನಮಾರ್ಗದಿ ನಗುತ ತೆರಳುವ ನಮ್ಮ ಸಿದ್ಧೇಶ।
ಸಗುಣನಿರ್ಗುಣಮೂರ್ತಿ ಜಯ ಜಯ
ಜಗದ ಷಟ್ಸ್ಥಲಕೀರ್ತಿ ಜಯ ಜಯ
ನಿಗಮದುರ್ಲಭನೆಂದು ಖೇಚರರುಗಳು ಹೊಗಳುವರು॥ ॥ ೪೦ ॥

ಪಿಂಡ ಬ್ರಹ್ಮಾಂಡಗಳ ಹಸಿಗೆಯು
ಖಂಡಿಸಿ ನಿರೂಪಿಸುವ ಪ್ರಮಥರ
ತಂಡವನೆ ಮನ್ನಿಸುತ ಕೈಲಾಸಕ್ಕೆ ಕಳುಹಿಸುವ।
ಮಂಡಿಸಿರ್ದ ವಿಮಾನವನೆ ನಭ
ಮಂಡಲದರಿಂ ಬಿಡುವ ಚಂಡಿ ಪ್ರ
ಚಂಡಿಯೆಂಬಾ ಶಕ್ತಿಯರು ಮೈಗಾವಲಾಗಿಹರು॥ ॥ ೪೧ ॥

ವಾತಪಿತ್ತದ ರೇತರಕ್ತದ
ಭೂಷವಿಷಯದ ದಾತು ಮೀರಿದ
ಜಾತ ಷಟಸ್ಥಲಬ್ರಹ್ಮಜ್ಞಾನಿಗೆ ಭೀತಿಗುಣವೇನು।
ಭೂತನಾಥನ ಪ್ರೀತಿಯಿಂದಲೆ
ಓತು ಕಾಯ್ದಿರುತಿರ್ಪವಲ್ಲದೆ
ಆತಗೇತರ ಹಂಗೊ ನಾಹಂ ತುಳಿದ ವಸ್ತುವಿಗೆ॥ ॥ ೪೨ ॥

ಇಳಿಯೆ ರವಿಶಶಿ ಕೋಟಿಮಿಂಚಿನ
ಕಳೆಗಳನು ಕೀಳ್ಬಡಿಸಿ ಬೆಳಗುತ
ಹೊಳೆ ನಿರುಪಮಜ್ಯೋತಿರೂಪನ ಕಂಡು ಕಣ್ದೆರೆಯೆ।
ಒಳಗ ಮರೆದರು ಬೆಳೆದ ಚಿಂತೆಗ
ಪ್ರಳಯವಾಕ್ಷಣ ದಂಪತಿಗಳತಿ
ಚೆಲುವ ಬಾಲನ ಮುಖವ ಕಣ್ಮನದುಂಬಿ ನೋಡುವರು॥ ॥ ೪೩ ॥

ನೋಡಿದರೆ ದೃಷ್ಟಿಗಳ ದೋಷವು
ಮೂಡುವುವು ಸುತಗೆನುತ ಮುಚ್ಚುತ
ನೋಡದಿರುವರು ಗಗನಮಾರ್ಗದಿ ಸುರರು ಷಟ್ಸ್ಥಲವು।
ರೂಢಿಯಿವನಿಂದೆನುತ ಸಲೆ ಕೊಂ
ಡಾಡುವರು ಹೂಮಳೆಯ ಸುರಿವರು
ಕೂಡೆ ಸುರದುಂದುಭಿಗಳುಲಿವವು ಬಸವ ಕೇಳೆಂದ॥ ॥ ೪೪ ॥

ಅಂತರಂಗದಿ ಕೋಟಿ ರವಿಶಶಿ
ಕಾಂತಿಗಳನುತ್ತರಿಸಿ ಬೆಳಗುವ
ಶಾಂತಕರಸ್ಥಳಮೂರ್ತಿ ಶ್ರೀಗುರುಸಿದ್ಧನಡಿಗಂಡಂ।
ಚಿಂತೆಗೆಡುವವು ಕಣ್ಣ ಬಿಡುವರು
ಕುಂತಿರುವ ಶಿಶುರೂಪ ನಗುತಲೆ
ಕಾಂತಮಣಿ ಬಾಣಂತಿಯಾಗುವ ಮಗುವನೆತ್ತುವಳು। ॥ ೪೫ ॥

ಕುಂದಣಕೆ ಪರಿಮಳಗಳಹ ಶ್ರೀ
ಗಂಧ ಸತ್ಕಳಕ್ಷೀರಕೆಚ್ಚುರೆ
ಸಂದನಗೆ ಸಂಜೀವ ಶಿಷ್ಯಗೆ ರಾಯದೇಶಿಕನು।
ಅಂಧಕಗೆ ನೇತ್ರಗಳು ಹೆಳವಗೆ
ದ್ವಂದ್ವಕರ ಚರಣಗಳು ಬಂದೊಲು
ನಂದನನನೀಕ್ಷಿಸುತ ನಲಿವುತ ನಗುತ ಕರೆಕರೆದು॥ ॥ ೪೬ ॥

ಸತಿಯ ಕೈಯಿಂ ಪತಿಗೆ ಕೊಡುವರು
ಪತಿಯ ಕೈಯಿಂ ಸತಿಗೆ ಕೊಡುವರು
ಸತಿಪತಿಗಳತಿ ಹರುಷದಿಂದಲಿ ಮುತ್ತುಮುತ್ತೆನುತ।
ಯತಿಕುಲೋತ್ತಮ ಯೋಗಿಷಟ್ಸ್ಥಲ
ಮತಮಹತ್ವವ ಮೆರೆವ ಶರಣನ
ಸುತನೆನುತ ಕೊಂಡಾಡುವರು ಬಸವಣ್ಣ ಕೇಳಣ್ಣ॥ ॥ ೪೭ ॥

ಬಾರೊ ಬಸವಗೆ ಬಾಲನಾದನೆ
ಬಾರೊ ಬಲ್ಲಳರಾಯನಣುಗನೆ
ಬಾರೊ ಅಮ್ಮವೆಗಂದು ಬಾಲಕನಾದ ಶಂಕರನೆ।
ಬಾರೊ ಷಟ್ಸ್ಥಲಶರಧಿಚಂದ್ರನೆ
ಬಾರೊ ಪರಶಿವಯೋಗಸಾಂದ್ರನೆ
ಬಾರೆನುತ ಬಿಗಿದಪ್ಪಿ ಸೋಗಿಲ ಕಟ್ಟುವರು ಬಸವ॥ ॥ ೪೮ ॥

ಸೋಗಿಲಿಗೆ ಮಗುವಿಟ್ಟು ನಗುತಲೆ
ಬೇಗ ನಡೆವರು ನಿಜ ನಿವಾಸಕೆ
ಆಗಮಿಕರ ಕರೆಸುವರು ಬಂಧುಗಳ ನೆರಹುವರು।
ಶ್ರೀಗುರುವ ಬರಿಸುವರು ಷಟ್ಸ್ಥಲ

ಯೋಗಿಗಳ ಬಿಜಮಾಡಿಸುವರಲ
ನಾಗ ನರ ಸುರ ಲೋಕದೊಡೆಯನ ಒಸಗೆ ಪ್ರಸ್ತಕ್ಕೆ॥ ॥ ೪೯ ॥

ಲಿಂಗಧಾರಣೆ ಮೊದಲೆ ಸಿದ್ಧ
ಲಿಂಗನೆಂಬಭಿಧಾನ ಕಡೆ ಶಿವ
ಜಂಗಮಾರ್ಚನೆಯೊಡನೆ ತೀರ್ಥಪ್ರಸಾದ ನೇಮಕವು।
ಮಂಗಳಾತ್ಮಕ ಶಿಶುವ ಷಟ್ಸ್ಥಲ ಗ
ಣಂಗಳಂಘ್ರಿಯ ಮೇಲಿಡುತ ಜಯ
ಮಂಗಳವ ಹೇಳುವರು ತೊಟ್ಟಿಲ ಕಟ್ಟಿ ತೂಗುವರು॥ ॥ ೫೦ ॥

ಶ್ರೀಗುರು ಪರಂಜ್ಯೋತಿ ಜೋ ಶಿವ
ಯೋಗಿಗಳ ಸಂಗಾತಿ ಜೋ ನಿಗ
ಮಾಗಮಾರ್ಥನುಭವದ ಸಾರವ ಬೋಧಿಪನೆ ಜೋಜೋ।
ಭೋಗಮೋಕ್ಷಾನಂದ ಜೋ ಭವ
ರೋಗಜಯ ಗಣವೃಂದ ಜೋ ಶ್ರೀ
ಭಾಗಿರಥಿ ಭಾಳಾಕ್ಷ ಸುತ ಜೋಯೆನುತ ತೂಗುವರು॥ ॥ ೫೧ ॥

ಆರು ದರುಶನದರಿವೆ ಜೋ ಮೂ
ರಾರು ಯುಗ ಕುಲಗುರುವೆ ಜೋ ಶ್ರೀ
ವೀರಶೈವಾಚಾರ ಮಾರ್ಗೋದ್ಧಾರಕನೆ ಜೋಜೋ।
ತಾರಕಪರಬ್ರಹ್ಮ ಜೋ ಭೂ
ಭಾರಗಳನಿಳುಹಿದನೆ ಜೋ ಬಹು
ಕಾರಣೀಕದ ಕಂದ ಜೋಜೋಯೆನುತ ತೂಗುವರು॥ ॥ ೫೨ ॥

ಎಲ್ಲ ಷಟ್ಸ್ಥಲರಾಜ್ಯ ಜೋ ಮ
ತ್ತೆಲ್ಲ ಮತಪರಿಪೂಜ್ಯ ಜೋ ಶ್ರೀ
ಮಲ್ಲಿಕಾರ್ಜುನ ಶ್ರೇಷ್ಠಿ ಜ್ಞಾನಾಂಗನೆಯ ಸುತ ಜೋಜೋ।
ಬಲ್ಲ ಭಕ್ತರ ಭಾವ ಜೋ ಬಹು
ಖುಲ್ಲ ಮಾಯಾವಿಜಯ ಜೋ ನ
ಮ್ಮಲ್ಲಮನೆ ಗುರು ಸಿದ್ಧಪ್ರಭು ಜೋಯೆನುತ ತೂಗುವರು॥ ॥ ೫೩ ॥

ಎಳೆಯ ಚಂದ್ರನ ಕಳೆಯ ದರ್ಪಣ
ಬೆಳಗ ಮುತ್ತಿನ ಮಣಿಯ ಮಿಂಚಿನ

ಬಳಗ ಕಮಲವ ಕಮಠ ಚಂಪಕ ತಾರೆ ಕುಂದಣದ।
ಕುಳವ ಕುಂದವ ಲತೆಯ ಮೀನ್ಗಳ
ಹಳಿದು ನಗುವಂದದಲಿ ಸಿದ್ಧನು
ಹೊಳೆವುತಿರ್ದನು ಶಿಶುಪ್ರಕಾಶದಿ ಬಸವ ಕೇಳೆಂದ॥ ॥ ೫೪ ॥

ಒಸಗೆ ಉತ್ಸವಗಳನೆ ನಡೆಸುತ
ಅಸಮ ಶರಣರ ತೃಪ್ತಿಬಡಿಸುತ
ಶಿಶುವೆ ನೀನೇ ಗುರುವು ಪರಶಿವಮೂರ್ತಿ ನಮಗೆನುತ।
ವಸುಧೆ ಭೋಗವ ಮರೆದು ಸತಿಪತಿ
ಗಸುವೆ ಸುತನಾಗಿಹರು ಸರ್ವಥ
ಬಸವ ಕೇಳೆಂದೆನುತ ಪೂರ್ವದಲೊರೆದ ಪ್ರಭು ನಗುತ॥ ॥ ೫೫ ॥

ಮಳೆಗಳಿಲ್ಲದ ಸ್ಥಳಕೆ ಮಳೆಗಳ
ಬೆಳೆಗಳಾಗದ ನೆಲಕೆ ಬೆಳೆಗಳ
ಇಳೆಯನಾಳುವ ರಾಯರಿಗೆ ಭುಜಬಲಪರಾಕ್ರಮವ।
ಹಳಬರಿಗೆ ಕರಚರಣ ದಿಟ್ಟಿಯ
ನಳುವ ಮಕ್ಕಳಿ[ಗೆಣ್ಣೆ] ಬೆಣ್ಣೆಯ
ಹೊಳೆಯ ಪಾಲಿಸಿ ಗುರುವೆ ಚೀಲಳಸ್ವಾಮಿ ಕರುಣದಲಿ॥ ॥ ೫೬ ॥

ವನಿತೆಗಭವನು ನಂದಿಕೇಶ್ವರ
ಮನಹರುಷದಿಂ ಪ್ರಮಥರಿಗೆ ಪ್ರಭು
ವಿನಯದಿಂ ವೃಷಭನಿಗೆ ನೀಲಾಂಬ[ಕಿ]ಗೆ ಶರಣರಿಗೆ।
ಘನಮಹಾ ಹರಪುರದ ಶ್ರೀಗಿರಿ
ಕನಕ ಸಿಂಹಾಸನದ ಷಟ್ಸ್ಥಲ
ಧನಿಕ ಬಸವಪ್ರಭು ಕುಮಾರನಿಗೊರೆದ ಸೂತ್ರವಿದು॥* ॥ ೫೭ ॥

❖❖

* ಇತಿ ಪಂಚವಶ ಸ್ಕಂಧ ನಿರೂಪಣಂ ಅಂತು ಉಭಯ ಪದಗಣನೆ ೬೪೪ಕ್ಕಂ ಮಂಗಳ

ಷೋಡಶ ಸ್ಕಂಧ

ರಾಗ : ಕನ್ನಡ ಗೌಳ

ಅಹಿತಮತಹತ ಪಂಥದೇಶಿಕ
ಬಹುಷ್ಯಲೀಲೆಯ ಬಸವನಿಗೆ ಪ್ರಭು
ವೆಹಗೊರೆದನದ ಬೋಧಿಸೆನೆ ತನಗೊರೆದ ಗುರುರಾಯ॥

ಹರಿಯು ಬ್ರಹ್ಮರದಾವ ಶಕ್ತಿಯ
ಚರಣ ಕಮಲಕೆ ಶಿರವನಿಡುವರು
ಪರಮಯೋಗಿಗಳಾವ ದೇವಿಯ ಧ್ಯಾನಿಪರು ವೇದ।
ಶಿರಗಳಾವಳ ಕೀರ್ತಿಸುವುವಾ
ಗಿರಿಜೆದೇವಿಯ ಪ್ರಾಣಕಾಂತನೆ
ಪರಕೆ ಪರ ಪರವಸ್ತು ಶಂಕರ ಸಲಹು ಮೂಜಗವ॥ ॥ ೧ ॥

ಬಾವಿಗೆಯ ಗತಿ ಮಂದಹಾಸದ
ಠೀವಿ ಲಾಕುಳಯೋಗವಟ್ಟೆಯ
ಕಾವಿವಸ್ತ್ರ ತ್ರಿಪುಂಡ್ರ ರುದ್ರಾಕ್ಷಿಗಳ ಜಪಮಂತ್ರ।
ತೀವಿದಾ ಮುಖರಸದ ಮೃದು ನುಡಿ
ಸಾವಧಾನದ ಲಿಂಗನಿಷ್ಠನು
ಭಾವಿಗಳ ನಿಜಗುರುವೆ ಚೀಲಳಸ್ವಾಮಿ ಶರಣಾರ್ಥಿ॥ ॥ ೨ ॥

ಷಟ್ಸ್ಥಲವ ತಿಳಿದಂಗೆ ಸರ್ವಥ
ಷಟ್ಸ್ಥಲವ ಬಲ್ಲರಿಗೆ ಜ್ಞಾನದ
ದಿಟಸ್ಥಲದ ಮುದ್ರೆಗಳ ಲಕ್ಷಣಚಕ್ರಬೋಧರಿಗೆ।
ಮಠಸ್ಥಲದ ಮಹಿಮರಿಗೆ ಮರ್ತ್ಯಕೆ

ತಟಸ್ಥರಾಗಿರುವರಿಗೆ ವಾ
ಕ್ಪಟುತ್ವದಿಂದೊರೆವುದೀ ಷಟ್ಸ್ಥಲಶಿವಾಯಣವ॥ ॥ ೩ ॥

ಅಗ್ಗದವರಿಗೆ ಅಲ್ಪ ಮಂದಿಗೆ
ದುರ್ಗಿ ಹರಿಯನು ಪೂಜಿಸುವರಿಗೆ
ಸುಗ್ಗಿ ಶಿವರಾತ್ರೆಯಲಿ ಶಿವನುಡಿಯಿಲ್ಲದಿರುವರಿಗೆ।
ವಗ್ಗ ದಾಸಗೆ ಒರಟ ಜೋಗಿಗೆ
ಬಗ್ಗಿ ಬಂದಡಿಗೆರಗದವರಿಗೆ
ಹಿಗ್ಗಿ ಬೋಧಿಸಬೇಡವೀ ಷಟ್ಸ್ಥಲಶಿವಾಯಣವ॥ ॥ ೪ ॥

ದೇವದೇವಿಗೆ ನಂದಿಕೇಶ್ವರ
ದೇವ ಪ್ರಮಥರ ಸಭೆಗೆ ಪ್ರಭು ಮಹ
ದೇವ ವೃಷಭಗೆ ಚೆನ್ನಬಸವಗೆ ಶರಣಸಂತತಿಗೆ।
ಈ ವಸುಧೆಗಗ್ಗಳದ ಹರಪುರ
ದೇವಗಿರಿ ಷಟ್ಸ್ಥಲದ ಪೀಠದ
ದೇವ ಬಸವಪ್ರಭು ಕುಮಾರನಿಗೊರೆದ ಸೂತ್ರವಿದು॥ ॥ ೫ ॥

ಎಲ್ಲರೊಳಹೊರಗಿರುವ ದೇವನೆ
ಅಲ್ಲಮಪ್ರಭುವೆನಿಸಿಕೊಳುವನೆ
ಮಲ್ಲಿಕಾರ್ಜುನಶೆಟ್ಟಿ ಜ್ಞಾನಾಂಗನೆಗೆ ಸುತನಹನೆ।
ಅಲ್ಲೆ ಇರುವನೊ ದೇಶಮಧ್ಯದೊ
ಳೆಲ್ಲ ಇರುವನೊ ದೇಶಮಧ್ಯದೊ
ಳೆಲ್ಲ ಸಂಚರಿಸುವನೊ ನಮಗಿದ
ನೆಲ್ಲವನು ವಿಸ್ತರಿಸಿ ಬೋಧಿಸಬೇಕು ಸದ್ಗುರುವೆ॥ ॥ ೬ ॥

ಕೇಳಿರೈ ಬಸವಾದಿ ಪ್ರಮಥರು
ಕಾಲಜ್ಞಾನವ ಬಲ್ಲ ಹಿರಿಯರು
ಕಾಲ ಕಲ್ಪಿತವಳಿದ ಮಹಿಮ ತ್ರಿಕಾಲಜೇತರಲ।
ಮೇಲೆ ಷಟ್ಸ್ಥಲತತ್ತ್ವಜ್ಞಾನದ
ಕೀಲ ಕಂಡ ಮಹಾನುಭವರು
ಬಾಲಲೀಲೆಯೊಳಿರುವ ಬಹಳ ಪವಾಡಗಳ ಮೆರೆವ। ॥ ೭ ॥

ಭಾನುಕೋಟಿಪ್ರಕಾಶ ಪ್ರಭು ಸು
ಜ್ಞಾನಬೋಧಸ್ವರೂಪ ಗುರುವೇ
ನೇನು ಪಾವಾಡಗಳ ವಿವರವದೆಲ್ಲ ಕುರುಹುಗಳ।
ಸಾನುಭಾವಿಗಳರಸ ಷಟ್ಸ್ಥಲ
ಸ್ಥಾನಮಾನ ಜಯ ಪ್ರತಾಪ ನಿ
ದಾನಗಳನರುಹೆನುತ ಸ್ವಾಮಿಯ ಬಸವ ಬೆಸಗೊಳಲು॥ ॥ ೮ ॥

ಕೋಟಿ ರವಿಶಶಿ ಬೆಳಗುಗಳ ನಿಜ
ನೋಟದೊಳಗಳವಡಿಸಿ ಇಹಪರ
ದಾಟಗಳನಾಡಿಸುತ ಶ್ರೀಗುರು ಸಿದ್ಧಲಿಂಗೇಶ।
ಆಟಪಾಟವ ತೋರೆವ ವಿರತಕಿ
ರೀಟ ಪತಿಗಳ ಬೆರೆವ ಷಟ್ಸ್ಥಲ
ತೋಟಯತಿವರನಾಟಗಳ ಬಸವಣ್ಣ ಕೇಳೆಂದ॥ ॥ ೯ ॥

ಆಯುರಾರೋಗ್ಯಗಳನೀವನು
ತಾಯಿ ತಂದೆಗೆ ಗೆಲವ ಕೊಡುವನು
ಕಾಯ ಬೆಳವುತಲಿಹುದು ಬಿದಿಗೆಯ ಚಂದ್ರನಂದದಲಿ।
ಬಾಯ ಮಾತುಗಳೆಲ್ಲ ವೇದವು
ಪಾಯವಾಗಮ ವಾಕ್ಯವಿಧಿ ಯತಿ
ರಾಯ ಷಟ್ಸ್ಥಲಬ್ರಹ್ಮ ಮಹಿಮೆಯ ಕೇಳಿ ಬಸವಣ್ಣ॥ ॥ ೧೦ ॥

ಭೂತಕಾಲವ ಬಲ್ಲ ಪ್ರಮಥರು
ಪ್ರೀತಿಯಿಂದಾಲಿಸುವುದೆನುತಲಿ
ನೂತನ ಪುರಾತರಿಗೆ ಬಸವಗೆ ಚನ್ನಬಸವನಿಗೆ।
ಜಾತಿ ಷಟ್ಸ್ಥಲಶರಣರಿಗೆ ಪರಂ
ಜ್ಯೋತಿ ಶ್ರೀಗುರು ಸಿದ್ಧಲಿಂಗನ
ಖ್ಯಾತಿ ಪವಾಡಗಳ ಕುರುಹನು ಪ್ರಭುವೆ ಬೋಧಿಸಿದ॥ ॥ ೧೧ ॥

ಗಜಸಿಂಹಗಳಿಗೀವ ಮೋಕ್ಷವ
ನಿಜವ ಗಾಂಧರ್ವರಿಗೆ ಕೊಡುವನು
ಗಜಬಜೆಯ ಘನ ಕ[೧][ಲಿ][೧]ಯ ಮೆಟ್ಟುವ ಕಾಲನಟ್ಟುವನು।

೧–೧ ವಿ(ಮೂ).

ಭುಜಗಗಪ್ಪಣೆಗೊಡುವ ಮಹಿಷನ
ಭುಜಬಲವ ಸವರಿಡುವ ಹೆಚ್ಚಿನ
ದ್ವಿಜಕುಲವ ಜಿನಮತವನೇಗುವ ಬಸವ ಕೇಳೆಂದ॥ ॥ ೧೨ ॥

ಅಂಗಳದಲೊರಗಿರುವ ಮಾತೆಗೆ
ಅಂಗುಳಲಿ ವಿಶ್ವವನೆ ತೋರುವ
ಕಂಗಳಿಂದಲೆ ಕರೆವ ಚಂದ್ರನ ತಾರೆಗಳ ಮುಡಿವ।
ಲಿಂಗಪೂಜೆಯ ಮಾಳ್ಪ ಶರಣರ
ಲಿಂಗಗಳ ಮರಸುವನು ಬರಿಸುವ
ನುಂಗುವನು ಒಬ್ಬಟ್ಟ ವಿಶ್ವಸ್ವರೂಪ ತೋರಿಸುವ॥ ॥ ೧೩ ॥

ಓದಿಸುವ ಮಠದಲ್ಲಿ ಬಾಲರಿ
ಗೋದಿಸುವನಾರಕ್ಷರಂಗಳ
ಬೋಧಿಸುವ ತತ್ವಾನುಭಾವವ ಬುದ್ಧಿವಂತರಿಗೆ।
ಸಾಧನೆಯ ಹೇಳುವನು ಜ್ಞಾನದ
ಹಾದಿಯನೆ ತೋರುವನು ಮೋಕ್ಷದ
ಕಾದಿಲಿಂಗವನಾದಿ ಶರಣನೆನುತ್ತ ಸಾರುವನು॥ ॥ ೧೪ ॥

ಬಲು ವಿಚಿತ್ರವಿದೀಗ ಕೇಳಿರೆ
ಸಲುವನೊಬ್ಬ ಗೃಹಸ್ಥ ಶೆಟ್ಟಿಯ
ನೆಲೆಯ ಕೇಳುವ ಹೇಳುವನ ಹೊಲೆಗೇರಿಲಿಹನೆಂಬ।
ಉಲುಹ ಕೇಳುವ ಕರೆದು ಸತಿಪತಿ
ಕುಲಗುರುವಿನಡಿಗೆರಗಿಯೊಪ್ಪಿಸಿ
ತೊಲಗುವರು ನಿಜಗೃಹಕೆ ಬಾಲನ ಬಿಟ್ಟು ಬಸವಣ್ಣ॥ ॥ ೧೫ ॥

ಗುರುಕಟಾಕ್ಷವ ಪಡೆವ ಗುರುವಿನ
ಚರಣಸೇವೆಯ ಮಾಳ್ಪನನುದಿನ
ಸುರರ ಲೋಕದ ಪುಷ್ಪಪತ್ರೆಯ ದೇವಗಂಗೆಯನು।
ತರಿಸಿ ಕೊಡಿಸುವ ಲಿಂಗಪೂಜೆಗೆ
ನರರ ಕಣ್ಣಿಗೆ ಕಾಣವಂದದಿ
ನಿರುತವಿದು ಗುರುವಾಕ್ಯ ಕೇಳಿರೆ ಶಕ್ತಿಯರ ಮುಖದಿ॥ ॥ ೧೬ ॥

ಶಿಲೆಯ ಬಸವನ ನುಡಿಸಿ ತೋರುವ
ಶಿಲದಿ ಎರಡಕೆ ಕೊಡುವ ಗತಿಯನು

ಜಲದಿ ಮುಳುಗಿದ ಕುಂಭವನು ಕರೆದೀವ ಕಾಸಾರ।
ಫಲವ ಮಾವಿನ ಹಣ್ಣ ಮಾಡುತ
ಚೆಲುವ ಜಂಗಮು ಕುಣಿಸಿ ದಣಿಸುವ
ಗೆಲುವ ವಾದದ ಬಲವನೆಲ್ಲವ ಬಸವ ಕೇಳೆಂದ॥ ॥ ೧೭ ॥

ಗುರುವಿನಪ್ಪಣೆಯಿಂದ ಮುಂದಕೆ
ತೆರಳುವನು ದೇಶಾಂತ್ರಮುಖದಲಿ
ಚರಮಹೇಶ್ವರೊಡೆಯನತಿಥಿಗಳರಸ ಸಿದ್ಧೇಶ।
ಹರದನಿಗೆ ಜ್ಞಾನಾಂಗನೆಗೆ ಪುರ
ಹರನೊ ಕೈವಸ್ತುವೋರಿಸುವ
ದೊರೆತರಳರಾಟವ ಮರೆವುದಾಕ್ಷಣ ದೆಸೆಗೆ ತೆರಳುವನು॥ ॥ ೧೮ ॥

ತಿರುಣಮಲೆಗೈದುವನು ಅಲ್ಲಿಹ
ನರುಣಚ್ಚಲ ಪರಶಿವನೆ ಮತ್ತಿನ
ವರವ ಕೊಡುವನು ಐಗಳೆಲ್ಲರು ನ್ಯಾಯವಾಡುವರು।
ಹರಿದು ಪಂಚಸ್ಥಾವಡದ ಘನ
ತರದ ಮುತ್ತಿನ ಮಣಿಯನೆಲ್ಲವ
ತರವರಿದು ಚರಕೀವನಷ್ಟನು ಬಸವ ಕೇಳೆಂದ॥ ॥ ೧೯ ॥

ತಂದೆ ತಾಯನು ಗುರುವ ಪರಮಾ
ನಂದ ಯೋಗದೊಳಿಡುವ ಶೀಘ್ರದೊ
ಳಂದೆ ಬಿಡುವ ಮಹಂತಿನಸ್ಥಲವೆಂಬ ಶಬ್ದವನು।
ಮುಂದೆ ಷಟ್ಸ್ಥಲಚಕ್ರವರ್ತಿ ಗಣ
ವೃಂದಚರಣವ ಹಿಡಿದು ನಗುತ
ಲ್ಲಿಂದ ಹೆಣ್ಣರಸಿಯರ ದೇಶ ಪ್ರವೇಶ ಬಸವಣ್ಣ॥ ॥ ೨೦ ॥

ಪಾರಿಪ್ಲವ ದೇಶಗಳನಾಳವ
ನಾರಿಗಭವನ ನಿಜವನರಿಯಿಸಿ
ನಾರಿ ಮಾಡಿದ ಭಕ್ತಿಗಳ ಕೈಕೊಳುತಲಲ್ಲಿಂದ।
ವಾರುಧಿಯ ತಡಿ ಶಕ್ತಿಭೂಪನ
ಧಾರುಣಿಗೆ ಪರಶಿವನ ಮಹಿಮೆಯ
ಪಾರದೋರುತಲವನ ಭಕ್ತಿಯ ಕೈಕೊಳುತ ಬಸವ॥ ॥ ೨೧ ॥

ಇರುಳನೆಂಬನ ಕಣ್ಣ ಕಿಳಿಸುವ
ಕೊರಮ ಜಡರ ಕಾಲ ಮುರಿಸುವ
ಶರಣ ಲಂಕೆಯ ಹೊಗುವ ದೊರೆ ವಿಭೀಷಣಗೆ ಬೋಧಿಸುವ।
ತರುಬಿವಸುರರನೊರಸಿ ಏಳಿಸಿ
ಶರಧಿಮಾರ್ಗವ ಬಿಡಿಸಿ ಬೇಗದಿ
ತಿರುಗಿ ಪೂರ್ವಕೆ ಬರುವರೆಂದನು ನಗುತ ಅಲ್ಲಮನು॥ ॥ ೨೨ ॥

ಕಲ್ಲ ನಂದಿಗೆ ಕಬ್ಬ ಮೆಲಿಸುವ
ಖಿಲ್ಲ ಶರಣರ ಕುಲವನಳಿಸುವ
ನಲ್ಲಾಡುತಿಹ ವರದರಾಜನ ನೆಲೆಗೆ ನಿಲ್ಲಿಸುವ।
ಕಲ್ಲ ಬೊಂಬೆಯ ಕರೆದು ನುಡಿಸುವ
ಹುಲ್ಲ ಪುರುಷನ ಮಾಡಿ ನಡೆಸುವ
ಮುಲ್ಲಶಾಸ್ತ್ರವ ಹೇಳಿಯಲ್ಲನೆ ದೇವನೆನಿಸುವನು॥ ॥ ೨೩ ॥

ಸತ್ತ ಶಿಶುವಿಗೆ ಪ್ರಾಣಗೊಡಿಸುವ
ವೃತ್ತಕುಚಗಳ ಹಚ್ಚಿ ಮೆರಸುವ
ಹುತ್ತಕಿಕ್ಕಿದ ಕಂದನೇಳಿಸಿ ಮಾತನಾಡಿಸುವ।
ಮತ್ತೆ ತೊಟ್ಟಿಲ ಕೂಸ ನಗಿಸುವ
ಬಿತ್ತದೇ ಪೆರ್ಬೆಳೆಯ ತೋರುವ
ಬತ್ತಿದಾ ಕೆರೆಗಳನೆ ತುಂಬಿಸಿ ತೂಬನೆತ್ತಿಸುವ॥ ॥ ೨೪ ॥

ಪೋಟಿ ಪುಂಡರ ಪ್ರಾಣದೆಗೆಸುವ
ಕೀಟಕರ ಕಿತ್ತೆತ್ತಿ ಮುಗಿಸುವ
ಕಾಟಕರ ಕಣ್ಗೋಲ ಕೈಗಳ ಮೀಟಿ ಮುರಿಸುವನು।
ಮಾಟಮರವೆಯ ನರರ ಮರ್ದಿಪ
ಜೆಟ್ಟಿಕಾರರ ಜಾಡಿಸೊದೆಸುವ
ತೋಟದಾರ್‍ಯನ ಮುಂದೆ ಕುಹಕವೆ ಬಸವ ಕೇಳೆಂದ॥ ॥ ೨೫ ॥

ಅತಿ ಭಕ್ತಿಗತಿಶಯದ ಗತಿಯನು
ಪತಿವ್ರತೆಯರಿಗೆ ಪುರುಷಭಕ್ತಿಯ
ಪತಿಹಿತದ ಪರವಂಗಿ ಗಂಡಗೆ ಪ್ರಾಣದಾನವನು।
ಯತಿಗಳಿಗೆ ಶಿವಯೋಗಪದ್ದನು

ಮಥನಿಸುವ ಮನುಜರಿಗೆ ಮದ್ದನು
ಸತತ ಕೊಡುವನು ಸಿದ್ಧಲಿಂಗನು ಬಸವ ಕೇಳೆಂದ॥ ॥ ೨೬ ॥

ಶ್ವೇತಪತಿಯ ಕಿರೀಟ ನೃಪಭೂ
ನಾಥರಿಗೆ ನಿಜದೋರಿ ಷಟ್ಸ್ಥಲ
ವ್ರಾತಭಕ್ತರಿಗೆಲ್ಲ ತತ್ವವನರುಹಿ ಶ್ರೀರಂಗ।
ಕೋತಿ ತಿಗಳರನೊದ್ದು ರಾಮನ
ಮಾತನಾಡಿಸಿ ಶಿವನೆ ನಿಜಪತಿ
ನಾ ತಾನೆ ಸತಿಯೆನಿಸಿ ರಾಮೇಶ್ವರನ ನುಡಿಸುವನು॥ ॥ ೨೭ ॥

ಮಧುರೆ ತಿರುಚನಪಳ್ಳಿ ಸ್ಥಳದಲಿ
ಮದನವೈರಿಯ ಮಾತನಾಡಿಸಿ
ಅಧಮಜೈನರ ಸದೆದು ಅಗಣಿತ ಮಹಿಮೆಗಳ ತೋರಿ।
ಸದಮಲ ವಿಶಾಲಾಕ್ಷಿ ಹಸ್ತದಿ
ಸುಧೆಯ ಭಿಕ್ಷವನಂಗಿಕರಿಸುವ
ಒದಗಿ ಕುಂಭೇಶ್ವರನ ಕುಣಿಸುತ ಬಸವ ಕೇಳೆಂದ॥ ॥ ೨೮ ॥

ಕಾಳಹಸ್ತಿಗೆ ಹೋಗಿಯಲ್ಲಿಹ
ಭಾಳನೇತ್ರನ ನಗಿಸಿ ಶೈವರ
ಗೋಳಿಡಿಸಿ ಷಟ್ಸ್ಥಲವ ಶೋಧಿಸಿ ಮತವನುದ್ಧರಿಸಿ।
ಹೇಳಲೇನಲ್ಲಿಂದ ತಿರುಪತಿ
ನೀಲವರ್ಣನ ನಟಿಸಿ ಬಿರುದಿನ
ಕಾಲಕಡಗವ ಜಂಗನೊಂದನು ಕೊಡುವ ಬಸವಣ್ಣ॥ ॥ ೨೯ ॥

ಕಣೆಯಕಲ್ಲ ನೃಪಾಲಗೊಲಿವನು
ಒಣಮರವ ಚಿಗುರಿಸುವ ಬರಡನು
ತ್ರಿಣಿಯನರ್ಚನೆಗೆನಲು ಕರಟವ ಕೊರಡ ಕೊನರಿಸುವ।
ಸೆಣಸಿದವರನು ಸವರಿಸಿಡಿಸುವ
ಬಣಗು ದೈವದ ಬೇರನಗಿಸುವ
ನೊಣಕೆ ಸರಿಯೆನಿಸುವನು ಭವಿಗಳ ಬಸವ ಕೇಳೆಂದ॥ ॥ ೩೦ ॥

ಹರಿವ ನದಿಗಳ ಹಾದಿ ಬಿಡಿಸುವ
ಕೆರೆಗಳೊಡೆದರೆ ಕಟ್ಟಿ ನಿಲಿಸುವ

ಕರಗಲ್ಲ ಗೌಡನಿಗೆ ಒಲಿವನು ಕರುವ ಕಾಯ್ದಿರುವ।
ಭರದಿ ಮಳೆಗಳ ತರಸಿ ಕೊಡುವನು
ಅರೆಯ ಮೇಲಗ್ಗಣಿಯ ಬರಿಸುವ
ಹರನ ಹಳಿವರ ಶಿರವನರಿಸುವ ಬಸವ ಕೇಳೆಂದ॥ ॥ ೩೧ ॥

ಹುಲಿಯುರಮ್ಮನ ಕಣ್ಣ ಮುಚ್ಚುವ
ಶಿಲೆಯ ಮೇಲತಿ ಜಲವ ಬರಿಸುವ
ಹೊಳ೧[ಲು]೧ಗುಂದದ ದೇವಿ ಕೈಯಲೆ ಭಿಕ್ಷ ಕೈಕೊಂಬ।
ಹುಲಿಗೆ ಪ್ರಾಣವ ಕೊಟ್ಟು ಕಳುಹುವ
ಎಳೆಗರುವ ಬದುಕಿಸುವ ಹೊಟ್ಟೆಯ
ಲಳಿದ ಕೂಸಿಗೆ ಜೀವದುಂಬುವ ಹೊರಡಿಸುವ ಕಡೆಗೆ॥ ॥ ೩೨ ॥

ಕುಣಿಗಲನೆ ಹೊರಗೆಂದು ಬಿಡಿಸುವ
ತೃಣಕೆ ಪ್ರಾಣವ ಕೊಟ್ಟು ನುಡಿಸುವ
ನಣಕವಾಡುವ ವೀರಣೊಡೆಯರ ಹಣೆಯನೊಡೆಯಿಸುವ।
ಹೊಣಕೆಗೊಟ್ಟನ ಕಡಲೆ ರಾಸಿಯ
ಹೆಣಕೆ ಮೆಲಿಸುವ ಸಿದ್ಧಲಿಂಗನು
ಫಣಿಯ ಭೂಷಣವೆಂದು ತೊಡುವನು ಬಸವ ಕೇಳೆಂದ॥ ॥ ೩೩ ॥

ಕೇಳಿರೈ ಪ್ರಮಥರು ಪುರಾತರು
ಗೂಳಿ ಎರಡರ ಪ್ರಾಣಗೊಡುವನು
ಶಾಲಿನಾಯಕ ಭೈರನಾಯಕರೆಂಬ ದೊರೆಗಳಿಗೆ।
ಭಾಳ ಸೌಭಾಗ್ಯಗಳ ಕೊಡಿಸುವ
ಕಾಳಿರಮಣನ ನಿಜವ ತೋರುವ
ಹೇಳುವನು ಷಟ್ಸ್ಥಲದ ಘನವನು ಬಸವ ಕೇಳೆಂದ॥ ॥ ೩೪ ॥

ದೇವಗಂಗೆಯ ದಿವ್ಯಗಂಗೆಯ
ಭಾವದಲ್ಲಿಹ ಗುಪ್ತಗಂಗೆಯ
ದೇವ ಮಣಿಕರ್ಣಿಕೆಯ ಕುಂಭಾವತಿಯ ಶಿವಗಂಗಾ।
ಪಾವನದ ಶ್ರೀ ಸಿದ್ಧಗಂಗೆಯ

೧–೧ ವು(ಮೂ).

ಸಾವಧಾನದ ಮುದ್ದಗಂಗೆಯ
ದೇವ ಗಂಗಾಧರನ ನುಡಿಸುವ ಬಸವ ಕೇಳೆಂದ॥ ॥ ೩೫ ॥

ಗಂಗಧರ ಶಿವ ಸಿದ್ಧಗಂಗನ
ಶೃಂಗರಿಸಿ ಷಟ್ಸ್ಥಲದ ಶರಣ ಗ
ಣಂಗಳಿಗೆ ಮೃಷ್ಟಾನ್ನ(ಭಕ್ಷ್ಯ)ಗಳಿಂದ ಬಹುದಣಿಸಿ।
ಜಂಗಮಾರ್ಚನೆ ಹಜ್ಜೆಹಜ್ಜೆಗೆ
ಲಿಂಗಪೂಜೆಗಳಲ್ಲಿಗಲ್ಲಿಗೆ
ಸಂಗನಾ ಬಸವಣ್ಣ ಕೇಳೈ ಚನ್ನಬಸವಣ್ಣಾ॥ ॥ ೩೬ ॥

ಪ್ರೇಮದಿಂದಾಲಿಸಿರೆ ಭಕ್ತರು
ಸೋಮವಾರದ ನೇಮ ಷಟ್ಸ್ಥಲ
ಸ್ವಾಮಿಗಳ ನಿಜಭಕ್ತೆ ಬಸವಮ್ಮಾಜಿಯೆಂಬಳಿಗೆ।
ಸ್ವಾಮಿಯೊಳಗೈಕ್ಯಗಳ ನೇಮಿಸು
ತಾ ಮಹಶ್ರೀಶೈಲಕೈದುವ
ರಾ ಮಹೇಶ್ವರ ಮಲ್ಲಿಕಾರ್ಜುನ ಸುಳಿವನಿದಿರಾಗಿ॥ ॥ ೩೭ ॥

ಮಲ್ಲಿಕಾರ್ಜುನ ಸಿದ್ಧಲಿಂಗನ
ಮೆಲ್ಲನೇ ಸಂತೈಸಿ ಷಟ್ಸ್ಥಲ
ದೊಲ್ಲಭನೆ ಬಾರೆನುತ ಪಲ್ಲಕ್ಕಿಯಲಿ ಕುಳ್ಳಿರಿಸಿ।
ಎಲ್ಲ ಊಲಿಗವಿಡಿಸಿ ಹೊಗಳುತ
ಲಲ್ಲಿ ಅತ್ತಿಯಕಟ್ಟೆ ಪೀಠದಿ
ಪಲ್ಲಕ್ಕಿಯಿಂದಿಳಿಸಿ ಉಳಿಸುವ ಬಸವ ಕೇಳೆಂದ॥ ॥ ೩೮ ॥

ಜಳಕ ಜಂತಾವಳಿಯ ಮಾಡಿಸಿ
ತೊಳೆದ ದಿವ್ಯಾಂಬರವ ಹೊದಿಸುವ
ಕಳಿತ ಬಾಳೆಯ ಹಣ್ಣು ಘೃತಕ್ಷೀರಗಳ ನೀಡಿಸುವ।
ಹೊಳೆತನಕ ಸಾಗಿಸುವನಲ್ಲಿಂ
ದುಳಿವ ಹಿಂದಕೆ ಹೋಹನಾತನು
ಇಳೆಯ ಪಾವನಮೂರ್ತಿ ಸಿದ್ಧಮಠಕ್ಕೆ ತೆರಳುವನು॥ ॥ ೩೯ ॥

ನಂದ್ಯಾಲ ಮಹನಂದಿ ಸಂಗಮ
ಮುಂದೆ ಉಜ್ಜನಿ ಉಳುಮೆ ಹರಪುರ

ಚಂದಿ ಚಂದಾವಾರ ಶಿಖಿಪುರವಮರಗುಂಡಾದಿ।
ಹೊಂದಿಗೆಯ ಷಟ್ಸ್ಥಲದ ಶರಣರ
ವೃಂದಸಹ ಮಹಿಮೆಗಳ ಮೆರೆವುತ
ನಂದದಿಂದಾಚರಿಸುತಿರುವನು ಬಸವ ಕೇಳೆಂದ॥ ॥ ೪೦ ॥

ಸುರತಿದೇಶಕೆ ಹೋಗಿ ಅಲ್ಲಿಹ
ದೊರೆ ಪರಂಗಿಯ ಗುರುಗಳಿಗೆ ನಿಜ
ಪರಶಿವನ ಮಹಿಮೆಗಳ ತೋರುತ ಭಕ್ತಿ ಕೈಕೊಳುತ।
ತಿರಿಗಿ ಮಕ್ಕಾರಾಜ್ಯಕಡಸಿದ
ಭರವ ನೋಡಿಸಿ ಮಳೆಗರೆಸಿಯಾ
ಧರೆಯ ನರರಿಗೆ ಸಕಲ ಸಂಪದವಿಗಳ ಪಾಲಿಸುವ॥ ॥ ೪೧ ॥

ಕಡಲ ದಾಂಟುವ ಸಿಡಿಲನೂಡುವ
ವಡಬನಂ ಹಿಡಿದಿಡುವನೂರ್ಧ್ವಕೆ
ವಡವ ಭೂಕಂಪನವ ವಿಷವಮೃತವನೆ ಮಾಡುವನು।
ಪೊಡವಿ ಭಾರವನಿಳುಹಿ ದೂಷಕ
ಪಡೆಯನಡಗಿಸಿ ಷಟ್ಸ್ಥಲ ದೃಢ
ವಿಡಿಸಿ ತೋರುವ ಮಹಿಮೆಗಳ ಬಸವಣ್ಣ ಕೇಳೆಂದ॥ ॥ ೪೨ ॥

ಹರಿವ ಹಾವೇ ಕೊರಳ ಭೂಷಣ
ಉರಿವ ಕಿಚ್ಚೇ ನೊಸಲ ತಿಲಕವು
ಮೊರೆವ ಹುಲಿ ಸಿಂಗಳೆ ವಾಹನ ಉಷ್ಟ್ರಗಜತುರಗ।
ಶರಣರೇರುವ ರಥಕೆ ಬಂಧನ
ಶರಭಭೇರುಂಡಾಳಿ ಪರಿಚರ
ಮೆರೆವ ಪಲ್ಲಕ್ಕಿಗಳ ಹಾರವೆ ಮರುಳಗಣ ಬಸವ॥ ॥ ೪೩ ॥

ಚಂಡಿಯೆಂಬ ಪ್ರಚಂಡಿಯೆಂಬು
ದ್ದಂಡ ಶಕ್ತಿಯರಿಂದವಾ ತ್ರೈ
ಮಂಡಲದ ಭೂತಗಳನೆಳತರಿಸುವರು ಬಾರದಿರೆ।
ಹಿಂಡಿಹಿಪ್ಪೆಯ ಮಾಡಿಸುವರವು
ತಂಡ ತಂಡದಿ ಕಾಯ್ದು ಬರುವುವು
ಕೆಂಡಗಣ್ಣವತಾರ ರುದ್ರನ ಬಸವ ಕೇಳೆಂದ॥ ॥ ೪೪ ॥

ಮಾರಿ ಮಸಣಿಯ ದುರ್ಗಿ ಚೌಡಿಯ
ಭೈರವನ ಜಟ್ಟಿಗನ ಜಿನ್ನನ
ಬೀರ ಮೈಲಾರಾದಿ ಜಕ್ಕಣಿ ಎಲ್ಲಿ ಎಕನಾ[೧][ತಿ][೧] ।
ಊರದೇವಿಯ ಉಡಿಸಿ ಮಾಸ್ತಿಯ
ಘೋರ ಮಾರೀ ದೈವದಿಂದಲೆ
ನೀರ ಹೊರಿಸುವ ಕಸವ ಗುಡಿಸಿಸಿ ದಾರಿ ಸವರಿಸುವ॥ ॥ ೪೫ ॥

ಗಿಳಿಯು ಕೋಗಿಲೆ ನವಿಲು ಹಂಸೆಯು
ಎಳರೆ ಭಲ್ಲುಕ ಕಡವೆ ಸಾರಗ
ಎಳೆಯ ಚಮರಿಯ ಮೃಗವು ಜಾತಕ ಚಕ್ರ ಗಜಪಕ್ಷಿ।
ತಳಿರ ಕಮಲವ ತರುವ ಊಳಿಗ
ಸುಳಿವ ಮರುತನೆ ಬೀಸಣಿಗೆಯವ
ಮಳೆ ಬಿಸಿಲೆ ಮಿತಿ ಮೇರೆ ಸಿದ್ಧಗೆ ಬಸವ ಕೇಳೆಂದ॥ ॥ ೪೬ ॥

ನಂದಿಕೋಲ್ಗಳು ವೃಷಭಧ್ವಜಗಳು
ಮುಂದೆ ಹೊಗಳುವ ಬಿರಿದು ಬಾವುಲಿ
ಸಂದಣಿಯು ಸಮ್ಮುಖವ ಬಿಡಿಸುವ ಭಕ್ತ ತಿಂತಿಣಿಯು।
ಹಿಂದು ಮುಂದಣ ಹಿರಿಯರಾಪ್ತರ
ಸಂದ ಶರಣರ ಕಥೆಯ ಕಥಕರ
ವೃಂದವೋಲಗ ಸಕಲವಾದ್ಯವು ಬಸವ ಕೇಳೆಂದ॥ ॥ ೪೭ ॥

ಸ್ವಾಮಿ ದರುಶನದಿಂದ ಶ್ರೀಗಿರಿ
ಸಮಾಜಕೆ ಸ್ಥಿರಪಟ್ಟವಾಯಿತು
ಶ್ರೀಮಹಾ ಐಮುಕ್ತಿ ಶಾರದಪೀಠ ಶಾಶ್ವತವು।
ಭೂಮಿ ಭಾರವ ಧರಿಸಿದಾತಗೆ
ಸಾಮರಾಜ್ಯದ ಪದವಿ ಹೆಚ್ಚಿತು
ಸೋಮ ಸೂರ್ಯರಿಗಾಯ್ತು ಹಿಂದಣ ದೋಷನಿವೃತ್ತಿ ॥ ॥ ೪೮ ॥

ಅಷ್ಟದಿಕ್ಕಿನೊಳಿಲ್ಲಿ ಷಟ್ಸ್ಥಲ
ದೃಷ್ಟದಾರಿದ್ರಗಳ ತೋರಿ ಪ್ರ
ತಿಷ್ಠೆಗೊಳಿಸುವ ವೀರಶೈವನುಭವನ ಬೋಧಿಸುವ।

೧–೧ ಚಿ(ಮೂ).

ಅಷ್ಟಾವರಣವೆ ದೃಷ್ಟವೆನಿಸುವ
ನಿಷ್ಟಲಿಂಗವೆ ಪ್ರಾಣವೆನಿಸುವ
ಸೃಷ್ಟಿಭಾರವನಿಳುಹಿಸುವ ಬಸವಣ್ಣ ಕೇಳೆಂದ॥ ॥ ೪೯ ॥

ಎಲ್ಲಿ ನೋಡಲು ಲಿಂಗಪೂಜೆಯು
ಎಲ್ಲಿ ಕೇಳಲು ಜಂಗಮಾರ್ಚನೆ
ಎಲ್ಲಿ ತಿಳಿಯಲು ಭಸಿತ ರುದ್ರಾಕ್ಷಿಗಳ ಧಾರಣೆಯು।
ಎಲ್ಲಿ ಲಾಲಿಸೆ ಮಂತ್ರಘೋಷವ
ದಲ್ಲದೇ ಮತ್ತಿಲ್ಲವನ್ಯಥವೆಲ್ಲ ಲೋಕವು ವೀರಶೈವವು ಬಸವ ಕೇಳೆಂದ॥ ॥ ೫೦ ॥

ರಾಜತೇಜವು ರಾಜಠೀವಿಯು
ರಾಜಮನ್ನಣೆ ರಾಜಪೂಜ್ಯವು
ರಾಜಸಭೆಗತಿ ಚಿತ್ರವೋಲಗ ವೈಭವದ ಸೊಗಸು।
ರಾಜಯೋಗದ ಶರಣಷಟ್ಸ್ಥಲ
ರಾಜಭಕ್ತರ ಫೌಜೆಫೌಜಲ
ಮಾಜಿ ಹೋದವು ಸಕಲಮತಗಳು ಬಸವ ಕೇಳೆಂದ॥ ॥ ೫೧ ॥

ನೀರು ನೇಣಪಮೃತ್ಯು ವಿಷರಷ್ಮ
ಕ್ರೂರಮೃಗ ನೃಪಖಡ್ಗ ವಿಚ್ಛಿಕ
ಚೋರರಣ ಬರ ಸಿಡಿಲು ಸರ್ಪ ಸುತೀವ್ರ ಮರಣಗಳ।
ನಾರೈದು ಪ್ರಾಣಗಳ ಕೊಡಿಸುವ
ವೀರಶೈವಾಚಾರಮಾರ್ಗೋ
ದ್ಧಾರ ಕಲಿಯುಗಮಹಿಮ ಸಿದ್ಧನು ಬಸವ ಕೇಳೆಂದ॥ ॥ ೫೨ ॥

ದಿಕ್ಕುದಿಕ್ಕಲಿ ಮೆರೆದು ಬರುವನು
ಬುಕ್ಕಭೂಪನಿಗೊರವ ಕೊಡುವನು
ಹೊಕ್ಕು ದಿಲ್ಲೀಖಾನ ನೃಪರಿಗೆ ಬೋಧೆ ತೋರುವನು।
ಗಕ್ಕನೇ ತಿರುಗುವನು ಹಂಪೆಗೆ
ಯಕ್ಕರಿಂ ವಿರೂಪಾಕ್ಷ ಸಿದ್ಧನ
ತರ್ಕೈಸಿ ಮುಂಡಾಡಿ ಷಟ್ಸ್ಥಲಗುರುವೆ ನಮೊಯೆಂಬ॥ ॥ ೫೩ ॥

ಧರೆಗಧಿಕ ಫಣಿಯಾಲಕಟ್ಟಿಗೆ
ಗುರುಪೂಜೆ ಮಾಡೆನುತ ಮುದ್ದಿಸಿ

ತಿರುಗುವನು ವಿರೂಪಾಕ್ಷ ನಿಜವಾಸಕ್ಕೆ ಸಿದ್ಧೇಶ।
ತೆರಳುವನು ಮುಂದಕ್ಕೆ ಹರಪುರ
ಸಿರಿಯ ಸಂಪದ ಭಕ್ತಿಭವದ
ನಿರಿಗೆ ನೆಲೆವನೆ ನಮಗೆನುತ ಶರಣರಿಗೆ ಹೇಳುವನು॥ ॥ ೫೪ ॥

ಸೇತುಬಂಧವೆ ಮೊದಲು ಹಿಮವ
ತ್ಕೇತಾರ ಕಡೆ ಮಸಳೆ ಬಂಧರ
ದಾತುಕೂರಿನಲಮರಗುಂಡದ ಕೊಲ್ಲಿಪಾಕಾದಿ।
ಭೂತಳಕಿದೇಳೂರ ಮಾಣಿಕ
ಜ್ಯೋತಿಯವರಂಗಾದಿ ಭಕ್ತರ
ಪ್ರೀತಿಯಿಂ ಬೋಧಿಸುವ ಷಟ್ಸ್ಥಲಮಾರ್ಗವನು ಬಸವ॥ ॥ ೫೫ ॥

ಕಾಶಿಗೈದುವ ವಿಶ್ವಪತಿ ಸಂ
ತೋಷದಿಂದಿರೆದ್ದು ಬರುವ ವಿ
ಶೇಷದಿಂ ಬಿಗಿದಪ್ಪಿ ಷಟ್ಸ್ಥಲ ಗುರುವೆ ನಮೊಯೆಂದು।
ಭೂಸುರರ ಬಗ್ಗಿಸುವ ಕಡಮೆಯ
ದೇಶಗಳ ಪಾವನವ ಮಾಡುವ
ಶ್ರೀ ಸದಾಶಿವ ಲಿಖಿತ ಬರುವವು ಬಸವ ಕೇಳೆಂದ॥ ॥ ೫೬ ॥

ಉಳವೆ ಉಜ್ಜನಿ ಕಂಚಿ ಮಧುರಾ
ಸ್ಥಳದ ಗರಳಕ್ಷೇತ್ರ ಹಂಪೆಯ
ಬೆಳೆದ ಸಂಗಮ ಕಾಶಿ ಶ್ರೀಗಿರಿ ಪುಂಗ ಕಾಳಸ್ತಿ।
ಹೊಳೆವ ಶ್ರೀರಂಗಾದಿ ಶಿಖಿಪುರ
ವಳೆಯ ಹರಪುರ ಷಟ್ಸ್ಥಲದ ಅ
ಗ್ಗಳದ ಗುರು ಪೀಠಕ್ಕೆ ಹಳಬರ ನಿಲಿಸುವನು ಬಸವ॥ ॥ ೫೭ ॥

ಕೊಟ್ಟೂರೇಶನ ಕೋಲಶಾಂತನ
ಬಿಟ್ಟಮಂಡೆಯ ಬೋಳಬಸವನ
ಘಟ್ಟಿವಾಳನ ಮಂಟದಯ್ಯನ ಮಲ್ಲಿಕಾರ್ಜುನನ।
ಕಟ್ಟಿಗೆಯ ಸಂಗಯ್ಯ ಕರಿಯ
ಕಟ್ಟೆಯೊಳಗೆ ನಂಜೆದೇವ ಘ
ರಟ್ಟ ಸಿದ್ಧನ ಶಾಂತಗುರು ಮದ್ದಾನೆಸ್ವಾಮಿಗಳ॥ ॥ ೫೮ ॥

ಪುಟ್ಟ ಸಿದ್ಧೇಶ್ವರ ಸ್ವತಂತ್ರದ
ದಿಟ್ಟಿ ನಿಜಗುರು ಸಿದ್ಧ ಷಟ್ಸ್ಥಲ
ನಿಷ್ಠ ಶಿವನಂಕಾರದೇವರ ನೆಟ್ಟವೊಂದೊಂದು।
ಪಟ್ಟಣದ ಸಂಸ್ಥಾನ ವೀಧಿಯ
ಶ್ರೇಷ್ಠಿ ವರ್ತಕ ಭಕ್ತ ಮಠ ಮನೆ
ಕಟ್ಟಿ ಸ್ಥಳ ಕುಳ ತೋಮ ಜಾತ್ರೆಲಿ ಶ್ರೇಷ್ಠ ಬಸವಣ್ಣ॥ ॥ ೫೯ ॥

ಧರಣಿಪರ ಪಟ್ಟಕ್ಕೆ ನಿತ್ಯವ
ಧರೆಯ ಜನರಿಗೆ ದ್ರವ್ಯ ಪತ್ರವ
ಪರಮಭಕ್ತರ ಪಡೆಗೆ ಗುರುಚರಲಿಂಗ ಭಕ್ತಿಗಳ।
ಚರಣದರ್ಶನ ಮಾತ್ರದಲೆ ಇಹ
ಪರದ ಗತಿಗಳ ಕೊಡುವ ಷಟ್ಸ್ಥಲ
ಗುರುವದಾರೆನೆ ಮುಂದೆ ಬಸವಪ್ರಭುವೆ ನಾನೆಂದ॥ ॥ ೬೦ ॥

ಮೆಟ್ಟಿದುದೆ ಘನ ಕ್ಷೇತ್ರವಾಯಿತು
ಮುಟ್ಟಿದುದೆ ಮಹ ಪರುಷವಾಯಿತು
ನೆಟ್ಟನೆನವಾ ನೋಡಿದುದೆ ನಿಜಮೋಕ್ಷಕೊಳಗಾಯ್ತು।
ಬಿಟ್ಟುದೆಲ್ಲವು ತೃಣಕೆ ಸರಿ ಕಣ
ಷಟ್ಸ್ಥಲದ ಗುರುಸಿದ್ಧಲಿಂಗಗೆ
ನಿಷ್ಠೆ ನೆಲೆವನೆಯಾಯ್ತು ಯೋಗಸಮಾಧಿ ಬಸವಣ್ಣ॥ ॥ ೬೧ ॥

ಸುಳಿವ ಲೌಕಿಕ ಜೀವಭಾವವ
ತಿಳುಹಲೋಸ್ಕರವಾಗಿ ಷಟ್ಸ್ಥಲ
ಕುಳವನುದ್ಧರಿಸುವ ನಿಮಿತ್ತದಿ ಜ್ಞಾನಗುರುವಾಗಿ।
ತಿಳಿಯೊ ಹರಗುರುವಾಕ್ಯ ಸಾಕ್ಷಿಯ
ಹಳಬನಲ್ಲವೆ ಬಸವ ಪ್ರಮಥರ
ಸುಳುಹೆ ಲೋಕಪುನೀತ ಮೋಕ್ಷವದೆನ್ನವೇ ಶ್ರುತಿಯು॥ ॥ ೬೨ ॥

ತಾಪಸೋತ್ತಮರುಗಳ ಸಭೆಗೆ ನಿ
ರೂಪಿಸುವ ಷಟ್ಸ್ಥಲಸುಬೋಧೆಯ
ಭೂಪ್ರದಕ್ಷಿಣೆ ಬರುವ ನಾಲ್ವತ್ತೆಂಟು ವೇಳೆಯಲಿ।
ಪಾಪಿಗಳ ಹೃದಯಕ್ಕೆ ನಿರುಪಮ

ದೀಪಗಳನೆತ್ತಿಸುವ ಸಿದ್ಧನು
ಈ ಪರಿಯ ಮಹಿಮೆಗಳನೊರೆವನು ಬಸವ ಕೇಳೆಂದ॥ ॥ ೬೩ ॥

ಏಕಾಕಿಯಾಗಿರುವ ಯೋಗದಿ
ಲೋಕ ಲೌಕಿಕವೆಲ್ಲ ಸುಮ್ಮನೆ
ಶ್ರೀಕರಸ್ಥಲದಯ್ಯನಲ್ಲೇ ಸಕಲಸಂಭ್ರಮವು।
ಬೇಕು ಬೇಡೆಂದೆಂಬ ಉಭಯದ
ವ್ಯಾಕುಳದ ಹಂಗುಳಿದು ಭೋಗವ
ನೂಕಿ ಕಗ್ಗೆರೆ ಸ್ಥಳಕೆ ಸಾಗುವ ಬಸವ ಕೇಳೆಂದ॥ ॥ ೬೪ ॥

ಪರಮಭಕ್ತನು ನಂಬಿ ಶ್ರೀಗುರು
ಚರಣ ಸರಸಿಜಕೆರಗಿ ಬಿನ್ನಹ
ಕರಿಗೊಳಿಸಿ ಹೋಗುವನವಾಂತ್ರದಿ ಮರವನದ್ದುತಿರೆ।
ಬರುವನೂರಿಗೆ ಇರುವ ಸುಮ್ಮನೆ
ಸುರುಷಿಗಳರ್ಚಿಪರು ಹನ್ನೆರ
ಡೊರುಷದಂತ್ಯದಿ ತಿಳಿದ ಕಪಿಲೆಯ ಮುಖದಿ ಬಸವಣ್ಣ॥ ॥ ೬೫ ॥

ತಗ್ಗಿನಲಿ ತಪವಿರುವ ಶೇಷನು
ಬಗ್ಗಿ ಬರುವನು ಹುತ್ತ ಬೆಳೆವುದು
ಸಗ್ಗಿಗರು ಪೂಜಿಪರು ಕಪಿಲೆಯ ಸೇವೆ ಸಿದ್ಧನಿಗೆ।
ಅಗ್ಗಗಣ್ಣನು ವಿಶ್ವರೂಪನು
ಅಗ್ಗಳದ ಪವಾಡಪುರುಷನು
ಕಗ್ಗೆರೆಯ ಭಕ್ತನಿಗೆ ಮೋಕ್ಷವನೀವ ಬಸವಣ್ಣ॥ ॥ ೬೬ ॥

ಕುಂಬಿನಿ ಕರ್ಮಗಳ ಸುಟ್ಟವ
ನಂಬಿಯಣ್ಣಗೆ ವರ ಕೊಟ್ಟವ
ಕುಂಭಿನೀಧರನೊಡನೆ ನಡೆದನು ವಾಮಪುರಸ್ಥಲಕೆ।
ಸಂಭ್ರಮದ ಸಡಗರದ ಸೌಖ್ಯದ
ತುಂಬಿತುಳುಕುವ ಭೋಗಭಾಗ್ಯದ
ಶಾಂಭವನ ಕೈಲಾಸವಿದೆ ದಿಟ ಬಸವ ಕೇಳೆಂದ॥ ॥ ೬೭ ॥

ಶ್ರೀ ಗುರುವೆ ಗತಿಯೆನುತ ಶಿಲ್ಪಿಯು
ಯೋಗನಿಳಯವ ಮೊದಲೆ ರಚಿಸಿದ

ನಾಗಮೋಕ್ತಪ್ರಮಾಣದಿಂದಲೆ ನೂತ್ನತರಮಾಗಿ।
ನಾಗಪೀಠದಿ ಮಂಡಿಸಲು ಕದ
ಬೀಗ ಮುದ್ರೆಗಳಾದವಾಕ್ಷಣ
ಯೋಗ ಸಾಮ್ರಾಜ್ಯಗಳನಾಳುತಲಿರುವ ಸಿದ್ಧೇಶ॥ ॥ ೬೮ ॥

ಭೂಮಿಪಾಲಕರಡ್ಡಬಿದ್ದರು
ಶ್ರೀಮಹಾಷಟ್ಸ್ಥಲ ಭಕ್ತರು
ಕಾಮಿನಿಯರೆತ್ತುವರು ಕಳಶಾರ್ತಿಗಳ ಜಯವೆನುತ।
ಸ್ವಾಮಿ ಶ್ರೀ ಗುರುಸಿದ್ಧಲಿಂಗನು
ನಾಮರೂಪಿನ ಲೀಲೆಗಳ ಘನ
ವಾಪುರದ ಶಿವಯೋಗ ನಿದ್ರಾಮುದ್ರರಾಗಿಹರು॥ ॥ ೬೯ ॥

ವೀರಶೈವಾಚಾರ ಧಾರೆಯ
ಸಾರ ಷಟ್ಸ್ಥಲ ಭಕ್ತಜನ ಸಹ
ತೇರು ತಿರುನಾಳುಗಳ ನಡೆಸುವರತಿ ವಿನೋದದಲಿ।
ಮೂರು ಲೋಕವ ಹೊರೆವನಿಗೆ ಬಹು
ಭಾರವೇ ಭಜಿಸುವರ ಹೊರೆದು ಸು
ಸಾರ ಸುಖದೊಳಗಿರಿಸಿ ಸಲಹುವ ಬಸವ ಕೇಳೆಂದ॥ ॥ ೭೦ ॥

ಆಗಮೋಕ್ತ ವಿಧಾನ ಶ್ರುತಿಮತ
ವಾಗಮೀಕರ ನೆರವಿ ಷಟ್ಸ್ಥಲ
ಯೋಗಿಗಳ ಸದ್ಭಕ್ತ ಶರಣರ ಸಕಲ ಸಂದಣಿಯ।
ಮಾಘಮಾಸದ ಬಹುಳ ಚತುರ್ದಶಿ
ಯಾಗ ಮಹ ಶಿವರಾತ್ರಿ ಕಾಲದ
ಲಾಗುವವು ಗುರುಸಿದ್ಧನಿಗೆ ರಥೋತ್ಸವವು ಬಸವಣ್ಣ ॥ ॥ ೭೧ ॥

ಶ್ರೀಸಕಲ ವಾಣೀಶಾ ಗುಣದೇ
ವೇಶ ಲಕ್ಷಣ ವಿಶ್ವಧರಣಿ ವಿ
ಲಾಸಗಳೆ ಪರಿಹಾಸ ಷಟ್ಸ್ಥಲಭಕ್ತನಿಜಮುಕ್ತಿ।
ಕೋಶ ಶ್ರೀಗುರು ಸಿದ್ಧಲಿಂಗನಿ
ವಾಸ ಯೋಗಾಭ್ಯಾಸ ನಿಜ ಕೈ
ಲಾಸವೋ ಶ್ರೀ ವಾಮನಗಿರಿಯೊಯೆನೆ ವಿರಾಜಿಸಿತು॥ ॥ ೭೨ ॥

ಲೆಂಕನಗರಿಯ ದ್ವಾರಕಿಯ ಬಲು
ಬಿಂಕದೈವದಿ ಹಸ್ತಿನಾಪುರ
ಝುಂಕರದ ಡಿಳ್ಳಿಯನು ತ್ರಿಪುರವ ರುಮ್ಮಿ ಸುರತಿಯನು।
ಓಂಕರದ ಸುಸ್ವರದ ಷಟ್ಸ್ಥಲ
ಪಂಕಜಕೆರಗಿ ಸಿದ್ಧಲಿಂಗನ
ಶಂಕರನ ನಿಜರೂಪ ಜರೆಯದೆ ವಾಮ[೧][ಪುರ][೧] ಬಸವ॥ ॥ ೭೩ ॥

ಸುರರು ಕೊಂಡಾಡುವರು ಋಷಿಗಳು
ಮರುಳು ಶಿಲೆಯನು ಮಾಡುತಿರ್ಪರು
ಹರಿಯಜೇಂದ್ರಾದಿಗಳು ಮುನಿಜನ ಚರಣಸೇವಕರು।
ದರುಶನದ ತಾಂತ್ರಿಗಳೆ ಭಕ್ತರು
ಶರಣರುತ್ಸವ ಷಟ್ಸ್ಥಲದ ನಿಜ
ಪರಮಭಕ್ತರ ಪರುಷರಸ ಎಡೆವೂರು ಬಸವಣ್ಣ॥ ॥ ೭೪ ॥

ಸೃಷ್ಟಿ ಈರೇಳಕ್ಕೆ ಸ್ಥಿರವನು
ಹುಟ್ಟುತಿಹ ಶಿಶುಗಳಿಗೆ ಗೆಲವನು
ತೊಟ್ಟಿಲಿನ ಮಕ್ಕಳಿಗೆ ಸುಖವನು ಸಕಲರಿಗೆ ಜಯವ।
ಕೊಟ್ಟು ಷಟ್ಸ್ಥಲ ಭಕ್ತರಿಗೆ ಕರ
ದಿಷ್ಟಲಿಂಗದ ನಿಷ್ಠೆಯಲಿ ಮನ
ವಿಟ್ಟಿರುವ ಜ್ಞಾನವನು ಚೀಲಳಸ್ವಾಮಿ ಪಾಲಿಸಲಿ॥ ॥ ೭೫ ॥

ಶಶಿಧರನು ಶಂಕರಿಗೆ ನಂದಿಯು
ಅಸಮ ಪ್ರಮಥರ ಸಭೆಗೆ ಪ್ರಭುವರ
ಬಸವರಾಜಗೆ ಚನ್ನಬಸವಗೆ ನೀಲಲೋಚನೆಗೆ॥
ವಸುಧೆಗಗ್ಗಳ ಹರಪುರದ ಗಿರಿ
ಮಿಸುನಿ ಸಿಂಹಾಸನದ ಷಟ್ಸ್ಥಲ
ಬಸವಪ್ರಭುಗುರು ಸುತಗೆ ಬೋಧಿಸಿದಮೃತರಸಸೂತ್ರ॥ ॥ ೭೬ ॥

❖❖

೧–೧ ಹರ(ಮೂ).

ಸಪ್ತದಶ ಸ್ಕಂಧ

ರಾಗ : ಕಲ್ಯಾಣಿ

ಶುಭದ ದೇಶಿಕ ವೃಷಭರಾಜಗೆ
ಪ್ರಭುನಿರೂಪಣ ಭವಿಷ್ಯ ಷಟ್ಸ್ಥಲ
ವಿಭು ಗುರುವದಾರೆಂದು ಬೆಸಗೊಳಲೊರೆದ ಗುರು ಸುತಗೆ॥

ಶ್ರೀ ಗಣಪಗುಹಜನಕ ಜಯ ನರ
ನಾಗಶ್ರುತಿತತಿವಿನುತ ಜಯ ದಶ
ಭೋಗಿಭೂಷಣ ಭೋಳೆಯರಸನೆ ಭಕ್ತಜನವರದ।
ಶ್ರೀ ಗೌರಿ ಗಂಗಾ ಮನೋಹರ
ರಾಗರಸ ಸಂಗೀತಹಿತ ಸಕ
ಲಾಗಮಜ್ಞರ ಹೃದಯ ಶಂಕರ ಸಲಹು ಮೂಜಗವ॥ ॥ ೧ ॥

ಸುತ್ತ ಬಳಸಿದ ಸುರರ ಓಲಗ
ಹುತ್ತ ಯೋಗಸಮಾಧಿ ಹಾವಿನ
ಹೊತ್ತ ಭೂಷಣ ಭಸಿತ ರುದ್ರಾಕ್ಷಿಗಳಲಂಕರದ।
ಹೊತ್ತ ಜಡೆ ಕಾಷಾಂಬರದ ಮಹಿ
ಮೋತ್ತಮನೆ ಷಟ್ಸ್ಥಲದ ಪಟ್ಟದ
ಕರ್ತ ಚೀಲಲಳಸ್ವಾಮಿ ಸದ್ಗುರುಮೂರ್ತಿ ಶರಣಾರ್ಥಿ॥ ॥ ೨ ॥

ಆಚಾರ್ಯಸಂತತಿಗೆ ಸತ್ಯಸ
ದಾಚಾರವಂತರಿಗೆ ನಿತ್ಯ ಶಿ
ವಾಚಾರ ಗುರುಮಾರ್ಗ ಸತ್ಕ್ರಿಯಜ್ಞಾನನಿಷ್ಠರಿಗೆ।
ಪ್ರಾಚೀನರಿಗೆ ಲಿಂಗಪ್ರಾಣ ಮ

ಹಾಚರಣೆಯುಳ್ಳರಿಗೆ ಬ್ರಹ್ಮವ
ಸೂಚಿಸುವರಿಗೆ ಬೋಧಿಸೀ ಷಟ್ಸ್ಥಲಶಿವಾಯಣವ॥ ॥ ೩ ॥

ಅರಿಯದವರಿಗೆ ಅಧಮಜಾತಿಗೆ
ಅರಿವೆ ಮರವೆಯ ತೆರೆಯ ಜನರಿಗೆ
ಬರಿಯ ಬ್ರಹ್ಮಜ್ಞಾನ ಬೋಧೆಯಲೊಡಲ ಹೊರೆವರಿಗೆ।
ಶರಣಸೇವೆಯ ಮಾಡದವರಿಗೆ
ಶರೀರಪೋಷಣೆಗೂಡಿದವರಿಗೆ
ಮರೆದು ಬೋಧಿಸಬೇಡವೀ ಷಟ್ಸ್ಥಲಶಿವಾಯಣವ। ॥ ೪ ॥

ತ್ರಿಪುರಹರ ಪಾರ್ವತಿಗೆ ನಂದಿಯು
ಮಪರಿಮಿತ ಪ್ರಮಥರಿಗೆ ಪ್ರಭುವಿನ
ಉಪದೇಶ ವೃಷಭನಿಗೆ ಷಟ್ಸ್ಥಲ ಬ್ರಹ್ಮಿಗಳ ಸಭೆಗೆ।
ಸಪರ ಘನ ಕೈಲಾಸ ಹರಪುರ
ವಿಪರೀತ ಗಿರಿತಟದ ಷಟ್ಸ್ಥಲ
ತಪಸಿ ಬಸವಪ್ರಭು ಕುಮಾರನಿಗೊರೆದ ಸೂತ್ರವಿದು॥ ॥ ೫ ॥

ಪ್ರಭುವೆ ಬಿನ್ನಹ ಭವಿಷ್ಯ ಷಟ್ಸ್ಥಲ
ವಿಭುವದಾರ್ಯೆ ಕಾಣಬಾರದು
ಅಭಯವಾಕ್ಯವ ಪಾಲಿಸೆಮಗೆಂದೆನುತ ರಾಮಯ್ಯ।
ಪ್ರಬುಡು ಬಸವನು ಚೆನ್ನಬಸವನು
ಶುಭದ ಸೊಡ್ಡಳ ಮಡಿವಳಯ್ಯನು
ವಿಬುಧ ಕಿನ್ನರಿದೇವ[1][ಯಾಚಿ][1]ಸಿಕೊಂಡರಲ್ಲಮನ॥ ॥ ೬ ॥

ಭೂಮಿಭಾರವನಿಳುಹಿ ಜನರಿಗೆ
ಕಾಮಿತಾರ್ಥವನಿತ್ತು ಯೋಗದಿ
ಸ್ವಾಮಿ ಶ್ರೀ ಗುರುಬಸವಲಿಂಗನು ಮಂಡಿಸಿದ ಬಳಿಕ।
ವಾಮಪುರ ಕೈಲಾಸ ಷಟ್ಸ್ಥಲ
ಸಾಮರಾಜ್ಯದ ಪಟ್ಟವಾಳ್ದನ
ನಾಮಕರಣುಪದೇಶಗಳ ದಯಮಾಡಿ ನಮಗೆನಲು। ॥ ೭ ॥

೧-೧ ಪೂಜಿ(ಮೂ).

ಲಾಲಿಸಿರೆ ಪ್ರಮಥರು ಗಣಂಗಳು
ನೀಲಲೋಚನೆ ಬಸವಭಕ್ತರು
ಕಾಲಜ್ಞಾನ ಸಕೀಲ ಮುಂದಣರೆ ಶಿವಾಗಮವ।
ಫಾಲಲೋಚನನಂತರಂಗದ
ಮೂಲಚಿತ್ತಿನ ಕಳೆಯೆ ನಾ ನಿಜ
ಬಾಲನಾಗವತರಿಸುವೆನು ಗುರುಪೀಠವಂಶದಲಿ॥ ॥ ೮ ॥

ಜ್ಞಾನಬೋಧ ಪ್ರಭುವೆ ಸ್ವಾಮಿಗೆ
ನಾನಾ ಶಿಲೆಗಳುವುಂಟು [೧][ಶಿವ][೧] ಮತ
ಸ್ಥಾನವಾವುದು ದೇಶವಾವುದು ನಾಮವೇನೆಂದು।
ಮಾನನಿಧಿ ಬಸವಣ್ಣ ಶಿವಸಂ
[ಧಾ]ನಿ ನೀಲಾಂಬಿಕೆಯು ಪ್ರಮಥರು
ಸ್ವಾನುಭಾವಿಗಳೆಲ್ಲ ಬೆಸಗೊಳಲೊರೆವ ಪ್ರಭುರಾಯ॥ ॥ ೯ ॥

ಎಲ್ಲ ಪುಣ್ಯಸ್ಥಳಕೆ ಕಳಶವು
ಕಲ್ಯಾಣ ಕುಳಸ್ಥಳಕೆ ಮಿಳಿತವು
ತಲ್ಲೀಯ ಗುರುಲಿಂಗಜಂಗಮಕುತ್ಸಹ ಸ್ಥಾನ।
ಅಲ್ಲಿ ತುಂಗಾತೀರಕುತ್ರವು
ಸಲ್ಲಲಿತ ಸುಕ್ಷೇತ್ರ ಕರ್ತನು
ಮಲ್ಲಿಕಾರ್ಜುನನಾಮವಮರಗುಂಡ ಸ್ಥಲ ಬಸವ॥ ॥ ೧೦ ॥

ಅಮರರೊತ್ತೈಸಲ್ ತ್ರಿಕಾಲದ
ಲಮರಗೊಂಡಭಿಧಾನ ಶ್ರುತಿ ಮತ
ಪ್ರಮಥರಿಗೆ ನಿಜವಾಸ ಷಟ್ಸ್ಥಲಬ್ರಹ್ಮಿಗಳ ನಿಳಯ।
ವಿಮಲಭಕ್ತರ ಹಕ್ಕೆ ಗುರುಗಳ
ಸಮರಸಾಂಬುಧಿಚಂದ್ರ ಭಾಸ್ಕರ
ಕಮಲಪಂಡಿತರೂರ್ಧ್ವಲೋಚನರುದ್ಭವಕ್ಷೇತ್ರ॥ ॥ ೧೧ ॥

ಲಿಂಗಜಂಗಮ ಗುರುಸ್ವರೂಪರು
ಲಿಂಗಾಂಗಸಮರಸ ನಿರೂಪರು
ಲಿಂಗಪಾರಣೆಗವರೆ ಮುಖ್ಯರು ಯುಗಯುಗಾಂತ್ರದಲಿ।

೧–೧ ಶಶಿ(ಮೂ).

ಸಂಗ ಷಟ್ಸ್ಥಲ ಶರಣಭಕ್ತರು
ಮಂಗಳಾತ್ಮಕರಮರಗುಂಡದ
ಲಿಂಗಸಂಭವರೂರ್ಧ್ವನೇತ್ರರು ಬಸವ ಕೇಳೆಂದ॥ ॥ ೧೨ ॥

ಆರಾಧ್ಯವಂಶಕ್ಕೆ ಶಿರಮಣಿ
ಕಾರಣೀಕರು ಘನಮಹಾತ್ಮರು
ವೀರಶೈವಾಚಾರನಿಷ್ಠರು ಮತಪ್ರತಿಷ್ಠಿತರು।
ಭೂರಿ ಪಾವಾಡಗಳ ಮೆರೆವರು
ಸಾರಷಟ್ಸ್ಥಲಶರಣತೃಪ್ತರು
ಧಾರುಣೀತ್ರಯ ಮತಕೆ ಗುರುಗಳು ಅಗ್ರಜರು ಬಸವ॥ ॥ ೧೩ ॥

ಪಂಡಿತಾರಾಧ್ಯರಿಗೆ ಹಿರಿಯರು
ಕಂಡುದೇ ಶ್ರೀಯಮರಗುಂಡವು
ಮಂಡಲತ್ರಯಪೀಠ ಗುರುಮಠಕಳಶ ಕೈಲಾಸ।
ಖಂಡ ಶಶಿಧರ ಮಲ್ಲಿಕಾರ್ಜುನ
ಖಂಡ ನಿರುಪಮ ಊರ್ಧ್ವಲೋಚನ
ಪಂಡಿತರ ಸ್ಥಳ ಮುಖ್ಯವಲ್ಲಿಗೆ ಬಸವ ಕೇಳೆಂದ॥ ॥ ೧೪ ॥

ಆ ಮಹಿಮವಂಶಾಬ್ಧಿವರ್ಧನ
ಸೋಮ ಪಾಲ್ಕುರಿಕೆಯ ತರಂಗಿಣಿ
ನಾಮ ಗುಣಮಣಿಭೈತ್ರಗೋತ್ರದ [೧][ಉದ್ವ][೧] ಗಿರಿ ಸ್ಥಳದ।
ಶ್ರೀಮಹಾಗುರುಪೀಠ ಪಟ್ಟದ
ಸ್ವಾಮಿ ಶ್ರೀಗುರು ಮಲ್ಲಿಕಾರ್ಜುನ
ಕಾಮಿನಿಗೆ ನಾನೊಲಿದೆ ಬಸವಪ್ರಭುವೆನಿಸಿ ಬಸವ॥ ॥ ೧೫ ॥

ನಿನ್ನ ನಾಮವೆ ವಜ್ರಕವಚವ
ದೆನ್ನ ನಾಮವೆ ಶಿರಕಿರೀಟವು
ನಿನ್ನ ನನ್ನಭಿಧಾನ ಪರಶಿವಲೀಲೆ ಪೂರ್ವದಲಿ।
ಇನ್ನಿವರ ದೃಢಭಕ್ತಿಗೊಲಿದು ಪ್ರ
ಸನ್ನನಾಗುವೆ ಬಸವ ಶ್ರುತಿಮತ
ಮುನ್ನ ಚೀಲಲಳಸ್ವಾಮಿ ಬಸವಪ್ರಭುವೆನಿಸಿ ಬರುವೆ॥ ॥ ೧೬ ॥

೧-೧ ವುರ್ದ(ಮೂ).

ಪದಗಳೆಲ್ಲವ ಮೀರಿ ಬೆಳಗುವ
ಸದಮಲಾತ್ಮಕ ವಸ್ತು ಪರಶಿವ
ನುದರಕಮಲದ ಬಿತ್ತೆ ಚೀಲಳಸ್ವಾಮಿಯವತಾರ।
ಉದಿಸಿದಾಕ್ಷಣ ಶಿವನೆ ಕರೆದನು
ಮುದದಿ ಚೀಲಳಸ್ವಾಮಿಯೆಂದೀ
ತುದಿಗೆ ಷಟ್ಸ್ಥಲಕರ್ತನಾತನೆ ಬಸವ ಕೇಳೆಂದ॥ ॥ ೧೭ ॥

ಕಂಜಸಖಕೋಟಿಪ್ರಕಾಶದಿ
ರಂಜಿಸುವ ಪರಶಿವನ ಹೃದಯದ
ಕಂಜ ನಿರುಪಮಜ್ಯೋತಿ ನಾನೇ ಮೂಲಸೂತ್ರಕನು।
ಮಂಜುಮಾಯಾಟಗಳಿವೆಲ್ಲವು
ರಂಜನೆಯ ಲೀಲೆಗಳು ಪೂರ್ವ ನಿ
ರಂಜನಪ್ರಭು ನಾನೆ ಚೀಲಳಸ್ವಾಮಿಯೆನೆ ನಾನೆ॥ ॥ ೧೮ ॥

ಪ್ರಮಥರಿಗೆ ಉತ್ಸಾಹ ಬಸವಗೆ
ಸಮರಸಜ್ಞಾನೋಕ್ತಿ ಬಾಲನಿ
ಗಮೃತಪಾನವು ಚೆನ್ನಬಸವನಿಗಕ್ಕು ಸಂತೋಷ।
ರಮಣಿಗತಿಯಾ ಭಕ್ತಿಷಟ್ಸ್ಥಲ
ಕಮಲಭಾಸ್ಕರ ಗುರುವೆ ಜಯ ನಮೊ
ಅಮರಗುಂಡದ ಮಲ್ಲಿಕಾರ್ಜುನ ಊರ್ಧ್ವಲೋಚನನೆ॥ ॥ ೧೯ ॥

ಪರಮ ಶ್ರೀಗುರು ಮಲ್ಲಿಕಾರ್ಜುನ
ನರಸಿ ಮಹದೇವಮ್ಮನಿಗೆ ನೀ
ತರಳನಾಗವತರಿಸಿ ತೋರುವ ತೆರನ ವಿಸ್ತರಿಸಿ।
ಕರುಣಿಪುದು ಷಟ್ಸ್ಥಲದ ಗುರುವೇ
ನಿರುಪಮ ನಿರಾಲಂಬ ವಸ್ತುವೆ
ಶರಣೆನುತ ಬಸವಣ್ಣ ಶರಣರು ಮರಳಿ ಬೆಸಗೊಳಲು॥ ॥ ೨೦ ॥

ಚಿತ್ತಶುದ್ಧದಿ ಕೇಳಿರಯ್ಯೆಲೆ
ಉತ್ತರದಕ್ಷಿಣ ಊರ್ಧ್ವಗಿರಿಯಲಿ
ಚಿತ್ರ ಶ್ರೀಗುರು ಮಲ್ಲಿಕಾರ್ಜುನದೇವ ಮಹದೇವಿ।
ಪುತ್ರಕಾಂಕ್ಷಿಗಳಿರುತಿಹರು ಸಮ
ರಾತ್ರಿಯೊಳಗಾಗಮರಗುಂಡದ
ಕ್ಷೇತ್ರಪತಿ ಗುರು ಮಲ್ಲಿಕಾರ್ಜುನ ಬಂದು ತಲೆದಡಹಿ॥ ॥ ೨೧ ॥

ಚಿಂತೆಯಲಿ ಗುರು ಮಲ್ಲಿಕಾರ್ಜುನ
ಪಂಥವೇ ಮಹದೇವಿ ಪಟ್ಟದ
ಸಂತಾನ ನಿಮಗಿಲ್ಲವೇ ಸಾಕ್ಷಾತು ನಾವಿರಲು।
ಕಾಂತಮಣಿ ಕೇಳಮರಗುಂಡಕೆ
ಸಂತೋಷದಿಂ ಬನ್ನಿ ರವಿಶಶಿ
ಕಾಂತಿಗಳ ಕೀಳ್ಬಡಿಸಿ ಬೆಳಗುವ ಬಾಲಕನ ಕೊಡುವೆ॥ ॥ ೨೨ ॥

ಎಂದು ಬಯಲಾಗಲ್ಕೆ ಸತಿಪತಿ
ಸಂದೆಹಂಗಳನುಳಿದು ಶೀಘ್ರದಿ
ಮಿದು ಮಡಿಗಳನುಟ್ಟು ಲಿಂಗಾರ್ಚನೆಗಳಂ ಮಾಡಿ।
ಬಂದ ಶರಣರ ತೃಪ್ತಿಪಡಿಸುತ
ನಿಂದಶೇಷವ ಸಲಿಸಿ ಜಂಗಮ
ಕೊಂದಿಸುತಲಪ್ಪಣೆಯ ತೆಕ್ಕೊಂಡು ಮನೋತ್ಸಹದಿ॥ ॥ ೨೩ ॥

ಕನಸಲ್ಲ ಕಲಿ ಕಪಟವಲ್ಲಿದು
ಮನದ ಕಳವಳ ಮರವೆಯಲ್ಲಿಹ
ಮನೆದೈವ ಕುಲಗುರು ಪ್ರಸನ್ನ ಸುನಂಬಿಗೆ ಇದೆಂದು।
ಮನೆ ಮಠಕತೆ ಕಪಿರಿಸಿ ಶಿಷ್ಯರ
ವನಿತೆಯರನೊಡಗೊಂಡು ಹರುಷದ
ಲಮರಗುಂಡಕೆ ತೆರಳುವರು ಬಸವಣ್ಣ ಕೇಳೆಂದ॥ ॥ ೨೪ ॥

ಬಂದು ಹೋದುದ ನೋಡಿ ಮನಸಿಗೆ
ಸಂದೇಹವಿನಿತಿಲ್ಲ ಕೌತುಕ
ಕಂದನಾಪೇಕ್ಷೆಯಲೆ ಕಣ್ಣಿಗೆ ಜ್ವಾಲೆ ನಗೆಮುಖವು।
ಹಿಂದು ಮುಂದಾರೈದು ಎಡಬಲ
ಬಂಧುಗಳ ಕೇಳುವರು ಶ್ರೀಗುರು
ತಂದೆ ಸರಿ ನಮ್ಮಮರಗುಂಡದ ಊರ್ಧ್ವಲೋಚನರು॥ ॥ ೨೫ ॥

ಮಂಡಲಕೆ ಗುರುಪೀಠ ಶ್ರೀಪತಿ
ಪಂಡಿತರು ಗುರು ಮಲ್ಲಿಕಾರ್ಜುನ
ಪಂಡಿತರು ಪಾಲ್ಕುರಿಕೆ ಸೋಮನು ಊರ್ಧ್ವಲೋಚನದ।
ಪಂಡಿತರು ಶ್ರೀ ಮಲ್ಲಿಕಾರ್ಜುನ

ಪಂಡಿತಾರಾಧ್ಯರು ಶ್ರೀಮಹಾ
ಪಂಡಿತರೆ ನಮ್ಮಮರಗುಂಡದ ಲಿಂಗಸಂಭವರು॥ ॥ ೨೬ ॥

ಅವರ ಗೋತ್ರವೆ ನಮ್ಮ ಗೋತ್ರವು
ಅವರ ಸೂತ್ರವೆ ನಮ್ಮ ಸೂತ್ರವು
ಅವರ ಶಾಖ ಪ್ರವರ ಕುಲ ನಮಗವರೆ ಜ್ಯೋತಿಗಳು।
ಅವರ ಪಡೆದವ ನಮ್ಮ ಪಡೆದವ
ನವರ ಸಲಹುವ ನಮ್ಮ ಸಲಹುವ
ನವರಿಗೊಲಿದವ ನಮಗು ಒಲಿದವ ರಮಣಿ ಕೇಳೆಂದ॥ ॥ ೨೭ ॥

ನಮ್ಮ ಸ್ಥಳ ಕುಳವಮರಗುಂಡವು
ನಮ್ಮ ದೇವರೆ ಮಲ್ಲಿಕಾರ್ಜುನ
ನಮ್ಮ ವಂಶವೆ ಊರ್ಧ್ವಲೋಚನಪಂಡಿತರ ವಂಶ।
ನಮ್ಮ ಜಾತಿಯೆ ಬ್ರಹ್ಮಜಾತಿಯು
ನಮ್ಮ ಆಶ್ರಮ ಬ್ರಹ್ಮಚರ್ಯವು
ನಮ್ಮ ಶಿಷ್ಯರಸಂಖ್ಯರಿಹಪರ ರಮಣಿ ಕೇಳೆಂದ॥ ॥ ೨೮ ॥

ಕೊಲ್ಲಿಪಾಕಿಯ ವೀರ ಸೋಮನೊ
ಳಲ್ಲಿ ರೇವಣ ಸಿದ್ಧವಟದಲಿ
ಮಲ್ಲಿಕಾರ್ಜುನ ಮರುಳರೇಕೋರಾಮಪಂಡಿತರೆ।
ಸಲ್ಲಲಿತ ಮುದ್ರಾಪುರದ ಶಿವ
ನಲ್ಲಿ ಸಂಭವರಮರಗುಂಡದ
ಮಲ್ಲಿಕಾರ್ಜುನ ಲಿಂಗದಲಿ ನಮ್ಮಂಶಭವ ರಮಣಿ॥ ॥ ೨೯ ॥

ಕ್ಷಿತಿತಳಕೆ ಗುರುಪೀಠವೇ ಘನ
ಚತುರಚಾರ್ಯದ ಮಧ್ಯದಲಿ ಮಹ
ಮಿಥವಾ ವಾಣಿಗಳು ಪಂಡಿತಾರಾಧ್ಯರಸವೋದ್ಭವರು।
ಯತಿಗಳಾಗಲಿ ಗುರುಗಳಾಗಲಿ
ವ್ರತನೇಮ ನಿಜಲಿಂಗನಿಷ್ಠರು
ಮತಪ್ರತಿಷ್ಠರು ಮಹಿಮಪುರುಷರು ರಮಣಿ ಕೇಳೆಂದ॥ ॥ ೩೦ ॥

ಕುಲಗುರುವು ಮನೆದೈವ ವಾಕ್ಯವ
ತೊಲಗಲಾಗದೆನುತ್ತ ಶಾಸ್ತ್ರಗ
ಳುಲಿಯವೇ ಗುರು ಮಲ್ಲಿಕಾರ್ಜುನಸ್ವಾಮಿ ತಾ ಬಂದು।
ತಲೆದಡಹಿ ಕುರುಹಿಟ್ಟು ಹೋದನು
ಲಲನೆ ಕೇಳೆಂದೆನುತಲಿರ್ವರು
ಸ್ಥಳವ ಹೊಗುವರು ಅಮರಗುಂಡದ ಗುರುವೆ ಗತಿಯೆನುತ॥ ॥ ೩೧ ॥

ಅಮರಗುಂಡವ ಬೇಗ ಹೊಗುವರು
ಅಮರವಾದ್ಯವು ಮೊಳಗುವವು ಶುಭ
ಸುಮನಸರು ಹೊಗಳುವರು ಸುರಿವವು ಕುಸುಮವೃಷ್ಟಿಗಳ।
ಹಿಮಕರಗೆ ಲಯಕಾಲ ದ್ಯುಮಣಿಗೆ
ಸಮಯದುತ್ಸಹ ಮಲ್ಲಿಕಾರ್ಜುನ
ನಮಲ ಶಿಶುವೇಷಗಳ ಧರಿಸುವ ಬಸವ ಕೇಳೆಂದ॥ ॥ ೩೨ ॥

ಹೊಳೆವ ಮಾಗಾಯಿಗಳೆ ರವಿಶಶಿ
ತಳಿಕಿನರಳೆಲೆಯಗ್ನಿ ಲೋಚನ
ಮಲಕಿನೆಳೆ ಮುತ್ತುಗಳೆ ತಾರೆಯು ವ್ಯಾಘ್ರನಖಸರದ।
ಲುಳಿಯ ಕಂಕಣ ಫಣಿಯಲಂಗದ
ಗಳದ ಶಿವಮಣಿ ಭಸಿತ ಸುರಶಿರ
ಮೊಳೆವಲ್ಲ ಕಿರುನಗೆಯ ಮಂತ್ರಸ್ವರೂಪ ಶಿಶು ಬಸವ॥ ॥ ೩೩ ॥

ಆಗಮೋಕ್ತದ ಗೋಪುರದ ತಲೆ
ವಾಗಿಲೆಲ್ಲವ ದಾಂಟಿ ಒಳಯಿಕೆ
ಹೋಗಿ ನವರಂಗದಲೆ ನಿಲುವರು ಕೀರ್ತಿಸುತ ಗುರುವ।
ದೇಗುಲವೆ ಮಾತಾಡುವಂದದ
ಲಾಗ ಶ್ರೀ ಗುರುಮಲ್ಲಿಕಾರ್ಜುನ
ಬೇಗ ಬಂದಿರಿ ಬಾಲಕನ ನೋಡೆನುತ ತೋರಿಸುವ॥ ॥ ೩೪ ॥

ಕಂಡರಾಕ್ಷಣದಲ್ಲೆ ರವಿಶಶಿ
ಮಂಡಲವನುತ್ತರಿಸಿ ಬೆಳಗುವ
ಪಂಡಿತಾರಾಧ್ಯರ ಸ್ಥಲೋದ್ಭವ ಕಮಲಭಾಸ್ಕರನ।
ಕೊಂಡಾಡುತಿರಲಾಗ ಬಾಲನ

ಕೊಂಡು ಹೋಗಿರೆ ಪರಶಿವನ ಚಿ
ತ್ಪಿಂಡವಿದು ಗುರುವಾಕ್ಯ ಬಸವಪ್ರಭು ಶಿವಾಂಶಿಕನ॥ ॥ ೩೫ ॥

ಎಲ್ಲಿ ಧರಣಿಯ ರಮಣಿ ಶಿರಮಣಿ
ಯಲ್ಲಿ ಹರದನಪುರದ ಧನಪತಿ
ಮಲ್ಲಿಕಾರ್ಜುನಶೆಟ್ಟಿ ಜ್ಞಾನಾಂಗನೆಗೆ ಶಿಶುವಾಗಿ।
ಎಲ್ಲರಿಗೆ ನಿಜದೋರಿ ಷಟ್ಸ್ಥಲ
ದೊಲ್ಲಭನು ತಾನಾಗಿ ಯಡಪುರ
ದಲ್ಲಿ ನೆಲಸಿಹ ಯೋಗಿ ಶ್ರೀಗುರು ಸಿದ್ಧಪ್ರಭುವೀತ॥ ॥ ೩೬ ॥

ಲಾಲಿಸಿರೆ ಚಿದ್ಘನಮಹಪ್ರಭು
ಮೂಲಸ್ತಂಭಪ್ರಭು ಪರಮಪ್ರಭು
ಚೀಲಳಪ್ರಭು ಬಸವಪ್ರಭು ಚಿದಾನಂದಪ್ರಭುವೆಂದು।
ಮೇಲಣಲ್ಲಮಪ್ರಭು ಗುಹೇಶ್ವರ
ಶೀಲಸಿದ್ಧಪ್ರಭು ನಿರಂಜನ
ಲೀಲೆಗಳು ನಮಗುಂಟು ಪೂರ್ವದ ನಾಮ ಕರಣಗಳ॥ ॥ ೩೭ ॥

ಆದಿಯಲಿ ಶೀಲಾದನಿಗೆ ಶಿಶು
ವಾದೆ ನಂದೀಶ್ವರನೆನಿಸಿ ನಿಜ
ಮಾದಲಾಂಬಿಕೆ ಮಾದಿರಾಜಗೆ ಬಸವನಾಮದಲಿ।
ಪಾದಲೋಚನ ರೂಪಸೌಂದರ
ನಾದೆ ಯಸ್ಯಜ್ಞಾನಿದೇವಿಗೆ
ವೇದವಿದನಾ ಜೆಡೆಯನ್ನೆನಾರಿಂಗೆ ಕೇಳೆಂದ॥ ॥ ೩೮ ॥

ನಿರುತ ನಿರಹಂಕಾರನಿಗೆ ಶಿವ
ಶರಣೆ ಘನ ಸುಜ್ಞಾನದೇವಿಗೆ
ಗುರು ನಿರಂಜನ ಪ್ರಭುವೆನಿಸಿ ಸುತನಾದವನು ನಾನೆ।
ಧರಣಿಪತಿ ಬಲ್ಲಾಳರಾಯಗೆ
ತರುಣಿಮಣಿಗಮ್ಮವ್ವೆ ಮೋಹದ
ತರಳನಾದಂದದಲಿ ನಿಮಗಿದೆ ತರುಣ ನಾನಾದೆ॥ ॥ ೩೯ ॥

ಮುದ್ದುಗೊಂಡಗೆ ಸುಗ್ಗಲಾಂಬೆಗೆ
ಸಿದ್ಧರಾಮ ಪ್ರಸನ್ನವಾದೊಲು

ಉದ್ದಗಿರಿ ಗುರು ಮಲ್ಲಿಕಾರ್ಜುನದೇವ ಮಹದೇವಿ।
ವೃದ್ಧಕಾಲದ ಬಾಲಬಯಕೆ ಪ್ರ
ಸಿದ್ಧವಾಯಿತು ಶಿಶುವ ಕೊಳ್ಳೆನು
ತೂರ್ಧ್ವಲೋಚನಸ್ವಾಮಿ ಶ್ರೀಗುರು ಕೊಟ್ಟು ಹರಸಿದರು॥ ॥ ೪೦ ॥

ಲೆಕ್ಕವಿಲ್ಲದ ದೊರೆಗಳಲಿ ಶಿಶು
ಮಕ್ಕಳೆನೆ ನಿಮಗುಂಟು ಘನತರ
ದೊಕ್ಕಲಿಗರಲಿ ಗೌಡಪ್ರಭುಗಳು ಸಾಲು ಮೂಲೆಗಳ।
ಒಕ್ಕಣಿಸಲಳವಲ್ಲವರ್ಥಕೆ
ದಕ್ಕಡಿಗ ಬಣಜಿಗರು ಭಕ್ತರಿ
ಗಕ್ಕು ಜಡಗುರು ಲೀಲೆವೆಂಬತಿ ಚಿಂತೆಬೇಡೆಂದ॥ ॥ ೪೧ ॥

ಉಪದೇಶವಿಲ್ಲೆಂಬ ಸಂಶಯ
ದುಪಮೆಗಳ ಬಿಡಿ ನಾವೆ ಗುರುವಾ
ಗುಪದೇಶಗಳ ಮಾಡಿದೆವು ವೇದಾಗಮೋಕ್ತಿಯಲಿ।
ತಪಸಿ ಪರಶಿವಯೋಗಿ ವಿರತನು
ಅಪರಿಮಿತ ತತ್ತ್ವಾನುಭಾವಿವ
ಗುಪಚಾರಗಳ ಮಾಡಿ ಬಸವಪ್ರಭುವೆ ನಾವೆನ್ನಿ॥ ॥ ೪೨ ॥

ಎಂದು ಲಿಂಗದ ಗರ್ಭದಿಂದಲೆ
ಬಂದು ಗುರುರೂಪಾಗಿ ಬೋಧಿಸಿ
ಕಂದನಿಗೆ ನಿಜನಾಮ ಬಸವಪ್ರಭುವೆನುತ ಹೇಳಿ।
ಇಂದುಮುಖಿ ಪದಕೆರಗುವಳು ಶಿವ
ನಂದನನ ಕರಕಿತ್ತು ಹರಸುವ
ಚಂದದಲಿ ಬದುಕೆನುತ ಬೆರಸುವ ಲಿಂಗದಲಿ ಬಸವ॥ ॥ ೪೩ ॥

ಇಹಪರಕ್ಕತಿಶಯವ ಶರಣರ
ಮಹಿಮೆಗಳಿಗಗ್ಗಳವ ಷಟ್ಸ್ಥಲ
ಸಹಜಕರ ಸಂತತಿಗೆ ತಾ ಸಂಭ್ರಮದ ಘನಪದವ।
ಮಹಿತಳದ ಶಿವಮತಕೆ ಮೋಕ್ಷವ
ಕುಹಕಜಾತಿಗೆ ಕಂಠಹಾರವ
ವಹಿಸಿ ಪಾಲಿಸಿ ಗುರುವೆ ಚೇಲಳಸ್ವಾಮಿ ಕರುಣದಲಿ॥ ॥ ೪೪ ॥

ಕಾಳಿಗಭವನು ನಂದಿಕೇಶ್ವರ
ಹೇಳಿದನು ಪ್ರಮಥರಿಗೆ ಪ್ರಭು ಗಣ
ಮೌಲಿ ವೃಷಭಗೆ ಚನ್ನಬಸವಗೆ ನೀಲಲೋಚನೆಗೆ।
ಕೇಳಿ ಹರಪುರ ಶೈಳತಟ ರಸ
ಮೇಳ ಷಟ್ಸ್ಥಲಪೀಠಕರ್ತೃಕೃ
ಪಾಳು ಬಸವಪ್ರಭು ಕುಮಾರನಿಗೊರೆದ ಸೂತ್ರವಿದು॥* ॥ ೪೫ ॥

❖❖

* ಇತಿ ಸಪ್ತದಶ ಸ್ಕಂಧ ನಿರೂಣಂ ಅಂತು ಉಭಯ ಪದಗಣನೆ ೮೧೦ಕ್ಕಂ ಮಂಗಳ ಮಹಾಶ್ರೀ ॥

ಅಷ್ಟಾದಶ ಸ್ಕಂಧ

ರಾಗ : ರಾಮಕ್ರೀ

ಶಿಶುವ ಪಾಲಿಸಿ ಗುರುವೆ ಲಿಂಗದ
ಅಸಮಲೋಚನ ಬೆರೆದ ಮುಂದಣ
ಒಸಗೆಗಳನರುಹೆಂದ ಶಿಷ್ಯನಿಗೊರೆದ ದೇಶಿಕನು॥

ಶ್ರೀಕರನೆ ಶಶಿಧರನೆ ಭಕ್ತಕೃ
ಪಾಕರನೆ ಭಸ್ಮಾಂಗ ಗುಣರ
ತ್ನಾಕರನೆ ಭವರೋಗವೈದ್ಯಸುಖಾಕರನೆ ಹರನೆ।
ಸಾಕರನೆ ಶಾಶ್ವತನೆ ಶಿವನೆ ನಿ
ರಾಕರನೆ ನಿರ್ಗುಣನೆ ಶಂಭು ಪ
ರಾಕು ಪಾರ್ವತಿರಮಣ ಶಂಕರ ಸಲಹು ಮೂಜಗವ॥ ॥ ೧ ॥

ಪರಶಿವನ ಚಿಕ್ಕಳೆಯೆ ಧರೆಗವ
ತರಿಸಿ ಪ್ರಾಕೃತ ಪ್ರಾಣಿಗಳ ಸಂ
ಸ್ಕರಿಸಿ ಷಟ್ಸ್ಥಲ ಮಹಿಮೆಗಳನುದ್ಧರಿಸಿ ಶರಣರಿಗೆ।
ಶರಿರ ಗುಣಧರ್ಮಗಳ ಜಾರಿಸಿ
ಪರಮಲಿಂಗೈಕ್ಯಗಳ ತೋರಿಸಿ
ಹರನ ಬೆರೆಸಿದ ಗುರುವೆ ಚೀಲಳಸ್ವಾಮಿ ಶರಣಾರ್ಥಿ॥ ॥ ೨ ॥

ಹೇಳಿದರೆ ಮನ ಹಿಗ್ಗುವವರಿಗೆ
ಕೇಳಿ ಸಂತೋಷಿಸುವ ಜನರಿಗೆ
ಭಾಳ ಜಂಗಮಭಕ್ತರಿಗೆ ಷಟ್ಸ್ಥಲದ ಶರಣರಿಗೆ।
ಮಾಳ ಪಕ್ಷವ ಮಾಡದವರಿಗೆ

ಭಾಳನೇತ್ರನ ಭಜಿಸುವವರಿಗೆ
ತಾಳಿಂದ ತುದಿಗೊರೆವುದೀ ಷಟ್ಸ್ಥಲಶಿವಾಯಣವ॥ ॥ ೩ ॥

ವಾದ ವೈರವ ನಡಪುವವರಿಗೆ
ಓದಿದರ್ಥವ ತಿಳಿಯದವರಿಗೆ
ಓದಿದರೆ ಅಪಸ್ವರದಲೋದುವ ವರ್ಣಹೀನರಿಗೆ।
ಬೀದಿವಾಡಿನ ಪಸರದವರಿಗೆ
ಗಾದೆ ಗ್ರಂಥವ ನಡೆಸುವವರಿಗೆ
ಬೋಧಿಸದಿರೋ ಮಗನೆ ಈ ಷಟ್ಸ್ಥಲಶಿವಾಯಣವ॥ ॥ ೪ ॥

ಇಂದುವದನೆಗೆ ಈಶ್ವರನು ಮಹ
ನಂದಿಕೇಶ್ವರ ಶರಣರಿಗೆ ಪ್ರಭು
ಹಿಂದೆ ವೃಷಭಗೆ ಪ್ರಮಥರಿಗೆ ಬೋಧಿಸಿದ ಪೂರ್ವದಲಿ।
ಇಂದು ಹರಪುರ ಶ್ರೀಗಿರಿಯ ಶ್ರೀ
ಕಂಧರದ ಷಟ್ಸ್ಥಲದ ನಿಜಗುರು
ತಂದೆ ಬಸವಪ್ರಭು ಕುಮಾರನಿಗೊರೆದ ಸೂತ್ರವಿದು॥ ॥ ೫ ॥

ತ್ರಿಭುವನಕೆ ಕೈಲಾಸ ಸಾಕ್ಷತ
ಶುಭಕರದ ಕಲ್ಯಾಣನಗರದ
ಲಭವನವತಾರದ ಪ್ರಮಥಗಣ ವೃಷಭರಾಜೇಂದ್ರ।
ವಿಬುಧನುತದನುಭಾವಪೀಠದ
ಪ್ರಭುವಿನಡಿಗಳಿಗೆರಗಿ ಕೇಳಿದ
ರಭಯಗುರು ಶಿವಶುದ್ಧ ಮುಂದಣ ಕಾರ್ಯವೇನೆಂದು॥ ॥ ೬ ॥

ಬೆಸಗೊಂಡ ಬಸವಾದಿ ಪ್ರಮಥರ
ಬಿಸರುಹದ ವಿಸರಕ್ಕೆ ದಿನಪನ
ರಸಮೆ ತಲೆದೋರಿಸಿತೊ ಎನೆ ಪ್ರಭುರಾಯ ಬಾಯ್ದೆರೆದ।
ಶಿಶುವನಾ ಗುರು ಮಲ್ಲಿಕಾರ್ಜುನ
ಶಶಿವದನೆ ಮಹದೇವಿಯಮ್ಮನು
ಕುಶಲಗತಿಯಿಂ ಕೊಂಡು ನಡೆವರು ಬಸವ ಕೇಳೆಂದ॥ ॥ ೭ ॥

ಎಂತೆನಲ್ಕಾಲಿಪುದಲಾ ವೃ
ತ್ತಾಂತಗಳ ವಿಸ್ತರಿಸಿ ಹೇಳುವೆ

ಕಾಂತೆ ಸ್ವಯ ಬಾಣಂತಿಯಾಗುವ ನಿಮಿಷ ಮಾತ್ರದಲೆ।
ಕಂತು ವೈರಿಯ ಸ್ತುತಿಯು ಷಟ್ಸ್ಥಲ
ಶಾಂತ ಗುರುಗಳಿಗೆರಗಿ ಬಾಲನ
ಸಂತೈಸಿ ನಮಿಸೆತ್ತಿಕೊಂಬರು ಬಸವ ಕೇಳೆಂದ। ॥ ೮ ॥

ದೊರಕಿತಲ ಘನ ಪರುಷಘಟ್ಟಿಯು
ದೊರಕಿತಲ ಅಪರಂಜಿ ಬೆಟ್ಟವು
ದೊರಕಿತಲ ಕರಸ್ಥಲದ ಶಾಂತನ ಕರುಣ ಸುತರತ್ನ।
ದೊರಕಿತಲ ಪರಿಪೂರ್ಣ ಬ್ರಹ್ಮವು
ದೊರಕಿತದೆ ಪರತತ್ವಜ್ಞಾನವು
ದೊರಕಿತೈ ಕೈವಲ್ಯ ನಮಗೆಂದೆನುತ ಹಿಗ್ಗುವರು॥ ॥ ೯ ॥

ಕಂಡೆವಗಣಿತವಾದ ವಸ್ತುವ
ಕಂಡೆವಚಲಿತವಾದ ಬ್ರಹ್ಮವ
ಕಂಡೆವಖಿಳಾಂಡಗಳ ಕುಕ್ಷಿಯೊಳಿಟ್ಟು ಸಲಹುವನ।
ಕಂಡು ಬದುಕಿದೆವಹಹ ಪರತರ
ಖಂಡಜ್ಯೋತಿಸ್ವರೂಪಮೂರ್ತಿಯ
ಪಂಡಿತಾರಾಧ್ಯಂಶ ಶರನಿಧಿಬಾಲಚಂದ್ರಮನ॥ ॥ ೧೦ ॥

ಬಡವ ಸಾಮ್ರಾಜ್ಯವನು ಮರಣದಿ
ಮಡಿವ ಸಂಜೀವನವ ಬಹು ತೃಷೆ
ಯಡಸಿದವ ಸುಧೆಗಡಲನೆಡಹಿದ ನರ ನಿಧಾನವನು।
ಪಡೆದು ನಗುವಂದದಲಿ ನವುರಿತ
ಮಡದಿ ಪುರುಷನು ಬಸವಪ್ರಭು ಶಿವ
ನಡಿಗೆರಗಿ ಪಿಡಿದೆತ್ತಿ ಮೋಹದಲಪ್ಪಿದರು ಬಸವ॥ ॥ ೧೧ ॥

ಆನಂದ ಸಂವತ್ಸರದ ಪರಮಾ
ನಂದವಹ ಕಾರ್ತೀಕ ಮಾಸದ
ಭಾನು ಉದಯದ ಸೋಮವಾರದ ಶುಭಮುಹೂರ್ತದಲೆ।
ಮಾನನಿಧಿ ಗುರು ಮಲ್ಲಿಕಾರ್ಜುನ
ಮಾನಿನಿಯು ಮಹದೇವಿಯಮ್ಮಗೆ
ಜ್ಞಾನಿ ಬಸವಪ್ರಭು ಪ್ರಸನ್ನವು ಬಸವ ಕೇಳೆಂದ॥ ॥ ೧೨ ॥

ಕಾಲಕಾಲಾತೀತ ಕಲಿಮಲ
ಜಾಲಮೂಲ ವಿಶಾಲಕಾಲನ
ಮೂಲ ಮಂತ್ರಸ್ವರೂಪ ಬಾಲನ ತೊಟ್ಟಿಲೊಳಗಿಟ್ಟು।
ಮೇಲೆ ಪಟ್ಟೆಯ ಕವಿಸಿ ಶಿಷ್ಯರ
ಬಾಲೆಯರ ಶೃಂಗರಿಸಿ ಹೊರಿಸುತ
ಬಾಲಶಶಿಧರ ಸಲಹೆನುತ ತೆರಳಿದರು ಬಸವಣ್ಣ॥ ॥ ೧೩ ॥

ವನವ ಕಂಡಲ್ಲಿಳುಹಿ ತೊಟ್ಟಿಲ
ಮನುಮುನಿಪ ಸಂತೈಸಿ ಕರಪದ
ವನಜವದನಾಂಬುಜವ ಪನ್ನೀರಿಂದ ತೊಳೆದೊರಸಿ।
ವಿನಯದಿಂ ಶಿವಪೂಜೆಮಾಡಿಸಿ
ಕೆನೆಹಾಲು ಸಕ್ಕರೆಯನರ್ಪಿಸಿ
ಘನಲಿಂಗ ಮುಖಶೇಷವನೆ ಪ್ರಭುಸ್ವಾಮಿಗುಣಿಸುವರು॥ ॥ ೧೪ ॥

ಲಿಂಗವಿರಹಿತ ನೋಟ ವಿರಹಿತ
ಲಿಂಗವಿರಹಿತ ಮಾಟ ವಿರಹಿತ
ಲಿಂಗವಿರಹಿತ ಕೂಟ ವಿರಹಿತ ವೀರಶೈವರಿಗೆ।
ಲಿಂಗವಿರಹಿತ ಕ್ರೀಯ ನಡೆಸರು
ಲಿಂಗವಿರಹಿತ ನುಡಿಯ ನುಡಿಸರು
ಲಿಂಗವಿರಹಿತ ಮುಟ್ಟರೇನನು ಷಟ್ರುಚಿಯ ಬಸವ॥ ॥ ೧೫ ॥

ಈಶ್ವರನ ನಿಜವಂಶ ಕೇಳೋಹಿ
ಲೇಶ್ವರದ ಕೇತಯ್ಯಗಳು ವಿ
ಶ್ವೇಶ್ವರನ ಗರ್ಭಜರು ವಿಶ್ವಾರಾಧ್ಯ ಪಾಲ್ಕುರಿಕೆ।
ಶಾಶ್ವತರು ಗುರುಪೀಠಪತಿ ಸೋ
ಮೇಶ್ವರಾಜಾಯಾತಾಂಶಿಕರು ಮಾ
ಹೇಶ್ವರರು ವ್ರತನೇಮಶೀಲರು ಬಸವ ಕೇಳೆಂದ॥ ॥ ೧೬ ॥

ಆಚಾರಸಂಪನ್ನ ಗುರುಗಳ
ಗೋಚರಾಗಮ ನಿಗಮ ನಿಪುಣರು
ಬೆಚ್ಚರಕೆ ಭೂಚರಕೆ ಲಿಂಗವ ಧರಿಸಿ ಮೆರೆಸುವರು।
ರೇಚಕವ ಪೂರಕವ ಕುಂಭಕ

ಸೂಚನೆಯ ಕರಸ್ಥಲದ ಷಟ್ಸ್ಥಲ
ದಾಚಾರ್ಯ ವಿರತರಿಗೆ ಭಕ್ತರು ಬಸವ ಕೇಳೆಂದ॥ ॥ ೧೭ ॥

ತಳಿರಗುಂಪಿನ ನೆಳಲ ತಂಪಿನ
ಮಳಲ ಹಾಸಿನ ಸ್ಥಳವ ಬಿಡುವರು
ಎಳನೀರ ಪಾನಗಳ ಕೊಡುವರು ಶಿಷ್ಯಭಕ್ತರಿಗೆ।
ಕಳಿಯಡಕೆ ಬಿಳಿಯೆಲೆಯಗಳಿವರು
ತಳುವಾಯಿತೇಳೆಂದು ಬಾಲನ
ಹೊಳೆವ ತೊಟ್ಟಿಲೊಳಿಟ್ಟು ನಡೆವರು ಬಸವ ಕೇಳೆಂದ॥ ॥ ೧೮ ॥

ಕೈಲಾಸ ಹೂದೋಟ ಹರಪುರ
ಶೈಲ ಷಟ್ಸ್ಥಲಪೀಠಯೋಗವು
ತ್ರೈಲಿಂಗ ಗುರುಪಟ್ಟ ಬ್ರಹ್ಮಾನಂದಸೂತ್ರಗಳು।
ಶೈಲಜಾತ್ಮಜೆ ಸಹಿತ ಪ್ರಮಥರು
ಬೈಲ ಬ್ರಹ್ಮದ ಲೀಲೆಯೆನುತಲೆ
ಶೈಲಪತಿ ಚೀಲಾಳಸ್ವಾಮಿಯ ಹೊಗಳುವರು ಬಸವ॥ ॥ ೧೯ ॥

ಹರನ ಸರಿಗದ್ದಿಗೆಯಲಿರುವನ
ಹರಪುರದಿ ಯೋಗದಲಿ ಮೆರೆವನ
ಗುರು ಮಲ್ಲಿಕಾರ್ಜುನಗೆ ಮಹದೇವಮ್ಮನಿಗೆ ಇಲ್ಲಿ।
ತರಳನಾದ ನಿರಂಜನಪ್ರಭು
ಪರಮಗುರು ಚೀಲಾಳಸ್ವಾಮಿಯ
ಚರಣಕಮಲಕೆ ಶರಣೆನುತ ನಾರದನು ಕೀರ್ತಿಸುವ॥ ॥ ೨೦ ॥

ಉದ್ದಗಿರಿ ಸಿಂಹಾಸನದ ಗುರು
ಗದ್ದುಗೆಯ ಗುರು ಮಲ್ಲಿಕಾರ್ಜುನ
ನರ್ಧಾಂಗಿ ಮಹದೇವಿ ಪಡೆದಳು ಬ್ರಹ್ಮವನೆನುತ್ತ।
ಹದ್ದುದೇರನು ಹಂಸಗಮನನು
ಮದ್ದಾನೆಗನು ಸುರರು ಋಷಿಗಳು
ಎದ್ದರಗಿ ಕೈಮುಗಿದು ಹೊಗಳುವರಬ್ಬರದಿ ಬಸವ॥ ॥ ೨೧ ॥

ಎಲ್ಲಿ ವೇದಾಗಮ ಪುರಾಣವು
ಅಲ್ಲಮನು ಮುನಿಪ್ರಮಥಗಣ ಕುಳ

ರುಲ್ಲಸದಿ ಹೊಗಳುವರು ಪ್ರಭುವಿದೆ ಧರೆಗಿಳಿದನೆನುತ।
ಅಲ್ಲಿ ಕೈಲಾಸದ ಸದಾಶಿವ
ಮಲ್ಲಿಕಾರ್ಜುನದೇವನರಸಿಗೆ
ಸಲ್ಲಲಿತ ಸುತನಾದನಾ ಷಟ್ಸ್ಥಲಕುಲೋದ್ಧರಣ॥ ॥ ೨೨ ॥

ಶಿವನ ಗರ್ಭದ ಚಿತ್ಕಳೆಯ ಪ್ರಭೆ
ಯವತರಿಸಿತಲ ಅಮರಗುಂಡದಿ
ಇವರ ಭಕ್ತಿಯ ಭಾವಕೋಸ್ಕರ ಶಿವನೆ ಶಿಶುವಾದ।
ನವನಿಷಾದನವಾಯ್ತು ಶಿಷ್ಯರ
ನಿವಹವೆಲ್ಲಕೆ ಮೋಕ್ಷವೆನುತಲಿ
ದಿವಿಜ ದನುಜರು ಹೊಗಳುವರು ಬಸವಣ್ಣ ಕೇಳೆಂದ॥ ॥ ೨೩ ॥

ಪುರವನಾಳುವ ರಾಜ ಶಿಷ್ಯರ
ತರುಣಿಯರು ಶಿವಭಕ್ತ ಸತಿಯರು
ಪರಿಪರಿಯ ವಾದ್ಯಗಳ ವೈಭವ ಕಳಸಕನ್ನಡಿಯ।
ಪುರಜನರು ಪರಿಜನರು ಶರಣರು
ಗುರುವಂಶ ಸಹ ಇದಿರುಗೊಳ್ವರು
ಗುರುಸುತನ ಪಲ್ಲಕ್ಕಿಯೇರಿಸಿ ಮಠಕೆ ತೆರಳುವರು॥ ॥ ೨೪ ॥

ಅಡ್ಡ ಬೀಳ್ವರು ಶಿಷ್ಯರೆಲ್ಲರು
ದೊಡ್ಡ ದೊಡ್ಡಹ ದೊರೆಗಳೆಲ್ಲರು
ಒಡ್ಡುವರು ಗುರುಪುತ್ರನೊಸಗೆಗೆ ಉಭಯ ಚಪ್ಪರವ।
ಇಡ್ಡಲಿಗೆ ಪರಮಾನ್ನ ವಡೆ ಸುಖಿ
ಲಡ್ಡುಗೆಗಳೊಬ್ಬಟ್ಟು ಫಲ ಬಗೆ
ಅಡ್ಡೆಗಳ ಒದಗಿದವು ಇದೆ ಗಣಪರ್ವವೆಂದೆನುತ॥ ॥ ೨೫ ॥

ಶಾಕಪಾಕವ ಮಾಡುವರು ಮೂ
ಲೋಕದೊಳಗಿಲ್ಲೆನಿಸಿ ಶಿಷ್ಯರೆ
ಬೇಕಾದ ವಸ್ತುಗಳನೊದಗಿಸಿ ಕೊಡುವರಾಕ್ಷಣವೆ।
ಶ್ರೀಕದಂಬ ಸಮಸ್ತಷಟ್ಸ್ಥಲ
ದೇಕಲಿಂಗ ಸುನಿಷ್ಠೆ ಸತಿಯರ
ನೇಕರಿಳಿವರು ಒಸಗೆ ಪ್ರಸ್ತಕೆ ಬಸವ ಕೇಳೆಂದ॥ ॥ ೨೬ ॥

ಆಗಮೀಕರ ಬಂಧುಗಳ ಶಿವ
ಯೋಗಿ ಷಟ್ಸ್ಥಲಬ್ರಹ್ಮಿಗಳ ಗಣ
ಪೂಗ ಭಕ್ತರ ಶಿಷ್ಯಗುರುಗಳ ಕರೆಸಿ ಶ್ರದ್ಧೆಯಲಿ।
ಬೇಗ ಗದ್ದುಗೆ ಇಕ್ಕಿ ಪರುಷದ
ಲಾಗಲಗ್ಗಣಿಗೊಡಿಸುವರು ಸೊಗ
ಸಾಗಿ ಒಂದೇ ಪಂಕ್ತಿ ಭಕ್ತ ವಿರಕ್ತರಿಗೆ ಬಸವ॥ ॥ ೨೭ ॥

ಉಭಯ ಚಪ್ರದಿ ಉತ್ರವದನಕೆ
ಶುಭವಿಚಿತ್ರದ ತೊಟ್ಟಿಲೆತ್ತಿಸೆ
ನಭದಿ ಕೀರ್ತಿಸುತಿರ್ದರಗಣಿತ ಪ್ರಮಥ ಸುಮನಸರು।
ತ್ರಿಭುವನದ ದಿವ್ಯಾಂಬರಂಗಳ
ವಿಬುಧ ಗುರುವಿದೆ ಹಾಸಿದರ ಮಹ
ಪ್ರಭುದ ಶಿಷ್ಯರ ರಾಣಿವರ್ತಕ ರಮಣಿಯರು ತಂದು॥ ॥ ೨೮ ॥

ಹಸುರಂಗಿಗಳ ಹಾಲಮಣಿಗಳ
ಕುಶಲಗೆಲಸ ಕುಲಾವಿ ಮಲಕನು
ಮಿಸುನಿಗಪ್ಪುರ ಜಂಗು ಪಾಡಗ ಪಾದಸರ ಪದಕ।
ಎಸಳ ಭುಜಕೀರ್ತಿಗಳ ಭಕ್ತನು
ಉಸುರಲಸದಳದುಂಗುರಂಗಳ
ಶಶಿ ಮಕ್ಕಳರಸುಗಳು ಶಿಶುವಿಗೆ ಧರಿಪುವರು ಬಸವ॥ ॥ ೨೯ ॥

ಮುತ್ತು ರತ್ನವ ತೊಡಿಸಿ ಗುರುವಿಗೆ
ಮುತ್ತುಮುತ್ತೆಂದೆನುತ ಮುದ್ದಿಸಿ
ಕೆತ್ತನೆಯ ಮಾಗಾಯ ವಜ್ರದ ಅರಳೆಲೆಯ ಧರಿಸಿ।
ಮುತ್ತು ಪಚ್ಚೆಯ ಬಿಗಿದ ಕಂಕಣ
ದೊತ್ತಿಗಿಡುವರು ಹವಳ ಸರಗಳ
ಮತ್ತೆ ನೂತ್ನದ ಕೆಲಸದುಡಿದಾರಗಳ ಧರಿಸುವರು॥ ॥ ೩೦ ॥

ತನುಜ ಲಕ್ಷಣವಂತ ಹಸ್ತದಿ
ವನಜವಂಕುಶ ಶಂಖಚಕ್ರವು
ವನಧಿ ಸುಧೆ ಎಸೆವರ್ಥವಾಯುಷ ಊರ್ಧ್ವರೇಖೆಗಳು।
ಘನತೆ ಗಂಭೀರತೆ ಗುರುತ್ವತೆ

ವಿನತೆ ಪೂಜ್ಯತೆವಿರಲಿ ಈತನ
ತನುವ ಸೇರಿಹವೆನುತ ವಿಬುಧರು ಹೊಗಳುವರು ಬಸವ॥ ॥ ೩೧ ॥

ಹಸ್ತಪಾದವು ದಂತಪಂಕ್ತಿಯು
ಶಿಸ್ತು ಮುಖ ನಖ ನೇತ್ರ ಶಿರ ಭುಜ
ದಸ್ತು ನಡೆನುಡಿ ಕುಶಲ ಪ್ರಾಜ್ಞತೆ ತತ್ತ್ವಜ್ಞಾನಾರ್ಥ।
ವಿಸ್ತೀರ್ಣ ರಾಜ್ಯಗಳನಾಳ್ವ ತ
ಟಸ್ಥ ಷಟ್ಸ್ಥಲಪೀಠಪತಿ ಪರ
ವಸ್ತು ಪರಶಿವಯೋಗಿ ಕಡೆಗಿವನೆಂಬುದಖಿಳಜನ॥ ॥ ೩೨ ॥

ಲಕ್ಷಣವ ಹೇಳುವರ ಸಕಲ ಸ
ಲಕ್ಷಣವ ಕೇಳುವರ ಇಹಪರ
ಲಕ್ಷಣವ ಪಿಂಡಾಂಡ ತತ್ವವಿಭಾಗ ಮಾಡುವರ।
ಲಕ್ಷಣೀಕರ ಶಿಲ್ಪಿಗರ ಗುರು
ಮೋಕ್ಷಪುರುಷರು ಷಟ್ಸ್ಥಲದ ಪ್ರಭು
ಲಕ್ಷಣವು ಲಕ್ಷಿಪಡೆ ಶ್ರುತಿತತಿಗಳನೆ ಬಸವಣ್ಣ॥ ॥ ೩೩ ॥

ಲಿಂಗಪೂಜೆಯು ಜಂಗಮಾರ್ಚನೆ
ಮಂಗಳೋತ್ಸಹವೆನುತ ಹರಿವಾ
ಣಂಗಳಿರಿಸಲು ಆಕ್ಷಣಕೆ ನೀಡುವರು ರುಚಿಗಾಯ।
ಸಾಂಗವಾಗೆಲ್ಲವ ಬಡಿಸಿ ಸಾ
ಷ್ಟಾಂಗವೆರಗಲ್ಲಿಂಗಕರ್ಪಿಸಿ
ಕಂಗಳಂ ಮುಚ್ಚುತ್ತ ತೆರೆವುತ ಸಲಿಸಿ ತೇಗುವರು॥ ॥ ೩೪ ॥

ವಿಸ್ತರಿಸಿ ಮೃಷ್ಟಾನ್ನಪಾನವ
ಕುಸ್ತರಿಸಿ ನೀಡಲ್ಕೆ ಸಾಕೆನೆ
ಹಸ್ತಕಗ್ಗಣಿ ಕೊಡಿಸಿ ಖಂಡಿತಮಾಡಿ ಕೈದೊಳೆಯೆ।
ಪ್ರಸ್ತುತವನರಿದವರು ವೀಳ್ಯವ
ಮುಸ್ತೈದೆಸೆವ ಜವಳಿ ಪರಿಮಳ
ವಸ್ತು ಪೂಮಾಲೆಗಳಿಂ ನಮಸ್ಕರಿಸಿದರು ಶರಣರಿಗೆ॥ ॥ ೩೫ ॥

ದೇವಭಕ್ತರ ಪೂಜೆ ಒಂದೇ
ಜಾವಕೇಳಿಸಿ ಗುರುಪತ್ನಿಯರು

ದೇವ ಶ್ರೀಗುರು ಮಲ್ಲಿಕಾರ್ಜುನನರಸಿ ಮಹದೇವಿ।
ಸೇವಕರ ರಮಣಿಯರು ರಾಜರ
ಭಾವೆಯರ ಶಿಷ್ಯರ ವನಿತೆಯರು
ತೀವಿ ಸಕಲರು ಒಮ್ಮೆ ಕುಳಿತು ಸಲಿಸುವರು ಬೇಗ॥ ॥ ೩೬ ॥

ಕೊಡಿಸಿ ಗುರುರಾಣಿಯರಿಗುಚಿತವ
ಪೊಡವಿಪರ ಸ್ತ್ರೀಯರಿಗೆ ಧನಿಕರ
ಮಡದಿಯರಿಗೆ ಸಮಸ್ತಗುರುಹಿರಿಯರಿಗೆ ಭಕ್ತರಿಗೆ।
ಉಡುಗೊರೆಯ ವೀಳ್ಯಗಳ ಗಂಧವ
ತೊಡೆದು ಪೂಮಾಲೆಗಳ ಮುಡಿಸುತ
ಸಡಗರದಿ ಶಿವಸುತನ ತೊಟ್ಟಿಲೊಳಿಟ್ಟು ತೂಗುವರು॥ ॥ ೩೭ ॥

ಬಣ್ಣ ಬಿಳಿದಿನ ಚಿತ್ರ ಬಗೆ ಬಗೆ
ಹೆಣ್ಣುಗಳ ಕುಲಗೋತ್ರ ಕೋರೆಯ
ಅಣ್ಣಗಳ ಅಕ್ಕಗಳ ಶಿಸ್ತಿನ ಭೂಷಣದ ಬೆಳಗ।
ಹುಣ್ಣಿಮೆಯ ಚಂದ್ರಮನ ಕಳೆ ಮು
ಕ್ಕಣ್ಣನವತಾರದ ಸುತನ ಕಡೆ
ಗಣ್ಣ ಕಳೆಯೊಳಗಡಗಿಹವು ನವರತ್ನ ಬಸವಣ್ಣ ॥ ॥ ೩೮ ॥

ಶೃಂಗರದ ಶ್ರೀಕರದ ಶುಭನವ
ರಂಗ ತೊಟ್ಟಿಯಲುಭಯ ಚಪ್ರದ
ಮಂಗಳದ ಮೇಲ್ಕೆಲಸ ನೂತ್ನ ಕರಕಂಠ ಭಾರಣೆಯು।
ಕಂಗಳರ್ತಿ ಗಣಂಗಳತಿಶಯ
ಬಂಗಾರ ಸಿಂಹಾಸನದ ಪ್ರಭು
ಲಿಂಗಮೂರ್ತಿಯ ತೊಟ್ಟಲೇರಿಸಿ ತೂಗುವರು ಬಸವ॥ ॥ ೩೯ ॥

ಹಸ್ತ ಕಡಗದ ಹವಳ ಹಾರದ
ಮಸ್ತಿ ತಾಲಿಯ ಪದಕ ಕೋರೆಯ
ಪಿಸ್ತು ಕರಡಿಗೆ ಸರದ ಓಲೆಯ ದಿವ್ಯಭೂಷಣದ।
ಹಸ್ತಿನೀಕುಲ ಜಾತಿಸ್ತ್ರೀಯರು
ಹಸ್ತಿಸುರಹರ ಜೋಯೆನುತ ಪರ
ವಸ್ತು ಬಸವಪ್ರಭುವ ಹೊಗಳುತ ತೂಗುವರು ಬಸವ॥ ॥ ೪೦ ॥

ಮುತ್ತಿನೆಂಟೆಯ ರತ್ನದೋಲೆಯ
ಕೆತ್ತನೆಯ ಹೊನ್ನು ಸರಗಳ
ನೆತ್ತಿಮಣಿ ಒಡ್ಯಾಣ ಚರಣದನರ್ಘ್ಯ ಭೂಷಣದ।
ವೃತ್ತಕುಚ ತಿಳಿಗೆಂಪು ಮೃದುನುಡಿ
ಚಿತ್ತಿನಿಯ ಕುಲ ಜಾತಿ ಸ್ತ್ರೀಯರು
ಚಿತ್ತಜಾರಿಯೆ ಜೋಯೆನುತ ತೂಗುವರು ಬಸವಣ್ಣ॥ ॥ ೪೧ ॥

ಕೊಂಕುಗುರುಳಿನ ಕೋಮಲಾಂಗದ
ಕಿಂಕಿಣಿಯ ನೂಪುರದ ರತ್ನದ
ಕಂಕಣದ ಕಿರಿನಗೆಯ ಸವಿನುಡಿ ನೂತ್ನ ಭೂಷಣದ।
ಪಂಕಜಾಸ್ಯದ ದಿವ್ಯ ಪರಿಮಳ
ಶಂಕಿನಿಯ ಕುಲಜಾತಿ ಸ್ತ್ರೀಯರು
ಶಂಕರ ಪ್ರಭುಗುರುವೆ ಜೋಜೋಯೆನುತ ತೂಗುವರು॥ ॥ ೪೨ ॥

ಪದ್ಮವರ್ಣದ ಪದ್ಮಗಂಧದ
ಪದ್ಮವದನದ ಪದ್ಮನಯನದ
ಪದ್ಮಕರ ಚರಣಗಳ ಧವಲಾಂಬರ ವಿಭೂಷಣದ।
ಪದ್ಮಮೌಕ್ತಿಕ ಮಧುರ ಮಾತಿನ
ಪದ್ಮಿನೀಕುಲ ಜಾತಿಸ್ತ್ರೀಯರು
ಪದ್ಮಸುತ ಶಿರಪದ್ಮಕರ ಜೋಯೆನುತ ತೂಗುವರು॥ ॥ ೪೩ ॥

ಎಲ್ಲ ಲೋಕದ ಗುರುವೆ ಜೋ ಮ
ತ್ತೆಲ್ಲ ಮತಸುರತರುವೆ ಜೋ ಗುರು
ಮಲ್ಲಿಕಾರ್ಜುನದೇವ ಮಹದೇವಿಯರ ಸುತ ಜೋಜೋ।
ಕಲ್ಲಮಠದಾಚಾರ್ಯ ಜೋ ನೆರೆ
ಬಲ್ಲ ಭಕ್ತರ ಬಾಲ ಜೋ ಮುಂ
ದೆಲ್ಲ ಬಸವಪ್ರಭುವಿನಾಟವೆನುತ್ತ ತೂಗುವರು॥ ॥ ೪೪ ॥

ತೂಗೆ ನಲಿವನು ಶರಣ ಸತಿಯರು
ತೂಗೆ ನಗುವನು ವಿಶ್ವದಾಟಕೆ
ತೂಗಲೊಲೆವನು ಷಟ್ಸ್ಥಲಬ್ರಹ್ಮಿಗಳ ಗಣಸಭೆಗೆ।
ತೂಗೆ ಭಕ್ತರ ಮುಖವ ನೋಡುವ

ತೂಗಲಮ್ಮಮ್ಮೆಂದು ಪಾಡುವ
ತೂಗುತಿರೆ ಧ್ಯಾನಿಸುವ ಮುಂದಣ ಲೀಲೆಗಳ ಬಸವ॥ ॥ ೪೫ ॥

ಮನವಿಜಯ ಗುರು ಮಲ್ಲಿಕಾರ್ಜುನ
ವನಿತೆ ಮಹದೇವಿಯರ ಶ್ರೀಪದ
ವನಜಕೆರಗುತ ಬಸವಪ್ರಭುವಿಗೆ ಸೈಗೆಡೆದು ನುತಿಸಿ।
ಜನಪಸತಿಯರು ಶಿಷ್ಯರರಸಿಯ
ರನುನಯದಿ ಬಂಧುಗಳ ಸತಿಯರು
ತನುಜನಂ ಬಿಗಿದಪ್ಪಿ ಹರಸುತ ನಡೆವರಾಶ್ರಮಕೆ॥ ॥ ೪೬ ॥

ದೊರೆಗಳರಸಿಯರೆಲ್ಲ ರಾಜರ
ಗುರುಗಳರಸಿಯರೂಳಿಗದ ಜನ
ಹರದ ಭಕ್ತರ ತರುಣಿಸುತ ಸಹಿಸೆಲ್ಲರಾಶ್ರಮಕೆ।
ತೆರಳುವರು ಷಟ್ಸ್ಥಲದ ಶರಣರು
ನೆರೆದ ನಂಟರು ಬಂಧುಗಳು ಕರೆ
ಕರೆದು ಮುದ್ದಿಸಿ ಬಸವಸುತನಿಗೆ ಎರಗಿ ತೆರಳುವರು॥ ॥ ೪೭ ॥

ಬಾಲನಲ್ಲದ ವೃದ್ಧನಲ್ಲದ
ನೀಲಕಂಠನ ಪ್ರಾಣಜ್ಯೋತಿಯೆ
ಚೀಲಲೇಶ್ವರನೆನಿಸಿ ಭಕ್ತರ ಭಕ್ತಿಗೋಸ್ಕರವೆ।
ಬಾಲನಾಗಿಳೆಗವತರಿಸಿ ಕಲಿ
ಕಾಲಕಲ್ಪವ ಮೀರಿದವನಿಗೆ
ಬಾಲಯೌವನವಾರ್ಧಕಂಗಳು ಗಣನೆಯೇ ಬಸವ॥ ॥ ೪೮ ॥

ಇದುವೆ ಪುಣ್ಯದ ಪುಂಜವೋ ಮ
ತ್ತಿದುವೆ ಸುಕೃತದ ಮೊತ್ತವೋ ಮರ
ಳಿದುವೆ ಲಾವಣ್ಯಾಬ್ಧಿಯೋ ಇಹಪರದ ನಿಜಗುರುವೋ।
ಇದುವೆ ಮೋಕ್ಷದ ತವರುಮನೆಯೋ
ಇದುವೆ ಜ್ಞಾನದ ನಿಜನಿವಾಸವೊ
ಇದುವೆ ಸಾಕ್ಷತ ಕರಸ್ಥಲದ ಪರಂಜ್ಯೋತಿ ನಮಗೆನುತ॥ ॥ ೪೯ ॥

ಕೆಡಿಸಿದರೆ ಪುಣುಗಕ್ಕು ಬಾಲಕ
ಹಿಡಿದ ಮಣ್ಣೇ ಚಿನ್ನವದರಲಿ

ತಡಕೆ ಸಿಕ್ಕಿದ ಕಲ್ಲೆ ರನ್ನವು ಮೂತ್ರ ಕಮ್ಮೆಣ್ಣೆ॥
ನುಡಿಯೆ ವೇದವು ನಡೆಯೆ ಸತ್ಪಥ
ಹಿಡದೆ ಪಾವನ ಜನಕೆ ಮುಕ್ತರು
ಪಡೆದವರೆ ಶಿವಗೌರಿ ಶ್ರುತಿಮತ ಬಸವ ಕೇಳೆಂದ॥ ॥ ೫೦ ॥

ನಿತ್ಯದಾಸೋಹಗಳ ನಡೆಸುತ
ಸತ್ಯಶರಣರ ಸೇವೆಗೆಳಸುತ
ಲತ್ಯಂತ ಹರುಷದಲಿ ಸತಿಪತಿಗಳು ಮನೋತ್ಸಹದಿ।
ಮಿಥ್ಯಮತದ್ವೇಷಗಳ ಮೀರಿದ
ತಥ್ಯ ಷಟ್ಸ್ಥಲಬ್ರಹ್ಮಿಗಳ ಸದ
ಪ್ರತ್ಯಕ್ಷ ಶಿವನೆಂದು ಪೂಜುವರಣ್ಣ ಬಸವಣ್ಣ॥ ॥ ೫೧ ॥

ದಂಪತಿಗಳತಿ ಪ್ರೀತಿಯಿಂದಲಿ
ಸಂಪಗೆಯ ಹೂ ಕಂಡ ತೆರದಲಿ
ತಂಪಿನಲಿ ಸಲಹುವರು ಘೃತಕ್ಷೀರದಲಿ ದಣಿಸುವರು।
ಪಂಪಲಂಗಳ ಕೊಡರು ಮಕ್ಕಳ
ಗುಂಪಿನತ್ತಲೆ ಸುಳಿಯ ಬಿಡರತಿ
ಲಂಪಟತ್ವವ ಬಿಟ್ಟು ನಿಜಸುತನೋಲಗದಲಿಹರು। ॥ ೫೨ ॥

ನಿತ್ಯತೃಪ್ತಗೆ ತೃಪ್ತಿಯೇಕೆನೆ
ಸತ್ಯಸ್ಥಾನಗಳೇತಕೆಂದೆನೆ
ಅತ್ಯತಿಷ್ಟಾರ್ಥಗಳ ಕೊಡಲೆಂದೆನುತ ಭಕ್ತಗಣ।
ಶ್ರುತ್ಯರ್ಥ ಗುರುವಚನ ಸಾರವೆ
ಭೃತ್ಯಭಾವನೆಗಾಗಿ ಸಲಿಸುವ
ಮರ್ತ್ಯದಾಟವ ಮೀರಿದವ ಶಿವಶರಣ ಕೇಳೆಂದ॥ ॥ ೫೩ ॥

ತನುಮನದ ವರ್ತನೆಗಳಿಲ್ಲದ
ಘನ ಮಹಾ ಪರಬ್ರಹ್ಮಪಿಂಡವು
ತನಗೆ ತಾನೇ ಬಲಿದು ಬೆಳೆದುದು ಬಿದಿಗೆ ಚಂದ್ರನೊಲು।
ತನಯಗೈದನೆ ವರುಷದೊಳಗತಿ
ಮನ ಹರುಷದಿಂ ಸುಭಮುಹೂರ್ತದ
ದಿನದಿ ವಿದ್ಯಾಭ್ಯಾಸ ಯತ್ನಕೆ ಪರ್ವಗಳ ರಚಿಸೆ॥ ॥ ೫೪ ॥

ಕಾಗೆ ಶ್ವಾನಗಳಿಂದ ವೇದವ
ಮೂಗರಿಂದವೆ ವಾದಿಗಳ ಹಿಂ
ದಾಗ ಸೆರೆಗಳ ಕಂಬ ದೊಂಬೆಗಳಿಂದ ತರ್ಕಗಳ।
ಮೂಗ ಕಳೆಯರೆ ಶಿವಶರಣರು
ಆಗಮಾಮ್ನಾಯಗಳ ಗರ್ಭಜ
ಯೋಗಿಯೋದಿಸುವಗ್ರಜನೆ ತಲೆಶೂಲೆ ಬಸವಣ್ಣ॥ ॥ ೫೫ ॥

ವೇದಶಾಸ್ತ್ರಾಗಮ ಪುರಾಣವೆ
ವೈದಿಕವು ಲೌಕಿಕದ ವಿಧಿಗಳು
ನಾದಬ್ರಹ್ಮಾನಂದ ಮೂರ್ತಿಯ ಜಿಹ್ವೆದೆರೆದಲ್ಲೆ।
ನಾದಿಸುವುವವು ತಮಗೆ ತಾವೇ
ಆದಿಮಧ್ಯವಸಾನ ಗುರುವಿಗೆ
ಓದ ಹೇಳ್ವರ ಕಾಣೆವೈ ಬಸವಣ್ಣ ಕೇಳೆಂದ॥ ॥ ೫೬ ॥

ಹರವಚನ ಗುರುವಚನ ಜಿಹ್ವೆಯ
ತೆರೆಯದಿರ್ದರು ತಮಗೆ ತಾವೇ
ಹೊರಡುವವು ಷಟ್ಸ್ಥಲದ ತತ್ವಜ್ಞಾನ ಬೋಧೆಗಳು।
ತರತರದ ಮುದ್ರೆಗಳ ಲಕ್ಷಣ
ದುರುತರದ ಸಂಧಾನ ತಾರಕ
ಕರವೆ ಶ್ರೀಗುರು ಊರ್ಧ್ವಲೋಚನ ಶರಧಿವರ್ಧನೆ॥ ॥ ೫೭ ॥

ಸತಿಪತಿಗಳಲಿ ಶ್ರದ್ಧೆಯಿಂದಲಿ
ಸುತನಲ್ಲ ನಮಗೀತ ನಿಜಗುರು
ಶ್ರುತಿವಿನುತ ಶ್ರೀಯಮರಗುಂಡದ ಊರ್ಧ್ವಲೋಚನನು।
ಮತಪ್ರತಿಷ್ಠನು ವಂಶವರ್ಧನ
ಮಿತವಾಣಿ ಗುಣಿ ವಿರತ ಷಟ್ಸ್ಥಲ
ದೇಶಿಗಳಿಗೆ ಮಹಭಕ್ತನೆಂದತಿ ಹಿಗ್ಗುವರು ನೋಡಿ॥ ॥ ೫೮ ॥

ಹಳಬರೆಲ್ಲರು ಪ್ರಾಜ್ಞರೆಲ್ಲರು
ತಿಳಿವರೀತನೆ ತ್ರಿಣಯನೆನುತಲಿ
ಬೆಳೆದ ಷಟ್ಸ್ಥಲ ಚಕ್ರವರ್ತಿಗಳು ಚತುರದೇಶಿಕರು।
ಇಳೆಯ ಪಾವನ ಮಾಡಲೋಸ್ಕರ
ವಳಿಕ ಲೋಚನನಿಳಿದನಲ್ಲದೆ
ಉಳಿದವರಿಗಿಂತಪ್ಪ ಸಹಸವ ಕಾಣೆವೆನುತಿಹರು॥ ॥ ೫೯ ॥

ಪಳ್ಳಿ ಪಾಠಾಂತ್ರಗಳೆ ಈತಗೆ
ಜಳ್ಳು ಮಾತವದೆಲ್ಲ ಬಿಡಿ ನಿಜ
ವುಳ್ಳ ವಸ್ತುವಿದೆಂದು ಏಳನೆ ವರುಷವಾಯ್ತೆನುತ।
ಒಳ್ಳೆ ದಿನ ಶುಭಮುಹೂರ್ತ ಲಗ್ನದ
ಲೊಳ್ಳೆಯಾಪ್ತರ ಶಿಷ್ಯ ಭಕ್ತರ
ನೊಳ್ಳೆ ದೊರೆಗಳ ಬಂಧುಗಳ ಶಿವಶರಣರನು ಕರೆಸಿ॥ ॥ ೬೦ ॥

ಉದ್ದಗಿರಿ ಸಿಂಹಾಸನದ ಗುರು
ಗದ್ದುಗೆಯ ಪಟ್ಟಾಭಿಷೇಕ ಪ್ರ
ಸಿದ್ಧ ಬಸವಪ್ರಭುವಿಗೆನುತಲೆ ಹೊಡೆಸಿ ಡಂಗುರವ।
ತಿದ್ದಿ ತಾಂಬೂಲಗಳ ಜವಳಿಯ
ಹೊದ್ದಿಸಾರ್ತಿಯ ಬೆಳಗಿ ಸತಿಯರು
ಶುದ್ಧ ಧವಳವ ಹಾಡಿ ಸಲಿಸುತ ನಡೆವರುತ್ಸಹದಿ॥ ॥ ೬೧ ॥

ಪಟ್ಟವಾಯಿತು ಪರಮ ಗುರುವಿಗೆ
ಪಟ್ಟವಾಯಿತು ಪರಮ ಪ್ರಭುವಿಗೆ
ಪಟ್ಟವಾಯಿತು ಪರಕೆ ಪರತರವಾದ ವಸ್ತುವಿಗೆ।
ಪಟ್ಟವಾಯಿತು ಬಸವಪ್ರಭುವಿಗೆ
ಪಟ್ಟ ನಿಜಗುರುಸ್ವಾಮಿಗೆನುತಲೆ
ಶೆಟ್ಟಿ ದೊರೆ ಪ್ರಜೆ ಪ್ರಭುಡ ಭಕ್ತರು ಶಿಷ್ಯಗಣಸಹಿತ॥ ॥ ೬೨ ॥

ಪಾದಗಾಣಿಕೆ ಇರಿಸಿ ವಂದಿಸಿ
ಆದ ಮೃಷ್ಟಾನ್ನಗಳ ಸೇವಿಸಿ
ಹೋದರವರವರತ್ತ ತಮ್ಮರಮನೆಗೆ ನೆರೆಮನೆಗೆ।
ಪೋದ ನೇತ್ರನ ಲಿಖಿತ ಬೀಳಲು
ಓದಿಕೊಳುತಲೆ ಬಸವಪ್ರಭು ಗುರು
ಮೂದೆರದ ಗುಣ ವಿಜಯ ಷಟ್ಸ್ಥಲ ಕೇಳ್ವ ಬಸವಣ್ಣ॥ ॥ ೬೩ ॥

ದೇಶಕಗ್ಗಳವಹುದು ಗುರುವೆ ವಿ
ಶೇಷ ಸರಿ ಶ್ರುತಿ ಸಿದ್ಧಲಿಂಗುಪ
ದೇಶ ವೃಷಭ ಸ್ವರ್ಗ ಕಂಕಣಮುತ್ರಕ್ರಿಯೆ ಪ್ರಸ್ಥ।
ಪಾಶಗತ ಷಟ್ಸ್ಥಲವೆ ತತ್ವುಪ
ದೇಶಗಾನುಪದೇಶ ಮಂತ್ರುಪ
ದೇಶ ಮೋಕ್ಷುಪದೇಶ ಸಮರಸ ಬಸವ ಕೇಳೆಂದ॥ ॥ ೬೪ ॥

ಪರುಷ ಲೋಹವ ಬೆರಸಿದಂದದಿ
ಕರಕ ಶರಧಿಯ ಕಲಸಿದಂದದಿ
ಮರಿದುಂಬಿ ಚಂಪಕದ ವಿಷಯವು ಕ್ಷೀರ ಸುಧೆಯಂತೆ।
[೧][ಉ][೧] ರಿಯ ನಲ್ಲನ ಕರ್ಪುರದ ಸತಿ
ನೆರೆದು ಬಯಲಾದಂತೆ ಷಟ್ಸ್ಥಲ
ಶರಣಸಂಗ ವಿಶೇಷಸಂಗವದೆಂದ ಬಸವಣ್ಣ॥ ॥ ೬೫ ॥

ಸೂರ್ಯ ಸೂರ್ಯನ ಕಾಂತದಂದದಿ
ಭಾರ್ಯ ಪುರುಷರ ಸ್ನೇಹದಂದದಿ
ಸರ್ವಹಿತ ಶಶಿಕಾಂತ ಚಂದ್ರನ ಕಿರಣದಂದದಲಿ॥
ಪರ್ವತದ ಶಿಖಿಮೇಘದಂದದಿ
ಪೂರ್ವಪದ ಗುರುಶಿಷ್ಯರಂದದಿ
ತೂರ್ಯ ವಿರತರ ಸಂಗಸಮರಸ ಬಸವ ಕೇಳೆಂದ॥ ॥ ೬೬ ॥

ಹರಸ್ಥಲಕೆ ಗುರುಸ್ಥಲವೆ ವೆಗ್ಗಳ
ಗುರುಸ್ಥಲಕೆ ಚರಸ್ಥಲವೆ ಘನತರ
ಚರಸ್ಥಲಕೆ ಷಟ್ಸ್ಥಲವೆ ಶ್ರೇಷ್ಠವು ಪೂಜ್ಯವಿಹಪರಕೆ।
ಹರವಚನ ಗುರುವಚನ ಸಾಕ್ಷಿಗ
ಳಿರೆಯದಲ್ಲದೆ ಪತಿತ ಲಿಖಿತದ
ಹರನಿರೂಪವ ನೋಡಿ ನಡೆವನು ಬಸವಪ್ರಭು ಬಸವ॥ ॥ ೬೭ ॥

ಬಾಲದೊಡಿಗೆಯ ಕೀಲ ಕಳೆವನು
ಹಾಲು ಅನ್ನವ ಹಿಡಿಯ ಮಂಚದ
ಮೇಲೆ ಮಲಗನು ಸುಖವ ಮರೆವನು ಶಿಷ್ಯರುಗಳಿತ್ತ।
ಸಾಲು ಸಕಲಾತಿಗಳನೆಲ್ಲವ
ನೂಲೆಳೆಗೆ ಸರಿಯೆಂಬ ಷಟ್ಸ್ಥಲ
ಕೀಲ ತೋರುವ ಭಕ್ತರಿಗೆ ಬಸವಣ್ಣ ಕೇಳೆಂದ॥ ॥ ೬೮ ॥

ಕನಕಮಣಿಭೂಷಣವ ಹಳಿವನು
ಧನಿಕ ನೃಪಶಿಷ್ಯರನೆ ಉಳಿವನು

೧-೧ ಪ(ಮೂ).

ಘನತರದ ಗುರುಪೀಠ ಸಿಂಹಾಸನವನತಿಗಳೆವ।
ಮನೆ ಮಠವ ತೃಣಕರಿಸಿ ಬಿಡುವನು
ದಿನದಿನಕೆ ವೈರಾಗ್ಯ ಬಲಿವುದು
ವನವಾಸಿಗಳ ಸಂಗಸುಖವನೆ ನೆನೆವ ಬಸವಣ್ಣ॥ ॥ ೬೯ ॥

ಆವ ಪರಿಮಳ ದ್ರವ್ಯಕಿಂತಲಿ
ಶ್ರೀವಿಭೂತಿಯೆ ಮುಖ್ಯವೆಂಬನ
ದಾವ ಭೂಷಣಕಿಂತ ರುದ್ರಾಕ್ಷಿಗಳೆ ಘನವೆಂಬ।
ನಾವ ನೂತ್ನದ ವಸ್ತ್ರಕಿಂತಲಿ
ಕಾವಿವಸ್ತ್ರವೆ ಮುಖ್ಯವೆಂಬನ
ದಾವ ಮಠವಿರೆ ಆಶ್ರಮವ ಕೈಕೊಂಬ ಬಸವಣ್ಣ॥ ॥ ೭೦ ॥

ತಾಯಿತಂದೆಗಳೆಂಬ ಸಂಶಯ
ದಾಯಸವ ಪರಿಹರಿಸಿ ಕರಸ್ಥಲ
ರಾಯ ಧ್ಯಾನದಲಿರಿಸಿ ಚಿತ್ತದ ಚಿಂತೆಗಳ ಕೆಡಿಸಿ।
ಸಾಯುಜ್ಯ ಪದವಿಗಳ ತೋರಿಸಿ
ಕಾಯದಾಸೆಯ ಬಿಡಿಸಿ ಯತಿಕುಲ
ರಾಯ ಷಟ್ಸ್ಥಲದಾಶ್ರಮವ ಕೈಕೊಂಬ ಬಸವಣ್ಣ॥ ॥ ೭೧ ॥

ಸರ್ವಜ್ಞ ಶಿವನಂತರಂಗದ
ಖರ್ವ ಚಿತ್ಕಳಮೂರ್ತಿ ಪ್ರಭುವಿಗೆ
ಪೂರ್ವದಲಿ ಚೀಲಾಳಸ್ವಾಮಿವಗೆಂಬ ನಾಮವನು।
ಪಾರ್ವತೀಶ್ವರ ಕರೆದ ಹೆಸರದು
ಗುರ್ವಿಗರ್ಭಕನಾದ ಕಾರಣ
ನಿರ್ವಿಘ್ನ ಶುಭ ಬಸವಪ್ರಭು ನಾಮಾಂಕಿತವೆ ಕಡೆಯು॥ ॥ ೭೨ ॥

ಬಸವನಾಮವೆ ಪೂರ್ವ ಪಾದವು
ಎಸೆವ ಶಿರ ಪ್ರಭುನಾಮಕರಣವು
ಬಸವಪ್ರಭುವೆಂಬೆರಡು ಕಲಿಯವತಾರ ನಾಮಗಳು।
ಮಿಸುನಿ ಬಣ್ಣವು ಕುಸುಮ ಪರಿಮಳ
ಶಿಶುವಗುರು ಗುರು ಶಿವನ ಲೀಲೆಗ
ಳಸಮ ಚಿತ್ಕಳಮೂರ್ತಿ ಚೀಲಳಸ್ವಾಮಿ ಬಸವಣ್ಣ॥ ॥ ೭೩ ॥

ಚೆನ್ನಬಸವಗೆ ಬಸವರಾಜಗೆ
ಕಿನ್ನರಯ್ಯಗೆ ಸಿದ್ಧರಾಮಗೆ
ಸನ್ನುತದ ಶಿವಷೋಡಶಗೆ ಮಡಿವಾಳದೇವನಿಗೆ।
ನನ್ನಮೋ ಮಗ ಸಂಗಜನನಿಗೆ
ಮನ್ನಣೆಯ ಮಹದೇವಿ ನಾಗಲೆ
ಗಿನ್ನುಳಿದ ಶರಣರಿಗೆ ಹೇಳುವೆ ಮುಂದಣಾಗಮವ॥ ॥ ೭೪ ॥

ನಸುನಗುತ ಪ್ರಭುರಾಯ ಬಸವಗೆ
ಬಸವಪ್ರಭುವಿನ ಲೀಲೆಗಳ ನವ
ಶಿಶುವಾದ ಭಾವವ ಪ್ರಸನ್ನದ ವಿವರಗಳನೆಲ್ಲ।
ಒಸೆದು ಬೋಧಿಸಿ ಮುಂದೆ ಷಟ್ಸ್ಥಲ
ಪಸರಿಸುವ ಪದ್ಧತಿಯ ತಿಳುಹುವ
ಕುಶಲಗಳ ಕೇಳೆಂದು ಸುತನಿಗೆ ಪೇಳ್ದ ದೇಶಿಕನು॥ ॥ ೭೫ ॥

ಕ್ಷೋಣಿ ಈರೇಳರ ಸ್ಥಿತಿಗೆ ಬಹು
ಪ್ರಾಣಿಗಳಿಗೆ ಪ್ರವೀಣರಿಗೆ ಗೀ
ರ್ವಾಣರಿಗೆ ಗಿಡ ಮರ ಲತೆಗೆ ಗಿಳಿ ಪಕ್ಷಿ ಪಶು ಜನಕೆ।
ಪ್ರಾಣಲಿಂಗದಿ ಮನವನಿಟ್ಟಿಹ
ಜಾಣ ಷಟ್ಸ್ಥಲಬ್ರಹ್ಮಿಗಳಿಗೆ ಪು
ರಾಣ ಗುರುವಿಗೆ ಜಯವ ಚೀಲಲಿಸ್ವಾಮಿ ಪಾಲಿಸಲಿ॥ ॥ ೭೬ ॥

ಪುರಹರನು ಪಾರ್ವತಿಗೆ ನಂದಿಯು
ಶರಣರಿಗೆ ಪ್ರಭುಸ್ವಾಮಿ ವೃಷಭಗೆ
ಶರಣೆ ನೀಲಮ್ಮನಿಗೆ ಪೂರ್ವದಲೊರೆದ ಗುರುವಾಕ್ಯ।
ಧರಿಸಿದಗ್ಗಳ ಹರಪುರದ ಗಿರಿ
ಶಿರದ ಷಟ್ಸ್ಥಲಪೀಠಕರ್ತನು
ವಿರತ ಬಸವಪ್ರಭು ಕುಮಾರನಿಗೊರೆದ ಸೂತ್ರವಿದು॥* ॥ ೭೭ ॥

❖❖

* ಇತಿ ಅಷ್ಟಾದಶ ಸ್ಕಂಧ ನಿರೂಪಣಂ ಅಂತು ಉಭಯ ಪದಗಣನೆ ೮೮೭೭ಕ್ಕಂ ಮಂಗಳಶ್ರೀ ॥

ಏಕೋನವಿಂಶತಿ ಸ್ಕಂಧ

ರಾಗ : ಕನ್ನಡ ಕಾಂಬೋಧಿ

ದೇಶಿಕೇಂದ್ರನೆ ಬಸವಪ್ರಭು ಪೂ
ರ್ವಾಶ್ರಮವ ಧಿಕ್ಕರಿಸಿ ಷಟ್ಸ್ಥಲ
ದಾಶ್ರಮವ ಕೈಕೊಳ್ಳುದೆಂತೆನಲೊರೆದ ಗುರು ಸುತಗೆ॥

ಶ್ರೀಶೈಲಜಾವದನಚಂದ್ರಪ್ರ
ಕಾಶಚಾತಕ ಚಕ್ರಕುಚ ಬಡ
ಭಾಷ ಕುಂಕುಮವಕ್ಷ ತನು ಲಾವಣ್ಯಕಳಹಂಸ।
ಶ್ರೀಸಕಲಗುಣ ಬಾಹ ಚಂಪಕ
ಪಾಶಗಳ ಗಂಧಾಬ್ಜಭೃಂಗ ವಿ
ಳಾಸ ಚೇತಸನೇತ್ರ ಶಂಕರ ಸಲಹು ಮೂಜಗವ॥ ॥ ೧ ॥

ಮಂಗಳದ ಮಹಾನುಭಾವ ಗ
ಣಂಗಳನುಭವಜ್ಞಾನ ಶರಧಿ ತ
ರಂಗ ಗುಣಮಣಿಭೈತ್ರ ಯತಿಕುಲತಿಲಕ ಚಕ್ರೇಶ।
ಗಂಗಧರ ಚಿದ್ರೂಪ ಕರಸ್ಥಲ
ಲಿಂಗಸಂಗಸ್ವರೂಪ ಬೋಧಪ್ರ
ಸಂಗ ಜಂಗಮಪ್ರಾಣಿ ಚೀಲಲಳಸ್ವಾಮಿ ಗುರು ಶರಣು॥ ॥ ೨ ॥

ಬಚ್ಚಬಯಲನೆ ಬೆದಕದವರಿಗೆ
ಬಿಚ್ಚಿ ಭೇದವ ಮಾಡದವರಿಗೆ
ಸಚ್ಚಿದಾನಂದೈಕ ವಸ್ತುವ ಪಡೆದು ಬಿಡದವರ್ಗೆ।
ಹೆಚ್ಚು ಕಡಮೆಗೆ ಹೋರದವರಿಗೆ

ಮಚ್ಚಿ ಮೋಹದಿ ಕೇಳುವವರಿಗೆ
ನಿಚ್ಚ ಬೋಧಿಸು ಮಗನೆ ಈ ಷಟ್ಸ್ಥಲಶಿವಾಯಣವ॥ ॥ ೩ ॥

ಲಕ್ಷಣಾರ್ಥವ ತಿಳಿಯದವರಿಗೆ
ಸೂಕ್ಷ್ಮವಸ್ತುವ ಕಾಣದವರಿಗೆ
ಭಿಕ್ಷುಕರನೇ ಕಂಡು ಹಾಸ್ಯವ ಮಾಡಿ ನುಡಿವರಿಗೆ।
ಅಕ್ಷರಂಗಳ ಜಪಿಸದವರಿಗೆ
ಅಕ್ಷಿಮೂರನ ಭಜಿಸದವರಿಗೆ
ಪಕ್ಷಪಾತಕಗರುಹದಿರು ಷಟ್ಸ್ಥಲ ಶಿವಾಯಣವ॥ ॥ ೪ ॥

ನಗಸುತೆಗೆ ನದಿಧರನು ನಂದಿಯು
ಸುಗುಣ ಪ್ರಮಥರ ಸಭೆಗೆ ಪ್ರಭುವರ
ಜಗದಗುರು ಬಸವನಿಗೆ ನೀಲಾಂಬಕಿಗೆ ಶರಣರಿಗೆ।
ಅಘವಿಜಯ ಹರಪುರದ ಶ್ರೀಗಿರಿ
ಜಗಜಗಿಪ ಷಟ್ಸ್ಥಲದ ಸದ್ಗುರು
ನಗುತ ಬಸವಪ್ರಭು ಕುಮಾರನಿಗೊರೆದ ಸೂತ್ರವಿದು॥ ॥ ೫ ॥

ಮತಕರ್ತೃ ಬಸವಾದಿ ಪ್ರಮಥರು
ಯತಿತಿಲಕ ಪ್ರಭುರಾಯನಂಘ್ರಿಗೆ
ನತರಾಗಿ ಬೆಸಗೊಳೆ ಒರೆದ ನಿಜ ಷಟ್ಸ್ಥಲಾಗಮವ।
ಶ್ರುತಿವಿದಿತ ಹರ ಗುರುವಚನ ಸ
ನ್ಮತದ ಸದ್ಗುರು ಸಾಂಪ್ರದಾಯವ
ಸುತನೆ ಕೇಳೆಂದೆನುತ ಶ್ರೀಗುರುರಾಯ ಬೋಧಿಸಿದ॥ ॥ ೬ ॥

ಮುನ್ನ ಕಲ್ಯಾಣದಲಿ ಬಸವನು
ಚೆನ್ನಬಸವನು ಪ್ರಮಥಗಣ ಪ್ರಭು
ಪನ್ನಳಿನಕೆದ್ದೆರಗಿ ಷಟ್‌ಸ್ಥಲ ಪಟ್ಟಗಳನಾಳ್ವ
ಬಿನ್ನಣದ ಬಿರುದಾವಳಿಯ ಮಹಿ
ಮೋನ್ನತಿಯ ಚೀಲಾಳಸ್ವಾಮಿಯ
ಚಿಹ್ನೆಗಳನರುಹೆಂದ ಶರಣರಿಗೊರೆಗದನೆಂತೆನಲು॥ ॥ ೭ ॥

ನಿಮ್ಮ ಷಟ್ಸ್ಥಲಕುಲದ ಗುರುವವ
ನಮ್ಮ ಎರಡನೆ ಲೀಲೆ ಪ್ರಭು ಪರ

ಬ್ರಹ್ಮ ಚಿತ್ಕಳಮೂರ್ತಿ ಚೀಲಳಸ್ವಾಮಿ ಪಡೆದರಿಗೆ।
ಗಮ್ಮನೇ ನಿಜಪದವ ತೋರಿಸಿ
ಸೊಮ್ಮ ದಾಯಾದ್ಯರಿಗೆ ಒಪ್ಪಿಸಿ
ಸುಮ್ಮನೇ ಸಂಗಮಕೆ [1][ತೆರಳುವ][1] ಬಸವ ಕೇಳೆಂದ॥ ॥ ೮ ॥

ಸಂಗಮೇಶ್ವರ ಕಂಡು ಬರುವುದ
ಲಿಂಗದಿಂದವತರಿಸಿ ತಾ ನಿಜ
ಜಂಗಮದ ರೂಪಿನಲಿ ಚೀಲಳಸ್ವಾಮಿ ಬಿಗಿದಪ್ಪಿ।
ಲಿಂಗಚಿತ್ಕಳ ಲೀಲ ಜಯ ಜಯ
ಮಂಗಳಾತ್ಮಕ ಮೂರ್ತಿ ಜಯ ಪ್ರಭು
ಲಿಂಗವೆರಡನೆ ನಾಮಕರಣವನಾಂತು ಧರೆಗಿಳಿದು॥ ॥ ೯ ॥

ಬಂಧು ಭಕ್ತರ ಮನದ ಬಯಕೆಯ
ಕಂದ ಕರಗಿಸಿ ಬಾಲಲೀಲೆಗ
ಳಂದದೋರಿಸಿ ಕಡೆಗೆಯವರಿಗೆ ಮೋಕ್ಷವನೆ ಕೊಟ್ಟು।
ನಿಂದ ಗುರುಪೀಠಕ್ಕೆ ಜ್ಞಾತಿ ಸು
ಕಂದನಿಗೆ ಪಟ್ಟವನೆ ಕಟ್ಟಿಸಿ
ತಂದೆ ದಯಮಾಡಿಸಿರೆ ಸಂಗಮಕೆಂದು ಕೀರ್ತಿಸುವ॥ ॥ ೧೦ ॥

ಶ್ರೀಮಹತ್ಪರಬ್ರಹ್ಮ ಚಿತ್ಕಳೆ
ಭೂಮಿಗವತರಿಸಿಳಿದು ಬಂದಿದೆ
ನಾಮಸ್ಮರಣೆಯ ಮಾಡುವವರಿಗೆ ಭಜಿಸುವಾತ್ಮರಿಗೆ।
ಕಾಮಿತಾರ್ಥಗಳೆನುತ ಷಟ್ಸ್ಥಲ
ಧಾಮ ಕೂಡಲಸಂಗ ಮೆಚ್ಚತಿ
ಪ್ರೇಮದಲಿ ಚೀಲಾಳಸ್ವಾಮಿಯ ಹೊಗಳುವನು ಬಸವ॥ ॥ ೧೧ ॥

ಶಿರದಡಹಿ ಮುತ್ತಿಕ್ಕಿ ಮೋಹಿಸಿ
ಬರಸೆಳೆದು ಬಿಗಿದಪ್ಪಿ ಚುಂಬಿಸಿ
ಕರೆಕರೆದು ಸಂತೈಸಿ ಶಿವಲಿಂಗಾರ್ಚನೆಯ ನಡಸಿ।
ಪರಮಾನ್ನ ಕ್ಷೀರಗಳ ಗಡಣಿಸಿ
ಹರನಿಗರ್ಪಿಸಿ ಸಲಿಸಿ ನಗುತಿರೆ
ಹರಪುರಕೆ ತೆರಳೆಂದು ಚೀಲಳಸ್ವಾಮಿಗರುಹುತಲೆ॥ ॥ ೧೨ ॥

೧–೧ ತೆರಳೈ (ಮೂ).

ಬಯಲ ಬೆರೆಸುವ ಸಂಗಮೇಶನು
ಸ್ವಯ ನಿರೂಪವಿದೀಗ ಮುಂದಣ
ದಯವ ಕಾಣ್ಬಹುದೆನುತ ಚೀಲಳಸ್ವಾಮಿ ಷಟ್ಸ್ಥಲದಾ।
ಶ್ರಯ ಸ್ವರೂಪ ನಿರೂಪತಾರಕ
ತ್ರಯವ ಲಿಂಗಾಂಗೈಕ್ಯ ಸುಖ ನಿ
ರ್ಣಯವ ಭಕ್ತರಿಗರುಹುವನು ಸೈಗೆಡೆದು ಬೆಸಗೊಳಲು॥ ॥ ೧೩ ॥

ಅಲ್ಲಿಂದ ಮುಂದಕ್ಕೆ ತೆರಳುವ
ನಲ್ಲಿಗಲ್ಲಿಗೆ ಮಹಿಮೆದೋರುವ
ಬಲ್ಲ ಭಕ್ತರಿಗೀವ ನಿಜ ಸಾಯುಜ್ಯಸಂಪದವ।
ಖುಲ್ಲಮತ ಕುಲನಾಶ ಷಟ್ಸ್ಥಲ
ದಲ್ಲಮನ ನಿಜವಂಶವೆನುತಲಿ
ಎಲ್ಲ ಸಗ್ಗಿಗರುಲಿವರಂಬರಮಾರ್ಗದಲಿ ಬಸವ॥ ॥ ೧೪ ॥

ಕುಸುಮಶರಕಂಪಿಸುವ ಕಾಲನು
ಮಸುಳುವನು ಮನಮಾಯೆಗುಬ್ಬಸ
ವಸುಧೆ ಕರ್ಮಿಗಳೆಲ್ಲ ವರ್ಣಾಶ್ರಮ ಮಹಾಪ್ರಳಯ।
ಅಸಮಷಟ್ಸ್ಥಲ ಸಮಯ ದಿಗ್ಗಜ
ಬಸವಪ್ರಭು ಚೀಲಾಳಸ್ವಾಮಿಯ
ಹೆಸರ ಹೇಳಿದ ಪುರುಷರಿದಿರಿಗೆ ನಿಲುತಿಹರೆ ಬಸವ॥ ॥ ೧೫ ॥

ಪರಮ ಶ್ರೀಗುರು ಸಂಗಮೇಶ್ವರ
ಬರೆವನೋಲೆಯ ಚರರನಟ್ಟುತ
ಹರಪುರ[1][ದ][1] ಷಟ್ಸ್ಥಲದ ಶಮಿತಾಪುರವರಾಧಿಪಗೆ।
ಪರಶಿವನ ಚಿತ್ಕಳೆಯೆ ಧರೆಗವ
ತರಿಸಿ ಚೀಲಳಸ್ವಾಮಿನಾಮದಿ
ಬರುತಹನೆ ಷಟ್ಸ್ಥಲದ ಪಟ್ಟಕೆ ಪೂರ್ವ ಪ್ರಭುಸ್ವಾಮಿ॥ ॥ ೧೬ ॥

ಶೀಲಸತ್ಶುಭಮಸ್ತು ಮಂಗಳ
ಮೂಲಸ್ತಂಭ ನಿರಂಜನಪ್ರಭು
ಚೀಲಳೇಶ್ವರಸ್ವಾಮಿನಾಮದಿ ಧರೆಗಿಳಿದು ಬಂದು।

೧–೧ ವ(ಮೂ).

ಬಾಲಲೀಲೆಯ ನಟಿಸಿ ಷಟ್ಸ್ಥಲ
ಕೀಲ ಶರಣರಿಗರುಹಿ ಲಿಂಗಸ
ಕೀಲ ಸೂತ್ರವ ತೋರಿಸುತ ಶ್ರೀಗಿರಿಗೆ ಬರುತಹನೆ॥ ॥ ೧೭ ॥

ಎಂಬ ಲೇಖನ ವಿವರಗಳನತಿ
ಸಂಭ್ರಮದಿ ಶಮಿತಾಪುರೀಶ್ವರ
ಶಾಂಭವನೆ ಶ್ರೀಸಂಗಮೇಶ್ವರ ಕರಸ್ಥಲದ ವಸ್ತು।
ನಂಬುಗೆ ನಿರೂಪಗಳನೋದಿಸಿ
ಕೊಂಬ ಸಮಯಕೆ ಗಗನಮಾರ್ಗದ
ಲಂಬಕತ್ರಯ ಲಿಖಿತವಿಳಿವುದು ತಾನದೆಂತೆನಲು॥ ॥ ೧೮ ॥

ಪ್ರಥಮ ಪಟ್ಟ ನಿರಂಜನಪ್ರಭು
ದ್ವಿತಿಯಕಲ್ಲಮಠ ಪ್ರಭುವೆ ನಿಜಗುರು
ತ್ರಿತಯ ಶ್ರೀಗುರು ಸಿದ್ಧ ನಾಲ್ಕಕೆ ಬೋಳಬಸವಾರ್ಯ।
ಜಿತವೈದು ಚೆನ್ನಂಜೆದೇಶಿಕ
ಯತಿಪ ಶಮಿತಪುರೀಶಗಾರ
ಪ್ರತಿಮ ಷಟ್ಸ್ಥಲಪಟ್ಟ ಚೀಲಳಸ್ವಾಮಿಗೇಳರಲಿ॥ ॥ ೧೯ ॥

ಶಿಖಿ ನಿರೂಪುಡುಗೊರೆಯು ಸಮಯದ
ಸಕಲ ಚರಮೂರ್ತಿಗಳು ಆಪ್ತ ಪ್ರ
ಮುಖರು ಭಕ್ತರು ಬಸವನೃಪ ಬಲ ಪರ್ವತಕೆ ಹೋಗಿ।
ಸಕಲ ಗಿರಿ ಕೈಲಾಸಕಗ್ಗಳ
ಸುಕೃತ ಷಟ್ಸ್ಥಲದತ್ತಿಕಟ್ಟೆಯ
ಶಿಖಿನಿರೂಪವ ಬೇಗ ಚೀಲಳಸ್ವಾಮಿಗೊಪ್ಪಿಸಿರೊ॥ ॥ ೨೦ ॥

ಶಿಖಿ ನಿರಂಜನ ಪ್ರಣವ ಮುದ್ರೆಯು
ಶಿಖಿಯ ವಾಗ್ಜಪ್ರಣವದುಂಗುರ
ಶಿಖಿಯಾಗಲು ಶಿವತತ್ವಜ್ಞಾನ ನಿರೂಪ ಮಾಲಿಕೆಯು।
ಸಕಲ ಭಕ್ತವಿರಕ್ತ ಗುರು ದೊರೆ
ಸಕಲ ಷಟ್ಸ್ಥಲಕರ್ತೃಗಳು ದೇ
ಶಿಕರು ಚೀಲಳಸ್ವಾಮಿಗೊಪ್ಪಿಸಿ ಶಿಖಿ ನಿರೂಪಗಳ॥ ॥ ೨೧ ॥

ದೇಶಕೊಪ್ಪುವ ಶ್ರೀಶೈಲ ಕೈ
ಲಾಸದತ್ತಿಯಕಟ್ಟೆ ಘನ ಸಿಂ
ಹಾಸನದ ಷಟ್ಸ್ಥಲದ ಪಟ್ಟವ ಚೀಲಳೇಶ್ವರಗೆ।
ದೇಶಿಕೇಂದ್ರರು ಪಂಚಗುರುಗಳು
ದೇಶಪತಿ ಶಿವಭಕ್ತಜನ ಸಹ
ಶ್ರೀಸದಾಶಿವ ಲಿಖಿತ ಮೇರೆಗೆ ನಡೆಸಬೇಕೆಂಬ॥ ॥ ೨೨ ॥

ನಪ್ಪು ಕಟ್ಟಿಗೆಹಳ್ಳಿಸ್ವಾಮಿಗೆ
ಕಪ್ಪುಗೊರಳ ನಿರೂಪವಿದು ಇ
ಲ್ಲಿಪ್ಪ ಷಟ್ಸ್ಥಲಬ್ರಹ್ಮಿ ಚತುರಾಚಾರ್ಯ ನಿಜವಪ್ಪ।
ದರ್ಪಣದ ಪ್ರತಿಬಿಂಬದಂದದಿ
ತೋರ್ಪ ಪ್ರಭು ನಿಮ್ಮಂತರಂಗದಿ
ಬೇರ್ಪಡಿಸಿ ನೋಡಿದರೆ ಕರಸ್ಥಲ ವಸ್ತುವರಿದಿಹುದು॥ ॥ ೨೩ ॥

ಅಷ್ಟಾವಧಾನದಲೆ ನಡೆವನು
ಅಷ್ಟವರಣದ ಘನವ ನುಡಿವನು
ಇಷ್ಟಲಿಂಗ ಸಕೀಲ ಸೂತ್ರನಿರೂಪ ಸಂಧಾನಿ।
ಅಷ್ಟದಿಕ್ಕಿಗೆ ಬೆಳೆದ ಶರಣನು
ಸೃಷ್ಟಿಸ್ಥಿತಿಲಯ ತ್ರಿವಿಧವಳಿದನು
ದೃಷ್ಟದಾರಿಷ್ಟಗಳ ಹೃದಯದಿ ತಿಳಿದು ಹೊಗಳುವನು॥ ॥ ೨೪ ॥

ಜ್ಞಾನದೃಷ್ಟಿಲಿ ನೋಡಿ ಕಾಣ್ಬನು
ಆನಂದ ಪ್ರಭುವರಿದನೆಂಬನು
ಧ್ಯಾನಿಸಿದ ಹಾಗಾಯಿತೆನ್ನುತ ದೊರೆಗರಿಕೆ ಮಾಡಿ।
ಮಾನನಿಧಿ ಚರಮೂರ್ತಿಗಳ ಸಂ
ಧಾನಿ ಭಕ್ತರ ಬಸವಭೂಪನ
ಆನೆ ಪಾಲಕೆ ಸೇನೆ ಸಹ ಶ್ರೀಗಿರಿಗೆ ಕಳುಹುವರು॥ ॥ ೨೫ ॥

ಮುಕ್ಕಣ್ಣನವತಾರ ಶರಣರೊ
ಳೊಕ್ಕ ಶೇಷದ ಘನಮಹತ್ವದಿ
ಚಿಕ್ಕಬಸವನ ತೆರದಿ ಜನಿಸಿದ ಬಸವ ಹರಪುರದ।
ಅಕ್ಕರದ ಚರಭಕ್ತದಳ ಸಹ

ತಕ್ಕ ಚರಮೂರ್ತಿಗಳು ಘನ ಪ
ಲ್ಲಕ್ಕಿ ಶಿಖಿಯು ನಿರೂಪ ಸಹ ಶ್ರೀಗಿರಿಗೆ ತೆರಳುವರು॥ ॥ ೨೬ ॥

ತುಂಗಭದ್ರೆಯ ದಾಂಟಿ ಎಡಬಲ
ಜಂಗಮವೆ ಶಿವನೆಂದು ಹೊಗಳುತ
ಸಂಗಮಸ್ಥಳದಿಂದ ಪಂಪಾಕ್ಷೇತ್ರಕ್ಕೈತರಲು।
ಗಂಗಧರ ವಿರುಪಾಕ್ಷಸುತ ಮಾ
ತಂಗ ಶಿರ ಮಹರುದ್ರಸಹ ನಿಜ
ಜಂಗಮವಿದೆಂದೆನುತ ನುತಿಪರು ಬಸವ ಕೇಳೆಂದ॥ ॥ ೨೭ ॥

ವಿರುಪಾಕ್ಷ ಚರರೂಪಿನಿಂದಲಿ
ಹರಿದು ಬರುವನು ಉದ್ದನಯ್ಯನು
ಹರುಷದಿಂದ ಬಂದೆರಗುವನು ಮಾತಂಗ ಪರಿರುದ್ರ।
ತ್ವರಿತದಿಂದ್ಯೈತಂದು ವಂದಿಸು
ಶಿರಕಿರೀಟವ ಕರ್ಣಾಭರಣವ
ಧರಿಸಿ ಚೀಲಳಸ್ವಾಮಿಗೆರಗುತ ತೆರಳುವರು ಬಸವ॥ ॥ ೨೮ ॥

ಇದುವೆ ಷಟ್ಸ್ಥಲ ಕಟ್ಟೆಯೆನುತಲಿ
ಇದುವೆ ಶರಣ ನಿವಾಸವೆನುತಲಿ
ಇದುವೆ ದೊಡ್ಡ ಮಹಾತ್ಮರಿರುತಿಹ ಪುಣ್ಯಸ್ಥಳವೆಂದು।
ಇದುವೆ ತುಂಗಾತೀರವೆನುತಲಿ
ಇದುವೆ ಪಂಚಮಕೋಶವೆನುತಲಿ
ಸದೆ ಮಾಡಿಸಿ ಶರಣಜನಗಳು ಕುಳಿತು ನೋಡುವರು॥ ॥ ೨೯ ॥

ಚಾಮರಸರಿಗೆ ರಾಘವಾಂಕಗೆ
ಭೀಮಕವಿಗೆ ಹರೀಶ್ವರಯ್ಯಗೆ
ಶ್ರೀಮಹಾವಿರೂಪಾಕ್ಷಪಂಡಿತ ಕಲ್ಲುಮಠದ ಪ್ರಭು।
ಸ್ವಾಮಿ ಜಕ್ಕಣಚಾರ್ಯರಾಶ್ರಮ
ಭೂಮಿಗಿದು ಕೈಲಾಸ ಷಟ್ಸ್ಥಲ
ಧಾಮ ಚರದಾಸೋಹ ಕ್ರೀಯ ಜ್ಞಾನ ಶಿವನಿಷ್ಠೆ॥ ॥ ೩೦ ॥

ಕಟ್ಟಿ ಷಟ್ಸ್ಥಲಪೀಠವೆನುತಲಿ
ಕುಟ್ಟಿ ನಾದವ ಹೊಡೆಸಿ ಆ ಸ್ಥಳ
ಶೆಟ್ಟಿ ಶಿವಭಕ್ತರಿಗೆ ಹೇಳಿಸಿ ದೊರೆಗತಿಕೆಗೊಳಿಸಿ।
ಪಟ್ಟಿ ಸಹ ಪಾನಗಳ ಬರೆಯಿಸಿ
ಕೊಟ್ಟು ಚೀಲಲಸ್ವಾಮಿ ಮಠ ಮನೆ
ಶ್ರೇಷ್ಠಿಪತಿಗಳ ಭಕ್ತಿಸ್ಥಳಕುಳಕಿದುವೆ ಕೈಲಾಸ॥ ॥ ೩೧ ॥

ಎನುತ ಪೂರ್ವಕೆ ತೆರಳಿ ಮರ್ತ್ಯಕೆ
ಕನಕಗಿರಿ ಕೈಲಾಸ ಶ್ರುತಿಮತ
ವೆನಿಪ ಶ್ರೀಗಿರಿಮಲ್ಲಿಕಾರ್ಜುನ ದೇವ ಭ್ರಮರಾಂಬ।
ಮನುಮುನೀಶ್ವರರಸಿ ಕಾಣದ
ಘನವಸ್ತು ಶಿವನಂತರಂಗದ
ವನಜ ಜಂಗಮಕುಲಶಿರೋಮಣಿಯೆಂದು ಹೊಗಳುವರು॥ ॥ ೩೨ ॥

ಅತ್ತಿಕಟ್ಟೆಗೆ ಹೋಗಿ ಮೇಲಕೆ
ಹತ್ತಿದರೆ ಕೈಲಾಸ ಪದವಿಯೆ
ನುತ್ತ ಶ್ರುತಿಗಳು ಸಾರುತಿವೆ ಷಟ್ಸ್ಥಲದ ಪೀಠವಿದು।
ಚಿತ್ತೈಸಿ ಮಹಸ್ವಾಮಿಯೆನುತಲಿ
ರತ್ನಗದ್ದುಗೆ ಇಕ್ಕಿ ಮಂಡಿಸಿ
ಸುತ್ತ ಬಳಸಿ ಗಣಂಗಳೆಲ್ಲರು ಕುಳಿತಿರಲ್ಕೇಳಿ॥ ॥ ೩೩ ॥

ಭೂಮಿ ಪಾವನ ಷಟ್ಸ್ಥಲಪ್ರಭು
ನಾಮರೂಪಿನ ನಾಟಕದ ವಿಭು
ಕಾಮ ಕಾಲಪಹಾರಿ ಕರುಣಾವಾರ್ಧಿ ಚಂದ್ರಧರ।
ಶ್ರೀಮಹಾಪರಂಜ್ಯೋತಿ ಶಂಕರ
ತಾಮರಸ ಹೃದ್ಭಾನು ಚೀಲಳ
ಸ್ವಾಮಿಸಿಂಹಾಸನದಿ ಕುಳಿತಿಹರೆಂಬ ನುಡಿಗೇಳಿ। ॥ ೩೪ ॥

ವೀರಸಿಂಹಾಸನದ ಹಿರಿಯರು
ದಾರನೃಪ ಸಿಂಹಾಸನಸ್ಥರು
ಧೀರ ದಿವ್ಯ ಸುವಿಷ್ಟರರು ಮಹಪೀಠ ಪಟ್ಟಕರು।
ಕಾರಣೀಕರು ದೇವಪೀಠರು

ಸಾರ ಷಟ್ಸ್ಥಲಶೂನ್ಯಪೀಠದ
ನಿರಾಭಾರಿ ಚೀಲಲಳಸ್ವಾಮಿಯ ಚರಣಕೆರಗುವರು॥ ॥ ೩೫ ॥

ಯೋಗಿ ಭೋಗಿಯು ಶ್ರವಣಮುನಿ ಬೈ
ರಾಗಿ ರಾಮಾಂಜನ ತಿಗಳ ವೈ
ರಾಗಿ ಸನ್ಯಾಸಿಗಳು ಹಂಸಕ ಪರಮಹಂಸಕರು।
ಭೋಗಜಿತರವಧೂತರಾರುಢ
ಪೂಗ ಸರ್ವೇಶ್ವರನ ಮತ ಶಿವ
ಯೋಗಿ ಚೀಲಳಸ್ವಾಮಿ ದರ್ಶನಕ್ಕೈದುವರು ಬಸವ॥ ॥ ೩೬ ॥

ಗೊರವ ಜೋಗಿಯು ದಾಸ ಬಗುತರು
ಗುರುನಾಥ ಬಾಬಣ್ಣ ನಾಂಡಿಯು
ಬುರುಡೆ ಜಾಗಟೆ ದಂಡಿಗೆಯ ಕಿನ್ನರಿಯ ಧೂಪಗಳ।
ಗಿರುಗಟೆಯ ಕಪ್ಪುರದ ಶಂಖಿನ
ಕರಡಿಕಂಬಿಯ ನಂದಿಧ್ವಜಗಳ
ದರುಶನದ ಜನರೆಲ್ಲ ಚೀಲಳಸ್ವಾಮಿ ಸೇವಕರು॥ ॥ ೩೭ ॥

ಸ್ವಸ್ಥಚಿತ್ತ ಗೃಹಸ್ಥ ವಾನ
ಪ್ರಸ್ಥ ಸ್ವಯ ಸನ್ಯಾಸಿ ಬಾಲ ಸ
ಮಸ್ತ ಸುಖಿರಿಃಖ್ಖಾರಿ ಬ್ರಹ್ಮಾಚಾರಿ ಬ್ರಾಹ್ಮಣರು।
ಬಸ್ತಿ ಜೈನರು ಕ್ಷತ್ರ ವೈಶ್ಯ ಸು
ವಿಸ್ತರದ ಶೂದ್ರಾಶ್ರಮರು ಪರ
ವಸ್ತು ಚೀಲಳಸ್ವಾಮಿ ದರ್ಶನಕ್ಕೈದುವರು ಬಸವ॥ ॥ ೩೮ ॥

ಗಾಣಪತ್ಯರು ನೀಲಪಟರು ಪ್ರ
ವೀಣ ಸೌಗತ ಸೌರ ಸಾಂಖ್ಯರ
ಶ್ರೇಣಿಸಿದ್ಧರ ಬುದ್ಧ ಮಧ್ವರ ಶಕ್ತಿಮತಸಹಿತ।
ಕ್ಷೋಣಿ ಕೌಳ ಕುಟೀಚ ಯಾಮಳ
ಮಾಣದತಿ ಕಾಪಾಲ ದರುಶನ
ಪ್ರಾಣಿಗಳು ಚೀಲಾಳಸ್ವಾಮಿಯ ದರುಶನಕೆ ಬಹರು॥ ॥ ೩೯ ॥

ಬಾಲಸಂಗನ ಬಾಲಬಸವನ
ಬೋಳಬಸವನ ಗೋಣಿಬಸವನ

ಮೇಳಪುರ ವೃಷ ಮಲೆಯಮಾದನ ಮಂಟೆದಯ್ಯಗಳ।
ಮೂಲ ಕೊಡೆಯನಕಲ್ಲ ರಾಚನ
ಲೀಲೆ ಹೇಳುವರೆಲ್ಲ ಷಟ್ಸ್ಥಲ
ಚೀಲಳೇಶ್ವರ ಬಸವಪ್ರಭುವಿನ ಬಾಲಕರು ಬಸವ॥ ॥ ೪೦ ॥

ಧರೆಯೊಳವರಿವರೆನ್ನದೆಲ್ಲಾ
ದರುಶನ ಮತಾಧಿಕರು ಪರ್ವತ
ಗಿರಿಯನೇರಿದ ಬಳಿಕ ಅತ್ತಿಯಕಟ್ಟೆ ಷಟ್ಸ್ಥಲದ।
ಗುರುಗಳಡಿಗಳಿಗೆರಗಿ ಕಾಣಿಕೆ
ಇರಿಸಿದಲ್ಲದೆ ಮಲ್ಲಿಕಾರ್ಜುನ
ದರುಶನಕೆ ಬಿಡಲಿಲ್ಲ ಪೂರ್ವಾಚರಣೆ ಬಸವಣ್ಣ॥ ॥ ೪೧ ॥

ಸಗುಣನಿರ್ಗುಣ ಜಂಗಮಸ್ಥಲ
ಯುಗಪ್ರಮಾಣದ ಕಟ್ಟೆ ವೃಕ್ಷವು
ಜಗಕುಭಯ ಕೈಲಾಸ ಶ್ರೀಗಿರಿಮಲ್ಲಿಕಾರ್ಜುನನೆ।
ಅಗಜೆಯರಸನು ಪಂಚಮಠಗಳು
ಜಗಜಗಿಸುತಿಹ ಅತ್ತಿಕಟ್ಟೆಯ
ಸಗುಣ ಸಿಂಹಾಸನಕೆ ಚೀಲಳಸ್ವಾಮಿ ಕರ್ತೃಗಳು॥ ॥ ೪೨ ॥

ಶಿವನ ಸಮಗದ್ದುಗೆಯಲಿರುವರು
ಅವನಿತಳಕವತರಿಸಿ ಬಂದನು
ಇವನೆ ಅತ್ತಿಯಕಟ್ಟೆ ಷಟ್ಸ್ಥಲಪೀಠ ಪ್ರಭುವೆನುತ।
ದಿವಿಜ ದನುಜರು ಹರಿಯಜೇಂದ್ರರು
ಶಿವನು ಪಾರ್ವತಿ ಸಹಿತಪ್ರಮಥರು
ನವಬ್ರಹ್ಮ ನಾರದರು ಚೀಲಳಸ್ವಾಮಿ ಹೊಗಳುವರು॥ ॥ ೪೩ ॥

ಸುರರ ದುಂದುಭಿ ಮೊರೆವವಾಕ್ಷಣ
ಸುರರು ಪೂಮಳೆಗರೆವರಾಕ್ಷಣ
ಹರನಿರೂಪದ ಲಿಖಿತವಿಳಿವುದು ಬಿಚ್ಚಿ ಓದುವರು।
ಹರಪುರಕ ಚೀಲಾಳಸ್ವಾಮಿಯ
ತೆರಳಬೇಕಿದೆ ಬುದ್ಧಿ ಬಿನ್ನಕೆ
ದೊರೆ ಬರುವ ಬಸವಂತರಾಯ ಪರಾಕೆ ಚಿತ್ತಕ್ಕೆ॥ ॥ ೪೪ ॥

ಎಂಬ ಶಾಸನದೊಕ್ಕಣೆಯ ಭ್ರಮ
ರಾಂಬಪತಿ ತಾ ತಿಳಿದು ಹೇಳುವ
ನಂಬುಗೆಯ ನಿಜಭಕ್ತ ಹರಪುರದರಸು ಷಟ್ಸ್ಥಲಕೆ।
ಇಂಬು ಮಾತೃಸ್ಥಾನ ನೃಪ ಹ
ಸ್ತಾಂಬುಜಕೆ ಬಳಿದೊಟ್ಟು ವಿರತಪ
ದಾಂಬುಜವ ಪೂಜುವನು ಚೀಲಳಸ್ವಾಮಿ ಚಿತ್ತೈಸಿ॥ ॥ ೪೫ ॥

ಎನುತ ಭೌಷ್ಯವನರುಹಿ ಪರಶಿವ
ತನಗೆ ತಾ ಬಯಲಾಗಿ ಹೋಗುವ
ಕನಸ ಕಂಡಂತೆಲ್ಲ ಗುರುಹಿರಿಯರಿಗೆ ಪರವಶದ।
ವನಧಿಯೊಳಗೋಲಾಡಿ ಕಣ್ಬಿಡೆ
ಘನ ಪರಬ್ರಹ್ಮಸ್ವರೂಪನು
ದಿನಕರನ ಪ್ರಜೆಯಂತೆ ಚೀಲಳಸ್ವಾಮಿ ನಗುತಿಹನು॥ ॥ ೪೬ ॥

ಅರಿವೆ ಮರವೆಯ ಸೂತ್ರಗೂಡಿದ
ಶೃಈರಧರ್ಮದ ಪುರುಷರೆಲ್ಲರು
ಮರೆದು ಮಲಗೆದ್ದವರ ತೆರ ಮತ್ತೇನ ಕಾಣರಲ।
ಪರಮಗುರು ಚೀಲಾಳಸ್ವಾಮಿಯ
ಅರಿವನಲ್ಲದೆ ಬ್ರಹ್ಮಸೂತ್ರವ
ನರಿವರೇ ಮಿಕ್ಕವರು ಕಾಲಜ್ಞಾನದಾಗಮವ॥ ॥ ೪೭ ॥

ಶ್ರೀಗುರುವೆ ಶಮಿತಾಪುರದ ಶಿವ
ಯೋಗಿ ಷಟ್ಸ್ಥಲಪೀಠಪಟ್ಟ ವಿ
ರಾಗಿ ಶಿಖಿ ಪಲ್ಲಕ್ಕಿಯುಡುಗೊರೆ ಪೂರ್ವದ ನಿರೂಪ।
ಸಾಗಿ ಬಂದಿದೆ ದೊರೆ ಸಹಿತ ದಯ
ವಾಗಿ ಚೀಲಳಸ್ವಾಮಿಯೆನುತಲಿ
ಬಾಗಿ ಚರಮೂರ್ತಿಗಳು ರಾಯನು ಚರಣಕೆರಗುವನು॥ ॥ ೪೮ ॥

ಭಕ್ತಬಾಂಧವ ದೇವ ಜಯ ಜಯ
ಭಕ್ತವತ್ಸಲ ಮೂರ್ತಿ ಜಯ ಜಯ
ಭಕ್ತಜನರ ಕುಟುಂಬ ಭಕ್ತರ ಪಾಲಕನೆ ಜಯತು।
ಭಕ್ತರಿಚ್ಛೆಗೆ [೧][ಒ][೧]ಲಿವವನೆ ಜಯ

೧-೧ ಗೆ(ಮೂ).

ಭಕ್ತರರ್ತಿಗೆ ನಲಿವವನೆ ಜಯ
ಭಕ್ತಜನಕರುಣಾಬ್ಧಿ ಚೀಲಳಸ್ವಾಮಿ ಚಿತ್ತೈಸಿ॥ ॥ ೪೯ ॥

ದೇವ ಲಿಖಿತವಿದೀಗ ಸಂಗಮ
ದೇವ ಬರೆದ ನಿರೂಪವಿದು ಗುರು
ದೇವ ಕಟ್ಟಿಗೆಹಳ್ಳಿಸ್ವಾಮಿಯ ಒಕ್ಕಣೆ ಇದೀಗ।
ಭೂವಿನುತ ಬಸವಂತರಾಯಗೆ
ನೀವೆ ಕಟ್ಟಿದ ಪಟ್ಟ ನಿಜಪದ
ಸೇವಕನೆ ಹೊರತಾಗಿ ಬದಲೇನಿಲ್ಲ ಬಿಜಮಾಡಿ॥ ॥ ೫೦ ॥

ಎಂದು ದೊಡ್ಡ ಮಹಾನುಭಾವರು
ಬಂದು ಪಾದವ ಕಟ್ಟಿಕೊಂಬರು
ಹಿಂದೆ ದೊರೆಮಗನಡ್ಡಗೆಡೆವನು ಸಕಲಗಣಸಭೆಯು।
ವಂದಿಸುತ ಕೀರ್ತಿಸುತ ಬಳಸಿಹ
ಹಿಂದಮುಂದಣ ಹಿರಿಯರೆಲ್ಲರು
ಸಂದೇಹವೇನಿದಕೆ ಷಟ್ಸ್ಥಲಗುರುವೆ ದಯಮಾಡಿ॥ ॥ ೫೧ ॥

ಎಲ್ಲ ಲೋಕಕ್ಕಧಿಕ ದಕ್ಷಿಣ
ಎಲ್ಲ ಪರ್ವತಕಧಿಕವಾ ಗಿರಿ
ಎಲ್ಲ ಗುರುಪೀಠಕ್ಕೆ ಮೂಲಸ್ಥಾನ ಷಟ್ಸ್ಥಲಕೆ।
ಕಲ್ಯಾಣ ಶ್ರೀಶೈಲ ಸಂಗಮ
ವ[೧][ಲ್ಲಿ][೧] ಹರಪುರ ಹಂಪೆ ಐದರೊ
ಳಿಲ್ಲೆ ಪಟ್ಟವೆ ಮುಖ್ಯ ಶ್ರುತಿಮತ ಪೂರ್ವ ಗುರುವಾಕ್ಯ॥ ॥ ೫೨ ॥

ಎನುತ ರಾಜರು ಚತುರಚಾರ್ಯರು
ಅನುಭವೀಕರು ಸಕಲ ಭಕ್ತರು
ಘನ ವಿರಕ್ತರು ಘನಪುರುಷರಾ ಮನುಮುನಿಗಳೆಲ್ಲ।
ಜನಸಹಿತ ಶಿವಲೋಕ ಶಿವಸಭೆ
ಮನಸಿಜಾಂತಕ ಗಿರಿಜೆ ಪ್ರಮಥರು
ಮನವೊಪ್ಪಿ ನಾರದನ ಕಳುಹಿಸಿ ಹೇಳಿಸಿದ ಬಳಿಕ॥ ॥ ೫೩ ॥

೧-೧ ಲ್ಲ(ಮೂ).

ದೇವ ದೇವಿಯು ಪ್ರಮಥಗಣ ಸಹ
ಶ್ರೀವರನು ವಾಣೀಶ ಸುರಪತಿ
ದೇವಋಷಿಗಳು ಬ್ರಹ್ಮಋಷಿಗಳು ರಾಜಋಷಿಸುರರು।
ದೇವದುಂದುಭಿ ಕುಸುಮವೃಷ್ಟಿಯು
ಠೀವಿಯಲಿ ಷಟ್ಸ್ಥಲದ ಶರಣರು
ದೇವ ಚೀಲಳಸ್ವಾಮಿ ಪಟ್ಟೋತ್ಸವಕೆ ತೆರಳುವರು॥ ॥ ೫೪ ॥

ಸೃಷ್ಟಿ ಹುಟ್ಟದ ಮುನ್ನ ಷಟ್ಸ್ಥಲ
ಪಟ್ಟ ಚೀಲಳಸ್ವಾಮಿಗೆನುತಲಿ
ಕುಟ್ಟುವರು ಡಂಗುರವ ಪ್ರಮಥರು ಕಟ್ಟಿ ಬಳಬಳಸಿ।
ನಿಷ್ಠೆ ಮಾಡರು ಕೇಳೆ ಪ್ರಭುವಿನ
ಪಟ್ಟಕೀತನೆ ಮುಖ್ಯವೆನುತಲಿ
ಕಟ್ಟುವರು ಶಿವಸಹಿತ ಸುಭಮೂಹೂರ್ತದಲೆ ಬಸವ॥ ॥ ೫೫ ॥

ಅಪ್ರಮಾಣವಗೋಚರ ಧ್ವನಿ
ಸುಪ್ರಕಾಶತೆ ಶುಭ್ರಕಾಯ ಮ
ಹಪ್ರಮಥಗಣವೆನುತ ಮಧ್ಯದ ಪರಶಿವನೆ ಬಂದು।
ಕ್ಷಿಪ್ರದಿಂ ಚೀಲಾಳಸ್ವಾಮಿಗೆ
ಸುಪ್ರಸನ್ನತೆಯಾಗಿ ಷಟ್ಸ್ಥಲ
ದಪ್ರತಿಮ ಪಟ್ಟಾಭಿಷೇಕವ ಮಾಡಿದರು ನೋಡಿ॥ ॥ ೫೬ ॥

ವೃಂದ ನಾದವ ಕೇಳಿ ಹರುಷದಿ
ಬಂದ ಹಿರಿಯರು ಗುರುನೃಪತಿ ಮಹ
ಸಂಧಾನ ಶುಭಘಳಿಗೆ ತಾರ ಸುಲಗ್ನ ಶುಭತಾರೆ।
ಒಂದೆಯಾಗಿದೆ ಜಯವೆನುತ ತಾ
ತಂದ ಷಟ್ಸ್ಥಲ ಶಿಖಿಯ ಸ್ವಾಮಿಯ
ಮುಂದಿರಿಸಿ ಬೇಗಡ್ಡೆ ಬೀಳ್ವರು ಬಸವ ಕೇಳೆಂದ॥ ॥ ೫೭ ॥

ಸೃಷ್ಟಿಗಳಷಟ್ಸ್ಥಲದ ಗುರುವಿನ
ಪಟ್ಟ ಚೀಲಳಸ್ವಾಮಿಗೆನುತಲಿ
ಕುಟ್ಟುವರು ಡಂಗುರವ ಬೊಚ್ಚಿಯ ರಾಚ ಶ್ರೀ ನಾಗ।
ಲೊಟ್ಟಿ ವೀರನು ಘಂಟೆಸಿದ್ದನು

ಅಟ್ಟುವರು ದಿಗ್ದೆಸೆಯ ಪುಂಡರ
[1][ಮು][1]ಟ್ಟುವುದು ಶಮಿತಾಪುರೀಶಗೆ ಒಸಗೆ ಶುಭವಾರ್ತೆ॥ ॥ ೫೮ ॥

ಪಟ್ಟವಾಯಿತೆ ನಮ್ಮ ಪ್ರಭುವಿಗೆ
ಪಟ್ಟವಾಯಿತೆ ಪರಮಗುರುವಿಗೆ
ಪಟ್ಟ ಚೀಲಳಸ್ವಾಮಿಗಾದಡೆ ಷಟ್ಸ್ಥಲೋದ್ಧಾರ।
ದುಷ್ಟರಿಗೆ ಲಯಕಾಲ ಕರಸ್ಥಲ
ದಿಷ್ಟ ಬ್ರಹ್ಮವೆ ಸಲಹೆನುತ ಮತ
ಶ್ರೇಷ್ಠ ಶಮಿತಪುರೀಶ ಹಿಗ್ಗುವ ಬಸವ ಕೇಳೆಂದ॥ ॥ ೫೯ ॥

ಕೇಳಿರೈ ಸಮಯದ ಗಣಂಗಳು
ಚೀಲಳೇಶ್ವರ ಸ್ವಾಮಿಯಾರೆನೆ
ಭಾಳನೇತ್ರನ ಚಿತ್ಕಳೆಯೆ ಧರೆಗಿಳಿದ ಗುರುವಾಗಿ।
ಭಾಳ ಷಟ್ಸ್ಥಲ ನಷ್ಟ ಶಾಖೆಯ
ನೇಳಿಗೆಯ ಮಾಡಲ್ಕದೋಸ್ಕರ
ಬೀಳುದಿಂಡೆಯರಂಶವೆಂಬನು [2][ಇಂಥ][2]ನಪುರೀಶ॥ ॥ ೬೦ ॥

ಪುಂಡರನೆ ಹೊರಗಿಡುವ ಸಮಯದಿ
ದಿಂಡೆಯರ ದಿಗ್ದೇಶಕಟ್ಟುವ
ಮುಂಡೆಯರ ಸ್ನೇಹಿತರ ಮೂಲೆಯ ಪಾಲಮಾಡಿಸುವ।
ಕಂಡ ಸ್ಥಿತಿಯಿದು ಖಂಡಿತಾರ್ಥವು
ಮಂಡಲಕೆ ಶುಭ ಷಟ್ಸ್ಥಲಕೆ ಜಯ
ಕೆಂಡಗಣ್ಣವತಾರ ಚೀಲಳಸ್ವಾಮಿ ಕೇಳೆಂದ॥ ॥ ೬೧ ॥

ಧರೆಗಧಿಕ ಶ್ರೀ ವೀರಶೈವದ
ಶರಧಿ ಷಟ್ಸ್ಥಲಪೀಠ ಪಟ್ಟವು
ಪರಮಗುರು ಚೀಲಾಳಸ್ವಾಮಿಗೆ ಸ್ಥಿರಕರವುಯೆನುತ।
ಹರಸಿ ಸೀಸೆಯನಿಟ್ಟು ಪ್ರಮಥರು
ಗಿರಿಜೆ ಪರಶಿವ ಸಹಿತ ನಗುತಲಿ
ತೆರಳೆ ಪೂಮಳೆಗರೆಯೆ ಸುರ ಭೇರಿಗಳು ಮೊರೆದಪವು॥ ॥ ೬೨ ॥

೧-೧ ಹು(ಮೂ). ೨-೨ ವಿಂದ(ಮೂ)

ರಾಯ ಚರಮೂರ್ತಿಗಳು ಗುರುಗಳು
ಕಾಯ ಮೂರ್ಛೆಯು ತಿಳಿದು ಷಟ್ಸ್ಥಲ
ರಾಯನಂಘ್ರಿಯಕೆರಗಿ ನರಲೀಲೆಗಳನವಧರಿಸಿ
ಈಯವನಿಗಿಳಿದಭವನೀತನು
ಪಾಯದಿಂದ ಕೊಂಡೊಯ್ವೆವೆನುತಲಿ
ಪ್ರೀಯದಲಿ ಕೊಂಡಾಡುವರು ಬಸವಣ್ಣ ಕೇಳೆಂದ॥ ॥ ೬೩ ॥

ಕಂಡೆವಲ ಪರಶಿವನ ಪಾದವ
ಕಂಡೆವಲ ಪಾರ್ವತಿಯ ಪರಿಯನು
ಕಂಡೆವಲ ಪರಬ್ರಹ್ಮಹೃದಯದ ಪ್ರಾಣಜ್ಯೋತಿಯನು।
ಕಂಡೆವಗಣಿತ ಮಹಿಮಪುರುಷನ
ಕಂಡೆವಚಲಿತವಾದ ವಸ್ತುವ
ಕಂಡೆವಹ ಕರಸ್ಥಲದ ಮೂರ್ತಿಯನೆನುತ ಕೀರ್ತಿಸುತ॥ ॥ ೬೪ ॥

ಚೋಳರಾಯನಿಗೊಲಿದವನೆ ಸಿರಿ
ಯಾಳನಿಗೆ ಪ್ರತ್ಯಕ್ಷವಾದನೆ
ಕೋಳೂರ ಕೊಡಗೂಸ ಭಕ್ತಿಗೆ ಹಾಲಸವಿದವನೆ।
ಮೋಳಿಗಯ್ಯನ ಮನದೊಡೆಯ ಮಡಿ
ವಾಳಮಾಚನ ಗುರುವೆ ಪ್ರಭುವೇ
ಏಳಯ್ಯ ಹರಪುರದ ಗುಡ್ಡದ ಮಠಕೆ ಬಿಜಮಾಡಿ॥ ॥ ೬೫ ॥

ಎನುತ ಸಮಯದ ಘನವಿರಕ್ತರು
ಅನುಭವೀಕರು ಅಕ್ಷರಾರ್ಯರು
ವಿನಯದಿಂ ಚರಮೂರ್ತಿಗಳು ಮೈಯಿಕ್ಕಿ ಕೀರ್ತಿಸಲು।
ತನತನಗೆ ಶಿವಭಕ್ತರೆರಗಲು
ಮನಸ ಮರುಗಿಸಿ ಚತುರಚಾರ್ಯರು
ಸನುಮತಿಸಿ ಚೇಲಾಳಸ್ವಾಮಿಯ ಚರಣಕೆರಗುವರು॥ ॥ ೬೬ ॥

ಚಿತ್ತಜನನುರುಹಿದನೆ ಕಾಲನ
ಕತ್ತರಿಸಿ ಕೆಡಹಿದನೆ ಪ್ರಕೃತಿಯ
ಕತ್ತ ಬಗ್ಗಿಸಿದವನೆ ಕರ್ಮದ ಮೂಲಕುದ್ದಾಲ।
ಕುತ್ತ ಭೇಷಜ ಷಟ್ಸ್ಥಲದ ಮಹಿ

ಮೋತ್ತಮನೆ ಚೀಲಾಳಸ್ವಾಮಿಯೆ
ಚಿತ್ತೈಸಿ ಹರಪುರಕೆನುತ ಸೈಗೆಡೆವ ನೃಪ ಬಸವ॥ ॥ ೬೭ ॥

ಸೈಗೆಡೆದ ಬಸವಂತರಾಯನ
ಕೈಗೆ ಕಂಕಣಗಟ್ಟಿ ನೊಸಲಿಗೆ
ಮೈಗೆ ಭಸಿತವ ಧರಿಸಿ ಹಸ್ತವ ಶಿರದ ಮೇಲಿರಿಸಿ।
ಬೈಗು ಬೆಳಗೆನ್ನದಲೆ ಸಾಗುವ
ನೈಗಳಿಗೆ ಗಣಪರ್ವವಾಗಲಿ
ಕೈಗಂಟು [೧][ನೀ ಬಂದ][೧] ಕಾರ್ಯವು ರಾಯಯೇಳೆನುತ॥ ॥ ೬೮ ॥

ವಿಭೂತಿ ಪಟ್ಟವನು ರಾಯಗೆ
ತ್ರೈಭುವನವಾಳೆನುತ ಕಟ್ಟಿಸಿ
ಶೋಭನಂ ಭವತೆಂದು ಮಂತ್ರುಪದೇಶಮಂ ತುಂಬಿ।
ಬಾಬಾ ಹರಪುರದರಸಹುದೋ
ಭೂಭಾಗದಲಿ ಇದಿರಾಗಿ ನಿಲ್ಲುವ
ಭೂಭುಜರು ನಿನಗಿಲ್ಲ ಹಿಡಿ ಷಟ್ಸ್ಥಲವ ದೃಢವಾಗಿ॥ ॥ ೬೯ ॥

ಸ್ವಾಮಿ ಬುದ್ಧಿ ನಿರೂಪ ಷಟ್ಸ್ಥಲ
ಸ್ವಾಮಿ ನೀ ಪತಿ ನಾನೆ ನಿಜಸತಿ
ಈ ಮಹಾವ್ರತವಿರಲೆನುತ ಬಳೆದೊಡುವ ಹಸ್ತಕ್ಕೆ।
ಆಮೇಲೆ ನಸುನಗುತ ಚೀಲಳ
ಸ್ವಾಮಿ ಬದುಕೆಂದೆನುತ ಹರಸುತ
ನೀ ಮುಂದೆ ಪಟ್ಟಣಕೆ ನಡೆ ನಾವು ಬರುವೆವೆಂದೆಂಬ॥ ॥ ೭೦ ॥

ನಂಬುಗೆಯ ಕಟ್ಟಳೆ ನಿರೂಪವ
ನಿಂಬುಗೊಳಿಸುವ ಹೃದಯ ಕಮಲದಿ
ಸಂಭ್ರಮದಿ ಗಣಪರ್ವ ನಡಸುವ ಚೀಲಳೇಶ್ವರಗೆ।
ತುಂಬ ಧರಿಸುವ ಭೂಷಣಂಗಳ
ಶಂಭುವೇ ಸಲಹೆನುತನರ್ಘ್ಯದ
ಕಂಬಿ ಹಚ್ಚಡಗಳನು ಗುರುಸ್ಥಲದೈಗಳಿಗೆ ಕೊಡುವ॥ ॥ ೭೧ ॥

೧-೧ ನಿ ಬಂಧ(ಮೂ).

ಸಾಲು ಸಕಲಾತಿಗಳ ವಿರತರ
ಮೇಲುಪಂಕ್ತಿಗೆ ಕೊಟ್ಟು ಮಿಕ್ಕಿನ
ಬಾಲವಿರತರಿಗೆಲ್ಲ ಧೋತ್ರ ಕುಲಾವಿಗಳ ಕೊಡಿಸಿ।
ಶೀಲವಂತ ವ್ರತಸ್ಥರಿಗೆ ಘನ
ಮೇಲುತರ ಜವಳಿಗಳ ಹೊದ್ದಿಸಿ
ಚೀಲಳೇಶ್ವರಸ್ವಾಮಿ ಪಟ್ಟದ ಉಡುಗೊರೆಯಿದೆನಿಸಿ॥ ॥ ೭೨ ॥

ಹೇಳಿ ಕೇಳುವ ಹಿರಿಯರಿಗೆ ಬಹು
ಬಾಳ ಜವಳಿಯ ಕೊಡಿಸಿ ತೀರಿಸಿ
ಊಳಿಗದ ವಾಲಗದ ಕವಿಬುಧಜನಕೆ ದುಸ್ತಗಳ।
ವೀಳ್ಯಗಳ ತಿದ್ದಿಸುತ ಶೀಘ್ರದ
ಲೀಲೆ ಭೇರಿಯ ಹೊಯ್ಯೆನುತ ದೊರೆ
ಪಾಳಯಕೆ ಅಪ್ಪಣೆಯ ಕೊಡಿಸುವ ಬಸವ ಕೇಳೆಂದ॥ ॥ ೭೩ ॥

ಮಾಘಮಾಸದ [1][ಬಹುಳ][1] ಚತುರ್ದಶಿ
ಯಾಗಮೋಕ್ತ ವಿಧಾನದಿಂ ಶಿವ
ಯೋಗವಿಧಿಗಳ ನಡೆಸಿ ನಲಿವುತ ಬೇಗ ಪಯಣಕ್ಕೆ
ಸಾಗಿಸೆಲ್ಲರನಿಳಿಸಿ ಕೆಳಯಕೆ
ಶ್ರೀಗುರುವ ಪಲ್ಲಕ್ಕಿಯಲಿ ವಿನಿ
ಯೋಗದಲಿ ಬಸವಂತರಾಯನು ತೆರಳುವನು ಬಸವ॥ ॥ ೭೪ ॥

ಗುರುನಿರೂಪವ ಹರ ನಿರೂಪವ
ಪರಮ ಷಟ್ಸ್ಥಲಸೂತ್ರಶಿಖಿಯನು
ಶಿರದಿ ನೇತ್ರದಿ ಕರ್ಣಕಂಠದಲಿಟ್ಟು ಕರಸ್ಥಲದಾ।
ಕಿರುವೆರಳಿಗೇರಿಸುತಲಾ ಶರ
ಣರಿಗೆ ತಾ ನಮಸ್ಕರಿಸಿ ಹರಪುರ
ದೊರೆಯ ಹರಸುತ ಸ್ವಾಮಿ ಪಲ್ಲಕ್ಕಿಯನೆ ಹತ್ತುವನು॥ ॥ ೭೫ ॥

ಆನೆ ಕುದುರೆಯ ಮೇಲೆ ದೊಡ್ಡ ಮ
ಹಾನುಭಾವನನೇರಿಸುತ ರಥ
ನಾನ ಹೀಲಿಗಳಲ್ಲಿ ಮರಿದೇವರುಗಳನು ಹಚ್ಚಿ।
ತಾನು ಕುದುರೆಯನೇರಿ ಶ್ರೀಗಿರಿ

೧–೧ ಚೋಳ(ಮೂ).

ಸ್ಥನ ಕ್ಷೇತ್ರವ ಕಳೆದು ನೃಪನು ಮ
ಹಾನಂದ ಘನಕ್ಷೇತ್ರಕಿಳಿವನು ಬಸವ ಕೇಳೆಂದ॥ ॥ ೭೬ ॥

ಪಂಚಮುಖನವತಾರ ಪ್ರಕೃತಿ ಪ್ರ
ಪಂಚ ಮೀರಿದ ಮಹಿಮನೆನುತಲಿ
ಪಂಚಮಠದಯ್ಯಗಳು ಪಲ ಬಗೆ ಲಾಂಛನದ ಜನರು।
ಮಂಚ ಸುಪ್ಪತ್ತಿಗೆಯ ಸೆರಗನು
ಕುಂಚ ಕಾಳಂಜಿಗಳನೊಪ್ಪಿಸಿ
ಮುಂಚೆ ಕಾಣಿಕೆ ಇರಿಸಿ ವಂದಿಸಿ ತೆರಳುವರು ಸಥಳಕೆ॥ ॥ ೭೭ ॥

ಇರುಳ ಕಳೆದಲ್ಲಿಂದ ಮುಂದಕೆ
ದೊರೆಯ ಹರಪುರ ಸ್ಥಳಕೆ ಕಳುಹಿಸಿ
ಗುರುವಿಗುಡುಗೊರೆಗಳನು ಕಟ್ಟಿಸಿ ವರ್ತಮಾನಗಳ।
ಚರಣಕರಿಕೆಯ ಮಾಡೆನುತ ನೆರೆ
ಹಿರಿಯ ಚರಮೂರ್ತಿಗಳ ಕೂಡಿಸಿ
ತೆರಳುವರು ರಾಚ್ವಟ್ಟಿ ಮಹಾಸ್ಥಳಕಾಗಿ ಬಸವಣ್ಣ॥ ॥ ೭೮ ॥

ರಾಚವಟ್ಟಿಯ ಶರಭ ಶಿರಸವ
ಚಾಚಿ ಚೀಲಳಸ್ವಾಮಿ ಚರಣಕೆ
ಬಾಚಿ ಬಿಗಿಬಿಗಿದಪ್ಪಿ ರತ್ನದ ಹಾವಿಗೆಯ ಕೊಟ್ಟು।
ಈ ಚರಾಚರದೊಳಗೆ ಚರಿಸುವ
ನೀಚಕುಲ ಷಟ್ಸ್ಥಲಕೆ ಹೊರಗೈ
ಖೇಚರಕೆ ಭೂಚರಕೆ ನೀವೇ ಗುರುವೆನುತ ಹೊಗಳಿ॥ ॥ ೭೯ ॥

ಬಸವಂತನೃಪನಡ್ಡಬೀಳ್ವನು
ಕುಸಳ ಚರಮೂರ್ತಿಗಳೆರಗಿ ಹೊಸ
ಮಿಸುನಿ ಹಾವುಗೆಯುಡುಗೊರೆಯ ಮುಂದಿರಿಸಿ ಬಿನ್ನೈಸಿ।
ಅಸಮಗುರು ಚೀಲಾಳಸ್ವಾಮಿಗೆ
ಶಶಿಧರನ ಲೇಖನದ ಮೇರೆಗೆ
ಹೊಸ ಪಟ್ಟ ಸೊಗಸಾಯತು ಸ್ವಾಮಿ ಪರಾಕೆ ಚಿತ್ತಕ್ಕೆ॥ ॥ ೮೦ ॥

ಎಂದ ಹಿರಿಯರ ದೊರೆಯ ಮಾತಿಗೆ
ಅಂಧಕಗೆ ಹೆಳವನಿಗೆ ಕಣ್ಪದ
ಬಂದ ತೆರದಲಿ ಇಂಧನಾಪುರವರನು ಹರುಷದಲಿ।

ಎಂದಿಗಿಲ್ಲಿಗೆ ತೆರಳುವರು ಭಾ
ಪೆಂದ ಗುರು ವಾಕ್ಯಕ್ಕೆ ಫಾಲ್ಗುಣ
ಸಂದ ಚೈತ್ರಕೆ ಬರುತಹರೆ ಗುರುದರುಶನಕ್ಕೆನಲು। ॥ ೮೧ ॥

ಮಲೆಯ ಮದಗಜ ಮಲೆಯ ನೆನೆವೊಲು
ಮೊಲೆಯ ಮಕ್ಕಳು ಮಾತೆ ನೆನೆವೊಲು
ಲಲಿತ ಗಿಳಿ ಕೋಗಿಲೆಯು ಪಣ್ಫಲ ವನವ ನೆನೆವಂತೆ।
ಮಲವಿಜಯ ಶಮಿತಾಪುರೀಶನು
ನೆಲದೆರೆಯ ಬಸವಂತರಾಯನು
ಚೆಲುವ ಚೀಲಲಸ್ವಾಮಿ ಧ್ಯಾನದೊಳಿಹರು ಬಸವಣ್ಣ॥ ॥ ೮೨ ॥

ಕಮಲ ಸೂರ್ಯನ ಕುಮುದ ಚಂದ್ರನ
ರಮಣಿ ಪುರುಷನ ರಾಜ್ಯ ರಾಜನ
ಭ್ರಮರ ಗಂಧವ ಭಕ್ತ ಜಂಗಮಲಿಂಗದರುಶನವ।
ಶಮಿತಪುರಪತಿ ಹರಪುರೀಶನು
ಸಮಯ ಸಕಲ ವಿರಕ್ತ ಭಕ್ತರು
ವಿಮಲ ಚೀಲಲಸ್ವಾಮಿ ಬರವನೆ ಬಯಸಿ ನಿಂದಿಹರು॥ ॥ ೮೩ ॥

ಸರ್ವಲೋಕಕೆ ಸರ್ವಸಮಯಕೆ
ಸರ್ವಜ್ಞರಿಗೆ ಷಟ್ಸ್ಥಲದ ಘನ
ಸರ್ವಭಕ್ತ ವಿರಕ್ತರಿಗೆ ಶ್ರೀವೀರಶೈವರಿಗೆ।
ಸರ್ವಸುಖವನು ಸರ್ವಜಯವನು
ಸರ್ವಸಂಪದ ಸರ್ವಮೋಕ್ಷವ
ಸರ್ವಗುರು ಪಾಲಿಪುದು ಚೀಲಲಸ್ವಮಿ ಕರುಣದಲಿ॥ ॥ ೮೪ ॥

ಅಗ್ನಿನೇತ್ರ[ನು] ಶಿವೆಗೆ ನಂದಿಯು
ಪ್ರಾಜ್ಞ ಪ್ರಮಥರ ಸಭೆಗೆ ಪ್ರಭು ಶುಭ
ಲಗ್ನದಲಿ ವೃಷಭನಿಗೆ ನೀಲಾಂಬಕಿಗೆ ಶರಣರಿಗೆ।
ಸಂಜ್ಞೆಯಲೆ ಹರಪುರದಗಿರಿ ನಿ
ರ್ವಿಘ್ನ ಷಟ್ಸ್ಥಲ ಪೀಠನಿಜಗುರು
ಸುಜ್ಞಾನಿಯಾ ಬಸವಪ್ರಭು ಸುತಗೊರೆದ ಸೂತ್ರವಿದು॥* ॥ ೮೫ ॥

❖❖

* ಇತಿ ನವದಶ ಸ್ಕಂಧ ನಿರೂಪಣಂ. ಅಂತು ಉಭಯ ಪದಗಣನೆ ೯೭೩ಕ್ಕಂ ಮಂಗಳಶ್ರೀ

ವಿಂಶತಿ ಸ್ಕಂಧ

ರಾಗ : ಸಾವೇರಿ

ದೇವ ಷಟ್ಸ್ಥಲಶರಣಜನಸಂ
ಜೀವ ಚೀಲಳಸ್ವಾಮಿ ಮುಂದಿ
ನ್ನಾವ ದೇಶಕೆ ತೆರಳ್ವರರುಹೆನಲೊರೆದ ಗುರು ಸುತಗೆ॥

ಶ್ರೀಮದಚಲಕುಮಾರಿ ಮಾನಸ
ತಾಮರಸ ಚಿಜ್ಯೋತಿ ಷಟ್ಸ್ಥಲ
ಧಾಮ ಮಂಗಳ ಪ್ರಮಥಗಣ ಕೈಲಾಸಗಿರಿಪೂಜ್ಯ।
ಸಾಮವೇದಾಗಮ ಪುರಾಣ
ಸ್ತೋಮಸನ್ನುತಚರಣ ದಿವಿಜಲ
ಲಾಮ ಹರಿಯಜರೊಡೆಯ ಶಂಕರ ಸಲಹು ಮೂಜಗವ॥ ॥ ೧ ॥

ಚಿತ್ತಜಾರಿಯ ಚಿತ್ತಮಧ್ಯದ
ಚಿತ್ಕಳ ಪರಂಜ್ಯೋತಿವಿಗ್ರಹ
ಸತ್ತು ಚಿತ್ತಾನಂದ ಸಮರಸವಸ್ತು ಸಂಧಾನಿ।
ಮತ್ತೆ ಷಟ್ಸ್ಥಲಮಾರ್ಗ ಕರಸ್ಥಲ
ಚಿತ್ತಸುಕಲಿತ ದಾನ ಬೋಧಮ
ಹತ್ತರೋತ್ತರ ಗುರುವೆ ಚೀಲಳಸ್ವಾಮಿ ಶರಣಾರ್ಥಿ॥ ॥ ೨ ॥

ಸದಮಲಾತ್ಮಕರಿಂಗೆ ಸತ್ಯದಿ
ಹುದುಗಿ ಬಾಳುವರಿಂಗೆ ಷಟ್ಸ್ಥಲ
ದಧಿಕ ಶರಣರ ಚರಣಸೇವೆಯ ಮಾಳ್ಪ ಭಕ್ತರಿಗೆ।
ಚದುರ ಸತ್ಪುರುಷರಿಗೆ ಸದ್ಗತಿ

ಪದವ ತೋರುವರಿಂಗೆ ಸದಸದು
ಹೃದಯರಿಗೆ ಬೋಧಿಸುವುದೀ ಷಟ್ಸ್ಥಲಶಿವಾಯಣವ॥ ॥ ೩ ॥

ಆಣವಾದಿಯ ಕಚ್ಚಿದವರಿಗೆಪ್ರಾಣಸುಖವನೆ ಮಚ್ಚಿದವರಿಗೆ
ರಾಣಿವಾಸವ ಬಿಟ್ಟು ಪರಸತಿಗೊಲಿವ ಪಾಣ್ಬರಿಗೆ।
ನಾಣಿಗಂಜದೆ ನಡೆವ ಜನರಿಗೆ
ಭ್ರೂಣಹತ್ಯಕೆ ಹೇಸದವರಿಗೆ
ಕ್ಷೀಣರಿಗೆ ಬೋಧಿಸದಿರೀ ಷಟ್ಸ್ಥಲಶಿವಾಯಣವ॥ ॥ ೪ ॥

ಸರ್ಪಭೂಷಭಣ ಶಿವೆಗೆ ಜಿತ ಕಂ
ದರ್ಪ ಪ್ರಮಥರ ಸಭೆಗೆ ನಂದಿ ಮ
ಹಾ ಪ್ರಭುವೆ ವೃಷಭನಿಗೆ ನೀಲಾಂಬಕಿಗೆ ಗಣತತಿಗೆ।
ಅಪ್ರತಿಮ ಹರಪುರದ ಶ್ರೀಗಿರಿ
ತಪ್ಪಲಿನ ಷಟ್ಸ್ಥಲದ ಸದ್ಗುರು
ವಪ್ಪ ಬಸವಪ್ರಭು ಕುಮಾರನಿಗೊರೆದ ಸೂತ್ರವಿದು॥ ॥ ೫ ॥

ಧರೆಗಧಿಕ ಕಲ್ಯಾಣಪುರದಲಿ
ಶರಣಗಣ ವೃಷಭೇಂದ್ರ ಪ್ರಭುವಿನ
ಚರಣಕಮಲಕ್ಕೆರಗಿ ಕೀರ್ತಿಸಿ ಕೈಮುಗಿದು ನಿಂದು।
ಹರಪುರದ ಬಸವಂತರಾಯನು
ಪರಮಗುರು ಚೀಲಾಳಸ್ವಾಮಿಯ
ಚರಣಕೇನೊಪ್ಪಿಸುವನರುಹೆನಲೊರೆದ ಪ್ರಭು ನಗುತ॥ ॥ ೬ ॥

ಬಸವನೃಪ ಷಟ್ಸ್ಥಲದ ಪ್ರಭುವಿಗೆ
ಮಿಸರ ಚರಮೂರ್ತಿಗಳ ವಿಭುವಿಗೆ
ಅಸಲಿನಘಗಳನೇನವಿತ್ತನೆನುತ್ತ ಶಂಕಿಸುತ।
ಬಸವರಾಜನು ಚೆನ್ನಬಸವನು
ಅಸಮಶಿವಗಣ ಪ್ರಭುವಿಗೆರಗುತ
ಬೆಸಗೊಳಲು ಬೋಧಿಸಿದ ವಿವರವ ಮಗನೆ ಕೇಳೆಂದ॥ ॥ ೭ ॥

ಬೊಕ್ಕಸವ ಕಟ್ಟುವರ ಬಿರಿದಿನ
ಒಕ್ಕಣೆಯ ಬರೆವವಸರದ ಪ
ಲ್ಲಕ್ಕಿ ನಡೆದಡೆ ಮುಂದೆ ಹೊಗಳುವ ಭಟ್ಟರಿಬ್ಬರನು।

ಚೊಕ್ಕ ತೇಜಿಯನೆರಡ ಹೌದೆಯ
ನಿಕ್ಕಿದಾನೆಯನೊಂದ ದೀವಿಗೆ
ತಕ್ಕ ಊಳಿಗವಿರಿಸಿ ಹೋಗುವ ಬಸವ ಕೇಳೆಂದ॥ ॥ ೮ ॥

ಅಡಿಗೆ ಬಾಣಸಿಗರನು ನಾಲ್ವರ
ಪಡುಗ ಪಾಸಲೆ ಹಿಡಿವ ಜನರನು
ಕೊಡೆಯ ಸತ್ತಿಗೆ ಬೀಸಣಿಗೆ ಹಾವಿಗೆಯ ದೀವಟಿಗೆ।
ಹಿಡಿವ ಮಂದಿಯ ಹಾಸಿಗೆಯ ಜನ
ಬಿಡದಿಯೂಳಿಗದವರ ಭಿಕ್ತರ
ಗಡಿಗೆ ಕಾಲಾಡಿಗಳ ಮಡಗುವ ಬಸವ ಕೇಳೆಂದ॥ ॥ ೯ ॥

ಸದರಿನಾನೆಯ ಸದರಿನೊಂಟೆಯ
ಸದರಿನೆತ್ತುಗಳನ್ನು ನೂತ್ನದ
ಸದರ ಸಿಂಹಾಸನವನರ್ಘ್ಯದ ಢೇರ್ಯ ತಂಬುಗಳ।
ಚದುರ ನಿವಯೋಗಿಗಳನಿರ್ವರ
ನದರ ಹೇಳುವ ಜನರ ನಾಲ್ವರ
ಮುದದಲೊಪ್ಪಿಸಿ ಹೋಹ ನಗರಕೆ ಬಸವ ಕೇಳೆಂದ॥ ॥ ೧೦ ॥

ಒಂದೆ ಸಾವಿರ ಜಂಗಮವ ಗಣ
ವೃಂದಸಹಿತ ಮಹಾನುಭಾವರಿ
ಗಂದಣವ ವಹಿರಿಗಳ ವಾದ್ಯವ ಭೇರಿ ಸಮ್ಮೇಳ।
ನಂದಿ[೧][ಸ್ತಂ][೧]ಭವ ನಾನಾ ಬಿರುದನು
ಮುಂದುಲಿವ ಕಹಳೆಗಳ ತಂಬಟ
ಸಂಥಾನಿಗಳ ನೂರು ಮಂದಿಯ ನಿಲಿಸುವನು ಬಸವ॥ ॥ ೧೧ ॥

ಪೆಟ್ಟೆ ಪೆಟ್ಟೆಯ ಜವಳಿಗಳ ಜಗ
ಘಟ್ಟಿ ನಗನಾಣ್ಯಗಳ ಒಂಟೆಯ
ಕೊಟ್ಟು ಪಾದವ ಹಿಡಿದು ನಡೆಚಪ್ಪರವ ನಡೆಮಡಿಯ।
ಘಟ್ಟ ಬೆಟ್ಟದ ದಾರಿ ಮಾರ್ಗವ
ಕುಟ್ಟಿ ಸಮಸ್ಥಳ ಮಾಡಲೋಸ್ಕರ
ಕೊಟ್ಟು ಕಾಮಾಟವನು ತೆರಳುವ ಬಸವ ಕೇಳೆಂದ॥ ॥ ೧೨ ॥

೧–೧ ಸಂ(ಮೂ).

ದೇವ ಭಕ್ತರೊಳತಿಹಿತರ ಬಹು
ಸಾವಧಾನವ ಬಲ್ಲ ಹಿರಿಯರ
ಠಾವ ಠವಣೆಯ ನೀರು ನೆಲಗಳ ಕಂಡ ಪ್ರಾಜ್ಞರನು।
ಜೀವದಾ ಪರದೇಶ ಭಾಷೆಯ
ಠೀವಿಗಳ ತಿಳಿದಂಥ ಷಟ್ಸ್ಥಲ
ದೇವ ಚೀಲಳಸ್ವಾಮಿಗೊಪ್ಪಿಸಿ ಹೋದ ಬಸವಣ್ಣ॥ ॥ ೧೩ ॥

ಭೂಮಿಗಗ್ಗಳ ಹರಪುರದ ದೊರೆ
ಸ್ವಾಮಿ ಷಟ್ಸ್ಥಲಶರಧಿ ಸುರಮಣಿ
ಸೋಮಶೇಖರಮೂರ್ತಿ ಚೀಲಳಸ್ವಾಮಿ ನಿಜಭಕ್ತ।
ಕಾಮಧೇನುವ ಪರುಷ ಘಟ್ಟಿಯ
ನೇಮ ವ್ರತ ಛಲ ಶೀಲವಂತನು
ಕಾಮಿಸುವ ಜಂಗಮಕೆ ತವನಿಧಿ ಪ್ರಭುವೆ ಕೇಳಯ್ಯ॥ ॥ ೧೪ ॥

ಖೇಚರರ ಭೂಚರರ ಸಲಹುವ
ಈ ಚರಾಚರ ಜನರ ಪಾಲಿಪ
ಲೋಚನತ್ರಯ ರೂಪ ಚೀಲಳಸ್ವಾಮಿ ಸದ್ಗುರುವೆ।
ಲೋಚು ಜಡೆಮುಡಿವಳದಿಗಭ ನಿ
ಜಾಚರಣೆ ಚರಮೂರ್ತಿಗಳು ಸಹ
ರಾಚವಟ್ಟಿಯ ಬಿಟ್ಟು ಎಲ್ಲಿಗೆ ತೆರಳ್ವರವರುಗಳು॥ ॥ ೧೫ ॥

ಯಾಘಂಟಿಯನು ಕೊಲ್ಲಿಪಾಕಿಯ
ಬಾಗವಾಡಿಯ ಬಂಕನಗರಿಯ
ಬೇಗ ಮಖ್ಖೆಯ ದಿಲ್ಲಿಯವರಂಗಾದಿ ಭಕ್ತರಿಗೆ।
ಭೋಗಮೋಕ್ಷವನೀವುತಲ್ಲಿಂ
ಭಾಗನಗರವ ವಿಜಯಪುರ ಜನ
ರೋಗಗಳ ಪರಿಹರಿಸಿ ತೆಲುಗಾಣ್ಯ ತೆರಳುವರು॥ ॥ ೧೬ ॥

ಅಸಮ ರುಮ್ಮಿ ಮಿರಾಣಿ ದೇಶದಿ
ಪಸರಿಸುತ ಷಟ್ಸ್ಥಲವ ಬೋಧಿಸಿ
ಕುಶಲಭಕ್ತಿಗೆಲ್ಲ ತತ್ವುಪದೇಶಗಳನಿತ್ತು।
ಅಸದಳದ ಮಹ ದೌಲ್ತಬಾದಿಯ

ಕುಶಲಗೆಲಸವ ನೋಡಿಯಲ್ಲಿಂ
ದೆಸೆವ ಏಳೂರ್ಮಾಣಿಕೇಶ್ವರ ಸ್ಥಳಕೆ ಸಾಗುವರು॥ ॥ ೧೭ ॥

ಏಳೂರ ಶ್ರೀಮಾಣೀಕೇಶ್ವರ
ಏಳುವುದು ಕೈಲಾಸಕೆನುತಲಿ
ಹೇಳುವರು ಬಲ್ಲವರು ಶ್ರುತಿಮತ ಶಿವನ ನಿಜವಾಸ।
ಭಾಳಸಾಕ್ಷಿಯ ತೋರಿ ಷಟ್ಸ್ಥಲ
ದೇಳಿಗೆಯ ನೆಲೆಗೊಳಿಸಿಯಲ್ಲಿಂ
ದೇಳುವರು ಮಹಮಸಳೆ ಬಂಧುರ ಸ್ಥಳಕೆ ಬಸವಣ್ಣ॥ ॥ ೧೮ ॥

ಅಖಿಳದೇಶಕ್ಕಧಿಕಮುತ್ತರ
ದಖಿಳ ಭಕ್ತರಿಗಿತ್ತು ಮೋಕ್ಷವ
ಮುಕುರವೆನಿಪ ಶಿಖಾಕೊಳವ ಮೈಲಾಪುರವನೀಕ್ಷಿಸುತ।
ಅಖಿಳ ಚರಮೂರ್ತಿಗಳು ಭಕ್ತರ
ನಿಕರ ಸಹಗುರು ಚೆನ್ನಪಟ್ಟಣದ
ಸಕಲ ಶಿವಭಕ್ತರಿಗೆ ಷಟ್ಸ್ಥಲಮಾರ್ಗಗಳನರುಹಿ॥ ॥ ೧೯ ॥

ಭಾಳನೇತ್ರನ ರೂಪ ಷಟ್ಸ್ಥಲ
ಪೀಳಿಗೆಯ ಸದ್ಗುರುವರೇಣ್ಯಗೆ
ಬಾಳ ಭಕ್ತಿಯ ಮಾಡುವರು ಪ್ರಭೆ ಪ್ರಭು ನೃಪಾಲಕರು।
ಹೇಳಲಳವಲ್ಲಹಹ ಹರಪುರ
ಕಾಳಹಸ್ತಿಗೆ ಬರಲಿಕಾ ಹರ
ತಾಳಿ ಜಂಗಮರೂಪ ಹರುಷದಲಪ್ಪಿ ಕೊಂಡಾಡಿ॥ ॥ ೨೦ ॥

ಗೌಳ ಸರಗಳ ಪಂಚ [೧][ಪಾ][೧]ವಡ
ತೋಳ ಭುಜಬಲಕೀರ್ತಿ ಪದಕವ
ಮೌಳಿ ರತ್ನಕಿರೀಟಗಳ ಕಾಣಿಕೆಯ ಮಾಡುವನು।
ಕಾಳಿಯರಸನ ಲೀಲೆಯಲ್ಲವೆ
ಠೌಳಿಯಂಬರ ಬಾಯಿ ಬಿರಿಯವೆ
ಚೋಳ ಮಂಡಲಕಿಳಿವರಲ್ಲಿಂ ಬಸವ ಕೇಳೆಂದ॥ ॥ ೨೧ ॥

೧-೧ ಸ್ಥಾ(ಮೂ).

ಆಡಮಂಡಲ ಶಾಂತಮಂಡಲ।
ನೋಡಿ ನಲಿವುತ ಪಾಂಡ್ಯಮಂಡಲ
ಗೂಢ ಭಕ್ತರಿಗಿತ್ತು ಮುಕ್ತಿಯ ಷಟ್ಸ್ಥಲವನರುಹಿ।
ಕೂಡೆ ರಾಮೇಶ್ವರಕಿಳಿಯೆ ಶಿವ
ನೋಡಿ ಜಂಗಮ ರೂಪಿನಲಿ ಕೊಂ
ಡಾಡಿ ಷಟ್ಸ್ಥಲಬ್ರಹ್ಮಿ ನಮೊ ನಮೊಯೆನುತ ನಸುನಗುತ॥ ॥ ೨೨ ॥

ಮುತ್ತು ಮಾಣಿಕ ಪಚ್ಚೆ ನೀಲವ
ಕೆತ್ತಿಸಿರ್ದ ಕಿರೀಟಪದಕವ
ಮತ್ತೆ ಪಂಚ[ಪಾ]ವಡದ ಕಂಕಣವ ನವರತ್ನ।
ತೆತ್ತಿಸಿದ ಕರ್ಣಾವತಂಸವ
ನಿತ್ತು ವಂದಿಸಿ ಜಂಗಮಕೃತಿ
ನೂತ್ನತರ ಭೂಷಣವ ಕೊಡುವನು ಬಸವ ಕೇಳೆಂದ॥ ॥ ೨೩ ॥

ಮದನಹರ ನಿಜರೂಪಿನಲ್ಲಿಂ
ಮದುರೆಗೈದುವ ಚೊಕ್ಕನಾಥನು
ಇದಿರಾಗಿ ಬಲಗೊಂಬ ಜಂಗಮರೂಪಿನಲೆ ಬಂದು।
ಪದಪಯೋಜಕ್ಕೆರಗಿ ಮುತ್ತಿನ
ಸದೆ ರತ್ನಕೀರೀಟ ಪದಕವ
ನದರ ಮಾಡೊಪ್ಪಿಸುವ ಷಟ್ಸ್ಥಲಪ್ರಭುವೆ ಶರಣೆನುತ॥ ॥ ೨೪ ॥

ಪಂಚಮುಖನವತಾರನಲ್ಲಿಂ
ಕಂಚಿ ಘನಸ್ಥಳಕಿಳಿಯಲಾ ಶಿವ
ಕಂಚಿಪುರ ಪರಮೇಶ ಜಂಗಮವಾಗಿದಿರ ಬಂದು।
ಪಂಚಘಂಟೆಯ ಪ್ರಣಮ ಹಿರಿಯರ
ಮಿಂಚುತಿಹ ವೃಷಭಧ್ವಜಂಗಳ
ಕಂಚಿನೆರಕದ ಕಹಳೆಗಳನೊಪ್ಪಿಸುವ ಬಸವಣ್ಣ॥ ॥ ೨೫ ॥

ಚಂದಿ ಚಂದೀವಾರದೊಳಗಣ
ಇಂದುಧರ ಭಕ್ತರಿಗೆ ಷಟ್ಸ್ಥಲ
ದಂದ ಬೋಧೆಯನೊರೆದು ಹರಸುತಲರುಣಚಲಕಿಳಿಯೆ।
ಬಂದ ಘಳಿಗೆಯಲರುಣಚಲ ಶಿವ

ನಿಂದು ಜಂಗಮವಾಗಿ ನಮಿಸುತ
ತಂದೊಂದು ನೂತ್ನಗಳ ತೊಡಿಗೆಯ ಸ್ವಾಮಿಗೊಪ್ಪಿಸುವ॥ ॥ ೨೬ ॥

ಸಾಂಬ ಶಿವನವತಾರ ಶೀಘ್ರ ಚಿ
ದಂಬರಸ್ಥಳಕಿಳಿಯಲಾಕ್ಷಣ
ತಾಂ ಬಯಲೆ ರೂಪಾಗಿ ಜಂಗಮವೇಷಮಂ ಧರಿಸಿ।
ನಂಬಿ ಷಟ್ಸ್ಥಲಮೂರ್ತಿ ಗುರು ಪಾ
ದಾಂಬುಜಂಗಳಿಗೆರಗಿ ನುತಿಸಿ ಚಿ
ದಂಬರಸ್ಥಳ ಕ್ಷೇತ್ರಮಹಿಮೆಯ ಕೇಳ್ವ ಬಸವಣ್ಣ॥ ॥ ೨೭ ॥

ಭರದಿ ಹೊಗುವರು ಕುಂಭಕೋಣೆಯ
ಹರನು ಚರರೂಪಾಗಿ ಇದಿರಿಗೆ
ಬರುವ ನಮಿಸುವನೆರಡು ಚರಣಕೆ ಸರವ ಧರಿಸುವನು।
ಹರಳು ಕೆತ್ತಿದ ಉಂಗುರಂಗಳ
ಬೆರಳಿಗಿಡುವನು ಬೀಸಣಿಗೆಯನು
ಮೆರೆವ ಸತ್ತಿಗೆ ಸೂರೆಪಾನವ ಗುರುವಿಗೊಪ್ಪಿಸುವ॥ ॥ ೨೮ ॥

ಕುಂಭಕೋಣೆಯ ಬಿಟ್ಟು ಶೀಘ್ರದಿ
ಜಂಬುಕೇಶ್ವರಕಿಳಿದ ಕೂಡಲೆ
ಜಂಬುನಾಥನು ಜಂಗಮದ ವೇಷಗಳನಳವಡಿಸಿ।
ಸಂಭ್ರಮದಿ ಚೀಲಾಳಸ್ವಾಮಿ ಪ
ದಾಂಬುಜಂಗಳಿಗೆರಗಿ ನೂತ್ನ ಕ
ದಂಬ ಕಸ್ತೂರಿ ದಿವ್ಯಭೂಷಣಗಳನೆ ಒಪ್ಪಿಸುವ॥ ॥ ೨೯ ॥

ದ್ರಾವಿಡವ ಪರಿಸೋಸುತಲೆ ಗುರು
ದೇವಗವನಾಶೀಶ ಮಾಡುವ
ಸೇವೆಗಳ ಕೈಕೊಳುತ ಪೇರೂರಿಂಗಿಳಿಯಲೊಡನೆ।
ದೇವ ಪಟ್ಟೇಶ್ವರನರಿದು ಮಹ
ದೇವ ಜಂಗಮವಾಗಿ ನಮಿಸುತ
ಹಾವಿಗೆಯ ಬೆಳುಗೊಡೆಯ ಚೀಲಳಸ್ವಾಮಿಗೊಪ್ಪಿಸುವ॥ ॥ ೩೦ ॥

ನೀಲಕಂಧರರೂಪ ಪ್ರಭು ಮಲೆ
ಯಾಳದೇಶವ ಬಳಸಿ ಬೇಗದಿ

ನೀಲಗಿರಿದೇವೇಶ ಬಾಣಾಸುರನ ಗಿರಿ ತೊಡರಿ।
ಸಾಲುಗಿರಿಗಳ ಕಂಡು ಕಣಿವೆಯ
ಮೇಲಕೇರುತ ಸಕಲ ಕ್ಷೇತ್ರಕೆ
ಮೇಲೆನಿಪ ಶಿವಗಂಗೆಗಿಳಿವರು ಬಸವ ಕೇಳೆಂದ॥ ॥ ೩೧ ॥

ಗಂಗಧರ ಕಂಡಾಕ್ಷಣವೆ ನಿಜ
ಜಂಗಮದ ರೂಪಾಗಿ ಷಟ್ಸ್ಥಲ ಗ
ಣಂಗಳೊಡೆಯನ ಚರಣಕಮಲಕ್ಕೆರಗಿ ಕೈಮುಗಿದು।
ಜಂಗಮಕುಲಾಗ್ರಣಿಗೆ ಮಣಿಮಕು
ಟಂಗಳಾಭರಣಗಳ ಧರಿಸುತ
ಮಂಗಳಾರ್ತಿಯನೆತ್ತಿ ಹೊಗಳುವ ಬಸವ ಕೇಳೆಂದ॥ ॥ ೩೨ ॥

ಮೇಲು ಕೆಳಗಣ ಗತಿಯ ನೋಡಿ ವಿ
ಶಾಲತೀರ್ಥದ ಘನವ ಲಾಲಿಸಿ
ಬಾಲಜಂಗಮ ಪಾದತೀರ್ಥಕೆ ಸದೃಶವಲ್ಲೆನಿಸಿ।
ಶೀಲವ್ರತ ಸಂಪನ್ನ ಷಟ್ಸ್ಥಲ
ಲೋಲ ಭಕ್ತರಿಗೊರೆವುತಲ್ಲಿಂ
ಮೇಲೆ ವಾತುಲಪುರಕೆ ಇಳಿವರು ಬಸವ ಕೇಳೆಂದ॥ ॥ ೩೩ ॥

ಜಡೆ ಝಡಿವುತಲೆ ಹಸ್ತಪಾದವು
ನಡನಡುಗುತತಿ ನಸುನಗುತ ನುಡಿ
ತಡಬಡಿಸೆ ಕಡೆಗಣ್ಣಲುಕ್ಕುವ ಹರುಷ ರಸದಿಂದ।
ಎಡವೂರ ಯತಿವರದ ಸಿದ್ಧನು
ನಡೆತಂದು ಚೀಲಾಳಸ್ವಾಮಿಯ
ಅಡಿಗೆರಗುತಿರೆ ಬೇಗ ಹಸ್ತವ ಹಿಡಿದು ನಮೊಯೆನಲು॥ ॥ ೩೪ ॥

ತೆಗೆದು ಬಿಗಿಬಿಗಿದಪ್ಪಿ ಮುದ್ದಿಸಿ
ಸಗುಣ ನಿರ್ಗುಣ ಲೀಲೆಗೊಡೆಯನೆ
ಜಗವೆ ಲೀಲೆಯದಾಗೆ ಷಟ್ಸ್ಥಲ ಗುರುವೆ ನೀನೆನುತ।
ನಿಗಮ ದುರ್ಲಭ ಪ್ರಭುವ ಹೊರಗಳುತ
ನಗುತ ಭಸಿತವ ಧರಿಸಿ ನೊಸಲಿಗೆ
ತೆಗೆದು ತಕ್ಕೈಸುತ್ತ ಹಸ್ತವ ಮಸ್ತಕದೊಳಿಡುವ॥ ॥ ೩೫ ॥

ಹೊನ್ನಹಾವಿಗೆ ಜೋಡ ಹೊಳೆವ ಸು
ವರ್ಣದೆಲೆಯೊತ್ತುಗಳ ಮುತ್ತಿನ
ಬಿನ್ನಣದ ಚೀಲಗಳ ಬೀಸಣಿಗೆಗಳ ರಸಪಾತ್ರ।
ತನ್ನ ವಚನಾಮೃತದ ಟೀಕ ಮ
ಹೋನ್ನತದಲಿ ವಿಭೂತಿ ಘಟ್ಟಿಯ
ಚೆನ್ನ ಚೀಲಲಸ್ವಾಮಿಗೀವನು ಹರಸಿ ಸಿದ್ಧೇಶ॥ ॥ ೩೬ ॥

ಕೇಳಿ ಪ್ರಮಥರು ಷಟ್ಸ್ಥಲಧಿಪತಿ
ಚೀಲಳೇಶ್ವರ ಸ್ವಾಮಿಯಲ್ಲಿಂ
ದೇಳುವರು ಘನ ಗರಳನಗರಿಗೆ ಕಪಿನಿಪತಿ ಬೇಗ।
ತಾಳಿ ಜಂಗಮವಾಗಿ ಬರುವನು
ಭಾಳವನೆ ಚಾಚುವನು ಚರಣಕೆ
ಮೌಳಿಗೀವ ಕಿರೀಟ ಪದಕವ ಕೊರಳಿಗಿಕ್ಕುವನು॥ ॥ ೩೭ ॥

ದಷ್ಟದಾರಿದ್ರದಲಿ ಷಟ್ಸ್ಥಲ
ಶ್ರೇಷ್ಠವೆನುತಲಿ ಗರಳಪುರಪತಿ
ಸಾಷ್ಟಾಂಗವೆರಗುವನು ಚೀಲಳಸ್ವಮಿ ಶರಣೆನುತ।
ಸೃಷ್ಟಿ ಭಕ್ತರಿಗೆಲ್ಲ ಲಿಂಗ ಸು
ನಿಷ್ಠೆಗಳ ಬೋಧಿಸುತಲಲ್ಲಿಂ
ನೆಟ್ಟನೇ ತೆರಳುವರು ಬೆಟ್ಟದಪುರದ ಸ್ಥಳಕಾಗಿ॥ ॥ ೩೮ ॥

ಮಲ್ಲಿಕಾರ್ಜುನ ಕಾಣುತಾಕ್ಷಣ-
ದಲ್ಲೆ ಜಂಗಮವಾಗಿ ಷಟ್ಸ್ಥಲ
ದೊಲ್ಲಭನ ಶ್ರೀ ಚರಣಕಮಲಕ್ಕೆರಗಿ ಕೈಮುಗಿದು।
ಮೊಲ್ಲೆ ಮಲ್ಲಿಗೆ ಜಾಜಿ ಸಂಪಗೆ
ಸಲ್ಲಲಿತ ಪುಷ್ಪಗಳ ಘನತರ
ಪಲ್ಲಕ್ಕಿಯನು ಭೂಷಣಂಗಳ ಕೊಡುವ ಬಸವಣ್ಣ॥ ॥ ೩೯ ॥

ಮುಗಲಾಣ್ಯ ತೆಲಗಾಣ್ಯದೇಶದ
ಸುಗುಣ ಶಿವಭಕ್ತರಿಗೆ ಷಟ್ಸ್ಥಲ
ಬಗೆಯ ಬೋಧಿಸಿ ದ್ರಾವಿಡವ ಮಲೆಯಾಳಗಳ ಬಳಸಿ।
ನಗೆಮೊಗದ ಹ[೧][ದಿ][೧]ನಾಡ ಸೀಮೆಯ

೧-೧ ಶಿ(ಮೂ).

ಲಗಣಿತದ ಸದ್ಭಕ್ತ ಜನರಿಗೆ
ಸೊಗಸು ಮಿಗೆ ತತ್ವೋಪದೇಶವ ಕೊಡುತಲಲ್ಲಿಂದ॥ ॥ ೪೦ ॥

ಶೆಟ್ಟಿದೇಶವ ಬಳಸಿ ಘನತರ
ಶೆಟ್ಟಿ ಶಿವಭಕ್ತರಿಗೆ ಮೋಕ್ಷ
ಕೊಟ್ಟುವಲ್ಲಿಂ ಮೊರಸನಾಡಿನ ಭಕ್ತಿಗಳ ಸಲಿಸಿ।
ಪಟ್ಟನಾಳುವ ನೃಪನೃಪರೆ ಕೈ
ಕಟ್ಟಿ ಲಾಲಿಸುತಿಹರು ಷಟ್ಸ್ಥಲ
ಪಟ್ಟಗುರು ಚೀಲಾಳಸ್ವಾಮಿಯ ಬಸವ ಕೇಳೆಂದ॥ ॥ ೪೧ ॥

ಊರು ಊರಿಗೆ ಬಿನ್ನವತ್ತಳೆ
ಕೇರಿ ಕೇರಿಗೆ ಒಸಗೆ ಒಕ್ಕಣೆ
ವೀರಶೈವಾಚಾರ ಷಟ್ಸ್ಥಲಬ್ರಹ್ಮಿಗಳ ತೃಪ್ತಿ।
ಆರತಿಗಳೆತ್ತುವರು ಗುರು ಪದ
ವಾರಿಜಕ್ಕೆರಗುವರು ಇಹಪರ
ಕಾರಣಾತ್ಮಕ ಮೂರ್ತಿಯೆನುತಲೆ ಹೊಗಳುವರು ಬಸವ॥ ॥ ೪೨ ॥

ಬೆಂಗಳೂರಿನ ಬಳ್ಳಪುರ ಸ್ಥಳ
ಪುಂಗನೂರಿನ ಗುಮ್ಮಳಾಪುರ
ಶೃಂಗರದ ಹೊಸಕೋಟೆ ನರಸಾಪುರದ ಬಾವ್ಲೂರ।
ಮಂಗಳಸ ಶ್ರೇಷ್ಠಾಜ್ಯ ಘನ ನೆಲ
ಮಂಗಲದ ಭಕ್ತರಿಗೆ ಷಟ್ಸ್ಥಲ
ಸಂಗಸಮರಸವರುಹುವರು ಬಸವಣ್ಣ ಕೇಳೆಂದ॥ ॥ ೪೩ ॥

ಗುಬ್ಬಿ ಹೊಸಹಳ್ಳಿಗೆ ಬರುವರ
ಲೊಬ್ಬ ಶರಣನು ಬಂದು ಬೇಗದಿ
ತಬ್ಬಿ ಷಟ್ಸ್ಥಲಬ್ರಹ್ಮಿ ಚೀಲಳಸ್ವಾಮಿಯಡಿಗೆಡೆದು।
ಹಬ್ಬ ಕಣ್ಣಿಗೆ ಮನಸಿಗೆನುತಲಿ
ಉಬ್ಬಿ ಹೊಗಳುತ ಜಂಗಮಾರ್ಚನೆ
ಹೆಬ್ಬುಗಲಿನಲಿ ನಡೆಸುವರು ಬಸವಣ್ಣ ಕೇಳೆಂದ॥ ॥ ೪೪ ॥

ಸಲುವ ಭಕ್ತರಿಗೆಲ್ಲ ಷಟ್ಸ್ಥಲ
ಫಲಪದಂಗಳನರುಹಿಯಲ್ಲಿಂ

ಹುಲಿಕಲ್ಲ ಸ್ಥಳಕಿಳಿದು ಬರೆ ಗುರು ಚಿತ್ತದೇಶಿಕನು।
ಚೆಲುವ ಚೀಲಳಸ್ವಾಮಿ ಚರಣಕೆ
ನಲಿವುತೆರಗುತ ತಡೆದು ಚರವನು
ಲಲಿತ ಮೃಷ್ಟಾನ್ನದಲೆ ತಣಿಸುವ ಬಸವ ಕೇಳೆಂದ॥ ॥ ೪೫ ॥

ಮಾಗಡಿಯ ದೊರೆಗಿತ್ತು ಮುಕ್ತಿಯ
ಬೇಗ ಗೂಳೂರಿಂದ ಮುಂದಕೆ
ಹೋಗಿ ತುಮಕೂರಲ್ಲಿ ಭಕ್ತರ ಬಿನ್ನಗಳ ಸಲಿಸಿ।
ಸಾಗುವರು ಶ್ರೀ ಚನ್ನಪಟ್ಟಣಕೆ
ಶ್ರೀಗುರುವೆ ಮಳವಳ್ಳಿಯಿಂದಲಿ
ಭೋಗನದಿ ಶ್ರೀರಂಗಪಟ್ಟಣಕೈದುವರು ಬಸವ॥ ॥ ೪೬ ॥

ಶ್ರೀರಂಗಪಟ್ಟಣದ ದೊರೆಗಳು
ಸಾರಂಗಕರ ಚಕ್ರಪಾಣಿಯು
ವೀರಶೈವಾಚಾರ ಷಟ್ಸ್ಥಲಚಕ್ರವರ್ತಿಗೆರಗಿ।
ಹಾರ ಚೌಕುಳಿ ಪದಕ ಕಂಕಣ
ತೋರ ಮುತ್ತಿನ ಪಂಚ ಸರಗಳ
ಸಾರ ಪರಿಂಳ ದ್ರವ್ಯ ದಿವ್ಯಾಂಬರವ ನಮಿಸುವರು॥ ॥ ೪೭ ॥

ಶೃಂಗಾರಕಿದೆ ಶರಧಿಯೋ ಶ್ರೀ
ರಂಗನಗರಿಯೊ ಸಿರಿಯೊ ಸೊಬಗೊ ಗ
ಣಂಗಳಿಗೆ ನಿಜವಾಸವೋ ಷಟ್ಸ್ಥಲದ ಘನಸುಖವೊ।
ಮಂಗಳದ ಮಹಮನೆಯೊ ನೂತ್ನ ಬೆ
ಡಂಗಿಯರ ಮುಖದರ್ಪಣವೊ ಎನ
ಲಂಗಜನ ರತಿ ಜರೆಯನಾಡುವ ಜನಪದವ ಕಂಡು॥ ॥ ೪೮ ॥

ರಾಜಭಕ್ತಿಗೆಲ್ಲ ಷಟ್ಸ್ಥಲ
ಬೀಜ ಭಕ್ತಿಯನರುಹಿ ಹರುಷದಿ
ರಾಜರಾಜರು ಮಾಡಿದುಚಿತವ ಕೈಕೊಳುತ ಬೇಗ।
ರಾಜಧರನವತಾರ ಜಂಗಮ
ರಾಜಗುರು ಚೀಲಾಳಸ್ವಮಿಯ
ಪೌಜು ನಡೆವುದು ಉತ್ರಕಭಿಮುಖವಾಗಿ ಬಸವಣ್ಣ॥ ॥ ೪೯ ॥

ಕೆಕ್ಕೇರಿ ಸಾಸಲನೆ ಸಾಧಿಸಿ
ತಕ್ಕ ಭಕ್ತರಿಗಿತ್ತು ಮೋಕ್ಷವ
ನಕ್ಕರಿಂದಲಿ ಬಂದು ಚನ್ನರಾಯಪಟ್ಟಣವ।
ಹೊಕ್ಕು ಭಕ್ತರ ಭಕ್ತಿ ತೀರಿಸಿ
ಚಕ್ಕನೇ ಹಾಸನಕೆ ಬರಲಾ
ಮುಕ್ಕಣ್ಣ ಸಿದ್ಧೇಶ ಜಂಗಮರೂಪಿನಲಿ ಬಂದು ॥ ೫೦ ॥

ಕವಚ ಕಂಥೆ ಕಿರೀಟ ಕಂಕಣ
ಕಿವಿದೊಡಿಗೆ ಭುಜಕೀರ್ತಿ ಗೌಳವ
ನವರತ್ನ ಭೂಷಣವ ದಿವ್ಯಾಂಬರವ ನಮಸ್ಕರಿಸಿ।
ಭವರಹಿತ ಷಟ್ಸ್ಥಲವರೇಣ್ಯನ
ನವವಿಧದ ಭಕ್ತಿಯಲಿ ಕೀರ್ತಿಸಿ
ತವಕಧಿಕ ಕಟ್ಟಿಗೆಯ ಸಂಗನು ಸಿದ್ಧ ಬಯಲಾಗೆ॥ ॥ ೫೧ ॥

ಫಾಲಲೋಚನ ರುದ್ರನಲ್ಲಿಂ
ಬೇಲೂರ ಸ್ಥಳಕಿಳಿಯಲಾಕ್ಷಣ
ನೀಲವರ್ಣಸಿತಾಂಗ ಚೇಲಳಸ್ವಾಮಿಯಡಿಗೆರಗಿ।
ಮೇಲು ರತ್ನಕಿರೀಟ ಪದಕ ವಿ
ಶಾಲ ಕಂಕಣ ಕರ್ಣಕುಂಡಲ
ಸಾಲು ಸಕಲಾತಿಗಳ ನಮಿಸುವ ಬಸವ ಕೇಳೆಂದ॥ ॥ ೫೨ ॥

ತುರುವೆಕೆರೆಯನು ನಾಗಮಂಗಲ
ವರಳುಗುಪ್ಪೆಯ ಹೊಸಕೆರೆಯ ಘನ
ತರದ ಹಾಗಲವಾಡಿ ನೃಪತಿಯ ಭಕ್ತಿಗಳ ಸಲಿಸಿ।
ತಿರುಗಿ ನಾಗರನವುಲೆಯಣತೆಯ
ಕರದ ಜಂಬೂರಭವ ಭಕ್ತರ
ಹರಕೆಗಳ ಕೈಕೊಳುತ ಗಂಡಸಿಗಾಗಿ ಶೀಘ್ರದಲಿ॥ ॥ ೫೩ ॥

ಗಾಳಿಪೂಜೆಯ ಗಿರಿಯನೇರುತ
ಭಾಳಸಿದ್ಧರ ಭಕ್ತಿಗೊಲಿವುತ
ಹೇಳಿಷಟ್ಸ್ಥಲಮಾರ್ಗ ಬೋಧೆಯ ಘನಮಹತ್ವಗಳ।
ಕೇಳಿದವರಿಗೆ ನಿಜವ ತೋರುತ

ಜಾಳಿಸುತ ಸಿದ್ಧಿಗಳ ಸಿದ್ಧರ
ತೂಳಗಳ ಹಾರಿಸುತಲವರಿತ್ತುಚಿತಗಳ ಕೊಂಡು। ॥ ೫೪ ॥

ಸಕ್ಕರೆಯಪಟ್ಟಣವ ನೋಡುತ
ಲೆಕ್ಕಡಿಗೆ ಬಂದಿಳಿವರಾಕ್ಷಣ
ಎಕ್ಕಡಿಯ ಮಲ್ಲೇಶ ಜಂಗಮವಾಗಿ ಬೇಗದಲಿ।
ಮುಕ್ಕಣ್ಣ ಚೀಲಾಳಸ್ವಮಿಗೆ
ಚಕ್ಕನೇ ಬಂದೆರಗಿ ಘನ ಪ
ಲ್ಲಕ್ಕಿ ಬೆಳುಗೊಡೆ ಹಾವಿಗೆಯನೊಪ್ಪಿಸುವ ಬಸವಣ್ಣ॥ ॥ ೫೫ ॥

ಶಿವಮೊಗ್ಗೆಯನು ಬೆಂಕಿಪುರವನು
ವಿವರಿಸುತಲಾ ಚನ್ನಗಿರಿಯನು
ತವನಿಧಿಯ ಹೊನ್ನೂರ ಹೊನ್ನಾಳಿಯ ಮಠವ ಹೊಕ್ಕು।
ಶಿವನ ಭಕ್ತರಿಗಿತ್ತು ಮುಕ್ತಿಯ
ತವರಮನೆಯೆಂದೆನುತ ಹರಸುತ
ಲವಗಡದ ಲಕ್ವಳ್ಳಿಗಿಳಿವರು ಬಸವ ಕೇಳೆಂದ॥ ॥ ೫೬ ॥

ಅಳಿಕಲೋಚನಮೂರ್ತಿಯಲ್ಲಿಂ
ಹೊಳೆಯ ಸೋಂಪುರಕಿಳಿದ ಕೂಡಲೆ
ಎಳೆಯ ಚಂದ್ರನ ಸೂಡಿದಭವನು ಜಂಗಮದ ರೂಪು।
ತಳೆದು ಚೀಲಳಸ್ವಾಮಿಯಂಘ್ರಿಗೆ
ಹೊಳೆವ ಮುಕುಟವ ಚಾಚಿ ಜಂಗಮ
ಕುಳವ ಮೃಷ್ಟಾನ್ನದಲೆ ತಣಿಸುವ ಬಸವ ಕೇಳೆಂದ॥ ॥ ೫೭ ॥

ಸದಮಲಾತ್ಮಕ ಸಕಲಗುಣಯುತ
ಮದನಹರ ಚೀಲಾಳಸ್ವಾಮಿಯ
ನಿದಿರುಗೊಳ್ವನು ಕೆಳದಿಭೂಪತಿ ಸಕಲಸಂಭ್ರಮದಿ।
ಪದಪಯೋಜಕ್ಕೆರಗಿ ಕೀರ್ತಿಸಿ
ಬದುಕಿದೆ ಮಹಾಗುರುವೆಯೆನುತಲಿ
ಮದಗಜದ ಮೇಲೇರಿಸುತ ನಿಜಪುರಕೆ ತೆರಳಿಸುವ॥ ॥ ೫೮ ॥

ಏಣಾಂಕಪುರಪತಿಯ ಭಕ್ತಿ ಪ್ರ
ವೀಣತೆಗೆ ಸರಿಗಾಣೆ ಷಟ್ಸ್ಥಲ

ಪ್ರಾಣಜಂಗಮಕೆಲ್ಲ ಮೃಷ್ಟಾನ್ನದಲೆ ದಣಿಸುವನು।
ಮಾಣಿಕದ ಪದಕವನು ವಜ್ರವ
ಪೋಣಿಸಿದ ಘನಯೋಗವಟ್ಟಿ
ನಾಣಿ ಮುತ್ತಿನ ಸರವ ಹವಳದ ಲಾಕುಲವ ಕೊಡುವ॥ ॥ ೪೯ ॥

ಬೀಸಣಿಗೆಗಳ ಬೆಳ್ಳಿ ಹಾವುಗೆ
ಲೇಸೆನಿಪ ಕಾಳಂಚಿ ಕುಂಚ ಪ್ರ
ಕಾಶಿಸುವ ನವರತ್ನಖಚಿತದ ಕೊಡೆಯ ಪಲ್ಲಕ್ಕಿ।
ಸೂಸುತಿಹ ಕಾರಂಜಿ ಹವಳದ
ಹಾಸುಮಂಚ ಒರಂಗಿ ಪೀಠವ
ದೇಶಿಕೇಂದ್ರಗೆ ಪಾದವಿಡಿದನು ಕೆಳದಿನೃಪ ಬಸವ॥ ॥ ೬೦ ॥

ಕೆಳದಿ ನೃಪ ಚೀಲಾಳಸ್ವಾಮಿಗೆ
ಹೊಳೆವ ದಿವ್ಯಾಂಬರವ ಹೊದಿಸುವ
ತಳತಳಿಪ ವಸ್ತ್ರಗಳ ಚರಪತಿಗಳಿಗೆ ಒಪ್ಪಿಸುವ।
ಎಳೆಯ ವಿರತರಿಗೆಲ್ಲ ಧೋತ್ರವ
ತಿಳಿಗಾವಿ ದುಪ್ಪಟಿಯ ಹೂವಿನ
ನಳನಳಿಪ ವಸ್ತ್ರಗಳ ಕೊಡುವನು ಬಸವ ಕೇಳೆಂದ॥ ॥ ೬೧ ॥

ಬಿದರೂರ ಭೂಪತಿಗೆ ಷಟ್ಸ್ಥಲ
ಪದವ ಶಿವತತ್ತ್ವೋಪದೇಶವ
ನೊದವಿ ಬೋಧಿಸಿಯಂಗಲಿಂಗ ಸ್ವರೂಪ ಸಮರಸದ।
ವಿಧಿಯ ತೋರಿಸಿ ಜ್ಞಾನ ಕ್ರೀಗಳ
ಹುದುಗಿ ಕರಸ್ಥಳದಿಟ್ಟ ಲಿಂಗದಿ
ಮುದದಿ ಬಾಳೆಂದೆನುತ ಹರಸುತ ಸಾಗರವ ನೋಡಿ॥ ॥ ೬೨ ॥

ಸಾಗರದ ಶಿವಭಕ್ತರಿಗೆ ಶಿವ
ಯೋಗಮಾರ್ಗವನರುಹಿಯಲ್ಲಿಂ
ಬೇಗ ಸೊರಬಕೆ ಬರಲು ಭಕ್ತರು ಸ್ವಾಮಿಯಡಿಗೆರಗಿ।
ಬೇಗ ಗಣಪರ್ವಗಳ ತೀರಿಸ
ಲಾಗ ಭಕ್ತರಿಗಿತ್ತು ಮೋಕ್ಷವ
ಹೋಗಿ ಸೋದೆಯ ಭೂಪನರ್ತಿಯ ಸಲಿಸುವರು ಬಸವ॥ ॥ ೬೩ ॥

ಸೋದೆ ಭೂಪತಿ ಕೊಡುವ ಸ್ವಾಮಿಗೆ
ಪಾದಸರ ಪಲ್ಲಕ್ಕಿ ಪಲ ಬಗೆ
ನಾದ ಪೂಜೆಯನಘವ ನೂತ್ನದ ಕನಕಪಾತ್ರೆಗಳ।
ಚಾದರವ ಸ್ವಾಮಿಗಳ ಸುಳುಹಿನ
ಸೋದಿಸಿದ ಅಪರಂಜಿ ಪೀಠವ
ನಾದರದಲೊಪ್ಪಿಸುವ ಚೀಲಳಸ್ವಾಮಿಯಡಿಗೆರಗಿ॥ ॥ ೬೪ ॥

ಉಳಿವೆ ಮಹಮನೆವೊಕ್ಕುಯಲ್ಲಿಂ
ತಿಳಿವಳ್ಳಿ ಸ್ಥಳಕಿಳಿದು ಶರಣರ
ಬಳಲಿಕೆಯ ಪರಿಹರಿಸಿ ಭಕ್ತರಿಗಿತ್ತು ಸಂಪದವ।
ಘಳಿಲನೇ ಬನವಸೆಗೆ ಬರಲಾ
ಗಳಿಕ ನೇತ್ರನು ಮಧುಕನೇತ್ರನು
ಎಳೆಯ ಜಂಗಮನಾಗಿ ಚೀಲಳಸ್ವಾಮಿಯಡಿಗೆಡೆದು॥ ॥ ೬೫ ॥

ಚಿನ್ನ ಬೆಳ್ಳಿಯ ಜ್ಯೋತಿ ಸ್ತಂಭವ
ರನ್ನ ಬಿಗಿದೆಲೆಯೊತ್ತ ಮುತ್ತಿನ
ಪನ್ನೆ ಬಂಧದ ಚೀಲಗಳ ನವನೂತ್ನ ರಸಪಾತ್ರೆ।
ಹೊನ್ನ ಲಹಾವಿಗೆ ಜೋಡ ಲಾಕುಳ
ವನ್ನು ಕೆಲಸದ ಬೆತ್ತವೆರಡ ಮ
ಹೊನ್ನತದ ವಸ್ತ್ರಾಭರಣಗಳನೊಪ್ಪಿಸುವ ಬಸವ॥ ॥ ೬೬ ॥

ಜಂಬೂರ ಘನ ಬಳ್ಳಿಗಾವಿಯ
ಸಂಭ್ರಮದ ಹಾವೇರಿ ಹದಡೆಯ
ಕುಂಭಿನಿಗೆ ಗುರುವಾದ ಲಕುಮೇಶ್ವರದ ಸಿರಹಟ್ಟಿ।
ಯೆಂಬ ಸುರಪತಿ ಭಕ್ತಿ ಸಲಿಸುತ
ಡಂಬಳಕೆ ನಡೆತಂದು ಕೆಲರಿಗೆ
ಶಾಂಭವಿಯ ಬೋಧಿಸುತ ಷಟ್ಸ್ಥಲ ಭಕ್ತರಿಗೆ ಬಸವ। ॥ ೬೭ ॥

ಹುನಗುಂದವನು ಪಟ್ಟಕಲ್ಲನು
ಅನುನಯದ ಕೊಪ್ಪಳವ ಗದುಗನು
ಹನುಮಸಾಗರ ಸುರಪುರ ಕಲ್ಯಾಣ ಕಲುಬುರಿಗೆ।
ಘನತರದ ಮುದಗಲ್ಲ ದೇಶದ
ವಿನಯದಿಂದಲಿ ನೋಡಿ ನಲಿವುತ
ಮನಸಿಗಿನಿದಾಗಿರ್ದ ರಾಚೂರಿಂಗೆ ತೆರಳುವರು। ॥ ೬೮ ॥

ಅಲ್ಲಿಗಲ್ಲಿಗೆ ಭಕ್ತಿ ಬಿನ್ನಹ
ವಲ್ಲಿಗಲ್ಲಿಗೆ ಪರ್ವ ಪಾಡ್ಯಗ
ಳಲ್ಲಿಗಲ್ಲಿಗೆ ಪಾದಪೂಜೆ ಪುರಾಣ ಮೆರವಣಿಗೆ।
ಎಲ್ಲ ದೇಶದ ಭಕ್ತರರ್ತಿಯ
ನುಲ್ಲಸದಿ ಕೈಕೊಳುತ ಷಟ್ಸ್ಥಲ
ದೊಲ್ಲಭನು ಚೀಲಾಳಸ್ವಾಮಿಯು ಕಾಶಿಗೈತರಲು॥ ॥ ೬೯ ॥

ಕಾಶಿಪುರಪತಿ ವಿಶ್ವನಾಥ ವಿ
ಲಾಸದಿಂ ಚರರೂಪಧರಿಸುತ
ಶ್ರೀಷಟ್ಸ್ಥಲದ ಗುರುವಿಗೆರಗಿ ಸಮಸ್ತ ನೂತನದ।
ಭೂಷಣಂಗಳನಿತ್ತು ಕೀರ್ತಿಸಿ
ಶ್ರೀಸದಾಶಿವನಂತರಂಗ ಪ್ರ
ಕಾಶ ನಿರುಪಮ ಜ್ಯೋತಿ ಚೀಲಳಸ್ವಾಮಿ ಶರಣೆನುತ॥ ॥ ೭೦ ॥

ರುದ್ರಾಕ್ಷಿ ಮಕುಟವನು ಕಂಥೆಯ
ರುದ್ರಾಕ್ಷಿ ಕಂಕಣವ ಹಾರವ
ರುದ್ರಾಕ್ಷಿ ಕರ್ಣಾವತಂಸವ ನವ್ಯ ಜಪಸರವ।
ರುದ್ರಾಕ್ಷಿ ಘನ ಪಂಚಸರವನು
ರುದ್ರಾಕ್ಷಿ ಮಂಟಪವ ಕಲಿಯುಗ
ರುದ್ರ ಚೀಲಳಸ್ವಾಮಿಗೊಪ್ಪಿಸಿ ಕೊಡುವ ಬಸವಣ್ಣ॥ ॥ ೭೧ ॥

ಸಟೆ ಇದೆಲ್ಲವೆನುತ್ತ ಹಳಿವರ
ತುಟಿಯೆ ಬಿರಿವುದು ಸೋಟೆ ಸೀಳ್ವವು
ಪಟಪಟನೆ ಕಣ್ಣೊಡೆದು ಬೀಳವವು ಜಿಹ್ವೆ ಕಿಲ್ವಿಷವೊ।
ಕಟಕಿಗಳ ಹಲ್ಲೆಲ್ಲ ಭಗಣವು
ಘಟವೆ ಪಾಪದ ಮೊಟ್ಟೆ ಶ್ರುತಿಮತ
ದಿಟ ಕಣಾ ಗುರುವಾಕ್ಯವಿದು ಬಸವಣ್ಣ ಕೇಳೆಂದ॥ ॥ ೭೨ ॥

ಕಲಿಯೇನು ೧[ಕೃತವೇನು]೧ ಸ್ವಾಮಿಯ
ಸಲುಗೆಯುಳ್ಳ ಮಹಾನುಭಾವಗೆ
ಶಿಲೆಯ ಲಿಂಗದಿ ಶಿವನು ಜಂಗಮನಾಗುವನೆ ಎನಲು।

೧–೧ ಕೃತಿಯೇನು(ಮೂ).

ಎಲವೋ ಕೂಡಲಸಂಗ ಕಲಿಯ
ಲ್ಲೊಲಿಯನೇ ನೀ ಸಿತಗ ಶ್ರುತಿಮತ
ಹಲವು ಬಿಂದುಜರೇನ ಬಲ್ಲರು ಬಸವ ಕೇಳೆಂದ॥ ॥ ೭೩ ॥

ಏಕಾಂತರಾಮನಿಗೆ ಪರಶಿವ
ನೇಕೋರಾಮಗೆ ಸಿದ್ಧರಾಮಗೆ
ಶ್ರೀ ಕರಸ್ಥಲ ಶಾಂತ ನೀಲಾಂಬ[ಕಿ]ಗೆ ಗುರು ಚಿತ್ತ।
ಲೋಕರಕ್ಷಕ ಕಿನ್ನರಯ್ಯಗೆ
ಏಕೋದೇವ ಹರೀಶರಯ್ಯಗೆ
ಸಾಕಾರಲಿಂಗದಲೆ ಜಂಗಮನಾಗಿ ಬೆಸಗೊಳನೆ॥ ॥ ೭೪ ॥

ಚೇರಮಾಂಕಗೆ ನಂಬಿಯಣ್ಣಗೆ
ಧಾರುಣಿಯ ಚೋಳಾಂಶನೃಪರಿಗೆ
ವೀರಚೋಳಿಗೆ ಕೋಳೂರಕ್ಕಗೆ ಅರಿಯಮನೃಪಗೆ।
ಹೇರೂರಮ್ಮಗೆ ಹಿರಿದೆ ಇದೆಕೋ
ಮಾರಹರ ಶಿವಲಿಂಗ ಗರ್ಭವ
ತಾರದಲಿ ಚರವಾಗಿ ನುಡಿಯನೆ ಬಸವ ಕೇಳೆಂದ॥ ॥ ೭೫ ॥

ಅಂದೇನು ಇಂದೇನು ಅಭವಗೆ
ಹಿಂದೇನು ಮುಂದೇನು ಮೃಡನಿಗೆ
ಒಂದೆ ಚಿತ್ತದೊಳಿರುವ ಶರಣರ ಒಳಹೊರಗೆ ಬೆರಸಿ।
ಬೆಂದ ಸಂಸ್ಕೃತಿ ಪಾಶಬದ್ಧರು
ನಿಂದಿಸಲು ಷಟ್ಸ್ಥಲದ ಶರಣರ
ಹಂದಿ ಗರ್ಭವೆ ಸಾಕ್ಷಿ ಶ್ರುತಿಮತ ಬಸವ ಕೇಳೆಂದ॥ ॥ ೭೬ ॥

ಹರನ ಚಿತ್ತದ ಕಳೆಯೆ ಷಟ್ಸ್ಥಲ
ಗುರುವಾಗಿಯವತರಿಸಿ ಹರಹರ
ಧರೆಗೆ ಚೀಲಳಸ್ವಾಮಿನಾಮವ ಧರಿಸಿಯಾಚರಿಸಿ।
ಶರಣರಿಗೆ ಸದ್ಭಕ್ತರಿಗೆ ಕರ
ಸರಸಿಜದ ಶಾಂತೇಶನಲಿ ಮನ
ವೆರಸಿ ಬಾಳುವ ಸುಖವನರುಹುವ ಬಸವ ಕೇಳೆಂದ॥ ॥ ೭೭ ॥

ಕಾಶಿದೇಶವ ಕಳೆದು ಬಗೆಬಗೆ
ದೇಶಗಳನಾರೈದು ದಕ್ಷಿಣ
ದೇಶಕಭಿಮುಖವಾಗಿ ಎಡ ಬಲ ರಾಜ್ಯಗಳ ಬಳಸಿ।
ಈಶ ಭಕ್ತರಿಗಿತ್ತು ಮೋಕ್ಷವ
ದೇಶಿಕೇಂದ್ರರ ಕೂಡಿ ಚರಿಸುತ
ಲೇಸೆನಿಪ ಕಾಶ್ಮೀರದೇಶಕೆ ತೆರಳುವರು ಬಸವ॥ ॥ ೭೮ ॥

ಮೊರೆವ ಭೇರಿ ಮೃದಂಗ ಘಂಟೆಯ
ಕರೆವ ಬಿರಿದಿನ ಕಹಳೆ ಶಂಖಿನ
ಮೆರೆವ ನಂದಿಧ್ವಜದ ವಾದ್ಯದ ಭಟರ ಹೊಗಳಿಕೆಯ।
ಶರಣಗಣ ಪರಿಚರರ ಸಂದಣಿ
ಕರಿತುರಗ ರಥಕಾಲದಳ ಸಹ
ದೊರೆ ಶೀವಿ ಷಟ್ಸ್ಥಲದ ಗುರುವಿಗೆ ಬಸವ ಕೇಳೆಂದ॥ ॥ ೭೯ ॥

ಎಳಮಲೆಯ ನೆಲುವಿಗೆಯ ನೋಡುತ
ತಿಳಿಗಾವಿ ನಾಗಾವಿಗಿಳಿವುತ
ಬೆಳೆದ ಬೋಳೆಯಗಾವಿ ಸೂರೆಯಗಾವಿಗಳನುಳಿದು।
ಅಳವಂಡೆ ತಳಕಲ್ಲ ಕಳೆವುತ
ಬಳಸಿ ಕನಕಿರಿ ಮಾನುವೆಗಳನು
ಬಳಗನೂರಿನ ಒಸಗೆ ಭಕ್ತರ ಭಕ್ತಿಯನು ಕೊಳುತ॥ ॥ ೮೦ ॥

ಗಿರಿದುರ್ಗಪುರ ಗ್ರಾಮ ಗಡಿಗಳ
ನೆರೆದ ಪೇಟೆಯ ಪಟ್ಟಣಂಗಳ
ದೊರೆಯ ಭಕ್ತರ ಭಕ್ತಿಗಳ ಕೈಲೊಳುತಲಲ್ಲಲ್ಲಿ।
ದರಿಯ ಕೆಳಗಣ ಮೇಲು ರಾಜ್ಯದ
ಪರುಠವಣೆಗಳ ಕಂಡು ಹರಸುತ
ಪರಮಗುರು ಚೀಲಾಳಸ್ವಾಮಿಯು ಶರಣರುತ್ಸಹದಿ॥ ॥ ೮೧ ॥

ತುಂಗಭದ್ರೆಯ ದಾಂಟಿ ಷಟ್ಸ್ಥಲ
ಜಂಗಮವೆ ಜಯವೆನುತ ಕರಸ್ಥಲ
ಲಿಂಗಪೂಜೆಗಳಾಗೆ ಪಾಕಗಳಾದವಾಕ್ಷಣದಿ।
ಮಂಗಳಾರ್ತಿಯನೆತ್ತಿ ಬೇಗ ಗ

ಣಂಗಳೆಲ್ಲರು ಸಲಿಸೆ ಭಕ್ತರು
ಜಂಗಮದ ಶೇಷಗಳ ಸೇವಿಸಿ ಹರುಷದಿಂ ನಗುತ॥ ॥ ೮೨ ॥

ಹೊಳೆಸಾಲಿನೆಡಬಲನ ನೋಡುತ
ಲಳಿಕಲೋಚನ ಭಕ್ತರಿಗೆ ಸ್ಥಳ
ಕುಳದ ನಿರ್ಣಯವರುಹಿ ಷಟ್ಸ್ಥಲತತ್ತ್ವಜ್ಞಾನಗಳ।
ತಿಳುಹಿ ಲಿಂಗಸಕೀಲದೋರಿಸಿ
ಒಳಹೊರಗೆ ಕರಸ್ಥಲದ ಸೂತ್ರದ
ಬೆಳಗ ಕಾಣಿಸಿ ಹೊಳೆವುತಿರ್ದನು ದೇಶಿಕನು ಬಸವ॥ ॥ ೮೩ ॥

ಗುಡಿಯಕೋಟೆಯ ರಾಯದುರ್ಗದ
ಕಡಪೆ ಕಲ್ಲಿನ ವಲ್ಲಿದೇಶದ
ಗಡಿಯ ಹೋತೂರುರವಕೊಂಡೆಯ ಕೊಂಡಕುಂದಿಯನು।
ಬಿಡದೆ ಗಲಗನು ಕಂದಗಲ್ಲನು
ಬೆಡಗಿನಿಂದಲಿ ಬೂದುಗುಪ್ಪೆಯ
ಮೃಢನ ಭಕ್ತರಿಗಿತ್ತು ಮುಕ್ತಿಯ ಪದವ ಬಸವಣ್ಣ॥ ॥ ೮೪ ॥

ಆದವಾನಿಯ ಆರಕಾಡ ವಿ
ನೋದ ಲಾಲಾಪೇಟೆ ಗುಡೂ
ರಾದಿ ದೇವರ ಭಕ್ತರಿಗೆ ಷಟ್ಸ್ಥಲವ ಬೋಧಿಸುತ।
ವಾದಿಗಳ ಸೋಲಿಸುತಲವರಿಗೆ
ವೇದಶಾಸ್ತ್ರಾಗಮದ ದೃಷ್ಟವ
ನೋದಿ ತೋರಿಸಿ ದಿಗ್ವಿಜಯ ಪ್ರಭು ನಗುತ ಬಸವಣ್ಣ॥ ॥ ೮೫ ॥

ಆನಂದ ಷಟ್ಸ್ಥಲದ ಬ್ರಹ್ಮ ಚಿ
ದಾನಂದ ಸದ್ಭಕ್ತ ಹೃದಯ ಸ
ದಾನಂದ ಸುಜ್ಞಾನಬೋಧ ದಯಾಬ್ಧಿ ಚಂದ್ರಮನು।
ಸ್ವಾನುಭಾವಿಗಳರಸ ಸದ್ಗುಣ
ಮಾನಿ ಚೀಲಲಸ್ವಾಮಿ ಹರುಷದ
ಲಾನಂತಪುರವೆಂಬ ಘನ ಸಂಸ್ಥಾನಕೈದುವರು॥ ॥ ೮೬ ॥

ಮಂಡಲತ್ರಯ ಸದ್ಗುರುವಿನಡಿ
ಗಂಡು ಕೀರ್ತಿಸಿ ಸೈಗೆಡೆದು ಕರ

ಪುಂಡರೀಕವ ಮುಗಿದು ನಿಂದು ಪ್ರಸನ್ನಭೂಪಾಲ।
ಕಂಡೆ ಪರುಷದ ಖಣಿಯ ಶಿವಶಿವ
ಖಂಡಚಂದ್ರ ಕಿರೀಟಮೂರ್ತಿಯ
ಕಂಡು ಬದುಕಿದೆ ಷಟ್ಸ್ಥಲದ ಪ್ರಭುವೆನುತ ಬಸವಣ್ಣ॥ ॥ ೮೭ ॥

ಸ್ನಾನ ಮಜ್ಜನ ಭೋಜನವನು ಸ
ಮಾನದಿಂದಲಿ ನಡೆಸಿ ಶರಣ ಚಿ
ದಾನಂದ ಚೀಲಾಳಸ್ವಾಮಿಗೆ ನೂತ್ನಭೂಷಣವ।
ನಾನ ದಿವ್ಯಾಂಬರವನೊಪ್ಪಿಸಿ
ಜ್ಞಾನಜಂಗಮ ತತಿಗೆ ಜವಳಿಯ
ತಾನೆ ಪಾದವ ಹಿಡಿದು ಕೊಡುವನು ಬಸವ ಕೇಳೆಂದ॥ ॥ ೮೮ ॥

ಅಲ್ಲಿಂದ ಬಳ್ಳಾರಿಗಿಳಿವರು
ಎಲ್ಲ ರಾಜ್ಯವ ಬಳಸಿ ಹರುಷದೊ
ಳಲ್ಲೆ ದೊರೆ ಹನುಮಂತಭೂಪತಿ ಸ್ವಾಮಿಯಡಿಗೆರಗಿ।
ಎಲ್ಲ ಜಂಗಮ ಲಿಂಗಪೂಜೆಯ
ಮೆಲ್ಲನುತ್ಸಹದಿಂದ ತೀರಿಸಿ
ಸಲ್ಲಲಿತ ಮೃಷ್ಟಾನ್ನ ಪಾನದಿ ತಣಿಸುವನು ಬಸವ॥ ॥ ೮೯ ॥

ದಿವ್ಯಪರಿಮಳ ದಿವ್ಯಪುಷ್ಪವ
ದಿವ್ಯಭೂಷಣ ದಿವ್ಯವಸ್ತ್ರವ
ದಿವ್ಯಷಟ್ಸ್ಥಲ ವಿರತ ಗುರುವಿಗೆ ಮಡಗಿ ಸೈಗೆಡೆದು।
ನವ್ಯತರ ಜವಳಿಗಳ ಕರ್ಪುರ
ಸೇವ್ಯವೀಳ್ಯವ ಶರಣಜನ ಶಿವ
ಹ್ವಯವೆನುತಲಿ ಕೊಡುವ ನಲಿವನು ಬಸವ ಕೇಳೆಂದ॥ ॥ ೯೦ ॥

ಮಾನನಿಧಿ ಚೀಲಾಳಸ್ವಾಮಿಯು
ಗಾನ ಕ್ರೀಗಳ ನೃಪಗರುಹಿ ಸಂ
ಸ್ಥಾನಪತಿ ಬದುಕೆನುತ ಹರಸುತ ಜರಿಮಲೆಯ ದೊರೆಗೆ।
ನಾನ ವಿಧದಲಿ ಹರಸಿ ಭಕ್ತರಿ
ಗಾನಂದ ಸಂಪದವನೀವುತ
ಸ್ವಾನುಭಾವಿಗಳೊಡೆಯನುಜ್ಜನಿ ಸ್ಥಳಕೆ ತೆರಳುವರು॥ ॥ ೯೧ ॥

ಉಜ್ಜನಿಯ ಸಿಂಹಾಸನಧಿಪತಿ
ಮಜ್ಜನವ ಭೋಜನವ ಮಾಡಿಸಿ
ಪ್ರಜ್ವಳಿಪ ಭೂಷಣವ ದಿವ್ಯಾಂಬರವನೊಪ್ಪಿಸುವ।
ನಿರ್ಜರೇಶ್ವರ ಮರುಳಸಿದ್ಧನು
ಪೂಜ್ಯ ಜಂಗಮವಾಗಿ ಘನತರ
ವಜ್ರಮಕುಟವ ಕೊಡುವ ಚೀಲಳಸ್ವಾಮಿಯಡಿಗೆರಗಿ॥ ॥ ೯೨ ॥

ಆಲವಟ್ಟಿಗೆ ವೋಲಪಾವುಡ
ಮೇಲು ಬೆಳುಗೊಡೆ ಚವರಿ ಸೀಗುರಿ
ಸಾಲು ಸೂರಿಯಪಾನ ದರ್ಪಣ ಹಡಪ ಹಾವುಗೆಯ।
ಊಳಿಗದ ವಾಲಗದ ವಾದ್ಯ ಸ
ಮೇಳ ನಂದಿಧ್ವಜದ ಭೇರಿಯ
ಕಾಳೆ ಪಾಠಕರುಲಿಯೆ ಚಿತ್ತರಕಲ್ಲನೇರುವರು॥ ॥ ೯೩ ॥

ಸಿದ್ಧರಾಳಿಕೆ ದುರ್ಗ ಸಂಪಿಗೆ
ಸಿದ್ಧನದಕ್ಕೆ ಪ್ರಮುಖವಾತನೆ
ವೃದ್ಧಜಂಗಮವಾಗಿ ಚೀಲಳಸ್ವಾಮಿಯಡಿಗೆರಗಿ।
ಶುದ್ಧ ಬೆಳ್ಳಿಯ ಪೀಠ ಚಿನ್ನದ
ಗದ್ದುಗೆಯನೊಪ್ಪಿಸುವ ಗುರುವಿಗೆ
ಮುದ್ದು ವಿರತರಿಗೆಲ್ಲ ಮೃಷ್ಟಾನ್ನದಲೆ ತಣಿಸುವನು॥ ॥ ೯೪ ॥

ಧರೆಗಧಿಕವಹ ಚಿನ್ಮೂಲಾದ್ರಿಯ
ದೊರೆಗೆ ಹರಸುತ ಭಕ್ತರಿಗೆ ಶಿವ
ಶರಣಸೇವೆಯೆ ಮೋಕ್ಷ ನಿಜಸುಖವೆನುತ ಬೋಧಿಸುತ।
ತೆರಳುವರು ಉತ್ತರಕೆ ಹರಪುರ
ದೊರೆಯ ಕಡೆ[ಗ]ಡಿಯೆನಿಪ ಅರಸಿಯ
ಕೆರೆಯ ಶಿವ ಕೈಲಾಸವಾಸಕೆ ಬಸವ ಕೇಳೆಂದ॥ ॥ ೯೫ ॥

ಕೋಲಶಾಂತೇಶ್ವರನು ಬೇಗದಿ
ಬಾಲಜಂಗಮವಾಗಿ ಹೊಗಳುವ
ಚೀಲಳೇಶ್ವರಸ್ವಾಮಿ ಸದ್ಗುರು ಪಾದಕೆರಗುವನು।
ಹಾಲು ಅನ್ನವ ನೀಡಿ ಶರಣರ

ಜಾಲವೆಲ್ಲವ ತಣಿಸಿ ಬೆಳ್ಳಿಯ
ಮೇಲು ಚಿತ್ತವ ಭಸಿತ ರುದ್ರಾಕ್ಷಿಗಳನೊಪ್ಪಿಸುವ॥ ॥ ೯೬ ॥

ಸಕಲ ಶಿವಭಕ್ತರಿಗೆ ಕರಸ್ಥಲ
ಸುಖವ ಬೋಧಿಸಿ ಜಂಗಮಾರ್ಚನೆ
ಸಕಲಸುಖ ನಿಜಮಾತೆಯೆನುತಲಿ ಶ್ರುತಿಮತವ ತೋರಿ।
ಸಕಲ ಷಟ್ಸ್ಥಲಮಾತೃ ಶಿವಶಿವ
ಮುಕುತಿವನಿತೆಯ ವದನದರ್ಪಣ
ವಖಿಳಸುಖ ಕೈಲಾಸ ಶಿಖಿಪುರಕೈದುವರು ಬಸವ॥ ॥ ೯೭ ॥

ಸಚ್ಚಿದಾನಂದೈಕಬ್ರಹ್ಮದಿ
ಬೆಚ್ಚಿ ಬೆರಸಿದ ಯೋಗ ಮುದ್ರೆಯ
ಬಿಚ್ಚಿದರೋ ಎಂಬಂತೆ ಕಂಗಳ ತೆರೆದು ನೋಡುತಲೆ।
ಗಚ್ಚಿನಾಮಠದೊಡೆಯ ಮೃಡ ಮನ
ಮೆಚ್ಚಿ ಚೀಲಳಸ್ವಾಮಿ ಚರಣಕೆ
ಅಚ್ಚಯದಿ ಪೊಡಮಟ್ಟು ಭಸಿತದ ಘಟ್ಟಿಗಳ ಕೊಡುವ॥ ॥ ೯೮ ॥

ಮೂರು ಕಣ್ಣವತಾರನಿದೆ ಇದೆ
ಮೂರು ಮೂರ್ತಿಗೆ ಒಡೆಯನಿದೆ ಇದೆ
ಮೂರುಲೋಕದ ಕರ್ತನಿದೆ ಚಿತ್ತೈಸಿ ಶಿಖಿಪುರದ।
ಮೂರುಕಲ್ಲ ಶಿವಾಲ್ಯದಲಿ ಮಹ
ವೀರಶೈವಗ್ರಜರ ಸಭೆ ಸಹ
ತೋರುವುದ ನೃಪ ಕಂಡ ಸ್ವಪ್ನದಿ ಬಸವ ಕೇಳೆಂದ॥ ॥ ೯೯ ॥

ಗುರುವ ಕಂಡೆನೆನುತ್ತ ಮಂತ್ರಿಯ
ಕರೆಸಿ ಹೇಳಿಸಲಾಕ್ಷಣದಿ ಕರಿ
ತುರಗ ರಥ ಕಾಲಾಳ ನೆರಹಿಸಿ ಸಕಲ ಸಂಭ್ರಮದಿ।
ಭರದಿ ಭೇರಿಯ ಹೊಡೆಸಿ ತ್ವರಿತದಿ
ಹೊರಡುವವಸರದೊಳಗೆ ರಾಯಗೆ
ಚರನೋರ್ವ ಬಂದೆರಗಿ ಗುರುಕೃಪೆಯೊದಗಿದೆಕೊ ಭೂಪ॥ ॥ ೧೦೦ ॥

ಎಂದ ಒಸಗೆಯ ಕೇಳಿ ಭೂಪತಿ
ನಿಂದು ಉಡುಗೊರೆಗೊಡಿಸಿ ಚರನಿಗೆ

ಮುಂದವನ ಬೀಳ್ಕೊಡಿಸಿ ಶೀಘ್ರದಿ ಸಕಲವೈಭವದಿ।
ಸಿಂಧುರದ ಶಿರವೇರಿ ದಳಪತಿ
ಯಂದಣವನೇರುತ್ತ ಹರುಷದಿ
ಬಂದು ಗುರುವಿಗೆ ಸೈಗೆಡೆದು ಕೀರ್ತಿಸುತ ಕೈಮುಗಿದು॥ ॥ ೧೦೧ ॥

ದೇವ ಬಂದನು ಭಕ್ತ ಜನವನು
ಕಾವ ಬಂದನು ಕರುಣರಸಸಂ
ಜೀವ ಬಂದನು ಶರಣಗತಜನ ವಜ್ರಪಂಜರನು।
ದೇವ ದೇವವರೇಣ್ಯ ಬಂದನು
ದೇವ ಷಟ್ಸ್ಥಲದರಸ ಬಂದನು
ಪಾವನಾತ್ಮಕ ಬಂದ ಚೀಲಲಳಸ್ವಮಿ ದಯದಿಂದ॥ ॥ ೧೦೨ ॥

ಕಂಡೆ ಪರುಷದ ಖಣಿಯ ಚರಣವ
ಕಂಡೆ ಚಿಂತಾಮಣಿಯ ಚರಣವ
ಕಂಡೆ ಕರುಣಾಂಬುಧಿಯ ಸುಧಕರಮೂರ್ತಿ ಪಾದವನು।
ಕಂಡೆ ಷಟ್ಸ್ಥಲ ಗುರುವರೇಣ್ಯನ
ಕಂಡೆನಗಣಿತ ಮಹಿಮಪುಣ್ಯನ
ಕಂಡು ಬದುಕಿದೆ ಪ್ರಭುವೆ ಚೀಲಳಸ್ವಾಮಿ ರಕ್ಷಿಪುದು॥ ॥ ೧೦೩ ॥

ಕ್ಷೇಮವೇ ಬಸವಂತರಾಯಗೆ
ಕಾಮಿನೀ ಸುತ ಬಂಧು ದಳಪತಿ
ಗ್ರಾಮಸೀಮೆ ಸಮಸ್ತ ದೇಹಸ್ಥಿತಿಗೆ ಕುಶಲಗಳೆ।
ಸ್ವಾಮಿಪಾದಕಟಾಕ್ಷ ಸಕಲರು
ಕ್ಷೇಮ ಶಮಿತಪುರೀಶ ಗುರು ನಿಜ
ನಾಮಸ್ಮರಣೆ ಕಲಾಪ ಬಿನ್ನಹ ಪುರಕೆ ಬಿಜಮಾಡಿ॥ ॥ ೧೦೪ ॥

ಎನುತ ನೃಪ ಬಿನ್ನೈಸಲಾಕ್ಷಣ
ಮನ ಹರುಷದಿಂ ಸ್ವಾಮಿ ಒಳಿತನ
ಲನಿತರೊಳು ಶಿವಪೂಜೆ ಶಿವಲಿಂಗಾರ್ಪಣವ ಬೆಳೆಸಿ।
ವಿನುತ ಭಕ್ತರಿಗಿತ್ತು ಮೋಕ್ಷವ
ಮನವಿಜಯ ಪಲ್ಲಕ್ಕಿ ಏರಲಿ
ಜನಪ ತೇಜಿಯನೇರಿ ತೆರಳುತ ಗುರುವ ಬೆಸಗೊಂಡ॥ ॥ ೧೦೫ ॥

ದೇಶಮಧ್ಯದ ಭಕ್ತನೃಪ ಪರ
ದೇಶಿಗಳ ಸುಜ್ಞಾನ ಕ್ರೀಯಾ
ಭ್ಯಾಸಿಗಳ ಕರಸ್ಥಳದ ವಸ್ತುವೆ ಪ್ರಾಣವಾಗಿರುವ।
ಪಾಶವಿಜಯರ ಪರಮಪುರುಷರ
ದೇಶಿಕೇಂದ್ರರ ದೊಡ್ಡವರ ಸಂ
ತೋಷಗಳ ಬೆಸಗೊಂಡ ಸ್ವಮಿಯ ಬಸವ ಕೇಳೆಂದ॥ ॥ ೧೦೬ ॥

ಉತ್ತರದಕ್ಷಿಣ ಪಶ್ಚಿಮಾಬ್ಧಿ ವಿ
ಚಿತ್ರ ಪೂರ್ವ ಸಮುದ್ರಮಧ್ಯ ತ್ರಿ
ನೇತ್ರ ನಿರ್ಮಿತವಾದ ಘನ ಸಂಸ್ಥಾನಗಳ ರಾಜ।
ಪುತ್ರ ಸದ್ಗುರುವಂಶ ಭಕ್ತಿಚ
ರಿತ್ರ ಷಟ್ಸ್ಥಲಮಾರ್ಗಿಗಳು ಮಹ
ಕ್ಷೇತ್ರಗಳ ಕುಳಕೊರೆದ ರಾಯಗೆ ಬಸವ ಕೇಳೆಂದ॥ ॥ ೧೦೭ ॥

ಧರಣಿ ಘಟಿಕಾಸ್ಥಳದ ಲಿಂಗ ನಿ
ಕರವೆ ಜಂಗಮವಾಗಿ ಷಟ್ಸ್ಥಲ
ಗುರುವಿನಡಿಗಳಿಗೆರಗಿ ಕೊಟ್ಟ ಸಮಸ್ತ ವಸ್ತುಗಳ।
ದೊರೆಗಳುಚಿತವ ಭಕ್ತರಿತ್ತುಡು
ಗೊರೆಯ ತೊಡಿಗೆಗಳೇಕೆ ವಿರತಗೆ
ಶರಣಗಣ ಶಂಕಿಸಲು ಪ್ರಭು ನಸುನಗುತಲರುಹಿದರು॥ ॥ ೧೦೮ ॥

ಬಡವರಿಗೆ ಬಾಯ್ಬಿಡುವರಿಗೆ ಕಡು
ಬಡತನದಿ ಪರಿಪಡುವರಿಗೆಯಡಿ
ಗೆಡೆವರಿಗೆ ನಿಜ ಮದುವೆ ಮಂಗಲ ದೀಕ್ಷ ಮೋಕ್ಷಗಳ।
ಪಡೆಯದವರಿಗೆ ಬೇಡಿದಷ್ಟನು
ಕೊಡಿಸಿ ಮಿಕ್ಕ ಪದಾರ್ಥ ಜಂಗಮ
ದೊಡವೆಯೆನುತ ಶಿವಾರ್ಪಣಕೆ ಸವೆಸುವರು ಬಸವಣ್ಣ॥ ॥ ೧೦೯ ॥

ದೇವ ಹರನವತಾರ ಜಯ ಜಯ
ದೇವ ವಿರತಶಿಖಾಮಣಿಯೆ ಜಯ
ದೇವ ಷಟ್ಸ್ಥಲಗುರುವೆ ಚೀಲಳಸ್ವಾಮಿ ಪ್ರಭುಶರಣು।
ದೇವ ಹರಿಯಜರೊಡೆಯ ನಮೊನಮೊ

ದೇವ ಶಿವಗಣಹೃದಯ ನಮೊನಮೊ
ದೇವಭಕ್ತರು ಪ್ರಮಥಗಣ ಹೊಗಳಿದರು ಹರುಷದಲಿ॥ ॥ ೧೧೦ ॥

ಧರಣಿಪತಿ ಬಸವಂತರಾಯನು
ಪರಮಗುರು ಚೀಲಾಳಸ್ವಾಮಿಯು
ಶರಣಗಣ ಸದ್ಭಕ್ತರುತ್ಸಹದಿಂದ ನಸುನಗುತ।
ಕರಿತುರಗ ರಥ ಕಾಲಬಲಚರ
ಕರೆವ ಕಹಳೆಯ ಮೊರೆವ ಭೇರಿಯ
ಬಿರುದ ಹೊಗಳುವ ಭಟರು ಸಹ ತೆರಳುವರು ಹರಪುರಕೆ॥ ॥ ೧೧೧ ॥

ಬಂದ ಭರದಲೆ ಶಮಿತಪುರಪತಿ
ಮಂದಹಾಸದಲೆದ್ದು ಷಟ್ಸ್ಥಲ
ಬಂಧುವೇ ದಯಮಾಡಿದಿರೆ ಸಲಹೆನುತ ಹಸ್ತಗಳ।
ನಂದದಲಿ ಶಿರಕಿಳುಹೆ ಗುರುಪದ
ದಂದ ಸರಸಿಜಕೆರಗೆ ಕರಗಳ
ಬಂಧಿಸುತ ತಕ್ಕೈಸಿ ನಿಜಗುರುಸ್ವಾಮಿ ಶರಣೆನುತ॥ ॥ ೧೧೨ ॥

ವಂದನೆ ನಮಸ್ಕಾರ ಬೆಳೆದವು
ಸಂದು ಸಂಶಯ ಭೇದವಳಿದವು
ಒಂದೆ ಪಂಕ್ತಿಯಲಾಗೆ ತೀರ್ಥಪ್ರಸಾದ ಸಂತೃಪ್ತಿ।
ಹಿಂದುಮುಂದಣ ಹಿರಿಯ ಶಿವಗಣ
ವೃಂದ ನೃಪಸಹ ಸಲಿಸಿ ಹರುಷದ
ಲಂದು ವೀಳ್ಯವ ಕೊಡಿಸಿದರು. ಸಕಲರಿಗೆ ಮನವೊಲಿದು॥ ॥ ೧೧೩ ॥

ಅನುಭವೀಕರು ಆತ್ಮವಿಭುಗಳು
ಘನವಿರಕ್ತರು ಜ್ಞಾನಗುರುಗಳು
ಮನಸಿಜಾಂತಕಮೂರ್ತಿ ಚೀಲಳಸ್ವಾಮಿ ಮಂತ್ರೀಶ।
ಅನವರತ ಬಸವಂತರಾಯನ
ಮನೆಯಲೇ ಶಿವಪೂಜೆ ತೃಪ್ತಿಯು
ಮನಹರುಷದಲಿ ನಡೆವುದದರತಿ ಸೊಬಗನೇನೆಂಬೆ॥ ॥ ೧೧೪ ॥

ಶಮಿತಪುರಪತಿ ಸಕಲಷಟ್ಸ್ಥಲ
ಸಮಯಕರ್ತರು ಸಹಿತರಾಯನ

ವಿಮಲಭಕ್ತಿಯ ಕೈಕೊಳುತಲೊಪ್ಪಿದರು ಹರಪುರದ।
ಪ್ರಮುಖ ಗುಡ್ಡದ ಮಠದ ರವಿಶಶಿ
ಸಮ ಕಳೆಯನುತ್ತರಿಸಿ ಬೆಳಗುವ
ಕಮಲಮಂಟಪದಲ್ಲಿ ಚೀಲಳಸ್ವಾಮಿಯೊಪ್ಪಿಹರು॥ ॥ ೧೧೫ ॥

ಶರಣರಿಗೆ ಸಾಯುಜ್ಯವನು ಶುಭ
ಕರಣರಿಗೆ ಬಹು ಪೂಜ್ಯವನು ಸ
ಚ್ಚರಣರಿಗೆ ಶಿವಸುಖವ ಷಟ್ಸ್ಥಲಭಕ್ತಿ ಮುಕ್ತಿಯನು।
ಧರಣಿಜನರಿಗೆ ದಗುಣಿವನು
ದೊರೆಗಳಿಗೆ ಸಾಮ್ರಾಜ್ಯಭಾಗ್ಯವ
ಗುರುವೆ ಚೀಲಳಸ್ವಾಮಿ ಕರುಣಿಸಿ ಸರ್ವಕಾಲದಲಿ॥ ॥ ೧೧೬ ॥

ಲಲನೆ ಗೌರಿಗೆ ಶಿವನು ಪ್ರಮಥರ
ಬಲಕೆ ನಂದಿಯು ವೃಷಭ ಶರಣರ
ಕುಲಕೆ ಪ್ರಭು ಬೋಧಿಸಿದನೀ ಷಟ್ಸ್ಥಲಶಿವಾಯಣವ।
ನೆಲಕೆ ಹರಪುರ ಶೈಲ ತಪ್ಪಲ
ವಿಲಸಿತದ ಷಟ್ಸ್ಥಲದ ಕುಲಗುರು
ಚೆಲುವ ಬಸವಪ್ರಭು ನಿರೂಪಣ ಮಗನೆ ಕೇಳೆಂದ॥* ॥ ೧೧೭ ॥

❖❖

* ಇತಿ ವಿಂಶತಿ ಸ್ಕಂಧ ನಿರೂಪಣಂ. ಅಂತು ಉಭಯ ಪದಗಣನೆ ೯೯೭ಕ್ಕಂ ಮಂಗಳ ಮಹಾಶ್ರೀ ॥

ಏಕವಿಂಶತಿ ಸ್ಕಂಧ

ರಾಗ : ಶಂಕರಾಭರಣ

ಭೂಮಿಭಾರವನಿಳುಹಿ ಚೀಲಳ
ಸ್ವಾಮಿ ಪರಶಿವಯೋಗದಲ್ಲಿಹ
ಸಾಮರಸ್ಯವನರುಹೆನಲು ಸುತಗೊರೆದ ದೇಶಿಕನು॥

ಶ್ರೀ ಶರೀರ ಕರೋಟಿ ಕಟಕ ವಿ
ಶೇಷ ವೃಷಭ ಕಪಾಲ ಕರ್ಣವ
ತಂಸ ಭಸಿತ ಶಿವಾಕ್ಷಿ ಸುಲಿಪಲ್ಲುಗಳು ನಗೆ ಮುಖದ।
ಸೂಸುತಿಹ ನಖನೇತ್ರರಸದ ಪ್ರ
ಕಾಶ ಗಂಗಾ ಚಂದ್ರ ಪಾಪವಿ
ನಾಶ ನತಪರಿತೋಷ ಶಂಕರ ಸಲಹು ಮೂಜಗವ॥ ॥ ೧ ॥

ಸಿಂಗರದ ಹರಪುರದ ಶ್ರೀ ಗಿರಿ
ಮಂಗಳದ ಮಹಾನುಭಾವ ಪ್ರ
ಸಂಗ ಸಮರಸ ಕರಕಮಲ ಪರವಸ್ತು ವಿನ್ಯಸ್ತ।
ಜಂಗಮದ ಜಯರವದ ಮನ ನೋ
ಟಂಗಳನು ಕೀಲಿಸಿದ ಷಟ್ಸ್ಥಲ
ಸಂಗ ನಿರುಪಮಜ್ಯೋತಿ ಚೀಲಳಸ್ವಾಮಿ ಗುರು ಶರಣು॥ ॥ ೨ ॥

ಹಿರಿಯರಿಗೆ ಹಿತವರಿಗೆ ಗುರುತಿನ
ವಿರತರಿಗೆ ವಿಮಲರಿಗೆ ಷಟ್ಸ್ಥಲ
ಭರಿತರಿಗೆ ಭಕ್ತರಿಗೆ ಬಲ್ಲಿದ ವೀರಶೈವರಿಗೆ।
ದೊರೆಗಳಿಗೆ ದೇಶಿಕರಿಗೆ ಮಹಾ
ಕರಸ್ಥಲದ ನಿಷ್ಠರಿಗೆ ನಂಬಿದ
ಪುರುಷರಿಗೆ ಬೋಧಿಸುವುದೀ ಷಟ್ಸ್ಥಲಶಿವಾಯಣವ॥ ॥ ೩ ॥

ಅಂಧಕರಿಗೆ ಅನಾಥರಿಗೆ ಮನ
ಬಂದಪರಿಯಲಿ ತಿರುಗುವವರಿಗೆ
ಕಂದುಗೊರಳನ ಭಜನೆ ಇಲ್ಲದ ಕರ್ಮಪಶುಗಳಿಗೆ।
ನಿಂದಕಗೆ ನಿಷ್ಠೂರಗಾರಗೆ
ಹಿಂದು ಮುಂದನು ತಿಳಿಯದವನಿಗೆ
ಕಂದ ಬೋಧಿಸಬೇಡವೀ ಷಟ್ಸ್ಥಲಶಿವಾಯಣವ॥ ॥ ೪ ॥

ಈಶ ಕೈಲಾಸದಲಿ ಶಿವೆಗೆ ವಿ
ಲಾಸ ಪ್ರಮಥರ ಸಭೆಗೆ ನಂದಿಗ
ಣೇಶ ವೃಷಭಗೆ ಪ್ರಭು ನಿರೂಪಣ ಪೂರ್ವ ಗುರುಮಾರ್ಗ।
ಈ ಸಕಲ ಧರೆಗಧಿಕ ಹರಪುರ
ಶ್ರೀಶೈಲ ಷಟ್ಸ್ಥಲದ ಘನ ಸಿಂ
ಹಾಸನದ ದೇಶಿಕನು ಬಸವಪ್ರಭು ಸುತನಿಗೊರೆದ॥ ॥ ೫ ॥

ಗುರುವೆ ಬಿನ್ನಹವರುಹಿ ಗುರುತಿನ
ವಿರತ ಶರಣಮಹಾನುಭಾವರು
ಚರಮೂರ್ತಿಗಳು ಸಹಿತ ದೊರೆ ರೀವಿಯಲಿ ಸಂಚರಿಸಿ।
ಧರೆಯ ಭರವನಿಳುಹಿ ಧರ್ಮವ
ಸ್ಥಿರಗೊಳಿಸಿ ಭಕ್ತರಿಗೆ ಷಟ್ಸ್ಥಲ
ವರುಹಿ ಚೇಲಳಸ್ವಾಮಿ ಹರಪುರಕಿಳಿದ ಶಿವಯೋಗಿ॥ ॥ ೬ ॥

ಎಂದು ವಂದಿಸಿ ನಿಂದು ಕೀರ್ತಿಸಿ
ಕಂದ ಕೈಮುಗಿದಿರಲು ಶ್ರೀಗುರು
ತಂದೆ ಮಂದಸ್ಮಿತದಿ ಮೈದಡಹುತ್ತ ಹರುಷದಲಿ।
ಒಂದೆ ಮನದಲಿ ಲಾಲಿಸೆನುತಲಿ
ನಂದನನ ತಲೆದಡಹಿ ಬೆಸಸಿದ
ಚಂದವದನೇನೆಂಬೆ ಶ್ರುತಿಮತ ಸುತನೆ ಕೇಳೆಂದ॥ ॥ ೭ ॥

ಮಗನೆ ಕೇಳೋ ನಿಮ್ಮ ಶ್ರೀಗುರು
ಜಗದ ಭಾರವನಿಳುಹಿ ಭಕ್ತರ
ಮಿಗೆ ಪುನೀತರ ಮಾಡಿ ಷಟ್ಸ್ಥಲ ಶರಣ ಸಂಕುಳದ।
ಹಗೆಯ ಪುಂಡರ ಕಳೆದು ಹರಪುರ

ನಗ ವಿಚಿತ್ರದ ಮಂಟಪದ ಜಗ
ಜಗಿಪ ಸಿಂಹಾಸನವ ಚೀಲಲಳಸ್ವಾಮಿ ಏರಿದರು॥ ॥ ೮ ॥

ದೇಶಾಂತ್ರಮುಖದಿಂದ ಭಕ್ತರ
ಪಾಶಗಳ ಪರಿಹರಿಸಿ ಸಂಸ್ಕೃತಿ
ದೋಷಗಳನುತ್ತರಿಸಿ ತತ್ತ್ವೋಪದೇಶಗಳನಿತ್ತು।
ದೂಷಕರ ಕಡೆಗಿಡಿಸಿ ಷಟ್ಸ್ಥಲ
ದೇಶಿಕರ ನೆಲೆಗೊಳಿಸಿ ಸುಖಮಿರೆ
ಶ್ರೀ ಸದಾಶಿವ ಲಿಖಿತವಿಳಿವುದು ಮಗನೆ ಕೇಳೆಂದ॥ ॥ ೯ ॥

ಎಲ್ಲ ಲೋಕ ಪವಿತ್ರವಾದುದು
ಎಲ್ಲ ಭಕ್ತರು ಮುಕ್ತರಾದರು
ಎಲ್ಲ ದಿಂಡಿಯರುಗಳು ಷಟ್ಸ್ಥಲ ಸಮಯ ಬಹಿಷ್ಕರರು।
ಎಲ್ಲ ಪರವಾದಿಗಳು ಲಯಭಯ
ವಿಲ್ಲ ಶರಣರಿಗೆನುತ ಹರಪುರ
ದಲ್ಲಿ ಪರಶಿವಯೋಗಿ ಚೀಲಲಳಸ್ವಾಮಿ ನೆಲಸಿದರು॥ ॥ ೧೦ ॥

ವೀರಶೈವಾಚಾರ ಹಗೆಗಳು
ದೂರವಾದರು ಷಟ್ಸ್ಥಲಕೆ ಸಂ
ಸಾರವಿಡಿದರು ಕೆಲರು ಕೆಲಬರು ಪಾತಕವ ಹಿಡಿದು।
ಬೇರೆ ಸಮಯವ ಮಾಡಿಕೊಂಡರು
ಮಾರವೈರಿ ನಿರೂಪ ಮೇರೆಗೆ
ಮೂರು ಸಾವಿರದೊಡೆಯ ಚೀಲಲಳಸ್ವಾಮಿ ಹರಪುರದ॥ ॥ ೧೧ ॥

ಘರ್ಮ ಘನಸಂಸ್ಥಾನ ಪಾಲಕ
ನಿರ್ಮಲಾತ್ಮಕ ಷಟ್ಸ್ಥಲದ ಮಹ
ವರ್ಮ ಭಕ್ತರ ಪ್ರಾಣ ಮುಮ್ಮಡಿ ಬಸವಭೂಪಾಲ।
ಕರ್ಮಕಾಂಡದ ಪಾಶವಿಜಯನು
ನರ್ಮನುಜನವನಲ್ಲ ಸಾಕ್ಷಾತ್
ಧರ್ಮಗುರು ಚೀಲಾಳಸ್ವಾಮಿಯ ಚರಣ ನಿಜಭಕ್ತ॥ ॥ ೧೨ ॥

ಅರ್ಥಪ್ರಾಣಭಿಮಾನ ಮೂರನು
ಕರ್ತೃ ಚೀಲಲಳಸ್ವಾಮಿಗೊಪ್ಪಿಸಿ

ಮರ್ತ್ಯಲೋಕದ ನೃಪರ ಕರ್ಮ ವಿಕೃತ್ಯಗಳ ತ್ಯಜಿಸಿ।
ತೀರ್ಥ ಶೇಷವೆ ನೇಮ ಷಟ್ಸ್ಥಲ
ಕರ್ತರೇ ಪತಿ ತಾನೆ ಸತಿಯೆಂ
ಬರ್ಥ ಶೀಲವ ಹಿಡಿದು ಹಸ್ತಕೆ ಬಳೆಯ ತೊಟ್ಟಿಹನು॥ ॥ ೧೩ ॥

ಬಿರುದಿನಂಕದ ನೃಪನ ಭಕ್ತಿಯ
ತಿರಿವುದೆನುತಲಿ ಹರನಿರೂಪವು
ಬರಲು ಚೀಲಳಸ್ವಾಮಿ ಹರುಷದಲೊಪ್ಪಿ ನಸುನಗುತ।
ಹರಪುರದ ಬಸವಂತರಾಯನ
ಪರಮಭಕ್ತಿಯ ಸಲಿಸುತಿರ್ದರು
ಶರಣಗಣ ಸಹ ಸ್ವಾಮಿ ನೆಲಸಿದ ಮಗನೆ ಕೇಳೆಂದ॥ ॥ ೧೪ ॥

ಶ್ರೀಕರದ ಶೃಂಗರದ ಮಂಗಳ
ದಾಕರದ ಪ್ರಾಕರದ ತೆನೆ ಗ
ರ್ಭೀಕರದ ಗೋಪುರದ ಕಳಶದ ಕಮಲ ಮಂಟಪ ಶು।
ಭ್ರಾಕರದ ಪುತ್ಥಳಿಯ ದ್ವಾರದ
ನೇಕ ಶರಣರ ನೆರವಿ ಮಗನೆ
ರಾಕಿ ಚೀಲಳಸ್ವಾಮಿಯನುಭವ ಪೀಠವೇರಿದರು॥ ॥ ೧೫ ॥

ಭೋರಿಡುವ ಕಹಳೆಗಳ ಬಿಗಿದನು
ಸಾರಿ ಹೊಗಳುವ ಭಟರ ತಂಬಟ
ಮೌರಿ ಜಾಗಟೆ ಶಂಖ ಘಂಟೆ ಮೃದಂಗ ಭೇರಿಗಳ।
ವೀರಶೈವರ ಜಯರವದ ಪರಿ
ವಾರ ನೃಪಕೀರ್ತಿಗಳ ಷಟಸ್ಥಲ
ಧೀರ ಚೀಲಳಸ್ವಾಮಿ ಸಿಂಹಾಸನವನೇರಿದರು॥ ॥ ೧೬ ॥

ಚಿತ್ರಗೆಲಸದ ಚೀರ್ಣಗೆಲಸ ವಿ
ಚಿತ್ರ ಸ್ಥೂಲದ ರತ್ನಮಂಟಪ
ದುತ್ತರದಕ್ಷಿಣ ಪೂರ್ವಪಶ್ಚಿಮ ದ್ವಾರ ತೋರಣದ।
ಪತ್ರೆ ಪುಷ್ಪ ಫಲಸ್ಥ ಪರಿಮಳ
ಗಾತ್ರ ದಿವ್ಯಾಭರಣ ಧರಣೀ
ಪುತ್ರ ಜನ ಕೈಗಟ್ಟಿ ಚೀಲಳಸ್ವಾಮಿಯೋಲೈಸೆ॥ ॥ ೧೭ ॥

ಕೆತ್ತನೆಯ ನವರತ್ನಮಂಟಪ
ದಿತ್ತರದ ಮಹಾನುಭಾವರ
ಸುತ್ತ ಬಳಸಿದ ದೇವಭಕ್ತರ ಚರಮಹೇಶ್ವರರ।
ಮೊತ್ತ ಮೊತ್ತದ ವಿರತ ಶರಣರ
ಚಿತ್ತ ಚೀಲಳಸ್ವಾಮಿ ದಯರಸ
ವೆತ್ತ ಮುಮ್ಮಡಿಭೂಪ ತಾ ಕೈಕಟ್ಟಿ ನಿಂದಿಹನು॥ ॥ ೧೮ ॥

ಕವಿಗಮಕಿ ವಾದಿಗಳ ವಾಗ್ಮಿಯು
ವಿವಿಧ ಬುಧಜನ ವೇದಕೋವಿದ
ನಿವಹವಾಗಮ ಪ್ರಾಜ್ಞಗಣ ಸಂಗೀತ ಸಾಹಿತ್ಯ।
ಸವಿಯ ಸುರಿಸುವ ಭರತನಾಟಕ
ಯುವತಿಜನದ ವಿಚಿತ್ರ ಕಳಶದ
ಧವಳ ಮಂಗಳ ಶಬ್ದ ಚೀಲಳಸ್ವಾಮಿ ಸಭೆಯೊಳಗೆ॥ ॥ ೧೯ ॥

ವಾಲಗದ ವೈಭವದ ನಾಟಕ
ಜ್ವಾಲ ಪರಿಚರ ಭಟರ ನೃಪ ಸ
ಮ್ಮೇಳ ನಂದೀಧ್ವಜದ ಭಕ್ತರ ಕವಿ ಬುಧರ ಕೀರ್ತಿ।
ಹೇಳಿ ಕೇಳುವ ಹಿರಿಯ ದಳಪತಿ
ಬಾಳ ಸಡಗರ ರಾಯ ಶರಣ ದ
ಯಾಳು ಚೀಲಳಸ್ವಾಮಿಯೋಲಗಕೆಣೆಯೆ ತ್ರೈಜಗದಿ॥ ॥ ೨೦ ॥

ಸಕಲ ಭಕ್ತರಿಗೆಲ್ಲ ಸುಖವನು
ಸಕಲ ದೊರೆಗಳಿಗೆಲ್ಲ ಗೆಲವನು
ಸಕಲ ಕವಿ ಬುಧ ಜನರಿಗುಚಿತವ ಕೊಡಿಸಿ ಕಳುಹಿಸುತ।
ಸಕಲ ಷಟ್ಸ್ಥಲ ಶರಣಗಣನೃಪ
ಸಖರು ದಳಪತಿ ಸಹಿತ ಭಕ್ತರು
ಸಕಲ ನಿಷ್ಕಲ ಬೋಧ ಚೀಲಳಸ್ವಾಮಿಯಡಿಗೆರಗಿ॥ ॥ ೨೧ ॥

ಅಸಮ ಷಟ್ಸ್ಥಲ ತತ್ವಜ್ಞಾನದ
ಬೆಸುಗೆ ಭೇದವ ಬೇರ್ಪಡಿಸಿ ನಿಜ
ಶಿಶುಗಳಿಗೆ ಶಿಷ್ಯರಿಗೆ ಕರುಣಿಸಿ ಮೋಕ್ಷಮಾರ್ಗಗಳ।
ವಿಷಮ ವಿಷಯವ ಕೆಡಿಸಿ ಕರಸ್ಥಲ

ದ ಶಿವನಲಿ ಮನದೃಕ್ಕುಗಳ ಸಮ
ರಸವ ಮಾಡುವ ಕೀಲನರುಹೆನಲೊರೆದ ಶರಣರಿಗೆ॥ ॥ ೨೨ ॥

ಘಟಿಕ ಸ್ಥಳ ಹರಪುರದ ಗುಡ್ಡದ
ಮಠದ ಷಟ್ಸ್ಥಲ ತತ್ವಕುಳ ಸಂ
ಪುಟದ ಶರಣರ ಮಕುಟ ಪರಶಿವಯೋಗ ಮಂಟಪದ।
ಘಟಿತ ಸಿಂಹಾನದ ಪ್ರಣಮದ
ಪಟಿಲ ಪೀಠದ ಮೇಲೆ ಕಮಲದಿ
ನಿಟಿಲನೇತ್ರವತಾರ ಚೀಲಲಳಸ್ವಾಮಿಯೊಪ್ಪಿಹರು॥ ॥ ೨೩ ॥

ಕರ್ಪುರದ ನೆಲಗಟ್ಟಿನಗ್ರದ
ಕರ್ಪುರದ ನವನೂತ್ನಗಂಭದ
ಕರ್ಪುರದ ಮಂಟಪದ ಪ್ರಣಮದ ಪೀಠಗಣಸಭೆಯ।
ಮುಪ್ಪುರದ ನಿಜಮುಕ್ತಿ ಕ್ಷೇತ್ರದ
ದರ್ಪಣದ ತಾರಕದ ಜ್ಯೋತಿಯ
ಕರ್ಪುರದ ಪ್ರಭೆಯಂತೆ ಚೀಲಲಳಸ್ವಾಮಿಯೊಪ್ಪಿಹರು॥ ॥ ೨೪ ॥

ಸುಲಿಪಲ್ಲ ಬೆಳಗುಗಳ ಮುಖರಸ
ಕಳೆಯ ಮುಗುಳ್ನಗೆ ಮರುಗ ಭಸಿತದ
ಬೆಳಗ ನಖ ನಿಕರಗಳ ಕಾಂತಿಯ ದೇಹದೀಪ್ತಿಗಳ।
ಹೊಳೆವ ಕಂಗಳ ಜ್ಯೋತಿ ಕರಸ್ಥಳ
ಮಿಳಿತ ರುದ್ರಾಕ್ಷಿಗಳ ತಳುಕಿನ
ಚೆಲುವ ಚೀಲಲಳಸ್ವಾಮಿ ಶರಣರ ನಡುವೆ ರಾಜಿಸಲು॥ ॥ ೨೫ ॥

ಜಡೆಯ ಲೋಚನ ಬೋಳ ಮಂಡೆಯ
ಮುಡಿ ದಿಗಂಬ್ರದ ಕಂಠ ಹಸ್ತದಿ
ಹಿಡಿದ ಜಪಸರ ಪುಸ್ತಕದ ಪೊದೆದಡ್ಡ ಜಾಡಿಗಳ।
ಎಡಬಲದ ಚರಮೂರ್ತಿಗಳನಡಿ
ಗೆಡೆದು ಶಾಸ್ತ್ರವ ಕೇಳ್ವ ವಿರತರ
ನಡುವೆ ಚೀಲಲಳಸ್ವಾಮಿ ತತ್ವುಪದೇಶಗೊಡುತಿಹರು॥ ॥ ೨೬ ॥

ಕಳಿತ ಕಲ್ಪದ್ರುಮವೊ ಪುಣ್ಯ
ಸ್ಥಳವೊ ಸುಕೃತದ ಕುಣವೊ ಭಕ್ತಿಯ

ಬೆಳೆಯೊ ಮುಕ್ತಿಯ ಕಳೆಯೊ ಷಟ್ಸ್ಥಲ ಸುಳಿಯೊ ಸುಜ್ಞಾನ।
ದಳೆಯೊ ಮಂತ್ರದ ಹೊಳೆಯೊ ಪ್ರಣಮದ
ಎಳೆಯೊ ಶುಖದೊಬ್ಬುಳಿಯೊ ಶಿವಗಣ
ಬಳಸಿ ಚೀಲಳಸ್ವಾಮಿ ಸಿಂಹಾಸನ ವಿರಾಜಿಸಿತು॥ ॥ ೨೭ ॥

ಆಗಮೀಕರ ಅನುಭವೀಕರ
ಭೋಗಿಗಳ ಬಹುವೇದವಿದ ವೈ
ರಾಗಿಗಳ ರವಿಚಂದ್ರಸಿದ್ಧಾಂತಿಗಳ ಶಿವತತ್ವ।
ಯೋಗಿಗಳ ಏಕಾಂಗಿಗಳ ಭವ
ರೋಗ ಪ್ರಕೃತಿಯನೊದ್ದ ಯತಿಗಳ
ಪೊಗದಲಿ ಚೀಲಾಳಸ್ವಾಮಿಯ ಸಭೆ ವಿರಾಜಿಸಿತು॥ ॥ ೨೮ ॥

ಪಳುಕ ಪಚ್ಚೆಯ ಚಳುಕ ಪರುಷದ
ಜಿಳುಕ ಹವಳದ ಹಳುಕ ಮುತ್ತಿನ
ಮಳುಕ ವಜ್ರದ ವಳುಕ ಶೀಲದ ವಿಳುಕ ರತ್ನಗಳ।
ತಳುಕ ತಾರೆಯ ಕಳುಕ ಜ್ಯೋತಿಯ
ಬೆಳಕ ರವಿಶಶಿಯುಳುಕ ಷಟ್ಸ್ಥಲ
ತಿಳಕ ಚೀಲಳಸ್ವಾಮಿ ಶ್ರೀಗುರು ಸಭೆ ವಿರಾಜಿಸಿತು॥ ॥ ೨೯ ॥

ಶಶಿರವಿಯ ವೀಧಿಗಳ ಚೌಕದ
ಲೆಸೆವ ಸರಸಿಜ ಸಾಲುಗೇರಿಯ
ಮಿಸುನಿ ಮೌಕ್ತಿಕ ಜ್ಯೋತಿ ತಾರಕದುಭಯಚಕ್ರಗಳ।
ದೆಸೆದೆಸೆಯನುಜ್ವಳಿಪ ತೇಜದ
ಕುಶಲಗೆಲಸದ ಕುಸುಮ ಪೀಠದ
ಲಸಮ ಚೀಲಳಸ್ವಾಮಿ ಜ್ಞಾನೋಪದೇಶಗೊಡುತಿಹರು॥ ॥ ೩೦ ॥

ಬ್ರಹ್ಮವಿಷ್ಣರ ಪದವ ಮೀರಿದ
ಹಮ್ಮಿನಮರರ ಸಭೆಯ ಹಾರಿದ
ಸಮ್ಮಂಧ ಷಟ್ಸ್ಥಲದ ಮಹಿಮರ ಸಂಗಸಮರಸದ।
ಬ್ರಹ್ಮಚಕ್ರದ ಸಂಗಮದ ಪರ
ಬ್ರಹ್ಮ ಕರಸ್ಥಲ ಸೂತ್ರನೇತ್ರದ
ವರ್ಮಗಳ ಬೋಧಿಸುತ ಚೀಲಳಸ್ವಾಮಿಯೊಪ್ಪಿಹರು॥ ॥ ೩೧ ॥

ಮೂರು ಲೋಕದ ಮೂರು ದೈವದ
ಮೂರು ದೇಹದ ಮೂರು ಗುಣಗಳ
ಮೂರು ಕಾಲದ ಮೂರವಸ್ಥೆಯ ಮೂರು ಶಕ್ತಿಯನು।
ಮೂರು ಮಂಡಲ ಮಧ್ಯಪೀಠದ
ತಾರಕವೆ ಕರಸ್ಥಲವೆನುತ ನಿಜ
ದೋರಿ ಚೀಲಳಸ್ವಾಮಿ ಬೋಧಿಸುತಿರ್ದ ಶರಣರಿಗೆ॥ ॥ ೩೨ ॥

ಕುಕ್ಷಿಯೊಳು ನಿಕ್ಷೇಪವಾಗಿಹ
ಅಕ್ಷರಂಗಳ ಮೂಲಪ್ರಣಮ ಪ
ರೀಕ್ಷಕೆಗಳ ವಿರತರಿಗೆ ನೃಪರಿಗೆ ಭಕ್ತಸಂಕುಳಕೆ।
ಸಾಕ್ಷಿದೋರುತ ಚಕ್ರದಳಕುಳ
ಲಕ್ಷ ಷಟ್ಸ್ಥಲದಂಗಲಿಂಗ ಕ
ಟಾಕ್ಷ ಚೀಲಳಸ್ವಾಮಿ ಮೋಕ್ಷೋಪದೇಶಗೊಡುತಿಹರು॥ ॥ ೩೩ ॥

ಲಲಿತ ವಾತುಲ ವೀರ ವಿಜಯ ಸು
ಕಲಿತ ಕಾರಣ ತಂತ್ರ ಶ್ರುತಿಶಿರ
ಪಲತೆರದ ಪೌರಾಣ ಸಾಕ್ಷಿ ಸಕೀಲ ಶಾಸ್ತ್ರಗಳ।
ಹಲವು ವಿಧ ಮತಭೇದ ಷಟ್ಸ್ಥಲ
ಕುಲ ಕರಸ್ಥಲ ಸುಖದ ಸಂಜ್ಞೆಯ
ಕಲೆಯ ಚೀಲಳಸ್ವಾಮಿ ಬೋಧಿಸುತಿಹರು ಶರಣರಿಗೆ॥ ॥ ೩೪ ॥

ಪಿಂಡಬ್ರಹ್ಮಾಂಡಗಳ ಬೆಸುಗೆಯ
ಕುಂಡಲಿಯ ಕೂಟಸ್ಥ ಹಸುಗೆಯ
ಮಂಡಲತ್ರಯ ಮಧ್ಯಪ್ರಣಮದ ಪೀಠಬ್ರಹ್ಮವನು।
ತಂಡತಂಡದ ಶಕ್ತಿ ಶಿವಗಣ
ಖಂಡ ಕರಸ್ಥಲ ಪ್ರಭುನಿರೂಪ ಪ್ರ
ಚಂಡ ಚೀಲಳಸ್ವಾಮಿ ಸದ್ಗುರುಬೋಧೆ ಶರಣರಿಗೆ॥ ॥ ೩೫ ॥

ಕೋಟಿ ದೈವದ ಗಂಡ ಶಿವಮತ
ಕೀಟಕರ ಹೃದ್ದಂಡ ರಾಜಕಿ
ರೀಟ ರತ್ನ ಪ್ರಪೀಠ ಶ್ರೀಪದಕಂಜ ಕರ್ನಾಟ।
ತೋಟದಾರ್ಯವತಾರ ದ್ವಿದಳತ್ರಿ

ಕೂಟ ಸಂಗಮದಾಟಕರಾಳ
ನೋಟ ಚೀಲಳಸ್ವಾಮಿ ಷಟ್ಸ್ಥಲಶರಣ ಗುರುವೆಸೆಯೆ॥ ॥ ೩೬ ॥

ಚಕ್ರಪಾಣಿ ಸ್ವಯಂಭು ಸುರಪನ
ವಕ್ರಗತಿ ವೈಭವ ವಿಜಿತ ಭೂ
ಚಕ್ರ ನೃಪದಿಗ್ವರನು ರವಿಶಶಿ ವಂಶ ಪಿಂಡಾಂಡ।
ಚಕ್ರ ನವದಶ ಷಟ್ಕಷೋಡಶ
ಚಕ್ರ ವೇದನಿರೂಪ ಷಟ್ಸ್ಥಲ
ಚಕ್ರವರ್ತಿ ಚೀಲಾಳಸ್ವಾಮಿಯ ಶರಣಸಭೆ ಮೆರೆಯೆ॥ ॥ ೩೭ ॥

ಆದಿಸೂತ್ರಮನಾದಿ ಸೂತ್ರವ
ಸೋದಿಸುತ ಶಿವಶಕ್ತಿ ತತ್ವವ
ನಾದ ಬಿಂದು ಕಳತ್ರಯವ ಸಾವಯವ ನಿರವಯವ।
ಭೇದ ವಿಧಿ ಕೃತ ಸೃಷ್ಟಿಲಯ ಸಂ
ವಾದ ವೇದಾಗಮ ಸಕೀಲವ
ಪಾದಲೋಚನಮೂರ್ತಿ ಚೀಲಳಸ್ವಾಮಿ ಗುರುಭೋಧೆ॥ ॥ ೩೮ ॥

ಅರಿವೆ ಗುರು ಶ್ರುತಿ ಸಿದ್ಧ ಶಿಷ್ಯನೆ
ಶರೀರ ಕ್ರೀಯಾಚಾರವಾಗಮ
ಕರಣ ಮನ ವಿಷಯೇಂದ್ರಿಯಂಗಳೆ ಪರಮಸೇವಕರು॥
ಕರದ ಲಿಂಗವೆ ಪತಿಯು ಶರಣನೆ
ನೆರೆ ಪತಿವ್ರತೆ ಸತಿಯೆನುತ್ತಲಿ
ತೆರೆದ ನಿಷ್ಠೆಯೊಳಿರಲವನೆ ನಿಜಮುಕ್ತ ಕೇಳೆಂದ॥ ॥ ೩೯ ॥

ದೇಹಪ್ರಾಣಭಿಮಾನವಳಿದವ
ಮೋಹಮಲದಭಿಲಾಷೆಗೆಟ್ಟವ
ದೇಹಿಯೆನ್ನದಲಿಹ ಪರಿಚ್ಛೆಯ ತೊರೆದ ಸಂಸೃತಿಯ।
ದಾಹತೆಯನತಿಗಳೆದ ದೇಶಿಕ
ಸಾಹಸಿಗ ನಿಜಮುಕ್ತನೆನುತಿಹ
ರಾಹಸ್ಯ ಶ್ರುತಿದೋರಿ ಚೀಲಳಸ್ವಮಿ ಬೋಧಿಸಲು॥ ॥ ೪೦ ॥

ಅರಿವನಾಚರಣೆಯನು ಜ್ಞಾನದ
ನಿರಿಗೆ ಕ್ರೀಯ್ಗಳ ನಿಷ್ಠೆ ತತ್ವದ

ನೆರವಿ ಮೋಕ್ಷದ ಮಾರ್ಗ ಮಂತ್ರಸ್ಮರಣೆ ಜಪನೇಮ।
ಕರಣಗುಣನಿವೃತ್ತಿ ತನುಮನ
ನಿರಸನವ ಲಿಂಗಾಂಗಸಂಗವ
ಶರಣರಿಗೆ ಬೋಧಿಸಲು ಚೀಲಳಸ್ವಾಮಿ ಶ್ರುತಿಮತವ॥ ॥ ೪೧ ॥

ಕೇಳಿಷಟ್ಸ್ಥಲ ಗುರುನಿರೂಪವ
ಬಾಳ ಹರುಷದಿ ವಿರತ ಭಕ್ತ ಸ
ಮೇಳ ಬಸವನೃಪಾಲ ಶರಣಗಣಾಳಿ ಕುಲತಿಲಕ।
ಭಾಳಲೋಚನ ಭಜಕಜನ ಕರು
ಣಾಳು ಕಲಿಯುಗ ಪ್ರಭುವೆನುತ ಮಣಿ
ಮೌಳಿ ಮಕುಟವ ಚಾಚಿ ಚರಣಕೆ ಹೊಗಳಿದರು ಗುರುವ॥ ॥ ೪೨ ॥

ಧ್ಯಾನ ಧಾರಣ ಮೌನ ಪುರುಷರು
ಮಾನಿಗಳು ಮಾಹಾನುಭವರು
ಶ್ಯೇನಪತಿ ನೃಪಭಕ್ತ ಶರಣ ವಿರಕ್ತ ಷಟ್ಸ್ಥಲ ಸು।
ಜ್ಞಾನ ಗುರು ಚೀಲಾಳಸ್ವಾಮಿಯ
ಸ್ವಾನುಭವದುಪದೇಶ ಶರಧಿ ಚಿ
ದಾನಂದ ತೆರೆಯೊಳಗೆ ಓಲಾಡುತ್ತ ಹೊಗಳಿದರು॥ ॥ ೪೩ ॥

ಗುರುವೆ ಶರಣಾಗತರ ವಂಶೋ
ದ್ಧರವೆ ಮರೆ ಹೊಕ್ಕವರ ಕುಲ ಸುರ
ತರುವೆ ತನು ಮರ ಮರವೆ ತೆರೆ ಪರಿಹರವೆ ದಯರಸದ।
ನೆರವೆ ದುರ್ವಿಷಯಗಳ ಮೂಲದ
ಕೊರವೆ ಸಂಸ್ಕೃತಿಪಾಶಗುಣಸಂ
ಹರವೆ ಕರಸ್ಥಳ ಶಿವಸುಖದ ಸುಧೆಯೆರವೆ ಶ್ರೀಗುರುವೆ॥ ॥ ೪೪ ॥

ಜಯತು ಪುಣ್ಯದ ನಿಧಿಯೆ ಸುಧೆಯೇ
ಜಯತು ಪರುಷದ ಖಣಿಯೆ ಮಣಿಯೇ
ಜಯತು ಮೋಕ್ಷದ ಗಿರಿಯೆ ದೊರೆಯೇ ಷಟ್ಸ್ಥಲದ ಪ್ರಭುವೆ।
ಜಯತು ಜ್ಞಾನದ ಕರುವೆ ಇರವೇ
ಜಯತು ಜಗದಾಚಾರ್ಯವರ್ಯನೆ
ಜಯತು ಪರಶಿವಮೂರ್ತಿ ಚೀಲಳಸ್ವಾಮಿ ಶರಣಾರ್ಥಿ॥ ॥ ೪೫ ॥

ಸಕಲ ಶರಣರು ಸಕಲ ವಿರತರು
ಸಕಲ ಭಕ್ತರು ಸಕಲ ದೊರೆಗಳು
ಸಕಲ ಚರಮೂರ್ತಿಗಳು ಸೈಗೆಡೆದೆದ್ದು ಕಿರ್ತಿಸುತ।
ಸಕಲ ಶ್ರೀಗುರು ತತ್ವಬೋಧೆಯ
ಸುಖರಸಾಮೃತ ತ್ರಪ್ತರಾದರು
ಮುಕುತಿ ವನಿತೆಯ ರಮಣ ಚೀಲಳಸ್ವಾಮಿ ಶರಣಾರ್ಥಿ॥ ॥ ೪೬ ॥

ಶ್ರೀಮಹಾಷಟ್ಸ್ಥಲದ ಭಕ್ತಲ
ಲಾಮರಿಗೆ ಶರಣರಿಗೆ ಇಹಪರ
ನಾಮರೂಪಿನ ನಾಟಕದ ಶ್ರೀ ವೀರಶೈವರಿಗೆ।
ಭೂಮಿಪತಿ ಬಸವಂತರಾಯಗೆ
ಸಾಮರಾಜ್ಯದ ಪಟ್ಟ ಶಿವಪದ
ನೇಮ ನಿಜಸುಖವೆನುತ ಚೀಲಳಸ್ವಾಮಿ ಹರಿಸಿದರು॥ ॥ ೪೭ ॥

ಮಿಸುನಿಗೆಲಸದ ಮಿಸುಪ ರನ್ನದ
ಲೆಸೆವ ಮಂಟಪ ಪೀಠಮಧ್ಯದ
ಕುಶಲ ಕುಸುಮದ ಹಸೆಯ ಪ್ರಣಮದ ಮೇಲೆ ಷಟ್ಸ್ಥಲದ।
ಶಶಿರವಿಯ ಬೆಳಗುಗಳ ಜ್ಯೋತಿಯ
ವಿಸರ ಕಳೆಗಳ ಕಾಯಕಾಂತಿಯ
ಲಸಮ ಚೀಲಳಸ್ವಾಮಿ ಪರಶಿವಯೋಗಿ ಕುಳಿತಿರಲು॥ ॥ ೪೮ ॥

ಶ್ರೀ ಸದಾಶಿವಮೂರ್ತಿ ಷಟ್ಸ್ಥಲ
ದೇಶಿಕೇಂದ್ರರ ನಡುವೆ ಜ್ಯೋತಿ ಪ್ರ
ಕಾಶವೆನೆ ನವರತ್ನಮಂಟಪ ಪೀಠಮಧ್ಯದಲಿ।
ಈಶ ಭಕ್ತ ವಿರಕ್ತ ನೃಪರು
ಲ್ಲಾಸದಿಂದಿರುತಿರಲು ಶ್ರೀ ಕೈ
ಲಾಸದಿಂದ ವಿಮಾನವಿಳಿದುದು ಮಗನೆ ಕೇಳೆಂದ॥ ॥ ೪೯ ॥

ಕರಿಯ ಮಲ್ಲಿಗೆ ಬಿಳಿಯ ಮಲ್ಲಿಗೆ
ಸುರಿದವಾಕ್ಷಣ ದೇವದುಂದುಭಿ
ಮೊರೆದವಂಬರದಿಂದವಿಳಿದುದು ಪುಷ್ಪಕ ವಿಚಿತ್ರ।
ಶರಣ ಶಮಿತಪುರೀಶನೇರಿಸಿ
ತೆರಳಿದರು ಕೈಲಾಸ ಗಣಸಭೆ
ನೆರವಿಯಲಿ ನಿಜಸುಖದಲಿರಿಸಿದನಭವ ಕೇಳೆಂದ॥ ॥ ೫೦ ॥

ಶೈವ ವೈಷ್ಣವ ನಾಮಲಾಂಛನ
ದೈವ ದೀಕ್ಷಿತರಾದ ಪುರುಷರು
ಕೈವಲ್ಯ ಪದ ಶಮಿತಪುರವತಿಗಾದುದಲ ವೀರ।
ಶೈವರಗ್ಗಳವೆನುತ ದಕ್ಷಿಣ
ಕೈವೆರಳ ಘ್ರಾಣಾಗ್ರಕಿರಿಸುತ
ಲೈವದನ ನಮೊ ಎನುತ ಹೊಗಳ್ದರು ಮಗನೆ ಕೇಳೆಂದ॥ ॥ ೫೧ ॥

ಇತ್ತ ಹರಪುರದಲ್ಲಿ ಷಟ್ಸ್ಥಲ
ಕರ್ತ ಚೀಲಳಸ್ವಾಮಿ ಶರಣರ
ಮೊತ್ತಕನುಭವ ಸುಧೆಯ ಕರ್ಣ ಸುಪಾತ್ರೆಗಳ ತುಂಬಿ।
ಚಿತ್ತಹರುಷದಿ ಹೃದಯ ಕ್ಷೇತ್ರದಿ
ಬಿತ್ತಿ ಬೆಳೆಸುತ ಮುಕ್ತಿಫಲಗಳ
ನಿತ್ತು ಸಲಹುತ ಕೆಲವು ಕಾಲದ ಮೇಲೆ ಕೇಳೆಂದ॥ ॥ ೫೨ ॥

ಅವನಿ ಭೋಗವನೆಲ್ಲ ಕರಸ್ಥಲ
ಶಿವನಿಗರ್ಪಿಸಿ ಶಿವಪ್ರಸಾದವ
ಸವಿದು ಶೇಷವ ಕಪಿಲಸಿದ್ಧ ಯತೀಶಗೊಪ್ಪಿಸುತ।
ಅವಿರಳ ಪರಂಜ್ಯೋತಿವೆಳಗಿನ
ಶಿವಯೋಗಿ ತಿಳಿನಿದ್ರ ಮುದ್ರೆಯ
ಸವಿರಸಾಮೃತಭೋಗಿ ಚೀಲಳಸ್ವಾಮಿ ವೈರಾಗಿ॥ ॥ ೫೩ ॥

ಅಂಗದನುಭವ ಸುಖವ ಕರಸ್ಥಲ
ಲಿಂಗಕರ್ಪಿಸಿ ಸಕಲತತ್ವ ಪ್ರ
ಸಂಗ ಶಬ್ದಗಳೆಲ್ಲ ಮಂತ್ರದೊಳಡಕವಾಗಿರಿಸಿ।
ಕಂಗಳೆಡೆಯಾಟಗಳೆ ಬೆಳಗುವ
ಮಂಗಳಾರತಿಯಾಗಿ ಘನಮಹ
ಲಿಂಗ ಚೀಲಳಸ್ವಾಮಿ ಯೋಗಸಮಾಧಿಯಲ್ಲಿಹರು॥ ॥ ೫೪ ॥

ಆಸನವನಳವಡಿಸಿ ಅನಿಲನ
ಸೂಸದಂದದಿ ನಿಲಿಸಿ ಮನವನು
ನಾಸಿಕದ ದೃಷ್ಟಿಯನು ಕರಸ್ಥಲ ಲಿಂಗದಲ್ಲಿರಿಸಿ।
ಶ್ರೀಸಕಲ ಶಿವತತ್ವಜ್ಞಾನಪ್ರ

ಕಾಶ ನಿರುಪಮಜ್ಯೋತಿ ಚೀಲಾ
ಳೇಶ ಪರಶಿವಯೋಗನಿದ್ರಾಮುದ್ರೆಯೊಳಗಿಹರು॥ ॥ ೫೫ ॥

ಅಣಿಯೊ ಅಣಿಮಾದಿಗಳೋ ಅಮೃತದ
ಡೊಣೆಯೊ ಸಾತ್ವಿಕ ಗುಣಗಣದ ಸಂ
ದಣಿಯೊ ಪರುಷದ ಖಣಿಯೊ ಚಿಂತಾಮಣಿಯೊ ಷಟ್ಸ್ಥಲದ।
ಪ್ರಮಣಪುರುಷನೊ ಪಂಚವಕ್ತ್ರನೊ
ಮಣಿವಿಭೂಷನೊ ಭಸಿತಲೇಪನೊ
ತ್ರಿಣಯನನೊ ಚೀಲಳಸ್ವಾಮಿಯೊ ತಿಳಿಯಲರಿದೆಂದ॥ ॥ ೫೬ ॥

ಶರಣರಿಗೆ ಷಟ್ಸ್ಥಲಕೆ ಸಮಯದ
ವಿರತರಿಗೆ ಶ್ರೀವೀರಶೈವಕೆ
ಧರಣಿಪತಿ ಬಸವಂತರಾಯಗೆ ಧನಿಕ ಭಕ್ತರಿಗೆ।
ಹರಸಭೆಗೆ ಗಣಸಭೆಗೆ ಶುಭವನು
ಹರಪುರದ ದೊರೆತನಕೆ ಜಯವನು
ಕರುಣಿಸಲಿ ರಕ್ಷಿಸಲಿ ಚೀಲಳಸ್ವಾಮಿ ಸಕಲವನು॥ ॥ ೫೭ ॥

ಅಭವ ಗೌರಿಗೆ ನಂದಿ ಶಿವಗಣ
ಸಭೆಗೆ ಪೂರ್ವದಲೊರೆದ ಶ್ರುತಿಮತ
ಪ್ರಭುವೆ ವೃಷಭಗೆ ಚೆನ್ನಬಸವಗೆ ಪ್ರಮಥ ಸಂಕುಳಕೆ।
ಶುಭಕರದ ಹರಪುರದ ಶ್ರೀಗಿರಿ
ಪ್ರಭಲ ಷಟ್ಸ್ಥಲಕರ್ತ ಬಸವ
ಪ್ರಭು ಕುಮಾರನಿಗೊರೆದ ಹರಗುರುವಚನಸೂತ್ರವಿದು॥* ॥ ೫೮ ॥

❖❖

* ಇತಿ ಏಕವಿಂಶತಿ ಸ್ಕಂಧ ನಿರೂಪಣಂ. ಅಂತು ಉಭಯ ೧೦೫೫ಕ್ಕಂ ಮಂಗಳ ಮಹಾಶ್ರೀ

ದ್ವಾವಿಂಶತಿ ಸ್ಕಂಧ

ರಾಗ : ಕಲ್ಯಾಣಿ

ಗಿರಿಜೆ ಹರನಡಿಗೆರಗಿ ಷಟ್ಸ್ಥಲ
ದೆರೆಯ ಚೀಲಳಸ್ವಾಮಿ ಧರಣಿಗೆ
ತೆರಳಿ ಮರಳದ ಪರಿಯನರುಹೆನಲೊರೆದ ಶಿವ ಸತಿಗೆ॥

ಶ್ರೀಗೌರಿಮುಖಕಮಲದರ್ಪಣ
ಯೋಗಿಗಳ ಹೃತ್ಕಂಜಭಾಸ್ಕರ
ಭೋಗಿಗಳ ಸುಕೃತಾಬ್ಧಿಚಂದ್ರಮ ಚರಣ ಷಟ್ಸ್ಥಲದ।
ಆಗಮೀಕರ ಗರುಡಿ ಪರಮ ವಿ
ರಾಗಿಗಳ ಕೈವಲ್ಯನಿಧಿ ಭವ
ರೋಗಭೇಷಜ ಶರಣು ಶಂಕರ ಸಲಹು ಮೂಜಗವ॥ ॥ ೧ ॥

ಯತಿಗಳ ಶಿರೋಮಣಿಯೆ ಯೋಗಿಗ
ಳತಿಶಯನುಭವ ಬೋಧಮೂರ್ತಿಯೆ
ಪತಿವ್ರತೆಯರಿಗೆ ಪ್ರಾಣಲಿಂಗ ಪ್ರಣಮಮಂಜರಿಯೆ।
ಸಿತಗಳನ ಹೃತ್ಕಮಲಜ್ಯೋತಿಯೆ
ಮತದ ಹಗೆಗಳ ಗಂಡಮಹಿಮೋ
ನ್ನತನೆ ಷಟ್ಸ್ಥಲಬ್ರಹ್ಮಿ ಚೀಲಳಸ್ವಾಮಿ ಗುರು ಶರಣು॥ ॥ ೨ ॥

ಸಕಲಗುಣ ಸಂಪತನ್ನರಿಗೆ
ಸಾತ್ವಿಕ ಪುರುಷರಿಗೆ ಶಾಂತರಿಗೆ ಸಂ
ಮುಖದ ಷಟ್ಸ್ಥಲಭಕ್ತರಿಗೆ ಶಿವಶರಣ ಸಂತರಿಗೆ।
ಸುಖನಾಗಿ ನಡೆವರಿಗೆ ಸೋಂಕಿದ

ಸುಖವ ಶಿವನಿಗೆ ಕೊಡುವರಿಗೆ ನಗೆ
ಮುಖದಿ ಬೋಧಿಸು ಸುತನೆ ಈ ಷಟ್ಸ್ಥಲಶಿವಾಯಣವ॥ ॥ ೩ ॥

ಕೆರೆಯನೊಡೆವಗೆ ಬಾವಿ ಹೂಳ್ವಗೆ
ಗುರು ಶಿವಾಲ್ಯವ ಕೆಡಿಸುವವನಿಗೆ
ಅರವಟಿಗೆಯಳಿವವಗೆ ಕಟ್ಟೆಯ ಮರನ ತರಿಸುವಗೆ।
ಹರನ ಶರಣರಿಗೆರಡ ಬಗೆವಗೆ
ಪರಮವಿರತರ ಮಠವ[1][ಕೀ][1]ಳ್ವಗೆ
ಹರಳಿಗಗೆ ಬೋಧಿಸದಿರೀ ಷಟ್ಸ್ಥಲಶಿವಾಯಣವ॥ ॥ ೪ ॥

ಚಂದ್ರಧರ ಪಾರ್ವತಿಗೆ ನಂದಿ ಗ
ಣೇಂದ್ರನಿಕರಕ್ಕೊರೆದ ಪ್ರಭು ವೃಷ
ಭೇಂದ್ರನಿಗೆ ಬೋಧಿಸಿದ ಕಲ್ಯಾಣದಲಿ ಪೂರ್ವದಲಿ।
ಸಾಂದ್ರ ಕೀರ್ತಿ ವಿಳಾಸ ಹರಪುರ
ಮಂದ್ರ ತಟ ಷಟ್ಸ್ಥಲದ ಗುರು ಯೋ
ಗೇಂದ್ರ ಬಸವಪ್ರಭು ಕುರಮಾರನಿಗೊರೆದ ಸೂತ್ರವಿದು॥ ॥ ೫ ॥

ಶ್ರೀಗುರುವೆ ಶಿಷ್ಯಾಳಿಗಮೃತದ
ಸಾಗರವೆ ಶರಣಾಗತರ ಸುಕೃತ
ಪಾಗರವೆ ಷಟ್ಸ್ಥಲದ ಶರಣರ ಯೋಗಮಂದಿರವೆ।
ಭೋಗಮೋಕ್ಷದ ಕರುವೆ ಪರಿಭವ
ರೋಗಕುಲಸಂಹರನೆ ಬಹು ಚೆ
ನ್ನಾಗಿ ಚೀಲಳಸ್ವಾಮಿ ಯೋಗಾಗಮವನರುಹೆಂದು॥ ॥ ೬ ॥

ನಸುನಗುತ ಗುರುಚರಣಕಮಲಕೆ
ನೊಸಲ ಚಾಚುತ ಕೀರ್ತಿಸುತ ಕರ
ಬಿಸರುಹಂಗಳ ಮುಗಿದು ನಿಂದಿಹ ಶಿಶುವ ಮುದ್ದಿಸುತ।
ಶಶಿವದನೆ ಪಾರ್ವತಿಗೆ ಪರಶಿವ
ನುಸುರಿದನು ಭವಯೋಗಸಾರದ
ಕುಶಲಬೋಧೆಯ ಲಾಲಿಸೆಂತೆನಲೊರೆದ ದೇಶಿಕನು॥ ॥ ೭ ॥

೧–೧ ಕೀ(ಮೂ).

ನಂದಿಕೇಶ್ವರ ಭೃಂಗಿ ಗಣಪತಿ
ಸಂದ ವೀರನು ಭದ್ರಕಾಳಿಯು
ಇಂದುಮುಖಿ ಪಾರ್ವತಿಯು ಭಾಗೀರಥಿ ಸಹಿತ ಪ್ರಮಥ।
ವೃಂದ ಷಟ್ಸ್ಥಲ ಶರಣರಸತಿ ಸಂ
ಬಂಧ ಶಾರದ ನಾರದ ರಸಾ
ನಂದ ಗಣ ಶಿವನೋಲಗದ ಸಂದಣಿಯನೆಂತೊಗಳ್ವೆಂ॥ ॥ ೮ ॥

ವೇದಪಾಠಕರಿಂದಲಾಗಮ
ಬೋಧಕರ ಪಡೆಯಿಂದ ನೂತನ
ವಾದ ಪೌರಾಣಗಳ ಕಥೆಗಳ ಕೇಳ್ವ ಹೇಳ್ವರ।
ಪಾದತೀರ್ಥ ಪ್ರಸಾದಗಳ ಸಂ
ಪಾದಿಸುವ ದೇಶಿಕರ ಘೋಷದಿ
ಪಾದನೇತ್ರನ ಸಭೆ ವಿರಾಜಿಸುತಿರ್ದುದತಿಶಯದಿ॥ ॥ ೯ ॥

ಅಷ್ಟದಿಕ್ಪಾಲಕರ ಸಂದಣಿ
ಯಷ್ಟವಸುಗಳ ಬಳಗ ತಿಂತಿಣಿ
ಯಷ್ಟವರಣವಿಭೂಷಣರ ಘನ ಪ್ರಮಥಗಣ ಶ್ರೇಣಿ।
ಅಷ್ಟ ಸುಯಿಧಾನಗಳ ಹೇಳುವ
ರಷ್ಟವಿಂಶತಿ ಕೋಟಿ ಷಟ್ಸ್ಥಲ
ನಿಷ್ಠೆವಂತರನಂತ ಶಿವಸಭೆಯೊಳಗೆ ಕುಳಿತಿಹರು॥ ॥ ೧೦ ॥

ಪಂಚಮುಖ ದಶಭುಜ ತ್ರಿಣೇತ್ರರು
ಕಾಂಚಿಕೌಸ್ತುಭ ಚಕ್ರಹಸ್ತರು
ಅಂಚೆಗತಿಯಪರಂಜಿಗರ್ಭರು ವಜ್ರಕರಧರರು।
ಕುಂಚ ಸಂಚಿ ಕಾಳಂಜಿ ಹಿಡಿವರು
ಅಂಚಿನಲಿ ಚತುರ್ಯುಗದ ಗುರುಗಳು
ಪಂಚಮುಖನೋಲಗದೊಳಿರ್ದರು ತಂಡ ತಂಡದಲಿ॥ ॥ ೧೧ ॥

ವಾಲಗದ ವೈಭವದ ಜನರು ವಿ
ಶಾಲದೂಳಿಗದವರು ಹಡಪದ
ವಾಲ ಪಾವಡ ಸೀಗುರಿಯ ದರ್ಪಣದ ಹಾವಿಗೆಯ।
ಕಾಳೆ ಮದ್ದಳೆ ಶಂಖ ಜಾಗಟೆ

ತಾಳಮೇಳದ ಭಟ್ಟ ನಟ್ಟುವ
ರಾಳಿ ಮನುಮುನಿ ಋಷಿಗಳಿರ್ದರು ಶಿವನ ಸಭೆಯೊಳಗೆ॥ ॥ ೧೨ ॥

ಬುದ್ಧಿವಂತರು ಭೂತಹಿತದಯ
ಸಿದ್ಧಸಾಧ್ಯರು ಶೀಲ ಷಟ್ಸ್ಥಲ
ವೃದ್ಧಚಾರವ ಹೇಳಿಕೇಳುವ ಹಿತರ ತಿಂತಿಣಿಯ।
ಮಧ್ಯದಮಲ ವಿಚಿತ್ರ ಮೃದುತರ
ಗದ್ದಿಗೆಯ ನಲಿದೇರಿ ಹೊಳೆವುತ
ಲಿರ್ದ ಪರಶಿವಮೂರ್ತಿ ಪಾರ್ವತಿ ಸಹಿತ ನಸುನಗುತ॥ ॥ ೧೩ ॥

ಅವಗಡದ ಹರಿ ಗರ್ವಗೆಡಿಸುವ
ಸವರಿಡುವ ಸರಸಿಜನ ಹಮ್ಮನು
ತಿವಿದಿಡುವ ಮೀರಿದರ ರಕ್ಕಸರುಕ್ಕ ನೆಗ್ಗಿಡುವ।
ಜವನ ಮೆಟ್ಟುವ ಸ್ಮರನ ದಹಿಸುವ
ಹವಿಕೃತನ ಶಿರವರಿವ ವೀರರು
ಶಿವನ ಬಳಲಿನಲಿರ್ದುದಗಣಿತ ರುದ್ರಗಣ ನಿಕರ॥ ॥ ೧೪ ॥

ಸೆಣಸಿದರ ಸಿಗಿದಿಡುವ ಮಲತರ
ಹಣೆಯ ಬರಹವ ತೊಡೆವ ಕೊಬ್ಬಿದ
ರಣಲುಗಳ ಕಿತ್ತಿಡುವ ವಾದಿಸೆ ಹಲ್ಲ ಮುರಿದಿಡುವ।
ಅಣಕಿಪರ ನಾಲಗೆಯ ಕೊಯಿಸುವ
ಮಣಿಯದಿದ್ದರ ಕಣ್ಣ ತೆಗೆಸುವ
ಗಣನಿಕರವೊಪ್ಪಿಹುದು ತ್ರಿಣಯನ ಬಳಸಿ ಸಭೆಯೊಳಗೆ॥ ॥ ೧೫ ॥

ಶಿವಗೆ ಮಲೆತರೆ ಶಿರವನೆತ್ತುವ
ಭವಗೆ ಮುಳಿದರೆ ಭಂಗಬಡಿಸುವ
ಶಿವಶರಣರಡಿಗೆರಗದಿಹ ಡಂಭಕರ ಮೂಗರಿವ।
ಶಿವಕುಳವ ಹಳಿವವರ ಕುಕ್ಕುವ
ಶಿವಭಕ್ತಿ ಇಲ್ಲದರ ತಿಕ್ಕುವ
ಶಿವನ ಸಭೆಯೊಳಗಿರ್ದರಗಣಿತ ಮತಪ್ರತಿಷ್ಠಿತರು॥ ॥ ೧೬ ॥

ಗಜಬಜಿಗಳೇನಜ ಹರಿಗಳಿರ
ಗುಜುಗುಜೇನಿದು ಸುರಪ ಸುಮನಸ

ಸುಜನ ಋಷಿಗಳೆ ಸುಮ್ಮನಿರಿ ದಿಕ್ಪಾಲರೆಚ್ಚರಿಕೆ।
ಗೊಜಡು ಗೋಷ್ಠಿಗಳೇಕೆ ಬುಧರಿಗೆ
ಮಜರೆ ಭಾಪುರೆಯೆನುತ ಪರಮನ
ಹುಜುರಿನಲೆ ನಿಂದಿಹರು ಬೆತ್ತವ ಹಿಡಿದು ದೊಡ್ಡವರು॥ ॥ ೧೭ ॥

ತುಂಬುರರ ನಾರದರ ಗಾನದ
ಕಂಬಲಾಶ್ವತರುಗಳ ಗೀತದ
ರಂಭೆಯೂರ್ವಶಿ ನಾಟಕದ ಗಾಂಧರ್ವ ಗರುಡುರಗ।
ಬೆಂಬಳಿಯ ಶ್ರೀವಾಣಿ ಹನುಮಾ
ಡಂಬರದ ನಾರದನ ಭೃಂಗಿಯ
ಸಂಭ್ರಮದ ಪರಿಹಾಸ್ಯ ರಸ ಶಿವಸಭೆಯ ಮುಚ್ಚಿದುದು॥ ॥ ೧೮ ॥

ಋಷಿಗಳಿಗೆ ಉತ್ಸಾಹವುಣ್ಮಿತು
ಒಸಗೆ ಮನುಮುನಿಗಳಿಗೆ ಒದಗಿತು
ಅಸಮ ಷಟ್ಸ್ಥಲಪ್ರಮಥರಿಗೆ ಆನಂದಮಯವಾಯ್ತು।
ಬಿಸಜಭವ ವಿಷಜಾಕ್ಷ ಸುರಪಗೆ
ಮುಸುಕಿದುದು ಸಂತೋಷ ಶರಧಿಯು
ಶಿಶುವೆ ನಾರದ ಭೃಂಗಿ ಹಾಸ್ಯವನುಪಮಿಸಲ್ಕಳವೆ॥ ॥ ೧೯ ॥

ಕೇಳೊ ಮಗನೇ ಪರಶಿವನ ಸಭೆ
ಯೋಲಗದ ವಿಸ್ತೀರ್ಣ ಠೀವಿಯ
ಹೇಳೆ ಕವಿಗಳವಲ್ಲ ಶ್ರುತಿತತಿಗರಿದು ವರ್ಣಿಪಡೆ।
ಭಾಳಲೋಚನ ಭಸಿತ ಲೇಪನ
ಬಾಲಚಂದ್ರಮ ಮೌಳಿ ಗಂಗಾ
ಕಾಳಿ ವಮದಿ ಸಹಿತ ಶಂಕರ ನಗುತ ಸುಖಮಿರಲು॥ ॥ ೨೦ ॥

ಸಿರಿ ಸರಸ್ವತಿ ಶಚಿಯರುಂಧತಿ
ಪರಮ ಪತಿವ್ರತೆ ದಿವ್ಯದೇವಿಯು
ಪರಮ ಋಷಿಗಳ ಪತ್ನಿ ಲೋಪಾಮುದ್ರೆ ಸುಮನಸರ।
ಅರಸಿಯರು ದಿಗ್ವರರ ಸತಿಯರು
ತರಣಿ ಶಶಿಸತಿ ರೋಹಿಣಿಯು ರತಿ
ಹರುಷದಲಿ ಸೇವಿಸುತಲಿರ್ದರು ಶಿವನ ಶಕ್ತಿಯನು॥ ॥ ೨೧ ॥

ಅಂಬುಜೋದ್ಭವನಂಬುಜಾಂಬಕ
ಜಂಭರಿಪು ಜಮದಗ್ನಿ ಕಾಶ್ಯಪ
ರೆಂಬ ಋಷಿಗಣ ಪ್ರಮಥ ಮನುಮುನಿ ದೇವದಿಗ್ವರರು।
ತುಂಬಿತುಳುಕುವ ಸಭೆಯ ಮಧ್ಯದಿ
ಶಾಂಭವಿಯು ಶಾಂಭವನ ಶ್ರೀ ಪಾ
ದಾಂಬುಜಕ್ಕೆದ್ದೆರಗಿ ಕೀರ್ತಿಸಿ ಕೈಮುಗಿದು ನಿಂದು॥ ॥ ೨೨ ॥

ವೀರಶೈವಾಚಾರ ಪಾರಾ
ವಾರ ಚಂದ್ರಚಕೋರ ಷಟ್ಸ್ಥಲ
ಮೇರುಮಂದಿರ ಕರ್ತೃ ಚೀಲಳಸ್ವಾಮಿ ಧರಣಿಯಲಿ।
ಕಾರಣೀಕದ ಯೋಗಿಯೆನುತಲಿ
ನಾರದನು ನಿಮ್ಮಡಿಗೆರಗಿ ಕರ
ವಾರಿಜಂಗಳ ಮುಗಿದು ಬಿನ್ನಹ ಮಾಡೆ ಕೇಳಿರ್ದೆ॥ ॥ ೨೩ ॥

ಚಿತ್ತಮಧ್ಯದಲೊಗೆದ ಮಹಿಮನ
ಮರ್ತ್ಯಲೋಕಕೆ ಕಳುಹಿದನ ಘನ
ಚಿತ್ತವರಿಯದುದುಂಟೆ ನಾರದನೂಹೆಯಿಂದೇನು।
ಉತ್ತರೋತ್ತರ ಹರಪುರದ ಗಿರಿ
ಯೊತ್ತಿನನುಭವ ಸಿಂಹಪೀಠವ
ಹತ್ತಿ ಚೀಲಳಸ್ವಾಮಿಯೋಗದೊಳಿರುವ ಬಿಂಕವನು॥ ॥ ೨೪ ॥

ಶ್ರೀ ಶಿವನೆ ಬೆಸನೆನಗೆ ಚೀಲಾ
ಳೇಶ ಯೋಗಸಮಾಧಿಯೊಳಗಿರೆ
ದೇಶಿಕ ವಿರಕ್ತರಿಗೆ ಷಟ್ಸ್ಥಲಕರ್ತರಾರೆನಲು।
ಭಾಸುರಾಂಗಿಯೆ ಕೇಳ್ಕಪಿಲ ಸಿ
ದ್ಧೇಶನೆಂಬ ಗಣೇಶನಿಗೆ ಉಪ
ದೇಶಜ್ಞಾನಪ್ರಕಾಶಬೋಧೆಯ ತುಂಬಿಯಾ ಬಳಿಕ॥ ॥ ೨೫ ॥

ಭೂಮಿಭಾರವನಿಳುಹಿ ಚೀಲಳ
ಸ್ವಾಮಿ ಷಟ್ಸ್ಥಲಪೀಠ ಪಟ್ಟದ
ಸಾಮರಾಜ್ಯದ ಶಿಖಿನಿರೂಪವ ಕಪಿಲಸಿದ್ಧನಿಗೆ।
ನೇಮಕವ ಮಾಡಿರಿಸಿ ಶರಣರ
ಸ್ತೋಮವನು ಭಾವಿಕರು ಪುಸ್ತಕ
ವಾ ಮಹಿಮಗೊಪ್ಪಿಸುತ ದೇವಭಕ್ತನೃಪ ಸಹಿತ ॥ ೨೬ ॥

ಧರೆಗೆ ಧರ್ಮವ ಬೆಳಸಿ ಷಟ್ಸ್ಥಲ
ದೊರೆತನವ ಸ್ಥಿರಗೊಳಿಸಿ ಸಮಯದ
ಶರಣವಿರತರ ಪರಮಸುಖದೊಳಗಿರಿಸಿ ಹರಪುರದ।
ದೊರೆಗೆ ಸ್ಥಿರಪಟ್ಟಗಳ ಕಟ್ಟಿಸಿ
ಕರಸಿ ಕರುಣದಿ ಹರಸಿ ಭಕ್ತರ
ನೆರವಿಗಭಯವನಿತ್ತು ಯೋಗಸಮಾಧಿಯೊಳಗಿಹನು॥ ॥ ೨೭ ॥

ಮಿಂಡಜಂಗಮ ಪಡೆಯ ದೋಚಿಸಿ
ತುಂಡಾಂಡಿಗಳ ತೂರಿ ಹಾರಿಸಿ
ದಿಂಡೆಯೊಡೆಯರ ದಂಡ ಸಮಯದ ಕಡೆಗೆ ತೆಗೆದಿಡಿಸಿ।
ಮಂಡೆ ಬೋಳಾದವರ ನಡೆ ನುಡಿ
ಗಂಡು ದೀಕ್ಷೆಯನಿತ್ತು ಷಟ್ಸ್ಥಲ
ಹಿಂಡ ಕೂಡಿಸಿ ಗೌರಿವರ ಶಿವಯೋಗದಲ್ಲಿಹನು॥ ॥ ೨೮ ॥

ಲಿಂಗನಿಷ್ಠರೆ ಎನ್ನ ಪ್ರಾಣವು
ಜಂಗಮಾರ್ಚಕರೆನಗೆ ಜೀವವು
ಲಿಂಗಜಂಗಮ ಭಕ್ತದ್ರೋಹಿಗಳೆನಗೆ ಬಹುದೂರ।
ಭಂಗಿಮುಕ್ಕರು ಮದ್ದುಗಾರರು
ವಂಗಚುಂಗಿನ ಕ್ರೂರವೇಷದ
ಜಂಗುಳಿಯೆ ಷಟ್ಸ್ಥಲಕೆ ಸಲ್ಲರು ಗಿರಿಜೆ ಕೇಳೆಂದ॥ ॥ ೨೯ ॥

ಆಚಾರ ಭ್ರಷ್ಟರಿಗೆ ಮತವೆ ಕ್ರಿ
ಯಾಚಾರ ಹೀನರಿಗೆ ಸಮಯವೆ
ಆಚಾರ ರಹಿತರಿಗೆ ಷಟ್ಸ್ಥಲಜ್ಞಾನ ದೀಕ್ಷೆಗಳೆ।
ಆಚಾರವಿರೆ ಗುರುವು ಶ್ರುತಿಮತ
ವಾಚಾರವಿರೆ ಲಿಂಗವಾಗಮ
ವಾಚಾರವಿರಲವ ನಿರಂಜನ ಪರಮದೇಶಿಕನು॥ ॥ ೩೦ ॥

ಯತಿಗಳಿಗೆ ತಲೆವಾಗಿ ಬಾಳದ
ಮತದ ಹಿರಿಯರಿಗಂಜಿ ನಡೆಯದ
ವ್ರತನೇಮ ಲಿಂಗಾಂಗ ಸಮರಸ ಶ್ರದ್ಧೆಯಿನಿತಿರದ।
ಕೃತಕ ಬೋಧೆಯ ಪಂಚಮಹ ದಶ

ಶತ ಸಹಸ್ರದ ಪಾತಕರ ಸ್ವಯ
ಮತಕೆ ಹೊರಗಿಡಿಸುತ್ತ ಯೋಗಸಮಾಧಿಯೊಳಗಿಹರು॥ ॥ ೩೧ ॥

ಎನಲು ಪಾರ್ವತಿ ಘನ ಹರುಷದಲಿ
ವಿನಯನಂಘ್ರಿದ್ವಯಕೆರಗಿ ಕರ
ವನಜಯುಗಳವ ಮುಗಿದು ಕೀರ್ತಿಸೆ ನಗುತ ಬೆಸಗೊಂಡ।
ಕನಕಗಿರಿ ಕೈಲಾಸವಾಸನೆ
ಮನುಮುನೀಶ್ವರರಂತರಂಗನೆ
ಚಿನುಮಯನೆ ಚೀಲಾಳಸ್ವಾಮಿಯ ಯೋಗದತಿಶಯವ। ॥ ೩೨ ॥

ಕರುಣಿಸೆನಗೆ ದಯಾಪರಾತ್ಮಕ
ಗುರುವೆ ಬೋಳೆಯರರಸ ಷಟ್ಸ್ಥಲ
ಶರಣಗಣ ದೇಶಿಕನ ಯೋಗಸಮಾಧಿಯಾಗಮವ।
ಗುರುತಿನನುಭವ ಜ್ಞಾನ ಬೋಧಾ
ಶರಧಿ ಚಂದ್ರಮ ಚೀಲಳೇಶನ
ಚರಣಕಮಲಕೆ ಶರಣು ಶಂಕರ ನಿಮಗೆ ಶರಣೆನಲು॥ ॥ ೩೩ ॥

ಕಮಲಮುಖಿ ಕಮಲಾಕ್ಷಿ ಕಾಮನ
ರಮಣಿರಕ್ಷಣಿ ರಸಿಕಮಧುರ
ಭ್ರಮರಕುಂತಳೆ ರಮೆಯ ಭಾರತಿಯಸುರಕುಲದೇವಿ।
ವಿಮಲಹೃದಯದ ಜ್ಯೋತಿ ಷಟ್ಸ್ಥಲ
ಸಮಯಪ್ರಭು ಚೀಲಾಳಸ್ವಾಮಿಯ
ಸಮರಸದ ಶಿವಯೋಗ ಘನತೆಯ ಗಿರಿಜೆ ಕೇಳೆಂದ॥ ॥ ೩೪ ॥

ಅಳಿಗುರುಳ ಎಳೆನಗೆಯ ನೊಸಲಿನ
ಹೊಳೆವ ಕಂಗಳ ಹಂಸಗಮನದ
ಕಳಶಕುಚ ನಳಿತೋಳ ಚಂಪಕಕುಸುಮ ನಾಸಿಕದ।
ಎಳೆವರೆಯದೇಣಾಂಕ ವದನದ
ಗಿಳಿನುಡಿಯ ಸುಲಿಪಲ್ಮುಗುಳ್ನಗೆ
ಕಳೆಯ ಮೋಹಿನಿ ಬೊಂಗೆ ತ್ರೈಜಗದಂಬೆ ಕೇಳೆಂದ॥ ॥ ೩೫ ॥

ಶ್ರೀಕಾರ ಸಮ ಕರ್ಣೆ ಸೌಂದರಿ
ರಾಕೇಂದು ಸಮ ವದನೆ ರಂಜಿಪ

ರೇಖೆ ಲಕ್ಷಣ ಹಸ್ತೆ ಸದ್ಗುಣವಂತೆ ಬಹುಶಾಂತೆ।
ಶ್ರೀಕುಲಶಿರೋಮಣಿಯೆ ಖಣಿಯೆ
ಲೋಕನಾಯಕಿ ಲೋಲೆ ಪಾರ್ವತಿ
ಏಕ ಚಿತ್ತದಿ ಕೇಳು ಚೀಲಲಸ್ವಾಮಿ ಯೋಗವನು॥ ॥ ೩೬ ॥

ತಳಿರಡಿಯ ತಾವರೆಯ ಕೂರ್ಮನ
ಎಳೆಯ ಹುಲ್ಲೆಯ ಹೇಮಗುಬ್ಬಿಯ
ಕಳೆಯ ಸ್ಮರ ಮೂಡಿಗೆಯ ಸ್ವರ್ಣಸ್ತಂಭ ಕೇಸರಿಯ।
ಮಳಲಗುಪ್ಪೆಯ ಸುಳಿಯ ಶೇಷನ
ಗಿಳಿಯ ಕೋಗಿಲೆಯಂಚೆ ತಾರೆಯ
ಹಳಿವ ಚಿನ್ನದ ಸರಳೆ ಹರಳೇ ತರಳೆ ಕೇಳೆಂದ॥ ॥ ೩೭ ॥

ಅಂಬುಜವ ದರ್ಪಣವ ಚಂದ್ರನ
ತುಂಬೆ ಕಾಡಿಗೆ ಕಾರ್ಮುಗಿಲ ದಾ
ಳಿಂಬ ವಜ್ರವ ಕುಂದವ್ರಜ ತಿಳ ಕುಸುಮ ಚಂಪಕವ।
ಬಿಂಬಫಳವ ಪ್ರವಾಳ ರತ್ನ ವಿ
ಡಂಬ ಸ್ತ್ರೀವರ್ಣಗಳ ಕವಿಗಳ
ಸಂಭ್ರಮವೆ ಶಿವಯೋಗವಸದಳ ಗಿರಿಜೆ ಕೇಳೆಂದ॥ ॥ ೩೮ ॥

ಜಡೆಗೆ ಶೇಷಗೆ ಮುಡಿಗೆ ನವಿಲಿಗೆ
ನುಡಿಗೆ ೧[ಶುಕ]೧ ಗೆ ನಡೆಗೆ ಹಂಸೆಗೆ
ಕಡೆಗಣ್ಣ ನೋಟಕ್ಕೆ ಮಿಂಚಿಗೆ ತೊಡೆಗೆ ಕದಳಿಗೆ ಶ್ರೀ।
ಪಡಿಗಟ್ಟಿ ಹೋಲಿಸುವ ಕವಿಗಳ
ಬೆಡಗಿನುಪಮೆಗಳಲ್ಲ ಷಟ್ಸ್ಥಲ
ದೊಡೆಯ ಚೀಲಲಸ್ವಾಮಿ ಯೋಗಸಮಾಧಿ ಕೇಳಗಜೆ॥ ॥ ೩೯ ॥

ಪಾದ ಸರಗೆಜ್ಜೆಗಳ ಗಗ್ಗರ
ನಾಡ ಪಾಡಗ ವೀರಮುದ್ರೆಯ
ಮೋದ ಮಂಟೆಗೆ ಮಿಂಚು ಪಿಲ್ಲಿಯ ಒಡವೆ ಒಡ್ಯಾ।
ನಾದ ಘಂಟೆಯ ಸರದ ಸರಿ ವಲ
ಯಾದಿ ಸತಿಯರ ಒಡವೆ ವರ್ಣ ವಿ
ನೋದ ಕವಿಗಳ ಸೊಗಸೆ ಪರಶಿವಯೋಗ ಕೇಳೆಂದ॥ ॥ ೪೦ ॥

೧-೧ ಶೇಷೆ(ಮೂ).

ಹಾರ ಹೀರಾವಳಿಯ ತಾಲಿಯ
ದಾರ ಕರಡಿಗೆ ಸರದ ವಾಲೆಯ
ತೋರಮುತ್ತಿನ ಮೂಕುತಿಯ ಭುಜಕೀರ್ತಿಯಂತೆಯದ।
ಸೀರೆ ರವಕೆಯ ಶಿಸ್ತುದಸ್ತಿನ
ಕೋರೆಯುಂಗುರ ಕಡಗ ಬಳೆ ಶೃಂ
ಗಾರ ಕವಿಗಳ ವರ್ಣವೇ ಶಿವಯೋಗ ಕೇಳೆಂದ॥ ॥ ೪೧ ॥

ತುರುಬಿಗಿಕ್ಕುವ ಗುಬ್ಬಿ ರೇಗಟೆ
ಗರಿಯ ಕೇತಕಿ ಕುಸುಮ ಸರಗಳ
ಬೆರಳ ಮುದ್ರೆಯ ಕೊರಳ ಪದಕದ ಹಸ್ತಿ ಕುಚ್ಚುಗಳ।
ಶಿರ ಕಿರೀಟವ ಚರಣ ಭರಣವ
ಪರಿಮಳವ ದಿವ್ಯಾಂಬರವನೊರೆ
ದೊರೆದು ಬಣ್ಣಿಪ ಕವಿತೆಯೇ ಶಿವಯೋಗವಗಜಾತೆ॥ ॥ ೪೨ ॥

ಅಸ್ತಮಾನದ ಉದಯಮಾನದ
ವಿಸ್ತರದ ಹದಿನೆಂಟು ವರ್ಣದ
ಪ್ರಸ್ತುತದ ಸಂಸ್ಕೃತದ ಪ್ರಾಕೃತವಲ್ಲ ಷಟ್ಸ್ಥಲದ।
ವಸ್ತು ಚೀಲಳಸ್ವಾಮಿಯೋಗದ
ವಿಸ್ತೀರ್ಣ ತತ್ವೋಪದೇಶದ
ಶಿಸ್ತಿನನುಭವಯೋಗ ಕರಸ್ಥಳ ಸೂತ್ರ ಕೇಳೆಂದ॥ ॥ ೪೩ ॥

ಯುಗಯುಗಾಂತ್ರವ ಬಲ್ಲ ಹಿರಿಯರು
ನಿಗಮವಾಗಮವರಿದ ಪುರುಷರು
ಬಗೆಬಗೆಯ ಸಂಧಾನ ಮುದ್ರೆಯ ಯೋಗಲಕ್ಷಣವ।
ಬಗೆದು ಹೇಳ್ವರು ಉಭಯವೆನುತಲಿ
ಅಗಜೆಯೋಗವದಲ್ಲವೆಂತೆನೆ
ನೆಗೆವ ಮನ ಕರಸ್ಥಲದಿ ನಿಂದುದು ಯೋಗ ಕೇಳೆಂದ॥ ॥ ೪೪ ॥

ಹಿರಿಯರೆಲ್ಲರು ಹಿತವರೆಲ್ಲರು
ವಿರತರೆಲ್ಲರು ವಿಮಲರೆಲ್ಲರು
ಗುರುತಿನನುಭಾವಿಗಳು ಚತುರಾಚಾರ್ಯ ಷಟಸ್ಥಲದ।
ತರವಳಿಯ ಚರಮೂರ್ತಿ ಭಕ್ತರ

ಪರಿಯಾಯ ವ್ರತಶೀಲನೇಮರು
ಕರಸ್ಥಲದ ಶಿವಸೂತ್ರವೇ ಶಿವಯೋಗವೆನುತಿಹರು॥ ॥ ೪೫ ॥

ಅಂಗವೇ ಮಲ ಮಾಯ ಕರ್ಮವು
ಲಿಂಗವೇ ಪರಬ್ರಹ್ಮನಿರ್ಮಲ
ವಂಗಲಿಂಗವೆ ಬೇರೆನಿಪ ವೇದಾಂತಿ ಸಿದ್ಧಾಂತ।
ಜಂಗುಳಿಯ ಪಶುಪ್ರಾಣಿ ಬಹುಜ
ನ್ಮಂಗಳಲಿ ಬರುತಿಹರು ಕರಸ್ಥಲ
ಲಿಂಗಸೂತ್ರವ ಹಿಡಿದವರೆ ಎನ್ನೊಳಗೆ ಬೆರಸುವರು॥ ॥ ೪೬ ॥

ಗರಳವಿಲ್ಲದ ಉರಗನಂದದಿ
ಸುರಗಿ ಇಲ್ಲದ ಭಟನ ತೆರ ಕಣ
ತೆರೆಯ ಮರೆಯೌ ಪ್ರಾಣಲಿಂಗನುಭವದ ಬೋಧೆಗಳು।
ಹೊರಗೆ ಸಾಕ್ಷೀಭೂತ ಶ್ರುತಿಮತ
ಗುರುನಿರೂಪಣ ವೀರಶೈವದ
ಕರಸ್ಥಲದ ಸೂತ್ರಗಳೆ ಪರಶಿವಯೋಗ ಕೇಳೆಂದ॥ ॥ ೪೭ ॥

ಕೋಣೆಯೊಳಗಣ ಮುತ್ತಿನಂತೆ ಗು
ಡಾಣದೊಳಗಣ ದೀಪದಂದದಿ
ಕಾಣಬರುವುದೆ ಪ್ರಾಣಲಿಂಗವು ಬರಿದೆ ಭ್ರಮೆಯಾಟ।
ಜಾಣನಹ ಗುರುಮೂರ್ತಿ ವೇದಪ್ರ
ಮಾಣವಾಗಮ ಸಿದ್ಧದೀಕ್ಷಿತ
ಪಾಣಿಸೂತ್ರವ ಹಿಡಿದ ಷಟ್ಸ್ಥಲಯೋಗಿ ಕೇಳೆಂದ॥ ॥ ೪೮ ॥

ದೊರೆಯಿಲ್ಲದರಮನೆಯ ವೈಭವ
ಪುರುಷನಿಲ್ಲದ ಚೆಲ್ವೆ ಶೃಂಗರ
ಬರಿಯ ವರ್ಣ ವಿಚಿತ್ರ ಕಾಣುವ ವಸ್ತು ಸಂಕಲ್ಪ।
ಗುರುವೆ ಕರುಣಿಸಿ ಬಂದು ಒಳಗಣ
ದೊರೆ ಇವನ ನಂಬೆಂದು ತೋರಿದ
ಕರಸ್ಥಲವೆ ಸಮರಸದ ಯೋಗವು ಗಿರಿಜೆ ಕೇಳೆಂದ॥ ॥ ೪೯ ॥

ಕನ್ನೆ ಪಾರ್ವತಿ ಗೌರಿ ಶಂಕರಿ
ಭಿನ್ನಯೋಗದ ಮಾರ್ಗವಲ್ಲಿದು

ಎನ್ನ ಷಟ್ಸ್ಥಲ ಸಾಂಪ್ರದಾಯದ ಪೂರ್ವನಿರ್ಣಯದ।
ಚೆನ್ನ ಚೇಲಲಸ್ವಾಮಿ ಯೋಗದ
ಚಿಹ್ನೆಗಳ ಸಂಕ್ಷೇಪ ಮಾತ್ರದಿ
ನಿನ್ನ ಕಿವಿಗುಪದೇಶ ಮಾಡುವೆನಗಜೆ ಕೇಳೆಂದ॥ ॥ ೫೦ ॥

ಜಯತು ಶಂಕರ ಜಯ ಕೃಪಾಕರ
ಜಯತು ಪುರಹರ ದುರಿತಸಂಹರ
ಜಯತು ತ್ರೈಜಗ ಕರುಣಸಾಗರ ಜಂಗಮವತಾರ।
ಜಯತು ಜಗದಾಧಾರ ಗರಧರ
ಜಯತು ಪರತರ ಪುಣ್ಯಮಂದಿರ
ಜಯಕರನೆ ಕರಸ್ಥಲದ ದೀಕ್ಷೆಯ ಮಾಡಬೇಕೆನಗೆ॥ ॥ ೫೧ ॥

ಎಂದ ರಮಣಿಯ ಹರಸಿ ಕರಿಮುಖ
ಸಂದ ವೀರಗೆ ಭದ್ರಕಾಳಿಗೆ
ನಂದಿಕೇಶ್ವರ ಭೃಂಗಿ ಪ್ರಮಥಗಣಕ್ಕೆ ಹಿತವಾಗಿ।
ಹಿಂದುಮುಂದೆಡ ಬಲದ ಶರಣರ
ವೃಂದ ದಯಮಾಡೆಂದು ಕೀರ್ತಿಸ
ಲಿಂದುಧರ ಪಾರ್ವತಿಗೆ ಬೋಧಿಸುತಿರ್ದ ಕೇಳೆಂದ। ॥ ೫೨ ॥

ಆಸನವನಳವಡಿಸಿ ಅನಿಲನ
ಸೂಸದಂದದಿ ನಿಲಿಸಿ ಮನವನು
ನಾಸಿಕಾಗ್ರದ ದೃಷ್ಟಿಯನು ಕರಸ್ಥಲದಿ ನೆಲೆಗೊಳಿಸಿ।
ದೇಶಿಕೇಂದ್ರನ ಹೃದಯಕಮಲ ನಿ
ವಾಸಮಧ್ಯದಲಿರಿಸಿ ಯೋಗಾ
ಭ್ಯಾಸಸುಖ ಸಾಮ್ರಾಜ್ಯವಾಳುತಲಿರ್ದ ಕೇಳೆಂದ॥ ॥ ೫೩ ॥

ದೇಹವೇ ದೇವಾಲ್ಯ ಕರಸ್ಥಲ
ಸಾಹಿತ್ಯ ಶಿವಲಿಂಗ ಸುಮ ನಿ
ರ್ಮೋಹ ಶಾಂತಿಯೆ ಭಸಿತ ಸೋಹಂ ಭಾವ ಘನಪೂಜೆ।
ಆಹಾರ ಪರಿಣಾಮ ಶೇಷವು
ಬಾಹಿರಂಗದ ಜಯವೆ ಶ್ರದ್ಧೆಯ
ದೂಹಿಸಲ್ಕಳವಲ್ಲ ಷಟ್ಸ್ಥಲಬ್ರಹ್ಮಿ ಶಿವಯೋಗ॥ ॥ ೫೪ ॥

ಶ್ರೀವಿಮಲ ಜ್ಯೋತಿಸ್ವರೂಪಗೆ
ದೀವಿಗೆಯ ಹಂಗೇನು ಕರಸ್ಥಲ
ದೇವ ಸುಖಲೋಲುಪ್ತನಿಗೆ ಮಧುರುಚಿಯ ಹಂಗೇನು।
ಕೈವಲ್ಯಸೂತ್ರನಿಗೆ ಬಳಿಕಿ
ನ್ನಾವ ಪದವಿಯ ಬಯಕೆಯೇತಕೆ
ದೇವಿ ಷಟ್ಸ್ಥಲಬ್ರಹ್ಮಿಗಳಿಗಿಹಪರದ ಹಂಗೇನು॥ ॥ ೫೫ ॥

ಶುದ್ಧ ಪದ್ಮಾಸನದ ಮೈಯೊಳ
ಗಿರ್ದು ಭಸ್ಮ ಶಿವಾಕ್ಷ ಮಣಿಗಣ
ಹೊದ್ದ ಕಾಷಾಂಬರದ ಜಡೆಗಳ ಯೋಗವಟ್ಟಿಗೆಯ।
ಮುದ್ದುಮುಖ ಮುಗುಳ್ನಗೆ ಪ್ರಕಾಶ
ಸಿದ್ಧ ನಿರುಪಮಜ್ಯೋತಿವೆಳಗಿನೊ
ಳಿದ್ದ ಕರಸ್ಥಲ ನೇತ್ರಸೂತ್ರಾನಂದ ಶಿವಯೋಗಿ॥ ॥ ೫೬ ॥

ಶರೀರ ಸ್ಫಟಿಕ ಸ್ತಂಭಚಿತ್ರವೆ
ಉರಿವ ಜ್ಯೋತಿಯ ಬಿಂಬ ಕರಣದ
ಕಿರಣ ಘೃತ ನಿವೃತ್ತಿಕಲೆ ನೆಲೆ ವರ್ತಿಮನ ಪ್ರಣತೆ।
ಅರಿವೆ ಗುರುವಾಚಾರ ಶಿಷ್ಯರ
ನೆರವಿಗಳನೊಳಕೊಂಡ ಕರಸ್ಥಲ
ದೆರೆಯನಲಿ ಕೀಲಿಸಿದ ಕಂಗಳ ಕಳೆಯ ಶಿವಯೋಗಿ॥ ॥ ೫೭ ॥

ತ್ವಜ ಸುಜ್ಞಾನಂ ಬೆರಸು ಶಲ್ಯವೆ
ವಿಜಯ ಶಿಕ್ಷಾದಂಡ ಫಲಕವೆ
ನಿಜ ಮಹಾಘನ ಮಂತ್ರಮಯ ಸಾಕಾರ ಮಣಿಮುಕುರ।
ವಿಜಯ ವಿಷಯವೆ ಸತ್ಕ್ರಿಯಾಗಮ
ಭಜಕ ಗೋಷ್ಠಿಯೆ ಪ್ರಣಮ ಷಟ್ಸ್ಥಲ
ಪ್ರಜೆಯ ಪಾಲಿಸುತಿರ್ದ ಚೀಲಳಸ್ವಾಮಿ ಯೋಗದಲಿ॥ ॥ ೫೮ ॥

ಉಲುಹಡಗಿದನುಭವಸುಧಾಬ್ಧಿಯೊ
ಎಲೆಗಳೆದ ಸುಜ್ಞಾನವೃಕ್ಷವೊ
ಫಲಪದಂಗಳ ಹಳಿದು ಹಬ್ಬಿದ ಪ್ರಣಮಲತೆಗುಡಿಯೊ।
ಹಲವು ಮತ ಯೋಗಿಗಳ ಮಾತೆಯ

ನೆಲೆವನೆಯೊ ನಿಜಮಂತ್ರ ಮೂರ್ತಿಯೊ
ಲಲನೆ ಚೀಲಲಳಸ್ವಾಮಿ ಕರಸ್ಥಲ ಯೋಗದೊಳಗಿಹರು॥ ॥ ೫೯ ॥

ಚಿಪ್ಪು ಮುಚ್ಚಿದ ಮುತ್ತಿನಂದದಿ
ಕಪ್ಪು ಕವಿಚಿದ ಚಂದ್ರನಂದದಿ
ಪುಷ್ಪ ಮಂಟಪದೊಳಗೆ ಮರಸಿಹ ರುದ್ರಮುನಿಯಂತೆ।
ಕರ್ಪುರಾಂಗನೆ ಶಿಖಿ ಕರಸ್ಥಲ
ದರ್ಪದಲಿ ತನುಮನವನಡಗಿಸಿ
ಇರ್ಪ ಚೀಲಲಳಸ್ವಾಮಿ ಪರಶಿವಯೋಗಿ ಕೇಳೆಂದ॥ ॥ ೬೦ ॥

ನೆಲದ ಮರೆಯ ನಿಧಾನದಂದದಿ
ಜಲದಲಡಗಿದ ವಡಬನಂದದಿ
ಲಲಿತ ಶೇಷದ ಕೊಳದೊಳಡಗಿದ ಮರುಳನಂದದಲಿ।
ಕಲಿತ ಕರಸ್ಥಲ ಸೂತ್ರವೆಳಗಲಿ
ಕುಳಿತ ಅನಿಮಿಷಯೋಗಿಯಂದದಿ
ಚೆಲುವ ಚೀಲಲಳಸ್ವಾಮಿ ಪರಶಿವಯೋಗದಲ್ಲಿಹರು॥ ॥ ೬೧ ॥

ಸೃಷ್ಟಿಭೋಗದ ಸುಖವ ಮೀರಿದ
ಷಟ್ಸ್ಥಲದ ಗುರುಪಟ್ಟವಾಳಿದ
ನಷ್ಟವರಣವ ಧರಣಿ ತಳಕೆ ಪ್ರತಿಷ್ಠೆಮಾಡಿದನು।
ದೃಷ್ಟದಾರಿಷ್ಟಗಳ ತೋರಿದ
ಶ್ರೇಷ್ಠನಹುದಹುದಹ ಕರಸ್ಥಲ
ದಿಷ್ಟಲಿಂಗ ಸಮಾಧಿ ನಿದ್ರಾಮುದ್ರೆಯೊಳಗಿಹನು॥ ॥ ೬೨ ॥

ತನುವೆ ತಾರಕಬ್ರಹ್ಮವಾತನ
ಮನವೆಯನುಪಮಜ್ಯೋತಿ ಮಂತ್ರದ
ನೆನಹೆ ಜೀವನ್ಮುಕ್ತಿ ನಮ್ಮ ನಿಮಗೆಲ್ಲ ಇಹಪರಕೆ।
ಚಿನುಮಯಾತ್ಮಕ ಮೂರ್ತಿ ನಿಮ್ಮಯ
ಮನದ ಮಧ್ಯದಲುದಿಸಿದಾತನ
ಕನಸಿನಲಿ ಕಂಡಂತೆ ಕಂಡಿಹೆನೆಂದಳಗಜಾತೆ॥ ॥ ೬೩ ॥

ಎಂದಡಗಜೆಯ ಪ್ರಶ್ನೆಗಭವನು
ಚಂದವಾಗರುಹಿದನು ಶರಣರ

ವೃಂದದೊಡನೈತಂದು ನಮ್ಮರಮನೆಯೊಳಗೆ ಸಲಿಸಿ।
ಬಂದು ಸಿಂಹಾಸನಕೆ ಸಮರಸ
ದಿಂದ ಸರಿಗದ್ದುಗೆಯನೇರುವ
ವಂದೆ ಷಟ್ಸ್ಥಲಬ್ರಹ್ಮಿ ಚೀಲಳಸ್ವಾಮಿ ನೆಪ್ಪರಿಯ॥ ॥ ೬೪ ॥

ಅಹುದಭವ ಗುರುತರಿತೆ ದಿಟವವ
ಬಹುಪರಾಕ್ರಮ ಮಹಿಮ ಮೀರಿದ
ಅಹಿತಮತಹತ ಕುಹಕಜಿತ ಮಮಮತಪ್ರತಿಷ್ಠಿತನು।
ಸಹಜರಕ್ಷಕ ಶರಣಗತಹಿತ
ಮಹಪುರುಷನತಿದುಷ್ಟ ಜಿನನಿ
ಗ್ರಹ ಕರ್ತ ಚೀಲಳಸ್ವಾಮಿಗೆ ಶರಣು ಶರಣಾರ್ಥಿ॥ ॥ ೬೫ ॥

ಸತ್ಯನಾತನು ಶಾಂತನಾತನು
ನಿತ್ಯನಾತನು ನಿರಘನಾತನು
ಮಿಥ್ಯಪರವಾದಿಗಳ ಗಂಡನು ಷಟ್ಸ್ಥಲಕೆ ಮೀಟು।
ಮರ್ತ್ಯಲೋಕದ ಮಾಟಕಂಟದ
ಭೃತ್ಯರಿಗೆ ನಿಜಮುಕ್ತಿದೋರಿದ
ಪ್ರತ್ಯಕ್ಷ ಪರವಸ್ತು ನೆಲೆ ತಾ ಚೀಲಳೇಶ್ವರನು॥ ॥ ೬೬ ॥

ಎನುತ ಪಾರ್ವತಿ ಸ್ತುತಿಸಲಾಕ್ಷಣ
ಕನಕ ದುಂದುಭಿ ಮೊಳಗಿದವು ತನ
ತನಗೆ ಹೂಮಳೆಗರೆಯಲಜಹರಿ ಸುರಪರುಗ್ಗಡಿಸಿ।
ಮನುಮುನೀಶ್ವರರೆಲ್ಲ ಹೊಗಳ್ದರು
ಘನಮಹಿಮ ಚೀಲಾಳಸ್ವಾಮಿಯ
ನೆನೆದವನೆ ನಿಜಮುಕ್ತನೆಂದನು ಸುತಗೆ ದೇಶಿಕನು॥ ॥ ೬೭ ॥

ಗಿರಿಜೆ ಕೇಳೆನ್ನಂತರಂಗದ
ಸರಸಿಜದಿ ಶಿವಯೋಗದಲ್ಲಿಹ
ಹರಪುರದಿ ಶಿವಯೋಗನಿದ್ರಾಮುದ್ರೆಯೊಳಗಿಹನು।
ಶರಣಗಣ ಸಹ ತೆರಳಿದಾ ನ
ಮ್ಮರಮನೆಯಲೇ ಸಲಿಸಿ ಸರಸದಿ
ಸರಿಗದ್ದಿಗೆಯಲೆ ಇರುವನೋಲಗ ತೀರೆ ತೆರಳುವರು॥ ॥ ೬೮ ॥

ಏಕೊ ಪರಶಿವಮೂರ್ತಿ ಮರ್ತ್ಯ
ಕ್ಕೇಕೆ ಕಳುಹಿದಿರೆಂದು ಶಂಕಿಸೆ
ಕಾಕಪೋಕರು ಹೆಚ್ಚಿ ಷಟ್ಸ್ಥಲ ಪುಂಡನೇಳ್ಸಿರಲು।
ಆ ಖಳರ ಬಹಿಷ್ಕರಿಸಲೋಸ್ಕರ
ಲೋಕಹಿತ ಸ್ವಯಮತ ಹಿತಾರ್ಥಕೆ
ನಾ ಕರೆದು ಬೀಳ್ಕೊಟ್ಟೆ ಚೀಲಲಳಸ್ವಾಮಿ ಭೂತಳಕೆ॥ ॥ ೧೯ ॥

ಸ್ವಾಮಿಯುಪದೇಶದ ಕಟಾಕ್ಷದಿ
ಕ್ಷೇಮವಾಯ್ತೆಲ್ಲರಿಗೆ ಈಗಣ
ಸ್ತೋಮ ನಮನಿಮಗುಳಿದ ಷಟ್ಸ್ಥಲಭಕ್ತರಿಹಪರಕೆ।
ಆ ಮಹಾತ್ಮನನಿಲ್ಲಿಗೈದಿಸಿ
ಭೂಮಿಯೊಳಗಿಹುದೇತಕೆಂದೆನೆ
ಕಾಮಿನಿಯ ಬಿನ್ನಹಕೆ ಪರಶಿವ ನಗುತ ಕೇಳೆಂದ॥ ॥ ೭೦ ॥

ಅಲ್ಲೇನು ಇಲ್ಲೇನು ಪಾರ್ವತಿ
ಎಲ್ಲರೊಳಹೊರಗಿರುವ ಪ್ರಭುವಿಗೆ
ಮಲ್ಲಿಗೆಯ ಹೂದೋಟದನುಭವಮಂಟಪದಿ ನಗುತ।
ನಲ್ಲೆ ಷಟ್ಸ್ಥಲತತ್ತ್ವಬೋಧೆಯ
ನೆಲ್ಲ ಪ್ರಮಥರ ನೆರವಿಗೊರೆವುತ
[ಲಲ್ಲೆ] ನೆಲಸಿಹನಗಜೆ ಚೀಲಲಳಸ್ವಾಮಿ ಕೇಳೆಂದ॥ ॥ ೭೧ ॥

ವೀರಶೈವಾಚಾರ ಪ್ರಮಥರು
ಸಾರಷಟ್ಸ್ಥಲ ಶರಣಭಕ್ತರು
ಗೌರಿ ಗುಹ ಗಣ ವೀರಭದ್ರನು ನಂದಿ ಭೃಂಗೀಶ।
ವಾರಿಜೋದ್ಭವ ವಾರಿಜಾಕ್ಷರು
ಮೂರು ನೇತ್ರದ ಮೂರ್ತಿ ಸಹ ನಿರ
ಭಾರಿ ದೇಶಿಕನೆನುತ ಚೀಲಲಳಸ್ವಮಿ ಹೊಗಳಿದರು॥ ॥ ೭೨ ॥

ಹಳಬರಿಗೆ ಬಲು ಹಳಬನೇ ನಮೊ
ಸುಳುಹು ಪಾವನಮೂರ್ತಿಯೇ ನಮೊ
ಪ್ರಳಯಕಾಲವ ಮೀರಿದನೆ ಇಹಪರದ ಸೂತ್ರಿಕನೆ।
ಒಳಹೊರಗೆ ತಳತಳಿಸಿ ಬೆಳಗುತ

ಹೊಳೆವ ನಿರುಪಮಜ್ಯೋತಿ ವಸ್ತುವ
ಭಳಿರೆ ಭಾಪುರೆಯೆನುತ ಚೀಲಳಸ್ವಾಮಿ ಹೊಗಳಿದರು॥ ॥ ೭೩ ॥

ಇಹಪರದ ಈರೇಳು ಭುವನದಿ
ಮಹಿಮಪುರುಷರ ಹೃದಯಕಮಲದಿ
ಸಹಿತ ಪರಶಿವಯೋಗ ನಿದ್ರಾಮುದ್ರ ಬಂಧದಲಿ।
ಸಹಸ್ರದಳ ಮಂಟಪದ ಓಲಗ
ಸಹವಾಸಿ ಕರಸ್ಥಲದ ಸೂತ್ರದ
ಬಹುವಿಚಿತ್ರ ಚರಿತ್ರ ಚೀಲಳಸ್ವಾಮಿಯೊಪ್ಪಿದನು॥ ॥ ೭೪ ॥

ಒಪ್ಪಿದನು ಶ್ರೀ ವೀರಶೈವನು
ಒಪ್ಪಿದನು ಷಟ್ಸ್ಥಲಶಿಖಾಮಣಿ
ಒಪ್ಪಿದನು ಕೈಲಾಸ ಭೂತಳ ಶಿವನ ಸಭೆಯೊಳಗೆ।
ಒಪ್ಪಿದನು ನಿರುಪಮ ನಿರಂಜನ
ಒಪ್ಪಿದನು ಚಿತ್ಕಳ ಮಹಾಪ್ರಭು
ಒಪ್ಪಿದನು ಚೀಲಾಳಸ್ವಾಮಿಯು ಯೋಗನಿದ್ರೆಯಲಿ॥ ॥ ೭೫ ॥

ಶ್ರೀ ವೀರಶೈವರಿಗೆ ಶಿವತ
ತ್ವಾವಿಬೋಧರ ಸಭೆಗೆ ಗುರುಚರ
ಸೇವಕರ ಸಂತತರಿಗೆ ಷಟ್ಸ್ಥಲಭಕ್ತರುತ್ಸಹಕೆ।
ಆವ ಕಾಲದಿ ಸಕಲಭೋಗವ
ದೇವಭಕ್ತರ ಪಡೆಗೆ ಕರಸ್ಥಲ
ಸಾವಧಾನದ ಸುಖವ ಚೀಲಳಸ್ವಾಮಿ ಪಾಲಿಸಲಿ॥ ॥ ೭೬ ॥

ವಲ್ಲಭೆಗೆ ಶಿವನೊರೆದ ನಂದಿಯು
ಎಲ್ಲ ಪ್ರಮಥರಿಗರುಹಿದನು ಪ್ರಭು
ಕಲ್ಯಾಣದಲಿ ಬಸವರಾಜಗೆ ಬೋಧಿಸಿದ ಮೊದಲೆ।
ಇಲ್ಲಿ ಹರಪುರ ಶ್ರೀಗಿರಿಯ ತಟ
ದಲ್ಲಿ ಷಟ್ಸ್ಥಲಕರ್ತೃ ಪರಶಿವ
ಅಲ್ಲಿ ಬಸವಪ್ರಭು ಕುಮಾರನಿಗೊರೆದ ಸೂತ್ರವಿದು॥* ॥ ೭೭ ॥

---

* ಇತಿ ೨೨ ಸ್ಕಂಧ ನಿರೂಪಣಂ. ಅಂತು ಉಭಯ ಪದಗಣನೆ ೧೧೨೪ಕ್ಕಂ ಮಂಗಳಶ್ರೀ ॥

ತ್ರಯೋವಿಂಶತಿ ಸ್ಕಂಧ

ರಾಗ: ಶಂಕರಾಭರಣ

ಮುಕ್ತಿಮೋಹಿನಿಪ್ರಾಣಕಾಂತ ವಿ
ರಕ್ತ ಜನಹೃತ್ಕಂಜ ಷಟ್ಸ್ಥಲ
ಭಕ್ತರಾಚರಣೆಗಳನರುಹೆನಲೊರೆದ ಗುರು ಸುತಗೆ॥

ಶ್ರೀ ರಜತಗಿರಿವಾಸ ಷಟ್ಸ್ಥಲ
ವೀರಶೈವಪ್ರಕಾಶ ಶ್ರೀಪತಿ
ವಾರಿಜೋದ್ಭವ ಸುರಪ ಮನುಮುನಿ ಶರಣಸಂತೋಷ।
ಶಾರದಾಶ್ರುತಿಘೋಷ ಭೃಂಗಿಯ
ನಾರದರ ಪರಿಹಾಸ ಗಂಗಾ
ಗೌರಿ ಪುತ್ರ ವಿಲಾಸ ಶಂಕರ ಸಲಹು ಮೂಜಗವ॥ ॥ ೧ ॥

ಕಿರಿಜಡೆಯ ಕಿರಿನಗೆ ಕಿರೀಟದ
ಕಿರಣ ಮುಖರಸ ಭಸಿತಲೇಪದ
ಕೊರಳ ರುದ್ರಾಕ್ಷಿಗಳ ಕಾಷಾಂಬರದ ಜಪಸರದ।
ಕರದ ಕಂಕಣ ಕಳೆಯ ಕಂಗಳ
ಕರುಣ ಸುಜ್ಞಾನಮೃತ ಸೋನೆಯ
ಸುರಿದು ಶರಣರ ಹೊರೆವ ಚೀಲಳಸ್ವಾಮಿ ಗುರು ಶರಣು॥ ॥ ೨ ॥

ಷಟ್ಸ್ಥಲದ ದೀಕ್ಷರಿಗೆ ದಿವ್ಯ ತ್ರಿ
[೧][ಷ][೧]ಟ್ಸ್ಥಲಸುಬೋಧರಿಗೆ ಸೃಷ್ಟಿಯ
ಷಟಸ್ಥಲದ ಪಟಲವನು ಹಸಿಗೆಯ ಮಾಳ್ಪ ಹಿರಿಯರಿಗೆ।

೧–೧ ಕು(ಮೂ).

ಷಟ್ಸ್ಥಲದ ಶರಣರಿಗೆ ದೇಹ ತ
ಟಸ್ಥಲ ಸುಲಕ್ಷರಿಗೆ ವಚನ ಪ
ಟಸ್ಥರಿಗೆ ಬೋಧಿಸುವುದೀ ಷಟ್ಸ್ಥಲಶಿವಾಯಣವ॥ ॥ ೩ ॥

ಬುತ್ತಿಗಳೆವಗೆ ಭೂತದೇಹಿಗೆ
ತೊತ್ತ ನೆರೆವಗೆ ತೊಂಡನಣುಗಗೆ
ಕತ್ತೆ ಮಹಿಷಿಯ ಪುರುಷ ಮೈಥುನ ಕೃತ್ಯರಧಮರಿಗೆ।
ಅತ್ತಿಗೆಯನೆ ಆಳುವವರಿಗೆ
ಹೆತ್ತ ತಾಯನೆ ಪಾಲಿಸುವರಿಗೆ
ದತ್ತುಪುತ್ರರಿಗೊರೆಯದಿರು ಷಟ್ಸ್ಥಲಶಿವಾಯಣವ॥ ॥ ೪ ॥

ಪತ್ನಿಗಭವನು ನಂದಿಕೇಶ ಪ್ರ
ಯತ್ನ ಪ್ರಮಥರ ಸಭೆಗೆ ಪ್ರಭು ವೃಷ
ಪತ್ನಿ ನೀಲಾಂಬ[೧][ಕಿ][೧]ಗೆ ಷಟ್ಸ್ಥಲ ಸಭೆಗೆ ಪೂರ್ವದಲಿ।
ರತ್ನ ಹರಪುರ ಶ್ರೀಗಿರಿಯ ನವ
ರತ್ನದನುಭವ ಯೋಗಪೀಠದಿ
ನೂತ್ನ ಬಸವಪ್ರಭು ಕುಮಾರನಿಗೊರೆದ ಸೂತ್ರವಿದು॥ ॥ ೫ ॥

ಆಚಾರ್ಯಕುಲತಿಲಕ ಷಟ್ಸ್ಥಲ
ದಾಚ ಆರ್ಯಮತ ಸಿರಶಿಖಾಮಣಿ
ಯಾಚಾರ್ಯವಂಶಾಬ್ಧಿವರ್ಧನಚಂದ್ರ ಶಿವಭಕ್ತ।
ರಾಚಾರಮಾರ್ಗಗಳ ವಿವರವ
ಸೂಚಿಸೆನಗೆಂದೆನುತ ನಿಜಗುರು
ಶ್ರೀಚರಣಕೆದ್ದೆರಗಿ ಶಿಷ್ಯನು ಸ್ತುತಿಸಿ ಬೆಸಗೊಳಲು॥ ॥ ೬ ॥

ಶಿಷ್ಯಕುಲಚಲವನಧಿವರ್ಧನ
ಶಿಷ್ಯಜನಮನವನವಸಂತಕ
ಶಿಷ್ಯಜನಘನಪರುಷರಸಗಿರಿ ಶಿಷ್ಯಸುರಧೇನು।
ಶಿಷ್ಯಜನಕರುಣಾಳು ಗುರು ನಿಜ
ಶಿಷ್ಯ ಮಸ್ತಕದಡಹಿ ಹರಸುತ
ಶಿಷ್ಯನಿಗೆ ನಗುತೊರೆದ ಭಕ್ತಚರಿತ್ರವೆಂತೆನಲು॥ ॥ ೭ ॥

೧–೧ ನಿ(ಮೂ).

ಭಕ್ತರೆನಿಸಿದರುಂಟು ಪೂರ್ವದಿ
ಭಕ್ತರೆನಿಸುವರುಂಟಲಪರದಿ
ಭಕ್ತರುಂಟಲ ಲೋಕಲೌಕಿಕ ಸರ್ವಕಾಲದಲಿ।
ಭಕ್ತ ಲೌಕಿಕ ಬದ್ಧರಗಣಿತ
ಭಕ್ತಲೌಕಿಕರೊಳಗಲೌಕಿಕ
ಭಕ್ತಸ್ಥಲದೊಳಗಧಿಕ ಸಹಜ ಸುಭಕ್ತೆ ಕೇಳೆಂದ॥ ॥ ೮ ॥

ಸೋಜಿಗದ ಸೂತ್ರಿಕದ ಗುರುವಿನ
ಸಾಜ ಭಕ್ತನ ಕುರುಹ ಲೌಕಿಕ
ಓಜೆ ಮಾತಿನ ಬಗೆಯ ಲೌಕಿಕ ಭಕ್ತಲಕ್ಷಣವ।
ಮೂಜಗದ ದೇಶಿಕನೆ ತ್ರಿವಿಧವ
ಮಾಜದೆನಗರುಹೆನುತ ಗುರುಪದ
ರಾಜೀವಂಗಳಿಗೆರಗಿ ಶಂಕಿಸಲೊರೆದ ನಿಜಸುತಗೆ॥ ॥ ೯ ॥

ಪುತ್ರಮಿತ್ರಕಳತ್ರ ಸಖಿಸಖ
ಕ್ಷೇತ್ರ ಗೃಹ ಧನಧಾನ್ಯಸಂಪದ
ಗೋತ್ರಬಂಧು ಕುಲಾಭಿಮಾನತೆ ಮಾತೃಪಿತೃ ಬಳಗ।
ಧಾತ್ರಿ ತುಂಬಿದೆ ಸಂತವೆನುತಲೆ
ಯಾತ್ರೆಯಾಚಕ ಪಾತ್ರವೆಚ್ಚದ
ಸೂತ್ರಲಂಪಟ ಜೀವಿ ಲೌಕಿಕ ಭಕ್ತ ಕೇಳೆಂದ॥ ॥ ೧೦ ॥

ಮಲತ್ರಯದ ದುರ್ಮೋಹಿ ನಂಬಿದ
ಲಲನೆ ಸುತ ಋಣ ಉಡಲು ಸೈರಿಸ
ಗಳಿಸಿದರ್ಥವ ಪಾತ್ರವೇಶ್ಯಾಗಮನವಪರಾಧ।
ನೆಲಕೆ ತಸ್ಕರ ನೃಪರ ಭಾಗವು
ಬಲ ಪಿಸುಣ ಶತಕರ್ಮಿ ಡಂಭಕ
ಬಲಿದ ಸಂಸೃತಿಪಾಶ ಪರಿಗತ ಲೌಕಿಕದ ಭಕ್ತ॥ ॥ ೧೧ ॥

ಹೆಣ್ಣು ತನ್ನದು ಗಂಡು ತನ್ನದು
ಮಣ್ಣು ಮಸಿ ಕೃಷಿ ಮಸಣ ತನ್ನದು
ಪುಣ್ಯಪುರುಷಾರ್ಥಗಳೆ ತನ್ನವೆನುತ್ತ ಹಿಗ್ಗುವನು।
ಅಣ್ಣ ತಮ್ಮಗಳಾಪ್ತ ಜನ ಸಹ

ತಣ್ಣಗಿದೆ ಸುಖಸ್ವರ್ಗವೆನುತಲಿ
ಕಣ್ಣ ಮುಚ್ಚುತ್ತಾಡುವರು ಲೌಕಿಕರು ಕೇಳೆಂದ॥ ॥ ೧೨ ॥

ದೇಹಾಭಿಮಾನಕ್ಕೆ ಹಿಗ್ಗುತ
ಲೂಹಿಸುವರು ಕುಲಾಭಿಮಾನವ
ಸಾಹಸದ ದ್ರವ್ಯಗಳ ಪಂಥವ ಪಾತ್ರಸಾಕ್ಷಿಗಳ।
ಸ್ನೇಹಭವಿಗಳ ಕೀಲುದೈವದ
ಮೋಹದುಸ್ಸಂಗತಿಯ ರಮ್ಯವ
ನಾಹ ಸಂಸೃತಿಸುಖವ ಸ್ತುತಿಸುವರವರೆ ಲೌಕಿಕರು॥ ॥ ೧೩ ॥

ನಾವೆ ಧನಿಕರು ನಾವೆ ಧನಿಗಳು
ನಾವೆ ಪೂಜ್ಯರು ನಾವೆ ತೇಜ್ಯರು
ನಾವೆ ದೊರೆಗಳು ದೇಶಪತಿಗಳು ಕುಲಕೆ ದೊಡ್ಡವರು।
ನಾವೆ ಹಿರಿಯರು ಭಕ್ತಿಭಾವದಿ
ನಾವೆ ಲಕ್ಷಣವಂತರೆನುತಲಿ
ತಾವೆ ಹೊಗಳುವರುಬ್ಬುವರೆ ಲೌಕಿಕರು ಕೇಳೆಂದ॥ ॥ ೧೪ ॥

ಹಲವು ದೈವವ ಪೂಜೆ ಮಾಳ್ಪರು
ಹಲವು ಜಾತಿಯ ಬಳಸುತಿರ್ಪರು
ಹಲವರೆಂಜಲ ತಿಂದು ಹಲವರ ಸೇರಿ ಬದುಕುವರು।
ಹಲವು ಮತಶಾಸ್ತ್ರಗಳ ಕೇಳ್ವರು
ಹೊಲೆ ಬಳಕೆ ಭವಿಸಂಗಕೊಲಿವರು
ಹಲವು ಪರಿ ನಡತೆಗಳ ನಡೆವರೆ ಲೌಕಿಕರು ಕೇಳ॥ ॥ ೧೫ ॥

ಮತದ ಗುರು ಬೋಧೆಗಳ ರೋಚಕ
ಶತ ಪಾತಕರ ಬೋಧೆಯತಿಹಿತ
ಯತಿಗಳೆದುರಿಗೆ ಸುಳಿಯೆ ಹಗೆತನ ವಿಪ್ರತಲಿ ಸ್ನೇಹ।
ಶ್ರುತಿಪುರಾಣಾಗಮ ಪುರಾತರ
ಕಥೆಗಳೇ ಶತ್ರುತ್ವ ಭವಿಗಳ
ಕೃತಿಗಳೊಳಗತಿ ಪ್ರೀತಿಯುಳ್ಳವರವರೆ ಲೌಕಿಕರು॥ ॥ ೧೬ ॥

ಲಿಂಗನಿಷ್ಠೆನಿತಿಲ್ಲ ಶಿವಶಿವ
ಜಂಗಮವ ನಂಬುವರೆ ಹರಹರ

ಸಂಗಸಮರಸವಿಲ್ಲ ಗುರುಮಾರ್ಗಕ್ಕೆ ವಿರಹಿತರು।
ಮಂಗಳಾತ್ಮಕ ವೀರಶೈವ ಪ್ರ
ಸಂಗ ಷಟ್ಸ್ಥಲಬೋಧೆ ವಿಷ ರಸ
ಜಂಗುಳಿಯ ಪಶು ಭಾವದ ಕುರಿ ಲೌಕಿಕರು ಕೇಳೆಂದ॥ ॥ ೧೭ ॥

ಧರ್ಮಕಾರ್ಯಕೆ ಮುಖವನಿಕ್ಕರ
ಧರ್ಮವೆಂದರೆ ಸಾಕು ಕೊಡುವರು
ವರ್ಮವರಿಯರು ಪಾತ್ರಪಾತ್ರ ವಿಶೇಷವೆಂದೆಂಬ।
ಚರ್ಮಗಾರರ ಸುತರ ಗರ್ವದ
ದುರ್ಮೋಹ ದೇಹಾಭಿಮಾನದ
ಕರ್ಮಕಾಂಡಿಗಳೆಲ್ಲ ಪರಿಭವಲಬ್ದ ಲೌಕಿಕರು॥ ॥ ೧೮ ॥

ಇಹಪರದ ಸ್ಥಿತಿಗತಿಯೆ ಸಿದ್ಧಿಯು
ಬಹು ಜನನ ಮರಣಗಳೆ ಲಬ್ದಿಯು
ಮಹಿತಳದ ಚಾಂಡಾಲ ಕೃತ್ಯವೆ ಕೃತ್ಯ ದುಷ್ಕೀರ್ತಿ।
ಸಹವಾಸಿಯಮ ಪ್ರಕೃತಿಕೀಟಕ
ವಿಹಿತ ದರ್ಪಕ ಭೃತ್ಯ ಕುಹಕರ
ವಹಿಯ ಸೂತ್ರವ ಹಿಡಿದವರೆ ಲೌಕಿಕರು ಕೇಳೆಂದ॥ ॥ ೧೯ ॥

ಪಾಶಗತ ಪಾಷಂಡಿಗಳು ಬಹು
ದೋಷಿಗಳು ದ್ರೋಹಿಗಳು ದುಃಖಿತ
ವಾಸಿಗಳು ವರ್ಣಾಶ್ರಮದೊಳತಿ ಜೀವಹಿಂಸಕರು।
ಭಾಷೆಹೀನರು ಪಶುವೃತ್ತಿಗಳು
ಭೂಸುರರ ಬೋಧೆಗಳ ಕೇಳ್ವರು
ಈಶಭಕ್ತರೊಳಲ್ಲ ಲೌಕಿಕ ಭಕ್ತ ಕೇಳೆಂದ॥ ॥ ೨೦ ॥

ಶ್ರೀಗುರುವಿನುಪದೇಶದನ್ನಿಗ
ಮಾಗಮಂಗಳ ವಿಧಿಗಳಿಂದನು
ರಾಗರಸ ತಲೆದೋರಿ ಭಕ್ತಜ್ಞಾನವಳವಟ್ಟು।
ಬೇಗ ಸ್ವಾತ್ಮಜ್ಞಾನಿಗಳ ಶಿವ
ಯೋಗಿಗಳ ಷಟ್ಸ್ಥಲದ ಘನ ವೈ
ರಾಗಿಗಳ ಚರಣಗಳ ಭಜಿಸುವರವರಲೌಕಿಕರು। ॥ ೨೧ ॥

ಗುರುಕಟಾಕ್ಷವ ಪಡೆದು ಲಿಂಗವ
ಕರಸರೋಜದಿ ಪಿಡಿದು ಷಟ್ಸ್ಥಲ
ಶರಣರಂಘ್ರಿಗೆ ಕೆಡೆದು ತೀರ್ಥಪ್ರಸಾದಗಳ ಹ[ಡೆ]ದು।
ಕರಣಗುಣಗಳ ಬಡಿದು ಕಾಷ್ಠಕೆ
ಸರಿಗಂಡು ಶರಿರಾರ್ಥ ಪ್ರಾಣವ
ಕರಗಿ ದಾಸೋಹವನೆ ಮಾಡುವರವರಲೌಕಿಕರು॥ ॥ ೨೨ ॥

ಹುಟ್ಟುತಲಿ ತಾನೊಬ್ಬ ದೇಹವ
ಬಿಟ್ಟು ನಡೆವಲ್ಲೊಬ್ಬ ಸುಡುಸುಡು
ತಟ್ಟಿ ಮುಟ್ಟಿದ ಸುಖವನುಂಬಲ್ಲೊಬ್ಬ ಗುರುದೈವ।
ಕೊಟ್ಟ ಕಾಲದಿ ಸಕಲಸುಖಗಳ
ಕೊಟ್ಟು ಗುರುಚರ ದೇವಭಕ್ತರ
ನಿಟ್ಟೆವಿಡಿದಾಚರಿಪ ನಿರುಪಾಧಿಕರಲೌಕಿಕರು॥ ॥ ೨೩ ॥

ಶರೀರವಾರದು ಪ್ರಾಣವೇನಿದು
ತರುಣಿ ಯಾರೋ ಮಕ್ಕಳೆಲ್ಲೋ
ಸಿರಿ ದರಿದ್ರಕೆ ದಣಿಗಳಾರಲಸ್ಥಿರವೆ ಈ ಸೃಷ್ಟಿ।
ಧರೆಯ ಭೋಗವೆ ನಿಮಿಷವೆನುತಲಿ
ಮರೆಯದೇ ಗುರುಲಿಂಗಜಂಗಮ
ಚರಣಕಮಲವ ಭಜಿಪ ನಿರುಪಾಧಿಕರಲೌಕಿಕರು॥ ॥ ೨೪ ॥

ತನುವೆ ತಾಪತ್ರಯದ ಹುತ್ತವು
ಮನೆ ಮರವೆಯ ಸರ್ಪ ಶ್ರುತಿಮತ
ವನಿತೆ ಸರವದು ತನುಜರನ್ಯರು ಬಳಗ ನಿರ್ವಯಲು।
ಜನನಿ ಜನಕರು ಸಕಲ ಸಂಪದ
ಕನಸೆನುತ ಗುರುಲಿಂಗಜಂಗಮ
ವನುದಿನದಿ ಪೂಜಿಸುವ ನಿರುಪಾಧಿಕರಲೌಕಕರು॥ ॥ ೨೫ ॥

ಮದುವೆ ಮಂಗಳ ಮನದ ಸಡಗರ
ಪುದಿದ ಜೀವನ ಪುಣ್ಯದೊಬ್ಬುಳಿ
ಸುದತಿ ಸುಖವಯ ಸುಭಾಷಿತಂಗಳು ಭುಕ್ತಿಮುಕ್ತಿಗಳು।
ಹದ ಸುಪಾಕತೆ ಗುರುಕಟಾಕ್ಷವು

ಚದುರವಿದ್ಯಾಭ್ಯಾಸ ಜಂಗಮ
ಪದದೊಳೈಕ್ಯವೆನಿಪ್ಪ ನಿರುಪಾಧಿಕರಲೌಕಿಕರು॥ ॥ ೨೬ ॥

ನೀರಮೇಲಣ ಗುಳ್ಳೆ ಕೆಡದೇ
ಸೂರ ಮುಂಬನಿ ನಿಲುವುದೆ ದೇಹ
ದಾರಿಗೊಡಡಿದ ಗುಡಿಲು ಗಾಳಿಯ ಸೊಡರು ಶಾಶ್ವತವೆ।
ಕಾರಮೇಘದ ಮಿಂಚು ಸಂಸೃತಿ
ತೋರುತಿಹ ಸುರಚಾಪವೆನುತಲಿ
ವೀರಶೈವರ ಭಜಿಪ ನಿರುಪಾಧಿಕರಲೌಕಿಕರು॥ ॥ ೨೭ ॥

ಅರ್ಥಪೇಕ್ಷತೆ ಪುತ್ರಲಭ್ಯತೆ
ತೀರ್ಥಯಾತ್ರೆಯ ಚಿಂತೆ ಸ್ತ್ರೀಯರ
ಸ್ವಾರ್ಥಿ ಇಹಪರ ಭುಕ್ತಿಮುಕ್ತಿಗಳಾಸೆಗಳ ತ್ಯಜಿಸಿ।
ಅರ್ಥಪ್ರಾಣಭಿಮಾನ ಮೂರನು
ಕರ್ತೃ ಗುರುಚರಲಿಂಗಕರ್ಪಿಸಿ
ಮರ್ತ್ಯವನೆ ಮರೆದಿರ್ಪ ನಿರುಪಾಧಿಕರಲೌಕಿಕರು॥ ॥ ೨೮ ॥

ಸೃಷ್ಟಿಸ್ಥಿತಿಲಯ ಸತ್ಯ ಶ್ರೀಗುರು
ವಿಷ್ಟಲಿಂಗ ಮಹೇಶ ಜಂಗಮ
ಕಿಷ್ಟಾರ್ಥಗಳ ಕೊಟ್ಟು ತೀರ್ಥಪ್ರಸಾದ ತೃಪ್ತಿಯಲಿ।
ನಿಷ್ಠೆ ಷಟ್ಸ್ಥಲ ಭಕ್ತಭೃತ್ಯರ
ಭೀಷ್ಮ ಸತ್ಪಾತ್ರಾನುಗಣ್ಯ ವಿ
ಶಿಷ್ಟ ನಿರುಪಾಧಿಕನಲೌಕಿಕ ಭಕ್ತ ಕೇಳೆಂದ॥ ॥ ೨೯ ॥

ಗುರುವ ದೈವವ ಜನನಿ ಜನಕರ
ನೆರೆ ಕೃತಾರ್ಥರ ಮಾಡಲೋಸ್ಕರ
ಪರಮ ಷಟ್ಸ್ಥಲಗುರುಗಳಡಿಗಳ ಹಿಡಿದು ಶ್ರದ್ಧೆಯಲಿ।
ಇರುಳು ಹಗಲೆಂಬುಭಯ ಸಂಶಯ
ಮರವೆಗಳ ತೆರೆ ಸರಿದು ಜಂಗಮ
ಚರಣಸೇವಕನಾಗಿ ಬಾಳ್ವವನವನ ಲೌಕಿಕನು॥ ॥ ೩೦ ॥

ಆಗಲೀಗವೋ ಮರ್ತ್ಯದನುಭವ
ಭೋಗತೃಷೆಯ ಮರೀಚಿಕಾಜಲ

ಬೇಗ ಶ್ರೀಗುರುಲಿಂಗಜಂಗಮ ಸೋಹಗಳೆ ಮುಖ್ಯ।
ರಾಗದ್ವೇಷವೆ ಮರಣ ಶ್ರುತಿಮತ
ದಾಗಮೋಕ್ತಿ ವಿರಕ್ತಿ ಷಟ್ಸ್ಥಲ
ಯೋಗಿಗಳ ಸೇವಕನಲೌಕಿಕ ಮಗನೆ ಕೇಳೆಂದ॥ ॥ ೩೧ ॥

ಸತಿಪತಿಗಳತಿ ಹರುಷದಿಂದಲಿ
ಸುತ ಸಹೋದರ ಹಿತ ಸುಬಾಂಧವ
ಹಿತಮಾತೆ ಗುರುಲಿಂಗಜಂಗಮ ಭಕ್ತಿಯಿಂದೆಲ್ಲ।
ಗತಿಮತಿಗಳಕ್ಕೆಂದು ಹಿಗ್ಗುತ
ಶ್ರುತಿವಿದಿತ ಸತ್ಪಾತ್ರ ಷಟ್ಸ್ಥಲ
ಯತಿ ವಿರಕ್ತನುಭವಿಗಳ ಸೇವಕರಲೌಕಿಕರು॥ ॥ ೩೨ ॥

ನಾನವಿಧಿ ಮಡಿ ಧ್ಯಾನ ಪೂಜೆ ನಿ
ಧಾನ ಜಪತಪಸ್ತೋತ್ರ ಮನ ಸು
ಜ್ಞಾನ ಕ್ರಿಯಾಚಾರ ಭಕ್ತಿ ವಿರಕ್ತಿ ಮತನಿಷ್ಠೆ।
ಮಾನಿನೀ ಸುತ ಸಹಿತ ಷಟ್ಸ್ಥಲ
ಸ್ವಾನುಭಾವಿಗಳಡಿಯ ನಂಬಿಹ
ಮಾನವರಲೌಕಿಕದ ಭಕ್ತರು ಮಗನೆ ಕೇಳೆಂದ॥ ॥ ೩೩ ॥

ಒಡವೆಯೊಡೆಯರಿಗೊಡವೆಯೊಪ್ಪಿಸಿ
ನಡೆವುದೆ ಶ್ರುತಿಮತವೆನುತಲಹ
ನುಡಿವ ಹರಗುರುವಚನ ಸೂತ್ರವ ತಿಳಿದು ಷಟ್ಸ್ಥಲದ।
ಒಡೆಯರಡಿಗಳ ಹಿಡಿದು ಒಪ್ಪಿಸಿ
ಪಡೆದು ತಾ ಕರುಣಪ್ರಸಾದವ
ಬಿಡದೆ ಭೋಗಿಪ ಶರಣನವನೆ ಅಲೌಕಿಕದ ಭಕ್ತ ॥ ॥ ೩೪ ॥

ತಾನು ತನ್ನಸು ತನು ಕರಣ ಸಂ
ಧಾನ ಸತಿಸುತ ಸಕಲ ಭೋಗ ವಿ
ಧಾನ ಸುಖಗಳನೆಲ್ಲ ಕರಸ್ಥಲ ಶಾಂತಗರ್ಪಿಸುತ।
ಸಾನುರಾಗದೊಳವರ ವಿಷಯಭಿ
ಮಾನವಳಿದುಳಿದಚಲ ಘನ ಸಂ
ಧಾನಿ ಸಮ್ಯಗ್‌ಜ್ಞಾನಿ ಮುಕ್ತನಲೌಕಿಕದ ಭಕ್ತ॥ ॥ ೩೫ ॥

ಕುಪಿತ ಸಂಸೃತಿ ಪಾಶಬದ್ಧನು
ಕುಪಿತ ಪಾತಕ ಜೀವ ಪಶು ನರ
ಶ್ವಪಚ ಲೌಕಿಕ ಕರ್ಮಕಾಂಡಿಯುಪಾಧಿಕೃತ ಭಕ್ತ।
ಮಪಿಚ ಪರಮನು ಜ್ಞಾನಿ ಮುಕ್ತನು
ತಪಸಿ ವಿರತನು ಧರ್ಮಕಾಂಡಿಯು
ಸುಪಥ ನಿರುಪಾಧಿಕನಲೌಕಿಕ ಭಕ್ತ ಕೇಳೆಂದ॥ ॥ ೩೬ ॥

ಶ್ರೀಕರದ ಶ್ರೀಗುರುನಿರೂಪದ
ನೇಕಮೇವ ಬ್ರಹ್ಮ ಷಟ್ಸ್ಥಲ
ಸಾಕಾರ ಸುಜ್ಞಾನಸತ್ಕ್ರೀ ವೃತ್ತಿ ಸುಯ್ಧಾನಿ।
ಏಕಲಿಂಗಾಚಾರನಿಷ್ಠನು
ಲೋಕ ಲೌಕಿಕವೆರಡ ಮೀರಿದ
ಶೋಕ ಮೋಹ ವಿರಹಿತ ಪುರುಷನೆ ಸಹಜಭಕ್ತನಲ॥ ॥ ೩೭ ॥

ಶೃಂಗರದ ಮಂಗಳದ ಮಡಿಯನು
ರಂಗಗುಣವರ್ಣಗಳ ಕವಿತ ಪ್ರ
ಸಂಗಬೋಧೆಯ ಹಳಿವ ಷಟ್ಸ್ಥಲಭಕ್ತ ಬಾಲಕರ।
ಅಂಗಳವೆ ಕೈಲಾಸವೆನುತಲಿ
ಜಂಗಮಾರ್ಚನೆಯೆಂಬ ನದಿಯ ತ
ರಂಗದೊಳಗೋಲಾಡುವವನವ ಸಹಜ ಶಿವಭಕ್ತ॥ ॥ ೩೮ ॥

ಅಹಿತ ಹಿತವೆರಡಿಲ್ಲದಿರುತಿಹ
ಮಹಿತಳಕೆ ಮರುಳಾಗಿ ತೋರುವ
ಬಹು ಬಗೆಯ ಸುಖದುಃಖ ಸೋಂಕಿಗೆ ಹಿಗ್ಗಿ ಮೈಮರೆಯ।
ಮಹಿಮ ಷಟ್ಸ್ಥಲಜ್ಞಾನಿಗಳ ಪದ
ಸಹವಾಸಿ ಸದ್ಭಕ್ತ ಭೃತ್ಯನು
ಸಹಜಭಕ್ತನು ಶರಣುಶ್ರುತಿಮತ ಮಗನೆ ಕೇಳೆಂದ॥ ॥ ೩೯ ॥

ಮಾಡುವನು ನಾನಲ್ಲ ಸ್ವಾಮಿ
ನೀಡುವನು ನಾನಲ್ಲ ಗುರುವೇ
ಮಾಡಿನೀಡುವ ಭಕ್ತರಡಿಗಳ ಬಂಟ ನಾನೆಂಬ।
ಬೇಡನಿಹಪರ ಭುಕ್ತಿಮುಕ್ತಿಯ
೬

ಬೇಡುವಾತ್ಮರ ಬೇಗ ಷಟ್ಸ್ಥಲ
ಗೂಢಗೂಢನು ಸಹಜಭಕ್ತನು ಮಗನೆ ಕೇಳೆಂದ॥ ॥ ೪೦ ॥

ತನುಕರಣ ಗುಣ ವನಿತೆ ಸುತಹಿತ
ಜನ ಪದವಿ ಕುಲ ಜಾತಿ ಸಂಪದ
ವಿನಿಯೋಗದುಪಚಾರ ಭೋಗವೆ ಶಬ್ದ ಮಾತ್ರಗಳು।
ವನಧಿಯಂತೆ ನಿರಾಭಿಮಾನವೆ
ಘನತರದ ಷಟ್ಸ್ಥಲದ ಶರಣರ
ನೆನೆವವನೆ ಮಹ ಸಹಜಭಕ್ತನು ಮಗನೆ ಕೇಳೆಂದ॥ ॥ ೪೧ ॥

ಅಂತರಂತರ ಸಕಲ ಭೋಗದ
ತಿಂತಿಣಿಯೆ ತೃಣ ಭುಕ್ತಿಮುಕ್ತಿಯೆ
ಭ್ರಾಂತಿ ಮಲತ್ರಯ ಪಾಶದೋಷವೆನುತ್ತನಿಚ್ಛೈಸಿ।
ಶಾಂತಿ ಸದ್ಗುಣ ಷಟ್ಸ್ಥಲದ ಮಾ
ಹಂತರಂಘ್ರಿಯ ನಂಬಿ ಭಜಿಸುವ
ನಂತ ಹರುಷನೆ ಸಹಜಭಕ್ತನು ಮಗನೆ ಕೇಳೆಂದ॥ ॥ ೪೨ ॥

ಲೋಕದಂತವನಲ್ಲ ಶಿವಶಿವ
ಲೋಕ ಲೌಕಿಕ ನಡೆಯ ನಡೆಯನು
ಬೇಕೆನ್ನ ಬೇಡೆನ್ನ ತಾ ಹರಭೇದವಿರಹಿತನು।
ಸಾಕೆನ್ನ ತೀರ್ಥ ಪ್ರಸಾದವ
ನೇಕಲಿಂಗ ಸುನಿಷ್ಠೆವಂತ ವಿ
ವೇಕ ಷಟ್ಸ್ಥಲ ಸಹಜಭಕ್ತನು ಮಗನೆ ಕೇಳೆಂದ॥ ॥ ೪೩ ॥

ಕೆಚ್ಚಲೊಳಗಣ ಕ್ಷೀರ ಘೃತಗತ
ಮುಚ್ಚಿ ಮಡಗಿದ ಕಿಚ್ಚು ಕಡವರ
ಬಿಚ್ಚಿ ಬೆರಸದ ಗೇರಫಳ ಗೊರೆಕುಂಡಲಿಯ ತೆರದಿ।
ಸಚ್ಚಿದಾನಂದೈಕ ಷಟ್ಸ್ಥಲ
ದಚ್ಚುಗದ ಕರಸ್ಥಲದ ಸೂತ್ರವ
ಹಚ್ಚಿದವನೇ ಸಹಜಭಕ್ತನು ಮಗನೆ ಕೇಳೆಂದ॥ ॥ ೪೪ ॥

ಸಗುಣಿ ನಿರ್ಗುಣಿ ಲೋಕ ಲೌಕಿಕ
ದ್ವಿಗುಣ ವಿಜಯವೆ ಸಹಜ ಮಾಟದ

ಬಗೆ ಸುಗುಣ ಲಕ್ಷಣಮುಪಾಧಿಕ ಪಾಶಗತ ಜೀವ।
ನಿಗಮನುತ ನಿರ್ಗುಣವಲೌಕಿಕ
ಜಗವೆ ತೃಣ ನಿರುಪಾಧಿ ಪರಮನು
ಮಗನೆ ಷಟ್ಸ್ಥಲಯೋಗಿ ಸಹಜಾನಂದಭಕ್ತನಲ॥ ॥ ೪೫ ॥

ತಾಮಸವೆ ನಿರಸನಗಳಾತಗೆ
ಭೂಮಿಭೋಗವೆ ಸ್ವರ್ಣ ಸತಿಸುತ
ಹೇಮ ಮೊದಲಾದಖಿಳ ಸುಖ ರತಿ ನೀರ ಲೇಖನವು।
ನಾಮರೂಪಿನ ವಸ್ತು ಚೀಲಳ
ಸ್ವಾಮಿಯೇ ತಾನಾದ ಮಹಿಮನ
ನಾಮಸ್ಮರಣೆಯ ಮಾಡಿದವ ನಿಜಮುಕ್ತ ಕೇಳೆಂದ॥ ॥ ೪೬ ॥

ರೂಪು ರೂಪಿನೊಳಡಗಿ ನಿಂದ ವಿ
ರೂಪು ನಿಶ್ಚಲವಾಗಿ ಚರಿಸದ
ರೂಪೆ ತಾನಾಗಿರ್ದ ಸಹಜಾನಂದ ಪರಬ್ರಹ್ಮ।
ಆ ಪರಾತ್ಪರವಾದ ವಸ್ತು ಸ್ವ
ರೂಪ ಷಟ್ಸ್ಥಲ ಕರ್ತೃ ಗುರು ಚಿ
ದ್ರೂಪ ಚೀಲಳಸ್ವಾಮಿಯೇ ತಾನಾದ ಕೇಳೆಂದ॥ ॥ ೪೭ ॥

ಬಾಹಿರಂಗದ ಬಣ್ಣವಾರಿದ
ದೇಹಪ್ರಾಣಭಿಮಾನ ಜಾರಿದ
ಸೋಹದಾಸೋಹಗಳ ಮೀರಿದ ವೀರ ಬಿರುದಂಕ।
ಸಾಹಸದ ಷಟ್ಸ್ಥಲದ ಶರಣರ
ಮೋಹದಣುಗನ ಸುತನ ಭೃತ್ಯನ
ಸಹಜಭಕ್ತನ ಸ್ಮರಣೆ ನಮಗಿರಲಯ್ಯ ಶ್ರೀಗುರುವೆ॥ ॥ ೪೮ ॥

ಸಹಜಭಕ್ತರ ಬಲಕೆ ಜಯ ಜಯ
ಸಹಜಭಕ್ತರ ಛಲಕೆ ಜಯ ಜಯ
ಸಹಜಭಕ್ತರ ಫಲ ಕುಳಕೆ ಲಿಂಗೈಕ್ಯ ಸುಖ ಜಯತು।
ಸಹಜಭಕ್ತರ ನಡೆಗೆ ಜಯ ಜಯ
ಸಹಜಭಕ್ತರ ನುಡಿಗೆ ಜಯ ಜಯ
ಸಹಜಭಕ್ತರ ನಿಷ್ಠೆ ನೇಮಕೆ ಜಯತು ಶ್ರೀಗುರುವೆ॥ ॥ ೪೯ ॥

ಸ್ಥಾವರಕೆ ಜಂಗಮಕೆ ತತ್ವನು
ಭಾವಿಗಳಿಗೆ ಕರಸ್ಥಳದ ಶಿವ
ಸಾವಧಾನದ ನೇತ್ರಸೂತ್ರವ ತಿಳಿದ ಶರಣರಿಗೆ।
ಜೀವ ಪರಮ ನಿರೂಪರಿಗೆ ನಿಜ
ದೇವ ಭಕ್ತರ ಸಭೆಗೆ ಷಟ್ಸ್ಥಲ
ದೇವ ಚೀಲಲಳಸ್ವಾಮಿ ಮೋಕ್ಷಾನಂದವನೆ ಕೊಡಲಿ॥ ॥ ೫೦ ॥

ನಿಟಿಲನೇತ್ರನು ಗೌರಿದೇವಿಗೆ
ಚಟುಲ ವಚನದಿ ನಂದಿ ಪ್ರಮಥರ
ಪಟಲಕರುಹಿದ ಪ್ರಭು ವೃಷಭನಿಗೆ ಚೆನ್ನಬಸವನಿಗೆ।
ಘಟಿಕಸ್ಥಲ ಹರಪುರದ ಶ್ರೀಗಿರಿ
ತಟದ ಷಟ್ಸ್ಥಲಸಿಂಹಪೀಠದಿ
ದಿಟದಿ ಬಸವಪ್ರಭು ಕುಮಾರನಿಗೊರೆದ ಸೂತ್ರವಿದು॥* ॥ ೫೧ ॥

❖❖

* ಇತಿ ೨೩ ಸ್ಕಂಧ ನಿರೂಪಣಂ. ಅಂತು ಉಭಯ ಪದಗಣನೆ ೧೧೭೦ಕ್ಕಂ ಮಂಗಳ ಮಹಾಶ್ರೀ ॥

ಚತುರ್ವಿಂಶತಿ ಸ್ಕಂಧ

ರಾಗ : ವಸಂತ

ಕರಸರೋಜವ ಮುಗಿದು ಗುರುವಿನ
ಚರಣಕಮಲಕ್ಕೆರಗಿ ಶಿಷ್ಯನು
ವಿರತರಾಚರಣೆಗಳನರುಹೆನಲೊರೆದ ಗುರು ಸುತಗೆ॥

ಶ್ರೀ ಜನಕಜಾರಮಣ ಮೌಳಿ ಸ
ರೋಜಸಂಭವ ಮಕುಟ ಸುಮನಸ
ರಾಜರತ್ನಕಿರೀಟ ರಂಜಿತ ಚರಣಸರಸಿಜನೆ।
ರಾಜರವಿಶಿಖಿನೇತ್ರ ಶ್ರೀಗಿರಿ
ರಾಜನಂದನೆಯರಸ ಯತಿಕುಲ
ರಾಜ ಸರಸಿಜಹಂಸ ಶಂಕರ ಸಲಹು ಮೂಜಗವ॥ ॥ ೧ ॥

ಶ್ರೀ ಪರಬ್ರಹ್ಮಾವತಾರ ಪ
ರಾತ್ಪರ ಶ್ರೀ ವೀರಶೈವ ಸ್ವ
ರೂಪ ತತ್ವನಿರೂಪ ಷಟ್ಸ್ಥಲಬ್ರಹ್ಮ ಸುಜ್ಞಾನ।
ದೀಪ ಪ್ರಣಮ ಕಲಾಪ ಜಯ ನಿ
ರ್ಲೇಪ ಪ್ರಕೃತಿ ಕೃತಾವಸ್ಮರಥನು
ಲೋಪ ಪರಶಿವಯೋಗಿ ಚೀಲಳಸ್ವಾಮಿ ಗುರುಶರಣು॥ ॥ ೨ ॥

ಆಣೆಕಾರಗೆ ಅನುಭವಿಗೆ ಶ
ರ್ವಾಣಿರಮಣನ ಭಜಿಪರಿಗೆ ಗೀ
ರ್ವಾಣ ಪದವಿಯನೆಣಿಸದಚಲಿತ ಚಿತ್ತರಾದರಿಗೆ।
ಆಣೆಭಾಷೆಗೆ ತಪ್ಪದವರಿಗೆ

ಪ್ರಾಣಹಿಂಸೆ ತಪ್ಪುವವರಿಗೆ
ಜಾಣರಿಗೆ ಬೋಧಿಸುವುದೀ ಷಟ್ಸ್ಥಲಶಿವಾಯಣವ॥ ॥ ೩ ॥

ಅಲ್ಲದುದ ಹಿಡಿವವಗೆ ಪೂಗಿಡ
ದಲ್ಲೆ ಮಲಮೂತ್ರಗಳ ಬಿಡುವಗೆ
ಹಲ್ಲುಜ್ಜಿ ಮುಖದೊಳೆಯದೀಶ್ವರ ಪೂಜೆ ಮಾಳ್ಪರಿಗೆ।
ಕುಲ್ಲರಿಗೆ ಕುಹಕರಿಗೆ ಶಿವಮತ
ದಲ್ಲಿ ನಂಬುಗೆ ಇಲ್ಲದೇತಕು
ಸಲ್ಲದವರಿಗೆ ಹೇಳದಿರು ಷಟ್ಸ್ಥಲಶಿವಾಯಣವ॥ ॥ ೪ ॥

ಲೋಕಮಾತೆಗೆ ಶಂಭು ನಂದಿಯ
ನೇಕ ಪ್ರಮಥರ ಪಡೆಗೆ ಪ್ರಭುವರ
ಟೀಕಿಸಿದ ವೃಷಭನಿಗೆ ಶರಣರ ಸಭೆಗೆ ಪೂರ್ವದಲಿ।
ಲೋಕಕಗ್ಗಳ ಹರಪುರದ ಗಿರಿ
ಶ್ರೀಕರದ ಷಟ್ಸ್ಥಲದ ಶ್ರೀಗುರು
ವಾಕು ಬಸವಪ್ರಭು ಕುಮಾರನಿಗೊರೆದ ಸೂತ್ರವಿದು॥ ॥ ೫ ॥

ಗುರುವೆ ಪರಿಭವವಾರ್ಧಿವಡಬನೆ
ಗುರುವೆ ಪರಿಭವತಿಮಿರಭಾಸ್ಕರ
ಗುರುವೆ ಪರಿಭವಗಿರಿಗೆ ವಜ್ರಾಯುಧವೆ ಸುರತರುವೆ।
ಗುರುವೆ ಪರಿಭವಮೇಘಮಾರುತ
ಗುರುವೆ ಪರಿಭವವಿಟಪಿಪಾವಕ
ವಿರತಿ ಮಾರ್ಗವನರುಹಬೇಕೆನುತೆರಗಿ ಕೀರ್ತಿಸಿದ॥ ॥ ೬ ॥

ಬಾಲಕನ ಹಿಡಿದೆತ್ತಿ ಹರಸುತ
ಬೋಳೈಸಿ ತಲೆದಡಹಿ ಮುದ್ದಿಸಿ
ಭಾಳಲೋಚನ ಪಾರ್ವತಿಗೆ ಬೋಧಿಸಿದ ಷಟ್ಸ್ಥಲದ।
ಬಾಲವೃದ್ಧರ ಸಾಂಪ್ರದಾಯ ಸ
ಕೀಲ ವಿರತಚರಿತ್ರ ಸೂತ್ರವ
ಕೇಳೆನುತ ಪ್ರಮಥರಿಗೆ ಪ್ರಭು ಬೋಧಿಸಿದ ಕೇಳೆಂದ॥ ॥ ೭ ॥

ಎಲ್ಲ ಲೋಕಕ್ಕಧಿಕ ಶ್ರುತಿ ಮತ
ಕಲ್ಯಾಣದನುಭವದ ಮಂಟಪ

ದಲ್ಲಮಪ್ರಭು ಪಾದಪದ್ಮಕ್ಕೆರಗಿ ಕೀರ್ತಿಸುತ।
ಲೆಲ್ಲ ಪ್ರಮಥರು ನಿಂದು ಭಕ್ತಿಯೊ
ಳಲ್ಲಿ ಶಂಕಿಸೆ ವಿರತಿಯೆಂಬುದ
ಮೆಲ್ಲನರುಹಿದ ಸೂತ್ರವಿದ ಕೇಳೆಂದ ದೇಶಿಕನು॥ ॥ ೮ ॥

ಆವ ಪುಣ್ಯದ ಫಲವೊ ಸದ್ಗುರು
ದೇವ ದೀಕ್ಷೆಯ ಪಡೆವುದಿದು ಮ
ತ್ತಾವ ತಪಸಿನ ಫಲವೊ ಲಿಂಗವ ಪಡೆದು ಪೂಜಿಪುದು।
ಆವ ಸಿದ್ಧಿಯೊ ಪಾದತೀರ್ಥದ
ಸೇವನೆಗಳು ಪ್ರಸಾದದನುಭವ
ದೇವರುದ್ರವತಾರ ಷಟ್ಸ್ಥಲಬ್ರಹ್ಮಿ ಶಿವಯೋಗಿ॥ ॥ ೯ ॥

ಗುರು ಕಟಾಕ್ಷವ ಪಡೆದು ಸಂಸೃತಿ
ಶರಧಿ ತೆರೆಗಳ ಹೊಯ್ಲಿಗಾರದ
ಲರಸುತಿರ್ದನು ತನ್ನೊಳಗೆ ಸುಜ್ಞಾನ ದೇಶಿಕನ।
ಚರಣಕಮಲದ ದರುಶನಂಗಳ
ಕರಸ್ಥಲದ ಶಾಂತೇಶ ತೋರೆನು
ತೆರಗಿ ಕೀರ್ತಿಸುತಿರಲದೊರ್ವನು ಕಂಡನಾಗಮವ। ॥ ೧೦ ॥

ಹಿಂದೆ ಮಾಡಿದ ಸುಕೃತ ಫಲವದು
ಬಂದು ನಿಲುವುದು ಹೃದಯದಲಿ ಗುರು
ತಂದೆ ಷಟ್ಸ್ಥಲಬ್ರಹ್ಮಿ ಜೀವನ್ಮುಕ್ತ ಶ್ರುತಿ ಸಿದ್ಧ।
ಸಂದೆಹತಮಾದಿತ್ಯ ಶಿಷ್ಯರ
ವೃಂದ ತತ್ವಪುದೇಶ ಚರಣರ
ವಿಂದಕೆರಗಿದ ಭಕ್ತ ಸದ್ಯೋನ್ಮುಕ್ತನೆಂಬುದನು॥ ॥ ೧೧ ॥

ಆವನೊಬ್ಬ ಗೃಹಸ್ಥ ಬಾಲಕ
ದೈವ ಕಲ್ಪನೆಯಿಂದ ಪೂರ್ವದ
ಧಾವತಿಯ ಧಿಕ್ಕರಿಸಿ ಶ್ರೀಗುರು ಕರುಣವಡೆದಿರುತ।
ಸಾವಧಾನದ ಸೂತ್ರದೋರುವ
ನಾವ ಗುರುವೆಂದೆನುತ ಚಿಂತಿಸಿ
ಭಾವ ಸೂಚನೆಯಾಯ್ತು ಷಟ್ಸ್ಥಲಜ್ಞಾನಗುರುವೆಂದು॥ ॥ ೧೨ ॥

ಆಶ್ರಮವ ಪರಿಹರಿಸಿ ಷಟ್ಸ್ಥಲ
ದಾಶ್ರಮವ ಕೈಕೊಂಡುಮದರೊಳು
ಮಿಶ್ರವಾದ ಮಹಾನುಭವರಿಗಡ್ಡ ಬಿದ್ದವರ।
ಶುಶ್ರೂಷೆ ಮಾಡಲ್ಕೆ ಸದ್ಗುರು
ವಾಶ್ರಮದ ತತ್ತ್ವೋಪದೇಶವ
ನಾಶ್ರೈಸಿದರಿಗೀವ ಶ್ರುತಿಮತ ಮಗನೆ ಕೇಳೆಂದ॥ ॥ ೧೩ ॥

ಶ್ರೋತ್ರ ಮುಖದಲಿ ಕೇಳಿ ದೇಶಿಕ
ನುತ್ರ ಜ್ಞಾನುಪದೇಶ ರಸ ಮನ
ಪಾತ್ರೆಯೊಳು ತುಂಬಿರಿಸಿ ಮಂತ್ರಸಮೇತ ಗುರುಚರಣ।
ಸ್ತೋತ್ರಗಳ ಮಾಡುತ್ತ ಲೋಕ ಪ
ವಿತ್ರಕೋಸ್ಕರ ಚರಿತ ಕರಸ್ಥಲ
ಸೂತ್ರ ಜೀವನ್ಮುಕ್ತ ವಿರತನು ಮಗನೆ ಕೇಳೆಂದ॥ ॥ ೧೪ ॥

ಅಳಿದು ಪೂರ್ವವ ಕಳೆದು ಕರ್ಮವ
ಹಳಿದು ಪ್ರಕೃತಿಯ ತುಳಿದು ಕಾಲನ
ಸೆಳೆದು ಕರಣವ ಮುಳಿದು ವಿಷಯವ ಗಳಿಸಿ ಘನಗುರುವ।
ಕಳೆಗೆಡಿಸಿ ಮನ್ಮಥನ ಬಳಗಕೆ
ಒಳಗೆ ಹೋಮವ ಬೇಳಿ ಷಟ್ಸ್ಥಲ
ನಿಳಯ ದೀಕ್ಷೆಯ ಪಡೆದವನೆ ವಿರತೇಶ ಕೇಳೆಂದ॥ ॥ ೧೫ ॥

ಅಂಗಲಿಂಗ ಸ್ವರೂಪ ಸಮರಸ
ಸಂಗ ತತ್ವಜ್ಞಾನ ಕ್ರೀಯ ಪ್ರ
ಸಂಗ ಸಾರಸಕೀಲ ಸೂತ್ರ ನಿರೂಪ ದೇಶಿಕರ।
ಅಂಘ್ರಿ ಸರಸಿಜಕೆರಗಿ ಶಂಕಿಸೆ
ಲಿಂಗಸೂತ್ರವೆ ಮುಖ್ಯವೆನಲಹ
ಕಂಗಳಂಗೈಗಿರಿಸಿ ಚರಿಪನೆ ವಿರತ ಕೇಳೆಂದ॥ ॥ ೧೬ ॥

ಸ್ಥಳಕುಳವ ಚಕ್ರಾಧಿಕಾರವ
ದಳವರ್ಣಮಾತ್ರೆಗಳ ಭೇದವ
ಒಳಹೊರಗೆ ಒಂದೆಂಬ ಹರಗುರು ವಚನನಿರ್ಣಯವ।
ತಿಳಿದು ಗುರುಮುಖದಿಂದ ಷಟ್ಸ್ಥಲ

ಫಳರಸವೆ ತೊಟ್ಟಿಡುವ ನಿಜಕರ
ಸ್ಥಳದ ಸೂತ್ರವಧಾನಿ ಮಹ ವಿರತೇಶ ಕೇಳೆಂದ॥ ॥ ೧೭ ॥

ಶೀಲವ್ರತನೇಮಗಳ ವಿಧಿಗಳ
ಮೂಲಮಂತ್ರ ಸಕೀಲ ಗ್ರಂಥವ
ಬಾಲವೃದ್ಧರಿಗೀವ ಜ್ಞಾನುಪದೇಶ ಲಕ್ಷಣವ।
ಕಾಲದೇಶವ ವರ್ತಮಾನ ವಿ
ಶಾಲ ಜಪಮಣಿಮಾಲೆ ಕರಸ್ಥಲ
ಪಾಲ ಗುರುಕೃಪೆವಡೆದವನೆ ವಿರತೇಶ ಕೇಳೆಂದ॥ ॥ ೧೮ ॥

ಮತದ ಭೇದವ ತಿಳಿದು ಶ್ರುತಿಷ
ಣ್ಮತದ ನಿರ್ಣಯವರಿದು ಷಟ್ಸ್ಥಲ
ಮತದ ದೀಕ್ಷೆಯ ಪಡೆದು ತತ್ವಜ್ಞಾನ ಗುರುವೆನಿಸಿ।
ಹಿತವಹಿತ ದಯವಳಿದು ಓರ್ವನೆ
ಕ್ಷಿತಿಯೊಳಾಚರಿಸುತ್ತ ಕರಸ್ಥಳ
ದ್ವಿತಿಯ ಶಾಂತನು ತಾನೆನಿಪ ವಿರತೇಶ ಕೇಳೆಂದ॥ ॥ ೧೯ ॥

ಶ್ರೀಗುರುವಿನಡಿಗೆರಗಿ ಷಟ್ಸ್ಥಲ
ಯೋಗಿಗಳ ಬೆಸಗೊಂಡು ಬಹು ವೈ
ರಾಗವೇ ತಲೆದೋರಿ ಸ್ವಾತ್ಮಜ್ಞಾನ ನೆಲೆಗೊಂಡು।
ಬೇಗ ಲಂಘಿಪ ಸಿಂಹದಂದದಿ
ತೂಗಿ ಮುಚ್ಚಿಸುವಂತೆ ಕರಸ್ಥಲ
ಭೋಗ ಸಾಮ್ರಾಜ್ಯಗಳನಾಳ್ವನೆ ವಿರತ ಕೇಳೆಂದ॥ ॥ ೨೦ ॥

ತುದಿ ಪದದ ತವನಿಧಿಯ ಕೈವ
ಲ್ಯದ ಸುಖಸುಧಾಂಬುಧಿಯ ಪುಣ್ಯದ
ಹದಿಯ ಪ್ರಣಮದ ಗುದಿಯ ಮಂತ್ರದಿ ದೈವಷಟ್ಸ್ಥಲದ।
ಹೃದಯ ಕರಸ್ಥಲ ಜ್ಯೋತಿ ಕಳೆಸಂ
ಪದದ ಸತ್ಯಾಶ್ರಮದ ಯೋಗದಿ
ಹುದುಗಿ ಬಾಳ್ವರ ಸುತನೆ ವಿರತನು ಮಗನೆ ಕೇಳೆಂದ॥ ॥ ೨೧ ॥

ಲಿಂಗಮುಕ್ತಾಚಾರಮುಕ್ತರ
ಸಂಗ ವ್ರತಮುಕ್ತರ ಸುದರ್ಶನ

ಜಂಗಮಾರ್ಚಕರಾಶ್ರಮವೆ ಕೈಲಾಸ ಪದವೆನುತ।
ಮಂಗಳೋತ್ಸಹ ತತ್ವಜ್ಞಾನಪ್ರ
ಸಂಗ ಸಮ ಜೋಡಾದ ಕರಸ್ಥಲ
ಲಿಂಗನಿಷ್ಠಾಪರನೆ ಪರಮವಿರಕ್ತ ಕೇಳೆಂದ॥ ॥ ೨೨ ॥

ಕೇಶಪಾಶಗಳಳಿದು ಷಟ್ಸ್ಥಲ
ದಾಶ್ರಮವ ಕೈಕೊಂಡು ಇಹಪರ
ದಾಶೆಗಳ ಮುರಿದೊತ್ತುತೇಕದೇಶ ಮಾತ್ರದಲಿ।
ಈಶಭಕ್ತರನರಸುತವರ ನಿ
ವಾಸ ಭಿಕ್ಷಾಂದೇಹಿ ಯೋಗಾ
ಭ್ಯಾಸಿ ಕರಸ್ಥಲ ಸೂತ್ರನೇತ್ರನೆ ವಿರತ ಕೇಳೆಂದ॥ ॥ ೨೩ ॥

ಕೆರೆಗಳಾಗಲಿ ಬಾವಿಯಾಗಲಿ
ಹರಿವ ನಿರ್ಮಳ ಜಲದೊಳಾಗಲಿ
ಶರೀರ ಸುದ್ಧಿಯ ಮಾಡಿ ಲಿಂಗಾರ್ಚನೆಯ ವಿಧಿ ನಡೆಸಿ।
ಪುರದೊಳಾಗಲಿ ಪೇಟೆಯಾಗಲಿ
ಹರದರಾಗಲಿ ಬಡವರಾಗಲಿ
ಚರಣವಿಡಿದಲ್ಲೊಪ್ಪುವನೆ ವಿರತೇಶ ಕೇಳೆಂದ॥ ॥ ೨೪ ॥

ಕುಂಭಿನಿಪತಿ ನಿಳಯವಾಗಲಿ
ಕಂಬಳದ ಶಿವಭಕ್ತನಾಗಲಿ
ಅಂಬಲಾಗಲಿ ಅಮೃತವಾಗಲಿ ಲಿಂಗಮುಖಕಿತ್ತು।
ಕಂಬಳಾಗೆ ದುಕೂಲವಾಗಲಿ
ಶಂಭುಭಕ್ತರ ಮುಖದಿ ಬಂದುದ
ನಿಂಬುಗೊಂಡಾಚರಿಸುವಾತನೆ ವಿರತ ಕೇಳೆಂದ॥ ॥ ೨೫ ॥

ಹಳೆಯ ನಿಳಯವದಾಗಲೇಳು
ನೆಲೆಯ ಸೆಜ್ಜೆಯದಾಗೆ ಬಯಲಿನ
ನೆಲೆಯದಾಗಲಿ ಮಂಚವಾಗಲಿ ವಿಷಯವರೆ ಘಳಿಗೆ।
ಮಲಗುವನು ಶಿವಯೋಗಿ ನಿದ್ರಾ
ಕಲಿತ ಮುದ್ರೆಯನಿಕ್ಕಿ ಕರಸ್ಥಲ
ಬಲಿದ ಸೂತ್ರದ ನೇತ್ರ ಸಮರಸ ವಿರತ ಕೇಳೆಂದ॥ ॥ ೨೬ ॥

ಆಟಪಾಟಕೆ ಅರಕೆಗೊಳ್ಳನು
ಕೂಟ ಮಾಡಕೆ ಕೂಡಿ ನಡೆಯನು
ನೋಟ ನುಡಿ ಘನಜಾತ್ರೆ ಕ್ಷೇತ್ರಕೆ ಅಡಿಯಿಡದ ಪಂಥ।
ತೋಟದಾರ್ಯನ ಸಾಂಪ್ರದಾಯದ
ನಾಟಕವೆ ನವನೂತ್ನ ಕರಸ್ಥಲ
ಪೀಠ ಮನದ್ಯಕ್ಕೇಕ ಪರಮವಿರಕ್ತ ಕೇಳೆಂದ॥ ॥ ೨೭ ॥

ಹಸಿಯೆ ಭಿಕ್ಷಾಟನಕೆ ತೆರಳುವ
ತೃಷೆಗೆ ಕೆರೆತೊರೆ ಜಲಧಿಗೈದುವ
ಶಶಿಮೌಳಿ ಪೂಜೆಯ ಶಿವಾಲಯ ಸ್ಥಳದಿ ತೀರಿಸುವ।
ಹಸನಾದ ಭೂಮಿಯಲೆ ಒರಗುವ
ಹಸುಗೂಸಿನಂತಿರುವ ಕರಸ್ಥಲ
ಬೆಸುಗೆ ಸೂತ್ರವಧಾನಿ ಪರಮವಿರಕ್ತ ಕೇಳೆಂದ॥ ॥ ೨೮ ॥

ಶೋಕ ಮೋಹದ ಸೊಗಡ ಕಳೆದಿಹ
ಬೇಕು ಬೇಡೆಂಬುಭಯವಳಿದಿಹ
ಲೋಕ ಲೌಕಿಕ ನಡೆನುಡಿಯ ಹಂಗಿಲ್ಲ ಷಟ್ಸ್ಥಲದ।
ಏಕಲಿಂಗ ಸುನಿಷ್ಠೆ ಸುಖವನ
ನೇಕಕಾಲದಿ ಸವಿವ ಕರಸ್ಥಲ
ಟೀಕೆ ಕಣ್ಮನ ಜ್ಯೋತಿ ಬಿರುದಿನ ವಿರತ ಕೇಳೆಂದ॥ ॥ ೨೯ ॥

ಹೆಣ್ಣು ಮುಟ್ಟನು ಹೊನ್ನ ಕಟ್ಟನು
ಮಣ್ಣು ಮೆಟ್ಟನು ತನ್ನವೆನುತಲಿ
ಬಣ್ಣ ಬಿಳಿದಿನ ಭೇದವರಿಯನು ಬಾಲಕನ ತೆರದಿ।
ಮಿಣ್ಣ ರುದ್ರಾಕ್ಷಿಗಳ ಭಸಿತವ
ಸಣ್ಣ ಕಾಷಾಂಬರವ ಧರಿಸಿಹ
ನಣ್ಣ ಕರಸ್ಥಲ ಶಾಂತ ಸಮರಸ ವಿರತ ಕೇಳೆಂದ॥ ॥ ೩೦ ॥

ಲೋಲಲೋಲರ ಭಕ್ತಿ ಭಾವವ
ಬಾಲನಂದದಿ ಕೈಕೊಳುತ್ತಿಹ
ಮೇಲೆ ಪರಶಿವನಂತೆ ಮುಕ್ತಿಯ ಮುಕ್ತಿಗಳ ಕೊಡುವ।
ನೀಲಕಂಧರನಲ್ಲಿ ಬೆರಸುವ
ಕೀಲ ತೋರುವ ಕರಸ್ಥಳದ ಮಹ
ಮೂಲಸೂತ್ರವ ಪಿಡಿದು ಚರಿಸುವ ವಿರತ ಕೇಳೆಂದ॥ ॥ ೩೧ ॥

ಚಿಂತೆಯೆ ಚಿತ್ರಮಾಣದತಿ ಮನ
ನಿಂತುದೇ ಮಹಲಿಂಗದಲಿ ಘನ
ಸಂತೋಷ ಷಟ್ಸ್ಥಲದ ತತ್ವಜ್ಞಾನ ವೃತ್ತಿಯಲಿ।
ಪಂಥ ಜೀವನ್ಮುಕ್ತಿ ನ್ಯಾಯದಿ
ಕಂತುಕಾಲ ಪ್ರಕೃತಿ ಶೌರ್ಯ ಮ
ಹಂತ ಕರಸ್ಥಲ ಶಾಂತಯೋಗಿ ವಿರಕ್ತ ಕೇಳೆಂದ॥ ॥ ೩೨ ॥

ಹೇಮ ಹಾಂಸೆ ಸಮನ ಮೋಹದ
ಕಾಮಿನಿಯೆ ನಿಜಮಾತೆ ಪಾರ್ವತಿ
ಸ್ತೋಮ ಸ್ತೋಮದ ರತ್ನಮಣಿಗಣ ಕಲ್ಲ ಹರಳವಗೆ।
ಭೂಮಿ ಕೋಪದ ಹಗೆ ಮೃಗಂಗಳೆ
ಪ್ರೇಮದೆರಳೆ ನಿಜಾಪ್ತ ಷಟ್ಸ್ಥಲ
ಧಾಮ ಕರಸ್ಥಲ ಶಾಂತನೊಲಿದ ವಿರಕ್ತ ಕೇಳೆಂದ॥ ॥ ೩೩ ॥

ಹಿತವಾಗನವ ಶತ್ರುವಾಗನು
ಮತಭೇದ ಸಂಗಡಿಗನಾಗನು
ಯತಿಗಳಾಶ್ರಮದೊಳಗೆ ಷಟ್ಸ್ಥಲದಾಶ್ರಮದ ಪಂಥ।
ಸತತ ಸಮ್ಯಜ್ಞಾನ ಸತ್ಕ್ರೀ
ಶ್ರುತಿಮತದಲಾಗಮ ಪ್ರಮಾಣಿನ
ಮಿತಿ ಕರಸ್ಥಲ ಶಾಂತಯೋಗಿ ವಿರಕ್ತ ಕೇಳೆಂದ॥ ॥ ೩೪ ॥

ಅವಿಕಲ ಬ್ರಹ್ಮಾಂಡದೊಳಗಿಹ
ಶಿವನ ಭಕ್ತರ ಮುಖದೊಳೊದಗಿದ
ವಿವಿಧವಾದ ಪದಾರ್ಥ ಪುಂಜವ ಭಸ್ಮ ಮಂತ್ರದಲಿ।
ಶಿವನಿರೀಕ್ಷಣೆಯಿಂದ ಪೂರ್ವದ
ಭವಗೆಡಿಸಿ ಕೈಮುಟ್ಟಿ ಕರಸ್ಥಲ
ಶಿವನಿಗರ್ಪಿಸಿ ಸುಖಿಸುವವನೆ ವಿರಕ್ತ ಕೇಳೆಂದ॥ ॥ ೩೫ ॥

ಭುವನಕೋಶದ ತೀರ್ಥವಾತನ
ನವಿನ ಚರಣಾಂಬುಜದೊಳಡಗಿಹ
ವವನೆ ಘನತೆಯ ವೇದಶಾಸ್ತ್ರಾಗಮ ಪುರಾಣಗಳು।
ವಿವರಿಸಲ್ಕಳವಲ್ಲ ನಿಮಗದು
ಹವಣಿಸಲು ಕಾಣಿಸದು ಮಗನೇ
ಶಿವಶಿವ ಕರಸ್ಥಲದ ಶಾಂತನೆ ವಿರತ ಕೇಳೆಂದ॥ ॥ ೩೬ ॥

ವಿರತಿಸಂಪದಕಾವ ಪದವೆಣೆ
ವಿರತಿಸುಖಕಿನ್ನಾವ ಸುಖ ಸರಿ
ವಿರತಿಯೋಗಕ್ಕಾವ ಯೋಗ ಸಮಾನವಿಲ್ಲೆನುತ।
ಗುರುಪದಾಂಬುಜಕೆರಗಿ ಶಿಷ್ಯನು
ಹರುಷದಿಂ ಮೈಯುಬ್ಬಿ ಕೀರ್ತಿಸಿ
ವಿರತಿಸತಿ ರತಿಸುಖದೊಳಿರ್ದನು ಮಗನೆ ಕೇಳೆಂದ॥ ॥ ೩೮ ॥

ದರ್ಪಣದ ಪ್ರತಿಬಿಂಬದಂದದಿ
ಸರ್ಪಗಳ ಸಂಯೋಗದಂದದಿ
ಕರ್ಪುರಾಂಗನೆಯಗ್ನಿಪುರುಷನ ಸ್ನೇಹ ಸಮರಸದಿ।
ಅಪ್ರತಿಮ ಷಟ್ಸ್ಥಲದ ಸದ್ಗುರು
ವಪ್ಪ ಚೇಲಲಳಸ್ವಾಮಿ ಧ್ಯಾನದೊ
ಳಿಪ್ಪದರು ಗುರುಶಿಷ್ಯರಿರ್ವರು ಮಗನೆ ಕೇಳೆಂದ॥ ॥ ೩೯ ॥

ಭಕ್ತರಿಗೆ ಸ್ಥಿತಿಗತಿಯ ಷಟ್ಸ್ಥಲ
ಭಕ್ತರಿಗೆ ಸದ್ಗತಿಯ ಪರಮ ವಿ
ರಕ್ತರಿಗೆ ನಿಜಭಕ್ತಿಜ್ಞಾನ ವಿರಾಗಪದ್ಧತಿಯ।
ಶಕ್ತಿವಿರಹಿತ ಕರಸ್ಥಲದ ಶಿವ
ಶಕ್ತಿ ಸೂತ್ರಸಮೇತ ಜೀವ
ನ್ಮುಕ್ತಿಕಾಂತೆಯ ಸುಖವ ಚೇಲಲಳಸ್ವಾಮಿ ಪಾಲಿಸಲಿ॥ ॥ ೪೦ ॥

ಲಲನೆಗಭವನು ನಂದಿ ಪ್ರಮಥರ
ಕುಲಕೆ ಪ್ರಭು ವೃಷಭನಿಗೆ ಷಟ್ಸ್ಥಲ
ಬಲಕೆ ಕಲ್ಯಾಣದಲಿಯನುಭವ ಮಂಟಪದಿ ಕುಳಿತು।
ನೆಲದೊಳಗ್ಗಳ ಹರಪುರದ ಗಿರಿ
ಲಲಿತ ಷಟ್ಸ್ಥಲಪೀಠ ಸದ್ಗುರು
ಒಲಿದು ಬಸವಪ್ರಭು ಕುಮಾರನಿಗೊರೆದ ಸೂತ್ರವಿದು॥* ॥ ೪೧ ॥

❖❖

* ಇತಿ ೨೪ ಸ್ಕಂಧ ನಿರೂಪಣಂ. ಅಂತು ಉಭಯ ಪದಗಣನೆ ೧೨೨೧ಕ್ಕಂ ಮಂಗಳ ಮಹಾಶ್ರೀ ॥

ಪಂಚವಿಂಶತಿ ಸ್ಕಂಧ

ರಾಗ: ಗೌಳ

ಶ್ರೀ ವೀರಶೈವಾಚರಣೆಗಳ
ಭಾವಗಳನರುಹೆಂದು ಸದ್ಗುರು
ದೇವನಡಿಗಳಿಗೆರಗಿ ಬೆಸಗೊಳಲೊರೆದ ಗುರು ಸುತಗೆ॥

ಶ್ರೀ ನಾರಾಯಣ ನಯನ ನಳಿನ ನ
ವೀನಮೃದುಪದಪದ್ಮರಂಜಿತ
ಕಾನ ಕೋರಕ ಶಿರಕಮಲ ಕರಕಂಜ ಶ್ರುತಿವಿನುತ।
ಮೀನಕೇತನಧ್ವಂಸ ಮುನಿನತ
ಜ್ಞಾನಿ ಪರಮನ ಜಾಹ್ನವೀಧರ
ಶ್ರೀ ನಗಾತ್ಮಜೆಯರಸ ಶಂಕರ ಸಲಹು ಮೂಜಗವ॥ ॥ ೧ ॥

ಶ್ರೀಸಕಲಗುಣಶರಧಿಚಂದ್ರ ವಿ
ಶೇಷ ಸಜ್ಜನ ಸರಸಿಹಂಸೆ ಯ
ತೀಶ ಸರಸಿಜಭಕ್ತಭಾಸ್ಕರ ವಿರತಚಕ್ರೇಶ।
ಶ್ರೀ ಸದಾಶಿವನಂತರಂಗಪ್ರ
ಕಾಶ ನಿರುಪಮಜ್ಯೋತಿ ಷಟ್ಸ್ಥಲ
ದೇಶಿಕಶಿಖಾರತ್ನ ಚೀಲಳಸ್ವಾಮಿ ಶರಣಾರ್ಥಿ॥ ॥ ೨ ॥

ಪೂಜ್ಯರಿಗೆ ಪೂರ್ವಿಕರಿಗೆ ಸಾ
ಯುಜ್ಯರಿಗೆ ಶಾಂತರಿಗೆ ಷಟ್ಸ್ಥಲ
ಭೋಜ್ಯರಿಗೆ ಭಕ್ತರಿಗೆ ಸತ್ತ್ರೀಜ್ಞಾನ ನಿಜಮುಕ್ತಿ।
ರಾಜ್ಯರಿಗೆ ರಸಿಕರಿಗೆ ವೀರ ಸು

ತೇಜ್ಯರಿಗೆ ಕರಸ್ಥಲದ ಶಾಂತನ
ಪೂಜ್ಯರಿಗೆ ಬೋಧಿಸುವುದೀ ಷಟ್ಸ್ಥಲಶಿವಾಯಣವ॥ ॥ ೩ ॥

ಹಸಕರಿಗೆ ಹಡಕರಿಗೆ ಪೊರಕಗೆ
ಹುಸಿಕರಿಗೆ ಹುಣುಬರಿಗೆ ಹುಡುಗಗೆ
ಕಿಸಕರಿಗೆ ಕೀಳ್ಜಾತಿ ಬೆರೆವಗೆ ಕೀಡೆ ಮನುಜರಿಗೆ।
ಅಶನದೆಸಕಕೆ ಅಳಲುವವರಿಗೆ
ಬಸುರಿ ಬಾಣತಿ ಬಳಸುವವರಿಗೆ
ಶಿಶುವೆ ಬೋಧಿಸ ಸಲ್ಲದೀ ಷಟ್ಸ್ಥಲಶಿವಾಯಣವ॥ ॥ ೪ ॥

ಪ್ರಥಮದಲಿ ಪಾರ್ವತಿಗೆ ಪರಶಿವ
ದ್ವಿತಿಯದಲಿ ನಂದೀಶ ಶಿವಗಣ
ತ್ರಿತಯದಲಿ ಪ್ರಭುರಾಯ ವೃಷಭಗೆ ಚೆನ್ನಬಸವನಿಗೆ।
ಚತುರ್ಥಿಯಲಿ ಹರಪುರದ ಶ್ರೀಗಿರಿ
ರತುನ ಸಿಂಹಾಸನದ ಷಟ್ಸ್ಥಲ
ದೆತಿಪ ಸದ್ಗುರು ಬಸವಪ್ರಭು ಸುತಗೊರೆದ ಸೂತ್ರವಿದು॥ ॥ ೫ ॥

ವೀರಶೈವಾಗ್ರಜರ ಚರಿತೆಯ
ಮೀರಿದಾಚರಣೆಗಳ ಷಟ್ಸ್ಥಲ
ವಾರಿಜಕೆ ಭಾಸ್ಕರನೆ ಭಕ್ತರ ಬಾಲಕನೆ ಶಿವನೆ।
ಪಾರವಾರಸಮಾನಗುಣ ಗಂ
ಭೀರ ನತಜನ ಪಾರಿಜಾತನೆ
ಕಾರಣಾತ್ಮಕ ದೇಶಿಕನೆ ಸಲಹೆನುತಲಡಿಗೆಡೆದ॥ ॥ ೬ ॥

ಕರುಣಮಯ ಗುರುರಾಯ ಚರಣ
ಕ್ಕೆರಗಿದಣುಗನ ಶಿರವ ತಡಹುತ
ಕರಯುಗವ ಹಿಡಿದೆತ್ತಿ ಹರಸುತ ಹರುಷರಸ ಹೆಚ್ಚಿ।
ಕರೆಕರೆದು ಮುದ್ದಿಸುತ ಮೋಹದ
ತೆರೆ ಮಸಗಿ ಮನ ಕರಗಿ ನಯನದಿ
ಸುರಿವ ಕರುಣಾಮೃತದ ಪಾನವನೆರೆದು ಸಂತೈಸಿ॥ ॥ ೭ ॥

ಜಗದ ಷಟ್ಸ್ಥಲಜಾಲ ಸರಸಿಜ
ಗಗನಮಣಿ ಸದ್ಭಕ್ತ ಸುರಕುಜ

ತೆಗೆತೆಗೆದು ಬಿಗಿದಪ್ಪಿ ಹಿಗ್ಗುತ ಹೆಚ್ಚಿ ನಿಜಸುತನ।
ಮೊಗದೊಳಗೆ ಮೊಗವಿಟ್ಟು ಮೂರ್ಧ್ನಿಯ
ನೆಗಹಿ ಬೋಳೈಸುತ ಕಟಾಕ್ಷದಿ
ನಗುತ ಮೃದುನುಡಿಯಿಂದ ಬೋಧಿಸುತಿರ್ದನೆಂತೆನಲು॥ ॥ ೮ ॥

ಕ್ಷಿತಿಯೊಳಗೆ ಚರಿಸುತ್ತಲಿಹ ಷ
ಣ್ಮತಗಳಿಗೆ ಹದಿನೆಂಟು ಜಾತಿಗೆ
ಪೃಥುಕುಪೃಥುಕಿಲಿ ತೋರುತಿಹ ನೂರೊಂದು ಕುಲದೊಳಗೆ।
ಶ್ರುತಿವಿದಿಗ ಶ್ರೀವೀರಶೈವದ
ಮತಕೆ ಸರಿಯಿಲ್ಲೆನುತಲಾಗಮ
ನುತಿಸವೇ ಷಟ್ಸ್ಥಲದ ಮಹಿಮೆಯ ಮಗನೆ ಕೇಳೆಂದ॥ ॥ ೯ ॥

ಅಷ್ಟವಿಂಶತಿ ಶೈವದೊಳಗೆ ವಿ
ಶಿಷ್ಟ ಶ್ರುತಿಮತ ವೀರಶೈವ ಪ್ರ
ತಿಷ್ಠೆಯಾಗಮ ಸಿದ್ಧ ಪರಶಿವ ಗೋಪ್ಯಮುಖ ಜನನ।
ಶ್ರೇಷ್ಠ ಷಟ್ಸ್ಥಲ ಭಕ್ತರೊಳಗತಿ
ನಿಷ್ಠನೇ ನಿರ್ಭಾಗಿಯೆನುತಲಿ
ದೃಷ್ಟದಾರಿಷ್ಟಗಳ ಪಾರ್ವತಿಗೊರೆದ ಪರಶಿವನು॥ ॥ ೧೦ ॥

ಆದಿಪುರುಷರನಾದಿಪುರುಷರು
ವೇದವಿದವೇದಾಂತ ಪ್ರಾಜ್ಞರು
ಸಾಧಕರು ಷಣ್ಮತದ ಶ್ರೇಷ್ಠರು ಸಕಲ ಸಜ್ಜನರು।
ವಾದಿಗಳು ಬಹು ಪಾಶಗಳ ಪರಿ
ಚ್ಛೇದಿಸುತ ಶ್ರೀವೀರಶೈವರ
ಪಾದವಿಡಿದರು ಮುಕ್ತರಾದರು ಗೌರಿ ಕೇಳೆಂದ॥ ॥ ೧೧ ॥

ವೀರಶೈವವೆ ಉತ್ತರೋತ್ತರ
ವೀರಶೈವವೆ ಇಹಪರಕೆ ಘನ
ವೀರಶೈವವೆ ಸಕಲ ಸಮಯದ ಮಾತೆ ಶ್ರುತಿಮತವು।
ವೀರಶೈವರೆಯಂಕಕಾರರು
ವೀರಶೈವರೆ ಬಿಂಕಕಾರರು
ನಾರಿ ಕೇಳೆಂದೆನುತ ಗೌರಿಗೆ ಬೋಧಿಸಿದನಭವ॥ ॥ ೧೨ ॥

ಎಲ್ಲ ಲೋಕಕ್ಕಧಿಕವೆನಿಸುವ
ಕಲ್ಯಾಣಪುರದೊಳಗದನೆ ನ
ಮ್ಮಲ್ಲಮಪ್ರಭು ಬೋಧಿಸಿದ ಬಸವಾದಿ ಪ್ರಮಥರಿಗೆ।
ಇಲ್ಲಿ ಭೂಕೈಲಾಸ ಹರಪುರ
ದಲ್ಲಿ ಷಟ್ಸ್ಥಲ ವೀರಶೈವವ
ಮೆಲ್ಲನೊರೆವೆನು ಕೇಳೆನುತ ಸುತಗೊರೆದ ದೇಶಿಕನು॥ ॥ ೧೩ ॥

ಗುರುವಚನ ಹರವಚನ ಷಟ್ಸ್ಥಲ
ಶರಣರಾಚರಣೆಗಳ ಸಾಧಿಸಿ
ಚರಲಿಂಗ ದಾಸೋಹಿಗಳ ಚರಣವನೆ ನೆರೆನಂಬಿ।
ಸಿರಿ ದರಿದ್ರಕೆ ಹಿಗ್ಗಿತಗ್ಗದ
ಕರಣದುಪಹತಿಗಳಿಗೆ ಜಗ್ಗದ
ಕರಸ್ಥಲದ ಸೂತ್ರಿಕನೆ ವೀರನು ಮಗನೆ ಕೇಳೆಂದ॥ ॥ ೧೪ ॥

ಜಾತಿಸೂತಕವಳಿದ ಗುರುವಿನ
ಮಾತ ಮೀರನು ವೀರಶೈವನು
ಭೂತಳದ ಕ್ಷೇತ್ರಗಳ ದೈವವ ಸಿರಿಗೆ ಸರಿಯೆಂಬ।
ಭೂತಿರುದ್ರಾಕ್ಷಿಗಳ ಧರಿಸಿದ
ನಾಥ ಜಂಗಮ ರುದ್ರನೆನುತತಿ ಪ
ರೀತಿಯಿಂದೆರಗುವನೆ ವೀರನು ಮಗನೆ ಕೇಳೆಂದು॥ ॥ ೧೫ ॥

ಜೀವ ಪರಮರನೆಣಿಸನನ್ಯರ
ದೈವ ಪೂಜೆಯ ಕುರಿಯ ಹರಕೆಯ
ಸ್ಥಾವರಕೆ ಕಟ್ಟಿಸನು ಉಪವಾಸಲ್ಪಕ್ರೀರಹಿತ।
ಭಾವಿಸನು ಲೌಕಿಕರ ಷಟ್ಸ್ಥಲ
ದೇವ ಭಕ್ತರ ಭೃತ್ಯ ಕರಸ್ಥಲ
ಸಾವಧಾನಿಯೆ ವೀರಶೈವನು ಮಗನೆ ಕೇಳೆಂದ॥ ॥ ೧೬ ॥

ಶ್ರುತಿಪುರಾಣಾಗಮ ಸುಸನ್ಮತ
ಮತ ಶಿಖಾಮಣಿ ವೀರಶೈವದ
ಮತವೆ ಮಾತೃಸ್ಥಾನವಾತಗೆ ಲಿಂಗವೇ ಪ್ರಾಣ।
ಜಿತಮದನ ಜಂಗಮದ ಸೋಹವೆ

ಮತಿಗೆ ಚೇತನ ಜ್ಞಾನಕ್ರೀಗಳೆ
ವ್ರತ ಕರಸ್ಥಲಸೂತ್ರ ವೀರಗೆ ಮಗನೆ ಕೇಳೆಂದ॥ ॥ ೧೭ ॥

ಲಿಂಗಮುಕ್ತಾಚಾರಮುಕ್ತನು
ಜಂಗಮವೆ ಮನೆದೈವ ಕುಲಗುರು
ಮಂಗಳೋತ್ಸಹ ಶರಣರಡಿದಾವರೆಯ ಪೂಜೆಗಳೆ।
ಕಂಗಳರ್ತಿಯು ಮನಕೆ ಹಬ್ಬ ಪ್ರ
ಸಂಗ ಸಮರಸ ಷಟ್ಸ್ಥಲದ ಪ್ರಿಯ
ಲಿಂಗ ವೃಷಭಗಿದೀಗ ವೀರವತಾರ ಕೇಳೆಂದ॥ ॥ ೧೮ ॥

ಹಸಿವ ಹರಿವನೆ ವೀರಶೈವನು
ಹುಸಿಯ ಹುರಿವನೆ ವೀರಶೈವನು
ಬಸುರ ಕಿಚ್ಚಿಗೆ ಬಳಸಿ ಬಳಲುವನಲ್ಲ ವರವೀರ।
ಅಸಮ ಷಟ್ಸ್ಥಲ ಶರಣರಂಘ್ರಿಯ
ಬಿಸರುಹಂಗಳ ಸೇವಕರ ನಿಜ
ಶಿಶುವಿನಣುಗನು ವೀರಶೈವನು ಬಸವ ಕೇಳೆಂದ॥ ॥ ೧೯ ॥

ಅವನಿಭರಕರಾಗಿ ತೋರುವ
ಭವಿಗಳಂಗಣದತ್ತ ಸುಳಿಯನು
ಶಿವಮತವ ಹಳಿವವರ ಕೀಳಲ್ವನು ಸಮಯಗಣ ಜರೆಗೆ।
ಕಿವಿಯನಿಕ್ಕದ ಭಾಷೆ ಷಟ್ಸ್ಥಲ
ಶಿವನ ಲೀಲೆಗಳೆನುತ ಕರಸ್ಥಲ
ಶಿವನ ಸೂತ್ರವ ಧರಿಸಿ ನಟಿಸುವ ವೀರ ಕೇಳೆಂದ॥ ॥ ೨೦ ॥

ಲೋಕದಂಥವನಲ್ಲ ವೀರನು
ಲೋಕದಾತ್ಮರ ನಡೆಯ ನಡೆಯನು
ಶೋಕ ಮೋಹವಿದೂರ ವೀರನು ಷಟ್ಸ್ಥಲಬ್ರಹ್ಮ।
ಏಕಲಿಂಗ ಪ್ರತಿಷ್ಠೆವಂತ ಕೃ
ಪಾಕಟಾಕ್ಷನಹಿಂಸ ನಿರುಪಮ
ನೇಕೋರುದ್ರವತಾರ ವೀರನು ಬಸವ ಕೇಳೆಂದ॥ ॥ ೨೧ ॥

ಹಿಡಿದು ಬಿಡದವ ವೀರ ಬಿಟ್ಟುದ
ಹಿಡಿಯದವನೆ ವಿಶಿಷ್ಟ ಶ್ರುತಿಮತ

ನುಡಿದ ಮೇರೆಗೆ ನಡೆವನೆ ನಿರಾಭಾರಿ ಬಿರಿದಂಕ।
ಮಡದಿ ಮನೆಮನವಾರ್ತೆ ಮಕ್ಕಳೊ
ಳೊಡವೆಯಲಿ ಕಡು ಮಮತೆ ಹುಟ್ಟದ
ದೃಢ ಹೃದಯ ವರ ವೀರಶೈವನು ಮಗನೆ ಕೇಳೆಂದ॥ ॥ ೨೨ ॥

ಹುಟ್ಟಿದೆಡೆಗಳ ಹೂಣಿ ಮುಂದಣ
ಬಟ್ಟೆ ಭೀಕರವಡಗಿ ಕರದಲಿ
ಕಟ್ಟಿ ಬಿರಿದಿನ ಕಂಕಣವ ಗುರುಕರಣ ಬಲದಿಂದ।
ಇಟ್ಟು ಶ್ರೀ ವಿಭೂತಿ ತಿಲಕವ
ತೊಟ್ಟು ಶ್ರೀ ರುದ್ರಾಕ್ಷಿಗಳ ಮನ
ಮುಟ್ಟಿ ಮಂತ್ರದ ಖಡ್ಗವಿಡಿದನೆ ವೀರ ಕೇಳೆಂದ॥ ॥ ೨೩ ॥

ಅಹುದಾದ ವಸ್ತುವನೆ ಹಿಡಿವನು
ವಿಹಿತವಾದುದ ಬಿಟ್ಟುಬಿಡುವನು
ಸಹಜ ಶಿವತತ್ವಾನುಭಾವಿ ವಿರಕ್ತ ನಿಜಮುಕ್ತ।
ಮಹಿತಳಕೆ ಘನಮಹಿಮ ಜ್ಞಾನಿಯು
ಅಹಿತಮತಸಂಹಾರ ರುದ್ರನು
ಬಹು ಪರಾಕ್ರಮಶಾಲಿ ವೀರನು ಮಗನೆ ಕೇಳೆಂದ॥ ॥ ೨೪ ॥

ತಕ್ರ ತೈಲ ಪವಿತ್ರ ವಿರಹಿತ
ವಿಕ್ರಯ ಕ್ರಯ ವರ್ಜ್ಯ ಪ್ರಭು ಭೂ
ಚಕ್ರ ಪಾವನಮೂರ್ತಿವಸ್ತು ನಿರಂಜನಬ್ರಹ್ಮ।
ಚಕ್ರದಳ ಶ್ರೀತತ್ವ ಷಟ್ಸ್ಥಲ
ಚಕ್ರವರ್ತಿಗಳ ಚರಣ ಸೇವಕ
ಚಕ್ರ ಕರಸ್ಥಲಸೂತ್ರ ವೀರನು ಮಗನೆ ಕೇಳೆಂದ॥ ॥ ೨೫ ॥

ಜಾತಿಗೋತ್ರಾಶ್ರಮವ ಜರಿದವ
ಮಾತೆ ಪಿತಬಂಧುಗಳ ಮರೆದವ
ಸೂತಕವ ಸುಟ್ಟವನು ಗುರುಮುಖದಿಂದ ಕರಸ್ಥಲದಿ।
ಜ್ಯೋತಿಸೂತ್ರವ ಹಿಡಿದವನು ಪ್ರ
ಖ್ಯಾತಿ ಷಟ್ಸ್ಥಲಬ್ರಹ್ಮ ವೀರವ
ಧೂತನಾತನೆ ವೀರಶೈವನು ಮಗನೆ ಕೇಳೆಂದ॥ ॥ ೨೬ ॥

ಸೃಷ್ಟಿಭೋಗದ ಹಂಗ ಹರಿದನು
ಇಷ್ಟಲಿಂಗವೆ ಪ್ರಾಣವೆಂಬನು
ನಿಷ್ಠೆ ಷಟ್ಸ್ಥಲಮಾರ್ಗ ಪಂಥನು ಶೀಲವ್ರತನೇಮಿ।
ಶ್ರೇಷ್ಠ ಸದ್ಗುರು ಕರುಣವಂತನ
ನಿಷ್ಟ ಪಂಚಕ ಜಿತ ನಿರಂಜನ
ಸೃಷ್ಟಿ ಪರಶಿವ ವೀರಶೈವನು ಮಗನೆ ಕೇಳೆಂದ॥ ॥ ೨೮ ॥

ತುಂಟರೈವರ ತುಳಿದಧಟ ಹದಿ
ನೆಂಟು ಭ್ರಮೆಗಳ ಬಡಿದ ಪಟುಭಟ
ದಾಂಟಿ ದೇಹಾರಣ್ಯ ಪ್ರಾಣಾಂಬುಧಿಯ ಲಂಘಿಸಿದ।
ಕುಂಟ ಕುರುಡರ ಕುಕ್ಕಿ ಕುಣಿವುತ
ಲೆಂಟಾರರೇಕಾಂತ ಷಟ್ಸ್ಥಲ
ಬಂಟನೆ ನಿರಾಭಾರಿ ವೀರನು ಮಗನೆ ಕೇಳೆಂದ॥ ॥ ೨೯ ॥

ಏಳನಿಕ್ಕಿದನೆಂಟ ಕುಕ್ಕಿದ
ಹೂಳಿದನು ಪ್ರಕೃತಿ ಪ್ರಪಂಚನು
ಕಾಳಕಾಮರ ನೆಗ್ಗಿ ನುಗ್ಗುವ ಕರ್ಮಗಳ ಸುಟ್ಟು।
ತಾಳಲಾರದ ಜೀವಹಂಸನ
ಮೇಳೆಯನೆ ಮುರಿದಿಟ್ಟ ಷಟ್ಸ್ಥಲ
ಬಾಳೆ ಬಾಳಾಗಿರುವನೆ ನಿರಾಭಾರಿ ಕೇಳೆಂದ॥ ॥ ೩೦ ॥

ಚೋಹಮಾತ್ರದ ಲೀಲೆಯಲ್ಲದೆ
ದೇಹಪ್ರಾಣಭಿಮಾನ ವಿರಹಿತ
ಬಾಹಿರಂಗದ ಪೂಜೆ ಸತ್ಕ್ರೀ ವೃತ್ತಿ ಸುಜ್ಞಾನಿ।
ದೇಹೇತಿವನಾಸ್ತಿ ಭಿಕ್ಷಾಂ
ದೇಹಿ ಲಿಂಗರ್ಪಿತಕೆ ಷಟ್ಸ್ಥಲ
ಸ್ನೇಹ ಭಕ್ತನಿವಾಸ ವೀರಮಹೇಶ ಕೇಳೆಂದ॥ ॥ ೩೧ ॥

ಶರೀರವೇ ಕೈಲಾಸ ಕರಣವೆ
ಶರಣಗಣ ಭೂತಗಳೆ ಭೃತ್ಯರು
ನೆರೆದ ಸಭೆ ಜ್ಞಾನೇಂದ್ರಿಯಂಗಳು ಸತ್ಕ್ರಿಯಾಚಾರ।
ಬರುವ ವಿಷಯ ಪದಾರ್ಥ ಮಂತ್ರ

ಸ್ಮರಣೆ ಸೂತ್ರದ ಷಟ್ಸ್ಥಲದ ಗುರು
ಕರುಣ ಶೇಷವೆ ತೃಪ್ತಿ ವೀರನೆ ಷಟ್ಸ್ಥಲಬ್ರಹ್ಮ॥ ॥ ೩೨ ॥

ಎಲ್ಲ ದೈವಕೆ ಶಿರಸ ಪೂಜೆಗ
ಅಲ್ಲಮಪ್ರಭು ಸಾಂಪ್ರದಾಯ[೧][ದಿ][೧]
ಸಲ್ಲಲಿತ ಷಟ್ಸ್ಥಲದ ಸದ್ಗುರು ಲಿಂಗಜಂಗಮದ।
ಮೆಲ್ಲಡಿಗಳೇ ಮುಖ್ಯ ಪೂಜೆಗೆ
ವಲ್ಲಭೆಯೆ ಕೇಳೆನುತ ಪರಶಿವ
ಮೆಲ್ಲನರುಹಿದ ವೀರಶೈವಾಗಮವ ಕೇಳೆಂದ॥ ॥ ೩೩ ॥

ಪಾದ ಮೊದಲಿದೆ ಮಸ್ತಕವೆ ಕಡೆ
ವೇದಶಾಸ್ತ್ರಾಗಮ ಪುರಾಣವ
ನಾದಿ ಜಂಗಮದಂಘ್ರಿ ಕಮಲದಿ ಜನಿತ ಜಗಸೃಷ್ಟಿ।
ಆದಿ ಪರಶಿವ ಶಕ್ತಿ ತತ್ವವು
ನಾದಬಿಂದುಕಲತ್ರಯಂಗಳು
ವಾದವಣುಗ ವಿಶಿಷ್ಟ ಷಟ್ಸ್ಥಲಬ್ರಹ್ಮ ಪರಬ್ರಹ್ಮ॥ ॥ ೩೪ ॥

ವೀರಶೈವಾಚಾರ ಗುರುಗಳು
ವೀರಶೈವಾಚಾರ ದೊರೆಗಳು
ವೀರಶೈವಾಚಾರ ದೇವಭಕ್ತ ಪ್ರಭುಸುತರು।
ವೀರಶೈವಾಚಾರ ಷಟ್ಸ್ಥಲ
ಸಾರತತ್ವಜ್ಞಾನ ಬೋಧರು
ದಾರ ಪುರುಷರು ಲಾಲಿಸೀ ಷಟ್ಸ್ಥಲಶಿವಾಯಣವ॥ ॥ ೩೫ ॥

ಷಟ್ಸ್ಥಲದ ಯೋಗಿಗಳು ಶರಣರು
ಷಟ್ಸ್ಥಲದ ಭೋಗಿಗಳು ಭಕ್ತರು
ಷಟ್ಸ್ಥಲ ಮಹಾನುಭವಿಗಳು ಮತಪ್ರತಿಷ್ಠಿತರು।
ಷಟ್ಸ್ಥಲವೆ ಒಡಲಾದ ಹಿರಿಯರು
ಷಟ್ಸ್ಥಲವೆ ದೃಢವಾದ ಗುರುವರು
ಷಟ್ಸ್ಥಲದ ಚರಮೂರ್ತಿವಿರತರು ಲಾಲಿಸುವುದೊಲಿದು॥ ॥ ೩೬ ॥

೧–೧ ದ(ಮೂ).

ಆಚಾರವೇ ಪ್ರಾಣ ಷಟ್ಸ್ಥಲ
ದಾಚಾರವೇ ಜೀವ ಸತ್ಯ ಸ
ದಾಚಾರವೇ ಪೂಜ್ಯ ಇಹಪರಸಾಕ್ಷಿ ಶ್ರುತಿಸಿದ್ಧ।
ಆಚಾರ್ಯರಾಂಶಿಕ ಶಿಖಾಮಣಿ
ಭೂಚರಕೆ ಖೇಚರಕೆ ನಿಜಗುರು
ವಾಚ ಮನ ಪರಿಪೂರ್ಣ ಚೀಲಳಸ್ವಾಮಿ ಶರಣಾರ್ಥಿ॥ ॥ ೩೭ ॥

ಶರಣು ಪರಶಿವನಂತರಂಗದ
ಸರಸಿಜದ ಮಧ್ಯದಲಿ ಬೆಳಗುವ
ಹರಪುರದ ಶಿವಯೋಗಪೀಠ ಸಮಾಧಿಯಲ್ಲಿರುವ।
ಧರಣಿಯಲಿ ಕೈಲಾಸದಲಿ ಶಿವ
ಶರಣರಿಗೆ ಷಟ್ಸ್ಥಲವ ಬೋಧಿಪ
ಗುರುವೆ ಬಸವಪ್ರಭುವೆ ಚೀಲಳಸ್ವಾಮಿ ಶರಣಾರ್ಥಿ॥ ॥ ೩೮ ॥

ಶ್ರೀಯ ಸದ್ಯೋನ್ಮುಕ್ತಿ ಸಂಪದ
ಕ್ರೀಯ ಜ್ಞಾನಾಚಾರವೆನುತೆತಿ
ರಾಯ ಪ್ರಭು ಬೋಧಿಸಿದ ಬಸವಗೆ ಪ್ರಮಥಗಣ ಸಭೆಗೆ।
ಕಾಯಜಾರಿಯೆ ಗೌರಿಗೊರೆದದ
ಪ್ರೀಯದಲಿ ನಂದೀಶ ಶರಣ ನಿ
ಕಾಯಕರುಹಿದನದ ನಿನಗೆ ನಾನೊರೆದೆ ಕೇಳೆಂದ॥ ॥ ೩೯ ॥

ಅಸಮವಹ ಷಟ್ಸ್ಥಲಜ್ಞಾನವ
ನುಸುರಿದನು ಶಿವಶಿವೆಗೆ ಪ್ರಮಥರ
ವಿಸರಕರುಹಿದ ನಂದಿ ಪ್ರಭು ವೃಷಭನಿಗೆ ಬೋಧಿಸಿದ।
ವಸುಧೆಯೊಳು ಹರಪುರದ ಶ್ರೀಗಿರಿ
ಕುಸುಮಪೀಠದ ಷಟ್ಸ್ಥಲದ ಗುರು
ಬಸವಪ್ರಭುವೆ ಕುಮಾರಪ್ರಭುವಿಗೆ ಬೋಧಿಸಿದನಣುಗ॥ ॥ ೪೦ ॥

ಶ್ರೀ ವೀರಶೈವಾಗ್ರಗಣ್ಯನು
ಭಾವಿ ಷಟ್ಸ್ಥಲಬ್ರಹ್ಮಿ ದೇವರ
ದೇವ ಪರಶಿವನಂತರಂಗದ ಚಿತ್ಕಳವತಾರ।
ದೇವ ಭಕ್ತರ ಹೃದಯ ಕರಸ್ಥಲ

ಸಾವಧಾನ ನಿರೂಪ ಸದ್ಗುರು
ದೇವ ಬಸವಪ್ರಭುವೆ ಬಿನ್ನಹ ಲಾಲಿಸಿ ಪರಾಕೆ॥ ॥ ೪೧ ॥

ಹರವಚನ ಗುರುವಚನ ಸಾಕ್ಷಿಯ
ಪರಮಷಟ್ಸ್ಥಲತತ್ವಬೋಧೆಯ
ಹರುಷದಿಂದಲಿ ಕೇಳಿ ತನು ಪುಳಕದಲಿ ನಿಜ ಶಿಷ್ಯ।
ಗುರುಪದಾಂಬುಜಕೆರಗಿ ಕೀರ್ತಿಸಿ
ಮರಳಿ ಮರಳಿದ ಕೇಳಿದಾತ್ಮರು
ಪರಶಿವನ ಸಮ ಸುಖವ ಪಡೆಯರೆ ಹರಹರಾಯೆಂದ॥ ॥ ೪೨ ॥

ಕವಿ ಕಳಾವಿದರರಿಯದಿಹ ಶ್ರುತಿ
ನಿವಹ ಕೋವಿದರರಸುತಿಹ ಪರ
ಶಿವನ ಹೃದಯದ ಗೋಪ್ಯಮುಖ ಸಂಭವದ ಷಟ್ಸ್ಥಲದ।
ಸವಿರಸಾಮೃತ ತತ್ವಬೋಧೆಗೆ
ಕಿವಿಯ[೧][ನೊಡ್ಡಿದ][೧] ದೇವಭಕ್ತರು
ಶಿವನ ಸಂಪದ ಸುಖವ ಪಡೆಯರೆ ಶಿವಶಿವಯೆಂದ॥ ॥ ೪೩ ॥

ಸಕಲಗುಣಸಂಪನ್ನ ನಿಜ ದೇ
ಶಿಕ ಶಿಖಾಮಣಿ ಷಟ್ಸ್ಥಲದ ಘನ
ಸುಖರಸಾಮೃತ ತತ್ವಜ್ಞಾನುಪದೇಶ ಬಲದಿಂದ।
ಸಕಲಭಕ್ತರು ಮುಕ್ತರಾದರು
ಸಕಲಶರಣರು ತೃಪ್ತರಾದರು
ಸಕಲರಿಗೆ ಕೈಲಾಸಪದಸುಖ ಬಸವಪ್ರಭುವೆ ನಮೋ॥ ॥ ೪೪ ॥

ಜಯತು ಚಿದ್ಘನಪ್ರಭುವೆ ವಿಭುವೇ
ಜಯತು ಸದ್ಗುರುದೇವ ಶುಭವೇ
ಜಯತು ಚಿನ್ಮಯಮೂರ್ತಿ ಚೀಲಳಸ್ವಾಮಿ ಶರಣಾರ್ಥಿ।
ಜಯತು ಷಡದಗುಣಮಣಿಕಿರೀಟನೆ
ಜಯತು ಷಟ್ಸ್ಥಲಗುಣ ತ್ರಿಕೂಟನೆ
ಜಯತು ಬಸವಪ್ರಭುವೆ ಪರಶಿವಯೋಗಿ ರಕ್ಷಿಪುದು॥ ॥ ೪೫ ॥

೧-೧ ನೋಡಿದ (ಮೂ).

ಶರಣು ಸತ್ಯದ ಶರಧಿಚಂದ್ರನೆ
ಶರಣು ನಿತ್ಯೋತ್ಸವ ಗಣೇಂದ್ರನೆ
ಶರಣು ಶಿವ ಪ್ರತ್ಯಕ್ಷ ಷಟ್ಸ್ಥಲಬ್ರಹ್ಮಿ ಸಲಹೆಮ್ಮ।
ಶರಣು ಪರಶಿವ ಶಕ್ತಿ ಹೃದಯನೆ
ಶರಣು ಪರಮವಿರಕ್ತ ಬೋಧನೆ
ಶರಣು ಕರಸ್ಥಲಸೂತ್ರನೇತ್ರನೆ ಶಿಷ್ಯಜನ ಸರಸಿ॥ ॥ ೪೬ ॥

ಶರಣು ಶಾಶ್ವತ ಶರಣು ವಿಶ್ವತ
ಶರಣು ಬ್ರಹ್ಮವೆ ಶರಣು ಧರ್ಮವೆ
ಶರಣು ಸದಮಳ ಸಚ್ಚಿದಾನಂದೈಕ ವಿಗ್ರಹನೆ।
ಶರಣು ಶಾಂತನೆ ಶರಣು ಕಾಂತನೆ
ಶರಣುಸತ್ಯನೆ ಶರಣು ನಿತ್ಯನೆ
ಶರಣು ಶಂಕರ ಶಂಭು ಚೀಲಲಳಸ್ವಾಮಿ ಸಲಹೆಮ್ಮ॥ ॥ ೪೭ ॥

ಆಗಮಾಮ್ನಾಯಗಳ ಫಲ ಶಿವ
ಯೋಗಶಾಸ್ತ್ರಪುರಾಣ ಫಲ ಮಹ
ಭೋಗ ಮೋಕ್ಷದ ಹಲವು ಷೋಡಶದಾನ ಫಲಲಬ್ಧಿ।
ಬೇಗ ಕೈಗೂಡುವು ಷಟ್ಸ್ಥಲ
ಯೋಗಿ ಚೀಲಲಳಸ್ವಾಮಿ ಧ್ಯಾನವ
ನಾಗಳುಂ ಜಾನಿಸುವ ಜನರಿಗೆ ಗಿರಿಜೆ ಕೇಳೆಂದ॥ ॥ ೪೮ ॥

ಚೀಯೆಂಬ ಚಿತ್ತ್ರಣಮವನು ದಿನ
ಲಾಯೆಂಬ ಮಾತ್ರೆಯ ನಿರಂತರ
ಳಾಯೆಂಬ ವರ್ಣತ್ರಯವ ಮನಜಿಹ್ವೆಯೊಳು ಜಪಿಸಲ್।
ಕಾಯ ಶ್ರೀಯ ಸಮಸ್ತ ಷಟ್ಸ್ಥಲ
ರಾಯ ಚೀಲಲಳಸ್ವಾಮಿ ನಡೆಸುವ
ಬಾಯ ಮಾತಲ್ಲಗಜೆ ಶ್ರುತಿಮತ ಶ್ರದ್ಧೆ ಕೇಳೆಂದ॥ ॥ ೪೯ ॥

ಚಿತ್ತ ಮಸ್ತುವೆನುತ್ತಿವೆ ಕೊ ಶ್ರುತಿ
ಚಿತ್ತ ಬ್ರಹ್ಮವೆನುತ್ತಿವೆ ಕೊ ಮತ
ಚಿತ್ರ ಸಮ್ಯಜ್ಞಾನ ಗುರುವೆನುತಿವೆ ಕೊ ಆಗಮವು।
ಚಿತ್ತ ಸರ್ವಾಧಾರ ಪಾರ್ವತಿ

ಚಿತ್ತ ಪರಶಿವ ಪ್ರಣವವೆನುತಿವೆ
ಚಿತ್ತ ಚೀಲಲಳಸ್ವಾಮಿಯೆನ್ನವೆ ಉಪನಿಷತ್ತುಗಳು॥ ॥ ೫೦ ॥

ಅರಸಿ ಪಂಚಪ್ರಣಮ ಸಂಪದ
ಸರಿಸಮಾನದ ಪಂಚವರ್ಣದ
ಪರಮಗುರು ಚೀಲಾಳಸ್ವಾಮಿಯ ನಾಮ ನಿಜಮಂತ್ರ
ಸ್ಮರಣೆಯುಪದೇಶವನು ಗೌರಿಗೆ
ಹರನೊರೆದ ಶ್ರುತಿಮತದ ಮಂತ್ರವ
ನರರು ಜಪಿಸಲ್ಕಾಗದೇ ಕೈಲಾಸ ಗಣಪದವಿ॥ ॥ ೫೧ ॥

ಆಕಾಶ ಮಧ್ಯದಲಿ ವಿದ್ಯು
ರ್ಲೇಖೆಯಡಗಿರುವಂತೆ ಸದುಹೃದ
ಯಾಕಾಶಕಂಜದಲಿ ಚಿತ್ಕಳೆ ತುಳುಕದಂದದಲಿ।
ಸಾಕಾರ ಷಟ್ಸ್ಥಲದ ಶರಣರ
ಶ್ರೀ ಕರಸ್ಥಲ ಸೂತ್ರದಂತೆ ಪ
ರಾಕೆ ಚೀಲಲಳಸ್ವಾಮಿ ಧ್ಯಾನವ ಮರೆಯದಿರು ಮನವೇ॥ ॥ ೫೨ ॥

ಸ್ವಾನುಭಾವಿಗಳರಸ ಸರಸನ
ಭಾನುಕೋಟಿಪ್ರಕಾಶ ಪರುಷನ
ಆನಂದ ಶಿವಯೋಗನಿದ್ರಮುದ್ರಾಯೊಳಗಿಹನ।
ತಾನೆ ತಾನಾಗುರಿವ ಜ್ಯೋತಿಯ
ಜ್ಞಾನಗುರು ಚೀಲಾಳಸ್ವಾಮಿಯ
ಧ್ಯಾನಿಸನುದಿನ ಮನವೆ ಷಟ್ಸ್ಥಲಬ್ರಹ್ಮಿ ನಿಜಗುರುವ॥ ॥ ೫೩ ॥

ಒಪ್ಪಿದನು ಪರವಸ್ತು ಶಂಕರ
ನೊಪ್ಪಿದನು ಪರತತ್ವ ಪರಶಿವ
ನೊಪ್ಪಿದನು ಪರಶಕ್ತಿ ಪ್ರಣಮಸುಪೀಠ ಮಧ್ಯದಲಿ।
ಒಪ್ಪಿದನು ವಾಙ್ಮನಕತೀತನು
ಒಪ್ಪಿದನು ವರದಭಯಹಸ್ತನು
ಒಪ್ಪಿದನು ಪರಮೇಶ ಚೀಲಲಳಸ್ವಾಮಿ ಸಮರಸದಿ॥ ॥ ೫೪ ॥

ದೇವನೊಪ್ಪಿದ ವೀರಶೈವನು
ಭಾವನೊಪ್ಪಿದ ಷಟ್ಸ್ಥಲದ ಸಂ

ಜೀವನೊಪ್ಪಿದನಿಹಪರದಿ ಶಿವಸಭೆಯ ಮಧ್ಯದಲಿ।
ದೇವದೇವಿಯ ಹೃದಯಕಮಲದ
ಪಾವನಾತ್ಮಕ ಜ್ಯೋತಿಯೊಪ್ಪಿದ
ದೇವ ಶಿವಗಣವೃಂದ ಚೀಲಳಸ್ವಾಮಿಯೊಪ್ಪಿದನು॥ ॥ ೫೫ ॥

ಮಲ್ಲಿಗೆಯ ಹೂಮಳೆಗಳಾದವು
ಮೆಲ್ಲನುಲಿದುವು ದೇವದುಂದುಭಿ
[೧][ಎಲ್ಲ ಮಾ][೧] ಪ್ರಮಥರು ಪುರಾತರು ದಿವಿಜರುಗ್ಗಡಿಸೆ।
ಅಲ್ಲಮಪ್ರಭು ಸಾಂಪ್ರದಾಯದ
ಸಲ್ಲಲಿತ ಷಟ್ಸ್ಥಲ ಶಿವಾಯಣ
ವೆಲ್ಲ ಭಕ್ತರ ಶ್ರೋತ್ರಮುಖ ಸಂಪೂರ್ಣ ಶುಭಮಸ್ತು॥ ॥ ೫೬ ॥

ಶ್ರೀ ಪರಬ್ರಹ್ಮಾವತಾರ ಪ್ರ
ತಾಪ ಬಸವಪ್ರಭು ಮಹಾಗುರು
ತಾಪಸೇಂದ್ರ ಕುಮಾರಪ್ರಭುವಿಗೆ ಪೇಳ್ದ ತತ್ವವನೆ।
ಶ್ರೀ ಪುರಾಣದ ದೇಶಿಕೇಂದ್ರ ನಿ
ರೂಪಿಸಿದ ಷಟ್ಸ್ಥಲಶಿವಾಯಣ
ದೀಪ ಸದ್ಭಕ್ತರ ಸಭಾಮಧ್ಯದಿ ಪ್ರಕಾಶಿಸಲಿ॥ ॥ ೫೭ ॥

ಭೂತಕಾಯವ ಕಳೆದು ಗುರುಕರ
ಜಾತರಾಗಿಹ ಬುಧರ ಮಧ್ಯದಿ
ಜಾತಿಸೂತಕವಳಿದ ಜಂಗಮಭಕ್ತರಾಲಯದಿ।
ಭೂತಪತಿಯವತಾರ ಲೀಲೆಯ
ನೂತನದ ಷಟ್ಸ್ಥಲಶಿವಾಯಣ
ಜ್ಯೋತಿ ತತ್ವಜ್ಞಾನಿಗಳ ಮಧ್ಯದಲಿ ಶೋಭಿಸಲಿ॥ ॥ ೫೮ ॥

ಅಜ ಹರಿಗಳಾನಂದ ಸಂಪದ
ಸುಜನಋಷಿ ಸುಜ್ಞಾನಸಾಗರ
ಭಜಕಜನ ತವನಿಧಿ ಶರಣಜನಸುಕೃತಿಗಳ ಸುಗ್ಗಿ।
ವಿಜಯಕರ ಷಟ್ಸ್ಥಲಶಿವಾಯಣ

೧–೧ ಯಲ್ಲಮ (ಮೂ).

ತ್ರಿಜಗ ಪೂಜಿತನೆಂದು ಶಂಕರ
ನಿಜಸತಿಗೆ ಬೋಧಿಸಿದ ಚೀಲಲಳಸ್ವಾಮಿ ಲೀಲೆಗಳ॥ ॥ ೫೯ ॥

ಧರಣಿ ಜಲ ಶಿಖಿ ಮರುತ ನಭಗಳು
ತರಣಿ ಶಶಿ ಪರಮಾತ್ಮ ತತ್ವದ
ನೆರವಿ ಪರಶಿವ ಸೃಷ್ಟಿಲೀಲೆಗಳಿರುವ ಪರಿಯಂತ।
ಪರಮಗುರು ಚೀಲಾಳಸ್ವಾಮಿಯೆ
ಕರುಣದಲಿ ಷಟ್ಸ್ಥಲಶಿವಯಣ
ವಿರತಿ ಜಯವೆಂದೆನುತ ಪ್ರಮಥರಿಗೊರೆದ ನಂದೀಶ॥ ॥ ೬೦ ॥

ರಸಿಕರಿಗೆ ನವರಸದ ಸರಸಿಯು
ಶಿಶುಗಳಿಗೆ ಚಿನಿಪಾಲ ಶರಧಿಯು
ಕುಶಲರಿಗೆ ಸುಜ್ಞಾನ ಕೈಪಿಡಿ ಕವಿಬುಧರ ಕವಚ।
ಅಸದೃಶದ ಷಟ್ಸ್ಥಲಶಿವಾಯಣ
ವಸುಧೆ ಚತುರ್ದಶ ಕಳಶವೆನುತಲಿ
ಬಸವಾದಿ ಪ್ರಮಥರಿಗೆ ಪ್ರಭು ಬೋಧಿಸಿದ ಪೂರ್ವದಲಿ॥ ॥ ೬೧ ॥

ಸುರತರುವೆ ಮರ ಸುರಭಿ ಬಡಪಶು
ಪರುಷ ಕಗ್ಗಲ್ಲರಳು ಸುರಮಣಿ
ಹರಿಯಜರೆ ತೃಣ ಸುರಪದವಿಯಣು ವೀರಶೈವರಿಗೆ।
ಪರಮಷಟ್ಸ್ಥಲ ಶರಣ ಗುರುಗಳ
ಚರಣಭಕ್ತಿಯೆ ಭುಕ್ತಿ ಮುಕ್ತಿಗೆ
ಶರಧಿ ಷಟ್ಸ್ಥಲಶಿವಾಯಣ ಬಸವ ಕೇಳೆಂದ॥ ॥ ೬೨ ॥

ಕುಲಿಶ ಕುಸುಮವು ವಹ್ನಿ ವಾರಿಯು
ಅಲಘು ಪೂಸರ ಗರಳವಮೃತವು
ಮಲೆವ ಶತ್ರುಗಳೆಲ್ಲ ಮಿತ್ರರು ಕ್ರೂರಮೃಗವೆರಳೆ।
ಕಲಿಯೆ ದಾಸನು ಕಾಲ ಭೃತ್ಯನು
ಬಲುಮೆ ಪ್ರಕೃತಿಯೆ ದಾಸಿ ಕಮನೆ
ಅಳುಕಿನಾಳಾಗಿರುವ ಷಟ್ಸ್ಥಲ ವೀರಶೈವರಿಗೆ॥ ॥ ೬೩ ॥

ಅರಿನೃಪರ ತಸ್ಕರರ ಮರವೆಯ
ಗರಳ ಕಂಟಕ ಕ್ರೂರಮೃಗ ಜರೆ

ಮರಣ ಬಾಧಕ ಭೂತಶಂಕೆ ಸಮಸ್ತ ವಿಘ್ನಗಳು।
ಬರಸಿಡಿಲು ಭವರೋಗ ಬಡತನ
ವಿರದೆ ಕಾಡುವ ಮೃತ್ಯುವಂಜುತ
ತೆರಳುವವು ಷಟ್ಸ್ಥಲಶಿವಾಯಣ ಸ್ಮರಣೆ ಮಾತ್ರದಲೆ॥ ॥ ೬೪ ॥

ಒಂದೆ ಮಾತ್ರೆಯನೊಂದೆ ವಾಕ್ಯವ
ನೊಂದೆ ವಚನವನೊಂದೆ ಸಂಧಿಯ
ನೊಂದೆ ಚಿತ್ತದಲೋದಿ ಕೇಳಿದ ಸಕಲಭಕ್ತರಿಗೆ।
ಹಿಂದೇಳು ಮುಂದೇಳು ಜನ್ಮದ
ಸಂದೇಹಸುಖವಳಿದು ನಿಜ ಬಾ
ಲೇಂದುಶೇಖರ ಗೌರಿಪತಿ ಸುಖದಿಂದ ಬಾಳುವರು॥ ॥ ೬೫ ॥

ಸಕಲಲೋಕಕೆ ಸಕಲದೇಶಕೆ
ಸಕಲಗ್ರಾಮಕೆ ಸಕಲಕ್ಷೇಮಕೆ
ಸಕಲಮತ ಕುಲದೈವಕಗ್ಗಳ ವೀರಶೈವರಿಗೆ।
ಸಕಲ ಶರಣರ ಸುಖಸುಧಾಂಬುಧಿ
ಮುಕುತಿ ನೆಲೆ ಷಟ್ಸ್ಥಲಶಿವಾಯಣ
ಭಕುತರಿಗೆ ಗುರುಗಳಿಗೆ ಶಿಷ್ಯರಿಗುಭಯ ಕೈಲಾಸ॥ ॥ ೬೬ ॥

ಭುವನ ಭವನಖಿಳಾಂಡಜಾರಿಗೆ
ಶಿವನ ಸತಿಸುತ ಪ್ರಮಥ ಪುಂಜಕೆ
ನವಬ್ರಹ್ಮ ಹರಿಯಜ ಸುರಪ ದಿಕ್ಪಾಲ ಋಷಿಗಣಕೆ।
ರವಿಶಶಿಗಳೊಂಶಕ್ಕೆ ರಾಜ್ಯಕೆ
ಕವಿಕುಲಕೆ ಶರಣರಿಗೆ ಮುಕ್ತಿಯ
ತವನಿಧಿಯ ಶಿವಪದವ ಚೀಲಳಸ್ವಾಮಿ ಪಾಲಿಸಲಿ॥ ॥ ೬೭ ॥

ಭಕ್ತರಿಗೆ ಸೌಭಾಗ್ಯ ಪರಮ ವಿ
ರಕ್ತರಿಗೆ ವೈರಾಗ್ಯ ಜೀವ
ನ್ಮುಕ್ತರಿಗೆ ಕೈವಲ್ಯವನು ಷಟ್ಸ್ಥಲದ ದೊರೆಗಳಿಗೆ।
ಭುಕ್ತಿ ಮುಕ್ತಿಯ ವೀರಶೈವಮ
ತೋಕ್ತರಿಗೆ ಕರಸ್ಥಲದ ಸಮರಸ
ಶಕ್ತಿಸೂತ್ರವನೆಮಗೆ ಚೀಲಳಸ್ವಾಮಿ ಕರುಣಿಸಲಿ॥ ॥ ೬೮ ॥

ಮಂಗಳವ ಪಾಲಿಸಲಿ ಸಕಲ ಜ
ಗಂಗಳಿಗೆ ಷಟ್ಸ್ಥಲದ ಶರಣಜ
ನಂಗಳಿಗೆ ವಿರತರಿಗೆ ಚರಮೂರ್ತಿಗಳ ಭಕ್ತರಿಗೆ।
ಅಂಗಲಿಂಗದ ಸಂಗಸುಖದ ಪ್ರ
ಸಂಗ ಸಮರಸಜ್ಞಾನ ಕರಸ್ಥಲ
ಲಿಂಗಸುಖವನು ನಮಗೆ ಚೀಲಳಸ್ವಾಮಿ ಕರುಣಿಸಲಿ॥ ॥ ೬೯ ॥

ಮಂಗಳಂ ಗುರು ಬಸವಪ್ರಭುವಿಗೆ
ಮಂಗಳಂ ಗುರು ಸಂಗಮೇಶಗೆ
ಮಂಗಳಂ ಗುರು ಚೆನ್ನಬಸವಗೆ ಬಾಲಸಂಗನಿಗೆ।
ಮಂಗಳಂ ಮಡಿವಾಳದೇವಗೆ
ಮಂಗಳಂ ಸೊಡ್ಡಳದೇವಗೆ
ಮಂಗಳಂ ನೀಲಾಂಬ ಚೀಲಳಸ್ವಾಮಿ ಶರಣರಿಗೆ॥ ॥ ೭೦ ॥

ಮಂಗಳಂ ಗುರು ಸಿದ್ಧರಾಮಗೆ
ಮಂಗಳಂ ಷಟ್ಸ್ಥಲಲಲಾಮಗೆ
ಮಂಗಳಂ ಗುರು ಮರುಳಶಂಕರ ಗಂಗಲಾಂಬಿಕೆಗೆ।
ಮಂಗಳಂ ಮಹದೇವಿಯಕ್ಕಗೆ
ಮಂಗಳಂ ಮಹ ನಾಗಲಾಂಬೆಗೆ
ಮಂಗಳಂ ಚೀಲಾಳಸ್ವಾಮಿಗೆ ಮಹಿಮಪುರುಷರಿಗೆ॥ ॥ ೭೧ ॥

ಮಂಗಳಂ ಷಟ್ಸ್ಥಲದ ಪ್ರಭುವಿಗೆ
ಮಂಗಳಂ ಷಟ್ಸ್ಥಲದ ವಿಭುವಿಗೆ
ಮಂಗಳಂ ಶ್ರೀ ವೀರಶೈವ ಸಮಸ್ತಭಕ್ತರಿಗೆ।
ಮಂಗಳಂ ಮಹಾವಿರತರಿಗೆ
ಮಂಗಳಂ ಮಹಾನುಭಾವಿಗೆ
ಮಂಗಳಂ ಚೀಲಾಳಸ್ವಾಮಿಗೆ ಮಂಗಳ ನಮಸ್ತು॥ ॥ ೭೨ ॥

ಸದುಹೃದಯ ಸತ್ಪುರುಷ ಶಾಂತನು
ಸದಮಲನು ಶಾಶ್ವತನು ಶಾಂತನು
ಮೃದುವಾಣಿ ಶಿವಯೋಗಿ ಯತಿ ವಿರತೇಶನನುಭಾವಿ।
ಹೃದಯಕಮಲದ ಜ್ಯೋತಿ ನಿರುಪಮ
ತುದಿಪದದ ಷಟ್ಸ್ಥಲಶಿವಾಯಣ
ಮಧುರ ವಚನದ ಚದುರ ಬಸವಪ್ರಭುವೆ ಬೋಧಿಸಿದ॥ ॥ ೭೩ ॥

ಮಾನಿ ಮಂಗಳ ದಾನಿ ಮಹಿಮನಿ
ಧಾನಿ ಮತದಭಿಮಾನಿ ಮಂತ್ರಜ
ಪಾನಿ ಲಿಂಗವಧಾನಿ ಕ್ರೀಯಜ್ಞಾನ ಸಂಧಾನಿ।
ಸ್ವಾನುಭವ ಷಟ್ಸ್ಥಲಶಿವಾಯಣ
ಸ್ಥಾನಸ್ಥಾನ ಸಕೀಲಭಕ್ತಿ
ಜ್ಞಾನ ವೈರಾಗ್ಯವ ಕುಮಾರಪ್ರಭುವೆ ಬೆಸಗೊಂಡ॥ ॥ ೭೪ ॥

ಶ್ರೀ ಸಕಲಗುಣ ಸರಸಿಗಳು ಸ
ರ್ವೇಶ್ವರನ ಹೃತ್ಕಮಲ ದಿವ್ಯನಿ
ವಾಸದನುಭವ ಪ್ರಣಮಪೀಠದ ಯೋಗ ಷಟ್ಸ್ಥಲದ।
ದೇಶಿಕೇಂದ್ರನ ಲೀಲೆಗಳ ವಿ
ಶ್ವಾಸದಲಿ ಕೇಳ್ದವರು ಶ್ರೀ ಕೈ
ಲಾಸಪದವಿಯ ಪಡೆದು ಬಾಳ್ವರು ಮಗನೆ ಕೇಳೆಂದ॥ ॥ ೭೫ ॥

ಅದ್ರಿಜಾತ್ಮಜೆಯರಸ ಶಂಕರ
ಮುದ್ರಪುರದ ಮಹೇಶ ಕರುಣ ಸ
ಮುದ್ರ ಚಂದ್ರ ಕಿರೀಟ ಷಟ್ಸ್ಥಲಲೀಲೆ ಕಥೆಗಳನು।
ನಿದ್ರೆ ನೀರಡಿಕೆಗಳ ದೇಹದು
ಪದ್ರಗಳನುತ್ತರಿಸಿ ಕೇಳ್ದಡೆ
ರುದ್ರಪದವಿಯ ಪಡೆದು ಬಾಳ್ವರು ಭಕ್ತಗಣನಿಕರ॥ ॥ ೭೬ ॥

ಶ್ರೀ ವಿಮಲ ಷಟ್ಸ್ಥಲಶಿವಾಯಣ
ಭಾವ ಸಂಖ್ಯೆಯದೆಷ್ಟೆನಲ್ತಿಳಿ
ಸಾವಿರದ ಇನ್ನೂರ ತೊಂಬತ್ತೊಂಬತ್ತು ಪದಗಣನೆ।
ತೀವಿದಿಪ್ಪತ್ತೈದು ಪ್ರಕರಣ
ಸಾವಧಾನದಲೋದಿ ಪಠಿಸಿದ
ಕೋವಿದರು ಕೈವಲ್ಯಪದವಿಯ ಪಡೆದು ಬದುಕುವರು॥* ॥ ೭೭ ॥

❖❖

* ಇತಿ ಶ್ರೀ ಷಟ್ಸ್ಥಲ ಶಿವಾಯಣಂ ಪಂಚವಿಂಶತಿ ಸ್ಕಂದ ನಿರೂಪಣಂ ಅಂತು ಉಭಯ ಪದಗಣನೆ ೧೨೯೯ ಕ್ಕಂ ಸಂಪೂರ್ಣ ಮಂಗಳ ಮಹಾಶ್ರೀ॥

ಇತಿ ಶ್ರೀಮದಸಂಖ್ಯಾತ ನೂತನಪುರಾತನ ಪ್ರಮಥಗಣ ಪರಿವ್ರಾಜಕಾಚಾರ್ಯ ಶ್ರೀ ಸಹಜಾನಂದ ಗುರುವರ್ಯಪಾದಕಮಲಭೃಂಗಾಯಮಾನ ಸಹವಾಸಿಯಾದಂಥ ಮಹಾಮಹಿಮನುಂ ಶ್ರೀಮನ್ನಿರಂಜನಪ್ರಭು ಸಿದ್ಧಲಿಂಗನ ಸಾಂಪ್ರದಾಯದ ಶ್ರೀ ಷಟ್ಸ್ಥಲ ಗುರುಪೀಠ ಪಟ್ಟಾಭಿಷೇಕ ಶಿಖಾಕರ್ತೃಗಳಾದಂಥ ಶ್ರೀ ಮತ್ಸಚ್ಚಿದಾನ[ಂದ] ಬಸವಪ್ರಭು ಚೀಲಾಳಸ್ವಾಮಿ ಸದ್ಗುರುವರ ಕೃಪಾಪ್ರಸನ್ನ ಪ್ರಸಾದ ಸತ್ಪಾತ್ರ ಸುಪುತ್ರನಾದಂಥ ಕೌಶಲ್ಯ ನಾಮಕರಣಂ ಕುಮಾರಪ್ರಭು ಪುರಾಣದ ಸಿದ್ಧಲಿಂಗ ದೇಶಿಕೇಂದ್ರ ಶಿಖಾಮಣಿ ಆ ತಮ್ಮ ಸ್ವಾನುಭವ ಜ್ಞಾನಸೂತ್ರದಿಂ ನಿರೂಪಿಸಿದ ಶ್ರೀ ವೀರಶೈವ ಸಮಯ ಸಮಯ ಸಭಾಮಧ್ಯಸ್ಥ ಪರಂಜ್ಯೋತಿಪ್ರಕಾಶಸ್ವರೂಪವಾದಂಥ ಶ್ರೀ ಷಟ್ಸ್ಥಲಶಿವಾಯಣವೆಂಬೀ ತತ್ವಜ್ಞಾನ ಸಾರಾಮೃತ ಬೋಧ್ಯಾ ನಿರೂಪಣ ವೇದವೇದಾಂತಾಗಮ ಪ್ರಮಾಣ ಪ್ರಸಿದ್ಧ ಸದ್ಗುರು ಮಾರ್ಗಸತ್ಕ್ರಿಯಾಚಾರ ಸುಜ್ಞಾನ ಶಿಷ್ಯ ಪ್ರವೃತ್ತಿ ಪ್ರತಿಪಾದನಂ ಹರಗುರು ವಚನ ಸನ್ಮತಂ ಶಿವತತ್ವಜ್ಞಾನಾನುಭಾವಿಗಳ ಮನೋತ್ಸಾಹಂ ಸದ್ಭಕ್ತ ಸತ್ಪುತ್ರ ಸತ್ಶಿಷ್ಯಜನ ಸಂಪ್ರೀತಿ ಸುಸ್ನೇಹಾರ್ಥಕೆ ಸಂತೃಪ್ತಿ ಸುಧಾರ್ಣವ ಚಂದ್ರೋಪಮಾನವಾದಂಥ ಮಹಾನೂತನತರವಾದ ಈ ಷಟ್ಸ್ಥಲಶಿವಾಯಣವೆನಿಸುವ ಶಾಸ್ತ್ರವು ಎಲ್ಲ ಸದ್ಭಕ್ತ ಶರಣ ಜನಂಗಳ ಶ್ರೋತ್ರಮುಖದಲ್ಲಿಯೆ ಸಮಾಪ್ತ ಮಂಗಳ ಮಹಾಶ್ರೀ.


❖❖

ನಾಮಸೂಚಿ

(ಪುರಾಣ ದೇವತೆಗಳ, ಅಲ್ಲಮ ಮತ್ತು ಬಸವೇಶ್ವರರ ನಾಮ ಮತ್ತು ಪರ್ಯಾಯನಾಮಗಳನ್ನು ಕೈಬಿಟ್ಟು ಮಿಕ್ಕ ನಾಮಗಳನ್ನು ಮಾತ್ರ ಇಲ್ಲಿ ಸಂಗ್ರಹಿಸಲಾಗಿದೆ)

ಹ

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ. ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್. ಬೆಂ. ಮೊ:97390 67359